ಪ್ರಬುದ್ಧ ಕರ್ಣಾಟಕ

ಸಂಪುಟ ೭

೫೪೭

V. Sitaramiah
Mysore
2. 8. 1926

ಪ್ರಬುದ್ಧ ಕರ್ಣಾಟಕ

ಸಂಪುಟ ೭

ಸಂಪುಟ ೭-
ಸಂಚಿಕೆ- ೧,೨,೩,೪.

ಬೆಂಗಳೂರು
ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಟಿಸಲ್ಪಟ್ಟಿದೆ
೧೯೨೭

ಚಿತ್ರಗಳು.

e911757

ಶ್ರೀ 5910

ವಿ ಷ ಯ ಸೂ ಚಿ ಕೆ.

V. Sitaramiah



"ಶ್ರೇಯಾಂಸಿ ಬಹುವಿಘ್ನಾನಿ"

ದೇವರು ಅನಂತಕಲ್ಯಾಣಗುಣಪರಿಪೂರ್ಣನೇ ? ಹಾಗಿದ್ದರೂ ಆ ಕಲ್ಯಾಣ ಗುಣಗಳಲ್ಲಿ ಕರುಣಾಮಯತೆಯು ಒಂದಾಗಿರಲಾರದು. ಕೆಲವುವೇಳೆ ಕ್ರೌರ್ಯವಾಗಿ ತೋರುವುದೂ ಪರಿಣಾಮದಲ್ಲಿ ಕರುಣೆಯಾಗಿ ಪರಿಣಮಿಸುವುದರಿಂದ ಅಮೃತವಾಗಿ ಪರಿಣಮಿಸುವ ವಿಷದಂತೆ ಈ ಅಪ್ರಿಯವಾದ ಗುಣವು ಅಸದೃಶವಾದ ಮಂಗಳ ಗುಣವೆಂದು ಪ್ರಪನ್ನರು ಹೇಳಬಹುದು. ಇದರಿಂದ, ಪ್ರಪಂಚದಲ್ಲಿ ಕಂಡುಬರುವ ವೈಷಮ್ಯ ನೈರ್ಘೃಣ್ಯಾಗಳು ಭಯಂಕರವಾದ ಸ್ವಪ್ನದಂತೆ ಇರುವುವೆಂದೂ ಅವು ಸ್ಥಾಯಿಯಾಗಿರುವುದಿಲ್ಲವೆಂದೂ ಹೇಳಿದಂತಾಯಿತೇ ಹೊರತು ಸಾತ್ವಿಕ ಮಾನವ ಜೀವನದಲ್ಲಿಯೂ ಬರುವ ಕ್ಲೇಶಕಷ್ಟಗಳಿಗೆ ಅನುಭವಕಾಲದಲ್ಲಿ ತೀಕ್ಷ್ಣದಂಷ್ಟ್ರಗಳಿಲ್ಲವೆಂದು ಹೇಳಿದಂತಾಗಲಿಲ್ಲ. ವೈದ್ಯನು ಮೊನಚಾದ ಶಸ್ತ್ರವನ್ನು ದೇಹದೊಳಕ್ಕೆ ಚುಚ್ಚಿ ರೋಗಿಗೆ ಹಿತವಾದ ಔಷಧವನ್ನು ರಕ್ತಕ್ಕೆ ಮಿಶ್ರಮಾಡುವಂತೆ,

ದೇವರೂ ಮನುಷ್ಯನನ್ನು ಕಷ್ಟಕ್ಕೆಸಿಕ್ಕಿಸಿ ಆಮೇಲೆ ಸುಖಕೊಡಬೇಕೇ? ಇನ್ನೊಂದು ತೊಟ್ಟು ಕರುಣೆಯು ವೆಚ್ಚವಾದರೆ ಕರುಣಾಜಲಧಿಯು ಅರಕೆಯಾಗುತ್ತದೆಯೆ?

ಗುಣದೋಷಸುಖದುಃಖಗಳ ಭೇದವನ್ನೂ ಜಂಜಡವನ್ನೂ ಅನುಭವಮಾಡದ ಜ್ಞಾನಿಗಳ ಮಾತು ನಮಗೇಕೆ? ನಾವಂತೂ ದೇವರ ಕ್ರೌರ್ಯವನ್ನು ನಿತ್ಯವೂ ಅನುಭವಿಸುತ್ತಿರುವೆವು, ಕಣ್ಣಾರ ನೋಡುತ್ತಿರುವೆವು. ಅವನು ಧೃಷ್ಟರಾದ ದರೋಡೆಯ ಕಳ್ಳರಂತೆ "ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ" ಎಂದು ಹೇಳಿಹೇಳಿ ಭಕ್ತರ ಸರ್ವಸ್ವವನ್ನೂ ಅಪಹರಿಸುವನು. ಯಾರಮೇಲೆ ಮಮತೆಹುಟ್ಟುವುದೋ ಅವರನ್ನು ಇಹಲೋಕದಲ್ಲಿ ಹೆಚ್ಚುದಿವಸ ಬಿಡದೆ ಬೇಗ ಕೊಂದು ತನ್ನಲ್ಲಿಗೆ ಕರೆದುಕೊಂಡುಬಿಡುವನು. ದೇವತೆಗಳ ಜೊತೆಯಲ್ಲಿ ರಾಕ್ಷಸರನ್ನೂ, ಸಾತ್ವಿಕರ ಜೊತೆಯಲ್ಲಿ ತಾಮಸರನ್ನೂ ಹೂವುಗಳ ಜೊತೆಯಲ್ಲಿ ಹುಳುಹುಬಟೆ ಮುಳ್ಳುಗಳನ್ನೂ ಸೃಷ್ಟಿಸಿ ಗೋಳಾಡಿಸುವನು. ಕೊನೆಗೆ ಒಂದು ಒಳ್ಳೆಯಕೆಲಸಕ್ಕೆ ಕೈಹಾಕಿದರೆ ಅದನ್ನು ಸುಸೂತ್ರವಾಗಿ ನಡೆಯಗೊಡಿಸನು. ಬೇಕಾದಷ್ಟು ಅಡಚಣೆಗಳನ್ನು ತಂದು ಒಡ್ಡಿ "ಶ್ರೇಯಾಂಸಿ ಬಹುವಿಘ್ನಾನಿ" ಎಂದು ಸಾರುವನು!

ಶ್ರೇಷ್ಠನಾದ ಕನ್ನಡಕವಿಯೊಬ್ಬನಿಗೆ ಆತನು ಬದುಕಿದ್ದಾಗ ನಾವು ತೋರಿಸಬೇಕಾಗಿದ್ದ ಗೌರವವನ್ನು ಈಗಲಾದರೂ ತೋರಿಸೋಣವೆಂದು ಹೊರಟರೆ ಎಷ್ಟು ವಿಘ್ನಗಳು! ವಿಘ್ನಗಳು ಬಂದಾವೆಂದು ಹೆದರಿಯೇ ಜುಲೈ ತಿಂಗಳ ಮಧ್ಯದಲ್ಲಿ ಕೊಡುತ್ತೇವೆಂದು ಹೇಳಿದ್ದ ಸಂಚಿಕೆಯನ್ನು ವಿಘ್ನೇಶ್ವರನ ಪೂಜೆಮಾಡಿ ಕೊಡೋಣವೆಂದು ಯೋಚಿಸಿದೆವು. ಖಜಾನೆಯ ಅಧಿಕಾರಿಯೂ ಒಂದುಕಾಸು ತೆಗೆದುಕೊಡಬೇಕಾದರೆ ತನಗೆ ಮೇಲ್ಪಟ್ಟ ಅಧಿಕಾರಿಯ ಅಪ್ಪಣೆಯನ್ನು ಪಡೆಯಬೇಕಾಗಿರುವಂತೆ ವಿಘ್ನೇಶ್ವರನು ವಿಘ್ನ ನಿವಾರಣೆಮಾಡುವುದಕ್ಕೂ ತನ್ನ ಮೇಲ್ಪಟ್ಟವನ ಅಪ್ಪಣೆಯನ್ನು ಕಾಯಬೇಕೆಂದು ತೋರುತ್ತದೆ! ಅಂತು ವಿಘ್ನೇಶ್ವರನಿಂದ ವಿಘ್ನನಿವಾರಣೆಯೇನೋ ಆಗಲಿಲ್ಲ. "ಮುದ್ದಣನ ಸಂಚಿಕೆಯು" ವಿನಾಯಕನ ಹಬ್ಬಕ್ಕೂ ಹೊರಡಲಿಲ್ಲ.

ದೇವರಿಗೆ ಬೇರೆ ಏನೂ ಕೆಲಸವೇ ಇಲ್ಲವೇ? ಈ ಪ್ರಬುದ್ಧಕರ್ಣಾಟಕ ಮಶಕವು ಸಕಾಲಕ್ಕೆ ಬರದಂತೆ ಅಡ್ಡಿತಂದುಹಾಕುವುದೇ ಅವನ ಕೆಲಸವೇ? ಎಂದು ಎನ್ನಿಸುವುದು! ನಿಜ; ಹಾಗಾದರೆ ಈ ತಾಮಸಕ್ಕೆ ಉಪಪತ್ತಿ ಹೇಳುವುದು ಹೇಗೆ? ಆಧುನಿಕಕರ್ಣಾಟ ಸಾಹಿತ್ಯ ಪ್ರಪಂಚದಲ್ಲಿ ಉತ್ತಮಲೇಖಕರೆಂದು ಹೆಸರುಗೊಂಡಿರುವವರು ಈ ಸಂಚಿಕೆಗೆ ಲೇಖನಗಳನ್ನು ಬರೆಯಲು ಒಪ್ಪಿಕೊಂಡರು. ಒಬ್ಬೊ

ಬ್ಬರಿಗೂ ಅಘಟನಘಟನಾಸಾಮರ್ಥ್ಯ ;—ಒಂದೊಂದು ದಿವಸಕ್ಕೆ ಒಂದೊಂದು ಪುಸ್ತಕವನ್ನು ಬೇಕಾದರೂ ಬರೆಯಬಲ್ಲವರು. ಇಂಥವರಿಗೆ ಮೇಲಿಂದ ಮೇಲೆ ಈ ಕಾಲಕ್ಕೆ ಸರಿಯಾಗಿ ಅನಿವಾರ್ಯಗಳು ಬಂದು ಒದಗಿ ಅಭಿಭವವನ್ನುಂಟುಮಾಡಿದರೆ, ಇದನ್ನು ಏನೆಂದು ಹೇಳುವುದು ? ಆ ವಿಘ್ನಗಳಿಗೆ ಹೆದರದೆ ಹಠಸಾಧನೆಮಾಡಿದ ಲೇಖಕರನ್ನು ಎಷ್ಟೆಂದು ಮೆಚ್ಚುವುದು ? ಇವರೆಲ್ಲರಿಗೂ ನಮ್ಮ ಅನಂತಾನಂತ ವಂದನೆಗಳು.

ಇನ್ನೂ ಕೆಲವು ಲೇಖನಗಳು ಬರಬೇಕಾಗಿದ್ದುವು ; ಅವುಗಳನ್ನೂ ಕಾದರೆ ಮುದ್ದಣನ ಸಂಚಿಕೆಯೂ ವಿನಾಯಕನ ಸಂಚಿಕೆಯೂ ಹೋಗಿ ದೀಪಾವಳಿಯ ಸಂಚಿಕೆಯಾದೀತೆಂಬ ಸಂಕೋಚದಿಂದ ಈ ಗ್ರಂಥವು ಇದರ ಪ್ರಕೃತ ಅತೃಪ್ತಿಕರಸ್ಥಿತಿಯಲ್ಲಿಯೇ ಕನ್ನಡಿಗರಲ್ಲಿ ಸಮರ್ಪಿಸಲ್ಪಟ್ಟಿದೆ. ಹಬ್ಬದ ರಜಕ್ಕೆ ಬರಬೇಕಾದ ಹುಡುಗನು ನೆವಹಾಕಿಕೊಂಡು ಬರದೇ ನಿಂತುಬಿಡುವುದಕ್ಕಿಂತ ಎರಡುದಿವಸ ಕಳೆದಮೇಲಾದರೂ ಬಂದನಲ್ಲಾ ಎಂದು ಸಂತೋಷಿಸುವ ತಾಯಿತಂದೆಗಳಂತೆ ಕನ್ನಡಿಗರು ತಡಮಾಡಿಕೊಂಡು ಬಂದ ಈ ಸಂಚಿಕೆಯನ್ನು ಆದರಿಸುವರೆಂದು ನಂಬುತ್ತೇವೆ.

ಈ ಪ್ರಬಂಧಗಳನ್ನೆಲ್ಲಾ ಸೇರಿಸಿ ಬೇರೆಯೊಂದು ಗ್ರಂಥವಾಗಿ ಪ್ರಕಟಗೊಳಿಸಬೇಕೆಂಬ ಉದ್ದೇಶವಿದೆ. ಆದ್ದರಿಂದ ಲಕ್ಷ್ಮೀನಾರಣಪ್ಪನವರ ಜೀವನಚರಿತೆಯ ವಿಚಾರವಾಗಿ ಹೆಚ್ಚು ಅಂಶಗಳನ್ನು ತಿಳಿದಿರುವ ಮಹನೀಯರು ತಮತಮಗೆ ತಿಳಿದ ಸಂಗತಿಗಳನ್ನು ಇನ್ನು ಒಂದುತಿಂಗಳ ಒಳಗಾಗಿ ಕಳುಹಿಸಿಕೊಟ್ಟರೆ ಅವುಗಳನ್ನು ಗ್ರಂಥದಲ್ಲಿ ಸೇರಿಸಬಹುದು.

ಇಂತೀ ಕರ್ಣಾಟಕಸಂಘದ ವಿಜ್ಞಾಪನೆಗಳು.

ಮುನ್ನುಡಿ

ಇತರ ದೇವತೆಗಳನ್ನಾರಾಧಿಸುವಾಗಲಂತೂ ನಿರ್ವಿಘ್ನತಾ ಸಿದ್ಧಿಗಾಗಿ ಮೊದಲು ಗಣಪತಿಯನ್ನು ಪೂಜಿಸುವುದು ಸರಿ. ಆದರೆ ಭಾದ್ರಪದ ಶುಕ್ಲ ಚತುರ್ಥಿಯ ದಿನ ಮಾಡುವ ಸಿದ್ಧಿವಿನಾಯಕ ವ್ರತದಲ್ಲಿಯೂ ಮೊದಲು ಬೇರೊಂದು ಗಣಪತಿಪೂಜೆ ನಡೆಯಬೇಕೆ? ಇದೇ ವಿಧವಾದ ಪ್ರಶ್ನೆಯು ಈ ಮುನ್ನುಡಿಯ ವಿಷಯದಲ್ಲಿಯೂ ಹುಟ್ಟುತ್ತದೆ. ಪ್ರಸ್ತಾವನೆಗಳ ಸಂಗ್ರಹವೇ ಆದ ಈ ಪುಸ್ತಕಕ್ಕೂ ಪ್ರಸ್ತಾವನೆಯೊಂದು ಬೇಕೆ?

ಬೇಕಾದರೆ ಅದನ್ನು ಬರೆಯತಕ್ಕವರಾದರೂ ಎಂಥವರಾಗಿರಬೇಕು? ಯಾರ ಜೀವನಕೃತಿಗಳು ಈ ಪುಸ್ತಕಕ್ಕೆ ವಿಷಯವಾಗಿವೆಯೋ ಆತನು ಸ್ವತಃ ಪ್ರಸಿದ್ಧನಾಗಿರುವ ಕವಿ. ಆತನನ್ನು ಕುರಿತು ಇಲ್ಲಿ ಉಪನ್ಯಸಿಸಿರತಕ್ಕವರು ಪ್ರಸಿದ್ಧರಾದ ವಿದ್ವದ್ರಸಿಕರು. ಹೀಗೆ ಸ್ವತಏವ ಪ್ರಶಸ್ತವಾಗಿರತಕ್ಕ ಗ್ರಂಥಕ್ಕೆ ಉಪಕ್ರಮಣಿಕೆಯನ್ನು ಬರೆಯುವುದರಿಂದ ಮತ್ತಷ್ಟು ಪ್ರಶಸ್ತಿಯನ್ನುಂಟುಮಾಡಿಕೊಡುವೆನೆಂದು ಹೊರಡುವವನು ಅವರೆಲ್ಲರಿಗಿಂತ ಪ್ರಸಿದ್ಧಿಯಲ್ಲಿ ಕಡಿಮೆಯಿಲ್ಲದೆಯಾದರೂ ಇರಬೇಕಲ್ಲವೆ?

ಹೀಗಿರುವಲ್ಲಿ, ಈ ಪುಸ್ತಕದ ಪ್ರಕಾಶಕರಾದ ಕರ್ಣಾಟಕಸಂಘದ ಅಧಿಕಾರಿಗಳು ಮುನ್ನುಡಿಯೊಂದು ಆವಶ್ಯಕವೆಂದು ನಿಶ್ಚಯಿಸಿ, ಅದನ್ನು ನಾನು ಬರೆಯಬೇಕೆಂದು ವಿಧಾಯಕಮಾಡಿರುವುದರ ಮರ್ಮವನ್ನು ತಿಳಿಯುವುದು ಕಷ್ಟವಾಗಿದೆ. ಬಹುಶಃ ಅದು ಈ ರೀತಿ ಇರಬಹುದೆ? ಅವರ ಸಂಘದಲ್ಲಿ ಬಹು ದಿನಗಳಿಂದ ಮಮತೆ ಇಟ್ಟುಕೊಂಡಿರುವವರಲ್ಲಿ ನಾನೂ ಒಬ್ಬನು; ಈ ಸಂಗತಿಯನ್ನು ಅವರು ಗಣನೆಗೆ ತೆಗೆದುಕೊಂಡು, ತಮ್ಮ ಪರವಾಗಿ ಈ ಪುಸ್ತಕದ ಲೇಖಕರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುವ ಸಂತೋಷವನ್ನು ನನಗೆ ಅನುಗ್ರಹಿಸುವುದರ ಮೂಲಕ ನನ್ನ ಮೇಲೆ ತಮಗೆ ಇರುವ ಅಭಿಮಾನವನ್ನು ಸೂಚಿಸಿರಬಹುದು. ಇದಿಷ್ಟು ನನ್ನ ಮುನ್ನುಡಿಗೆ ಮುನ್ನುಡಿ.

ಈ ಬಗೆಯ ಗ್ರಂಥನಿರ್ಮಾಣಕ್ಕೆ ಕನ್ನಡದಲ್ಲಿ ಇದೇ ಮೊದಲೆಂಬುದೇ ಈ ವಿಷಯವಿಲ್ಲದ ಪ್ರಬಂಧದಲ್ಲಿ ನಾನು ಮೊದಲು ಹೇಳಬಹು

ದಾಗಿರುವ ವಿಷಯ. ಇಂಥ ಕವಿಪ್ರಶಂಸಾತ್ಮಕವಾದ ಗ್ರಂಥಗಳು ಇಂಗ್ಲಿಷಿನಲ್ಲಿ ಅಪರೂಪವಲ್ಲ. ಕವಿಯನ್ನು ಚೆನ್ನಾಗಿ ಬಲ್ಲ ಬಂಧುಮಿತ್ರರು ಆತನ ನಡೆನುಡಿಗಳಲ್ಲಿ ಜನರ ಗಮನಕ್ಕೆ ಬರಲು ಅರ್ಹವಾದುವೆಂದು ತಮಗೆ ತೋರಿದ ಸಂಗತಿಗಳನ್ನು ವರ್ಣಿಸಿಯೂ, ಆತನ ಕಾವ್ಯಗಳನ್ನು ಪರಿಶೀಲಿಸಿದ ವಿದ್ವಾಂಸರು ಅವುಗಳ ಗುಣಾವಗುಣಗಳನ್ನು ವಿಮರ್ಶಿಸಿಯೂ ಪ್ರಬಂಧಗಳನ್ನು ಬರೆದು ಪ್ರಕಟಗೊಳಿಸುವುದು ಪಾಶ್ಚಾತ್ಯರಲ್ಲಿ ಸಾಮಾನ್ಯವಾದ ಪದ್ಧತಿ. ಇಂತಹ ಗ್ರಂಥಗಳಿಂದ ಹೆಚ್ಚಾದ ಪ್ರಯೋಜನವುಂಟೆಂಬುದು ಸ್ಪಷ್ಟವಾಗಿಯೇ ಇದೆ. ಅವು ಜನಸಾಮಾನ್ಯಕ್ಕೆ ಕವಿಯ ಪ್ರಥಮಪರಿಚಯವನ್ನು ಉಂಟುಮಾಡಿಕೊಟ್ಟು, ಆತನ ಕಾವ್ಯಗಳಲ್ಲಿ ಅವರಿಗೆ ಅಭಿರುಚಿಯನ್ನು ಹುಟ್ಟಿಸುತ್ತವೆ. ಜನರಿಗೆ ಕಾಯಕ್ಲೇಶ ಮನಃಕ್ಲೇಶಗಳು ಹೆಚ್ಚುತ್ತಲೂ ವಿಶ್ರಾಂತಿವ್ಯವಧಾನಗಳು ಕಡಿಮೆಯಾಗುತ್ತಲೂ ಇರುವ ಈ ಕಾಲದಲ್ಲಿ ಪ್ರತಿಯೊಬ್ಬ ಕವಿಯ ಪ್ರತಿಯೊಂದು ಕಾವ್ಯವನ್ನೂ ಪ್ರತಿಯೊಬ್ಬ ಮನುಷ್ಯನೂ ಆಮೂಲಾಗ್ರವಾಗಿ ಓದುವುದು ಸಾಧ್ಯವಲ್ಲ. ಈಗ ವಿದ್ಯಾಪ್ರಾಚುರ್ಯವಿಶೇಷದಿಂದಲೂ ಮುದ್ರಣಸೌಕರ್ಯವಿಶೇಷದಿಂದಲೂ ಗ್ರಂಥಸಂಖ್ಯಾಭಿವೃದ್ಧಿಯು ಹೇರಳವಾಗಿ ಆಗುತ್ತಿದೆ, ಅಥವಾ ಆಗುವಂತಿದೆ. ಇಂತಹ ಕಾಲದಲ್ಲಿ ಕಾವ್ಯರಾಶಿಯೊಳಗಿನ ಉತ್ತಮಕೃತಿಗಳ ಸ್ವಾರಸ್ಯಾಂಶಗಳನ್ನು ಸಂಗ್ರಹಿಸಿ ಜನರ ಮುಂದಿರಿಸಲು ಇಂತಹ ಉಪಾಯವನ್ನವಲಂಬಿಸದಿದ್ದರೆ, ಆ ಕೃತಿಗಳ ಕಡೆಗೆ ಸಾಮಾನ್ಯಲೋಕದ ದೃಷ್ಟಿಯು ತಿರುಗುವುದೇ ಅಸಂಭವವಾಗಬಹುದು. ಇದೂ ಅಲ್ಲದೆ, ಪ್ರೌಢಗಳಾದ ಕಾವ್ಯಗಳನ್ನೋದಿ ತಿಳಿದುಕೊಳ್ಳುವುದಕ್ಕೆ ಆವಶ್ಯಕವಾದ ಪಾಂಡಿತ್ಯವು ಸಾಮಾನ್ಯಜನಕ್ಕೆ ಇರುವುದು ಸಾಧ್ಯವಲ್ಲ. ಅಂಥವರಿಗೆ ಈ ಬಗೆಯ ವಿವರಣಗ್ರಂಥಗಳು ಅತಿಶಯವಾಗಿ ಉಪಕಾರಕಗಳಾಗುವುವು. ಹೀಗೆ ಸಮಯಾನುಕೂಲ್ಯವಿಲ್ಲದೆಯಾಗಲಿ ವ್ಯುತ್ಪತ್ತಿ ಸಾಲದೆಯಾಗಲಿ ಕಾವ್ಯವ್ಯಾಸಂಗವನ್ನು ಬಿಟ್ಟಿರತಕ್ಕ ಜನರಿಗೆಲ್ಲ ಇಂತಹ ಪುಸ್ತಕಗಳು ಅತ್ಯಂತ ಆದರಣೀಯಗಳಾಗುವುವೆಂಬುದಕ್ಕೆ ಸಂದೇಹವಿಲ್ಲ.

ಇನ್ನು ಈ ಗ್ರಂಥದಲ್ಲಿ ಪ್ರಶಂಸಿತನಾಗಿರುವ ಕವಿಯು ಅಷ್ಟು ಉತ್ತಮವರ್ಗಕ್ಕೆ ಸೇರಿದವನೆ?—ಎಂದರೆ ಈ ಬಗೆಯ ಪ್ರಶಂಸಾಗ್ರಂಥವೊಂದಕ್ಕೆ ವಿಷಯನಾಗಲು ತಕ್ಕಷ್ಟು ಮಹತ್ವವು ಆತನಲ್ಲುಂಟೆ?—ಎಂಬ ಪ್ರಶ್ನೆಗೆ ಉತ್ತರವನ್ನು ಇಲ್ಲಿ ಸಂಕ್ಷೇಪವಾಗಿ ಹೇಳಬೇಕಾಗಿದೆ. ಅದಕ್ಕೆ

ತಕ್ಕ ಸಮಾಧಾನವನ್ನು ಕಾವ್ಯತತ್ತ್ವಜ್ಞರಾದ ಪಂಡಿತರು ಮುಂದಿನ ಪ್ರಬಂಧಗಳಲ್ಲಿ ವಿಸ್ತಾರವಾಗಿ ಸಿದ್ಧಗೊಳಿಸಿಟ್ಟಿರುವರು. ಅವರು ವಿವರಿಸಿರ ತಕ್ಕ ಸಂಗತಿಗಳನ್ನೆಲ್ಲ ಒಟ್ಟಾಗಿ ತೆಗೆದುಕೊಂಡು ಪರ್ಯಾಲೋಚನೆಮಾಡಿ ದರೆ ಲಕ್ಷ್ಮೀನಾರಾಯಣ ಕವಿಯ ವಿಶೇಷಗುಣಗಳು--ಅಥವಾ, ವಿಶೇಷ ಮಹತ್ತ್ವದ ಗುರುತುಗಳು—ಎಂದು ನನಗೆ ತೋರಿಬರುವ ಎರಡು ಅಂಶ ಗಳನ್ನು ಇಲ್ಲಿ ಸೂಕ್ಷ್ಮವಾಗಿ ನಿರೂಪಿಸುವೆನು :—

(೧) ಆತನು ಹುಟ್ಟುಕವಿ.

(೨) ಆತನು ನೂತನ ಮಾರ್ಗವನ್ನು ಹುಡುಕಲಾರಂಭಿಸಿದ ಕವಿ.

ಕವಿತಾಬೀಜವು ಆತನಲ್ಲಿ ಆಜನ್ಮಸಿದ್ಧವಾಗಿತ್ತೆಂಬುದು ಆತನ ಜೀವನಚರಿತೆಯಿಂದ ವ್ಯಕ್ತವಾಗುತ್ತದೆ. ಪಂಡಿತವಂಶದಲ್ಲಿ ಹುಟ್ಟಿಯೋ ಅಥವಾ ಇತರ ವಿಧವಾದ ಸನ್ನಿವೇಶಾನುಕೂಲ್ಯದಿಂದಲೋ ಬಾಲ್ಯದಲ್ಲಿ ಕಾವ್ಯಾಭ್ಯಾಸಮಾಡಿದವರು ತಾವೂ ಕಾವ್ಯರಚನೆಮಾಡಿ ತಮ್ಮ ಎದೆಯ ಮೇಲೆ ಒತ್ತುತ್ತಿರುವ ಪಾಂಡಿತ್ಯದ ಹೊರೆಯನ್ನು ಇಳಿಸಿಕೊಳ್ಳಬೇಕೆಂದು ಯತ್ನಿಸುವುದು ಸ್ವಾಭಾವಿಕವಾಗಿದೆ. ಆದರೆ ಬಾಲ್ಯಕಾಲದಲ್ಲಿ ಪಂಡಿತ ಸಂಪರ್ಕವನ್ನೆಷ್ಟು ಮಾತ್ರವೂ ಅರಿಯದಿದ್ದು ಕಸರತ್ ವಿದ್ಯೆಯಿಂದ ಜೀವನ ಸಂಪಾದಿಸಿಕೊಳ್ಳುತ್ತಿದ್ದವನು, ದೊಡ್ಡ ಪೈಲ್ವಾನನೆಂದು ಹೆಸರು ಪಡೆಯಬೇಕೆಂಬ ಆಶೆಗೆ ವಶನಾಗದೆ, ಕಾವ್ಯಪಾಠಕ್ಕೆ ಮನಸೋಲಬೇಕಾ ದರೆ ಆತನಲ್ಲಿ ಎಲ್ಲ ಸತ್ಕಾವ್ಯಕ್ಕೂ ಮಾತೃತೆಯಾದ ರಸಿಕತೆಯು—ಎಂದರೆ ತನ್ನ ಸುತ್ತಮುತ್ತ ಕಾಣುವ ಪ್ರಪಂಚದಲ್ಲಿಯ ಲೋಪದೋಷಗಳ ವಿಷ ಯದಲ್ಲಿ ಬೇಸತ್ತವನಾಗಿ, ಅದಕ್ಕಿಂತ ಉತ್ತಮವಾದ ಬೇರೊಂದು ಪ್ರಪಂ ಚವನ್ನು ಹುಡುಕಿ, ಅದರ ಸೌಂದರ್ಯವನ್ನು ಅನುಭವಿಸಬೇಕೆಂಬ ಭಾವೋ ನ್ನತಿಯೂ ತದನುಗುಣವಾದ ಆರ್ದ್ರಹೃದಯತೆಯೂ—ಇದ್ದೇ ಇದ್ದಿರ ಬೇಕಲ್ಲವೆ ? ಈ ಊಹೆಯನ್ನು ಲಕ್ಷ್ಮೀನಾರಾಯಣ ಕವಿಯ ಕೊನೆಯ ಕಾವ್ಯವಾದ—ಎಂದರೆ ಆತನ ಮನೋಬುದ್ಧಿಗಳು ಪರಿಪಕ್ವಸ್ಥಿತಿಗೆ ಬಂದಾಗ ಬರೆದುದಾದ—"ರಾಮಾಶ್ವಮೇಧ" ವು ಸ್ಥಿರಪಡಿಸುತ್ತದೆ. ಮುದ್ದಣನು ಪಾಂಡಿತ್ಯಪ್ರದರ್ಶನಕ್ಕಾಗಿ ಕಾವ್ಯಹೇಳಹೊರಟವನಲ್ಲ. ಅವನು ಸರಸಸಲ್ಲಾಪಗಳಲ್ಲಿ ಇಷ್ಟವುಳ್ಳವನು. ಕಾವ್ಯಪ್ರಸಿದ್ಧವಾದ ದುಂಬಿಗೆ ಮಕರಂದದಲ್ಲಿ ಹೇಗೆ ಸ್ವಾಭಾವಿಕವಾದ ಆಸಕ್ತಿಯೋ ಹಾಗೆ ಆತನಿಗೆ ಕಾವ್ಯರಸದಲ್ಲಿ ಸ್ವಾಭಾವಿಕವಾದ ಆಸಕ್ತಿ. ಪುಣ್ಯವಶದಿಂದ

ಆತನು ಅನುಕೂಲಳಾದ ಸಹಧರ್ಮಿಣಿಯನ್ನು ಪಡೆದಿದ್ದನು. ಆ ಸರಸಿಯನ್ನು ಸಂತೋಷಗೊಳಿಸುವ ಸಂತೋಷಕ್ಕಾಗಿ ಆತನು ಹೇಳಿದ ಕಥಾವಿಸ್ತಾರವೇ "ರಾಮಾಶ್ವಮೇಧ" ವೆಂಬ ಕಾವ್ಯ. ಅದು ರಸಿಕರಂಜನೆಗಾಗಿ ಹುಟ್ಟಿದ ರಸಿಕವಾಕ್ಕು. ಜೇನು ಮಾರಿ ಹೊಟ್ಟೆಹೊರೆದುಕೊಳ್ಳುವವನಿಗೆ ಮಕರಂದದಲ್ಲಿಯೂ ಋಣಪಂಡಿತನಿಗೆ ಕಾವ್ಯಾಲಾಪದಲ್ಲಿಯೂ ಇರತಕ್ಕ ಆಸಕ್ತಿಯು ನೈಜವಾದುದಲ್ಲ, ಕೃತಕವಾದುದು. ಆ ಬಗೆಯ ಕಾರಣಾಂತರಜನಿತವಾದ ಆಸಕ್ತಿಯ ಹೆಸರು ಪ್ರೀತಿಯಲ್ಲ; ಅದನ್ನು ಲೋಭವೆನ್ನಬಹುದೋ ಏನೋ! ಹೀಗೆ ಹೇಳುವುದರಲ್ಲಿ ನಮ್ಮ ಉದ್ದೇಶ್ಯವು ಪಾಂಡಿತ್ಯದೂಷಣೆಯಲ್ಲ. ಪಾಂಡಿತ್ಯವಿಲ್ಲದೆ ಸತ್ಕಾವ್ಯವಾಗಲಾರದೆಂಬುದನ್ನು ನಾವು ಸರ್ವಾತ್ಮನಾ ಒಪ್ಪಿಕೊಳ್ಳುತ್ತೇವೆ. ಆದರೆ ಕಾವ್ಯನಿರ್ಮಾಣಕ್ಕೆ ಪಾಂಡಿತ್ಯವೊಂದೇ ಸಾಲದೆಂಬುದನ್ನು ಸೂಚಿಸುವುದೇ ಸದ್ಯಃ ನಮ್ಮ ತಾತ್ಪರ್ಯ. ಮಣ್ಣಿಲ್ಲದಿದ್ದರೆ ಮಡಕೆಯಾಗದು. ಆದರೆ ಮಣ್ಣನ್ನು ಒದಗಿಸಿಕೊಳ್ಳ ಬಲ್ಲವರಿಗೆಲ್ಲ ಕುಂಬಾರನಿಗಿರುವ ಹಸ್ತಕೌಶಲವು ಇರುವುದೆ?

ಲಕ್ಷ್ಮೀನಾರಾಯಣಕವಿಯಲ್ಲಿ ಕವಿತಾಂಕುರವು ಪ್ರಕೃತಿಸಿದ್ಧವಾಗಿತ್ತೆಂದು ಹೇಳಿದ ಮಾತ್ರದಿಂದಲೇ ಆತನ ಮೇಲ್ಮೆಯೆಲ್ಲವನ್ನೂ ಬಣ್ಣಿಸಿದಂತೆ ಆಗದು. ಸಹಜವಾದ ಕವಿತಾಚಾತುರಿಯನ್ನು ಪಡೆದವರು ಕನ್ನಡದಲ್ಲಿ ಎಷ್ಟೋಮಂದಿ ಇದ್ದರಲ್ಲವೆ? ಹಿಂದೆ ನೂರಾರು ರಸವತ್ಕಾವ್ಯಗಳನ್ನು ಬರೆದವರು ಆಜನ್ಮಕವಿಗಳಾಗಿಯೇ ಇದ್ದಿರಬೇಕಲ್ಲವೆ? ಪಂಪ, ಕುಮಾರವ್ಯಾಸ, ಷಡಕ್ಷರಿ, ಲಕ್ಷ್ಮೀಶ, ಕನಕದಾಸ—ಇವರೇ ಮೊದಲಾದ ಎಷ್ಟೋಮಂದಿಗೆ ಕವಿತೆಯು, ಸ್ವಲ್ಪ ಹೆಚ್ಚು ಕಡಿಮೆ ಹುಟ್ಟುಗುಣವಾಗಿಯೇ ಬಂದಿರಬೇಕು. ಹಾಗಾದಮೇಲೆ ಲಕ್ಷ್ಮೀನಾರಾಯಣಕವಿಯದೇನು ವಿಶೇಷ?—ಎಂಬ ವಿಚಾರವು ಬಂದೇಬರುವುದು. ಇದಕ್ಕೆ ಪ್ರತ್ಯುತ್ತರವು ಮೇಲಣ (೨) ನೆಯ ಗುಣನಿರೂಪಣೆಯಲ್ಲಿ ಅಡಕವಾಗಿದೆ. ಅದು—ಆತನು ನೂತನಮಾರ್ಗಾನ್ವೇಷಿಯೆಂಬುದೇ. ಈಗ ತಾನೆ ನಾವು ಸ್ಮರಿಸಿರುವ ಪಂಪ ಮೊದಲಾದ ಪೂರ್ವಕವಿಗಳಲ್ಲಿ ಕೆಲವರು ಮಾತ್ರವೇ ಕವಿತ್ವದಲ್ಲಿ ನೂತನ ಮಾರ್ಗಗಳನ್ನು ಕಲ್ಪಿಸಿದವರು; ಉಳಿದ ಬಹುಮಂದಿ ತಮಗೆ ಹಿಂದಿದ್ದವರು ಹಾಕಿದ ಮಾರ್ಗಗಳನ್ನು ಅನುಸರಿಸಿ ನಡೆದವರು. ನಮ್ಮ ಲಕ್ಷ್ಮೀನಾರಾಯಣ ಕವಿಯು ನೂತನಮಾರ್ಗ ಪ್ರದರ್ಶಕರಾದ

ಕೆಲಮಂದಿಯ ಪಂಕ್ತಿಗೆ ಸೇರತಕ್ಕವನು; ಆತನ ಪೂರ್ವಿಕರ ಕೃತಿಗಳಲ್ಲಿ ಕಾಣಬಾರದಿರುವ ಲಕ್ಷಣಗಳೊಂದೆರಡು ಆತನ ಕೃತಿಯಲ್ಲಿ ಕಾಣಬರುತ್ತವೆ. ಆ ಲಕ್ಷಣಗಳು ಇನ್ನೂ ಪ್ರಾರಂಭದಶೆಯಲ್ಲಿಯೇ ಇರತಕ್ಕುವು. ಅವು ಪರಿಪೂರ್ಣದಶೆಗೆ ಬಂದು ಶೋಭಿಸಲು ಬೇಕಾದಷ್ಟು ಕಾಲಾವಕಾಶವನ್ನು ವಿಧಿಯು ಆತನಿಗೆ ದಯಗೆಯ್ಯಲಿಲ್ಲ.

ಲಕ್ಷ್ಮೀನಾರಾಯಣಕೃತಿಯ ನವೀನತೆಯು ಕಾವ್ಯದ ವಸ್ತುವಿಗೆ ಸಂಬಂಧಪಟ್ಟುದಲ್ಲ, **ರೀತಿಗೆ** ಸಂಬಂಧಪಟ್ಟುದು. ಆತನು ಹೇಳಿರುವುದೇನೋ ಹಳೆಯ ರಾಮಕಥೆಯನ್ನೇ. ಆದರೆ ಆ ಹೇಳಿಕೆಯ ಪರಿಯು ಹೊಸದು. ಹೀಗೆ ಹೊಸದೊಂದು ದಾರಿಯನ್ನು ಹಿಡಿಯುವ ಪ್ರಯತ್ನವು ಸ್ಪಷ್ಟಗೊಂಡಿರುವುದು "ರಾಮಾಶ್ವಮೇಧ" ದಲ್ಲಿಯೇ. ಆದರ **ರೀತಿನವ್ಯತೆ**ಯು ಮೂರು ಸಂಗತಿಗಳಿಂದ ಉಂಟಾದುದೆಂದು ಹೇಳಬಹುದು. ಅವುಗಳಲ್ಲಿ

(೧) ಅದು ಗದ್ಯಪ್ರಬಂಧವಾಗಿರುವುದೊಂದು;

(೨) ಅದು ಸಂಭಾಷಣೆಯ ರೂಪದಲ್ಲಿರುವುದೊಂದು;

(೩) ರಸಿಕದಂಪತಿಗಳ ಸಲ್ಲಾಪಕ್ಕೆ ಸಹಜವಾದ ಹಾಸ್ಯರಸವು ಅದರಲ್ಲಿ ಅಡಿಗಡಿಗೆ ಉಕ್ಕಿ ಹರಿಯುತ್ತಿರುವುದೊಂದು.

ಇವುಗಳಲ್ಲಿ (೨) (೩) ನೆಯ ಗುಣಗಳು (೧) ನೆಯದಕ್ಕಿಂತಲೂ ಪ್ರಶಸ್ತವಾದುವು. ಏಕೆಂದರೆ ಕನ್ನಡದಲ್ಲಿ ಸಂಭಾಷಣರೂಪದ ಕಾವ್ಯವು "ರಾಮಾಶ್ವಮೇಧ" ಕ್ಕೆ ಹಿಂದೆ ಯಾವುದೂ ಆಗಿದ್ದಂತೆ ತೋರುವುದಿಲ್ಲ. ಅದರಲ್ಲಿಯ ಸಂಭಾಷಣೆಯ ರೀತಿಯು ಆಧುನಿಕ ಕಾದಂಬರಿಗಳಲ್ಲಿ—ಎಂದರೆ "ನಾವೆಲ್" ಗಳಲ್ಲಿ ಕಾಣಬರುವಂತಹುದು. ಅಶ್ಲೀಲವಾಗದೆ ಮರ್ಯಾದೆಯನ್ನು ಮೀರದೆ ಇರುವ ಹಾಸ್ಯರಸಪ್ರಧಾನವಾದ ಗ್ರಂಥವಾದರೋ ಕನ್ನಡದಲ್ಲಿ ಇನ್ನೂ ಅಪರೂಪವೇ.

ಗದ್ಯರಚನೆಯು ಕನ್ನಡದಲ್ಲಿ ಎಷ್ಟೋ ಹಿಂದಿನಿಂದಲೂ ಆಗಿಬಂದಿದೆ. ಚಂಪೂಕಾವ್ಯಗಳಲ್ಲಿ ಗದ್ಯವಿದ್ದೇ ಇದೆ. ಕೃಷ್ಣರಾಜ ವಾಣೀವಿಲಾಸ ಭಾರತ, ಕಲಾವತೀಪರಿಣಯ, ಮುದ್ರಾಮಂಜೂಷ ಮೊದಲಾದ ಎಷ್ಟೋ ವಚನಗ್ರಂಥಗಳು "ರಾಮಾಶ್ವಮೇಧ" ಕ್ಕಿಂತ ಹಿಂದೆಯೇ ರಚಿಸಲ್ಪಟ್ಟುವು. ಆದರೂ ಒಂದು ಪ್ರೌಢವಾದ ಪದ್ಯಕಾವ್ಯವನ್ನು ಬರೆದಾತನು

ಗದ್ಯಕಾವ್ಯವನ್ನು ಬರೆಯಹೊರಟು "ಪದ್ಯಂ ವದ್ಯಂ; ಗದ್ಯಂ ಹೃದ್ಯಂ" ಎಂದು ತೀರ್ಮಾನಮಾಡಿದುದನ್ನು ನೋಡಿದರೆ ಆತನು ಬರಬರುತ ಗದ್ಯ ಪಕ್ಷಪಾತಿಯಾಗುತ್ತಿದ್ದನೆಂಬುದು ನಿಸ್ಸಂಶಯವಾಗಿ ತೋರುತ್ತದೆ. ಹಿಂದಿನ ಪದ್ಯರಚನಾಭ್ಯಾಸದಿಂದ ಸಂಪಾದಿತವಾದ ಶಬ್ದಸಂಪತ್ತನ್ನೂ ವಾಗ್ಧೋರಣೆಯನ್ನೂ ಆತನು ಗದ್ಯನಿರ್ಮಿತಿಯಲ್ಲಿ ಉಪಯೋಗಪಡಿಸಿರುವುದರಿಂದ ಆತನ ವಾಕ್ಯಸರಣಿಯಲ್ಲಿ ಅಥವಾ ಶೈಲಿಯಲ್ಲಿ ಒಂದು ಹೊಸ ಸೊಬಗೂ ಶ್ರಾವ್ಯತೆಯೂ ಉಂಟಾಗಿವೆ. ಆ ಶೈಲಿಯಾದರೋ, ಮೇಲೆ ಹೇಳಿರುವಂತೆ, ರಸಿಕಸಹಜವಾದ ಮೃದುಮಧುರ ಹಾಸ್ಯದಿಂದ ತುಂಬಿದ ಸಂಭಾಷಣೆಯ **ರೀತಿ**ಯನ್ನು ತಾಳಿರುವ ಕಾರಣ ಆ ಗದ್ಯದ ಸೊಂಪು ಇಮ್ಮಡಿಯಾಗಿದೆ. ಹೀಗೆ ರೀತಿಯಲ್ಲಿ ಬಹುಮಟ್ಟಿಗೂ ಶೈಲಿಯಲ್ಲಿ ಸ್ವಲ್ಪಮಟ್ಟಿಗೂ ಲಕ್ಷ್ಮೀನಾರಾಯಣಕವಿಯು ಹೊಸದಾರಿಯೊಂದನ್ನು ಹಾಕಲು ಮೊದಲುಮಾಡಿರುವನು.

ಪಾಶ್ಚಾತ್ಯರ ಸಾಹಿತ್ಯಮೀಮಾಂಸೆಯಲ್ಲಿ ಕಾವ್ಯಗಳನ್ನು "ಕ್ಲ್ಯಾಸಿಕಲ್" ಅಥವಾ ಸಾಂಪ್ರದಾಯಿಕ, ಮತ್ತು "ರೊಮ್ಯಾಂಟಿಕ್" ಅಥವಾ ಸ್ವತಂತ್ರ ಎಂದು ಎರಡು ಜಾತಿಗಳಾಗಿ ವಿಂಗಡಿಸುವುದುಂಟು. ಇವುಗಳಲ್ಲಿ ಸಾಂಪ್ರದಾಯಿಕ ಕಾವ್ಯವು ಇತಿಹಾಸ ಸಮ್ಮತಗಳಾದ ಸಂದರ್ಭಗಳಿಂದಲೂ ಉದ್ದಾಮವಾದ ಧೋರಣೆಯಿಂದಲೂ ಪ್ರೌಢವಾದ ವಾಗ್ಗುಂಫನದಿಂದಲೂ ಕೂಡಿ ಲಕ್ಷಣಶಾಸ್ತ್ರಗಳಲ್ಲಿ ಹೇಳಿರತಕ್ಕ ಸಕಲಸಲ್ಲಕ್ಷಣಗಳಿಗೂ ಆದರ್ಶಪ್ರಾಯವಾಗಿರುವುದು. ಸ್ವತಂತ್ರ ರೀತಿಯ ಕಾವ್ಯವಾದರೋ, ನೂತನ ಸನ್ನಿವೇಶಗಳನ್ನು ಕಲ್ಪಿಸಿಕೊಂಡು, ಶಬ್ದಶೈಲಿಗಳಲ್ಲಿ ಹೊಸ ಹೊಸ ವೈಚಿತ್ರ್ಯಗಳನ್ನು ತೋರಿ, ವಾಚಕರಿಗೆ ಸಾಮಾನ್ಯವಾಗಿ ಬಳಕೆಯಲ್ಲಿರುವ ಮಾತು ಕಥೆಗಳನ್ನೇ ಉಪಯೋಗಿಸಿಕೊಂಡು, ಲಕ್ಷಣಶಾಸ್ತ್ರಗಳ ಕಟ್ಟುಪಾಡಿಗೆ ಅಷ್ಟಾಗಿ ಸಿಕ್ಕದೆ ಇರುವುವು. ಸಾಂಪ್ರದಾಯಿಕ ಕಾವ್ಯಗಳು ಉಪಾಧ್ಯಾಯನಂತೆಯೂ ಯಜಮಾನನಂತೆಯೂ ಗಂಭೀರವಾದ ರೀತಿಯಲ್ಲಿ ಮಾತನಾಡತಕ್ಕುವು. ಸ್ವತಂತ್ರಕಾವ್ಯಗಳು ಒಡನಾಡಿಯಂತೆ ಸಲಿಗೆಯಿಂದ ಮಾತನಾಡತಕ್ಕುವು. ಈ ಎರಡು ಜಾತಿಗಳಲ್ಲಿ ಲಕ್ಷ್ಮೀನಾರಾಯಣಕವಿಯು ಎರಡನೆಯ ಜಾತಿಗೆ ಮೂಲಪುರುಷನಾದವನೆಂದು ನಾವು ಹೇಳಬಹುದು. ಸಾಂಪ್ರದಾಯಿಕ ಕಾವ್ಯವನ್ನು ಬರೆಯಲು ಪ್ರತಿಭೆ ಪಾಂಡಿತ್ಯಗಳೆರಡೂ ಅತಿ ಮುಖ್ಯವಾದುವು; ಸ್ವತಂತ್ರ

ರೀತಿಯ ಕಾವ್ಯರಚನೆಗೆ ಹೊಸದೊಂದು ಮನೋವೃತ್ತಿಯೂ ಧೈರ್ಯವೂ ಇರಬೇಕು. ಇವು ಆತನಿಗೆ ಬಂದಿದ್ದುವು.

ಕವಿಯಾದವನ ಮುಖ್ಯ ಕಾರ್ಯವಾವುದು? (೧) ಸವಿಯಾದ ಮಾತುಗಳಿಂದ ಇಂಪಾದ ಒಂದೆರಡು ಚಿತ್ರಗಳನ್ನು ಚಿತ್ರಿಸಿ, ಅಥವಾ ಹಾಡುಗಳನ್ನು ಹಾಡಿ, ಮನಸ್ಸಿಗೆ ಆಹ್ಲಾದವನ್ನುಂಟುಮಾಡುವುದು ಮಾತ್ರವೆ? ಅಥವಾ (೨) ಹೊಸದೊಂದು ಪ್ರಪಂಚವನ್ನು ಸೃಜಿಸಿ ಅಲ್ಲಿಯ ವ್ಯಾಪಾರಗಳನ್ನು ಕಣ್ಣುಮುಂದೆ ತರುವುದರ ಮೂಲಕ ದೊಡ್ಡದೊಂದು ಜೀವನ ತತ್ತ್ವವು, ಅಥವಾ ವಿಶ್ವರಹಸ್ಯವು, ಹೊಸದಾಗಿ ಮನಸ್ಸಿಗೆ ಸ್ಫುರಿಸುವಂತೆ ಮಾಡುವುದೆ?—ಎಂಬೀವಿಚಾರದಲ್ಲಿ ಸಾಹಿತ್ಯಜ್ಞರು ಭಿನ್ನಾಭಿಪ್ರಾಯಗಳುಳ್ಳವರಾಗಿರುವರು. ಆ ಎರಡು ತೆರದ ಕಾರ್ಯಗಳಲ್ಲಿ ನಮ್ಮ ಲಕ್ಷ್ಮೀನಾರಾಯಣ ಕವಿಯು ಎರಡನೆಯದನ್ನು ಕೈಕೊಂಡವನೆಂದು ಹೇಳಲಾಗುವುದಿಲ್ಲ. ಆತನು ತಾನಾಗಿ ಒಂದು ಜಗತ್ತಂತ್ರ ಮರ್ಮವನ್ನು ಕಂಡುಹಿಡಿದು, ಅದನ್ನು ಕಾವ್ಯದ ಮೂಲಕ ಜನರಿಗೆ ಸಾಕ್ಷಾತ್ಕಾರಪಡಿಸುವೆನೆಂದು ಹೊರಟವನಲ್ಲ. ಆದರೆ ಮೊದಲನೆಯ ತೆರದ ಕೆಲಸವನ್ನು ಆತನು ಚೆನ್ನಾಗಿ ಮಾಡಿರುವನು. ಎಲ್ಲರಿಗೂ ತಿಳಿದಿರುವ ವಿಷಯವನ್ನೇ ಆದರೂ, ಹಳಸದೆ ನೀರಸವಾಗದೆ ಇರುವ ಒಂದು ಫಕ್ಕಿಯಿಂದ ಆತನು ಹೇಳಿರುವ ಕಾರಣ ಅದು ಹರ್ಷಜನಕವಾಗಿದೆ. ಇಂತಹವನು ಮಹಾಕವಿಯೆಂದೆನ್ನಿಸಿಕೊಳ್ಳದಿದ್ದರೂ ಸತ್ಕವಿಯೆನ್ನಿಸಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇರದು. ಅನೇಕ ವಿಷಯಗಳಲ್ಲಿ ಆತನು ಹಿಂದಿನ ಸತ್ಕವಿಗಳ ಪಂಕ್ತಿಗೆ ಸೇರತಕ್ಕವನಾಗಿದ್ದಾನೆ. ಒಂದೆರಡು ವಿಷಯಗಳಲ್ಲಿ ಆತನು ನವೀನ ಮಾರ್ಗಾವಲಂಬಿಯಾಗಿಯೂ ಇದ್ದಾನೆ.

ವಿಚಾರಮಾಡಿ ನೋಡಿದರೆ ಪ್ರಕೃತಕ್ಕೆ ಅತ್ಯಂತಾವಶ್ಯಕವಾದ ಜೀವನ ತತ್ತ್ವವೊಂದನ್ನೂ ಲಕ್ಷ್ಮೀನಾರಾಯಣ ಕವಿಯು ಹೊಸದಾಗಿ ಬೋಧಿಸಿರುವನೆಂದು ತೋರುವುದು. ಆ ತತ್ತ್ವವು ಮುದ್ದಣ ಮನೋರಮೆಯರ ಜೀವನ ವಿಧಾನದಿಂದ ಹೊರಪಡತಕ್ಕುದು. ಅವರು ಬಡವರು; ಆದರೂ ಅವರಿಗಿಂತ ಹೆಚ್ಚಾಗಿ ಸುಖವನ್ನನುಭವಿಸಿದ ಭಾಗ್ಯವಂತರು ಎಲ್ಲಿಯೂ ಇರಲಾರರು. ಅವರ ಆ ಸುಖವು ಸರಸತೆಯಿಂದ ಉತ್ಪನ್ನವಾದುದು; ಹಣದಿಂದ ಕೊಂಡುದಲ್ಲ. "ಧನಿಕರಾಗುವುದು ನಿಮಗೆ ಸಾಧ್ಯವೋ ಇಲ್ಲವೋ ನಾನರಿಯೆ. ಆದರೆ ಧನಿಕರಾಗಬೇಕೆಂಬ ಪ್ರಯ

ತ್ನದಲ್ಲಿ ನಿಮ್ಮ ಆತ್ಮವನ್ನು ನೀವು ಅಧೋಗತಿಗೆ ತಳ್ಳುವ ಸಂಭವವುಂಟು. ಆದರೆ ಸ್ವಲ್ಪ ಪ್ರಯಾಸದಿಂದ ರಸಿಕರಾಗುವುದು ನಿಮಗೆ ಸಾಧ್ಯ. ನೀವು ರಸಿಕರಾದರೆ ಧನಿಕರು ಕೊಂಡುಕೊಳ್ಳಬಹುದಾದ ಸುಖಶಾಂತಿಗಳಿಗಿಂತ ಮಿಗಿಲಾದ ಸುಖಶಾಂತಿಗಳನ್ನು ನೀವು ಪಡೆಯಬಹುದಲ್ಲದೆ, ನಿಮ್ಮ ಆತ್ಮವನ್ನು ಅದರಿಂದ ಉನ್ನತಿಗೆ ತಂದುಕೊಳ್ಳಲಾಗುವುದು. ಆದುದರಿಂದ ನಿಮ್ಮ ಮನೆಗಳಲ್ಲಿ ಧನಧಾನ್ಯಸಂಪತ್ತು ಹೆಚ್ಚಾಗಿಯಾದರೂ ಇರಲಿ, ಕಡಿಮೆಯಾಗಿಯಾದರೂ ಇರಲಿ; ಕಾವ್ಯಸಂಪತ್ತು ಮಾತ್ರ ಯಥೇಷ್ಟವಾಗಿರುವಂತೆ ಮಾಡಿಕೊಂಡು ಮುದ್ದಣ ಮನೋರಮೆಯರಂತೆ ಸತ್ಕಥಾವಿನೋದದಲ್ಲಿ ಬಾಳಿರಿ''—ಹೀಗೆಂಬುದೇ ಲಕ್ಷ್ಮೀನಾರಾಯಣಕವಿಯು ಕನ್ನಡಿಗರಿಗೆ ಉಪದೇಶಿಸುತ್ತಿರುವ ತತ್ತ್ವವೆಂದು ನಾವು ಭಾವಿಸಬಹುದಲ್ಲವೆ?

ಡಿ. ವಿ. ಗುಂಡಪ್ಪ.

೧೩ನೆಯ ಸೆಪ್ಟೆಂಬರ್ ೧೯೨೫.

ಮೊದಲನೆಯ ಭಾಗ

ಜೀವನ ಚರಿತ್ರೆ

A



ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್

ಆರ್. ನರಸಿಂಹಾಚಾರ್ಯರು, ಎಂ.ಎ., ಎಂ.ಆರ್.ಎ.ಎಸ್.

ಶ್ರೀಮಾನ್ ನಂದಳಿಕೆ ಲಕ್ಷ್ಮೀನಾರಣಯ್ಯ

೧೮೭೬—೧೯೦೧.

(ಪ್ರಾಕ್ತನವಿಮರ್ಶವಿಚಕ್ಷಣ ರಾವ್ ಬಹದ್ದೂರ್ ಮ|| ಆರ್. ನರಸಿಂಹಾಚಾರ್, ಎಂ.ಎ., ಎಂ.ಆರ್. ಎ.ಎಸ್. ಇವರಿಂದ).

ಈತನು ಬ್ರಾಹ್ಮಣನು. ಇವನ ಪೂರ್ವಿಕರು ಪಾತಾಳಿಗಳು, ಎಂದರೆ ದೇವಸ್ಥಾನದಲ್ಲಿ ಕಟ್ಟಿಗೆಕೋಲು ಹಿಡಿವ ಕೆಲಸವುಳ್ಳ ಶಿವಬ್ರಾಹ್ಮಣರು. ಈತನು ಉಡುಪಿ ತಾಲ್ಲೂಕು ನಂದಳಿಕೆಯಲ್ಲಿ ೧೮೭೬ ರಲ್ಲಿ (ಶುಕ್ಲ ಸಂ|| ಸೋಮವಾರ ಸ್ವಾತಿ ನಕ್ಷತ್ರ) ಹುಟ್ಟಿದನು. ನಂದಳಿಕೆಯೇ ಪರಂಪರೆಯಾಗಿ ಇವನ ಕುಟುಂಬದವರ ವಾಸಸ್ಥಳ. ಇವನ ತಂದೆ ಪಾತಾಳಿ ತಿಮ್ಮಯ್ಯ (ಜನನ ೧೮೩೯.) ತಾಯಿ ಮಹಾಲಕ್ಷ್ಮಿ (ಜನನ ೧೮೫೪.) ಚಿಕ್ಕಪ್ಪಂದಿರು ರಾಮಪ್ಪ, ಲಿಂಗಣ್ಣಯ್ಯ; ಸೋದರತ್ತೆ ಇಂದಮ್ಮ; ಸಹೋದರರು (ತಮ್ಮಂದಿರು) ಶಿವರಾಮಯ್ಯ, ರಾಮಕೃಷ್ಣ; ಹೆಂಡತಿ ಕಮಲಾಬಾಯಿ. ತಂದೆಗೆ ೩೦ ವರ್ಷ ತಾಯಿಗೆ ೧೫ ವರ್ಷ ವಯಸ್ಸಾಗಿದ್ದಾಗ ಈತನು ಜನ್ಮಿಸಿದನು. ಬಾಲ್ಯದಲ್ಲಿ ಈತನನ್ನು ತಂದೆ ತಾಯಿಗಳು ಮುದ್ದಣ್ಣ ಎಂದು ಕರೆಯುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ಈತನು ನಂದಳಿಕೆಯಲ್ಲಿ ಮುರೂರು ಚರಡಪ್ಪಯ್ಯನವರು ಸ್ಥಾಪಿಸಿದ್ದ ಪಾಠಶಾಲೆಯಲ್ಲಿ ನಂದಳಿಕೆ ದೇವರಾಯ, ಸಿದ್ದುಸೆಟ್ಟಿ, ಬಾಬು, ಕೆ. ರಾಮಚಂದ್ರಯ್ಯ, ತೇಜಪ್ಪಸೆಟ್ಟಿ, ಕುಪ್ಪಣ್ಣಭಟ್ಟ ಮೊದಲಾದ ಸಹಪಾಠಿಗಳೊಡನೆ ವ್ಯಾಸಂಗಮಾಡುತ್ತಿದ್ದನು. ಅನಂತರ ಟ್ರೈನಿಂಗ್ ಸ್ಕೂಲಿಗೆ ಸೇರಿ ತನ್ನ ೧೮ನೆಯ ವಯಸ್ಸಿನಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾಗಲು ಆ ಸ್ಕೂಲ್ ಹೆಡ್ಮಾಸ್ಟರು ಕಸರತ್ತನ್ನು (Gymnastics) ಕಲಿಸುವುದಕ್ಕಾಗಿ ಮದರಾಸಿಗೆ ಕಳುಹಿಸಿಕೊಟ್ಟರು. ಕಸರತ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ೧೦ ರೂಪಾಯಿ ಸಂಬಳಕ್ಕೆ ಕಸರತ್ತನ್ನು ಕಲಿಸುವ ಉಪಾಧ್ಯಾಯನಾಗಿ ಉಡುಪಿಗೆ ಹೋದನು.

ಉಡುಪಿಯಲ್ಲಿದ್ದಾಗ ಅಲ್ಲಿಯೇ ಉಪಾಧ್ಯಾಯರಾಗಿದ್ದ ಅನೇಕ ಗ್ರಂಥಕರ್ತರಾದ ಮಳಲಿ ಸುಬ್ಬರಾಯರ ಪರಿಚಯವುಂಟಾಯಿತು. ಇವರ ಸಹವಾಸದಿಂದ ಈತನಿಗೆ ಕಾವ್ಯಪರಿಚಯವೂ ಕವಿತೆಯಲ್ಲಿ ರುಚಿಯೂ ಉಂಟಾದುವು. ಅವರಂತೆಯೇ ತಾನೂ ಅವರ ಸಹಾಯದಿಂದ ಗ್ರಂಥ ರಚನೆ ಮಾಡಬೇಕೆಂಬ ಕುತೂಹಲವು ಹುಟ್ಟಿತು. ಈತನು ಮೊತ್ತಮೊದಲು ೧೮೯೧ರಲ್ಲಿ ತನ್ನ ೨೩ನೆಯ ವಯಸ್ಸಿನಲ್ಲಿ "**ಕುಮಾರವಿಜಯ**"ವೆಂಬ ಯಕ್ಷಗಾನವನ್ನು ಬರೆದು ತನ್ನ ಗುರುವೆನಿಸಿದ ಮಳಲಿ ಸುಬ್ಬರಾಯರಿಗೆ ಅರ್ಪಿತಮಾಡಿದನು. ಈ ಗ್ರಂಥವು ಅಚ್ಚಾಗಿದೆ. ಬಳಿಕ "**ರತ್ನಾವತೀ ಕಲ್ಯಾಣ**"ವೆಂಬ ಮತ್ತೊಂದು ಯಕ್ಷಗಾನವನ್ನು ಬರೆದು ಅದನ್ನು ನಂದಳಿಕೆಯಲ್ಲಿ ಪಾಠಶಾಲೆಯನ್ನು ಸ್ಥಾಪಿಸಿದ ಮುರೂರು ಚರಡಪ್ಪಯ್ಯನವರಿಗೆ ಅರ್ಪಿಸಿದನು. ಇದೂ ಅಚ್ಚಾಗಿದೆ. ೧೮೯೧ರಲ್ಲಿ ಮಳಲಿ ಸುಬ್ಬರಾಯರಿಗೆ ಕುಂದಾಪುರಕ್ಕೆ ವರ್ಗವಾಯಿತು. ಆದರೂ ಇಬ್ಬರಿಗೂ ಕಾಗದಪತ್ರಗಳು ನಡೆಯುತ್ತಲೇ ಇದ್ದುವು. ೧೮೯೩ರಲ್ಲಿ ಲಕ್ಷ್ಮೀನಾರಣಯ್ಯನಿಗೂ ಕುಂದಾಪುರಕ್ಕೆ ೧೫ ರೂಪಾಯಿ ಸಂಬಳಕ್ಕೆ ವರ್ಗವಾದುದರಿಂದ ಗುರುಶಿಷ್ಯರು ಇಬ್ಬರೂ ಪುನಃ ಸೇರಲು ಅವಕಾಶವಾಯಿತು. ಈ ವರ್ಷ(೧೮೯೩)ದಲ್ಲಿಯೇ ೨೫ ವರ್ಷ ವಯಸ್ಸಿನಲ್ಲಿ ಲಕ್ಷ್ಮೀನಾರಣಪ್ಪನಿಗೆ ಮದುವೆಯಾಯಿತು. ಈತನ ಹೆಂಡತಿ ಕಮಲಾಬಾಯಿ ಎಂಬಾಕೆಯು ಮೈಸೂರು ಸೀಮೆಯವಳು—ಶಿವಮೊಗ್ಗ ಡಿಸ್ಟ್ರಿಕ್ಟ್ ಕೂಡ್ಲಕೆರೆ ಮಾಗಣಿ ಕಾಗೆಕೋಡಮಗ್ಗಿ ಗ್ರಾಮದ ನಾರಣಪ್ಪಯ್ಯನ ಮಗಳು.

ಈತನು ೧೮೯೩ರಲ್ಲಿ "**ಅದ್ಭುತರಾಮಾಯಣ**"ವನ್ನು ಬರೆಯಲಾರಂಭಿಸಿ ೧೮೯೪ರಲ್ಲಿ ಮುಗಿಸಿದಂತೆ ತಿಳಿಯುತ್ತದೆ. ಇವನ ಹಸ್ತಾಕ್ಷರದ ಈ ಗ್ರಂಥದ ಪ್ರತಿಯಿಂದ ಗ್ರಂಥವು ಏತತ್ಕೃತವೆಂದೂ ೧೮೯೪ರಲ್ಲಿ ಮುಗಿದುದೆಂದೂ ಸ್ಪಷ್ಟವಾಗುತ್ತದೆ. ಸುಮಾರು ಇದೇ

N Lakshminarayana
High School.
Kundapur

ಅದ್ಭುತರಾಮಾಯಣಮೆಂಬ

ನುಡಿಗಬ್ಬಂ


ನಂದಳಿಕೆ ಲಕ್ಷ್ಮೀನಾರಾಯಣನಿಂ ರಚಿಸಲ್ಪಟ್ಟುದು.

೧೮೯೪.

N. Lakshminarayana
Gymnastic Instructor
High School
Kundapur

ಮ|| ಎಚ್. ಚೆನ್ನಕೇಶವಯ್ಯಂಗಾರ್ಯರು ದಯೆಯಿಟ್ಟು ಕೊಟ್ಟಿದ್ದ

ಅದ್ಭುತರಾಮಾಯಣದ ಮೂಲಪ್ರತಿಯ ಮುಖಪತ್ರ.


ಅದ್ಭುತರಾಮಾಯಣಂ.

ಮೊದಲನೆಯ ಆಶ್ವಾಸಂ.

ಮ|| ಎಚ್. ಚೆನ್ನಕೇಶವಯ್ಯಂಗಾರ್ಯರು ದಯೆಯಿಟ್ಟು ಕೊಟ್ಟಿದ್ದ ಅದ್ಭುತರಾಮಾಯಣದ ಮೂಲಪ್ರತಿಯ ಪ್ರಥಮಪುಟ.

ಸಮಯದಲ್ಲಿ " **ಶ್ರೀರಾಮಪಟ್ಟಾಭಿಷೇಕ** "ದ ಕೆಲವುಭಾಗಗಳನ್ನು ಬರೆದು ಅದ್ಭುತರಾಮಾಯಣವು ಪೂರೈಸಿದಮೇಲೆ ಆ ಗ್ರಂಥವನ್ನೂ ಸುಮಾರು ೧೮೯೫ ರಲ್ಲಿ ಮುಗಿಸಿದಂತೆ ತೋರುತ್ತದೆ. ಇದನ್ನು ತನ್ನ ತಾಯಿಯಾದ ಮಹಾಲಕ್ಷ್ಮಿಯ ಹೆಸರಿನಲ್ಲಿ ಬರೆದನು. ಅನಂತರ ಮಳಲಿ ಸುಬ್ಬರಾಯರಲ್ಲಿ ಸಂಸ್ಕೃತ **ರಾಮಾಶ್ವಮೇಧ**ವನ್ನು ಓದಿ ಅದನ್ನು ಕನ್ನಡ ಗದ್ಯರೂಪವಾಗಿ ಬರೆದು ೧೮೯೭ ನೆಯ ಅಕ್ಟೋಬರ್ ೯ ಕ್ಕೆ ಪೂರೈಸಿದಂತೆ ಆತನ ಸ್ವಹಸ್ತಾಕ್ಷರದ ಕರಡುಪ್ರತಿಯಿಂದ ತಿಳಿಯುತ್ತದೆ. ಇದನ್ನು ತನ್ನ ಬಾಲ್ಯದ ಮುದ್ದಣ್ಣನೆಂಬ ಹೆಸರಿನಲ್ಲಿ ಬರೆದನು. ಸುಮಾರು ಇದೇ ಕಾಲದಲ್ಲಿ " **ಕುಶವಿಜಯ** " ಎಂಬ ಗ್ರಂಥವನ್ನು ಬರೆಯಬೇಕೆಂಬ ಉದ್ದೇಶವುಂಟಾಯಿತು. ಆದರೆ ೧೮೯೬ ನೆಯ ಕೊನೆಯಭಾಗದಲ್ಲಿ ಕನ್ನಡಪಂಡಿತನಾಗಿ ಉಡುಪಿ ಮಿಷನ್‌ಸ್ಕೂಲಿಗೆ ಹೋದುದರಿಂದ ಮಳಲಿಸುಬ್ಬರಾಯರಲ್ಲಿ ಮೂಲಸಂಸ್ಕೃತಗ್ರಂಥವನ್ನು ಓದಲು ಅವಕಾಶವಿಲ್ಲದೆ ಹೋಗಿ ಆ ಉದ್ದೇಶವು ನೆರವೇರಲಿಲ್ಲ. ಮೇಲೆ ಹೇಳಿದ ಗ್ರಂಥಗಳಲ್ಲದೆ ಇನ್ನೂ ಕೆಲವು ಗ್ರಂಥಗಳನ್ನು ಈತನು ಬರೆದಂತೆ ತಿಳಿಯುತ್ತದೆ. " **ಭಗವದ್ಗೀತೆ** "ಯನ್ನು ಭಾಮಿನೀಷಟ್ಪದಿಯಲ್ಲಿಯೂ " **ಕರ್ಣಾಟಕ ರಾಮಾಯಣ** "ವನ್ನು ವಾರ್ಧಕಷಟ್ಪದಿಯಲ್ಲಿಯೂ ಈತನು ಬರೆದನೆಂದು ಈತನ ಕೈಬರಹದ ಪ್ರತಿಯನ್ನು ನೋಡಿದ್ದ ಉಡುಪಿಯ ವಕೀಲರಾದ ಅಂಗಾರಸೆಟ್ಟರು ಹೇಳುತ್ತಿದ್ದರು. ಆದರೆ ಈ ಪ್ರತಿ ದೊರೆತಿಲ್ಲ. " **ಕಾಮಶಾಸ್ತ್ರ** "ವೆಂಬ ಮತ್ತೊಂದು ಗ್ರಂಥವನ್ನು ಈತನು ಬರೆದುದಾಗಿ ತಿಳಿಯುತ್ತದೆ. ಇದರ ಕೈಬರಹದ ಪ್ರತಿ ಕನರ ಹೈಸ್ಕೂಲ್ ಹೆಡ್ಮಾಸ್ಟರ್ ಪದ್ಮನಾಭಬಾಳಿಗರ ವಶದಲ್ಲಿದೆ ಎಂದು ಲಕ್ಷ್ಮೀನಾರಣಯ್ಯನ ತಮ್ಮ ಶಿವರಾಮಯ್ಯನು ಹೇಳುತ್ತಿದ್ದನು. ಈ ಶಿವರಾಮಯ್ಯನು ಹೆಬ್ರಿ ಬ್ರಾಂಚ್ ಪೋಸ್ಟ್‌ಮಾಸ್ಟರಾಗಿದ್ದನು. ಲಕ್ಷ್ಮೀನಾರಣಯ್ಯನಿಗೆ ಮೂವತ್ತು ವರ್ಷದ ವಯಸ್ಸಿನಲ್ಲಿ (೧೮೯೮ ರಲ್ಲಿ) ಒಬ್ಬ ಮಗನು ಹುಟ್ಟಿ

ದನು. ಈ ಮಗನ ಹೆಸರು ರಾಧಾಕೃಷ್ಣ. ಮತ್ತೊಂದು ಹೆಸರು ಬಾಬು ರಾವ್. ಲಕ್ಷ್ಮೀನಾರಣಯ್ಯನು ೧೯೦೧ನೆಯ ಫೆಬ್ರವರಿ ೧೫ (ಶಾರ್ವರಿ ಸಂ|| ದ ಮಾಘಬಹುಳ ಏಕಾದಶಿ ಶುಕ್ರವಾರ) ಉಡುಪಿಯಲ್ಲಿ ಅಕಾಲ ಮೃತ್ಯುವಿಗೆ ತುತ್ತಾಗಿ ೩೩ನೆಯ ವಯಸ್ಸಿನಲ್ಲಿಯೇ ಕೈಲಾಸವಾಸಿ ಯಾದನು.

ಈತನು "ಶ್ರೀರಾಮಪಟ್ಟಾಭಿಷೇಕ", "ರಾಮಾಶ್ವಮೇಧ", "ಅದ್ಭುತರಾಮಾಯಣ" ಎಂಬ ತನ್ನ ಗ್ರಂಥಗಳನ್ನು ತನ್ನದು ಎಂದರೆ ಅಚ್ಚುಹಾಕಲಾರರು ಎಂಬ ಶಂಕೆಯಿಂದ ಪೂರ್ವಗ್ರಂಥಗಳು ಎಂದು ಹೇಳಿ ಕಾವ್ಯಮಂಜರೀ ಸಂಪಾದಕರಿಗೆ ಕಳುಹಿಸಿ ಅವು ಮುದ್ರಿತವಾದ ಸಂಗತಿ ಪ್ರಾಯಿಕವಾಗಿ ಎಲ್ಲರಿಗೂ ತಿಳಿದೇ ಇರಬಹುದು. ಅನೇಕ ಜನ ರಿಗೆ ಇವು ಪೂರ್ವಗ್ರಂಥಗಳೆಂಬ ಭ್ರಾಂತಿ ಈಗಲೂ ಇದೆ. (ಶ್ರೀರಾಮ ಪಟ್ಟಾಭಿಷೇಕದ ಹೊಸಮುದ್ರಣದ ಪೀಠಿಕೆಯನ್ನು ನೋಡಿ.)

ಹಿಂದೆ ತಿಳಿಸಿದಂತೆ ಇವನ ಸ್ವಹಸ್ತಾಕ್ಷರದ ಅದ್ಭುತರಾಮಾಯಣ ಪ್ರತಿಯಲ್ಲಿ ಗ್ರಂಥವು ತನ್ನಿಂದ ರಚಿತವಾಯಿತೆಂದು ಕಂಠೋಕ್ತವಾಗಿ ಹೇಳಿರುವುದಲ್ಲದೆ ಅಲ್ಲಲ್ಲಿ ಸ್ವಹಸ್ತಾಕ್ಷರದಲ್ಲಿ ತಿದ್ದಿಯೂ ಇದ್ದಾನೆ. 'ಜನ್ನ' ಎಂದು ಬರೆದಿದ್ದುದನ್ನು 'ಗರವಟ' ಎಂದೂ 'ಭಕ್ತಿ' ಎಂಬು ದನ್ನು 'ಶ್ರದ್ಧೆ' ಎಂದೂ ಹೀಗೆಯೇ ಹಲವುಕಡೆ ತಿದ್ದಿದ್ದಾನೆ. ರಾಮಾಶ್ವ ಮೇಧದ ಕೈಬರಹದ ಪ್ರತಿಯಲ್ಲಿ ೧೨ನೆಯ ಆಶ್ವಾಸದ ಕೊನೆಯ ಭಾಗ ದಲ್ಲಿ "ಶತ್ರುಘ್ನನಂ ಕಾಣ್ಬೊಂದು ಕಾತರದಿಂ" ಎಂದು ಬರೆದಿದ್ದು ದನ್ನು ಪುನರ್ವಿಮರ್ಶೆ ಮಾಡಿ "ಇಲ್ಲಿ **ತವಕ** ಎಂದು ಆಗಬೇಡವೇ? **ಕಾತರ**ವೆಂಬುದು ಕಾಮರಸದಲ್ಲಿ ಮಾತ್ರ ಪ್ರಯೋಗವಲ್ಲವೆ?" ಎಂಬ ಟಿಪ್ಪಣಿಯನ್ನು ಸ್ವಹಸ್ತದಲ್ಲಿ ಬರೆದು ತಿದ್ದಿದ್ದಾನೆ. ಶ್ರೀರಾಮಪಟ್ಟಾಭಿಷೇ ಕದಲ್ಲಿ ಸೂಕ್ಷ್ಮವಾಗಿ ತನ್ನ ಕರ್ತೃತ್ವವನ್ನು ಸೂಚಿಸಿರುವಂತೆ ತಿಳಿಯ ಬಹುದಾಗಿದೆ:—ಪೀಠಿಕಾಸಂಧಿ ೮, "ಕನ್ನಡಿತಿಯೊರೆದ ನುಡಿಯೆಂದಿದಂ

ಭಾವಿಸದೆ | ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದು·····'' ಅಲ್ಲಲ್ಲಿ ''ಲಕ್ಷ್ಮೀಮನೋಹರ'' ಎಂಬ ಅಂಕಿತವು ಉಪಯೋಗಿಸಿದೆ. ಇದು ''ಲಕ್ಷ್ಮೀನಾರಾಯಣ'' ಎಂದು ಸ್ಪಷ್ಟವಾಗಿ ಹೇಳದೆ ಪ್ರಕಾರಾಂತರದಿಂದ ಸ್ವನಾಮನಿರ್ದೇಶ ಎಂದು ತೋರುತ್ತದೆ.*

---

* ಕೆಲವು ವರ್ಷಗಳ ಹಿಂದೆ ಮ|| ರಾ|| ಕೆ. ಸುಂದರರಾಯರು ಗ್ರಂಥಕರ್ತರ ತಮ್ಮಂದಿರಾದ ಮ|| ರಾ|| ಶಿವರಾಮಯ್ಯನವರಿಂದ ಸಂಗ್ರಹಿಸಿ ಬರೆದ ಟಿಪ್ಪಣಿಗಳೇ ಈ ಲೇಖನಕ್ಕೆ ಮುಖ್ಯ ಆಧಾರವಾಗಿವೆ. ಗ್ರಂಥಕರ್ತರ ಟಿಪ್ಪಣಿಗಳನ್ನೂ ಅದ್ಭುತರಾಮಾಯಣದ ಕೈಬರಹದ ಪ್ರತಿಯನ್ನೂ ತೋರಿಸಿದುದಕ್ಕಾಗಿ ಮ|| ರಾ|| ಚೆನ್ನಕೇಶವಯ್ಯಂಗಾರ್, ಬಿ.ಎ. ಇವರಿಗೆ ಕೃತಜ್ಞನಾಗಿದ್ದೇನೆ.

ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು.

(ಮ|| ಪಿ. ಮಂಗೇಶರಾವ್, ಬಿ.ಎ., ಎಲ್.ಟಿ. ಯವರಿಂದ.)

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೮೯೨ನೆಯ ಇಸವಿಯ ತನಕ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಹೆಸರು ಮೇಲಕ್ಕೆ ಬಂದಿರಲಿಲ್ಲ. ಅಂದಿನವರ ಅಭಿಪ್ರಾಯದಲ್ಲಿ ಕನ್ನಡ ವಾಙ್ಮಯವು ಸೋಮೇಶ್ವರಶತಕ, ಕನ್ನಡಭಾರತ, ತೊರವೆಯ ರಾಮಾಯಣ, ಜೈಮಿನಿ ಭಾರತ, ಚನ್ನಬಸವ ಪುರಾಣ ಎಂಬೀ ಪಂಚಕಾವ್ಯಗಳಲ್ಲಿ ಕೊನೆಗಂಡು ಸಾಮಾನ್ಯರ ಕೈಗೆ ಸಿಲುಕದ "ಗೂಢಾದ್ಗೂಢರಹಸ್ಯ" ಎಂಬದಾಗಿ ಭಾವಿಸಲ್ಪಟ್ಟಿತ್ತು. ಬಿ. ಎ. ವರೆಗೆ ಕನ್ನಡ ಓದಿದ ಕೆಲವರ ಹೊರತು ಉಳಿದವರು ಪಂಪ ರಾಮಾಯಣ ಎಂದರೆ, ಪಂಪಾಕ್ಷೇತ್ರದ ರಾಮಕಥೆಯಾಗಿರಬೇಕೆಂದು ಊಹಿಸುತ್ತಿದ್ದರು. ನಮ್ಮ ಜಿಲ್ಲೆಯೊಳಗಣ ಕನ್ನಡ ಪಾಂಡಿತ್ಯವು ಗೆರೆ ಸೊಪ್ಪೆ ಶಾಂತಯ್ಯ, ಪಾರ್ತಿ ಸುಬ್ಬಯ್ಯ ಎಂಬವರ ಯಕ್ಷಗಾನ ಪ್ರಸಂಗ ಗಳ ಅರ್ಥಾನುವಾದಗಳಲ್ಲಿಯೂ ವಿಸ್ತರ ವಿವರಣೆಗಳಲ್ಲಿಯೂ ವಿಜೃಂಭಿ ಸುತ್ತಿತ್ತು. ಕವಿತಾಪ್ರೌಢಿಮೆಯು "ಮಧುರರಸಝರಿಯ" ತರಂಗ ದಲ್ಲಿ ತೇಲಾಡದೆ ಪ್ರಾಸವೈಚಿತ್ರ್ಯದ ರಾಟೆಯಲ್ಲಿ ತಲೆತಿರುಗುವಂತೆ ಉರುಳುತ್ತಿತ್ತು. ಮೈಸೂರಿನ ಬಿ. ವೆಂಕಟಾಚಾರ್ಯರ ಒಂದೆರಡು ಕಾದಂ ಬರಿಗಳು ಉಡುಪಿಯಲ್ಲಿ ನುಸುಳಿಕೊಂಡಿದ್ದರೂ, ಅವು "ಅತಿ ಭಕ್ತಿಯಿಂ ಬಿಡದೋದಿ ಕೇಳ್ವ ಸಜ್ಜನರಿಗಿಷ್ಟಾರ್ಥಮಂ ಕುಡುವ ಪುಣ್ಯಕಥೆಗಳಂತೆ" ಜನಪ್ರೀತವಾಗಿರಲಿಲ್ಲ. ಕರ್ನಾಟಕ ರಾಗರಾಗಿಣಿಗಳ "ಅವಸ್ಥೆಯಂ ಪೇಳ್ವುದೇಂ?" "ಭಿನ್ನಸಂಧಿಯಿಂ ಪಾಡಲೆಮ್ಮತು ಅಂಗಮಿಂತು ಭಿನ್ನ ಭಿನ್ನಮಾದುದು." ಹೀಗಾದುದರಿಂದ ನಮ್ಮ ಜಿಲ್ಲೆಯೊಳಗಿನ ನಾಟ್ಯ ರಂಗವು ಬಸವಪ್ಪಶಾಸ್ತ್ರಿಕೃತ ಕನ್ನಡ ಶಾಕುಂತಳನಾಟಕಕ್ಕೆ ಎಡೆ ಗೊಡದೆ, ಅಣ್ಣಾಜಿ ಕಿರ್ಲೋಸ್ಕರರ ಮರಾಟಿ ನಾಟಕಗಳಿಂದ ಆಕ್ರಮಿಸ

ಲ್ಪಟ್ಟಿತ್ತು. ಕನ್ನಡದ ಮೇಲಿನ ಮಮತೆಯಿಂದ ಮರಾಟಿ ನಾಟಕಗಳನ್ನು
ಪರಿವರ್ತಿಸಿ ಕರ್ನಾಟಕಭಾಷಾಸೇವೆಯನ್ನು ಕೈಲಾದಷ್ಟು ಮಾಡುತ್ತಿದ್ದ
ಶ್ರೀಯುತ ಕುಬೇರ ಪಾಂಡುರಂಗರಾಯರ ಉದ್ಯಮದ ಬೆಳಕೊಂದು
ಶ್ರೀಯುತ ಮಳಲಿ ಸುಬ್ಬರಾಯರ ಸಂಗೀತ ಕೃಷ್ಣಜನ್ಮಾದಿ ಮರಾಟಿ
ನಾಟಕಗಳ ಸುಂಟುರುಗಾಳಿಯಲ್ಲಿ ಘುರುಘುರಿಸುತ್ತಿತ್ತು. ಕನ್ನಡ ವಾರ್ತಾ
ಪತ್ರಗಳಲ್ಲಿ "ಸುದರ್ಶನ" ವೆಂಬ ಹೆಸರುಳ್ಳ ಉಡುಪಿಯ ಒಂದು ಮಾಸ
ಪತ್ರಿಕೆಯು ಮೂರು ತಿಂಗಳುಗಳಿಗೆ ಒಂದು ಸಲ ಅರೆಜೀವದಿಂದ
ಹೊರಡುತ್ತಿತ್ತು.

ನಮ್ಮ ಜಿಲ್ಲೆಯಲ್ಲಿ ಕನ್ನಡದ ಪರಿಸ್ಥಿತಿಯು ಹೀಗಿರಲು, ೧೮೯೩
ನೆಯ ಇಸವಿಯಲ್ಲಿ ನಾನು ಬಂಟವಾಳದಲ್ಲಿದ್ದಾಗ ನನ್ನ ಸ್ನೇಹಿತನ ಕೈಯ
ಲ್ಲಿದ್ದ ಒಂದು ಪುಸ್ತಕವು ನನ್ನ ಕಣ್ಣಿಗೆ ಬಿತ್ತು. ನಾನು ಅದನ್ನು ಕೈಯಲ್ಲಿ
ಹಿಡಿದು ನೋಡಿದೆನು. ಅದು ಅಚ್ಚಾದದ್ದು—ಸುದರ್ಶನ ಮಾಸಪತ್ರಿ
ಕೆಯು ಹೊರಡುವ ಪ್ರಭಾಕರ ಮುದ್ರಾಯಂತ್ರದಲ್ಲಿ. ಅದರ ಮುದ್ರಣ
ಕಾರ್ಯವು ಆ ಕಾಲಕ್ಕೆ ಪರಿಷ್ಕಾರವಾಗಿಯೇ ಇತ್ತು. ಪುಸ್ತಕದ ಹೆಸರು-
ಕುಮಾರವಿಜಯ ಪ್ರಸಂಗ; ರಚಿತವಾದದ್ದು—ನಂದಳಿಕೆ ಲಕ್ಷ್ಮೀನಾರಾ
ಯಣಪ್ಪನವರಿಂದ. ನಾನು ಪುಸ್ತಕವನ್ನು ತೆರೆದು ನೋಡಲು,

" ಅಳಿಯಲರಂ ಗಿಳಿ ಪಣ್ಣಂ
" ತಳಿರಂ ಪಿಕನೊಲ್ವ ತೆರದಿ ಕುಜದೊಳ್ ಕೃತಿಯೊಳ್ |
" ವಿಳಸಿತ......"

ಎಂಬೀಪದ್ಯವಿತ್ತು. ಪುಸ್ತಕದ ಪ್ರಥಮ ಪುಟದಲ್ಲಿ ಒಂದು ಕಂದ ಪದ್ಯ
ವನ್ನು ಹೀಗೆ ಪ್ರತ್ಯೇಕವಾಗಿ ಎತ್ತಿಟ್ಟದ್ದು ನನಗೆ ನೂತನವಾಗಿ ತೋರಿತು.
ಆದರಲ್ಲಿಯೂ ಆ ವರ್ಷದ ನನ್ನ ಪಠ್ಯಪುಸ್ತಕದಲ್ಲಿದ್ದ ಆ ಕಂದಪದ್ಯವೇ
ಈ ಮುಖಪತ್ರದಲ್ಲಿ ಎದ್ದುನಿಂತದ್ದರಿಂದ, ನಾನು ಪುಸ್ತಕದ ಮುಖಪತ್ರ
ವನ್ನು ಮತ್ತೂ ಮತ್ತೂ ಓದಿದೆನು. ಯಾವಾಗ ಷಡಕ್ಷರಿ ಮಹಾಕವಿಯ

ಶಬರಶಂಕರವಿಳಾಸದೊಳಗಿನ ಆ ಕಂದಪದ್ಯದ ಜತೆಯಲ್ಲಿ ನನ್ನ ನಾಲಗೆಯಿಂದ ಕುಮಾರವಿಜಯ ಪ್ರಸಂಗಕಾರರಾದ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ದೊಡ್ಡ ಹೆಸರು ಹೊರಹೊಮ್ಮಿತೋ ಆಗಲೇ ನಮ್ಮ ಜಿಲ್ಲೆಯಲ್ಲಿ ಇರತಕ್ಕ ಕನ್ನಡ ಕವಿಗಳ ವಿಷಯವಾಗಿ ನನ್ನಲ್ಲಿದ್ದ ಕಣ್ಣಿನ ಮಸುಕು ಕಳಚಿಹೋಯಿತು; ಕರ್ನಾಟಕವಿಜಾತವನವನ್ನು ದಾಟಿ ಷಡಕ್ಷರಿಯ ಗಿರಿದುರ್ಗವನ್ನು ಮುಟ್ಟಿದ ಪಂಡಿತಮಹನೀಯರು ನಮ್ಮ ಜಿಲ್ಲೆಯಲ್ಲಿ ಇದ್ದಾರೆಂಬ ಬೆಳಕು ತೋರಿತು; ಆದರೊಂದಿಗೆ ಕುಮಾರವಿಜಯವನ್ನು ಓದಿ ಮುಗಿಸಬೇಕೆಂಬ ಲವಲವಿಕೆಯು ಒತ್ತೊತ್ತಿ ಬಂದಿತು. ನಾನು ಆ ಪುಸ್ತಕವನ್ನು ಓದಿ ಓದಿ ಮರುಳಾದೆನು ; ಅದರೊಳಗಿನ ಹಾಡುಗಳನ್ನು ಹಾಡಿ ಹಾಡಿ ಉರುಹಾಕಿದೆನು ; ಅದರೊಳಗಿನ ನಿರರ್ಗಳವಾದ ಯಮಕಗಳನ್ನೂ ಪ್ರಾಸಗಳನ್ನೂ ಹೆಕ್ಕಿಹೆಕ್ಕಿ ತಲೆಯಲ್ಲಿ ತೂರಿಕೊಂಡೆನು ; ಕಳವೆಂದು ತಿಳಿಯದೆ ಪರಪದಾರ್ಥದ ಬಲದಿಂದ ತುಂಡುಪದಗಳನ್ನು ಕಟ್ಟಿ ಅವನ್ನು ನಾನೇ ಹಾಡಿ, ಅವಕ್ಕೆ ನಾನೇ ಹಿಗ್ಗಿಕೊಂಡೆನು. ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ಕನ್ನಡದೇವಿಯು ದೇವಸ್ಥಾನದ ಹೊರಸುತ್ತಿನಲ್ಲಿಯೇ ನಿಂತುಕೊಂಡು ಯಕ್ಷಗಾನಸೇವೆಯನ್ನು ಮಾಡುವ ಭಾಗವತರಂತೆ ಇರದೆ, ಆ ಸರಸ್ವತಿಯ ಸಾನ್ನಿಧ್ಯವನ್ನು ಸದ್ಯದಲ್ಲಿಯೇ ಸೇರತಕ್ಕ ಶುದ್ಧೋಪಾಸಕರೆಂದು ನಾನು ಭಾವಿಸುತ್ತ ಬಂದೆನು. ಕುಮಾರವಿಜಯ ಬಿಟ್ಟರೆ ಪ್ರಸಂಗವಿಲ್ಲ, ನಂದಳಿಕೆಯವರನ್ನು ಬಿಟ್ಟರೆ ಕವಿಯಿಲ್ಲ— ಹೀಗೆ ಬಹುಕಾಲದವರೆಗೆ ನನ್ನ ಅಭಿಪ್ರಾಯವಾಯಿತು. ಸಾಲದುದಕ್ಕೆ ಈ ಅಭಿಪ್ರಾಯವನ್ನೇ ನಾನು ೧೯೧೫ರಲ್ಲಿ ಮೆ|| ಸಿ. ಡಿ. ಜೆ. ಪಿಂಟೋ ಬಿ. ಎ., ಬಿ. ಎಲ್. ಎಂಬವರ ಅಧ್ಯಕ್ಷತೆಯಲ್ಲಿ ಜರಗಿದ ಒಂದು ಸಭೆಯಲ್ಲಿ ಓದಿದ ಉಪನ್ಯಾಸದಲ್ಲಿ ತಂದು ಹಾಕಿ, ನಂದಳಿಕೆಯವರ ಬೆಳೆಯ ಸಿರಿಯನ್ನು ಮೊಳೆಯಲ್ಲಿಯೇ ತೋರಿಸತಕ್ಕ ಕುಮಾರವಿಜಯ ಗ್ರಂಥವನ್ನು ಪ್ರಶಂಸಿಸಿದೆನು.

"ಕುಮಾರವಿಜಯ" ವು ಯಕ್ಷಗಾನ ಪ್ರಸಂಗವಾಗಿದ್ದರೂ ನನ್ನ ದೃಷ್ಟಿಯಲ್ಲಿ ಅದಕ್ಕೆ ಇರುವಷ್ಟು ಮಹತ್ವವು ನಂದಳಿಕೆಯವರ ಇತರ ಗ್ರಂಥಗಳಿಗೆ ಇರುವುದಿಲ್ಲ. ಅದ್ಭುತ ರಾಮಾಯಣ, ಶ್ರೀರಾಮಪಟ್ಟಾಭಿಷೇಕ, ರಾಮಾಶ್ವಮೇಧಗಳು ಏತತ್ಕವಿಕೃತವೊ ಅಲ್ಲವೊ ಎಂಬುದು ವಾದಗ್ರಸ್ತ ಸಂಗತಿಯಾಗಿದೆ. ಆದರೆ ಕುಮಾರವಿಜಯದ ಮೇಲೆ ಈ ಅನುಮಾನದ ನೆರಳೂ ಇಲ್ಲ. ಕವಿಯು ತನ್ನ ಹೆಸರನ್ನು ಮರೆಸಿಕೊಂಡು ರಚಿಸಿದ ಆ ಗ್ರಂಥಗಳು "ಶಿವನ ಜಟಾಜೂಟದಿಂ ಕೆಳಗೆ ಜಗುಳ್ದು" ಗುಪ್ತಗಾಮಿಯಾಗಿ ಹರಿಯುವ "ಗಂಗಾಸಲಿಲಬಿಂದುಗಳಂತೆ ಗುಪ್ತಚಾರಿತ್ರಗಂಧಮಂ ತಾಳ್ದಿದುವು." ಈ ಗುಪ್ತಚಾರಿತ್ರ ಗ್ರಂಥವನ್ನು ಹೊರತಂದು ಗಮಗಮಿಸುವಂತೆ ಚೆಲ್ಲುವುದಕ್ಕೆ ಕುಮಾರವಿಜಯವೇ ಅವರ ಗ್ರಂಥಗಳಲ್ಲಿ ಒತ್ತಾಸೆಮಾಡುತ್ತದೆ. ಆ ಗ್ರಂಥಾದಿಯಲ್ಲಿಯ ಶ್ರೀಕೃಷ್ಣಪರವಾದ ನಾಂದೀಶ್ಲೋಕವೂ ಆದರ ಅಂತ್ಯದಲ್ಲಿಯ ಉಡುಪಿ ಚಂದ್ರಮೌಳೀಶ್ವರ ಮಂಗಲಸ್ತೋತ್ರವೂ ಲಕ್ಷ್ಮೀನಾರಾಯಣಪ್ಪನವರು ಉಡುಪಿಯ ಸ್ಮಾರ್ತಕವಿ ಎಂಬುದಕ್ಕೆ ಸಾಕ್ಷಿಗಳಾಗಿವೆ. ಅವರು ತಮ್ಮ ಹುಟ್ಟೂರಾದ ನಂದಳಿಕೆಯನ್ನು ಬಿಟ್ಟು ಯಾವಾಗ ಉಡುಪಿಗೆ ಒಕ್ಕಲು ಹೋದರೆಂಬುದು ಅಲ್ಲಿಯ ಜನರಿಗೆ ಗೊತ್ತಿಲ್ಲ. ದಕ್ಷಿಣಕನ್ನಡದ ಇತರ ಗ್ರಾಮಗಳಂತೆ ನಂದಳಿಕೆಯು ಬಹು ಸುಂದರವಾದ ಹಳ್ಳಿಯಾಗಿದೆ; ಅಲ್ಲಲ್ಲಿ ಸಣ್ಣಪುಟ್ಟ ಏರುತಗ್ಗುಗಳು ಇವುಗಳ ನಡುವೆ ಹೊಲ ಗದ್ದೆಗಳು ಅವುಗಳ ಪಕ್ಕದಲ್ಲಿ ಮಳೆಗಾಲದಲ್ಲಿ ನೀರುತುಂಬಿ ಹರಿಯುವ ತೋಡುಗಳು, ಗದ್ದೆಗಳ ತೆವರಿಗಳಲ್ಲಿ ತಲೆತೂಗುವ ತೆಂಗುಗಳು, ತೆಂಗಿನಗರಿಯ ಮಾಡುಗಳ ಹುಲ್ಲುಚಾವಣಿಯಿಂದ ಹೊಳೆಯುವ ಗುಡಿಕಟ್ಟುಗಳು—ಇವುಗಳಿಂದ ನಂದಳಿಕೆಯು ಅತ್ಯಂತ ರಮಣೀಯವಾಗಿದೆ. ೧೯೧೫ನೆಯ ಇಸವಿಯಲ್ಲಿ ನಾನು ನಂದಳಿಕೆಗೆ ಹೋಗಿದ್ದಾಗ ಅಲ್ಲಿಯ ಗ್ರಾಮ ದೇವಸ್ಥಾನದ ಪಡುಗಡೆಯಲ್ಲಿ ಈಗ ಪಾಳುಬಿದ್ದಿರುವ ಒಂದು ಮನೆಯಲ್ಲಿ ಅವರು ಜನಿಸಿದರೆಂತಲೂ ರಾಮ

ಹೆಗ್ಗಡೆಯೆಂಬವರು ನಡೆಸುತ್ತಿದ್ದ ಹಳ್ಳಿಯ ಶಾಲೆಯಲ್ಲಿ ಅವರಿಗೆ ಓನಾಮ ವಾಯಿತೆಂತಲೂ ನನಗೆ ತಿಳಿಯಬಂದಿತು. ನಂದಳಿಕೆಯವರು ಯಾವ ಜಾತಿಯವರೆಂದು ನಾನು ಹೇಳುವ ಹಾಗಿಲ್ಲ. ಋಷಿಯ ಕುಲವನ್ನೂ ನದಿಯ ಮೂಲವನ್ನೂ ಹುಡುಕುವುದು ಸರಿಯಲ್ಲವೆನ್ನುತ್ತಾರೆ; ಋಷಿಯ ಕುಲದಂತೆ ಕವಿಯ ಜಾತಿಯನ್ನು—ಇಂದಿನ ಬ್ರಾಹ್ಮಣ ಬ್ರಾಹ್ಮಣೇತರ ಎಂಬ ತರ್ಕತಿಕ್ಕಾಟಗಳ ಕಾಲದಲ್ಲಿ—ಚರ್ಚಾಸ್ಪದವಾಗಿ ಮಾಡಲು ನನ್ನ ಮನಸ್ಸು ಒಪ್ಪುವುದಿಲ್ಲ. ನಂದಳಿಕೆಯ ಲಕ್ಷ್ಮೀನಾರಾಯಣಪ್ಪನವರು ದಕ್ಷಿಣ ಕನ್ನಡ ಜಿಲ್ಲೆಯವರು; ಮೂಗುತಿಯ ಮುತ್ತು ಎಲ್ಲಿ ಹುಟ್ಟಿದರೇನು? ಎಲ್ಲಿ ಬೆಳೆದರೇನು? ಅದು ಕನ್ನಡದ ಮೈಕಾಂತಿಯನ್ನೇ ಏರಿಸಿಬಿಟ್ಟಿತೆಂದು ಹೇಳಿದರೆ ಸಾಲದೇ?

ನಾರಾಯಣಪ್ಪನವರು ನಂದಳಿಕೆಯ ಹಳ್ಳಿಯ ಶಾಲೆಯಲ್ಲಿ ಐದಾರು ವರ್ಷಗಳವರೆಗೆ ಓದಿರಬಹುದಾದರೂ, ಅವರ ಪಾಂಡಿತ್ಯಕ್ಕೆ ಆ ವಿದ್ಯಾಭ್ಯಾಸವು ಕಾರಣವಾಗಿರಲಿಕ್ಕಿಲ್ಲ. ಹಳ್ಳಿಯ ಶಾಲೆಯು ಅವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿರಬಹುದು. ಆದರೆ ಅಂಗೈ ಅಗಲದಷ್ಟು ಇರುವ ಕೋಟಡಿಯೊಳಗೆ ಮಕ್ಕಳ ಚಟುವಟಿಕೆಯನ್ನು ಸೆರೆಹಾಕಿ, ಹೆಸರು ಹೇಳಿದರೆ ಹೇಕರಿಕೆಯಾಗುವ ತುಂಡು ಪಾಠಗಳ ಗುಟುಕುಗಳನ್ನು ಅವರ ಬಾಯಿಗೆ ಕೊಟ್ಟು, ಅವರನ್ನು ಹಾರಬಿಡದೆ ಪರಾವಲಂಬನದಿಂದ ಜೀವಿಸುವ ಹಾಗೆ ಮಾಡುವಂಥ ಹಳ್ಳಿಶಾಲೆಗಳ ಆ ಏರ್ಪಾಡು ಜನ್ಮದ ಧ್ಯೇಯವನ್ನು ಬೇರೊಂದಾಗಿ ಮಾಡಿ, ಜ್ಞಾನಾರ್ಜನೆಯನ್ನು ಸ್ಪರ್ಧೆಯಿಂದ ಕಲಂಕಿಸಿ, ನಮ್ಮ ಮನೋಭಾವನೆಗಳನ್ನು ಅಸ್ವಾಭಾವಿಕವಾದ ಕಾಲುವೆಗಳಲ್ಲಿ ಹರಿಯುವಂತೆ ಮಾಡಿ, ಜನಜೀವನದಿಂದ ಫಲವತ್ತಾಗತಕ್ಕ ವಾಙ್ಮಯಪ್ರದೇಶವನ್ನು ಪಾಳುಬೀಳುವಂತೆ ಮಾಡುವುದರಿಂದ, ಈ ಹಳ್ಳಿಯ ಶಾಲೆಯ ವಿದ್ಯಾಭ್ಯಾಸದಿಂದ ನಾರಾಯಣಪ್ಪನವರು ದೊಡ್ಡ ಕವಿಯಾದರೆಂದು ಯಾರಾದರೂ ಹೇಳಿದರೆ ನಾನು ಒಪ್ಪಲಾರೆನು. ಅವರ

ಶಿಕ್ಷಣವು ಈಗಲೂ ನಮ್ಮ ಹಳ್ಳಿಗಳಲ್ಲಿ ವಾಡಿಕೆಯಾಗಿರುವ ಹಳೆಯ 'ಕಿಂಡರ್‌ಗಾರ್ಟನ್' ಕ್ರಮವನ್ನು ಅನುಸರಿಸಿತ್ತು. ಈ ಕ್ರಮದಲ್ಲಿ ಇಡೀ ಗ್ರಾಮವೇ ಪಾಠಶಾಲೆ, ಹಳ್ಳಿಯವರೆಲ್ಲರೂ ವಿದ್ಯಾರ್ಥಿಗಳು, ಭಗವಂತನ ಸಾನ್ನಿಧ್ಯಪ್ರಾಪ್ತಿಯೇ ಧ್ಯೇಯವು. ಆ ಧ್ಯೇಯಕ್ಕೆ ಹೊಂದಿಕೊಂಡು ದೇವಸ್ಥಾನದಲ್ಲಿ ಪುರಾಣಶ್ರವಣ; ಆ ಪುರಾಣ ಪುರುಷರ ಪರವಾಗಿ ಕಟ್ಟಿದ್ದ ಯಕ್ಷಗಾನಪ್ರಸಂಗ; ಪ್ರಸಂಗದ ಹಾಡುಗಳನ್ನು ಅಭಿನಯಿಸಿ ತೋರಿಸುವ ದಶಾವತಾರದ ಬೈಲಾಟಗಳು; ಶಿವರಾತ್ರಿ ಕೃಷ್ಣಜಯಂತಿ ಇತ್ಯಾದಿಯಾದ ಹಬ್ಬ ಹುಣ್ಣಿಮೆಗಳ ನೆವದಿಂದ ಪ್ರಾಚೀನ ವೀರರ ಪೂಜೆ; ಪೂಜಿಸಲಿಕ್ಕೆ ಬೇಕಾದ ಗೌರಿ, ಗಣೇಶ, ಅನಂತ, ದುರ್ಗಾದಿ ಬಿಂಬಗಳ ನಿರ್ಮಾಣ; ದೀಪಾವಳಿ ರಥೋತ್ಸವಾದಿ ಕಾಲದಲ್ಲಿ ಕಲಶ ಕುರುಜುಗಳ ಮತ್ತು ಮಕುಟ ಮಂಟಪಗಳ ಶೃಂಗಾರರಚನೆ; ಹಳ್ಳಿಯ ಆಯನ ಆಟಗಳ ಮೂಲಕ ವ್ಯಾಯಾಮಯುಕ್ತವಾಗಿ ದೊರೆಯುವ ಸೃಷ್ಟಿ ನಿರೀಕ್ಷಣ;—ಹೀಗೆ ಸರ್ವತೋಮುಖವಾಗಿರುವ ಆರ್ಯ ವಿದ್ಯಾಭ್ಯಾಸದಲ್ಲಿ ನಾರಾಯಣಪ್ಪನವರ ಭಾವಿ ಪಾಂಡಿತ್ಯದ ಮೂಲವನ್ನು ಕಂಡುಹಿಡಿಯಬೇಕು.

ನಾರಾಯಣಪ್ಪನವರು ಇಂಗ್ಲಿಷ್ ಕಲಿಯುವುದಕ್ಕಾಗಿ ನಂದಳಿಕೆಯನ್ನು ಬಿಟ್ಟು ಉಡುಪಿಗೆ ಹೋದರೆಂಬುದಕ್ಕೂ, ಇಂಗ್ಲಿಷ್ ಶಾಲೆಯನ್ನು ಸೇರಿದ ಎರಡು ವರ್ಷಗಳಲ್ಲಿಯೇ ಹಣದ ಅಡಚಣೆಯಿಂದ ಶಾಲೆಯನ್ನು ಬಿಟ್ಟರೆಂಬುದಕ್ಕೂ ಸಾಕಾದಷ್ಟು ಆಧಾರವಿದೆ. ೧೮೮೭ರ ವರೆಗೆ ಅವರು ಉಡುಪಿಯಲ್ಲಿ ಏನು ಮಾಡುತ್ತಿದ್ದರೆಂಬುದು ಊಹಾಸ್ಪದವಾಗಿದೆ. ಬಹುಶಃ ಈ ಅವಧಿಯಲ್ಲಿ ಕೃಷ್ಣಾಪುರ ಮಠದ ಆಚಾರ್ಯರಿಂದ ಸಂಸ್ಕೃತದ ಪರಿಚಯವನ್ನೂ ಶ್ರೀಯುತ ಮಳಲಿ ಸುಬ್ಬರಾಯರಿಂದ ಇಂಗ್ಲಿಷ್ ಭಾಷಾಜ್ಞಾನವನ್ನೂ ಸಂಪಾದಿಸಿರಬಹುದು. ಆದರೆ ಅವರ ಮನಸ್ಸು ಕನ್ನಡಕ್ಕೆ ಒಲಿದಷ್ಟು ಸಂಸ್ಕೃತಕ್ಕೆ ಒಲಿಯಲಿಲ್ಲ. "ಎಂ ಭೋಜಪ್ರ

5/10

ಬಂಧಂ? ವಿಕ್ರಮವಿಜಯಂ? ಮಹಾವೀರಚರಿತಂ?'' ''ಇಸ್ಸಿ! ಇವಱೊಳೆ ನಗಲ್ಕಿಱಿಲ್ಲಂ'' ಈ ಅವಧಿಯಲ್ಲಿ ಅವರು ತುಳುಭಾಷೆಯ ಪದಗಳನ್ನು ಕಟ್ಟಿ ಅವುಗಳನ್ನು ತಮ್ಮ ಗೆಳೆಯರ ಕೂಟದಲ್ಲಿ ರಸಿಕನಂತೆ ಹಾಡುವುದನ್ನೊ ಉಡುಪಿಯ ನಾಟಕಮಂಡಳಿಯವರ ನಾಟಕಗಳಲ್ಲಿ ಒಂದೊಂದು ಸಲ ವಿದೂಷಕನ ವೇಷದಿಂದ ಸಭಿಕರನ್ನು ವಿನೋದಗೊಳಿಸುವುದನ್ನೊ, 'ತಾಳ ಮದ್ದಳೆ' ಇರುವ ರಾತ್ರಿಯಲ್ಲಿ ನೆರೆಮನೆಯನ್ನು ಸೇರಿಕೊಂಡು ಅರ್ಥ ಹೇಳುವುದನ್ನೊ, ಉಡುಪಿಯ ಪರ್ಯಾಯ ಎಂಬ ಉತ್ಸವಕಾಲದಲ್ಲಿ "ನೆಲದ ಕೆಲಬಲದಿ ಘಟ್ಟಿಸೆ ನಿಂದ ರನ್ನಗಂಬಂಗಳ ಮೇಲೆ ಬಿಗಿದಿಹ ಸಮುನ್ನತಮಹಾಮಂಡಪಗಳಂ ಚೆಲ್ವಾದ ಬೀದಿಗಳಲ್ಲಿ'' ತಿರುಗಾಡುತ್ತಿರುವುದನ್ನೊ ನಾವು ಊಹಿಸಬೇಕಾಗುತ್ತದೆ. ಸುಮಾರು ಈ ಕಾಲದಲ್ಲಿಯೇ ಅವರು ಉಡುಪಿಯ ಬೋರ್ಡ್ ಸ್ಕೂಲಿನ ಲೈಬ್ರೆರಿಯಲ್ಲಿದ್ದ 'ಶಬ್ದಮಣಿ ದರ್ಪಣ' 'ಛಂದೋಂಬುಧಿ' 'ಅನುಭವಾಮೃತ' 'ಪ್ರಾಕ್ಕಾವ್ಯ ಮಾಲಿಕೆ' ಎಂಬೀ ಪುಸ್ತಕಗಳನ್ನು ಓದಿ, ಅವನ್ನು ಕರತಲಾಮಲಕವಾಗಿ ಮಾಡಿರಬೇಕು. ಹೀಗೆ ನೆಲದಡಿಯಲ್ಲಿಯ ಸಸ್ಯಾಹಾರವನ್ನು ಸಂಗ್ರಹಿಸಿ ಬೆಳೆಯುತ್ತಲಿದ್ದ ಪಾಂಡಿತ್ಯದ ಬೀಜಾಂಕುರವು ಬಡತನದ ಕಲ್ಲೆಡೆಯಲ್ಲಿ ಸಿಕ್ಕಿಕೊಂಡು ಮೇಲಕ್ಕೆ ಏಳಲಾರದೆ ಬಿಸಿಲ ಮೋರೆಯನ್ನು ಕಾಣಲಾರದೆ ಅಲ್ಲಲ್ಲಿಯೇ ಸುಳಿದಾಡುತ್ತಿತ್ತು. ದೈವವಶಾತ್ ಹಿಂದೂ ಮುದ್ರಣಾಲಯದ ಚಾಲಕರು ಕೈಕೊಟ್ಟು ಕಲ್ಲನ್ನು ಈಚೆಗೆ ಉರುಳಿಸಿಬಿಟ್ಟರು; ನಾರಾಯಣಪ್ಪನವರ 'ರೇವತೀ ಕಲ್ಯಾಣ' 'ಕುಮಾರವಿಜಯ' ಎಂಬೀ ಎರಡು ಯಕ್ಷಗಾನ ಪ್ರಸಂಗಗಳು ಪ್ರಕಾಶಕ್ಕೆ ಬಂದುವು.


ನಂದಳಿಕೆಯವರ ಇತರ ಗ್ರಂಥಗಳಿಗಿಂತ ಕುಮಾರವಿಜಯಕ್ಕೆ ಹೆಚ್ಚಿನ ಮಹತ್ವವನ್ನು ನಾನು ಕೊಡುತ್ತೇನೆಂಬುದಾಗಿ ನಾನು ಹಿಂದೆ ಹೇಳಿರುವೆನಷ್ಟೆ. ನಂದಳಿಕೆಯವರಿಗೆ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಪರಿಚಯವನ್ನು ತಕ್ಕಷ್ಟು ಮಾಡಿಕೊಟ್ಟ ಪೂರ್ವೋಕ್ತ ಶ್ರೀಯುತ ಮಳಲಿ ಸುಬ್ಬರಾಯರನ್ನು ಕುರಿತು ಹೀಗೆಂದು ಉಲ್ಲೇಖವಿದೆ.—

“ಸರ್ಪಭೂಷನ ಭಕ್ತ ಕವಿತಾ
ದರ್ಪಣಾಬ್ಧಿಗಭೀರ ಗುರುವೆನಿ
ಸಿರ್ಪ ಮಳಲೀ ಸುಬ್ಬರಾಯರಿಗರ್ಪಿಸುವೆನು.”

ಈ ಮಳಲಿ ಸುಬ್ಬರಾಯರೇ ಉಡುಪಿಯ ಬೋರ್ಡ್ ಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದು, ಅನಂತರ ನಂದಳಿಕೆಯವರು ಕುಂದಾಪುರ ಹೈಸ್ಕೂಲಿನಲ್ಲಿ ಅಂಗಸಾಧನೆಯ ಉಪಾಧ್ಯಾಯ ಕೆಲಸದಲ್ಲಿ ಇದ್ದಾಗ ಇವರ ಜತೆಯ ಉಪಾಧ್ಯಾಯರಾದರು. ಈ ಸುಬ್ಬರಾಯರ ಅನುಮೋದನದಿಂದ ನಂದಳಿಕೆಯವರು ಸುಮಾರು ೧೮೯೮ರಲ್ಲಿ ‘ ತಾಂಡವಮುನಿಯ ಕಥೆ’ ಎಂಬ ತೊರವೆಯ ರಾಮಾಯಣದೊಳಗಿನ ಕೆಲವು ಪದ್ಯಗಳಿಗೆ ಟಿಪ್ಪಣಿಯನ್ನು ಬರೆದರೆಂದು ನಾನು ಕೇಳಿರುತ್ತೇನೆ. ನಂದಳಿಕೆಯವರು ಉಡುಪಿಯಲ್ಲಿ ಉಳಿದುಕೊಂಡನಂತರ ೧೮೯೩ರ ವರೆಗೆ ಕನ್ನಡ ಸಾಹಿತ್ಯಸಂಪಾದನೆಯಲ್ಲಿ ಎಲ್ಲಿಯತನಕ ಹೋಗಿದ್ದರೆಂಬುದನ್ನು ಶೋಧಿಸುವುದಕ್ಕೆ ಕುಮಾರವಿಜಯವು ತಕ್ಕಷ್ಟು ಬೆಳಕನ್ನು ಚೆಲ್ಲುತ್ತದೆ. ಪ್ರಸಂಗದ ಅನೇಕ ಹಾಡುಗಳ ದಾಟಿಯನ್ನು ತೋರಿಸುವುದಕ್ಕೆ ಇಟ್ಟ ಸೊಲ್ಲುಗಳು ಉಡುಪಿಯ ಮಾನಪತ್ರವಾದ ಸುದರ್ಶನದಲ್ಲಿ ಪ್ರಕಟವಾಗುತ್ತಿದ್ದ ತುಂಡುಪದಗಳ ಚರಣಗಳು, ಇಲ್ಲವೆ ನಂದಳಿಕೆಯವರೇ ಕಟ್ಟಿದ ತುಳುಹಾಡುಗಳ ಭಾಗಗಳು, ಇಲ್ಲವೆ ಉಡುಪಿಯಲ್ಲಿ ಅಂದು ಆಡಿಸಿ ತೋರಿಸುತ್ತಿದ್ದ ಮರಾಟಿ ಪದಗಳ ಪಲ್ಲವಿಗಳು, ಇಲ್ಲವೆ ಪ್ರಚಾರದಲ್ಲಿದ್ದ ಇತರ ಪ್ರಸಂಗಗಳೊಳಗಿನ ಹಾಡುಗಳು—ಇದರಿಂದ ಯಕ್ಷಗಾನ ಪ್ರಸಂಗಕ್ಕೆ ಬೇಕಾದ ಹಾಡುಗಳನ್ನು ಯಾವ ದಾಟಿಯಲ್ಲಾದರೂ ಕಟ್ಟುವುದಕ್ಕೂ ಹಾಡುವುದಕ್ಕೂ ಅವರು ತಮ್ಮ ೨೦ನೆಯ ವಯಸ್ಸಿನೊಳಗೆ ಶಕ್ತರಾಗಿದ್ದರೆಂದು ಹೇಳಬೇಕಾಗುತ್ತದೆ. ಕುಮಾರವಿಜಯದೊಳಗಿನ ಯಮಕಗಳನ್ನೂ ಶಾಂತಪ್ರಾಸಗಳನ್ನೂ ಲಕ್ಷಿಸಿದರೆ, ಲಕ್ಷ್ಮೀಶನ ಜೈಮಿನಿಭಾರತವು ಅವರಿಗೆ ಮುಖೋದ್ಗೀತವಾಗಿರಬಹುದೆಂಬ ಹಾಗೆ ತೋರುತ್ತದೆ. ಈ ಅಭಿಪ್ರಾಯವು ರಾಮ

ಪಟ್ಟಾಭಿಷೇಕವನ್ನೂ ರಾಮಾಶ್ವಮೇಧವನ್ನೂ ಓದುತ್ತಲೇ ಇನ್ನೂ ಬಲಗೊಳ್ಳುತ್ತದೆ. ಹಳೆಯ ಯಕ್ಷಗಾನ ಪ್ರಸಂಗಗಳಲ್ಲಿ ಹುಡುಕಿದರೆ ದೊರೆಯದ 'ಮಾಳ್ಕೆ' 'ಕಾಗೆ' 'ಇರಲೊಡಂ' 'ಪೊಡಮಟ್ಟು' ಮೊದಲಾದ ಹಳಗನ್ನಡ ವ್ಯಾಕರಣಮರ್ಯಾದೆಗಳೂ 'ಪೊಸದೇಸೆ' 'ಕುಂಬಿಡು' 'ಬೆಸನ' ಮೊದಲಾದ ಶಬ್ದಪ್ರಯೋಗಗಳೂ ಅವರು ಅಂದು ಮಾಡಿದ್ದ ಪ್ರಾಚೀನ ಗ್ರಂಥಪರಿಚಯವನ್ನು ಸೂಚಿಸುತ್ತವೆ. ಕುಮಾರವಿಜಯದಲ್ಲಿ ಹೇರಳವಾಗಿ ಕಂಡುಬರುವ ಇಂಥ ಹಳಗನ್ನಡ ವ್ಯಾಕರಣಪ್ರಯೋಗಗಳು ಶಬ್ದಮಣಿದರ್ಪಣ ಭಾಷಾಭೂಷಣಗಳ ಪುರಶ್ಚರಣೆಯಿಂದ ಅವರ ಬಾಯಿ ಮೀರಿ ಸಿಡಿದು ಬಿದ್ದ ಹಾಗೆ ತೋರುತ್ತವೆಯೇ ಹೊರತು ವ್ಯಾಕರಣ ಪಾಂಡಿತ್ಯದ ಗರ್ವೋದ್ರೇಕದಿಂದ ಇಟ್ಟಹಾಗೆ ಕಾಣುವುದಿಲ್ಲ. "ಪಾಲಿಸುಗೆ ಪಾರ್ವತೀಪರಮೇಶರುಂ" "ಅತ್ರಿಭೃಗು ದುರ್ವಾಸ ವಿಶ್ವಾಮಿತ್ರರೆನೆ..." ಇತ್ಯಾದಿ ಮಾತುಗಳು ಸಂಸ್ಕೃತದಲ್ಲಿ ಕಾವ್ಯದವರೆಗಾದರೂ ಹೋಗಿರಬೇಕೆಂಬ ಅನುಮಾನವನ್ನು ಹೊರಡಿಸುತ್ತವೆ. ಇದರೊಳಗಿನ ಕಂದಪದ್ಯಗಳಲ್ಲಿ ನಗಣ ಸಗಣಗಳು ಬರಬೇಕಾದಲ್ಲಿ ಬರುವುದಿಲ್ಲವೆಂಬುದು ನಿಜ. ಆದರೆ ಈ ಛಂದೋಲೋಪವು ನಮ್ಮ ಜಿಲ್ಲೆಯ ಕಂದಪದ್ಯಗಳಲ್ಲಿ ಬಹುಕಾಲದವರೆಗೆ ಸಾಮಾನ್ಯವಾಗಿತ್ತು.

ಕುಮಾರವಿಜಯದ ದೆಸೆಯಿಂದ ಲಕ್ಷ್ಮೀನಾರಣಪ್ಪನವರ ಹೆಸರು ನನ್ನ ಕಿವಿಯಲ್ಲಿ ಆಗಾಗ ಜಿನುಗುತ್ತಾ ಇದ್ದರೂ, ೧೮೯೫ರ ವರೆಗೆ ನನಗೂ ಅವರಿಗೂ ಯಾವ ತರದ ಪತ್ರವ್ಯವಹಾರವೂ ನಡೆದಿರಲಿಲ್ಲ. ಹೀಗಿರಲು ೧೮೯೫ನೆಯ ಜುಲೈ ಮಾಸದಲ್ಲಿ ಮಂಗಳೂರ ಗವರ್ನಮೆಂಟ್ ಕಾಲೇಜಿನಲ್ಲಿ ಕನ್ನಡಕ್ಕಾಗಿ ತಿಂಗಳಿಗೆ ೨೦ ರೂಪಾಯಿ ಸಂಬಳದ ಕನ್ನಡ ಪಂಡಿತನ ಕೆಲಸಕ್ಕೆ ಒಂದು ಏರ್ಪಾಡಾಯಿತು. ಯಾರಿಗೂ ಬೇಡವಾದ ಈ ಉದ್ಯೋಗಕ್ಕೆ ನಾವಿಬ್ಬರೇ ಅರ್ಜಿದಾರರಾಗಿದ್ದೆವು. ಕನ್ನಡ ಅರಿಯದ ಇಂಗ್ಲಿಷ್ ಹೆಡ್‌ಮಾಸ್ತರನೊಬ್ಬನು ಕನ್ನಡ ಬಲ್ಲ ನಾರಾಯಣಪ್ಪ



ಮ॥ ಮಳಲಿ ಸುಬ್ಬರಾಯರು.

ನವರನ್ನು ಬಿಟ್ಟು, ಇಂಗ್ಲಿಷ್ ಬರುತ್ತದೆಂಬ ಕಾರಣದ ಮೇಲೆ ಆ ಜಾಗವನ್ನು ನನಗೆ ಕೊಟ್ಟರು. ಇದರ ಮರ್ಮವನ್ನು ತಿಳಿಯದ ನಾರಾಯಣಪ್ಪನವರು ನಾನೇನೋ ಕನ್ನಡ ವಾಚಸ್ಪತಿಯಾಗಿರಬಹುದೆಂದು ನೆನಸಿ, ನನ್ನನ್ನು ಅಭಿನಂದಿಸಿ ಒಂದು ಪತ್ರವನ್ನು ಬರೆದರು. ನಾನು ಪ್ರತ್ಯುತ್ತರವನ್ನು ಬರೆಯುವಾಗ "ಬತ್ತದ ಸಿಪ್ಪೆಯನ್ನು ಕುಟ್ಟತಕ್ಕ ಒನಕೆಯನ್ನು ಕನ್ನಡಬರಹವನ್ನು ಬರೆಸುವುದಕ್ಕೆ ತಂದರು; ಚಿತ್ರಬಿಡಿಸುವ ಬಣ್ಣದ ಗರಿಯನ್ನು ಕಿವಿಯ ತುರಿಕೆಗೆ ಕುಗ್ಗಿಕಡ್ಡಿಯನ್ನಾಗಿ ಮಾಡಿದರು" ಎಂದು ಹೇಳಿ, ನಮ್ಮಿಬ್ಬರೊಳಗಿನ ಅಂತರವನ್ನು ಸ್ಪಷ್ಟಪಡಿಸಿದೆನು.

ಸುಮಾರು ಇದೇ ಕಾಲದಲ್ಲಿ ಶ್ರೀಯುತ ಎಂ. ಎ. ರಾಮಾನುಜ ಅಯ್ಯಂಗಾರ್ಯರೂ ಕೈ. ಎಸ್. ಜಿ. ನರಸಿಂಹಾಚಾರ್ಯರೂ ಕನ್ನಡ ವಾಙ್ಮಯದ ಬೀಗಮುದ್ರೆಯನ್ನು ಒಡೆದು, ಅಮೂಲ್ಯವಾದ ಕರ್ನಾಟಕ ಕೃತಿರತ್ನಗಳನ್ನು ಕಾವ್ಯಮಂಜರಿ ಎಂಬ ಮಾಸಪತ್ರದ ಮೂಲಕವಾಗಿ ಕನ್ನಡಿಗರಿಗೆ ದಾನಮಾಡುವ ಪ್ರಚಾರಕ ಕಾರ್ಯವನ್ನು ಕೈಕೊಳ್ಳುವಂಥವರಾದರು. ಅವರು ಬೆಳಕಿಗೆ ತಂದ ಉತ್ಕೃಷ್ಟಗ್ರಂಥಗಳನ್ನು ಮದ್ರಾಸ್ ಯೂನಿವರ್ಸಿಟಿಯವರು ಪಠ್ಯಪುಸ್ತಕಗಳನ್ನಾಗಿ ನಿಯಮಿಸಿ, ಅವರ ಸತ್ಕಾರ್ಯಕ್ಕೆ ತಕ್ಕಷ್ಟು ಆಶ್ರಯ ಕೊಡುವಂಥವರಾದರು. ಎಫ್. ಎ. ಪರೀಕ್ಷೆಗೆ ೧೮೯೬ ರಲ್ಲಿ ರತ್ನಾಕರಾಧೀಶ್ವರಶತಕವೂ ಚಿಕದೇವರಾಜ ವಂಶಾವಳಿಯೂ, ೧೮೯೮ ರಲ್ಲಿ ಶ್ರೀರಾಮಪಟ್ಟಾಭಿಷೇಕವೂ ಅದ್ಭುತರಾಮಾಯಣವೂ ಪಠ್ಯಪುಸ್ತಕಗಳಾಗಿದ್ದು, ಅವನ್ನು ಕಲಿಸುವ (ಕಲಸುವ ?) ಕೆಲಸವು ನನ್ನ ಮೇಲೆ ಬಿದ್ದಿತ್ತು. ಪಟ್ಟಾಭಿಷೇಕದ ಒಂದೆರಡು ಚರಣಗಳ ಅರ್ಥಾನುವಾದವು ನನ್ನನ್ನು ಸೋಲಿಸಿಬಿಟ್ಟದ್ದರಿಂದ, ನನಗೆ ಬಗೆಹರಿಯದ ಕೆಳಗೆ ಕಾಣಿಸಿದ ಭಾಗಗಳಲ್ಲಿ ಒಂದರ ಅರ್ಥವನ್ನೂ ಮತ್ತೊಂದರಲ್ಲಿ ಬಿಟ್ಟುಹೋದ ಪದಗಳನ್ನೂ ಹೇಳಿಕೊಡಬೇಕಾಗಿ ನಾನು ನಂದಳಿಕೆಯವರಿಗೆ ಕಾಗದ ಬರೆದೆನು. ಆಗ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು

B

ಅದರ ಗ್ರಂಥಕರ್ತರೆಂದು ನನಗೆ ಕನಸಿನಲ್ಲಿ ಕೂಡ ಸಂಶಯವು ಹುಟ್ಟಿರಲಿಲ್ಲ.

೧. ತಂಬೆಲಸೋಂಕೆ ಬಳ್ಕುವ ಲತಾಂಗಮದಿಱಿಸಿ
ಲಂ ಬೇರೆ ತೆಡೆದುಂಟೆ. ೩. ೫೩

೨. ಪೊಸ ಸೊಗವ ನೀನುಂಡುದೇ
ಕೊಡೆಯ ನಿನ್ನನುಭವಕೆ...ಮೇದಿನಿಯ...ರಾಘವ
೪. ೨೯.

ಮರುಟಪ್ಪಾಲಿಗೆ ಅವರ ಉತ್ತರವು ಬಂದಿತು. "ಇಱಿಸಿಲ್" ಎಂಬ ಶಬ್ದಕ್ಕೆ ಅರ್ಥವನ್ನು ಕೊಟ್ಟು, ಅದರ ಸಮರ್ಥನಕ್ಕಾಗಿ ಶಬ್ದಮಣಿ ದರ್ಪಣದ ಪುಟಸಂಖ್ಯೆಗೆ ನನ್ನ ಲಕ್ಷ್ಯವನ್ನು ಎಳೆದಿದ್ದ ಒಂದು ಟಿಪ್ಪಣಿಯು ಪತ್ರದಲ್ಲಿ ಇತ್ತು. ಗ್ರಂಥಪಾತವೆಂದು ಮೂಲದಲ್ಲಿ ಬಿಟ್ಟುಹೋದ ಪದಗಳು ಬಹುಶಃ ಇಂಥವುಗಳಾಗಿರಬಹುದೆಂದು ಅವರು ಪತ್ರದಲ್ಲಿ ನಿರ್ದೇಶಿಸಿದ್ದರು. ಆ ಪದಗಳನ್ನು ನಾನು ಮರೆತುಬಿಟ್ಟದ್ದೂ ಪತ್ರದ ವಿಷಯದಲ್ಲಿ ಅಜಾಗರೂಕನಾದದ್ದೂ ಎಷ್ಟೋ ಶೋಚನೀಯವಾಗಿದೆ ಎಂದು ನಾನು ಹೇಳಬೇಕಾಗಿಲ್ಲ.

ನನಗೆ ಮೊದಲಿಂದಲೇ ನಂದಳಿಕೆಯವರ ಮೇಲಿದ್ದ ಗೌರವವು ದ್ವಿಗುಣಿತವಾಯಿತು. ನನಗಿದ್ದ ಗೌರವವನ್ನು ಶ್ರುತಪಡಿಸಿ, ಕುಮಾರವಿಜಯವನ್ನು ಶ್ಲಾಘಿಸಿ ನಾನು ಮತ್ತೊಂದು ಕಾಗದವನ್ನು ಬರೆದೆನು. ಅವರು ಆ ಪ್ರಶಂಸನೆಯನ್ನು ಕಿವಿಯಮೇಲೆ ಹಾಕಿಕೊಳ್ಳದೆ, ಪ್ರತ್ಯುತ್ತರದಲ್ಲಿ ಅದರ ಪ್ರಸ್ತಾವನೆಯನ್ನೇ ಬಿಟ್ಟುಬಿಟ್ಟು ನನ್ನ ಅವಗಾಹನೆಗಾಗಿ 'ಮತ್ತೊಂದು ಪುಸ್ತಕವನ್ನು ಕಳುಹಿಸಿರುತ್ತೇನೆ; ಗ್ರಂಥವು ಯೋಗ್ಯವೆಂದಿದ್ದರೆ ಅದನ್ನು ಮುದ್ರಿಸುವುದಕ್ಕೆ ಸಾಧ್ಯವಿದೆಯೇ' ಎಂಬದಾಗಿ ಬರೆದು ಆ ಪತ್ರದೊಂದಿಗೆ ೧೮೯೮ ನೆಯ ಸೆಪ್ಟೆಂಬರ್ ತಿಂಗಳಲ್ಲಿ ಒಂದು ಹಸ್ತಪ್ರತಿಯನ್ನು ನನಗೆ ಕಳುಹಿಸಿಕೊಟ್ಟರು. ಇದೇ—ರಾಮಾಶ್ವಮೇಧದ

ಅವರ ಹಸ್ತಪ್ರತಿ; ಮುಂದೆ ಕಾವ್ಯಕಲಾನಿಧಿಯಲ್ಲಿ ಪ್ರಕಟವಾದ ರಾಮಾಶ್ವಮೇಧಧ ಮಾತೃಕೆಯು ಕೂಡ ಇದೇ ಹಸ್ತಪ್ರತಿಯೆಂದು ನಾನು ನೆನಸುತ್ತೇನೆ.

ನನ್ನಲ್ಲಿಗೆ ಕಳುಹಿಸಲಾದ ಪ್ರತಿಯಲ್ಲಿ ಸುಮಾರು ೫೦೦ ಪುಟಗಳು ಇದ್ದಿರಬಹುದು; ಮುತ್ತಿನಂತೆ ದುಂಡಗಾದ ಬರಹ, ಮೋಡಿ ಇಲ್ಲ, ತಪ್ಪುತಿದ್ದುಪಾಟುಗಳು ಕಡಮೆ. ಹೀಗಾದುದರಿಂದ ಕೈಬರೆಹವಾದರೂ ಅದನ್ನು ಓದುವುದಕ್ಕೆ ನನಗೆ ತೊಡಕಾಗಲಿಲ್ಲ. ನಾನು ಓದ ತೊಡಗಿದ್ದೇ ಸರಿ, ಹಸಿವು ನಿದ್ದೆ ಬಿಟ್ಟು, ಅದನ್ನು ಆದ್ಯಂತವಾಗಿ ಎರಡು ದಿವಸಗಳೊಳಗೆ ಮುಗಿಸಿ ಪುನಃ ಓದುವುದಕ್ಕೆ ಹತ್ತಿದೆನು. ಓದಿದಷ್ಟಕ್ಕೆ ಇನ್ನೂ ಓದಬೇಕೆಂಬ ಆಸೆಯಾಗಿ, ಕಂಡಕಂಡವರನ್ನು ಕರೆದು, ಅವರ ಮುಂದೆ 'ವಾಚಕಮಾಡಿದೆನು.' ಆದರೂ ಅದನ್ನು ರಚಿಸಿದವರು ನಂದಳಿಕೆ ಲಕ್ಷ್ಮೀನಾರಣಪ್ಪನವರಾಗಿರಬಹುದೆಂಬ ಶಂಕೆಯು ನನ್ನ ಮೂಢಮನಸ್ಸಿಗೆ ಮೂರುತಿಂಗಳ ತನಕ ಹೊಳೆಯದೆ ಹೋಯಿತು. ನಾನು ಪತ್ರಸಮೇತವಾಗಿ ಆ ಹಸ್ತಪ್ರತಿಯನ್ನು ಅವರಿಗೆ ಹಿಂದಕ್ಕೆ ಕಳುಹಿಸಿದೆನು. ಪತ್ರದಲ್ಲಿ ನನ್ನ ಅಭಿಪ್ರಾಯವು ಇತ್ತು. ಮನೋರಮೆಯು ಗ್ರಂಥದ ವಿಷಯವಾಗಿ ಮುದ್ದಣ್ಣನೊಡನೆ ಯಾವ ಮಾತುಗಳನ್ನು ಆಡಿದಳೊ ಆ ಮಾತುಗಳನ್ನೇ ಇಟ್ಟು, "ಮುದ್ದಣ್ಣನ ಹೆಸರಿನಂತೆ ಮುದ್ದುಮುದ್ದಾಯಿತು, ಹಿಂದಿಲ್ಲ ಮುಂದಿಲ್ಲ" ಎಂಬದಾಗಿ ಕೊಂಡಾಡಿ, "ಗಾಜನ್ನು ಮೆಚ್ಚುವ ಕಾಲದಲ್ಲಿ ವಜ್ರವು ಬಿಕರಿಯಾಗುವುದು ದುರ್ಲಭವಾದ್ದರಿಂದ, ಅಚ್ಚುಹಾಕಿಸಿದಲ್ಲಿ 'ಕೈಟಿತ್ತಿನ ಕಾಸಲಾ ಪೋಂಡ—ಮೈಟಿತ್ತಿನ ಮೂಸಲಾ ಪೋಂಡ' ಎಂಬ ತುಳುಗಾದೆಯಂತೆ ಆಗುವ ಸಂಭವವಿದೆ" ಎಂಬಿತ್ಯಾದಿಯಾಗಿ ನನ್ನ ಅಭಿಪ್ರಾಯವನ್ನು ವೇದ್ಯವರಿಸಿದೆನು. ಇದೇ ಪತ್ರದಲ್ಲಿ ರಾಮಾಶ್ವಮೇಧದಿಂದ ಅನೇಕ ವಾಕ್ಯಗಳನ್ನು ಉದ್ಧರಿಸಿಟ್ಟು, ಅವುಗಳ ಅರ್ಥಾನ್ವಯಗಳನ್ನು ನನಗೆ ಹೇಳಿಕೊಡಬೇಕೆಂಬುದಾಗಿಯೂ ಅಪೇಕ್ಷಿಸಿದೆನು.

ಈ ಪತ್ರಕ್ಕೆ ಉತ್ತರವು ಬರಲೇ ಇಲ್ಲ. ಉತ್ಸಾಹಭಂಗದಿಂದಲೊ ಅನಾದರಣೆಯಿಂದಲೊ ಇನ್ನು ಯಾವ ಕಾರಣದಿಂದಲೊ ಅವರು ಬಹುಕಾಲದವರೆಗೆ ನನಗೆ ಪತ್ರಬರೆಯುವುದನ್ನು ನಿಲ್ಲಿಸಿಬಿಟ್ಟರು. ಕ್ರಮೇಣ ರಾಮಾಶ್ವಮೇಧವು ಕಾವ್ಯಕಲಾನಿಧಿಯಲ್ಲಿ ಪ್ರಕಟವಾಯಿತು.

ಅಚ್ಚುಹಾಕಿದ ಸಂಪೂರ್ಣ ಪುಸ್ತಕವು ನನ್ನ ಕೈಗೆ ಬೀಳುತ್ತಲೆ ನಾನು ಗ್ರಂಥಕರ್ತೃವಿನ ವಿಚಾರ ಮಾಡತೊಡಗಿದೆನು. ರಾಮಾಶ್ವಮೇಧದ ಕವಿಯು ತುಳುನಾಡಿನವನು ಎಂದು ಊಹಿಸುವುದಕ್ಕೆ ನನಕೆ ಕಷ್ಟವಿರಲಿಲ್ಲ. ಗ್ರಂಥದಲ್ಲಿ ಎಲ್ಲೆಲ್ಲಿಯೂ ಕಣ್ಣಿಗೆ ಹೊಳೆಯುವ 'ಪೂಲಿ' 'ಕುರುಂಬಿಲ್' 'ಆರಾಟ' 'ಬಸದಿ' 'ಇಂದ್ರ' ಮೊದಲಾದ ತುಳು ಶಬ್ದಗಳು ಸಾಕಷ್ಟು ಹೇರಳವಾಗಿದ್ದುವು. ಕುಮಾರವಿಜಯದಲ್ಲಿರುವ ಒಂದೆರಡು ಮಾತುಗಳೇ ಈ ಗ್ರಂಥದಲ್ಲಿ ಇದ್ದುದರಿಂದ, ನಂದಳಿಕೆಯವರೇ ರಾಮಾಶ್ವಮೇಧದ ಕವಿಯಾಗಿರಬಹುದೆಂಬ ಸಂಶಯವು ಹುಟ್ಟಿತು. ಗ್ರಂಥವನ್ನು ಅಗೆದಷ್ಟಕ್ಕೆ ಈ ಶಂಕೆಯು ಬಲವಾಗುತ್ತ ಬಂದಿತು. ಗ್ರಂಥದ ಸರಣಿ, ವಿಸ್ತರಣಕ್ರಮ, ಸಂವಿಧಾನ, ಅಷ್ಟೇಕೆ—ಗ್ರಂಥವು ಆಧುನಿಕವಾಗಿ ತೋರುವಷ್ಟು ಅಪೂರ್ವತೆಯಿಂದ ಬರೆಯಲ್ಪಡುವುದಕ್ಕೆ ಕಾರಣವಾದ ಆ ಕಾಲದ ಪರಿಸ್ಥಿತಿಯ ಸ್ಫುಟವಾದ ಚಿತ್ರವೇ ನನ್ನ ಮನಸ್ಸಿನಲ್ಲಿ ಎದ್ದುನಿಂತಿತು.

ಕುಮಾರವಿಜಯವನ್ನು ಬರೆದ ಲಕ್ಷ್ಮೀನಾರಾಯಣಪ್ಪನವರೇ ಅದ್ಭುತರಾಮಾಯಣ, ಶ್ರೀರಾಮಪಟ್ಟಾಭಿಷೇಕ, ಶ್ರೀರಾಮಾಶ್ವಮೇಧ ಎಂಬ ಗ್ರಂಥತ್ರಯವನ್ನು ಬೇರೆ ಬೇರೆ ಹೆಸರಿನಿಂದ ರಚಿಸುವುದಕ್ಕೆ ಕಾರಣಗಳು ಇಲ್ಲದೆ ಇರಲಿಲ್ಲ. ಕುಮಾರವಿಜಯವು ಪ್ರಸಿದ್ಧ ಯಕ್ಷಗಾನ ಪ್ರಸಂಗವಾಗಿದ್ದರೂ ಅದು ಅವರು ಬದುಕಿದ್ದಾಗ ಜನಪ್ರೀತವಾಗದೆ ಹೋಯಿತು. ಆದು ನವೀನ ಕಥೆಯಾಗಿದ್ದುದರಿಂದಲೊ, ಅಥವಾ ಆದರೊಳಗಿನ ಹಾಡುಗಳ ದಾಟಿಗಳು ಆಗ ವಾಡಿಕೆಯಲ್ಲಿ ಇಲ್ಲದುದರಿಂದಲೊ, ಅಥವಾ ಗ್ರಂಥದಲ್ಲಿಯ ಹಳಗನ್ನಡ ಪದಗಳೂ ಪ್ರಯೋಗ

ಗಳೂ ಹಳ್ಳಿಯವರ ತಲೆಗೆ ಹತ್ತಲಾರದಷ್ಟು ಕ್ಲಿಷ್ಟವಾದುದರಿಂದಲೊ, ಅಥವಾ ಈಗಿನ ಕವಿಗಳೆಲ್ಲಾ ನರಕವಿಗಳೆಂಬದಾಗಿ ರೂಢಿಯಲ್ಲಿರುವ ತಪ್ಪು ಅಭಿಪ್ರಾಯದಿಂದಲೊ ಕುಮಾರವಿಜಯದ ೨,೦೦೦ ಪ್ರತಿಗಳಲ್ಲಿ ಹೆಚ್ಚಿನವು ಹಾಗೆಯೇ ರಾಶಿಯಾಗಿ ಬಿದ್ದಿದ್ದುವು. ಗ್ರಂಥವನ್ನು ಬರೆದರೆ ಅದನ್ನು 'ನೂತನ ಕವಿತೆಯೆಂದು ಕುಂದಿಟ್ಟು' ಜರೆಯುವವರೇ ಹೊರತು 'ಮತ್ಸರವನುಳಿದು ಅದನ್ನು ಆಲಿಸುವವರು' ಇರಲಿಲ್ಲ. ನಿಂತ ಸ್ಥಳದಿಂದ ದೂರವಿರುವ ಬೆಟ್ಟವು ಬಹು ರಮ್ಯವೆಂದು ಹೇಗೆ ನೆನಸುತ್ತಾರೋ ಹಾಗೆಯೇ ತಮ್ಮ ಕಾಲಕ್ಕಿಂತ ಹಿಂದೆ ಬಹು ದೂರ ಆಗಿಹೋದ ಕವಿಗಳೆಲ್ಲಾ ವರಕವಿಗಳೆಂದು ಭಾವಿಸುವುದು ಎಲ್ಲೆಲ್ಲಿಯೂ ವಾಡಿಕೆಯಾಗಿದೆ. ಹೊಸಕವಿ ಎಂಬ ಅವಹೇಳನಕ್ಕೆ ಆಸ್ಪದಕೊಡದೆ ಹೊಸ ಗ್ರಂಥವನ್ನು ಬರೆದು ಪ್ರಕಟಿಸುವ ಉಪಾಯವು ಯಾವುದು ? ಈ ವಿಚಾರವು ನಂದಳಿಕೆಯವರಲ್ಲಿ ಯಾವಾಗ ಎದ್ದಿತೊ ಆ ಸಮಯಕ್ಕೆ ಸರಿಯಾಗಿ ಶ್ರೀಯುತ ಎಂ. ಎ. ರಾಮಾನುಜಯ್ಯಂಗಾರ್ಯರು ಪ್ರಚಾರಪಡಿಸಿದ ರತ್ನಾಕರಾಧೀಶ್ವರಶತಕವು ನಂದಳಿಕೆಯವರ ಕೈಗೆ ಬಿದ್ದಿತು. ನಮ್ಮ ಜಿಲ್ಲೆಯ ಮೂಡಬಿದರೆಯ ಪ್ರಾಂತದವನಾದ ಆ ಕವಿಯ ನಿಜವಾದ ಹೆಸರು ತಿಳಿಯಬರುವುದಿಲ್ಲವೆಂಬದಾಗಿಯೂ ಶೃಂಗಾರಕವಿ ರಾಜಹಂಸ ಎಂಬಿವು ಆತನು ಇಟ್ಟುಕೊಂಡ ಹೆಸರುಗಳೆಂಬದಾಗಿಯೂ ಶತಕದ ಪೀಠಿಕೆಯಲ್ಲಿದ್ದ ಅಭಿಪ್ರಾಯವು ನಂದಳಿಕೆಯವರಿಗೆ ಹೆಸರು ಬದಲಾಯಿಸಿಕೊಳ್ಳುವುದಕ್ಕೆ ಕಲಿಸಿಕೊಟ್ಟಿದ್ದರೂ ಇರಬಹುದು.

ಗ್ರಂಥವನ್ನು "ಆವ ದಾಟಿಯೊಳ್ ಪೇಳ್ವುದು ? ಪದ್ಯದೊಳ್ ಪೇಳ್ವುದೊ ಗದ್ಯದೊಳ್ ಪೇಳ್ವುದೊ ? ಪದ್ಯಂ ವಧ್ಯಂ, ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು." ಪದ್ಯದಲ್ಲಿ ಹೇಳಿದರೆ ಕನ್ನಡದ ಸೊಗಸನಱಿಯಲಾರ್ತನಿಲ್ಲೆನಗೆ· ··ಸಕ್ಕದದ ಚೆಲ್ವಿಂದ ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಗುವುದು. ಅಂದಿನ 'ಪಾಳ್‌ಬಣ್ಣನೆ

ಯನ್ನು' ತರಬೇಕಾಗುವುದು. ಇಂಥ ಕೃತಿಯನ್ನು ಯಾರು ಮೆಚ್ಚುವರು? ಯಾರು ಉಡುಗೊರೆ ಕೊಡುವರು? ಆ ರಗಳೆಯ ದಿನಗಳು ಎಷ್ಟೋ ಹಿಂದಕ್ಕೆ ಕಳೆದುಹೋದುವು. ಈ ಕಾಲವು ವೆಂಕಟಾಚಾರ್ಯರ ಕಾದಂಬರಿಗಳ ಕಾಲ. ಅವರ ವಿಷವೃಕ್ಷವು ಗ್ರಂಥಮಾಲೆಯಲ್ಲಿ ಪ್ರಕಟವಾಗಿ ನಮ್ಮ ನಂದಳಿಕೆಯವರನ್ನು ಮುಗ್ಧರನ್ನಾಗಿ ಮಾಡಿದೆ. ಕಮಲಮುಖಿಗೂ ಅವಳ ಗಂಡನಿಗೂ ನಡೆದ ಸಂಭಾಷಣೆಯು ಅವರ ಮನಸ್ಸಿನಲ್ಲಿ ರೂಪುಗೊಂಡಿದೆ. ಈ ರೇಖೆಗಳಿಂದ ಮೇಲಕ್ಕೆ ಎದ್ದ ಚಿತ್ರವೇ ಮುದ್ದಣ್ಣ ಮನೋರಮೆ ಎಂಬ ದಂಪತಿಗಳು. ಹಳೆಯ ಗ್ರಂಥಗಳ ಹೊಗಳುಭಟ್ಟರನ್ನು ಮೆಚ್ಚಿಸುವುದಕ್ಕೆ ಇಂದಿನ ಕಾದಂಬರೀ ನಿರೂಪಣ ಪದ್ಧತಿಯೇ ತಕ್ಕದಾದ ಉಪಾಯವೆಂಬದನ್ನು ಅವರು ವಿಷವೃಕ್ಷ, ಶೂರಸೇನಚರಿತ್ರೆ, ಜಯಸಿಂಹರಾಜಚರಿತ್ರೆಗಳನ್ನು ಓದಿದಕೂಡಲೇ ಗೊತ್ತುಮಾಡಿಕೊಂಡು ಆ ನೂತನ ಮಾರ್ಗದಲ್ಲಿ ಹರಿಯತಕ್ಕ ಭಾಷೆಯನ್ನು ಪೋಷಿಸುವುದಕ್ಕೆ ಯೋಚಿಸಿರಬೇಕು. ಪುರಾಣಕಥೆಯನ್ನು ಮುದ್ರಾಮಂಜೂಷದ ಹೊಸಗನ್ನಡದಲ್ಲಿ ಹೇಳಿದರೆ, ಮೈಸೂರು ವಿದ್ವಾಂಸರಿಗೆ ಆದರಣೀಯವಾಗುವುದೊ ಎಂಬ ಅನುಮಾನ; ದುರ್ಗೇಶನಂದಿನಿಯಂತಹ ನವೀನ ಕಥೆಯನ್ನು ಹಳಗನ್ನಡದಲ್ಲಿ ಬರೆದು ಮಂಗಳೂರಿನವರನ್ನು ಮೆಚ್ಚಿಸುವ ಎಂದರೆ, ನೂತನ ಕಥಾಸೃಷ್ಟಿಯನ್ನು ಮಾಡುವಷ್ಟು ಪ್ರತಿಭೆಯು ತನ್ನಲ್ಲಿ ಉಂಟೊ ಇಲ್ಲವೊ ಎಂಬ ಅಪನಂಬಿಕೆ; ಇವೆರಡನ್ನೂ ತಪ್ಪಿಸಿಕೊಳ್ಳುವುದಕ್ಕೆ ದಾರಿ ಯಾವುದು? ಹಳೆಯ ಕಥೆಯನ್ನು ಹೊಸ ಆಯದಲ್ಲಿ ಕಟ್ಟಿ, ಇತ್ತ ಹೊಸ ಶೈಲಿಯೂ ಅಲ್ಲ ಅತ್ತ ಹಳೆಯಶೈಲಿಯೂ ಅಲ್ಲ, ಇವೆರಡರ ನಡುವಣ ಸರಣಿಯನ್ನು ಒದಗಿಸಿಕೊಳ್ಳಬೇಕಾಯಿತು. ಈ ಸರಣಿಯನ್ನು ಕಲ್ಪಿಸಿಕೊಳ್ಳುವುದಕ್ಕೆ ಚಿಕದೇವರಾಜವಂಶಾವಳಿಯನ್ನು ತೆರೆದದ್ದಾಯಿತು. ಅದರ ಹಳಗನ್ನಡವು ತಲೆ ಒಡೆಯುವಷ್ಟು ಗಟ್ಟಿ; ವಾಣೀವಿಲಾಸ ಗ್ರಂಥಗಳನ್ನು ಬಿಚ್ಚಿದ್ದಾಯಿತು. ಇದರ ಕನ್ನಡವು ಬೆರಳು ಬಿಗಿಯದಷ್ಟು ಪೆಡಸು. ಏನು ಮಾಡಬೇಕಾಯಿತು?

ಒಂದರ ಕಾಠಿನ್ಯವನ್ನೂ ಮತ್ತೊಂದರ ಶೈಥಿಲ್ಯವನ್ನೂ ತೆಗೆದುಹಾಕಿ, ಅವೆರಡನ್ನೂ ಹೊಸೆದು, ತುಳುನುಡಿಗಳನ್ನೂ ಕನ್ನಡಮಾತುಗಳನ್ನೂ ಸಂದರ್ಭಕ್ಕನುಸಾರವಾಗಿ ಹಳಗನ್ನಡದಿಂದ ತಿರುಪಿ, ಎಷ್ಟು ಅರ್ಥಭಾರವನ್ನು ಹಾಕಿದರೂ ಕಡಿದುಹೋಗದಂತೆ ಹಳೆಯ ವ್ಯಾಕರಣಸೂತ್ರಗಳಿಂದ ಗಂಟಿಕ್ಕಿ, ತನ್ನದೇ ಆದ ಒಂದು ಅಪೂರ್ವ ಭಾಷಾಸರಣಿಯನ್ನು ನಿರ್ಮಿಸಿದರು. ಕಿವಿಯಲ್ಲಿ ಮಂಜುಳವಾಗಿ ಧ್ವನಿಸಿ, ಎದೆಯನ್ನು ತಣ್ಣಗೆ ತೋಯಿಸಿ, ಮನಸ್ಸನ್ನು ತಣಿಸುವ ಎಣೆಯಿಲ್ಲದ ಈ ಭಾಷಾಸರಣಿಯು ಇವರನ್ನೇ ಒಲಿದು, ಇವರನ್ನೇ ವರಿಸಿ, ವಿಧೇಯಳಾದ ದಾಸಿಯಂತೆ ಇವರ ವಶವಾಗಿ ಹೋಯಿತು.

ನಾನು ರಾಮಾಶ್ವಮೇಧದ ವಿಷಯವಾಗಿ ಮೇಲೆ ನಿರೂಪಿಸಿದ್ದ ಆಧಾರಗಳನ್ನು ಸಂಕೋಚವಾಗಿ ಹೇಳಿ, ೧೯೦೦ನೆಯ ಫೆಬ್ರವರಿ ಸುಮಾರಕ್ಕೆ ಮತ್ತೊಂದು ಪತ್ರವನ್ನು ಅವರಿಗೆ ಬರೆದೆನು. ಅದಕ್ಕೆ ಅವರು "ನಾನು ತ್ವರೆಯಲ್ಲಿ ಮಂಗಳೂರಿಗೆ ಬರುವವನಿದ್ದೇನೆ, ಆಗ ಮುಖತಃ ಮಾತನಾಡೋಣ" ಎಂಬದಾಗಿ ತಿಳಿಸಿದರು. ಅವರ ಆಗಮನವನ್ನೇ ಎದುರ್ನೋಡುತ್ತಿದ್ದ ನನಗೆ ಎಪ್ರಿಲ್ ತಿಂಗಳಿನ ಒಂದುದಿನ ಸಾಯಂಕಾಲ ಮಂಗಳೂರು ಇಂಗ್ಲಿಷ್ 'ಇಗರ್ಜಿಯ' ಬಲಗಡೆಯ ಮೈದಾನಿನಲ್ಲಿ ಅವರ ಭೇಟಿಯಾಯಿತು. ಸುಮಾರು ೫½ ಅಡಿ ಎತ್ತರದ, ಎಣ್ಣೆಕಪ್ಪುಬಣ್ಣದ, ತಕ್ಕಷ್ಟು ಅಗಲದ ಹಣೆಯ, ಕಳೆಗುಂದಿದ ಮೋರೆಯ, ಹರೆಯದ ಕುರುಹುಗಳಿಲ್ಲದೆ ಶಾಂತವಾಗಿರುವ ಮುಖಮುದ್ರೆಯ ಲಕ್ಷ್ಮೀನಾರಾಯಣಪ್ಪನವರನ್ನು ನಾನು ಕಣ್ಣಾರೆ ಕಂಡೆನು. ಕನ್ನಡದ ಪ್ರಸ್ತಾಪವು ಬರುವುದಕ್ಕೆ ಹೊತ್ತು ಹೋಗಲಿಲ್ಲ. ನಾನು ಗದಾಯುದ್ಧದ ಮಾತು ಎತ್ತಿದೆನು; ಕೂಡಲೇ ಒಳಗಿದ್ದ ಉತ್ಸಾಹವು ಚಿವುಟಿದಂತಾಯಿತು; "ಜತುಗೇಹಾನಲದಿಂ..." ಎಂಬ ಚರಣವನ್ನು ಪ್ರಾರಂಭಿಸಿ, ಸುಮಾರು ೨೫ ಪದ್ಯಗಳನ್ನು ಹಾಡುವವರೆಗೆ ಅವರ ಉತ್ಸಾಹವು ನಿಲ್ಲಲಿಲ್ಲ. ತರುವಾಯ ನಾನು

ಗ್ರಂಥತ್ರಯಗಳ ವಿಚಾರವನ್ನು ತಂದುಹಾಕಿ, "ಇದಕ್ಕೆ ಏನು ಹೇಳು ವಿರಿ? ನಾನು ಬರೆದುದು ಸರಿಯಲ್ಲವೆ?" ಎಂದು ಕೇಳಿದೆನು. ಅವರು ನಗುತ್ತ ಎರಡು ನಿಮಿಷಗಳ ಮೇಲೆ "ಯದ್ಭಾವಂ ತದ್ಭವತಿ" ಎಂದು ನುಡಿದು ತಮ್ಮ ಸಂಭಾಷಣೆಯನ್ನು ಸ್ಕೂಲುಗಳಲ್ಲಿ ಕನ್ನಡ ಕಲಿಸುವ ಕ್ರಮ ದ ಕಡೆಗೆ ತಿರುಗಿಸಿ, ನನ್ನ ಪ್ರಶ್ನೆಯನ್ನು ತಮ್ಮ ನಗುವಿನಲ್ಲಿ ತೇಲಿಸಿ ಬಿಟ್ಟರು. ಮೈಯ ಜಾಡ್ಯದ ನಿಮಿತ್ತವಾಗಿ ಅವರು ಮಂಗಳೂರಿಗೆ ಬಂದಿದ್ದರೆಂದು ನನಗೆ ಗೊತ್ತಾಯಿತು. ನಾನು ಅವರನ್ನು ಕಂಡದ್ದು ಇದೇ ಮೊದಲು. ಈ ಮೊದಲಿನ ದರ್ಶನವೇ ಕೊನೆಯ ದರ್ಶನವಾ ವಾಯಿತು. ಅನಂತರ ಅವರು ಬಹಳವರ್ಷ ಬದುಕಲಿಲ್ಲ. ಅವರ ಅಕಾಲ ಮರಣದ ದುಃಖಕರವಾದ ಸಮಾಚಾರವು ಸುವಾಸಿನೀ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ಪತ್ರಿಕೆಯ ಸಂಪಾದಕರಾಗಿದ್ದ ಶ್ರೀಯುತ ಬೆನಗಲ ರಾಮರಾಯರು ತಮ್ಮ ಅಗ್ರಲೇಖನದಲ್ಲಿ ಅವರ ಗುಣಕಥನವನ್ನು ಮಾಡಿ ಅವರ ನಿಧನದಿಂದ ಕನ್ನಡಕ್ಕೆ ತಗಲಿದ ಹಾನಿಯನ್ನು ವಿಸ್ತರಿಸಿ ಬರೆದರು. ಆ ಸಂದರ್ಭದಲ್ಲಿಯೇ ಉಡುಪಿಯ "ಚಕ್ರಧಾರಿ" ಎಂಬ ಹೆಸರಿನಿಂದ 'ಜೋಜೋ' ಮಾತಿನ ಮೇಲೆ ಟಿಪ್ಪಣವನ್ನು ಒಮ್ಮೆ ಸುವಾಸಿನಿಯಲ್ಲಿ ಬರೆದವರು ಲಕ್ಷ್ಮೀನಾರಾಯಣಪ್ಪನವರೇ ಎಂಬದಾಗಿ ಶ್ರೀ ರಾಮರಾ ಯರು ಬಿಚ್ಚಿಹೇಳಿ, ನಂದಳಿಕೆಯವರೇ ಆ ಗ್ರಂಥತ್ರಯಗಳ ಕವಿಗಳೆಂಬು ದನ್ನು ಸೂಚಿಸಿದರು. ಈ ವಿಚಾರವನ್ನು ಸುವಾಸಿನಿಯ ಅಗ್ರಲೇಖನವು ಕನ್ನಡಿಗರ ಲಕ್ಷ್ಯಕ್ಕೆ ತಂದೊಡ್ಡಿದುದರಲ್ಲಿ ಒಂದುಪಾಲು ನನಗೂ ಇತ್ತು. ಈ ಸಂದಿಗ್ಧವಿಷಯವನ್ನು ಕುರಿತು ಆ ಮಾಸಪತ್ರಿಕೆಯ ಅನಂತರದ ಸಂಚಿಕೆಗಳಲ್ಲಿ ಲೇಖಗಳು ಕಾಣುವುದಿಲ್ಲವಾದರೂ, ರಾಮಾಶ್ವಮೇಧದ ಮೇಲೆ ಯಾರೋ ಇಬ್ಬರಿಂದ ಪ್ರಕಟವಾದ ಒಂದು ವಿಮರ್ಶೆಯು ರಾಮಾಶ್ವಮೇಧವನ್ನು ಮೈಸೂರಲ್ಲಿ ಓದತೊಡಗಿದ್ದರೆಂಬುದಕ್ಕೆ ಸಾಕ್ಷಿ ಯಾಗಿತ್ತು. ಆ ರಾಮಾಶ್ವಮೇಧವು ನಾರಾಯಣಕೃತ ಗ್ರಂಥವೆಂದರೆ

ಕಿಡಿಕಿಡಿಯಾಗುತ್ತಿದ್ದ ಮಂಗಳೂರು ಸೆಂಟ್ ಎಲೊಶಿಯಸ್ ಕಾಲೇಜು ಪಂಡಿತರು ಸುವಾಸಿನಿಯ ಅಭಿಪ್ರಾಯವನ್ನು ಒಪ್ಪಿಕೊಂಡು, ಆ ಶಾಲೆಯ ಅಧಿಕಾರಿಗಳ ಮೂಲಕ ಕಾವ್ಯಕಲಾನಿಧಿಯ ಸಂಪಾದಕರಿಗೆ ತಿಳಿಸಲು, ಶ್ರೀಯುತ ಎಂ. ಎ. ರಾಮಾನುಜಯ್ಯಂಗಾರ್ಯರು 'ಈ ಚರ್ಚಾಸ್ಪದವಾದ ವಿಷಯವನ್ನು ನಾರಾಯಣಪ್ಪನವರ ಮಿತ್ರರಿಗೆ ಬಿಟ್ಟಿರುತ್ತೇವೆ' ಎಂಬ ದಾಗಿ ಮೊದಲು ಇಟ್ಟುಕೊಂಡ ಅಭಿಪ್ರಾಯವನ್ನು ಬಿಟ್ಟು, ಅದ್ಭುತರಾ ಮಾಯಣದ ದ್ವಿತೀಯ ಮುದ್ರಣದಲ್ಲಿ "ಇವರೇ ಗ್ರಂಥಕರ್ತರಾಗಿ ದ್ದರೂ ಇರಬಹುದು......ಇವರಷ್ಟು ಸಮರ್ಥರಾದ ಕವಿಗಳು ಈಗ ಇಲ್ಲವೇ ಇಲ್ಲವೆಂದು ಹೇಳಬಹುದು. ಇವರ ಪದಶಕ್ತಿಯು ಅದ್ಭುತವಾ ದುದು. ಗದ್ಯಗ್ರಂಥಗಳೇ ವಿರಳವಾಗಿದ್ದ ಕಾಲದಲ್ಲಿ ಇಂತಹ ಉತ್ಕೃಷ್ಟ ಗ್ರಂಥಗಳನ್ನು ಬರೆದು ಮಾಡಿದ ಇವರ ಉಪಕಾರವು ಕನ್ನಡ ದೇಶದಲ್ಲಿ ಮರೆಯತಕ್ಕುದಾಗಿಲ್ಲ" ಎಂಬದಾಗಿ ಹೊಗಳಿದರು. ರಾಮಾಶ್ವಮೇಧದ ವಿಷಯವಾಗಿ ಇಂಡಿಯನ್ ರಿವ್ಯೂ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟ ವಾದ ಒಂದು ಮನೋರಂಜಕವಾದ ಇಂಗ್ಲಿಷ್ ಲೇಖವು ಆ ಗ್ರಂಥದ ಪರಿಚಯವನ್ನು ಇಂಗ್ಲಿಷ್ ವಾಚಕರ ಲಕ್ಷ್ಯಕ್ಕೆ ತಂದುದನ್ನು ಆಲೋಚಿ ಸಿದರೆ, ರಾಮಾಶ್ವಮೇಧವು ಆಗಲೇ ಸಕಲರಿಗೂ ಆದರಣೀಯವಾಗುತ್ತ ಬರಹತ್ತಿತ್ತೆಂಬುದು ವ್ಯಕ್ತವಾಗುತ್ತದೆ.

ಕವಿಗಳೂ ಚಿತ್ರಕರೂ ಶಿಲ್ಪಿಗಳೂ ಇಹಲೋಕದಿಂದ ಹೊರಟು ಹೋಗುವುದಕ್ಕೆ ಮುಂಚಿತವಾಗಿಯೇ ಪ್ರಸಿದ್ಧಿಗೆ ಏರಿದ ಅವರ ಕೃತಿಗಳ ಸಂಗತಿಯನ್ನು ಇತಿಹಾಸವು ಹೇಳುತ್ತದೆ. ಈ ಕೃತಿಗಳಲ್ಲಿ ಹೆಚ್ಚಿನವುಗಳು ಅರಸರ ಆಶ್ರಯ, ಹಣವಂತರ ಸಹಾಯ, ಸ್ವಮತಸ್ಥರ ಪಕ್ಷಪಾತಗಳ ಬಲದಿಂದ ಬಿರುಸುಗಳಂತೆ ಬೆಳಬೆಳಗಿ ಬಾನಿಗೆ ಏರಿ, ಏರಿದಹಾಗೆ ಕೆಳಕ್ಕೆ ಬಿದ್ದು, ಕತ್ತಲಲ್ಲಿ ಕಾಣದೆ ಹೋಗುತ್ತವೆ. ಒಂದೆರಡು ಮಾತ್ರವೇ (ಅಂಬಿ ಗನ ಪಟಿವಾತು, ಬಿಯದಂ ಬರೆದ ಕಬ್ಬ, ಕುಱುಂಬನ ಬಯಲ್ನುಡಿ) ಚಿರ

ಜೀವಿಗಳಾಗಿ ಬದುಕಿ ಲೋಕಯಾತ್ರೆಯಲ್ಲಿ ನಮಗೆ ಬೆಳಕನ್ನು ಕೊಡುತ್ತವೆ. ಇಂಥ ಮಹಾವರಕವಿಗಳ ತಾರಾಮಂಡಲವನ್ನು ಮುಟ್ಟುವಷ್ಟು ಉನ್ನತವಾದ ಪ್ರತಿಭೆ, ಉದಾತ್ತವಾದ ವಿಚಾರಗಳು, ಉತ್ತಮವಾದ ವಿಷಯಜ್ಞಾನ ಇವು ಲಕ್ಷ್ಮೀನಾರಾಯಣಪ್ಪನವರ ಗ್ರಂಥಗಳಲ್ಲಿ ಕಡಮೆ. ಅವರು ಕನ್ನಡ ಗ್ರಂಥಗಳ ಗಂಧಗಾಳಿ ಸೋಂಕದ, ಕನ್ನಡ ವಿದ್ವಾಂಸರ ಸುಳಿವು ಕಾಣದ, ಕನ್ನಡಪ್ರಾಂತದಿಂದ ಬಹು ದೂರವಾದ, ತುಳುನಾಡಿನ ಬಂಜರು ನೆಲದಲ್ಲಿ ತನ್ನಷ್ಟಕ್ಕೆ ಚಿಗುರಿದ ಗಂಧದ ಸಸಿಯಂತೆ ಇದ್ದು, ಬಲಿತು ಬೆಳೆಯುವ ಮೊದಲೇ ಬಿದ್ದುಹೋದರು. ಹೀಗಾದುದರಿಂದ ಅವರ ಅದ್ಭುತವಾದ ಪದಶಕ್ತಿ, ಅನ್ಯಾದೃಶವಾದ ವಾಕ್ಸರಣಿ, ಹೊಸತನ್ನು ಹಳೆಯದಾಗಿಯೂ, ಹಳೆಯದನ್ನು ಹೊಸದಾಗಿಯೂ ಮಾಡುವ ಮಾಟಗಾರಿಕೆ, ಮನಸ್ಸಿಗೆ ಅಸಹ್ಯವಾಗದ ಶೃಂಗಾರ, ಕಲ್ಲೆದೆಯನ್ನು ಕರಗಿಸತಕ್ಕ ಕರುಣೆ—ಇವುಗಳ ನರುಗಂಪೇ ಮೂಗಿಗೆ ಬರುತ್ತದೆ. ರನ್ನಜನ್ನಾದಿಗಳ ಕವಿತಾಸೌಗಂಧವೂ ಶ್ರೀಯುತ ರವೀಂದ್ರನಾಥರ ಪುಷ್ಪಗಂಧವೂ ಈ ಕೃತಿಗಳಲ್ಲಿ ಇಲ್ಲವೆಂದು ತೋರಿದರೂ, ೨೦೦ ವರ್ಷಗಳ ಈಚೆಯಿಂದ ಮುಳ್ಳುಪೊದೆಯಾಗಿ ಬಿದ್ದಿದ್ದ ಕನ್ನಡತೋಟವು ರಾಮಾಶ್ವಮೇಧದಂತಹ ಒಂದು ಹೂವನ್ನಾದರೂ ಲೋಕಕ್ಕೆ ಕೊಟ್ಟಿತೆಂಬದಕ್ಕೆ ನಾವು ಹೆಚ್ಚಳಪಡಬೇಕು.

ಗ್ರಂಥಕಾರರ ಆಯುಷ್ಕಾಲದಲ್ಲಿ ಅವರನ್ನು ಕಣ್ಣೆತ್ತಿನೋಡದ ಜನರು ಅವರ ಅವಸಾನಾನಂತರ ಪ್ರಸಿದ್ಧಿಗೆ ಬರುವ ಅವರ ಕೃತಿಗಳನ್ನು ಮೆಲ್ಲಮೆಲ್ಲನೆ ಓದತೊಡಗುವ ಕಾರಣದಿಂದ ವಾಙ್ಮಯವು ಕ್ರಮೇಣ ಕಣ್ಣಿಗೆ ಕಾಣದಂತೆ ಮಾರ್ಪಡುವುದೆಂಬ ಹೇಳಿಕೆಗೆ ರಾಮಾಶ್ವಮೇಧವು ಒಂದು ದೃಷ್ಟಾಂತವಾಗಿದೆ. ಶ್ರೀಯುತ ಮುಳಿಯದ ತಿಮ್ಮಪ್ಪಯ್ಯನವರ "ಚಂದ್ರಾವಳಿ"ಯು ರಾಮಾಶ್ವಮೇಧದ ಅಚ್ಚಿನಲ್ಲಿ ಎರಕಹೊಯ್ದ ಗ್ರಂಥ. ಆರ್. ವೆಂಕಟಸುಬ್ಬರಾಯರ (Kamala's letters to her

husband) ಎಂಬುದರ ಕನ್ನಡ ಅನುವಾದದಲ್ಲಿ ಗಂಡಹೆಂಡಿರು ತಮ್ಮೊಳಗೆ ಪರಸ್ಪರ ಸಂಬೋಧಿಸಿಕೊಳ್ಳುವ ಮೆಚ್ಚಿನ ಮಾತುಗಳು ಬಹುಶಃ ಮುದ್ದಣ ಮನೋರಮೆಯರ 'ಒಲ್ಮೆಯ ನುಡಿಗಳೇ.' ರಾಮಾಶ್ವಮೇಧವು ಕೈಗೆ ಸಿಕ್ಕದೆ ಹೋಗಿದ್ದರೆ, 'ಶ್ರೀನಿವಾಸನ' ನವಿಲ್ಗರಿಯ ಚಿತ್ರದ ಕಡ್ಡಿಯು ವೆಂಕಟಾಚಾರ್ಯರ ಕಾದಂಬರೀ ಭಾಷಾಮಾರ್ಗಕ್ಕೆ ತಿರುಗುತ್ತಿತ್ತೋ ಏನೋ ಯಾರಿಗೆ ಗೊತ್ತು? ಇನ್ನೂ ಶ್ರೀಯುತ ಡಿ. ವಿ. ಗುಂಡಪ್ಪನವರ ಮುತ್ತುಗಳಂತಿರುವ ಮಾತುಗಳಲ್ಲಿಯೂ, ರತ್ನಗಳಂತಿರುವ ಪದ್ಯಗಳಲ್ಲಿಯೂ ಮಿನುಗುವ ಬಣ್ಣಬಣ್ಣದ ಛಾಯೆಗಳು ರಾಮಾಶ್ವಮೇಧವು ಬೆಳಕಿಗೆ ಬಂದುದರ 'ಪ್ರತಿಫಲವೊ' ಎಂಬ ಅನುಮಾನವಾಗುತ್ತದೆ. ಇಂಗ್ಲಿಷ್ ವಿದ್ಯೆಯ ಹುಳಿಯಿಂದ ನಮ್ಮನಾಡಿನ ನಾಲಗೆಯು ಕನ್ನಡವನ್ನು 'ಸವಿದು ನೋಡದೆ' ಅದು ಹಾಳುಹೊಲಸು ಎಂದು ಹಳಿಯುತ್ತ ಬರುತ್ತಿದ್ದಕಾಲದಲ್ಲಿ, ಸಾಹಿತ್ಯಪರಿಷತ್ತೂ ಕನ್ನಡ ಏಕೀಕರಣ ಮಂಡಳವೂ ಕನ್ನಡದ ವಿಜಯಧ್ವಜವನ್ನು ಎತ್ತಿಹಿಡಿದು ಶಂಖನಾದವನ್ನು ಮಾಡುವ ಮೊದಲೇ "ತಿರುಳ್ಗನ್ನಡದಲ್ಲಿ ಬಿಗುಪು ಇದೆ, ಇಂಪು ಇದೆ; ಧನಿ ಇದೆ, ಧಾಟಿ ಇದೆ; ಜೀವಾಳ ಇದೆ, ಜೀವಕಳೆ ಇದೆ. ನಾನು ಕೇಳಿದ್ದೇನೆ, ಕಂಡಿದ್ದೇನೆ—ಬೇಕಾದರೆ ಕೊಡುತ್ತೇನೆ" ಎಂದು ತಾಯಿಯನ್ನು ಕಾಣದ ಗುಡ್ಡದಮರೆಯ ಕರುವಿನ ಕೂಗಿನಿಂದ ಕೂಗಿ ನಮ್ಮ ಕಿವಿಗಳನ್ನು ನಿಮಿರಿಸುವ ಹಾಗೆ ಮಾಡಿದ ಪುಣ್ಯವು ಅದ್ಭುತರಾಮಾಯಣ ರಾಮಾಶ್ವಮೇಧಗಳನ್ನು ವಿರಚಿಸಿದ ಕೈಲಾಸವಾಸಿ ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಸೆರಗಿಗೆ ಬೀಳಲಿ!

ನಂದಳಿಕೆ ಲಕ್ಷ್ಮೀನಾರಾಯಣಪ್ಪನವರು ಯಶಶ್ಶೇಷರಾದರು. ಯಾವ ವಿದ್ವಾಂಸರ ಪುರಸ್ಕಾರವನ್ನು ಪಡೆಯುವುದಕ್ಕಾಗಿ ಅವರು ತಮ್ಮ ಹೆಸರನ್ನು ಆಗಾಗ ಬೇರ್ಪಡಿಸಿದರೋ, "ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ" ಯಾವ "ಕನ್ನಡ ಕಬ್ಬಿಗರ ಮನೆಯೂಳಿಗದವ

ನೆಂದು'' ತೋರಿಸಿಕೊಂಡರೋ, "ಜಗದಿ ಪುಟ್ಟಿದವರಿಗೆ ಮನದ ಬಯಕೆ ಪಿರಿದು'' ಆದುದರಿಂದ "ಕನ್ನಡಿತಿಯೊರೆದ ನುಡಿಯೆಂದಿದಂ ಭಾವಿಸದೆ ಕನ್ನಡಿಗನೊರೆದ ನುಡಿಯೆಂದು ಸಂಭಾವಿಪುದೆಂದು'' ಯಥಾರ್ಥವಾಗಿ ಯಾವ ವಿದ್ವಜ್ಜನರೊಂದಿಗೆ ಬೇಡಿಕೊಂಡರೋ, ಆ ಮೈಸೂರು ಕರ್ನಾಟಕಾಭಿಮಾನಿಗಳೇ ಲಕ್ಷ್ಮೀನಾರಾಯಣಪ್ಪನವರ ಯಶಸ್ಸಿನ ಸಮಾರಾಧನೆಯನ್ನು ಕೈಕೊಂಡು, ಅವರ ವಿಷಯವಾದ ಉಪನ್ಯಾಸಗಳನ್ನೂ ಅವರ ಚಿತ್ರಸ್ಥಾಪನೆಯನ್ನೂ, ಅವರ ಹೆಸರಿನಲ್ಲಿ ಪದಕಗಳನ್ನೂ ಉಚಿತಗಳನ್ನೂ ಅಟ್ಟು ಅಳವಡಿಸುತ್ತಿದ್ದಾಗ—ಅವರು ಜನಿಸಿದ ಜಿಲ್ಲೆಯಲ್ಲಿಯೇ ಜನಿಸಿ, ಅವರು ಇದ್ದ ಕಾಲದಲ್ಲಿಯೇ ಇದ್ದು, ಅವರು ಬರೆದ ಗ್ರಂಥಗಳಿಂದ ಉತ್ಕರ್ಷಗೊಂಡ ನನ್ನಂಥವನು ಆ ಯಶಸ್ಸಿನ ಸಮಾರಾಧನೆಗಾಗಿ ಅವರ ಹೊರಗಿನ ಜೀವನಕ್ರಮವನ್ನೂ ಒಳಗಿನ ಅಂತರ್ಯಸ್ಥಿತಿಯನ್ನೂ ತೆರೆದು ತೋರಿಸಲಿಕ್ಕೆ ಸಹಾಯಕವಾದ ಅವರ ಚರ್ಯೆಚೇಷ್ಟೆಗಳನ್ನೂ ಸುಖದುಃಖದ ಸಂದರ್ಭಗಳನ್ನೂ ನಡೆನುಡಿಗಳನ್ನೂ ಕಾಗದಪತ್ರಗಳ ಆಧಾರದಿಂದ ಬರೆದಿದ್ದರೆ ಈ ಲೇಖವು ಎಷ್ಟು ರುಚಿಯಾಗುತ್ತಿತ್ತು! ಆದರೆ ಮಾಡುವುದೇನು? ನನ್ನಲ್ಲಿ ಬೇಕಾದ ಸಂಗ್ರಹವೂ ಇಲ್ಲದೆ ಬರೆಯುವ ಶಕ್ತಿಯೂ ಸಾಲದೆ, ಕೈ|| ಲಕ್ಷ್ಮೀನಾರಾಯಣಪ್ಪನವರ ವಿಷಯವಾಗಿ ನನಗೆ ಗೊತ್ತಿದ್ದಷ್ಟನ್ನು ಕಲಸಿ, ಈ ಗೊಡ್ಡು ಸಾರನ್ನು ಮಾಡಬೇಕಾಗಿ ಬಂದಿತು.

ಸತ್ತವರ ಆತ್ಮವು ಸ್ಮರಿಸಿದ ಮಾತ್ರಕ್ಕೆ ಕೆಳಕ್ಕೆ ಇಳಿಯುತ್ತದೆಂಬ ಒಂದು ಹಿರಿಯರ ಹೇಳಿಕೆ ಇದೆ. ಸತ್ತವನ ಆತ್ಮವು ತಿರಿಗಿ ಜನ್ಮಕ್ಕೆ ಬೀಳಬಾರದೆಂಬ ಅಭಿಪ್ರಾಯದಿಂದ ಸತ್ತವನನ್ನು ಸ್ಮರಿಸುವುದೇ ಕಡಿಮೆ. ಆತನು ಉಂಡಿದ್ದ ತಟ್ಟೆ, ಉಟ್ಟಿದ್ದ ಬಟ್ಟೆ, ಹಿಡಿದಿದ್ದ ಕಡ್ಡಿ, ಬರೆದಿದ್ದ ಕಾಗದ ಮುಂತಾದುವನ್ನು ಅವನ ಹಿಂದೆಯೇ ದಾನಮಾಡಿಬಿಡುವುದು ರೂಢಿಯಾಗಿದೆ. ಮೃತನ ವಿಷಯವಾಗಿ ಮಾತುಕಥೆಯನ್ನು ಆಡರು;

ಆತನ ಹೆಸರನ್ನು ಉಚ್ಚರಿಸಲೊಲ್ಲರು. ಮೃತನ ಹೆಸರುಳಿಯದಂತೆ ಮಾಡುವ ಈ ಪದ್ಧತಿಯ ಕೆಲಸವನ್ನು ನಮ್ಮಲ್ಲಿ ಸಹಜವಾಗಿರುವ ಆಲಸ್ಯವೂ ಬಡತನವೂ ಸಂಪೂರ್ಣಮಾಡುತ್ತವೆ. ಇದರ ದೆಸೆಯಿಂದ ಮಹನೀಯರ ಚರಿತೆಗೆ ಬೇಕಾದ ಲೇಖನಸಾಮಗ್ರಿಗಳಿಗೆ ನಮ್ಮಲ್ಲಿ ದೊಡ್ಡ ಅಭಾವವೆಂದು ವಿಷಾದಿಸಬೇಕಾಗಿದೆ. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ, ಈ ಪದ್ಧತಿಯು ಅಷ್ಟೊಂದು ಹಾಳೆಂದು ತಿಳಿಯಲಾಗದು. ಅದು ಅಸೂಯೆಯ ಬಾಯನ್ನು ಮುಚ್ಚುತ್ತದೆ; ಹಗೆಯ ಕೈಯನ್ನು ಕಟ್ಟುತ್ತದೆ. ಸದ್ಗತಿಯನ್ನು ಪಡೆದವರು ಈ ಜನ್ಮದಲ್ಲಿದ್ದಾಗ ಮಾಡಿದ ಕಾರ್ಯಾಕಾರ್ಯಗಳ ವಿಮರ್ಶೆಯನ್ನೂ ಅವರ ವಿವಿಧ ಆಲೋಚನೆಗಳ ಪರಿಶೀಲನವನ್ನೂ ಅವರ ಉದ್ದೇಶಧ್ಯೇಯಗಳ ವಿಚಾರವನ್ನೂ ಮಾಡುವುದಕ್ಕೆ ನಮಗೇನು ಅಧಿಕಾರ? ಅಧಿಕಾರವಿದ್ದರೂ ಆ ಅಧಿಕಾರವನ್ನು ನಡಿಸುವಾಗ ಅಧಿಕಾರಿಯ ರಾಗದ್ವೇಷಗಳಿಂದ ಮೃತನ ಹೆಸರಿನ ಮೇಲೆ ಸಲ್ಲದ ಭೂಷಣೆಯೊ ಇಲ್ಲದ ದೂಷಣೆಯೊ ಬೀಳಲಿಕ್ಕಿಲ್ಲವೆಂದು ಹೇಗೆ ಹೇಳಬಹುದು? ಹೀಗಾದುದರಿಂದ ಕೈ|| ನಂದಳಿಕೆ ಲಕ್ಷ್ಮೀನಾರಾಯಣಪ್ಪನವರಲ್ಲಿ ನನಗಿದ್ದ ಅಭಿಮಾನದಿಂದ ಬರೆಯಲ್ಪಟ್ಟ ಈ ಲೇಖದಲ್ಲಿ ಅವರ ಹೆಸರಿನ ಮೇಲೆ ನನ್ನ ಕೈಯಿಂದ ಪ್ರಮಾದವಶಾತ್ ಮಸಿಯ ಬಟ್ಟು ಬಿದ್ದಿದ್ದರೆ, ಅದನ್ನು ತೊಡೆದುಬಿಡಬೇಕಾಗಿ ವಾಚಕರೊಡನೆ ಬಿನ್ನಯಿಸುತ್ತೇನೆ.

ಕವಿಯ ನೆನಪು.

(ಮ|| ಹುರುಳಿ ಭೀಮರಾಯರಿಂದ.)

ಈ ಕವಿಯ ಪರಿಚಯವು ನನಗೆ ಸುಮಾರು ೧೮೯೬ ನೆಯ ಇಸವಿಯಲ್ಲಿ ಆಯಿತು. ಆಗ ಆತನು ಉಡುಪಿಯ ಮಿಷನ್ ಹೈಸ್ಕೂಲಿನ ಕರ್ಣಾಟಕ ಪಂಡಿತನಾಗಿ ಬಂದಿದ್ದನಷ್ಟೆ. ಆತನು ನಮ್ಮ ನೆರೆಯಲ್ಲಿದ್ದು, ನಮ್ಮ ಅಣ್ಣನ ಗುರುತಿನಮೇಲೆ, ಆಗಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದುದೇ ಆತನ ಬಳಕೆಯೂ ಪರಿಚಯವೂ ನನಗೆ ಉಂಟಾಗಲು ಕಾರಣ.

ಕವಿಯ ಬಣ್ಣವು ಎಣ್ಣೆಗೆಂಪು, ದೇಹವು ಗಟ್ಟಿಮುಟ್ಟು, ಮಾತುಕತೆಗಳಲ್ಲಾತನು ಬಲುರಸಿಕನು, ಮಿತಭಾಷಿಯೂ ಅಹುದು. ಆತನಿಗೆ ಪಿತ್ರಾರ್ಜಿತವಾದ ಭೋಗಭಾಗ್ಯಗಳೇನೂ ಇರಲಿಲ್ಲ. ಇಪ್ಪತ್ತು ರೂಪಾಯಿನ ತಿಂಗಳ ಸಂಬಳದಿಂದಲೇ ಜೀವನವು ಸಾಗಬೇಕಿದ್ದಿತು.

ಕವಿಯು ಸಣ್ಣದೊಂದು ಗ್ರಂಥಭಾಂಡಾಗಾರವನ್ನು ಇಟ್ಟುಕೊಂಡಿದ್ದನು. ಅದರಲ್ಲಿ ಹಳಗನ್ನಡಗ್ರಂಥಗಳೇ ಬಹಳ. ಗದ್ಯಪುಸ್ತಕಗಳಲ್ಲಿ, "ಗುಲೇಬಕಾವಲಿ" "ಶೃಂಗಾರಶುಕಸಪ್ತತಿ" ಇವೇ ಮೊದಲಾದ ಕೆಲವು ಪುಸ್ತಕಗಳೂ ಇದ್ದುವು.

ಆಗ ದಿವಂಗತ ಬಿ. ವೆಂಕಟಾಚಾರ್ಯರ ಕೆಲಕೆಲವು "ನಾವೆಲ್ಲು"ಗಳು ಪ್ರಕಟವಾಗಿದ್ದುವು. ಕವಿಯು ಅವುಗಳನ್ನು ಉಡುಪಿಯ ವಕೀಲರೊಬ್ಬರಿಂದ ಎರವಾಗಿ ತಂದು, ಆತ್ಯಾತುರದಿಂದ ಓದುತ್ತಿದ್ದನು. ಹೀಗೆ ಓದಿದುದರ ಪ್ರತಿಫಲವಾಗಿ, ಕವಿಯು "ಗೋದಾವರಿ" ಎಂಬ ಚಿಕ್ಕ "ನಾವೆಲ್ಲ"ನ್ನು "ಸುವಾಸಿನಿ"ಗೆ ಕಳುಹಿದ್ದನು. ಆದರೆ ಅದು ಅಪೂರ್ಣವಾದುದರಿಂದ ಅದನ್ನು "ಪೂರ್ಣ" ಮಾಡಲಿಕ್ಕಾಗಿ ಹಿಂದಿರುಗಿಸಲಾಯ್ತು. ಮುಂದೆ ಅದು ಕವಿಯ ಅನನುಕೂಲತೆಯಿಂದ "ಪೂರ್ಣ"

ವಾಗಿ ಬರಲಿಲ್ಲ. ಹೀಗಾಗಿ ಕವಿಯ ಹೊಸಗನ್ನಡದ ಗದ್ಯಶೈಲಿಯ ರೀತಿಯನ್ನೇ, ಕತೆಯನ್ನು ಕಟ್ಟಿಬರೆಯುವ ಚಮತ್ಕಾರಬುದ್ಧಿಯನ್ನೇ, ಕರ್ಣಾಟಕವು ತಿಳಿಯದಂತಾಯಿತು.

ಕವಿಯು ಕ್ಷಣಕಾಲವನ್ನಾದರೂ ಹಾಳುಮಾಡುತ್ತಿರಲಿಲ್ಲ. ಪ್ರಾತಃಕಾಲ ಮೈಸೂರಿಂದ ಬರುತ್ತಿರುವ ತನ್ನ ಗ್ರಂಥಗಳ "ಪ್ರೂಫ" ನ್ನು ತಿದ್ದುವುದು ; ಆಮೇಲೆ ಶಾಲೆಯ ಕೆಲಸ; ಸಂಜೆ ಶ್ರೀ ಕೃಷ್ಣದರ್ಶನವನ್ನು ಮಾಡಿ, ಕೊಂಚ ಹೊತ್ತು ಪಿಟೀಲಿನ ಅಭ್ಯಾಸ; ರಾತ್ರಿ ೧೨ ಗಂಟೆಯವರೆಗೆ ಬರೆದೋದುವುದು.—ಇದು ಕವಿಯ ನಿತ್ಯಾಭ್ಯಾಸ.

ಕವಿಯ ತೀಕ್ಷ್ಣಬುದ್ಧಿಯು ಆತನ ಸಂಗೀತಾಭ್ಯಾಸದಿಂದ ವ್ಯಕ್ತವಾಗುತ್ತಿದೆ. ನಾಲ್ಕಾರು ತಿಂಗಳಲ್ಲಿ ಕಲಿಯಬಹುದಾದುದನ್ನು, ಒಂದೇ ತಿಂಗಳಲ್ಲಿ, ಈತನು ಲೀಲಾಜಾಲವಾಗಿ ಕಲಿತನೆಂದರೆ, ಈ ಬುದ್ಧಿಯಾದರೂ ಅದೆಷ್ಟು ಸೂಕ್ಷ್ಮವಾಗಿರಬೇಕು !

ಕವಿಗೆ ಯಕ್ಷಗಾನದ ಹುಚ್ಚು ಬಹಳ. ಪಟ್ಟಣದ ಸಮೀಪದಲ್ಲಿ ಆಗುತ್ತಿದ್ದ ಎಲ್ಲ "ದಶಾವತಾರದ ಆಟ" ಗಳನ್ನೂ ಆತನು ಬಿಡದೆ ನೋಡುತ್ತಿದ್ದನು.

ಕವಿಗೆ ಚಿತ್ರಗಳಮೇಲೆಯೂ ತುಂಬ ಪ್ರೀತಿ ಇರುತ್ತಿದ್ದಿತು. ಆದರೆ ಎಲ್ಲರಂತೆ ಆತನಿಗೆ "ರವಿವರ್ಮನ ಚಿತ್ರ" (ಬಣ್ಣದಿಂದಕೂಡಿದವುಗಳು) ಗಳಂತಹವುಗಳಮೇಲೆ ಅಷ್ಟೊಂದು ಅಪೇಕ್ಷೆ ಇದ್ದಂತೆ ತೋರುವುದಿಲ್ಲ. ಹೆಚ್ಚು ಬೆಲೆಯನ್ನು ಕೊಟ್ಟು, ಬರೇ ಕಪ್ಪುಬಣ್ಣದ ಚಿತ್ರಗಳನ್ನೇ ಆತನು ತರಿಸಿಟ್ಟುಕೊಂಡುದನ್ನು ನಾನು ನೋಡಿದ್ದೇನೆ.

"ಚಾವಡಿ ರಂಗಭಟ್ಟ" "ಮಹಾಲಕ್ಷ್ಮಿ" ಎಂಬೀ ಹೆಸರುಗಳು ಕವಿಯ ಬಾಯಿಂದ ಬರಲು ಏನಾದರೂ ಪ್ರತ್ಯೇಕ ಕಾರಣಗಳುಂಟೇ? ಎಂದು ಕವಿಯ ನಿಧನದ ಎಷ್ಟೋಕಾಲದ ಬಳಿಕ ಅವರ ಸಹೋದರರನ್ನು ಕುರಿತು ಪ್ರಶ್ನಿಸಿದ್ದರಲ್ಲಿ—"ಕವಿ ಉಡುಪಿಯಲ್ಲಿ ಅಂಗಸಾಧನೆಯ ಉಪಾ

ಧ್ಯಾಯನಾಗಿದ್ದಾಗ ಒಂದು ಹೊಟೇಲಿನಲ್ಲಿ ವಾಸಮಾಡುತ್ತಿದ್ದನೆಂದೂ, ಹೊಟೇಲಿನ ಯಜಮಾನನೊಬ್ಬ ಶಿವಳ್ಳಿಯ "ಭಟ್ಟ" ನೆಂದೂ, ಕವಿ ಬರೆದೋದುವುದಕ್ಕೆ ಆ ಹೊಟೇಲಿನ "ಚಾವಡಿ"ಯೇ ಸ್ಥಳವೆಂದೂ, ಭಟ್ಟನಿಗೆ "ಲಕ್ಷ್ಮೀ" ಎಂಬ ಹೆಸರಿನ ಮಗಳೊಬ್ಬಳಿದ್ದಳೆಂದೂ ಉತ್ತರ ದೊರಕಿದ್ದಿತು.

"ರಾಮಾಶ್ವಮೇಧ" ವನ್ನು ಕವಿ ಎಲ್ಲಿಯಾದರೂ, ಯಾವಾಗಲಾದರೂ, ಏತರ ಆಧಾರದಿಂದಲಾದರೂ ಬರೆದಿರಲಿ, ಸಂಸಾರಚಿತ್ರದಲ್ಲಿ ನಿಜವಾದ "ಮುದ್ದಣ-ಮನೋರಮೆ" ಯಾರೆಂದರೆ ಆ ಗಂಡ ಹೆಂಡಿರೇ—ಕವಿ ಮತ್ತು ಆತನ ಹೆಂಡತಿ. ಮನೆಗೆ ಬಂದ ಹೊಸದರಲ್ಲಿ, ಮುಗ್ಧೆಯಾದ ಆ ಚಿಕ್ಕವಳನ್ನು, ಈ ಕವಿ ಬೇಕುಬೇಕೆಂದೇ ಕೆಣಕಿ, ರೇಗಿಸಿ, ಅಳಿಸಿ, ನಗಿಸಿದುದನ್ನು ನಾನು ಕಂಡಿದ್ದೇನೆ. ಬಳಿಕ, ಕೊಂಚ ಕಾಲ ಕಳೆದಮೇಲೆ ಆಕೆಯೇ "ಮನೋರಮೆ" ಯಂತೆ, ಈ "ಮುದ್ದಣ" ನಿಗೆ ಉತ್ತರಕೊಡುವುದನ್ನೂ ಕೇಳಿದ್ದೇನೆ. ಇದನ್ನು ಕಂಡವನು "ರಾಮಾಶ್ವಮೇಧ"ವನ್ನೇನೂ ಓದಬೇಕಿಲ್ಲ. "ಕವಿ" ಯಾರೆಂದು ವಿಚಾರಿಸುವುದಕ್ಕಾದರೂ "ಲಕ್ಷ್ಮೀನಾರಾಯಣ"ನ ನೆಲೆಯೊಂದೇ ಸಾಕು.

ಕವಿಗೆ "ಸ್ವತಂತ್ರವಾದ ಅಚ್ಚ"ಗೆ ಬೇಕಾದ ಧನಬಲವಿರಲಿಲ್ಲ. ಹೆಸರನ್ನು ಕೊಟ್ಟರೆ "ಹಳೆಯ ಕವಿಗಳದಲ್ಲ" ವೆಂದು ಎಲ್ಲಿ ಹಿಂದಿರುಗುವುದೋ, ಮೂಲೆಗೆ ಬೀಳುವುದೋ ಎಂಬ ಭೀತಿಯೊಂದುಕಡೆ; ಹೊಸಕವಿಯಾದುದರಿಂದ, ತಪ್ಪೊಪ್ಪುಗಳೆಷ್ಟಿವೆಯೋ ಎಂಬ ಚಿತ್ತಚಾಂಚಲ್ಯವೊಂದು ಕಡೆ. ಈ ಮುಖ್ಯಕಾರಣಗಳಿಂದಲೇ ಕವಿ ತನ್ನ ಕಾವ್ಯಗಳಿಗೆ ನಿಜವಾದ ಹೆಸರನ್ನು ಕೊಟ್ಟಿಲ್ಲವೆಂದು ನಾನು ತಿಳಿಯುತ್ತೇನೆ.

ಎರಡನೆಯ ಭಾಗ

ಗ್ರಂಥಗಳ ವಿಮರ್ಶೆ

೫೮೦
೫೪೦



ಮ|| ಪಂಡಿತ ಮಹಾದೇವ ಪ್ರಭಾಕರ ಪೂಜಾರರವರು.



ಮ|| ಯು. ಮಂಗೇಶರಾಯರು, ಬಿ.ಎ., ಎಲ್.ಟಿ.

ಅದ್ಭುತರಾಮಾಯಣ.

(ಮ|| ಯು. ಮಂಗೇಶರಾವ್ ಬಿ. ಎ., ಎಲ್. ಟಿ., ಯವರಿಂದ)

ಅದ್ಭುತರಾಮಾಯಣವು ಕವಿವರ್ಯ ನಂದಳಿಕೆ ಲಕ್ಷ್ಮೀನಾರಣಪ್ಪನವರ ಮೂರು ಗ್ರಂಥಗಳೊಳಗೆ ಪ್ರಥಮಪ್ರಯತ್ನವೆಂಬುದರಲ್ಲಿ ಸಂಶಯವಿಲ್ಲ. ರಾಮಾಶ್ವಮೇಧದ ವಚನಮಾಧುರ್ಯವೂ ರಾಮಪಟ್ಟಾಭಿಷೇಕದ ಅರ್ಥಗಾಂಭೀರ್ಯವೂ ಇದರಲ್ಲಿ ಕಾಣವಾದರೂ ಪದಲಾಲಿತ್ಯದಲ್ಲಿಯೂ ಭಾಷಾಸರಲತೆಯಲ್ಲಿಯೂ ಇದು ಅವಕ್ಕೆ ಕಡಿಮೆಯಲ್ಲ. ರಾಮಾಶ್ವಮೇಧದಲ್ಲಿ ಪೌರಾಣಿಕನಾಗಿಯೂ ರಾಮಪಟ್ಟಾಭಿಷೇಕದಲ್ಲಿ ವರ್ಣಕಕವಿಯಾಗಿಯೂ ವಹಿಸಿದ ಸ್ವಾತಂತ್ರ್ಯವನ್ನು ಕೇವಲ ಅನುವಾದವಾದ ಅದ್ಭುತರಾಮಾಯಣದಲ್ಲಿ ಕವಿ ಕೈಕೊಳ್ಳಲಾರದೆ ಸಂಸ್ಕೃತಮೂಲಗ್ರಂಥವನ್ನು ಬಹಳವಾಗಿ ಅನುಸರಿಸಿದರೂ ಸಮಯೋಚಿತವಾದ ವರ್ಣನೆಗಳಿಂದ ಪುರಾಣದ ಛಾಂದಸಿಕೆಯನ್ನು ತೊಲಗಿಸಿ ಅದನ್ನು ಒಂದು ಶ್ರೇಷ್ಠವಾದ ವಚನಕಾವ್ಯವನ್ನಾಗಿ ಮಾಡಿರುವನು.

ಸಂಸ್ಕೃತ ಮೂಲಗ್ರಂಥವು ಪುರಾಣರೂಪವಾಗಿದೆ. ಶ್ರೋತೃಗಳಿಗೆ ಮತಾಭಿಮಾನವೂ ದೈವಭಕ್ತಿಯೂ ಅಧಿಕವಾಗುವಂತೆ ನೀತಿಬೋಧಕವಾದ ಒಂದು ಸತ್ಕಥೆಯನ್ನು ನಿರೂಪಿಸುವುದೇ ಪುರಾಣದ ಮುಖ್ಯೋದ್ದೇಶವಾದಾಗ, ಸತ್ಕಾವ್ಯವು ಈ ಉದ್ದೇಶದೊಂದಿಗೆ ವಾಚಕರ ಮನೋರಂಜನವನ್ನು ಮಾಡುವ ಧ್ಯೇಯವನ್ನು ಇಟ್ಟುಕೊಳ್ಳುವುದರಿಂದ, ಪುರಾಣವು ತತ್ವೋಪದೇಶದ ಕಡೆಗೆ ಅಧಿಕಾಸಕ್ತಿಯನ್ನು ತೋರುವಾಗ ಕಾವ್ಯವು ರಸನಿರೂಪಣದ ಕಡೆಗೆ ಲಕ್ಷ್ಯಕೊಡುವುದು ಸಹಜವಾಗಿದೆ. ಮೂಲಗ್ರಂಥದ ರಾಮನು ಹನುಮಂತನಿಗೆ ಉಪದೇಶಿಸಿದ ಸಾಂಖ್ಯಯೋಗ, ಭಕ್ತಿಯೋಗ ಮುಂತಾದ ಪುರಾಣೋಚಿತವಾದ ಭಾಗಗಳನ್ನು ಬಿಟ್ಟು, ಕಾವ್ಯಯೋಗ್ಯವಾದ ವಾಲ್ಮೀಕಿಋಷ್ಯಾಶ್ರಮ, ಶ್ರೀಮತೀಸೌಂದರ್ಯ, ರಾಮವನವಾಸ, ಸೀತಾವಿಯೋಗ ಮೊದಲಾದುವುಗಳನ್ನು ಸಮಯ

ವರಿತು ಕಥೆಯೊಂದಿಗೆ ಹೆಣೆದು ಕವಿ ತನ್ನ ಕಾವ್ಯವನ್ನು ಸುಶ್ರಾವ್ಯವನ್ನಾಗಿ ಮಾಡಿರುವನು.

ಅದ್ಭುತರಾಮಾಯಣವು ಒಂದು ಶಾಕ್ತೇಯ ಪುರಾಣವಾದುದರಿಂದ ಇದರಲ್ಲಿ ರಾಮನಿಗಿಂತಲೂ ಸೀತೆಗೆ ಹೆಚ್ಚಿನ ಪ್ರಾಧಾನ್ಯವು ಹೇಳಲ್ಪಟ್ಟಿರುವುದು. ದಶಕಂಠರಾವಣನನ್ನು ಜಯಿಸಿದ ರಾಮನಿಗೆ ಸಹಸ್ರಕಂಠರಾವಣನೊಡನೆ ಯುದ್ಧವು ಕಠಿನವಾಗಿ ಪರಿಣಮಿಸಿದಾಗ ಸೀತೆ ಅದ್ಭುತರೂಪವನ್ನು ತಾಳಿ ಆ ದೈತ್ಯನನ್ನು ಸಂಹಾರಮಾಡಿದುದನ್ನು ವರ್ಣಿಸಿರುವುದರಿಂದ ಈ ಗ್ರಂಥಕ್ಕೆ ಅದ್ಭುತರಾಮಾಯಣನಾಮವು ಸಾರ್ಥಕವಾಯಿತು. ಈ ಪುರಾಣಭಾಗವು ಬ್ರಹ್ಮಲೋಕದ ಶತಕೋಟಿರಾಮಾಯಣದಲ್ಲಿ ಪುಣ್ಯಪ್ರದವಾದುದೆಂದು ಹೇಳಿ ಮೂಲಕವಿ ಇದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಿರುವಾಗ ಅನುವಾದಕನು ಬ್ರಹ್ಮಲೋಕದಿಂದ ಕೆಳಗಿಳಿದ ಪಂಚವಿಂಶತಿಸಾಹಸ್ರರಾಮಾಯಣದಲ್ಲಿ—'ಧರೆಯಂ ಪೊರ್ದೆ ಸ್ವಾರಸ್ಯಂ ಗುಂದಿದ ಸ್ವರ್ಧುನೀಜಲಲೇಶಂಗಳ ತೆರದೆ ಸೀತಾಮಾಹಾತ್ಮ್ಯ ಮಾಧುರ್ಯಂ ಸಂಪೂರ್ಣಂ ಕಾಣಿಸದು' ಎಂಬ ಕೊರತೆಯನ್ನು ಕಾಣಿಸಿ ಅದ್ಭುತರಾಮಾಯಣದ ಶ್ರೇಷ್ಠತ್ವವನ್ನೇ ಸಮರ್ಥಿಸಿರುವನು.

ಅದ್ಭುತರಾಮಾಯಣದಲ್ಲಿ ಇತರ ರಾಮಾಯಣಗಳ ಕಥಾಸರಣಿಯಿಲ್ಲವಾಗಿ ಅದರ ಕ್ರಮವು ಬಹಳ ವಿಚಿತ್ರವಾಗಿ ಕಾಣಿಸುವುದು. ಪ್ರಾರಂಭದ ಪೀಠಿಕಾರೂಪದ ಎಂಟು ಆಶ್ವಾಸಗಳಲ್ಲಿ ಸೀತಾರಾಮರ ಅವತಾರ ಕಾರಣಗಳೂ ರಾಮಾಯಣದ ಕಥಾಕ್ರಮವೂ ವಿವರಿಸಲ್ಪಟ್ಟಿವೆ. ಶ್ರೀಮತೀಸ್ವಯಂವರ ಕಾಲದಲ್ಲಿ ನಾರದಪರ್ವತರನ್ನು ವಂಚಿಸಿ ವಿಷ್ಣು ಶ್ರೀಮತಿಯನ್ನು ಕೊಂಡೊಯ್ದುದರಿಂದ ಕುಪಿತರಾದ ಋಷಿಗಳಿಬ್ಬರೂ, ನಾರಾಯಣನು ಯಾವ ನರರೂಪದಿಂದ ತಮ್ಮನ್ನು ವಂಚಿಸಿದನೋ ಅದೇ ರೂಪದಿಂದ ಅಂಬರೀಷನ ಕುಲದಲ್ಲಿ ಜನಿಸಬೇಕೆಂದೂ ಶ್ರೀಮತಿಯೂ ಭೂಮಿಯಲ್ಲವತರಿಸಿ ಜನಕರಾಜನಲ್ಲಿ ಸೇರಬೇಕೆಂದೂ ತಮ್ಮನ್ನು ವಂಚಿಸಿ ಶ್ರೀಮ

ತಿಯನ್ನು ಕರೆದುಕೊಂಡುಹೋದ ಹಾಗೆಯೇ ಒಬ್ಬ ರಾಕ್ಷಸನು ಆತನ ಪತ್ನಿಯನ್ನು ಕದ್ದುಯ್ಯಬೇಕೆಂದೂ ಶಪಿಸಿ ರಾಮಾಯಣದ ಕಥಾಕ್ರಮವನ್ನು ನಿರ್ಧರಿಸಿದರು. ಅಂತೆಯೇ ಭಗವದ್ಧ್ಯಾನಮಹಿಮೆಯಿಂದ ಸಾಮಿಪ್ಯಪದವಿಯನ್ನು ಹೊಂದಿದ ಕೌಶಿಕನ ಉತ್ಸವಕಾಲದಲ್ಲಿ ಸಿರಿಯ ಪಡಿಯರತಿಯರಿಂದ ಮಾನಭಂಗವಡೆದ ನಾರದನ ಶಾಪದಿಂದ ಲಕ್ಷ್ಮಿ ಮಂದೋದರಿಯ ಮಗಳಾಗಿ, ಪಡೆದ ತಾಯಿಂದ ದೂರವಾಗಿ, ಜನಕರಾಜನಲ್ಲಿ ಸೀತೆಯಾಗಿರುವಂತೆಯೂ ನಿಶ್ಚಯವಾಯಿತು. ಪೀಠಿಕಾನಂತರ ಕಥಾಪ್ರವೇಶವೇ ಸಹಜವಾಗಿದ್ದಾಗ ನಾರದನ ಗಾನವಿದ್ಯಾಭ್ಯಾಸಕಥನವು ಅಪ್ರಕೃತವಾದರೂ ಚಮತ್ಕಾರವಾಗಿರುವುದರಿಂದ ಮನೋರಂಜಕವಾಗಿಯೇ ಇದೆಯೆನ್ನಬಹುದು. ತದನಂತರ ಸೀತಾಕಲ್ಯಾಣ, ರಾಮಪಿತೃವಾಕ್ಯಪರಿಪಾಲನ, ಸೀತಾಪಹರಣ, ಸುಗ್ರೀವಸಖ್ಯ, ರಾವಣಸಂಹಾರಗಳನ್ನು ಒಂದೆರಡು ಮಾತುಗಳಲ್ಲಿ ಸೂಚಿಸಿ (ಮೂಲಗ್ರಂಥದಲ್ಲಿ ಮಾತ್ರ ಸುಗ್ರೀವಸಖ್ಯದ ಮೊದಲು ಹನೂಮಂತನಿಗೆ ರಾಮನು ದಿವ್ಯರೂಪವನ್ನು ತೋರಿದಾಗ ಮಾಡಿದ ತತ್ತ್ವೋಪದೇಶವು ಐದಾರು ಆಶ್ವಾಸಗಳಲ್ಲಿ ವರ್ಣಿತವಾಗಿದೆ.) ಕವಿ ಉತ್ತರರಾಮಚರಿತ್ರೆಯನ್ನುಪಕ್ರಮಿಸುವನು. ಸಭೆಯಲ್ಲಿ ಕೂಡಿದ ಋಷಿಗಳು ರಾಮನ ಸಾಹಸಕೃತ್ಯಗಳನ್ನು ಹೊಗಳಿದಾಗ ಸೀತೆ ಅವನ್ನು ಕಡೆಗಣಿಸಿ ಸಹಸ್ರಕಂಠರಾವಣನ ಪರಾಕ್ರಮವನ್ನು ಕೊಂಡಾಡಲು, ರಾಮನು ವೀರಾವೇಶದಿಂದ ಆತನನ್ನು ಜಯಿಸುವೆನೆಂದು ಸೇನಾಸಮೇತನಾಗಿ ಹೋಗಿ ಆತನೊಡನೆ ಘೋರಯುದ್ಧವನ್ನು ಮಾಡಿ ತಾನೇ ಸೋತುಹೋಗಲಾಗಿ, ಸೀತೆ ಕರಾಳರೂಪವನ್ನು ತಾಳಿ ಸಹಸ್ರಕಂಠನ ರುಂಡಗಳನ್ನು ಚೆಂಡಾಡಿ ರಾಮನಿಂದಲೂ ಸಮಸ್ತದೇವತೆಗಳಿಂದಲೂ ಕೊಂಡಾಡಿಸಿಕೊಂಡುದೇ ಮುಂದಿನ ಕಥಾಸಾರಾಂಶವಾಗಿದೆ.

ಪ್ರಸ್ತುತ ಕವಿ ಈ ಪುರಾಣಕಥೆಯನ್ನು ಹಳಗನ್ನಡದಲ್ಲಿ ಬರೆದರೂ ಪ್ರಾಚೀನಕವಿಗಳ ದೀರ್ಘವಾಕ್ಯಪದ್ಧತಿಯನ್ನನುಸರಿಸದೆ ತಿರುಳ್ಗನ್ನಡದ

ಬಿರುನುಡಿಗಳಿಂದೊಡಗೂಡಿದ ಹೊಸ ಬೆಡಗಿನ ವಾಕ್ಯಸರಣಿಯಿಂದ ವಾಚಕರ ಚಿತ್ತವನ್ನಾಕರ್ಷಿಸುವನು. ಪದಗಳ ನುಣ್ಪು ನುಡಿಗಳ ಬಿಣ್ಪು ಮಾತಿನ ಇಂಪೂ ರಸದ ಪೆಂಪೂ ಈ ಕಾವ್ಯದಲ್ಲಿ ಗುಂಪುಗುಂಪಾಗಿ ದೊರೆಯುವುದರಿಂದ ಅವಕ್ಕೆ ದೃಷ್ಟಾಂತಗಳನ್ನು ಕೊಡುವ ಉದ್ಯೋಗವು ಸಮಗ್ರ ಗ್ರಂಥವನ್ನು ಬರೆದಿಡುವಷ್ಟೇ ಪ್ರಯಾಸಕರವಾಗಿ ಪರಿಣಮಿಸೀತು. ಆದರೂ ದಿಙ್ಮಾತ್ರವಾಗಿ ಕೆಲವನ್ನು ಇಲ್ಲಿ ಕೊಡುವೆನು.

*' ಬರೆಯಬಾರದ ತಿದ್ದಬಾರದ ಕಡೆದರೆ | ದೊರೆಯಬಾರದ ರೂಪಿನಭವ 'ನನ್ನು—

' ಕಾಲ್ಗಳಿಲ್ಲದೆಯುಂ ಪರಿದಪಂ; ಕೆಯ್ಗಳಿಲ್ಲದೆಯುಂ ಪಿಡಿದಪಂ; ಕಣ್ಗಳಿಲ್ಲದೆಯುಂ ಕಂಡಪಂ; ಕಿವಿಗಳಿಲ್ಲದೆಯುಂ ಕೇಳ್ದಪಂ; ಅಂತಾತಂ ವಿಶ್ವಮೆಲ್ಲಮುಂ ತಿಳಿದೊಡಂ ವಿಶ್ವಮೆಂತುಮವನನಱಿಯದು."

ಎಂದು ದೇವರನ್ನು ಬಣ್ಣಿಸದೆ ಬಣ್ಣಿಸಿದ ಬಿನ್ನಣದ ನುಡಿ ಯಾರ ಚಿತ್ತವನ್ನು ಸೋಲಿಸದು ?

ಬಾಲೆಯಾದ ಸೀತೆಗೆ ದಶಕಂಠಸಹಸ್ರಕಂಠರ ವೃತ್ತಾಂತವನ್ನರುಹಿದ ಬ್ರಾಹ್ಮಣನು ಅವರನ್ನು ಹಿರಿದಾಗಿ ವರ್ಣಿಸಿ ಕೊನೆಗೆ ಸಂಗ್ರಹವಾಗಿ—

"ಪೆಣ್ಣೆ ! ಆಯಿರ್ವರ ಪೆಸರನೆ ಕೇಳ್ದೊಡಂ ರೋಮಾಂಚಂ ಪುಟ್ಟುಗುಂ. ಅವರೊಳುಂ ಪಿರಿಯನಿಂ ಪಿರಿದು. ಎಂತಿವರ ಪುಟ್ಟೊ; ಪುಟ್ಟಿಗೆಂತೆಂತು ಪೆಸರೊ; ಪೆಸರ್ಗೆಂತೆಂತು ಮೊಗಂಗಳೊ; ಮೊಗಂಗಳ್ಗೆಂತೆಂತು ಮೆಯ್ಯೊ; ಮೆಯ್ಗೆಂತೆಂತು ಬಲಮೊ; ಬಲಕ್ಕೆಂತೆಂತು ಬೀರಮೊ; ಮೇಣಾಬೀರಕಿನ್ನೆಂತೆಂತು ಪೆಂಪೊ ಕಾಣೆಂ, ಕೇಳೆಂ ಶಿವಶಿವಾ!"

ಎಂದು ಆಡಿದ ಮಾತುಗಳು ' ಈಗಳುಮೆನ್ನ ಮನದೊಳ್ತಗುಳ್ದಿರ್ಕುಂ ' ಎಂದು ಸೀತೆ ಹೇಳಿದುದರಲ್ಲಿ ಆಶ್ಚರ್ಯವೇನು ? ಅಂತಹ ಮಾತುಗಳು ಮನಸ್ಸಿನಲ್ಲೇ ನಾಟಿಕೊಳ್ಳುವುದರಲ್ಲಿ ಸಂದೇಹವಿಲ್ಲ.

ರಾಮನ ನರಸೇನೆ ಯುದ್ಧರಂಗದಿಂದ ಮುರಿದೋಡಿದುದನ್ನು—

---

* ಭರತೇಶವೈಭವ.

"ಕೆಲರ್ಗೆ ಮನಂ ಮುಂಬರಿಯದು; ಕೆಲರ್ಗೆ ಮನಂ ಮುಂಬರಿದೊಡಂ ಕಾಲ್ಪರಿಯದು; ಕೆಲರ್ಗೆ ಮನದೊಡನೆ ಪಜ್ಜೆಯುಂ ಪಜ್ಜೆಗೆಟ್ಟುದು; ಕೆಲರ್ ಬರುತ ಬರುತ ಕೈಮುಗಿದರ್; ಕೆಲರ್ ಬೆಂಗೊಟ್ಟರ್; ಕೆಲರ್ ಕಾಲ್ಗೆ ಬುದ್ಧಿಯೊರೆದರ್. ಇಂತಾದೊಡಂ ಕೆಲರ್ ದಿಟಮನಂಗೆಯ್ದು ಪಗೆಗಳಂ ಪೊಯ್ಯಲ್ ಪೋದರ್. ಇವರೊಳಮಾಜಿಗೆ ಬರ್ಪನಿತರೊಳ್ ದಿಟ್ಟತನಕಟ್ಟುಡಿದು ತನ್ನಿಂ ತಾನೆ ಕೆಲರ ಕೈದುಗಳ್ ಜಗುಳ್ದುವು. ಕೆಲರ್ ಮಱವಟ್ಟುಪೋದರ್............ಬಯಲ್ನುಡಿಯಿನೇಂ? ನರಸೇನೆಯುಂ ಸಂಪೂರ್ಣಂ ಸೋಲ್ತುದು."

ಎಂದು ಕವಿ ಆಡಿದ ನುಡಿಗಳು ಯುದ್ಧವು ಅಸಮಬಲವಾದಾಗ ಬಲಗುಂದಿದ ಸೇನೆ ಎದೆಯಳಿದು ಮಾಡುವ ಯುದ್ಧಕ್ರಮವನ್ನು ಸರಸವಾಗಿ ತಿಳಿಸುವುವು.

ರಾಮನು ಯುದ್ಧರಂಗದಲ್ಲಿ ಮೂರ್ಛೆಹೋದಾಗ ರಕ್ಕಸರನ್ನು ಕೊಂದು ತಮ್ಮನ್ನು ಕಾಪಾಡಬೇಕೆಂದು ತಪಸ್ವಿಗಳು ಸೀತೆಯನ್ನು ಬೇಡುತ್ತಿದ್ದಹಾಗೆ

"ತಿರ್ದಿದ ಕೂಂದಲ್ ನಿಗುರ್ದು ಕೆದರ್ದಿರೆ; ಪೆಱನೊಸಲ್ ಪೆರ್ನೊಸಲಾಗಿರೆ; ಎಸಳ್ಗಣ್ ಗುಳಿಗಣ್ಣಾಗೆ; ನಗೆಮೊಗಂ ಉರಿಮೊಗವಾಗೆ; ಸುಲಿಪಲ್ ನಿಡುವಲ್ಲಾಗೆ; ತಳಿರ್ನಾಲಗೆ ಜೋಲ್ನಾಲಗೆಯಾಗೆ ಸೀತೆ ಕರಾಳಮುಖಿಯಾದಳ್. ಕಕ್ಕಸಮಾದ ನಾಲ್ದೋಳುಂ ಕಲ್ಬಿರ್ದೆಯುಂ ಬಲ್ದೊಡೆಗಳುಂ ಮೊಗಕ್ಕೆ ತಕ್ಕುವಾದುವು. ಗಳದ ರುಂಡಮಾಲೆಯುಂ ಕೆಯ್ಯ ಎಲ್ವುದೊಡವುಂ ದಿಟ್ಟಿಸಲ್ತೀರದು. ಇಂತು ಲೋಕೋತ್ತರ ಸುಂದರಿಯಪ್ಪ ಸೀತೆಯೊಡನೆ ಅದ್ಭುತರೂಪದಿಂ ಮಾಕಾಳಿಯಾಗಿ ದಿಮ್ಮನೆ ತಿರೆಗೆ ಧುಮ್ಮಿಕ್ಕುತೆ, ಕೋರೆವಲ್ಗಳ್ ಮಿನುಗೆ, ತುಟಿಯಲುಗೆ, ನಾಲಗೆನೀಡೆ ಕಣ್ಣಾಪೆ ಊಟಳದಂತೆ ಸುತ್ತೆ, ಸೂಲಂ ಕಡುಗಂ ತಲೆಯೋಡು ಇಂತಿವುಗಳಂ ಪಿಡಿದು ಪಕ್ಕಿವೇಗದಿಂ ರಕ್ಕಸನೆಡೆಗೆ ಸಾರ್ತಂದಳ್."

ಎಂದಾಡಿದ ಕವಿಯ ನುಡಿಗಳು ಸೀತೆಯ ಕರಾಳರೂಪವನ್ನು ವಾಚಕರ ಚಿತ್ತಭಿತ್ತಿಯಲ್ಲಿ ಒತ್ತಿ ಬರೆಯದಿರಲಾರವು.

ವಿಷಯ ಪರಿಪೋಷಕವಾದ ವರ್ಣನಾಭಾಗಗಳಲ್ಲಿಯೂ ಕವಿ ವಿಚಿತ್ರಕಲ್ಪನೆಗಳಿಗೆ ಮನಗೊಡದೆ ವಸ್ತುಪ್ರಕೃತಿಯನ್ನೇ ಪರಿಗಣಿಸಿ ಜಾತ್ಯಲಂಕಾರದಿಂದ ಮನೋಜ್ಞವಾಗಿ ವರ್ಣಿಸಿ ವಿಷಯಪರಿಜ್ಞಾನವನ್ನು

ವಾಚಕರಿಗೆ ನೇರವಾಗುಂಟುಮಾಡುವನು. ಅತಿಶಯೋತ್ಪ್ರೇಕ್ಷಾದ್ಯಲಂಕಾರಗಳನ್ನರ್ಪಿಸದೆ ಮೃದುಮಧುರವಾದ ವಚನಗಳಿಂದಲೇ ಕವಿತಾವನಿತೆಯನ್ನೊಲಿಸಬಹುದೆಂದು ಈ ಕವಿಯ ವರ್ಣನಾಕ್ರಮದಿಂದ ಧಾರಾಳವಾಗಿ ತಿಳಿದುಕೊಳ್ಳಬಹುದು. ತಮಸಾನದೀತೀರದಲ್ಲಿ ವಾಲ್ಮೀಕಿ ಋಷ್ಯಾಶ್ರಮವಿದ್ದಿತೆಂದೆಂದಷ್ಟೆ ಹೇಳದೆ ಆ ವನಪ್ರದೇಶವು ಮುನಿಜನವಾಸಕ್ಕೆಷ್ಟು ಯೋಗ್ಯವಾಗಿದ್ದಿತೆಂಬುದನ್ನು ವಾಚಕರು ತಿಳಿಯುವಂತೆ ಅಲ್ಲಿಯ ಮರಬಳ್ಳಿಗಳನ್ನೂ ತಾವರೆಗೊಳಗಳನ್ನೂ ಇಂಪಾಗಿ ಹಾಡುವ ಹಕ್ಕಿಗಳನ್ನೂ ಬಣ್ಣಿಸಿದ ಬಳಿಕ—

"ಆರೆಬರ್ ಒಂದೆಡೆಯೊಳ್ ಪಱಿವಾತಂ ನುಡಿಯುತೆ ಜನ್ನದಾರವಂ ಪೊಸೆಯುತ್ತಿರ್ಪರ್; ಕೆಲರ್ ಗರವಟಿದ ಸನ್ನಿಯುಮನಣೆಗೆಯ್ಯುತಿರ್ಪರ್; ಕೆಲರ್ ಸಂದಿಗ್ಧವೇದವಾಕ್ಯಂಗಳಂ ವಿಚಾರಿಸುತಿರ್ಪರ್; ವಟುಗಳೊಳರೆಬರ್ ಪೆಱತೊಂದೆಡೆಯೊಳ್ ಫಲಸಮಿತ್ಕುಶಂಗಳಂ ಕೊಯ್ಯುತಿರ್ಪರ್; ಆರೆಬರ್ ನಾರುಡೆಯಂ ನೀರೊಳೊಗೆಯುತಿರ್ಪರ್;....ಕೆಲಬರ್ ಹವಿಬದೆಯರ ನೆಗಳ್ತೆಯಂ, ಕೆಲರ್ ಪುಣ್ಯಕಥಾವಿಶೇಷಂಗಳಂ ಬೆಸಗೊಳುತಿರ್ಪರ್; ಪೂಗಿಡುಗಳ ಪಾತೆಗಳ್ಗೆ ನೀರೆಱೆಯುತಿರ್ಪರ್ ಕೆಲರ್."

ಎಂದು ಕವಿ ಬರೆದ ಆ ಮುನಿಗಳ ದಿನಚಾರಿತ್ರದ ನಿಜಚಿತ್ರವನ್ನು ಕಂಡ ಸಂಸಾರಸಂಕಷ್ಟಸಂತಪ್ತರಾದ ವಾಚಕರ ಹೃದಯವು ಆ ಪ್ರಶಾಂತ ಪ್ರದೇಶದ ಸುಖಜೀವನದ ಸವಿಯಿಂದ ತಂಪಾಗದಿರದು.

ಶ್ರೀಮತೀ ವರ್ಣನೆಯಲ್ಲಿ ಕವಿ ತನ್ನ ಕಲಾಕೌಶಲವನ್ನು ಚೆನ್ನಾಗಿ ಕಾಣಿಸಿರುವನು. ಸ್ವಯಂವರಮಂಟಪಕ್ಕೆ ಕಾಲಿಡುವ ಶ್ರೀಮತಿಯನ್ನು ಮೂಲಕವಿಯು ಛಾಂದಸಿಕೆಯ ಒಂದೆರಡು ಮಾತುಗಳಿಂದ ಬಣ್ಣಿಸಿದುದನ್ನೊಪ್ಪದೆ ನಾರದ ಪರ್ವತೇಶ್ವರರ ಮೋಹಕ್ಕೆ ಕಾರಣವಾದ ಪ್ರಥಮದರ್ಶನಸುಖವನ್ನಿತ್ತ ಶ್ರೀಮತಿಯನ್ನು—

"ಪಱಿಮೆಯಂತೆ ಕರ್ಪಿಡಿದ ಮುಂಗುರುಳುಂ, ಪಾವಿನ ಪೆಡೆಯಂತೆ ಸರಿಗೊಂಡ ಜಡೆಯುಂ, ಚಂದಿರನಂತೆ ಸಂತಸಮಂ ಪುಟ್ಟಿಪ ಮೊಗವುಂ, ಕಾವನ ಸಿಂಗಾಡಿಯಂತೆ ಬಾಗಿರ್ಪ ಪುರ್ಬುಂ, ನೀರ್ವೂವೆಸಳಿಂತೆ ನೀಲಮಪ್ಪ ಕಣ್ಣುಂ........ಕನ್ನಡಿಯಂತೆ

ಪೊಳೆವ ಕೆಕ್ಕೆಯುಂ, ಬೆಳ್ದಿಂಗಳಂತೆ ಪಸರಿಪ ನಗೆಯುಂ........ಒಂದಱಮೇಲೊಂದ ಱ್ಕಜವಮಂ ಪುಟ್ಟಿಪುವು."

ಎಂದು ಮನೋಹರವಾಗಿ ವರ್ಣಿಸಿ ಮುನಿಗಳ ಚಿತ್ತವನ್ನು ಸೂರೆಗೊಳ್ಳುವ ಸೌಂದರ್ಯಾತಿಶಯವು ಆ ಕನ್ಯಾಮಣಿಯಲ್ಲಿದ್ದಿತೆಂಬುದನ್ನು ವಾಚಕರಿಗೆ ಸ್ಪಷ್ಟಗೊಳಿಸಿರುವನು.

ರಾಮನಿಗೆ ವನವಾಸವು ಪ್ರಾಪ್ತವಾಗಲು ಆತನು ಮನಗುಂದದೆ ಗೋದಾವರೀ ತೀರದಲ್ಲಿ—

"ಕಾಡೇ ನಾಡಾಗೆ, ಎಲೆವನೆಯುರವಮನೆಯಾಗೆ ಸಂತಸದೊಳಿರ್ದಂ. ಲಕ್ಷ್ಮಣನ ಣ್ಣನನಯ್ಯನಂತೆ ಸೀತೆಯಂ ಮಾತೆಯಂತೆ ಭಾವಿಸಿ ನಿಚ್ಚಂ ಸೇವಿಸುತಿರ್ಪಂ. ಸೀತೆ ಯುಂ ಪತಿಯೆ ಗತಿಯೆಂದು ಬಗೆದಾವಗಂ ಪೂಜಿಸುತಿರ್ಪಳ್........ರಾಘವನೋ ರೊರ್ಮೆ ಮಡದಿಗೆ ವನದಿರವಂ ಬಿತ್ತರಿಪಂ; ಕಣ್ಣದಿರೊಳ್ ಬರ್ಪ ಬಗೆಬಗೆಯ ಮಿಗಂ ಗಳಂ ಬಣ್ಣಿಪಂ; ಪಲವಣ್ಣದ ಪಕ್ಕಿಗಳಂ ತೋಱಿಪಂ; ಪೂವಳ್ಳಿಗಳ ಪೆಸರನೊರೆವಂ; ಸೀತ ಪತಿ ಬೇಂಟೆಯಾಡಿ ಬರೆ ಕೆಯ್ಯ ಬಿಲ್ಲಂ ಕೊಂಡಿಟ್ಟು ಆಸನಮನಿತ್ತುಪಚರಿಸು ವಳ್. ಮೇಣ್ ಲಕ್ಷ್ಮಣಂ ಪಣ್ಗಳಂ ತಿಱಿತಂದು ಇವರ್ಗಮರ್ಪಿಸಿ ತಾನಿರುಳೊಳ ವರ್ಗೆ ಕಾವಲಾಗಿರ್ಪಂ."

ಎಂದು ಚಿತ್ರಿಸಿ ಧೀರನಾದವನು ಎಂತಹ ಕಷ್ಟಗಳಲ್ಲಿಯೂ ಸುಖವಾಗಿ ಸಂತುಷ್ಟಿಯಿಂದಿರಬಹುದೆಂದು ಕವಿ ಚೆನ್ನಾಗಿ ಬೋಧಿಸಿರುವನು.

ಕವಿಯ ವರ್ಣನಾಶಕ್ತಿಯನ್ನೂ ಕಲಾಕೌಶಲವನ್ನೂ ಎಷ್ಟು ಬಣ್ಣಿಸಿದರೂ ಸ್ವಲ್ಪವೇ ಸರಿ. ಆದರೆ ಅತಿವಿಸ್ತರಕ್ಕೆ ಯತ್ನಿಸದೆ ಷೋಡಶ ಕಲೆಗಳಂತಿರುವ ಷೋಡಶಾಶ್ವಾಸಗಳಲ್ಲಿ ತನ್ನ ಇಷ್ಟದೇವತೆಯಾದ ಶ್ರೀರಾಮಚಂದ್ರನ ಲೀಲಾನಾಟಕವನ್ನು ತ್ವರೆಗಟ್ಟಿ "ಪದ್ಯಂ ವಧ್ಯಂ, ಗದ್ಯಂ ಹೃದ್ಯಂ" ಎಂಬ ತನ್ನ ತತ್ವವನ್ನು ವ್ಯಕ್ತಗೊಳಿಸಿ ಕರ್ಣಾಟಕ ವಚನ ಸಾಹಿತ್ಯಕ್ಕೆ ಒಂದು ನವಪಥವನ್ನು ತೋರಿರುವನೆಂದು ಹೇಳಿ ಈ ಪ್ರಶಂಸೆಯನ್ನು ಇಲ್ಲಿಗೆ ಮುಗಿಸುವೆನು.

ಶ್ರೀರಾಮಪಟ್ಟಾಭಿಷೇಕ

(ಮ|| ರಾ|| ಪಂಡಿತ ಮಹಾದೇವ ಪ್ರಭಾಕರ ಪೂಜಾರರವರಿಂದ)

ಯಾತಾ ಯಾಂತಿ ಚ ಯಾತಾರಃ ಲೋಕಾಃ ಶೋಕಾಧಿಕಾ ಭುವಿ |
ಕಾವ್ಯಸಮ್ಬಂಧಿನೀ ಕೀರ್ತಿಃ ಸ್ಥಾಯಿನೀ ನಿರಪಾಯಿನೀ ||

ಈ ಸಂಸಾರಸಾಗರದಲ್ಲಿ ಸುಖದುಃಖರೂಪವಾದ ಅಲೆಗಳ ಹೊಡೆತದಿಂದ ದಿಗ್‌ಭ್ರಮೆ ಹೊಂದಿ ಯಾವ ಉದ್ದೇಶ್ಯವನ್ನೂ ಕೊನೆಗಾಣಿಸದೆ ಲೋಕಯಾತ್ರೆಯನ್ನು ಮುಗಿಸುವವರೇ ಬಹುಜನರು. ವಕ್ತಾರನು ದಶಸಹಸ್ರಕ್ಕೊಬ್ಬನಾಗುವನೆಂದೂ, ದಾತಾರನು ಲಕ್ಷಕ್ಕಾದರೂ ಒಬ್ಬನಾಗುವನೋ ಇಲ್ಲವೋ ಎಂದೂ ಬಲ್ಲವರು ಹೇಳುವುದುಂಟು. ಆದರೆ ಕವಿಯು ಕೋಟಿಗೊಬ್ಬನೂ ಆಗುವುದಿಲ್ಲವೆಂದು ಹೇಳಬಹುದು. ಕವಿಯು ಲೋಕದಮೇಲೆ ಮಾಡುವ ಉಪಕಾರವು ಅಪಾರವಾದುದರಿಂದ ಆತನ ಕೀರ್ತಿಯು ಶಾಶ್ವತಿಕವಾಗಿ ಬೆಳಗಬೇಕಾಗಿದ್ದರೂ ಕೆಲವು ಕವಿಗಳಿಗೆ ಮಾತ್ರ ಈ ಯೋಗವು ವಿಲಂಬದಿಂದ ಬರುವುದುಂಟು. ಅದಕ್ಕೆ ಕವಿಕೃತಿಯ ನ್ಯೂನತೆಯು ಕಾರಣವಾಗಿರದೆ ಹಲವೆಡೆ ಜನತೆಯ ಅಸಹೃದಯತೆಯೇ ಕಾರಣವಾಗುತ್ತಿರುವುದು.

ಶ್ರೀರಾಮಪಟ್ಟಾಭಿಷೇಕವನ್ನು ಬರೆದ ಕವಿಯು ಕನ್ನಡಭಾಷೆಗೆ ಸ್ವಲ್ಪವೂ ಪ್ರಾಶಸ್ತ್ಯವಿಲ್ಲದ ಕಾಲದಲ್ಲಿ ಅದಕ್ಕೆ ಪ್ರಾಶಸ್ತ್ಯವನ್ನುಂಟುಮಾಡುವುದಕ್ಕೆ ಕಾಲೋಚಿತ ಗ್ರಂಥರಚನೆಯಿಂದ ಹೆಣಗಾಡಿದವರಲ್ಲಿ ಅಗ್ರಗಣ್ಯನು. ಈಚೆಗೆ ಕೆಲವು ವರ್ಷಗಳಿಂದ ಈ ಕವಿಗೂ, ಈತನ ಗ್ರಂಥಗಳಿಗೂ ಬೆಲೆ ಬಂದಿರುವುದು ಕನ್ನಡಿಗರಲ್ಲಿ ಸಹೃದಯತೆಯುಂಟಾದುದನ್ನು ವ್ಯಕ್ತಗೊಳಿಸುತ್ತಿರುವುದು.

ಈ ಕವಿಯ ಪರಿಚಯವನ್ನು ಪಾಠಕರು ಈ ಮೊದಲು ಮಾಡಿಕೊಂಡಿರುವರು. ಈ ಕಾಲದಲ್ಲಿ ಆತನ ಕಾವ್ಯಗಳ ಪರಾಮರ್ಶವು ಅಪ್ರಸ್ತುತ

ವಾಗಲಾರದೆಂದು ನಂಬಿ ಆತನ ಕೃತಿಗಳಲ್ಲೊಂದಾದ ಶ್ರೀರಾಮಪಟ್ಟಾಭಿಷೇಕವೆಂಬ ಕಾವ್ಯದ ಪರಿಚಯವನ್ನು ಸ್ವಲ್ಪಮಟ್ಟಿಗೆ ಮಾಡಿಕೊಡಬೇಕೆಂದು ಪ್ರಯತ್ನವು ಮಾಡಲ್ಪಟ್ಟಿದೆ.

ಕವಿಯು ಕಾವ್ಯವನ್ನು ಬರೆವುದಕ್ಕೆ ಮೊದಲುಮಾಡುವಾಗ ತನ್ನ ಕಾವ್ಯವು ಜನದ ಆದರಕ್ಕೆ ಪಾತ್ರವಾದೀತೋ ಇಲ್ಲವೋ, ಬಲ್ಲವರು ಅದನ್ನು ಮೆಚ್ಚುವರೋ ಇಲ್ಲವೋ ಎಂಬಿವೇ ಮೊದಲಾದ ಸಂದೇಹವು ತನ್ನನ್ನು ಬಾಧಿಸಿದರೂ ಆ ಸಂದೇಹವನ್ನು ಬದಿಗಿಡುವನು. ಹಲವುಜನ ಮಹಾಕವಿಗಳು ಕಾವ್ಯಗಳನ್ನು ಬರೆದಿರುವಾಗ ನಿನ್ನ ಕಾವ್ಯದಿಂದೇನು ಪ್ರಯೋಜನ? ಎಂಬಾಕ್ಷೇಪಣೆಗೆ ಆತನು ಅವಕಾಶವನ್ನೇ ಈಯನು. ತಿರುಗಿ—

ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿಸಂಚಯಮೀಧರಿತ್ರಿಯೊ |
ಳ್ಪುದಿದಿರೆ ನೋಡಿ ತುಷ್ಟಿವಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ ||
ಗದಿಪರೊ ಬೇರೆನುತ್ತ ನುಡಿವಲ್ಕ್ಯಜಕಾರನವಂಗೆ ಪುತ್ರಸಂ |
ಪದದೊಡವೇಕೆ ಬೇರೆ ಪರಪುತ್ರರನೀಕ್ಷಿಪ ತುಷ್ಟಿ ಸಾಲದೇ ||

(ರಾಜಶೇ. ವಿ. ೧-೩೫)

ಈಮೇರೆಗೆ ಪ್ರಶ್ನೆಮಾಡುವನು.

ಕವಿಗಳೇನೋ ಹೀಗೆ ಕಾವ್ಯರಚನೆಗೆ ಮುಂದುವರಿವರಾದರೂ ಓದುವವರು ವಿವೇಚನೆಮಾಡಬೇಡವೇ? ಕಾವ್ಯವೆಂದು ಹೆಸರಿದ್ದಮಾತ್ರದಿಂದ ಯಾವುದೊಂದು ಓದುವುದಕ್ಕೆ ತಕ್ಕುದೇ ತಗದುದೇ ಎಂದು ನೋಡಬೇಕಲ್ಲವೇ? ಹೀಗೆ ನೋಡಹೋದರೆ 'ಶ್ರೀರಾಮಪಟ್ಟಾಭಿಷೇಕ' ಎಂಬ ಕಾವ್ಯವೊಂದಿರುವುದೆಂಬುದೇ ಹಲವರಿಗೆ ತಿಳಿಯದಿರುವಾಗ ಆ ಕಾವ್ಯವು ಓದಲು ತಕ್ಕುದೆಂದೂ ವಿಮರ್ಶಿಸಲು ಅರ್ಹವೆಂದೂ ನೀವು ಹೇಳುವುದು ಸರಿಯೇ? ಆದಿಕವಿಯೆನಿಸಿಕೊಂಡ ಪಂಪನ ಜೋಡುಕಾವ್ಯಗಳಿಗೆ ಇದೇನು ಜೋಡಿಯೇ? ಆರಾತೀಯ ಕವಿಗಳಾರೂ ಒಡೆಯಲಾರದ ವಾಗ್ದೇವಿಯ ಭಂಡಾರದ ಮುದ್ರೆಯನ್ನೇ ಒಡೆದು "ಫಣಿಪತಿಯ

ಫಣಾರತ್ನಮುಮಂ, ರನ್ನನ ಕೃತಿರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೇ'' ಎಂದು ತನ್ನ ಕಾವ್ಯದ ಪರೀಕ್ಷೆಯುಕೂಡ ಅಪಮಾನಕರವೆಂದು ಹೆಮ್ಮೆ ಬಡುವ ರನ್ನಕವಿಯ ಕೃತಿಗಿದು ಎಣೆಯೇ? ಅಗ್ಗಳನೇಮಿಚಂದ್ರರ ಸರಸ ಕಾವ್ಯಗಳಿಗಿದು ಸಾಟಿಯೇ? ಬೇಡ; ಅರ್ವಾಚೀನ ಕವಿಗಳಾದ ಷಡ ಕ್ಷರಿ ಲಕ್ಷ್ಮೀಶರ ಕಾವ್ಯಗಳನ್ನಾದರೂ ಇದು ಹೋಲುವುದೇ ಎಂದು ಹಲವರು ಸಂದೇಹಪಡಬಹುದು.

ಯಾವುದೊಂದು ಕಾವ್ಯದ ಯೋಗ್ಯತೆಯನ್ನು ನಿರ್ಣಯಿಸುವಾಗ ನಾವು ಅದು ಹುಟ್ಟಿದ ಕಾಲಪರಿಸ್ಥಿತಿಯನ್ನು ಮುಖ್ಯವಾಗಿ ನೋಡ ಬೇಕು; ಬಳಿಕ ಕಾವ್ಯದ ವಿಷಯ, ಕವಿತ್ವಶಕ್ತಿ, ರಸಾಲಂಕಾರಾದಿ ಆಸ್ವಾ ದ್ಯವಿಷಯಗಳು ಇವುಗಳನ್ನು ನೋಡಬೇಕು. ಹೀಗೆ ಕಾವ್ಯವನ್ನು ಪರೀ ಕ್ಷಿಸಿ ಯೋಗ್ಯತೆಯನ್ನು ಕಂಡುಹಿಡಿಯುವುದಾದರೆ 'ಪಟ್ಟಾಭಿಷೇಕ' ಕಾವ್ಯವು ಆದರಣೀಯವಾಗುವುದೆಂದು ಹೇಳಲು ಯಾವ ಸಂಶಯವೂ ಇಲ್ಲ. ಮೊದಲು ಈ ಕಾವ್ಯವು ಹುಟ್ಟಿದ ಕಾಲಪರಿಸ್ಥಿತಿಯನ್ನು ನೋಡುವ. ಈ ಕಾವ್ಯವು ಹುಟ್ಟಿ ಇನ್ನೂ ಅರ್ಧಶತಮಾನವುಕೂಡ ಆಗಿಲ್ಲ. ಸುಮಾರು ಐವತ್ತುವರ್ಷಗಳಾಚೆಯ ಕಾಲವು ಕನ್ನಡಭಾಷೆಗೆ ಕತ್ತಲೆ ಮುಸುಕಿದ ಕಾಲವು. ಎಲ್ಲಿ ನೋಡಿದರಲ್ಲಿ ರಾಜಕೀಯವಾದ ಇಂಗ್ಲಿಷ್‌ಭಾಷೆಗೆ ಪ್ರಾಧಾನ್ಯವು. ಕನ್ನಡವನ್ನು ಕೇಳುವವರೇ ಇಲ್ಲ. ಕನ್ನಡದಲ್ಲಿ ಉದ್ದಾಮ ಕವಿಗಳ ಮಹಾಕಾವ್ಯಗಳು ರಾಶಿರಾಶಿಯಾಗಿ ಇದ್ದರೂ ಓದುವವರೇ ಇಲ್ಲ. ಜೈಮಿನಿಭಾರತ, (ಗದುಗಿನ) ವೀರನಾರಾಯಣಭಾರತ, ರಾಜಶೇ ಖರವಿಲಾಸ ಇವುಗಳನ್ನು ತಿಳಿಯಲಿ ತಿಳಿಯದಿರಲಿ ಅಲ್ಲಲ್ಲಿ ಸಾವಿರಕ್ಕೊ ಬ್ಬರು, ಲಕ್ಷಕ್ಕೊಬ್ಬರು ಓದುವವರು ಕಂಡುಬರುತ್ತಿದ್ದರು. ಪ್ರಾಚೀನ ಕಾವ್ಯಗಳನ್ನು ಅಚ್ಚುಹಾಕಿ ಬಯಲಿಗೆ ತರುವ ಪ್ರಯತ್ನವು ಅದೇ ಆಗ ಆರಂಭವಾಗಿತ್ತು. ಅನ್ಯಭಾಷಾವ್ಯಾಸಂಗಿಗಳಾದ ಜನರಿಗೆ ಹೊಸತರದ ಕಾವ್ಯಗಳು ಬೇಕು; ಕನ್ನಡದಲ್ಲಿ ಆ ತರದ ಕಾವ್ಯಗಳು ವಿರಲ. ಇಂತಹ

ಸಮಯದಲ್ಲಿ ಈ ಕವಿಯು ಕನ್ನಡಭಾಷೆಯಲ್ಲಿ ಜನರ ಉದಾಸೀನಭಾವವನ್ನು ಹೋಗಲಾಡಿಸಿ ಪ್ರಾಚೀನಮಹಾಕಾವ್ಯಗಳಲ್ಲಿ ಪ್ರವೇಶವಾಗುವಂತೆ ಮಾಡಬೇಕೆಂಬ ವಿಚಾರದಿಂದ ಹೊಸತರದ ಎರಡು ಗದ್ಯಕಾವ್ಯಗಳನ್ನೂ ಒಂದು ಪದ್ಯಕಾವ್ಯವನ್ನೂ ಬರೆದನು.* ಗದ್ಯಗ್ರಂಥರಚನೆಯಲ್ಲಿ ಈ ಕವಿಯು ಸಂಸ್ಕೃತಕ್ಕೆ ಬಾಣಭಟ್ಟನಾದಂತೆ ಕನ್ನಡಕ್ಕೆ 'ಗದ್ಯವಿಧಾತ'ನಾದನೆಂದು ಹೇಳಬಹುದು. ಕನ್ನಡಭಾಷೆಯ ಪದ್ಯಕಾವ್ಯಗಳಲ್ಲಿ ಕಥಾಪ್ರಧಾನವಾದ ವಸ್ತುಕ ಪ್ರಬಂಧಗಳೇ ಹೆಚ್ಚಿಗೆ ಇರುವುದನ್ನು ಕಂಡು ಈ ಕವಿಯು ವರ್ಣನಾಪ್ರಧಾನವಾದ ವರ್ಣಕಪ್ರಬಂಧವನ್ನು ರಚಿಸಬೇಕೆಂದು ಆ ಸಂಸ್ಕೃತದ 'ರಾಮಾಶ್ವಮೇಧ' ಪುರಾಣದ ಆರಂಭದ ಭಾಗವನ್ನು ಮೂಲವಾಗಿಟ್ಟುಕೊಂಡು ಈ 'ಪಟ್ಟಾಭಿಷೇಕ' ಪ್ರಬಂಧವನ್ನು ರಚಿಸಿದನು. ಈ ಭಾಗದಲ್ಲಿ ಕಥೆಯು ಬಹುಸ್ವಲ್ಪ; ಶ್ರೀರಾಮನು ರಾವಣವಧಾನಂತರದಲ್ಲಿ ಪುಷ್ಪಕ ವಿಮಾನದಮೇಲೆ ಕುಳಿತು ಲಂಕೆಯಿಂದ ಹೊರಟವನು ಭರತನನ್ನು ಕಾಣುವುದಕ್ಕಾಗಿ ಮೊದಲು ನಂದಿಗ್ರಾಮಕ್ಕೆ ಬಂದು ಬಳಿಕ ಆತನೊಡನೆ ಅಯೋಧ್ಯೆಗೆ ಬಂದು ಸುಮುಹೂರ್ತದಲ್ಲಿ ಪಟ್ಟಾಭಿಷಿಕ್ತನಾದನೆಂಬುದೇ ಇದರ ಕಥಾಸಾರವು. ನಮ್ಮವರು ಮೂಲವಿಲ್ಲದ ಕಟ್ಟುಕಬ್ಬಗಳನ್ನು ಮೆಚ್ಚರು; ಆದುದರಿಂದ ಮೂಲವನ್ನಿಟ್ಟುಕೊಳ್ಳಬೇಕಾಯಿತಲ್ಲದೆ ಕವಿಗೆ ಸ್ವತಂತ್ರಗ್ರಂಥರಚನಾಸಾಮರ್ಥ್ಯವಿರಲಿಲ್ಲವೆಂಬ ಆಕ್ಷೇಪಣೆಗೆ ಸರ್ವಥಾ ಅವಕಾಶವಿಲ್ಲವೆಂಬುದನ್ನು ಮುಂದೆ ತೋರಿಸುವ ಸುರಸಭಾಗಗಳಲ್ಲಿ ಕಾಣಬಹುದು.

ಪರಭಾಷೆಗೆ ಪ್ರಾಶಸ್ತ್ಯವು ಬಂದುದನ್ನೂ, ಕನ್ನಡ ಕಾವ್ಯಗಳನ್ನೋದುವ ಪಾರಂಪರ್ಯವು ಜನರಲ್ಲಿ ತಪ್ಪಿಹೋದುದರಿಂದ ಓದಿದರೂ ಕೂಡ ಅವು ತಿಳಿಯದಂತಾಗಿರುವುದನ್ನೂ, ಜೈನ ಪುರಾಣಗಳ ಇಲ್ಲವೆ ಹಿಂದುಪುರಾಣಗಳ ತೆರದಲ್ಲಿ ಕಥಾಪ್ರಧಾನವಾಗಿರುವ ಕಾವ್ಯಗಳಿಗಿಂತ

---

* ಶ್ರೀರಾಮಪಟ್ಟಾಭಿಷೇಕವೂ, ರಾಮಾಶ್ವಮೇಧವೂ, ಅದ್ಭುತರಾಮಾಯಣವೂ ಏಕಕರ್ತೃಕಗಳೆಂಬುದನ್ನು ಇಟ್ಟುಕೊಂಡು ಹೀಗೆ ಬರೆದಿದೆ.

ಭಾವಪ್ರಚುರ ವರ್ಣನಾಪ್ರಧಾನ ಕಾವ್ಯಗಳು ಹೊಸತರದ ಅಭಿರುಚಿಗೆ ಪಾತ್ರವಾಗುವುವೆಂಬುದನ್ನೂ ಕವಿಯು ಆಲೋಚಿಸಿದನು. ಇದಲ್ಲದೆ ತತ್ಕಾಲೀನ ಸಾಮಾನ್ಯ ಜನದ ಅಭಿರುಚಿಯನ್ನು ಅನುಲಕ್ಷಿಸುವುದೂ ಕವಿಗೆ ಆವಶ್ಯಕವಾಯಿತು. ಸಾಮಾನ್ಯಜನವು ಶಬ್ದಚಿತ್ರತೆಯನ್ನು ಹೆಚ್ಚಿಗೆ ಮೆಚ್ಚುವುದು. ಆದುದರಿಂದ ಶಬ್ದಾಲಂಕಾರಗಳನ್ನು ದೂರಕ್ಕಿರಿಸುವುದು ಕವಿಗೆ ಅಭಿಮತವಾಗಲಿಲ್ಲ.

ಎಲ್ಲ ಭಾಷೆಗಳಲ್ಲಿ ಪ್ರಾಚೀನ (ಆದಿ)ಕವಿಗಳ ಕಾವ್ಯಗಳು ರಸಭಾವಪ್ರಧಾನವಾಗಿರುವುವು. ಅವುಗಳಲ್ಲಿ ಕೃತ್ರಿಮವಾದ ಶಬ್ದಚಮತ್ಕಾರಕ್ಕೆ ಪ್ರಾಧಾನ್ಯವು ಕಂಡುಬರುವುದಿಲ್ಲ. ಶಬ್ದಾಲಂಕಾರಗಳು ರಸಭಾವಗಳಿಗಿಂತಲೂ ಅರ್ಥಾಲಂಕಾರಗಳಿಗಿಂತಲೂ ಕೆಳಗಿನ ತರಗತಿಯವೆಂಬ ವಿಷಯದಲ್ಲಿ ಸಂಶಯವಿಲ್ಲ. ಏಕೆಂದರೆ, ಕಾವ್ಯಫಲವು ಆನಂದಾನುಭವವೇ ಎಂದಿರುವಾಗ ರಸಭಾವಗಳಿಂದ ಸಹೃದಯರಿಗಾಗುವ ಆನಂದದ ಪರಿಮಿತಿಯನ್ನೂ ಅದು ನಿಲ್ಲುವ (ಸ್ಥಾಯಿತ್ವದ) ಕಾಲದ ಅವಧಿಯನ್ನೂ ನೋಡಿದರೆ ಅರ್ಥಾಲಂಕಾರಗಳಿಂದ ಆಗುವ ಆನಂದವು ಕೂಡ ಅಲ್ಪಪ್ರಮಾಣವಾದುದೆಂದೂ ಅದು ನಿಲ್ಲುವ ಕಾಲಾವಧಿಯೂ ಅಲ್ಪವೆಂದೂ ಸಹಜವಾಗಿ ಕಂಡುಬರುವುದು. ಹೀಗಿರುವಾಗ ಕರ್ಣಾನಂದವನ್ನು ಮಾತ್ರ ಸ್ವಲ್ಪ ಕಾಲ ಉಂಟುಮಾಡುವ ಶಬ್ದಾಲಂಕಾರಗಳಿಂದ ಕಾವ್ಯಗಳಿಗೆ ಪ್ರಾಶಸ್ತ್ಯವು ಬರುವುದಿಲ್ಲವೆಂಬುದು ಸಹಜವಾಗಿದೆ. ಆದರೂ ಮಧ್ಯಕಾಲೀನ ಸಂಸ್ಕೃತ ಕಾವ್ಯ ವಾಙ್ಮಯದಲ್ಲಿಯೂ, ಅದನ್ನೇ ಮಾದರಿಯಾಗಿಟ್ಟುಕೊಂಡು ಹೊರಟ ಕನ್ನಡ ಕಾವ್ಯವಾಙ್ಮಯದಲ್ಲಿಯೂ ಶ್ಲೇಷಮೂಲಕ-ಅಲಂಕಾರಗಳನ್ನು ಸೇರಿಸುವುದು ವಾಡಿಕೆಯಾಯಿತು. ಮತ್ತು ಜನರಲ್ಲಿಯೂ ಅಂತಹ ಅಲಂಕಾರಗಳಿಂದ ಕೃತ್ರಿಮವಾದ, ಅಲ್ಪಕಾಲಾವಧಿಕವಾದ ಆನಂದದಿಂದಲೇ ತೃಪ್ತಿಯನ್ನು ಹೊಂದುವ ಒಲವು ಉಂಟಾಯಿತು.* " ಭಿನ್ನ

---

* ರಸಂ ರಸಜ್ಞಾಃ ಕಲಯಂತಿ ಕಾವ್ಯೇ ಪರೇ ಪದಾರ್ಥಾನಪರೇ ಪದಾನಿ |
ವಸ್ತ್ರಂ ಕುವಿಂದಾ ವಣಿಜೋ ವಿಭೂಷಾಂ ರೂಪಂ ಯುವಾನಶ್ಚ ಯಥಾ ಯುವತ್ಯಾಂ ||

ರುಚಿರ್ಹಿ ಲೋಕಃ''. ಈ ಒಲವು ಬಳೆಬಳೆದು ಕೊನೆಗೆ ಕಾವ್ಯಗಳಲ್ಲಿ ಗೂಢಾರ್ಥಪದ್ಯಗಳು, ಕೂಟಶ್ಲೋಕಗಳು, ಯಮಕಗಳು ಸೇರತೊಡಗಿದುವು. ಕನ್ನಡಿಗರು ಪ್ರಾಸಾನುಪ್ರಾಸಗಳನ್ನು ಹೆಚ್ಚಾಗಿ ಮೆಚ್ಚುವರು. ಕಾವ್ಯಭಾಷೆಗೆ ಅವು ಆವಶ್ಯಕವೆಂದು ಅವರು ಭಾವಿಸುವರು. ಪ್ರಾಸಾನುಪ್ರಾಸಗಳು ವಾಗ್ದೇವಿಯ ಮಾಂಗಲ್ಯದ ತೊಡವೆಂದು ಅವರ ಭಾವನೆ. ಇನ್ನು ರಮಣೀಯಾರ್ಥವನ್ನು ಪ್ರತಿಪಾದಿಸುವಾಗ ಶಬ್ದಚಮತ್ಕಾರವೂ ಸೇರಿದರೆ ಸುಗಂಧಪುಷ್ಪಕ್ಕೆ ವರ್ಣವೈಚಿತ್ರ್ಯವೂ ಸೇರಿದಂತೆ ಮೋಹಕವಾಗುವುದೆಂಬುದನ್ನು ಎಲ್ಲರೂ ಒಪ್ಪುವರು. ಆದರೆ ನೀರಸವಾದ ರಚನೆಯು ಎಷ್ಟು ಶಬ್ದಚಮತ್ಕಾರವುಳ್ಳುದಾದರೂ ವರ್ಣೋಜ್ವಲತೆಯುಳ್ಳ ನಿರ್ಗಂಧಕಿಂಶುಕಕುಸುಮದಂತೆ ಸೊಗಸನ್ನುಂಟುಮಾಡಲಾರದು. ಆದರೂ ಕನ್ನಡಿಗರು ಕೇವಲ ಕರ್ಣಾನಂದವನ್ನು ಕೊಡುವ ಅನುಪ್ರಾಸವನ್ನು ಪ್ರೀತಿಸಿದುದು ಮಾತ್ರವಲ್ಲದೆ ೨೦, ೨೫ ಅಕ್ಷರಗಳ ಅಂತರದಿಂದ ಪದ್ಯಗಳ ಪ್ರತಿಪಾದದ ದ್ವಿತೀಯಾಕ್ಷರ (ಪ್ರಾಸ)ಸಾಮ್ಯದಿಂದಲೂ ಕರ್ಣಾನಂದವಾಗುವುದೆಂದು ಹೇಳುವಷ್ಟು ಮಟ್ಟಿಗೆ ಶಬ್ದಚಮತ್ಕಾರದಲ್ಲಿ ತಮಗಿರುವ ಆಗ್ರಹದ ಬಲವನ್ನು ತೋರಿಸುತ್ತ ಬಂದಿರುವರು.

ಶಬ್ದಾಲಂಕಾರಗಳಿಗೆ ಪ್ರಾಧಾನ್ಯವು ಬಂದಕಾಲವು ಜನಾಂಗದ ಬುದ್ಧಿಮಾಂದ್ಯದ—ಪ್ರತಿಭಾಶಕ್ತಿಯ ಹ್ರಾಸದ—ಕಾಲವೆಂದು ಬಲ್ಲವರು ಹೇಳುವುದುಂಟು. ಪ್ರಾಚೀನಕಾವ್ಯಗಳಲ್ಲಿ ಶಬ್ದಚಮತ್ಕಾರಪ್ರಧಾನರಚನೆಯು ಪ್ರಾಯಃ ಕಂಡುಬರುವುದಿಲ್ಲವಾದರೂ ಮುಖ್ಯಪ್ರಾಸವು ಕನ್ನಡ ಕವಿತೆಯನ್ನು ಆದಿಕಾಲದಿಂದಲೂ ಅಂಟಿಕೊಂಡಿದೆ. ಶಬ್ದ ಚಮತ್ಕಾರ ಪ್ರಾಧಾನ್ಯವು ಬುದ್ಧಿಮಾಂದ್ಯಸೂಚಕವಾಗಿರಲಿ, ಇಲ್ಲವೆ ಅದು ಕವಿಯ ರಚನಾಕೌಶಲದ್ಯೋತಕವಾಗಿರಲಿ ಅದನ್ನು ಇಲ್ಲಿ ಚರ್ಚಿಸುವುದು ಬೇಡ; ಆದರೆ ಜನರಲ್ಲಿ ಆಕಡೆಗೆ ಒಲವು ಇದ್ದುದರಿಂದ ಪ್ರಕೃತಕವಿಯು ಶಬ್ದ ಚಮತ್ಕಾರದ ಕಡೆಗೂ ಗಮನಕೊಡಬೇಕಾಗಿ ಬಂತೆಂಬುದನ್ನು ಮಾತ್ರ

ಇಲ್ಲಿ ಹೇಳಬೇಕಾಗಿದೆ. ಇನ್ನು ಭಾರತೀಯರು ಇಹದಲ್ಲಿಯೂ ಪರವನ್ನು ನೋಡುವವರು ; ಪ್ರಪಂಚದಲ್ಲಿಯೂ ಪಾರಮಾರ್ಥವನ್ನು ಸಾಧಿಸುವವರು; ಅವರಿಗೆ ಆಮುಷ್ಮಿಕದ ಮುಂದೆ ಐಹಿಕವು ಎಷ್ಟು ಸೊಗಸಾಗಿದ್ದರೂ ಪ್ರಿಯವಾಗದು. 'ಭಕ್ತಿ ವೈರಾಗ್ಯಸತ್ಕಥೆ' (ಪೀ. ಸಂ. ೮) ' ಗಳನ್ನು ಅವರು ಬಯಸುವರು. ಈ ಎಲ್ಲ ವಿಚಾರಗಳನ್ನಿಟ್ಟುಕೊಂಡು ಕವಿಯು–

ಯತಿಗಣಾಶ್ರಯಮೆನಿಸಿ ಶಬ್ದಾರ್ಥಭಾವದಿಂ
ದತಿರಸಾಲಂಕಾರವೊಪ್ಪೆ ಜೀವಾಕ್ಷರಸು
ಗತಿಗಿರ್ಕೆಯಾಗಿ ನವಪದಪುಂಜರಂಜಿತಮನೋಜ್ಞಮೆನೆ ಕೈವಲ್ಯದ ||
ನುತಸುಕೃತಪದ್ಯಾವಳಿಯೆ ಇದೆನಿಸುತ್ತ ವಸು
ಮತಿಗೆ ವಿಬುಧರ್ಕಳಿಂ ಸಂಭಾವ್ಯಮಾಗೆ ಭಾ
ರತಿಯೊಲಿದಜಸ್ರಮೆನಗಿಷ್ಟಾರ್ಥವಿತ್ತು ತಾನಿರ್ಕೆ ಮಜ್ಜಿಹ್ವಾಗ್ರದಿ ||

ಪೀ. ಸಂ. ೬.

ಎಂದು ತನ್ನ ಕವಿತೆಯ ಸ್ವರೂಪವನ್ನು ಹೇಳಿರುವನು.

ಈ ಪದ್ಯದಲ್ಲಿ ಅರ್ಥ, ಭಾವ, ರಸಗಳ ಜತೆಗೆ ಶಬ್ದ, ಜೀವಾಕ್ಷರ (ಪ್ರಾಸ) ಇವುಗಳೂ ತನ್ನ ಕವಿತೆಯಲ್ಲಿ ಇಂಬುವಡೆದಿರುವುವೆಂದು ಹೇಳುವನು. ಅನುಪ್ರಾಸಯಮಕಾದಿ ಶಬ್ದಾಲಂಕಾರಗಳು ಇದ್ದ ಕೂಡಲೆ ಅವು ಕವಿಯ ಇಲ್ಲವೆ ಜನಾಂಗದ ಬುದ್ಧಿಮಾಂದ್ಯವನ್ನೇ ಸೂಚಿಸುವುದೆಂದು ಹೇಗೆ ಹೇಳುವುದು ? ಏಕೆಂದರೆ ಸಂಸ್ಕೃತಕಾವ್ಯ ವಾಙ್ಮಯವು ಉತ್ಕರ್ಷಸ್ಥಿತಿಯಲ್ಲಿದ್ದ ಕಾಲಿದಾಸ ಭವಭೂತಿ ಮೊದಲಾದವರ ಕಾಲದಲ್ಲಿಯೂ ಕೂಡ ಶಬ್ದಾಲಂಕಾರಗಳ ಸಮಾವೇಶವು ಅವರ ಕಾವ್ಯಗಳಲ್ಲಿ ಇರಲಿಲ್ಲವೆಂದು ಹೇಳುವಂತಿಲ್ಲ. ಕಾಲಿದಾಸನ ರಘುವಂಶಕಾವ್ಯದ ಒಂದು ಸರ್ಗವೇ (೯) ಯಮಕವುಳ್ಳದಾಗಿದೆ. ಹಲವು ಜನ ಮಹಾಕವಿಗಳು ತಮ್ಮ ಕಾವ್ಯಗಳ ಒಂದೊಂದು ಸರ್ಗದಲ್ಲಿ ಖಡ್ಗ ಗೋಮೂತ್ರ ಮುರಜ ಮೊದಲಾದ ಶಬ್ದಚಮತ್ಕಾರದ ಬಂಧಗಳನ್ನು ತೋರಿಸಿರುವರು. ಹೀಗೆ ಶಬ್ದಚಮತ್ಕಾರವು ಶಿಷ್ಟಸಮ್ಮತವಾದುದರಿಂದ ಈ ಪಟ್ಟಾಭಿಷೇಕ ಕಾವ್ಯದಲ್ಲಿ

ಮಂದಾಧಿಕಾರಿರಂಜನಾರ್ಥವಾಗಿ ಕೇವಲ ಶಬ್ದಚಮತ್ಕಾರವುಳ್ಳ ಪದ್ಯಗಳೂ, ಕವಿಯ ರಚನಾಪ್ರೌಢಿಯನ್ನು ವ್ಯಕ್ತಗೊಳಿಸುವ ಅರ್ಥಸ್ವಾರಸ್ಯಸಹಿತ ಶಬ್ದಚಮತ್ಕಾರವುಳ್ಳ ಪದ್ಯಗಳೂ ಕಂಡುಬರುವುವು.

ಕನ್ನಡಕವಿಗಳು ಕಾವ್ಯಾರಂಭದಲ್ಲಿ ಪೀಠಿಕಾಸಂಧಿಯೊಂದನ್ನು ಬೇರೆಯಾಗಿ ಬರೆವ ವಾಡಿಕೆಯುಂಟು. ಅದರಲ್ಲಿ ತಮ್ಮ ಬಿರುದುಗಳನ್ನು ಹೇಳಿಕೊಳ್ಳುವುದು ಸಜ್ಜನಸ್ತುತಿ ದುರ್ಜನದೂಷಣೆ ಮೊದಲಾದ ವಿಷಯಗಳು ಸಾಮಾನ್ಯವಾಗಿ ಬರುವುವು. ಆದಿಕವಿ ಪಂಪನನ್ನು ಮಾದರಿಯಾಗಿಟ್ಟುಕೊಂಡ ಕನ್ನಡಕವಿಗಳ ಈ ದಾರಿಯನ್ನು ತಪ್ಪಿಸುವಂತೆ 'ಪಟ್ಟಾಭಿಷೇಕ' ಕಾವ್ಯದ ಪೀಠಿಕಾಸಂಧಿಯ ರೀತಿಯು ಬೇರೆಯಾಗಿರುವುದು. "ಗೀರ್ವಾಣಕವಿಗಳಂತೆ ಕಷ್ಟಸಾಧ್ಯವಹ ಕೃತಿಗೆ ಕೈಗೊಟ್ಟಳೆಂದೆನ್ನ ನಗೆಗೀಡುಮಾಡದೆ ಮನ್ನಿಪುದು" ಎಂದು ಕವಿಯು ತನ್ನ ಅಸಮರ್ಥತೆಯನ್ನು ವ್ಯಕ್ತಗೊಳಿಸಿರುವುದು ಕಂಡುಬರುವುದು. ಮತ್ತು—

ಅಂಬಿಗನ ಪೞವಾತನೋದಿದೊಡೆ ಬೞಿಕ ಬಿಯ
ದಂ ಬರೆದ ಶಬ್ದಮುಂ ಪಠಿಸಿದೊಡೆ ಬೞ್ಕುವೆ ಕು
ಱುಂಬನ ಬಯಲ್ನುಡಿಯನಱಿತೊಡೆ ಸುಪಾಂಡಿತ್ಯಮಿಂತೆನಲ್ಕೆನ್ನ ಕಾವ್ಯಂ ||
ಇಂಬಾಗದು (ಪೀ. ಸಂ. ೫)

ಅಂಬಿಗನ (ವ್ಯಾಸನ) ಪಳವಾತನ್ನು (ಭಾರತವನ್ನು) ಪಠಿಸಿದರೂ, ಬಿಯದನ (ವಾಲ್ಮೀಕಿಯ) ಕಾವ್ಯ (ರಾಮಾಯಣ) ವನ್ನು ಓದಿದರೂ, ಕುರುಂಬನ (ಕಾಲಿದಾಸನ) ಬಯಲುನುಡಿಯನ್ನು (ಕಾವ್ಯವನ್ನು) ಭಾವಿಸಿದರೂ ಸುಪಾಂಡಿತ್ಯವು ಬಾರದಿರುವಾಗ ತನ್ನ ಕಾವ್ಯವು ಒಳ್ಳೆಯದಾಗದೆಂದು ಒಪ್ಪಿ ಸ್ವಾಹಂಕಾರಖಂಡನೆಮಾಡಿಕೊಂಡುದು ಕಂಡುಬರುವುದು.

ಕನ್ನಡಭಾಷೆಯು ಬಿರುಸಾದುದೆಂದು ಕೆಲವರು, ಕನ್ನಡಕವಿತೆಗಳಲ್ಲಿ ಅಪರಿಚಿತಶಬ್ದಗಳು ಬರುವುವೆಂದು ಕೆಲವರು, ಹೀಗೆ ಹಲವರು ಹಲವು ವಿಧವಾಗಿ ಆಕ್ಷೇಪಿಸುವರು. ಕನ್ನಡಭಾಷೆಯು ಬಿರುಸೆನಿಸುವುದು ಕನ್ನಡಭಾಷೆಯ ದೋಷವೋ ನಿರಂತರವಾಗಿ ಕರ್ಣಕುಹರದಲ್ಲಿ ಅದು ಸೇರುವು

ದಕ್ಕೆ ಅವಕಾಶಕೊಟ್ಟಿಲ್ಲವೆಂಬುದು ತಮ್ಮ ದೋಷವೋ ಎಂಬುದನ್ನು ಅವರು ಆಲೋಚಿಸುವುದಿಲ್ಲ. ಅಪರಿಚಿತಶಬ್ದಗಳೆಂದು ಹೇಳುವಾಗ ಅಪರಿಚಿತವಾಗಿರುವುದು ಶಬ್ದದೋಷವೋ ಅವುಗಳ ಪರಿಚಯಮಾಡಿಕೊಳ್ಳದಿರುವುದು ತಮ್ಮ ದೋಷವೋ ಎಂಬುದನ್ನು ಅವರು ನೋಡುವುದಿಲ್ಲ. ಇವೇ ಮೊದಲಾದ ಆಕ್ಷೇಪಣೆಗಳಿಗೆ ಉತ್ತರಕೊಡುವವನಾಗಿ ಕವಿಯು ತನ್ನ ಕನ್ನಡಕವಿತೆಯ ಸ್ವರೂಪವನ್ನು ಹೀಗೆ ಹೇಳುವನು :—

ಮೃದುಪದಾನ್ವಿತೆ ಮಂದಗತಿ ಮಂಜುಭಾಷೆ ಭಾ
ಸ್ವದಮಲಿನಸಂಧಿಶೋಭಿತೆ ವರ್ಣಯುಕ್ತೆ ಷ
ಟ್ಪದವೇಣಿ ನವರಸಭರಿತ ಸಚ್ಚರಿತೆ ಸುನಯನಾತಿಕಠಿನಸ್ವಭಾವೆ ||
(ಪೀ. ಸಂ. ೭)

ನಾಂದೀಸಂಧಿಯೂ, ಪೀಠಿಕಾಸಂಧಿಯೂ ಮುಗಿದ ತರುವಾಯ ಮೂರನೆಯ ಸಂಧಿಯಲ್ಲಿ ಕಾವ್ಯದ ಮುಖ್ಯಭಾಗವು ಆರಂಭವಾಗುವುದು. ಒಟ್ಟಿಗೆ ಐದುಸಂಧಿಗಳಲ್ಲಿ ಸೇರಿ ಸುಮಾರು ೨೫೦ ಪದ್ಯಗಳು. ಈ ಕಾವ್ಯದ ಕಥೆಗೆ ಸಂಸ್ಕೃತ ರಾಮಾಶ್ವಮೇಧದ ಆರಂಭದ ನಾಲ್ಕು ಅಧ್ಯಾಯಗಳೇ ಮೂಲವು. ಕಥೆಯನ್ನು ಆದಿಶೇಷನು ವಾತ್ಸ್ಯಾಯನಮುನಿಗೆ ನಿರೂಪಿಸುವನು. ಇದೊಂದು ಖಂಡಕಾವ್ಯವು.* ಆದರೂ ಮಹಾಕಾವ್ಯದಂತೆ ಕೆಲವು ವರ್ಣನೆಗಳನ್ನೂ ರಸಭಾವಗಳನ್ನೂ ಒಳಗೊಂಡಿರುವುದು.

ಈ ಕಾವ್ಯದಲ್ಲಿ ಒಂದೇ ಮುಖ್ಯವಾದ ರಸವಿಲ್ಲ. ಕಥಾವಸ್ತುವು ಇತಿಹಾಸರೂಪವಾಗಿರುವುದರಿಂದ† ಆರಂಭದಿಂದ ಕೊನೆಯವರೆಗೆ ಅನುಸ್ಯೂತವಾದ ಒಂದು ರಸವು ಇರುವುದಕ್ಕೆ ಅವಕಾಶವಿಲ್ಲ. ಭರತನಲ್ಲಿರುವ ಅನ್ಯಾದೃಶವಾದ ಭ್ರಾತೃಭಕ್ತಿ, ಪ್ರಜೆಗಳು ದೇವತೆಗಳು ಮುನಿಗಳು

---

* ಖಂಡಕಾವ್ಯಂ ಭವೇತ್ಕಾವ್ಯಸ್ಯೈಕದೇಶಾನುಸಾರಿ ಚ || ಯಥಾ ಮೇಘದೂತಾದಿ. (ಸಾ. ದ. ೫೬೬).

† ರಾಮಚಂದ್ರಮನ ಪಟ್ಟದ ವಿಶೇಷದಿತಿಹಾಸಮಂ ವಾತ್ಸ್ಯಾಯನಂಗೊರೆದಂ (ಸಂ. ೩. ಸೂಚನೆ)

ಕಥಾಸುಧೆಯನೀಂಟುಗೆ ಭಕ್ತವೃಂದಂ (ಪೀ. ಸಂ. ೧೦)

ಇವರಲ್ಲಿರುವ ಶ್ರೀರಾಮಭಕ್ತಿ ಮೊದಲಾದ ಭಾವಗಳೇ ಮುಖ್ಯವಾಗಿ ಆಸ್ವಾದ್ಯವಾಗಿರುವುವು. ಕವಿಯು ತನ್ನ ಕಾವ್ಯದಲ್ಲಿ ಭಕ್ತಿಭಾವಕ್ಕೇ ಪ್ರಾಧಾನ್ಯವಿರುವುದನ್ನು "ರಾಮನಾಮಾಮೃತದ ಬಿಂದಿಗೆಯಿದೆನೆ" (ಪೀ. ಸಂ. ೬) "ಭಕ್ತಿವೈರಾಗ್ಯ ಸತ್ಕಥೆಗಳೆಸೆಯೆ" (ಪೀ. ಸಂ. ೮) ಎಂದು ಕಂಠೋಕ್ತವಾಗಿ ಹೇಳಿರುವನು. ಅಲ್ಲಲ್ಲಿ ಅಂಗಭೂತವಾಗಿ ರಸಗಳು ಬಂದಿವೆ. ವಾತ್ಸಲ್ಯರಸವು ಕೌಸಲ್ಯಾರಾಮರ ದರ್ಶನಾವಸರದಲ್ಲಿ ಅನುಭೂತವಾಗುವುದು. ಆದರೂ ಇದು *ಭಾವಪ್ರಧಾನಕಾವ್ಯವು. ಇದರೊಳಗಿನ ರಸಭಾವಗಳು, ವರ್ಣನಾಚಮತ್ಕಾರಗಳು, ಶಬ್ದಸೌಂದರ್ಯ ಮೊದಲಾದುವುಗಳನ್ನು ಒಳಗೊಂಡ ಕೆಲವು ಸ್ಥಲಗಳನ್ನು ಮುಂದೆ ಅವತರಿಸುವೆವು.

ನಂದಿಗ್ರಾಮದಲ್ಲಿ ಈರೇಳುವರುಷ ಪಾದುಕೆಯ ಸೇವೆಯಲ್ಲಿ ರಾಮಾಗಮನ ನಿರೀಕ್ಷೆಯಿಂದ ಇದ್ದ ಭರತನು ರಾಘವನ ಪೊತ್ತನೀಕ್ಷಿಸಿ ಕಾಣದಿರಲು ಆಲೋಚಿಸುತ್ತಾನೆ†—

ತಪ್ಪಲೊಳ್ ಕಲ್ಲರಳೆ ಗಿರಿಯುರುಳೆ ತಿರೆ ಪೊರಳೆ
ತೆಪ್ಪ ಬಾನೊಳ್ ಪಾಱೆ ಕಡಲಾಱೆ ನಿಲಲಾಱೆ
ಬಪ್ಪೆನೀಪೊಲ್ತಿಗೆಲೆ ಭರತ ನೆಲೆಯಱಿತು ಸಲೆ ಸಂತಸದೆ ಪೋಪುದೆಂದು ॥
ಒಪ್ಪುವಂತೆನ್ನ ಕೈದಟ್ಟಿ ಪುರಕಟ್ಟಿ ತೆರ
ಳಿಪ್ಪ ರಾಮಂ ಬಾರದಿಹ ಕಾರಣಂ ತೋಱ
ದಿಪ್ಪುದಿನ್ನುಂ ಕಾಣೆ ತನ್ನಾಣೆಗಿನ್ನೂಣೆಯಂ ತರ್ಪನೆಂತೊ ತಿಳಿಯೆಂ ॥

(೩. ೪೬)

ಅನುಪ್ರಾಸದಿಂದ ಬಂದಿರುವ ಸೌಂದರ್ಯವನ್ನೂ ಇಲ್ಲಿ ನೋಡಬಹುದು.

ಇದೇ ಮೊದಲಾದ ೧೫-೧೬ ಪದ್ಯಗಳಲ್ಲಿ ಭರತನಲ್ಲಿರುವ ಭ್ರಾತೃವಿಷಯಕವಾದ ಸ್ಥಾಯಿಯಾದ ಭಕ್ತಿಭಾವವೂ, ಆದನ್ನು ಪುಷ್ಟಿಗೊಳಿ

---

* ಸಂಚಾರಿಣಃ ಪ್ರಧಾನಾನಿ ದೇವಾದಿವಿಷಯಾ ರತಿಃ ।
ಉದ್ಬುದ್ಧಮಾತ್ರಃ ಸ್ಥಾಯೀ ಚ ಭಾವ ಇತ್ಯಭಿಧೀಯತೇ ॥ ಸಾ. ದ.

† ರಾಮಭಕ್ತಿರೂಪವಾದ ಭಾವದ ಚಿಂತಾಖ್ಯ ವ್ಯಭಿಚಾರಿಭಾವವು.

ಸುವ ತದನುಗುಣವಾದ ದರ್ಶನೌತ್ಸುಕ್ಯ, ಚಿಂತೆ, ಶೋಕ ಮೊದಲಾದ ವ್ಯಭಿಚಾರಿಭಾವಗಳೂ ಸಹೃದಯಪರಿತೋಷವನ್ನುಂಟುಮಾಡುವುವು.

ಸೀತಾದೇವಿಯನ್ನು ಕುರಿತು—

ತಂಬೆಲರ್ ಸೋಂಕೆ ಬಳ್ಕುವ ಲತಾಂಗವುದಿಱಿಸಿ
ಲಂ ಬೇಱ್ ತಡೆದುಂಟೆ ಬಗ್ಗದೊವಲಂ ಕಂಡೊ
ಡಂ ಬೆರ್ಚುವೆರಳೆಗಣ್ ಪಱಿವ ಪೆರ್ಬುಲಿನೋಟವುಂ ಸಹಿಸಲುಂಟೆ ವನದಿ |
ತುಂಬಿಯುಲಿಗಳ್ಕುವತಸೀಕುಸುಮುಕರ್ಣವೆಂ
ತಿಂಬಕ್ಕು ಸಿಂಹಗರ್ಜನೆಗೆ ಬಿದುಗಲ್ನೆಲದೊ
ಳುಂ ಬಾಡುತಿರ್ಪ ತಳಿರಡಿ ನಡೆಯೆ ಕಾಪಥದೊಳೆಂತಪ್ಪುದವನಿಸುತೆಗೆ ||

(೧. ೫೧)

ಇಲ್ಲಿ ಭರತಗತ ಸೀತಾಲಂಬನಕವಾದ ಭಕ್ತಿಭಾವವೂ, ಅದನ್ನು ಪುಷ್ಟಿಗೊಳಿಸುವ ಚಿಂತಾರೂಪ ವ್ಯಭಿಚಾರಿಭಾವವೂ ಹೃದಯಂಗಮವಾಗಿವೆ. ಇಲ್ಲಿ ಅರ್ಥಸ್ವಾರಸ್ಯವು ಬಹು ಚಮತ್ಕಾರವಾಗಿದೆ. ಲತಾಂಗ, ಎರಳೆಗಣ್ಣು ಮೊದಲಾದ ಉಪಮೆಗಳು ಎಲರಿಗೆ ಬಳ್ಕುವುದು ಬಗ್ಗದೊವಲಿಗೆ ಬೆದರುವುದು ಮೊದಲಾದ ಅರ್ಥಗಳ ಪುಷ್ಟಿಗೆ ಎಷ್ಟು ಔಚಿತ್ಯವನ್ನು ತಂದುಕೊಟ್ಟಿವೆಯೆಂಬುದನ್ನು ನೋಡಬಹುದು.

ಮಾರುತಿಯು ಮುಂದೆ ಬಂದು ಹಿಂದೆ ಶ್ರೀರಾಮನು ಬರುವನೆಂಬುದನ್ನು ಹೇಳಿದೊಡನೆ ನಿರಾಶನಾಗಿದ್ದ ಭರತನಿಗೆ ಉಂಟಾದ ಸಂಭ್ರಮಭಾವವನ್ನು ನೋಡಿರಿ :—

ಅಟವಿಯಿಂ ಪೊರಟಿಹರೆ ಬಹರೆ ದಾರಿಯೊಳೇಂ ಪೊ
ರಟುದಿಲ್ಲವೇ ರಾಮನೊಳ್ಳಿತಾಗಿಹನೆ ಪ
ರ್ಯಟನದಿಂ ಬಾಡಿಹರೆ ಬರುತುವಿರ್ಪರೆ ಬಹರೆ ಬಂದರೇ ಪೇೞೆಂದನು ||

(೪. ೧)

ಪಡೆದನಂ ಕಂಡಂತೆ ಭರತನೂ, ಒಂದೂರ್ಗೆ ಪೋದೊಡೆಯನಂ ಕಂಡಂತೆ ನೀಯೆಯರೂ ಅಲರುವೊಡೆಯನಂ ಕಂಡಂತೆ ದ್ವಿಜರೂ ದಿಗ್ವಿಜಯಮಂ ಮಾಡಿ ಬರ್ಪ ಅರಸನಂ ಕಂಡಂತೆ ಮಿಕ್ಕುಳಿದವರೂ ಕಂಡರೂ

(ಸಂ. ೪. ಪ. ೬೫ ಉಲ್ಲೇಖಾಲಂಕಾರ) "ಪಿಂದೆ ಬಲ್ನೋಂಪಿಯೆಸಗಿ ಮುದ್ದುಕಂದನಂ ಪಡೆದೆ ಗಡ! ಈ ಮೈಯೊಳೇಂ ಪಾಪಮೆಸಗಿದೆನೋ ಕೈಗಮರ್ದ ಮಣಿಯುಡುಗಿದಂತೆ ಅಣುಗಂ ಮಾಯವಾದಂ, ಎಂದಿಗೆ ಮಗುಳ್ದು ರಾಮನಂ ಕಂಡು ಎನ್ನ ಕಣ್‌ಜಕ್ಕವಕ್ಕಿ ಆನಂದಿಪುದೋ ಎನುತೆ" (ಸಂ. ೫. ಪ. ೨) "ಎಳಗಂದಿಹಸು ಕಣ್ಮರೆಯ ಕಱುವನಾರಯ್ವಂತೆ ಹಂಬಲಿಸುತಿರ್ದ" ಕೌಸಲ್ಯೆ ತನ್ನನ್ನು "ಕವಿದು ರಿಂಗಣಗುಣಿದು ಸುೞಿದಾಡಿ ತಾಯೆಡೆಗೆ ಜವದಿಂ ಮರಳ್ವ ಕಱುವಂತೆ ಸಂತಸದೆ ಬಂದ" ಮಗನನ್ನು ಹೇಗೆ ಕಂಡಳೆಂಬುದನ್ನು ನೋಡುವುದಕ್ಕೆ ಪಾಠಕರು ತವಕಪಡಬಹುದು.

ರಾಮಾಗಮನವಾರ್ತೆಯನ್ನು ಕೇಳಿ ಸಂಭ್ರಮಗೊಳ್ಳುವ ಕೌಸಲ್ಯೆಯ ಸ್ಥಿತಿ:—

ಮುಗಿದರಳ ನೋಲ್ಪ ಕಣ್ಗಳ ಬಿಗಿ ಸಡಿಲ್ವ ಪು
ರ್ವಗಳ ಬೆಮರೊಡೆದು ನೆಱೆದುಬ್ಬುವಾನನದ ಪೊ
ರ್ದಗೆಗೊಂಡ ಜಡೆಯ ತೊಡವಿಲಿಕೊಡಂಕೆಯ ಕುಗ್ಗಿ ನೇರವೆಱ್ದಪ್ಪಗಳದ ||
ಸುಗಿದೊಗೆದ ಮೆಯ್ಯನಿರ್ತರಗೊಂಡು ಭಾವಿಸುವ
ಬಗೆಯ ನಿಜಮಾತೆಯುಂ ರಾಘವಂ ರಾಹು ಕೈ
ದೆಗೆದ ಶಶಿಯಂತೆಸೆವ ರಾಮನಂ ಕುಶಲೆಯುಂ ಕಂಡರೋರೊರ್ವರಾಗ ||

ಕ. ೧೯.

ದೃಷ್ಟಿ ಮೊಗ ಇವುಗಳಲ್ಲಿ ಕಾಣುವ ವಾತ್ಸಲ್ಯದ ಕುರುಹುಗಳು, ಶರೀರಕಾರ್ಶ್ಯ ಮೊದಲಾದ ಕೌಸಲ್ಯೆಯ ಸ್ಥಿತಿಯು ಬಹು ನಯವಾಗಿ ಚಿತ್ರಿಸಲ್ಪಟ್ಟಿವೆ. ಆವರಿರ್ವರ ಸ್ಥಿತಿ:—

ಸೆಱೆಗೊರಲ್ ನಡುಕಂ ನಿಮಿರ್ಗೊದಲೆಱೆಮನಂ
ಕಿಱುಬೆಮರ್ಸೋಗದ ಕಂಬನಿ ಬನ್ನದೞಿವು ಬೇ
ಸಱದೞಿವು ಮೋಹಮೊಗದೊಳ್ಪು ಮೈವೆಳ್ಪು ತಲೆದೋರ್ದುದಿರ್ವರೊಳೊರ್ಮೆಯೆ||
ಪಿರಿದೆನೆ ಪರಸ್ಪರ ಮುಖಾವಲೋಕನದಿನೀ
ತೆಱದೊಳನ್ಯೋನ್ಯದರ್ಶನಸುಖಂ ನಾಡೆ ದಾ
ಶರಥಿಕೌಸಲ್ಯೆಯರ ದರ್ಶನದ ಸುಖದಂತೆವೋಲಾದುದೆಣೆಗಾಣದೆ || ಕ. ೨೦.

ಬಹುಕಾಲಾಂತರಿತವಾದ ಕೌಸಲ್ಯಾರಾಮರ ಪರಸ್ಪರ ದರ್ಶನ ಸುಖವು ನಿರುಪಮವೆಂಬುದು ಪುನರುಕ್ತವೇ ಸರಿ. ಆದುದರಿಂದಲೇ ಕವಿಯು "ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ" ಎಂಬಂತೆ ಅನನ್ವಯಾಲಂಕಾರದಿಂದ ಅನ್ಯೋನ್ಯದರ್ಶನಸುಖಂ ದಾಶರಥಿ ಕೌಸಲ್ಯೆಯರ ದರ್ಶನದ ಸುಖದಂತೆವೋಲಾದುದೆಂದು ಹೇಳಿರುತ್ತಾನೆ.

ಈ ಕಾವ್ಯದಲ್ಲಿ ಚಮತ್ಕಾರಜನಕವಾದ ವರ್ಣನೆಗಳೂ ಹಲವು ಉಂಟು. ಓದುತ್ತ ನಡೆದಂತೆ ಯಾವಭಾಗವೂ ಅಸ್ವರಸವಾಗಿಲ್ಲವಾದರೂ ಸಮುದ್ರವರ್ಣನೆ, ಲಂಕೆಯಿಂದ ಪುಷ್ಪಕದಮೇಲೆ ಕುಳಿತು ಬರುವಾಗ ರಾಮಚಂದ್ರನು ಸೀತಾದೇವಿಗೆ ಪೂರ್ವಾನುಭೂತಸ್ಥಲಗಳನ್ನು ತೋರಿಸುವುದು, ರಾಮನು ನಿಯತಕಾಲಕ್ಕೆ ಬಾರದಿರುವುದನ್ನು ಕಂಡು ಭರತನು ಶೋಕಿಸುವುದು, ನಂದಿಗ್ರಾಮಪ್ರವೇಶಕಾಲದಲ್ಲಿ ಪುರಜನರ ದರ್ಶನ ಸಂಭ್ರಮ, ರಾಮನು ತಾಯಂದಿರನ್ನು ಕಾಣುವುದು, ಪಟ್ಟಾಭಿಷಿಕ್ತನಾಗಿದ್ದ ಶ್ರೀರಾಮಚಂದ್ರನನ್ನು ಎಲ್ಲರೂ ಬೇರೆಬೇರೆ ಸ್ತುತಿಸುವುದು ಮೊದಲಾದ ಸಂದರ್ಭಗಳಲ್ಲಿ ಕವಿಯ ಪ್ರತಿಭಾವಿಕಾಸವು ಚೆನ್ನಾಗಿ ಕಂಡುಬರುವುದು. ಈ ವರ್ಣನೆಗಳೆಲ್ಲ ಸ್ವತಂತ್ರವಾದುವು, ಅನ್ಯಚ್ಛಾಯಾನುವರ್ತಿಗಳಲ್ಲ. ಲಂಕೆಯಿಂದ ಹೊರಟ ಶ್ರೀರಾಮಾದಿಗಳು ಮೊದಲು ತೆಂಕಣ ಕಡಲನ್ನು ನೋಡುವರು. ಈ ಕಾವ್ಯದಲ್ಲಿ ಬಂದ ಕಡಲ ವರ್ಣನೆಯು ಬಹಳ ಹೃದಯಂಗಮವಾಗಿದೆ. ಈ ಲಘುಕಾವ್ಯಕ್ಕೆ ಇಪ್ಪತ್ತು ಪದ್ಯಗಳಿಂದ ಮಾಡಿದ ಸಮುದ್ರವರ್ಣನೆಯು ಜಡವಾಗಿ ತೋರುವುದಾದರೂ ವರ್ಣನಾವೈಚಿತ್ರ್ಯವನ್ನು ನೋಡುವಾಗ ಪಾಠಕರಿಗೆ ಹೆಚ್ಚಾಯಿತೆಂಬ ವಿಚಾರವೇ ಬಾರದು. ಮಡಿಮಡಿದು ಬರ್ಪ ತೆರೆಗಳು (ಶ್ಲೋ. ೧೪) ತಡಿವೊಡೆದು ಮರಳಿ ಪೋಪ ತೆರೆಗಳು (ಶ್ಲೋ. ೧೬) ಭೋರ್ಗರೆವ ತೆರೆಗಳು (ಶ್ಲೋ. ೧೭-೨೨) ಬಹುಚಮತ್ಕಾರಕಾರಿಯಾಗಿವೆ. ಇತರ ಕವಿಗಳ ವರ್ಣನಾರೀತಿಗಳಲ್ಲದೆ ಹಲವು ಹೊಸರೀತಿಗಳನ್ನು ಅಲ್ಲಿ ಕಾಣಬಹುದು. ಅಂತಹ ಎರಡು ಶ್ಲೋಕಗಳನ್ನು ಇಲ್ಲಿ ಕೊಟ್ಟಿದೆ.—

ಶರಧಿಯು ಭವಶರಧಿಯನ್ನು ಪೋಲ್ತುದು :—

ಅಡಿಗಡಿಗೆ ಬರ್ಪ ಬಲ್ದೆರೆಗಳೇ ರೋಗಂಗ
ಳೊಡನೇೞ್ವ ಕಲ್ಲೋಲಮಾಲೆಯೆ ಬೆದರ್ಕೆ ಸಂ
ಗಡಿಸಿರ್ಪ ಸುೞಿಗಳೇ ರಾಗಂಗಳೇಱಿಱಿಯೆ ಪಿರಿತನಂ ಬಡತನ ವಲಂ ‖
ಬಡಬಾನಲಂ ಚಿಂತೆ ದುಃಖಮೆ ಪೊನಲ್ ಬಾೞ್ಕೆ
ಗಡ! ಗುಳ್ಳೆ ಬೆಳ್ನೊರೆಯೆ ಸಂತಸಂ ಸುಖಮೆ ಮೇಲ್
ಸಿಡಿವ ಸೀರ್ಪನಿಯೆನಲ್ ಶರಧಿ ಭವಶರಧಿಯಂ ಪೋಲ್ತಿಸೆದುದಚ್ಚರಿಯೆನೆ ‖
೩. ೨೮ ‖

ಸಂಸ್ಕೃತದಲ್ಲಿರುವ ನೀರಿನ ಪರ್ಯಾಯಶಬ್ದಗಳ ಅರ್ಥಾಂತರವನ್ನ ವಲಂಬಿಸಿ—

ಸುರರಿಗಮೃತಂ ಬೇಕೆ? ಮನಮುಂಟೆ ಕಾಲಕಂ
ಧರಗೆ ವಿಷದೊಳ್? ಬಾಲಚಂದ್ರಂಗೆ ಪಯಮಿಹುದೆ?
ಶರಮುಂಟೆ ವೀರರ್ಗೆ? ಕೀಲಾಲಮಸುರರ್ಗೆ ದೊರೆತುದೇ? ಲಾವಣ್ಯಮಂ ‖
ಸ್ಮರನಿಚ್ಛಿಪನೆ? ಕುಶಮನಱಿಸುವರೆ ಯಮಿಗಳ್? ಘು
ನರಸಮಂ ಕೊಂಡರೆ ರಸಜ್ಞರುಂಟಿನ್ನುಮಾ
ದರದೆ ತಾನೀವೆನೆಂದೊರೆವಂತೆ ಮೊಱೆವಂ ತೆಱೆತೆಱೆದಿಂದಬ್ಧಿರಾಜಂ ‖೩. ೨೯‖

ರನ್ನನು—

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮಾಗದಾಯುದ್ಧದೊಳಂ |
ತೊಳಕೊಂಡತ್ತೆನೆ ಸಿಂಹಾ
ವಲೋಕನಕ್ರಮದಿನಱಿಪಿದಂ ಕವಿರನ್ನಂ ‖

ಎಂದು ಹೇಳಿಕೊಂಡಿರುವನು. ಈ ಕಾವ್ಯದಲ್ಲಿ ಆಕಾಶಯಾನದಿಂದ ಮರಳಿ ಬರುವಾಗ ವಿಹಂಗಾವಲೋಕನಕ್ರಮದಿಂದ ಸಂಪಾತಿಯ ಕಥೆ ವಾಲಿಯ ಕಥೆ ಮೊದಲಾದ ಕಿಷ್ಕಿಂಧಾಕಾಂಡ ಸುಂದರಕಾಂಡ ಅರಣ್ಯಕಾಂಡಗಳ ಕಥಾಭಾಗಗಳೆಲ್ಲ ಸೂಚಿತವಾಗಿರುವುವು. ಇತರ ಕಥಾಭಾಗವೂ ಬೇರೆ ಕಡೆಯಲ್ಲಿ* ಬರುವುದರಿಂದ ಪೂರ್ಣರಾಮಾಯಣ ಕಥೆಯು ಇದರಲ್ಲಿ ಅಡಕವಾಗಿರುವುದೆಂದು ಹೇಳಬಹುದು.

---

* ಕೌಸಲ್ಯಾ ಕೈಕೆಯೀ ದರ್ಶನಪ್ರಸಂಗಗಳಲ್ಲಿ.

ಸುಗ್ರೀವನ ರಾಜಧಾನಿಯನ್ನು ದಾಟಿ ಮುಂದೆ ಬರಲು ಜಟಾಯು ರಾವಣರ ಕಾಳೆಗದ ಕಣವನ್ನು ಕಂಡು ಸೀತಾದೇವಿಯು—

ಮರ್ಮದಿಂ ಖಳನನಡ್ಡೈಸಲ್ ಜಟಾಯು ನಿಜ
ಮರ್ಮಮಂ ಪೇೞ್ದುೞಿದನೆನಲಿತ್ತಲಿಡೆ ಸತ್ಯ
ಧರ್ಮಕಿನ್ನಕಟಕಟ ಖಳರಂತರಂಗಮಂ ಬಲ್ಲರಾರಿಳೆಯೊಳಿನ್ನ ॥
ಕರ್ಮಪಾಕದೊಳಸುರನುಯ್ದಡಂ ಕಾವೆನಂ
ದೊರ್ಮನದೊಳೊದವಿದಾಪದ್ಬಾಂಧವಂಗೆ ಸಾ
ಸಿರ್ಮೆ ನೆನೆನೆನೆದೊಡಂ ತೀರದಹಹಾ! ಪರಹಿತೇಚ್ಛುಕರ ಜಸಮದೆಂತೊ ॥
೩. ೪೦॥

ಜಟಾಯುವಿಗೆ ಸೀತಾದೇವಿಯು ಮಾಡುವ ಧನ್ಯವಾದವು ಪಾಠಕರನ್ನು ಗದ್ಗದಿತರನ್ನಾಗಿ ಮಾಡುವುದು. ಮುಂದೆ ಪಂಚವಟಿಗೆ ಬರಲು ಶ್ರೀರಾಮನು ಸೀತೆಗೆ—

ಅಂಬುಜಾನನೆ ದನುಜೆ ಕಾಡಿದೆಡೆ ನೋಡಿತ್ತ
ಲಂಬಿಂ ಸಹೋದರಂ ಮಾನಗಳೆದಿರ್ಪ ತಾ
ಣಂ ಬವರಮುಖದಿ ಖಳರೞಿದ ನೆಲೆ ಪೊಮ್ಮೃಗಂ ನಲಿದುದಿಲ್ಲಿತ್ತಲೆಂದು ॥
೩. ೪೧॥

ಈಮೇರೆಗೆ ತೋರಿಸುತ್ತ ತಾವು ಪೂರ್ವದಲ್ಲಿ ವಾಸಮಾಡಿದುದರಿಂದ ಚಿರಪರಿಚಿತವಾದ ಎಲೆವನೆಯನ್ನೂ ಆದರ ಸಮೀಪದ ದೃಶ್ಯವನ್ನೂ ತೋರುವನಾಗಿ—

ಅರಗಿಳಿಯನುೞಿದ ಪಂಜರದಂತೆ ಜೀವನಂ
ತೊಱೆದ ತನುವಂತೆ ಖಗಣೇಶನಡಗಿರ್ದ ಕಾ
ರಿರುಳಿನಾಗಸದಂತೆ ತೋರ್ಪುದೆಲೆವನೆಯಂದಿನೆಡೆಯ ನೋಡಬ್ಜಾನನೆ ॥
ಪರೆದು ಕೀೞ್ಮೃಗಗೊಂಡು ಮಾಧವೀಲತೆಯೆ ಮಾ
ಮರನೊಳೊಪ್ಪಂ ಬಿಟ್ಟುದಿತ್ತಿತ್ತ ಬಾಡಿದುದು
ಕುರುವಕಂ ನೋಡೆಂದು ತೋಱಿ ಬೞಿಕಾರಥಂ ಪರಿದುದುತ್ತರಕೆ ಜವದಿ ॥
೩. ೪೨॥

ಈ ವರ್ಣನಾಭಾಗವನ್ನು ಓದುವಾಗ ಪಾಠಕರಿಗೆ ರಘುವಂಶದ ಹದಿಮೂರನೆಯ ಸರ್ಗದ ನೆನಪಾಗದಿರದು. ಅಲ್ಲಿಯೂ

" ವೈದೇಹಿ ಪಶ್ಯಾಮಲಯಾದ್ವಿಭಕ್ತಂ ಮತ್ಸೇತುನಾ ಫೇನಿಲಮಂಬುರಾಶಿಂ " ಮೊದಲಾಗಿ ೧೫-೧೭ ಶ್ಲೋಕಗಳಿಂದ ಕಾಲಿದಾಸನು ಸಮುದ್ರವರ್ಣನೆಯನ್ನು ಮಾಡಿದುದು ಕಂಡುಬರುವುದು. ಇದರಿಂದ, ತಕ್ಕವಸ್ತು ದೊರೆತಾಗ ಕವಿಗಳು ತಮಗೆ ತೃಪ್ತಿಯಾಗುವವರೆಗೂ ವರ್ಣಿಸದೆ ಬಿಡರೆಂದೇ ಹೇಳಬೇಕಾಗುವುದು. ಕವಿಯು ಸಂಸ್ಕೃತ ರಾಮಾಶ್ವಮೇಧವನ್ನು ಮೂಲವಾಗಿಟ್ಟುಕೊಂಡು ಸ್ವತಂತ್ರವಾಗಿ ಗ್ರಂಥರಚನೆಯನ್ನು ಮಾಡಿದನೆಂದು ಹಿಂದೆ ಹೇಳಿದೆ. ಮಾದರಿಗಾಗಿ ಇಲ್ಲಿ ಸಂಸ್ಕೃತರಾಮಾಶ್ವಮೇಧದ ಒಂದು ಭಾಗವನ್ನು ಉದ್ಧರಿಸುವೆವು. ಅದರಿಂದ ಕವಿಗೆ ಮೂಲದಿಂದ ಏನಾದರೂ ಸಹಾಯವಾಗಿದೆಯೇ ಎಂಬುದನ್ನು ನೋಡಲನುಕೂಲವಾಗುವುದು.

ಸೀತಾಯೈ ದರ್ಶಯನ್ ಮಾರ್ಗೇ ತೀರ್ಥಾನ್ಯಾಶ್ರಮವಂತಿ ಚ |
ಮುನೀಂಶ್ಚ ಮುನಿಪುತ್ರಾಂಶ್ಚ ಮುನಿಪತ್ನೀಃ ಪತಿವ್ರತಾಃ ||
ಯತ್ರ ಯತ್ರ ಕೃತೋ ವಾಸಃ ಪೂರ್ವಂ ರಾಮೇಣ ಧೀಮತಾ |
ತಾನ್ ಸರ್ವಾನ್ ದರ್ಶಯಾಮಾಸ ಲಕ್ಷ್ಮಣೇನ ಸಮನ್ವಿತಃ |
ಇತ್ಯೇವಂ ದರ್ಶಯನ್ ತಸ್ಯೈ ರಾಮೋದ್ರಾಕ್ಷೀತ್ ಸ್ವಕಾಂ ಪುರೀಂ ||
(ರಾಮಾಶ್ವಮೇಧ ಅಧ್ಯಾಯ ೧, ಶ್ಲೋಕ ೨೪-೨೭)

ಮೂಲದಲ್ಲಿ ಬಂದಿರುವ ಈ ಸ್ವಲ್ಪಭಾಗವನ್ನು ಕವಿಯು ಎಷ್ಟು ಚೆನ್ನಾಗಿ ವಿಸ್ತರಿಸಿರುವನೆಂಬುದನ್ನು ಈ ಕಾವ್ಯವನ್ನೋದಿ ಮನಗಾಣಬಹುದು.

ಕವಿಯ ವರ್ಣನಾಚಾತುರ್ಯವನ್ನು ತೋರ್ಪಡಿಸುವ ಒಂದೆರಡು ಪದ್ಯಗಳನ್ನು ತೋರಿಸಿ ಈ ಭಾಗವನ್ನು ಮುಗಿಸುವೆವು.

ಪಟ್ಟಾಭಿಷೇಕದಿನದ ಪ್ರಾತಃಕಾಲದಲ್ಲಿ " ಕಾ ಕಾ " (ಸಲಹು ಸಲಹು) ಎಂದು ಕೂಗುವ ಕಾಗೆ—

ಪಗೆಯುವಂ ದ್ರೋಹಚಿಂತಕನೆಂದೆಣಿಸದೆ ಮಱೆ
ವುಗಲೆನ್ನನಿರದೆ ಕಾದವನೆಂದು ರಾಮನಂ
ಪೊಗಳಿ ಕಾ ಕಾ ಯೆಂದು ಬೇಡಿಕೊಂಡಪುದೆನಲ್ ಕಾಗೆ ಕೂಗಿದುದಾಗಳೆ ||
೫. ೩೭||

ಸಂಸ್ಕೃತಶ್ಲೋಕಗಳ ಭಾವವು ಚೆನ್ನಾಗಿ ಹೊಳೆವಂತೆ ಹೇಗೆ ರಚನೆ ಮಾಡಬೇಕೆಂಬ ಮಾದರಿಯನ್ನು ಕವಿಯು ಒಂದೆರಡು ಶ್ಲೋಕಗಳಲ್ಲಿ ತೋರಿಸಿರುವನು. ಸಂಧ್ಯಾಕಾಲವನ್ನು ವರ್ಣಿಸುವ ಸಂಸ್ಕೃತಶ್ಲೋಕ ವೊಂದು ಪ್ರಸಿದ್ಧವಾಗಿರುವುದು :—

ಪರಿಪತತಿ ಪಯೋನಿಧೌ ಪತಂಗಃ
ಸರಸಿರುಹಾಮುದರೇಷು ಮತ್ತಭೃಂಗಃ |
ಉಪವನತರುಕೋಟರೇ ವಿಹಂಗಃ
ಯುವತಿಜನೇಷು ಶನೈಃ ಶನೈರನಂಗಃ ||

ಪ್ರಕೃತಕವಿಯ ಪದ್ಯವು :—

ಭೃಂಗಾಳಿ ಕಮಲಸಂಕುಲಮನಾಕಾಶಮಂ
ತಂಗದಿರನವನೀರುಹಂಗಳಾಶ್ರಯಮಂ ವಿ
ಹಂಗಸಂದೋಹಮಬ್ಜಾಂಬಕೀವೃಂದಮನನಂಗಂ ಪ್ರವೇಶಿಸಲ್ಕೆ ||
ಪಿಂಗಿ ಪಡುಗಡಲೊಳಡ್ಡಂ ಪೋದನತ್ತಲ್ ಪ
ತಂಗನಾಗಳ್ ಸಂಜೆವೆಣ್ಣು ಮಿಂದುಟ್ಟ ಪೊಸ
ರಂಗು ಸೀರೆಯ ಸೆಱಗಿನಂತೆ ಸಂಧ್ಯಾರಾಗಮೆಸೆದುದಂತಾದೆಸೆಯೊಳು ||
ಪ. ೩೨||

ಸಂಕ್ಷೇಪರಾಮಾಯಣವೆಂದು ರಾಮಾಯಣದ ಕಥೆಯೆಲ್ಲವನ್ನೂ ಹೇಳುವ "ಆದೌ ರಾಮತಪೋವನಾದಿಗಮನಂ...ಏತದ್ಧಿ ರಾಮಾಯಣಂ" ಎಂಬ ಸಂಸ್ಕೃತಶ್ಲೋಕವನ್ನು ಹಲವರು ಕೇಳಿರಬಹುದು.

ಕೌಸಲ್ಯಾದರ್ಶನಕಾಲದಲ್ಲಿ ರಾಮನು ಆಕೆಯ ಅಡಿದಾವರೆಗೆರಗುವುದನ್ನು ವರ್ಣಿಸುವ ಪದ್ಯದಲ್ಲಿ—

ಕಿತ್ತಡಿಯ ಜನ್ನಮಂ ಕಾದು ಪೆಣ್ಗೊದಡಿಯ
ನೊತ್ತಿ ಕಲ್ಲಂ ಹರನ ಬಿಲ್ಮುಱಿದು ಭಾರ್ಗವನ
ನೊತ್ತಟ್ಟಿಗುಱಿದಯ್ಯನಾಣೆಯಂ ಬಿಡದಡವಿಯಂ ಸಾರ್ದು ಕೀಶರ್ಕಳ ||
ವೊತ್ತಮಂ ಪೊರೆದು ಕಡಲಂ ಕಟ್ಟಿ ದಾನವರ
ನೆತ್ತರಂ ಚೆಲ್ಲಿ ತಿರೆಪೊಱೆಯಱಿಸಿದ ಜಸವಂ
ಪೊತ್ತ ಭಾರಕೆ ಸಿರಂ ಬಾಗಿತೆನೆ ಮಾತೆಯಡಿಗೆಱಗಿದಂ ಶ್ರೀರಾಮನು ||
ಪ. ೨೧.

ರಾಮಾಯಣದ ಮುಖ್ಯ ಕಥಾಭಾಗಗಳನ್ನೆಲ್ಲ ಹೇಳಿರುವನು.

ಈ ಕಾವ್ಯದಲ್ಲಿ ಉಪಮೆ, ಉತ್ಪ್ರೇಕ್ಷೆ, ಅರ್ಥಾಂತರನ್ಯಾಸ ಮೊದಲಾದ ಅಲಂಕಾರಗಳು ಸಮಯೋಚಿತವಾಗಿ ಬಂದಿರುವುವು. ಅವುಗಳಲ್ಲಿ ಕೆಲವನ್ನು ಅಲ್ಲಲ್ಲಿ ತೋರಿಸಿರುವುದರಿಂದ ಮತ್ತೆ ಹೆಚ್ಚಿಗೆ ಇಲ್ಲಿ ಹೇಳುವುದಿಲ್ಲ.

ನಂದಿಗ್ರಾಮದಲ್ಲಿ ಸಂಭ್ರಮದಿಂದ ನೆರೆದ ಜನರೆದುರಿನಲ್ಲಿ ರಾಮನು ಗೋಚರವಾದುದು ರಾಮಚಂದ್ರನೆಂಬ ಚಂದ್ರನ ಉದಯವಾಯಿತೆಂದು ಹೇಳುವಾಗ ಚಂದ್ರೋದಯಕಾಲದ ಕಡಲುಕ್ಕು ಮೊದಲಾದ ಇತರ ಕಾರ್ಯಗಳನ್ನು ಈ ಮೇರೆಗೆ ರೂಪಕದಿಂದ ಹೇಳುವನು :—

ಉರ್ಬೆ ನೆಱೆ ಜನರ ಸಂತಸಗಡಲ್ ನಗೆ ಜೊನ್ನ
ಪರ್ಬೆ ಬಾಲರ ಸುಮಂತ್ರಾದಿನಾಯಕರಱಿಳ್
ಮರ್ಬಱೆಯೆ ನೀಱೆಯರ ಕಣ್ವಕ್ಕಿ ನಲಿಯಲ್ ಭರತನ ಬಗೆನೈದಿಲರಳೆ ||
ಒರ್ಬಗೆ ಬೆಮರ್ವನಿಯುನಿಬರೊಳೆತ್ತಂ ತೋರ್ದ
ಪರ್ಬೆ ಮ್ಮೈನವಿರಗೆಯದೊಪ್ಪಿರಲೊಸಗೆಗಮ್ಮ
ಲರ್ಬಿಡದೆ ತೀಡಲಾದುದು ರಾಮಚಂದ್ರೋದಯಂ ಬುಧರ ಬಾಯ್ಸವಿಗೆನೆ ||

೪. ೨೪

ಸಾವಯವರೂಪಕಾಲಂಕಾರದ ಈ ವರ್ಣನೆಯಲ್ಲಿ ಬೇರೆಬೇರೆ ಜನರಿಗೆ ಹೇಗೆ ಹರ್ಷವಾಯಿತೆಂಬುದನ್ನು ಹೇಳಿರುವುದು ಆ ಸಂದರ್ಭಕ್ಕೆ ಬಹು ಸಮರ್ಪಕವಾಗಿರುವುದು. ಕಾವ್ಯಪಠನಫಲಗಳಲ್ಲಿ ನೀತಿಯೂ ಒಂದೆಂಬುದನ್ನು ಎಲ್ಲರೂ ಒಪ್ಪುವರು. ರಾಮಾಯಣವು ಭರತಖಂಡದಲ್ಲಿ ನೀತಿಗೆ ಆದರ್ಶವಾಗಿರುವುದು ; ಅದರಲ್ಲಿ ಪುತ್ರಧರ್ಮ, ಪತ್ನೀಧರ್ಮ, ಭ್ರಾತೃಧರ್ಮ ಮೊದಲಾದುವುಗಳ ಅತ್ಯುಚ್ಚ ಸ್ವರೂಪಗಳು ಕಂಡುಬರುವುವು. ಈ ಕಾವ್ಯದಲ್ಲಿ ರಾಮಾಯಣದೊಳಗಿನ ಬೇರೆ ನೀತಿಗಳಿಗಿಂತ ರಾಮಭರತರ ಸೌಭ್ರಾತ್ರವನ್ನು ಕವಿಯು ಚೆನ್ನಾಗಿ ಚಿತ್ರಿಸಿರುವನು. ಆ ಸಂದರ್ಭದಲ್ಲಿಯೇ ಈ ಕಾಲದ ಕುಭ್ರಾತೃಭಾವವನ್ನು ಪೂರ್ಣ

ವಾಗಿ ಹಳಿದು ಭ್ರಾತೃಭಾವವು ಹೇಗಿರಬೇಕೆಂಬುದನ್ನು ವಿಶದವಾಗಿ ತೋರ್ಪಡಿಸಿರುವನು. ಇದಲ್ಲದೆ "ಅಹಹ! ಪರಹಿತೇಚ್ಛುಕರ ಜಸಮದೆಂತೋ" "ಚಿತ್ರಮಲ್ತೆ ಧಾರ್ಮಿಕರ ಚರಿತಂ" ಮೊದಲಾದ ವಾಕ್ಯಗಳು ನೀತಿಪರಿಪೋಷಕವಾಗಿ ಬೇರೆಬೇರೆ ಸಂದರ್ಭಗಳಲ್ಲಿ ಬಂದಿರುವುವು. ವನದಿಂದ ಮರಳಿ ಬಂದ ರಾಮನು ತಾಯಂದಿರನ್ನು ಕಾಣುವ ಸಂಧರ್ಭದಲ್ಲಿ ರಾಮಚರಿತದಲ್ಲಿರುವ ನೀತಿಯ ಉಚ್ಚಸ್ವರೂಪವನ್ನು ಕಾಣಬಹುದು. ರಾಮನು ಮೊದಲು ಕೈಕೆಯಿಾ ಸುಮಿತ್ರೆಯರನ್ನು ಕಂಡು ಬಳಿಕ ಕೌಸಲ್ಯೆಯ ದರ್ಶನಕ್ಕೆ ಹೋಗುವನು. ಇದಲ್ಲವೇ ಸ್ವಭಾವದ ಉದಾತ್ತತೆಯು! ಹೀಗೆಯೇ ರಾಮಾಯಣಕ್ಕನುರೂಪವಾಗಿ ನೀತಿಗೆ ಆದರ್ಶಗಳಾಗುವಂತೆ ಸೀತಾಲಕ್ಷ್ಮಣಾದಿಗಳ ಸ್ವಭಾವಗಳನ್ನೂ ಕವಿಯು ಚಿತ್ರಿಸಿರುವನು.

ಶಬ್ದಚಮತ್ಕಾರದಿಂದ ತೃಪ್ತಿಬಡುವ ಮಂದಾಧಿಕಾರಿಗಳ ರಂಜನಾರ್ಥವಾಗಿ ರಚಿತವಾದ ಪದ್ಯಗಳೂ ಕೆಲವು ಅಲ್ಲಲ್ಲಿ ಕಂಡುಬರುವುವು. ಈ ಮೊದಲು ಉದಾಹರಿಸಿದ ಕೆಲವು ಪದ್ಯಗಳಲ್ಲಿ ಅನುಪ್ರಾಸವು ಇರುವುದು. ಪೀಠಿಕಾಸಂಧಿಯ ಮೊದಲನೆಯ ಪದ್ಯದಲ್ಲಿ ಪೂರ್ವಾರ್ಧವೇ ಅರ್ಥಭೇದದಿಂದ ಉತ್ತರಾರ್ಧವಾಗಿದೆ. ಐದನೆಯ ಸಂಧಿಯ ಎಂಬತ್ತೊಂದನೆಯ ಪದ್ಯವೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಇದೇ ತೆರದಲ್ಲಿದೆ. ಗೃಹೀತಮುಕ್ತರೀತಿಯ ಶಬ್ದರಚನೆಯನ್ನು

ಅತಿತನೂರುಹಬಲಂ ಬಲವೈರಿನುತನೆಮ್ಮ
ಪಿತಗೆ ಮಿತ್ರಂ ಮಿತ್ರಸೂತಸುತನೂದ್ಭವಂ
ಚತುರಂ ವಿಹಂಗರಾಜಂ ರಾಜರಾಜಸಖಸದ್ಭಕ್ತನಪ್ರತಿಮನು ॥ ೩. ೩೫

ಈ ಪದ್ಯದಲ್ಲಿ ನೋಡಬಹುದು. ಅನುಪ್ರಾಸದ ಅಂದವು ಕೆಳಗಿನ ಪದ್ಯದಲ್ಲಿ ಕಂಡುಬರುವುದು.

ತೊಟ್ಟಿಲೊಳ್ ಪುಟ್ಟಿಮಗು ಪಟ್ಟಿರಲ್ ಮುಟ್ಟಿ ಮೈ
ನಿಟ್ಟಿಸುತ ಮೊಟ್ಟರೆಂದೊಟ್ಟಿಗನನಿಟ್ಟವನ
ಬಿಟ್ಟು ಪಣೆಗಿಟ್ಟು ಪೊಂಬೊಟ್ಟನೆದೆಗಟ್ಟಿಯಾದಿಟ್ಟ ಬಿಜ್ಜಟ್ಟಮೊಲಿಗೆ ॥

ತೊಟ್ಟುಡಿಗೆ ಪಟ್ಟಿ ನೆಱೆದುಟ್ಟುಕೊಂಡಟ್ಟಜದ
ಪಟ್ಟಣಿಗರಿಟ್ಟೆಡೆಯ ಬಟ್ಟೆಯಂ ಮೆಟ್ಟಿ ಬರೆ
ದಿಟ್ಟಗೆಡೆಗೊಟ್ಟು ಪಿಂದಟ್ಟೋರ್ವರ್ಗಳಟ್ಟಸದಿ ಕೊಟ್ಟಪೊಱವಮಟ್ಟಳಾಗ ||
೪. ೯

ಒಟ್ಟಿನಲ್ಲಿ ನೋಡಲು ಕಾವ್ಯವು ಸಣ್ಣದಾಗಿದ್ದರೂ ಯಾವ ಭಾಗವೂ ವಿರಸವೆನಿಸದಂತೆ ತಕ್ಕ ಸಾಮಗ್ರಿಗಳಿಂದ ರಚಿಸಿದುದು ಕವಿಯ ಕೌಶಲವನ್ನು ತೋರ್ಪಡಿಸುವುದು.

ಈ ಕಾವ್ಯದ ಕೊನೆಯ ಭಾಗವು ಇದಕ್ಕೆ ಪುರಾಣಗಳಿಗಿರುವ ಗೌರವವನ್ನೂ, ತತ್ವಜ್ಞಾನಪ್ರತಿಪಾದಕಗ್ರಂಥಗಳ ಗೌರವವನ್ನೂ ತಂದು ಕೊಟ್ಟಿರುವುದು. ಕವಿಯು ಅದ್ವೈತಸಂಪ್ರದಾಯದವನಾಗಿ ಶಿವಪಾರಮ್ಯವನ್ನು* ಹೇಳುವವನಾಗಿ ಇದ್ದರೂ ಗ್ರಂಥವು ರಾಮಚರಿತಪ್ರತಿಪಾದಕವಾದುದರಿಂದ ಶ್ರೀರಾಮಭಕ್ತಿಭಾವವು ಚೆನ್ನಾಗಿ ಪರಿಪೋಷಗೊಳ್ಳುವಂತೆ ಮಾಡಿರುವನು.

ದಟ್ಟಡಿಯ ಸೋಂಕಿನಿಂ ಕಲ್ಗಳೆನಿತೆನಿತೊ ಕುಡಿ
ದಿಟ್ಟಗೆಡೆಗೊಂಡು ಕಾಳ್ಮಿಗಗಳೆನಿತೊ ಮ್ಮೆ
ಮುಟ್ಟೆಲರ್ ಸೋಂಕೆ ಭುಜಂಗಳೆನಿತೆನಿತೊ ಪಾವನಮಾದುವಾರಾಮನಿಂ ||
೩. ೫೪

ಎಂದು ಭರತನು ರಾಮಮಹಿಮೆಯನ್ನು ಕೊಂಡಾಡುವನು. ದೇವತೆಗಳೂ, ಬ್ರಹ್ಮನೂ, ಮುನಿಗಳೂ ಪಟ್ಟಾಭಿಷಿಕ್ತನಾಗಿದ್ದ ರಾಮನನ್ನು ಹಲವು ಬಗೆಗಳಿಂದ ಸ್ತೋತ್ರಮಾಡಿರುವರು. ಈಶ್ವರನು ಕೂಡ "ನಿನ್ನ ನರನಟನೆಯಿಂದ ಧರೆಗೆ ಮಂಗಳಮಾಯ್ತು ನಿನ್ನವತರಣೆ ಪೊಸತಾದುದೆಂದು" ಅಭಿವಂದಿಸುವನು.

---

*(೧) ಶಿವನೊಳಂ ತನ್ನೊಳಂ ಭೇದಮೇಂ ತಿಲಮಾತ್ರಮಿಲ್ಲೆಂಬ ಬಿರುದನುಮೊಱಲ್ದು ಸಾರ್ಥಕಮಂ ನೆಗಱ್ಚುವಂತೆ || ೫. ೬೨.

(೨) ಇಂದುಶೇಖರನ ಕೃಪೆ ಮೊದಲೊಳೆಮ್ಮೊಳ್ (ರಾಮಚಂದ್ರನಲ್ಲಿ) ಆಯ್ತು ೫. ೯೨.

(೩) ಗ್ರಂಥಾರಂಭದಲ್ಲಿರುವ ಸ್ತುತಿ.

ಮುನೀಂದ್ರರು ಮಾಡುವ ಸ್ತೋತ್ರಗಳಲ್ಲಿ ಉಪನಿಷತ್ಪ್ರತಿಪಾದ್ಯವಾದ ತತ್ತ್ವಜ್ಞಾನವು ತುಂಬಿರುವುದನ್ನು ನೋಡಬಹುದು. ಐದನೆಯ ಸಂಧಿಯ ಕೊನೆಕೊನೆಗೆ ಒಂದು ಪದ್ಯದಲ್ಲಿ (೬೯) ವೇದಾಂತಮತಕ್ಕೆ ಅನುಕೂಲವಾದ ಅಧ್ಯಾತ್ಮಯೋಗ (ಸಾಧನಯೋಗ) ವನ್ನೂ ಇನ್ನೊಂದು ಪದ್ಯದಲ್ಲಿ (೭೦) ಸೇಶ್ವರಸಾಂಖ್ಯವಿಚಾರವನ್ನೂ ಹೇಳುವನು.

ಪಟ್ಟಾಭಿಷಿಕ್ತನಾದ ರಾಮನನ್ನು ಮುನೀಂದ್ರರು ಸ್ತುತಿಸುವಾಗ ಬಂದಿರುವ ವೇದಾಂತಪರವಾದ ಗೂಢಾರ್ಥಪದ್ಯವೊಂದನ್ನು ಇಲ್ಲಿ ಅವತರಿಸುವೆವು :—

ಒಂದನೆಡೆಗೆಯ್ದಿಱಡುಭಾವಮಂ ತೋಱಿದು ಮೂ
ಱಂದದಿಂ ಪದೆದು ನಾಲ್ಕಱೊಳ್ಳೈದನಳವಡಿಸಿ
ಸಂದಾಱನೊದೆದು ಸದೆದೇೞನೆಂಟುಮನಿಕ್ಕಿ ಹೃದಯಮರ್ಮಾಂಬರದೊಳು ||
ನಿಂದಿರಿಸಿ ಬಿಂದುರೂಪಮನೊಱಲ್ದೊಂಬತ್ತ
ಱಿಂದಱಗಿ ನುತಿಸಿದನಂತಚಿತ್ತಘನನಿಂ
ತೆಂದಮುಂದಾನಂದದಿಂದೊಂದಿದಮಲಗುಣಸಾಂದ್ರರ್ ಮುನೀಂದ್ರರಂದು ||

೫. ೬೯

ಮುಂದಿನ ಸ್ತೋತ್ರಪದ್ಯಗಳು ಉಪನಿಷದ್ವಾಕ್ಯಗಳನ್ನು ಬಹುವಾಗಿ ಸೂಚಿಸುವುವು. ಉದಾಹರಣೆಗಾಗಿ ಕೆಲವನ್ನು ಇಲ್ಲಿ ತೋರಿಸಿದೆ. ವಿಶ್ವವಿಸ್ತರಣಾದಿಹೇತು (ಪ. ೭೫)—“ಯತೋವಾ ಇಮಾನಿ ಭೂತಾನಿ ಜಾಯಂತೇ”; ಸತ್‌ಸ್ವರೂಪ—“ಸದೇವ ಸೋಮ್ಯೇದಮಗ್ರ ಆಸೀತ್”; ಚರಾಚರದ ಚೈತನ್ಯಾತ್ಮ (೭೭)—“ಏಕೋ ದೇವಃ ಸರ್ವಭೂತೇಷು ಗೂಢಃ”; ನಿಗಮಯೋನಿ (೭೭)—“ಯಸ್ಯ ನಿಶ್ವಸಿತಂ ವೇದಾಃ”; ಜಲರುಹಭವಾಂಡ ಸರ್ವಸ್ವಮಂ ಪೇರೊಡಲೊಳೊಳಕೊಂಡು ವಿಶ್ವತೋಮೂರ್ತಿಯೆನಿಸಿ (೭೭)—“ವಿಶ್ವಸ್ಯೈಕಂ ಪರಿವೇಷ್ಟಿತಾರಮೀಶಂ ವಿಶ್ವತಶ್ಚಕ್ಷುರುತ ವಿಶ್ವತೋಮುಖಃ”; ಅಣೋರಣೀಯನುಂ ಮಹತೋಮಹೀಯನುಂ (೭೮)—ಅಣೋರಣೀಯಾನ್ ಮಹತೋ ಮಹೀಯಾನ್”

ಜೀವಯೋನಿವ್ರಜಮಂ ಮಾಯಾಬೀಜದೋಜೆಯಿಂ ಸೃಜಿಸಿಂ (೭೮)—" ಇಂದ್ರೋ ಮಾಯಾಭಿಃ ಪುರುರೂಪ ಈಯತೆ''; ಆವನಕಲಂಕತೇಜೋರಾಜಿಯಿಂ ಪೊದಳ್ದೀವಿಧುವಿಭಾಕರರ್ ಬೆಳಗುವರ್ (೭೯)—" ತಮೇವಭಾಂತಮನುಭಾತಿ ಸರ್ವಂ'' ಇತ್ಯಾದಿ.

ಈವರೆಗೆ ಉದಾಹರಿಸಿದ ಅವತರಣೆಗಳಿಂದ ಪಟ್ಟಾಭಿಷೇಕ ಕಾವ್ಯವು ಎಂತಹದಿರುವುದೆಂಬುದನ್ನು ಪಾಠಕರು ತಿಳಿಯಬಹುದು. ಅದರಲ್ಲಿ ಸುಲಭತೆಯಿರುವಂತೆ ಕ್ಲಿಷ್ಟತೆಯೂ ಇರುವುದು. ಶಬ್ದಚಮತ್ಕಾರಗಳಿರುವಂತೆ ಅರ್ಥಚಮತ್ಕಾರಗಳೂ ಕಂಡುಬರುವುವು. ಸರಸಸಲ್ಲಾಪಗಳಿರುವಂತೆ ತತ್ತ್ವಜ್ಞಾನವೂ ತುಂಬಿರುವುವು. ನೀತಿಯಿರುವಂತೆ ವ್ಯವಹಾರವೂ ಕಂಗೊಳಿಸುವುದು. ಯಾವ ಭಾಗವನ್ನು ನೋಡಿದರೂ ಒಂದೊಂದು ಚಮತ್ಕಾರದಿಂದ ಕೂಡಿಕೊಂಡಿರುವುದು ಕವಿಯ ರಚನಾಕೌಶಲವನ್ನು ತೋರ್ಪಡಿಸುವುದು.

ಸಂಸ್ಕೃತಗ್ರಂಥದ ಅವಲಂಬನದಿಂದ ಹುಟ್ಟಿದ ಕನ್ನಡಗ್ರಂಥಗಳಲ್ಲಿ ಮೂಲಕ್ಕಿಂತ ಸರಸವಾದ ಗ್ರಂಥವೆಂದರೆ ಲಕ್ಷ್ಮೀಶನ ಜೈಮಿನಿಭಾರತವೊಂದೇ ಎಂಬ ತಿಳಿವಳಿಕೆಯುಂಟು. ಆದರೆ ಈ ಕವಿಯ ಶ್ರೀರಾಮಪಟ್ಟಾಭಿಷೇಕವನ್ನೂ ರಾಮಾಶ್ವಮೇಧವನ್ನೂ ಕಾವ್ಯದೃಷ್ಟಿಯಿಂದ ನೋಡಿದಲ್ಲಿ ಇವು ಸಂಸ್ಕೃತರಾಮಾಶ್ವಮೇಧವನ್ನು ಮಿಾರಿರುವುವೆಂದು ಹೇಳಬಹುದು.

ಉತ್ತಮವಾದ ಕಾವ್ಯಗಳ ಸ್ವಾರಸ್ಯವನ್ನು ಸಹೃದಯರು ಆಮೂಲಾಗ್ರವಾಗಿ ಅವನ್ನು ಓದಿ ಗ್ರಹಿಸಬೇಕಲ್ಲದೆ ಹೇಳಿ ತಿಳುಹಲು ಶಕ್ಯವಿಲ್ಲ. ಈವರೆಗೆ ಉದಾಹೃತವಾದ ಭಾಗಗಳು ಕಾವ್ಯದೊಳಗಿನ ಉಚಿತಸ್ಥಲಗಳನ್ನು ಸ್ಥಾಲೀಪುಲಾಕನ್ಯಾಯದಂತೆ ತೋರಿಸುವುವೆಂಬುದನ್ನು ಮರೆಯಲಾಗದು.

ನಿಜವಾಗಿಯೂ ನೇಮಿಚಂದ್ರನು

ಕಡುಕಂಪಂ ಪಿಡಿಕೆಯ್ಸಲಕ್ಕುಮೆ ಬಱಲ್ದ್ಕೆತಂದ ತಂಗಾಳಿಯಂ
ಪಿಡಿಯಲ್ ಬರ್ಕುಮೆ ತೃಷ್ಣೆಗೊರ್ಕುಡಿತೆಯಿಂ ಕೊಂಡಚ್ಚ ವೆಳ್ದಿಂಗಳಂ
ಕುಡಿಯಲ್ ಬರ್ಕುಮೆ ಕೊರ್ವಿತೆಂದು.........................
ನುಡಿಯಲ್ ಬರ್ಕುಮೆ ಬಾರದಿಂತುಟಿ ವಲಂ ಕಾವ್ಯಾಮೃತಾಸ್ವಾದನಂ ||

(ಅರ್ಧನೇಮಿ ಸಂ. ೧. ೩೧)

ಎಂದು ಹೇಳುವಂತೆ ಕಾವ್ಯಾಮೃತಾಸ್ವಾದವು ಸ್ವಸಂವೇದ್ಯವಲ್ಲದೆ ಇತರರು ಹೇಳಿ ತಿಳಿಸತಕ್ಕುದಲ್ಲವೆಂದೂ, ಇದು ಬದಿಗೆ ಉಳಿದುಹೋಗಿರುವ ಪಟ್ಟಾಭಿಷೇಕಕಾವ್ಯದ ಕಡೆಗೆ ಪಾಠಕರ ಲಕ್ಷ್ಯವು ಹತ್ತಲೆಂದು ಮಾಡಿದ ಅಲ್ಪಪ್ರಯತ್ನವೆಂದೂ ಹೇಳಿ ನೀರಸವಾಗಿ ಬಳೆದಿರುವ ಈ ಲೇಖವನ್ನು ಭರತನ ರಾಮಧ್ಯಾನಶ್ಲೋಕವನ್ನು ಹೇಳಿ ಮುಗಿಸುವೆನು.

ರಾಮ ಜಯರಾಮ ದಶರಥರಾಮ ಕೋದಂಡ
ರಾಮ ಸೀತಾರಾಮ ಪಟ್ಟಾಭಿರಾಮ ರಘು
ರಾಮ ಕೋಸಲರಾಮ ನಿತ್ಯಾತ್ಮರಾಮ ಮೋಹನರಾಮ ಮಿತ್ರರಾಮ ||
ರಾಮ ಕೌಶಿಕರಾಮ ಸಾನಂದರಾಮ ಶಿವ
ರಾಮ ಕೌಸ್ತುಭರಾಮ ಕಲ್ಯಾಣರಾಮ ಶ್ರೀ
ರಾಮ ಸುಂದರರಾಮ ಸುಕುಮಾರರಾಮ ಶಾಂತಾರಾಮ ಭದ್ರರಾಮ ||

(ಸಂ. ೩. ಪ. ೬೨)

ಶ್ರೀಮಾತೃಚರಣಾರವಿಂದಾರ್ಪಿತಂ.

ಶ್ರೀ

ಶ್ರೀರಾಮಾಶ್ವಮೇಧ.

(ಮ|| ಎಂ. ವೆಂಕಟೇಶಯ್ಯಂಗಾರ್, ಎಂ.ಎ. ಇವರಿಂದ)

ಮುದ್ದಣ ಕವಿಯ ಕಾವ್ಯಗಳಲ್ಲಿ ಎಲ್ಲರಿಗೂ ಮೆಚ್ಚಿಗೆಯಾಗುವ ಕಾವ್ಯವೆಂದರೆ ಶ್ರೀರಾಮಾಶ್ವಮೇಧಕಾವ್ಯವೆಂದು ಧಾರಾಳವಾಗಿ ಹೇಳಬಹುದು. ಇದಕ್ಕೆ ಕಾರಣವೇನೆಂದು ಈ ಉಪನ್ಯಾಸದಲ್ಲಿ ಸ್ವಲ್ಪಮಟ್ಟಿಗೆ ವಿಶದವಾಗುವುದು. ಕಾವ್ಯವು ಸರ್ವಸಮ್ಮತವಾಗುವುದಕ್ಕೆ ಒಂದು ಕಾರಣ ಅದು ಗದ್ಯರೂಪದಲ್ಲಿರುವುದು; ಗದ್ಯವಾದರೂ ಸತ್ವವಿಲ್ಲದ ಶೈಲಿಗೆ ಬೀಳದೆ ಭಾವಗರ್ಭಿತವಾದ ಸುಂದರವಾದ ಮಾರ್ಗದಲ್ಲಿ ರಚಿತವಾಗಿರುವುದು. ಈ ಕಾರಣದಿಂದ ಪಾಮರರಿಗೆ ರಂಜಕವಾಗಿರುವಂತೆ, ಹಳಗನ್ನಡದಲ್ಲಿ ರಚಿತವಾಗಿರುವುದರಿಂದ ಪಂಡಿತರಿಗೂ ಈ ಕಾವ್ಯವು ಮೆಚ್ಚಾಗಿದೆ. ಕತೆಯನ್ನು ಹೇಳುವುದರಲ್ಲಿಯೂ, ಪ್ರಕೃತಿಯ ಸೌಂದರ್ಯವನ್ನು ವರ್ಣಿಸುವುದರಲ್ಲಿಯೂ, ಜೀವನದ ತತ್ವವನ್ನು ವಿಮರ್ಶಿಸುವುದರಲ್ಲಿಯೂ, ಪಾಠಕರ ಹೃದಯದಲ್ಲಿ ವಿವಿಧ ಪರಿಣಾಮಗಳನ್ನು ಉಂಟುಮಾಡುವುದರಲ್ಲಿಯೂ ಈ ಕವಿಗೆ ಇರುವ ಅಸದೃಶವಾದ ಶಕ್ತಿಯು ಇಲ್ಲಿ ಪೂರ್ಣಪರಿಪಾಕವನ್ನು ಹೊಂದುವುದು ಇವೆಲ್ಲಕ್ಕಿಂತ ಮುಖ್ಯವಾದ ಕಾರಣ. ಈ ಕಾರಣಗಳಿಂದ ಈ ಕಾವ್ಯವು ಬಹುವಿಧವಾದ ಪಾಠಕವರ್ಗಕ್ಕೆ ಮೆಚ್ಚಾಗಿ ಈತನ ಇತರ ಕಾವ್ಯಗಳಿಗಿಂತಲೂ ಇಷ್ಟೇ ಅಲ್ಲದೆ ಕನ್ನಡಸಾಹಿತ್ಯದ ಒಂದೆರಡು ಕಾವ್ಯಗಳನ್ನು ಹೊರತು ಇತರ ಎಲ್ಲ ಕಾವ್ಯಗಳಿಗಿಂತಲೂ ಹೆಚ್ಚಾಗಿ ಪಾಠಕರ ಆದರಣೆಯನ್ನು ಸಂಪಾದಿಸಿ ಇದೆ.

ಕತೆ ಹೇಳುವುದರಲ್ಲಿ ಮುದ್ದಣನಿಗೆ ಇರುವ ನೈಪುಣ್ಯವು ಅವನ ಕತೆಯ ಆರಂಭದ ದೃಶ್ಯದಲ್ಲಿಯೇ ಚೆನ್ನಾಗಿ ವ್ಯಕ್ತವಾಗುವುದು. ಈ ನೈಪುಣ್ಯವನ್ನು ವ್ಯಕ್ತಪಡಿಸುವುದಲ್ಲದೆ ಈ ದೃಶ್ಯವು ವಿಷಯವನ್ನು ಸುಂದ

ರವಾಗಿ ಆರಂಭಿಸುವ ಕಾರಣದಿಂದ ಅದನ್ನು ಇಲ್ಲಿ ಸೂಕ್ಷ್ಮವಾಗಿ ಕೊಡುತ್ತೇವೆ. ಮಳೆಗಾಲ ಬಂತು. ಕಾಲಪುರುಷನು ಗುಣವಿಹೀನನಾಗಿ ನಿಸ್ತೇಜನಾಗಿ ಜಡನಾಗಿರುವನು. ನವಿಲು ಸಂತೋಷದಿಂದ ಮೈಯುಬ್ಬಿ ಕುಣಿಯುತ್ತಿದೆ. ಚಾತಕವು ಬಾಯ್ಬಿಟ್ಟು ಮಳೆಯ ಹನಿಗೆ ಕಾದಿದೆ. ಕೆಂಪೇರಿದ ಕಣ್ಣಿನ ಕೋಗಿಲೆಯು ಮಾವಿನಮರದ ಸೆಳೆಗೊಂಬಿನಲ್ಲಿ ಮೂಗನಂತಿದೆ. ಈರೀತಿಯಲ್ಲಿ ಸಂಪ್ರಾಪ್ತವಾದ ವರ್ಷಾಕಾಲದಲ್ಲಿ ಒಂದು ದಿವಸ

“ ಬೈಗುಂಬೊೞ್ತಿನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆೞ್ದು ಇದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳಚೌಕಿಗುಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನಿವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುತಿರ್ದಳ್ ”

ಎಂದು ಕವಿಯು ಕತೆಯನ್ನು ಆರಂಭಿಸುವನು. ಈ ಆರಂಭದ ಚಿತ್ರದ ಸೊಗಸನ್ನು ವರ್ಣಿಸಿ ಹೇಳಬೇಕಾದದ್ದಿಲ್ಲ. ಇದರಲ್ಲಿ ಪ್ರಕೃತಿಯ ವರ್ಣನೆ ಸೇರಿದೆ. ಒಂದು ಆಸ್ಥಾನವೂ ಆದಕ್ಕೆ ಸಂಬಂಧಪಟ್ಟ ಒಡ್ಡೋಲಗವೂ ಸೂಚಿಸಲ್ಪಟ್ಟಿವೆ. ಅರಮನೆಯಲ್ಲಿ ಸಂಭಾವಿತನಾಗಿರುವ ಕವಿಯ ಪರಿಚಯವನ್ನು ನಾವು ಮಾಡಿಕೊಳ್ಳುತ್ತೇವೆ. ಅವನ ಸಂಸಾರದ ಭವ್ಯಸುಖದ ಒಂದು ಭಾಗವನ್ನು ಸ್ವಲ್ಪಮಟ್ಟಿಗೆ ನೋಡುತ್ತೇವೆ. ಇಷ್ಟರಲ್ಲಿಯೇ ಕವಿಯ ವಿಷಯದಲ್ಲಿ ಮರ್ಯಾದೆಯೂ ಅವನ ಪತ್ನಿಯ ವಿಷಯದಲ್ಲಿ ಗೌರವವಿಶ್ವಾಸಗಳೂ ಉಂಟಾಗುತ್ತವೆ. ಏಕೆಂದರೆ ಅವನು ಮಾನ್ಯನಾದ ಕವಿ; ಈಕೆ ಸಂಪ್ರದಾಯವಂತೆಯಾದ ಪತಿಪರಾಯಣೆಯಾದ ಅವನ ಗೃಹಲಕ್ಷ್ಮಿ. ಸ್ವಪ್ನದಲ್ಲಿ ಕಂಡ ಯಾವುದೋ ಸುಂದರವಾದ ಸನ್ನಿವೇಶವು ಇಲ್ಲಿ ಕವಿಯ ಜೀವನದಲ್ಲಿ ನಮ್ಮೆದುರಿಗೆ ಬಂದಂತೆ ನಮಗೆ ಭಾವ ಉಂಟಾಗುತ್ತದೆ. ಹೀಗೆ ತನ್ನ ಮತ್ತು ತನ್ನ ಪತ್ನಿಯ ವಿಷಯವನ್ನು ಸ್ವಲ್ಪ ಸೂಚಿಸಿ ಕವಿಯು ಮುಂದಕ್ಕೆ ಹೀಗೆ ಹೇಳುತ್ತಾನೆ.—

“ಈವುಪಚಾರದಿನಾತನ ಪಸಿವುಂ ಬಳಲ್ಕೆಯುಂ ಮುಡಿಯೆ ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿದೀಯುತುಮಿರೆ ಇಂತು ಸುಖಸಲ್ಲಾಪಂಗೊಳ್ಳುತ್ತಿರ್ದರ್.

ಆದೆಂತೆನೆ :—

ಮನೋರಮೆ—(ಮೆಲ್ನುಡಿಯಿಂ) ನೋೞ್ಪುದೀಪಗಲ್ಗಳೆಂತೊ ಪಿರಿಯವು ಪಗಲುಮಿರುಳುಂ ಸುರಿವ ಬಲ್ಸೋನೆಯ ಜಿನುಂಗಿನತ್ತಣಿನೆನ್ನ ಬಗೆಯುಂ ಬೇಸತ್ತುದು ಅಂತದಱಿನೇನಾನುಮೊಂದು ನಲ್ಗತೆಯಂ ಪೇೞಿ!

ಮುದ್ದಣಂ—ಪ್ರಾಣೇಶ್ವರೀ! ತಡೆಯೇಂ! ಇನಿತೊಂದು ಬಯಕೆ ತಲೆದೋಱೆ ಆವ ಗಹನಂ? ಆದೊಡಮಾವ ನಲ್ಗತೆಯಂ ಪೇೞ್ವೆಂ. ಏಂ ಭೋಜಪ್ರಬಂಧಂ? ವಿಕ್ರಮವಿಜಯಂ? ಮಹಾವೀರಚರಿತಂ?

ಮನೋರಮೆ—ಇಸ್ಸಿ! ಇವರೊಳೆನಗಲ್ಕಱಿಲ್ಲಂ; ಉೞಿದೊಡಮುೞಿದೊಡಂ ಬಟ್ಟೆದೋಱುಪ ರಸಭರಿತಂ ಚರಿತಮ್ಮೆಸೆ.

ಮುದ್ದಣಂ—ನಿನಗಾವ ರಸದೊಳಿಷ್ಟಂ? ಶೃಂಗಾರರಸದೊಳೇ? ವೀರರಸದೊಳೇ? ಹಾಸ್ಯರಸದೊಳೇ?

ಮನೋರಮೆ—ಆವ ರಸದೊಳೆಂದೊಡೇಂ? ನವರಸದೊಳಂ.

ಮುದ್ದಣಂ—ಅಂತಿರೆ ಮತ್ತಮಾ ಕತೆಯಾವುದು?

ಮನೋರಮೆ—ರಾಮಾಯಣದೊಳೇನಾನುಮೊಂದು.

ಈ ಕವಿಗೆ ರಾಮಾಯಣದ ವಿಷಯದಲ್ಲಿ ಬಹಳ ಪಕ್ಷಪಾತ. ಇವನ ಮುಖ್ಯವಾದ ಮೂರು ಕಾವ್ಯಗಳೂ ರಾಮಾಯಣದಿಂದ ಉದ್ಧರಿಸಿದ ಆಖ್ಯಾನಗಳು. ಕವಿಯು ಜನಾಂಗದ ಪ್ರತಿನಿಧಿಯೆಂದು ವಿಮರ್ಶೆಯಲ್ಲಿ ಹೇಳುವುದು ವಾಡಿಕೆ. ಮುದ್ದಣನ ಈ ಪಕ್ಷಪಾತಕ್ಕೆ ವಿಮರ್ಶೆಯ ಈ ಸೂತ್ರವು ಸುಲಭವಾಗಿ ಅನ್ವಯಿಸುವುದು. ನಮ್ಮ ಜನಾಂಗದ ಜೀವನದಲ್ಲಿ ಆಳವಾಗಿ ಊರಿರುವ ಪುಣ್ಯಕಥೆಯೆಂದರೆ ರಾಮಾಯಣವೆಂದೇ ಹೇಳಬಹುದು. ಇದರಿಂದಲೇ ನಮಗೆ ಈ ಕಾವ್ಯದ ವಿಷಯದಲ್ಲಿ ಆದರವು ಮೊದಲಲ್ಲೇ ತಲೆದೋರುವುದು. ಅಲ್ಲದೆ ನಮಗೆ ಸಹಾಯವಾಗಿ ಮನೋರಮೆ ನಿಂತಿದಾಳೆ. ನಮಗೂ ಎಲ್ಲ ರಸಗಳಲ್ಲೂ ಇಷ್ಟ. ನಮಗೆ ಬೇಕಾದದ್ದನ್ನು ಮನೋರಮೆ ಕೇಳಿರುವಳು. ಇನ್ನು ಮುಂದೆಯೂ ಕತೆಯು

ಸಾಮಾನ್ಯರಾದ ನಮ್ಮ ಯೋಗ್ಯತೆಗೆ ತಕ್ಕುದಾಗಿರುವಂತೆ ಅವಳು ನೋಡಿಕೊಳ್ಳುವುದಕ್ಕೆ ಕಾವಲಿರುತ್ತಾಳೆ. ರಾಮಾಯಣದಲ್ಲಿ ಯಾವ ಭಾಗವನ್ನು ಹೇಳುವುದೆಂದು ಸ್ವಲ್ಪ ಚರ್ಚೆಯಾದ ಮೇಲೆ ಮನೋರಮೆಯು ರಾಮಾಶ್ವಮೇಧದ ಕತೆಯನ್ನು ಕೇಳಬೇಕೆಂದು ಹೇಳುವಳು. ಮುದ್ದಣನು ಆಗಲಿ, ಯಾವ ಧಾಟಿಯಲ್ಲಿ ಹೇಳಲಿ? ಪದ್ಯದಲ್ಲಿ ಹೇಳಲೆ? ಗದ್ಯದಲ್ಲಿ ಹೇಳಲೆ? ಎನಲು ಮನೋರಮೆಯು—"ಪದ್ಯಂ ವಧ್ಯಂ; ಗದ್ಯಂ ಹೃದ್ಯಂ; ಹೃದ್ಯಮಪ್ಪ ಗದ್ಯದೊಳೆ ಪೇಳ್ವುದು" ಎಂದು ಉತ್ತರ ಕೊಡುವಳು. ಮುದ್ದಣನು ಸರಸಿ; ಇನ್ನೂ ಚಿಕ್ಕವಯಸ್ಸೆಂದು ಕಾಣುತ್ತದೆ. ಹೆಂಡತಿಯೊಡನೆ ಇಲ್ಲಿ ಸ್ವಲ್ಪ ಹಾಸ್ಯಮಾಡುತ್ತಾನೆ.

ಮುದ್ದಣಂ—"(ನಸುನಗೆಯಿಂ) ಅದಂತಿರ್ಕೆ. ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗವಂ ಪೊನ್ನಕಂಠಿಕೆಯಂ ಮೆಚ್ಚನೀವರ್ ನೀನೀವುದೇಂ?

ಮನೋರಮೆ—ಪೆಱತೇಂ ಎನ್ನನೇ ನಾನೀವೆಂ"

ಮುದ್ದಣನು ಕವಿಯಾದರೂ ಪ್ರಪಂಚಜ್ಞಾನವಿಲ್ಲದವನಲ್ಲ. "ಅಱಿಯಾ ಮುನ್ನಮೆ ನಿನ್ನ ತಾಯ್ತಂದೆವಿರೆನಗಿತ್ತರೆಂಬುದಂ?" ಎನ್ನುವನು. ಅದಕ್ಕೆ ಮನೋರಮೆಯು ಅರಮನೆಯವರು ಕಾವ್ಯವನ್ನು ನೋಡಿದಮೇಲಲ್ಲವೆ ಬಿರುದನ್ನು ಕೊಡುವುದು. ತಾನೂ ಕತೆಯನ್ನು ಕೇಳಿ ಚೆನ್ನಾಗಿದ್ದರೆ ಬಲ್ಲಂತೆ ಸನ್ಮಾನಿಸುವುದಾಗಿ ಹೇಳುವಳು.

ಮುದ್ದಣಂ—"ಒಳ್ಳಿತೊಳ್ಳಿತು! ಕತೆಯುನಾಲಿಸಿ ಬೞಿಕ್ಕವಿನಾಯೆನೋಂದೊಡೆ ಬಿಡೆ ನೋೞ್ಪೆಂ.

ಮನೋರಮೆ—"ಆನುಂ ನೋೞ್ಪೆಂ ಕತೆಯ ಪುರುಳಿಂತಿರ್ಕುಮೆಂದು"

ಹೀಗೆ ಒಪ್ಪಂದವಾದಮೇಲೆ ಕವಿಯು ಕಾವ್ಯವನ್ನು ಆರಂಭಿಸುವನು. "ಸ್ವಸ್ತಿಶ್ರೀಮತ್ಸುರಾಸುರೇಂದ್ರನರೇಂದ್ರ ಮುನೀಂದ್ರ ಫಣೀಂದ್ರ ಮಣಿಮಕುಟತಟಘಟಿತ"—ಈ ಮಾತಿನ ಆಡಂಬರವನ್ನು ಕೇಳಿ ಮನೋರಮೆಯು "ಓ ಓ! ತಡೆ! ತಡೆ! ವಸುಧೆಗೊಡೆಯನಪ್ಪ ರಾಮಚಂದ್ರನ

ಕತೆಯಂ ಪೇೞೆನೆ ಬಸದಿಗೊಡೆಯರಪ್ಪ ಸುರೇಂದ್ರರ ಚರಿತೆಯಂ ಪೇೞ್ವಿ ದೇಂ ? ಸಾಲ್ಗುಂ, ಸಾಲ್ಗುಂ. ಇಂತೆರ್ದೆಗೊಳ್ವ ಕತೆಗೆಂತುಡುಗೊಱೆಯಂ ಗೆಯ್ವೆನೋ !'' ಎಂದು ಹೇಳುವಳು. ಮುದ್ದಣನು ರಾಮಚಂದ್ರನ ಕತೆಯನ್ನು ಹೇಳುವ "ಸಕ್ಕದದೊಂದು ಚಲ್ವು ಇದು'' ಎಂದು ಹೇಳು ವನು. ಕೇವಲ ಪಾಂಡಿತ್ಯಪ್ರದರ್ಶಕವಾದ ಸಂಸ್ಕೃತಭೂಯಿಷ್ಠವಾದ ಕನ್ನಡದ ಶೈಲಿಯು ನಮ್ಮ ಕಾವ್ಯಗಳಲ್ಲಿ ಹೊಸದಲ್ಲ. ಈಗಣ ಜನರಿಗೆ ಅಂಥ ಶೈಲಿಯ ವಿಷಯದಲ್ಲಿ ಎಷ್ಟು ಬೇಸರ ಎಂಬುದು ಸರ್ವವಿದಿತವಾ ಗಿದೆ. ನಾವು ಯಾರಾದರೂ ಹೇಳುವಂತೆ ಮನೋರಮೆಯು "ಲೇಸು, ಲೇಸು ! ನೀರಿಱಿಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು ; ಕನ್ನಡದ ಸೊಗಸನಱಿಯಲಾರ್ತೆನಿಲ್ಲೆನಗೆ ಸಕ್ಕದದ ಸೊಗಸಂ ಪೇೞ್ವುದು ಗಡ !'' ಎಂದು ಹೇಳುವಳು.

ಮುದ್ದಣಂ—ಅಪ್ಪೊಡಿನ್ನೆಂತೊ ಒರೆವೆಂ.

ಮನೋರಮೆ—ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇೞ್ವುದು ; "ಕನ್ನಡಂ ಕತ್ತುರಿ" ಯಲ್ತೆ.

ಮುದ್ದಣಂ—ಅಪ್ಪುದಪ್ಪುದು. ಆದೊಡಂ ಸಕ್ಕದವೊಂದೆ ರನ್ನವಣಿಯಂ ಪೊನ್ನಿಂ ಬಿಗಿದಂತೆಸೆಗುಂ; ಆದಱಿಂ ಕರ್ಮಣಿಸರದೊಳ್ ಚೆಂಬವಳವಂ ಕೋದಂತಿರೆ, ರಸವೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ"

ಎಂದು ಮಾತುಕೊಡುವನು.

ಕತೆಯ ಈ ಪ್ರಸ್ತಾವನೆಯಲ್ಲಿ ಕವಿಯು ಸೌಂದರ್ಯದ ವರ್ಣನೆ ಯಿಂದ ಪಾಠಕರ ಮನಸ್ಸನ್ನು ರಂಜಿಸಿ ತನ್ನ ಸಂಸಾರದ ಸುಖದ ದಿಗ್ದ ರ್ಶನದಿಂದ ಪಾಠಕರಿಗೆ ನೆಮ್ಮದಿಯನ್ನುಂಟುಮಾಡಿ ಮನೋರಮೆಯ ಮೂಲಕ ಪಾಠಕರ ಇಷ್ಟವನ್ನು ಕುರಿತು ಪ್ರಸಂಗಮಾಡಿ ಸ್ವಲ್ಪ ಹಾಸ್ಯ ದಿಂದ ಉಲ್ಲಾಸವನ್ನುಂಟುಮಾಡಿ ಒದೆರಡು ಮಾತಿನಲ್ಲಿ ಇಂಥ ಕಾವ್ಯವು ಹೇಗಿರಬೇಕೆಂದು ಸೂಚಿಸಿ ಕನ್ನಡಕ್ಕೆ ಮರ್ಯಾದೆಯನ್ನು ಪ್ರಕಾಶಪಡಿಸಿ

ಸಂಸ್ಕೃತದ ವಿಷಯದಲ್ಲಿ ಅವಜ್ಞತೆಯನ್ನು ತೋರದೆ ಸುಂದರವಾದ ಕಾವ್ಯವನ್ನು ರಚಿಸುವುದೆಂಬ ಪ್ರತಿಜ್ಞೆಯನ್ನು ತಿಳಿಸಿರುವನು. ಈ ಮಾತನ್ನು ಎಷ್ಟು ಚೆನ್ನಾಗಿ ನೆರವೇರಿಸುವನೆಂಬುದು ಕಾವ್ಯವನ್ನು ಓದಿದವರಿಗೆ ತಿಳಿಯುವುದು.

ಇನ್ನು ಮುಂದೆ ಮುದ್ದಣಮನೋರಮೆಯರ ಇನ್ನೂ ಕೆಲವು ಸರಸ ಸಲ್ಲಾಪಗಳನ್ನು ಎತ್ತಿ ಹೇಳುತ್ತೇವೆ. ಈ ಮಧ್ಯೆ ಕವಿಯ ಪ್ರಕೃತಿಸೌಂದರ್ಯದ ವರ್ಣನೆಯ ಶಕ್ತಿಯನ್ನು ತೋರಿಸುವಂತೆ ಒಂದು ಕಾವ್ಯಭಾಗವನ್ನು ಇಲ್ಲಿ ಕೊಟ್ಟಿದೆ. ವಸಂತಋತು ಆರಂಭವಾಗಲು ರಾಮದೇವರು ಯಜ್ಞಮಾಡುವುದಕ್ಕೆ ಆರಂಭಿಸಿದರೆಂಬ ಸಂದರ್ಭದಲ್ಲಿ ಕವಿಯು ವಸಂತಋತುವನ್ನು ಹೀಗೆಂದು ವರ್ಣಿಸಿದ್ದಾನೆ.

"ಮಾಮರನೆಳದಳಿರ ರಸಮಂ ಪೀಱಿದು ಕಳಕಂಠನ ಕಂಠನಾಳಕ್ಕೆಱಿದುಬ್ಬಸಮಂ ಕಳೆದು ಕಲನಾದಮಂ ಪೆರ್ಚಿಸಿಯುಂ, ಅರನೇಱಿಲ ದೋರೆವಣ್ಣಂ ತೀದು ನಕ್ಕಿಸುತರಗಿಳಿಯ ನಾಲಗೆಯಂ ತೆಳ್ಪನಾಗಿಸಿ ತೊದಳ್ನುಡಿಯಂ ತಿರ್ದಿಯುಂ, ಪುಷ್ಪಧೂಳಿಯಂ ಲೆಪ್ಪಂ ಬಱಿದದಿಮುರ್ಕತ್ತೆಯ ಸುರಯಿಯ ಪೊಸಬಂಡನೊಡಲ್ಗಿತ್ತು ಮಱಿದುಂಬಿಗಳ್ಗೆ ಸಂಪಿಗೆಯತ್ತಣಿನೊದವಿದ ಶಿರೋಭ್ರಮಣಮನಱಿಯಿಸಿಯುಂ, ಬಸಂತಂ ಬೆಜ್ಜನೆನೆ ಮೈದೋಱಲೊಡಂ; ಅಂದು ಕೋಡುಕೋಡಿಂದೋಡಿ ಮಲಯಮಂ ಮಱಿಗೊಂಡ ಪವನನೀಗಳತ್ತಣಿಂ ಪೊಱಮಟ್ಟು ಮೆಲ್ಲಮೆಲ್ಲನೆಡೆಯೆಡೆಯ ಬನಬನಮಂ ಪುಗುತಂದು ಹೊಂಚಿ ಮುಂಚಿ ಕೆಳೆಯಂಗೆ ನೆರವಾದನೆನೆ ದಕ್ಷಿಣಾನಿಲಂ ಮಂದಂಮಂದಂ ವಹಿಸುತ್ತಿರ್ಕುಂ; ಫಲವೃಕ್ಷಂಗಳೆಲ್ಲಂ ಕಾಯ್ಕಸುಗಾಯ್ ಪಣ್ ದೋರೆವಣ್ ತನಿವಣ್ಗಳಿಂದೆಸೆಯೆಯುಂ, ಪೂವಳ್ಳಿಗಳ್ ನನೆ ಕೊನೆಮುಗುಳರೆಮುಗುಳ್ ಬಿರಿಮುಗುಳುಳ್ಳಲರ್ದ ಪೊಸಮಲರ್ಗಳಿಂದೆ ಸೊಗಯಿಸೆಯುಂ, ಮನೋಹರಮಾಯ್ತು ಪೊಸಸುಗ್ಗಿ; ಬಿರಯಿಗಳೆರ್ದೆವಡಿ ಬಿಜ್ರನೆ ಬಿರಿಯೆ, ವಿಟವಿಶಾನಕ್ಕೆ ಪೊಸಬೇಟದ ಸೊಂಪು ನೆರೆಯೆ, ಕುಲಟಾಂಗನೆಯರ್ಗೆ ಜವ್ವನದೇಳ್ಗೆ ಮೆಱಿಯೆ, ಕಾವನೆತ್ತಂ ಮೈದೋಱದೆ ಸಂಚರಿಸಲ್ತೊಡಂಗಿದಂ; ರಾಘವನ ಪ್ರತಾಪದಂತಿರೆ ನೇಸಱ ಕಾಯ್ಪುಂ ಪೆರ್ಚಿದುದು; ಪುರಲಕ್ಷ್ಮಿಯೊಡನೆ ವನಲಕ್ಷ್ಮಿಯ ಕೆಳೆತನಂ ಪಿರಿದಾಯ್ತು."

ಈ ವರ್ಣನೆಯಲ್ಲಿ ಕವಿಯ ಊಹೆಯು ಅವನ ವಸ್ತುವಿಜ್ಞಾನಕ್ಕೆ ವಿಲಕ್ಷಣವಾದ ಕಳೆಯನ್ನು ಕಟ್ಟಿದೆ. ಮರಿದುಂಬಿಗಳು ತಿಳಿಯದೆ ಸಂಪಿ

ಗೆಯ ಹತ್ತಿರ ಹೋಗಿ ಶಿರೋಭ್ರಮಣ ಉಂಟಾಗಿ ತೊಂದರೆಪಡುತ್ತಿವೆ ಯಂತೆ. ವಸಂತನು ಬಂದು ಅವಕ್ಕೆ ಪುಷ್ಪಧೂಳಿಯನ್ನು ಲೇಪಿಸಿ ಅದಿ ಮುರ್ತ್ತೆ ಸುರಗಿ ಪುಷ್ಪಗಳ ಹೊಸರಸವನ್ನು ಸೇವಿಸುವುದಕ್ಕೆ ಕೊಟ್ಟು ಆ ಭ್ರಾಂತಿಯನ್ನು ನಿವಾರಣೆ ಮಾಡುತ್ತಾನಂತೆ. ಇರುವುದನ್ನು ತಿಳಿಯು ವುದು ವಸ್ತುವಿಜ್ಞಾನ. ವಿಜ್ಞಾನಾಂಶವನ್ನು ಪರೋಕ್ಷಾವಸ್ಥೆಯಲ್ಲಿ ಕಣ್ಣೆದುರಿಗೆ ಕಂಡಂತೆ ಅನುಭವಿಸುವುದು ಪ್ರತಿಭೆ. ಪ್ರತಿಭೆಯಿಂದ ಮುಂದೆ ಬಂದ ವಿಜ್ಞಾನಾಂಶಕ್ಕೆ ಆತ್ಮೀಯವಾದ ಒಂದು ವಿಲಾಸವನ್ನು ಆರೋ ಪಿಸಿ ಅದರ ಅಂದವನ್ನು ಹೆಚ್ಚಿಸುವುದು ಊಹೆ. ಈ ವರ್ಣನೆಯಲ್ಲಿ ಈ ಮೂರು ರೀತಿಯ ಶಕ್ತಿಯೂ ಉಜ್ವಲವಾಗಿ ಕಾಣುತ್ತದೆ. ಹಾಗೆಯೇ ದಕ್ಷಿಣಾನಿಲನ ವರ್ಣನೆಯನ್ನು ನೋಡಿ. ಆ ವರ್ಣನೆಯ ಕೊನೆಯಲ್ಲಿ "ಮಂದಂಮಂದಂ ವಹಿಸುತಿರ್ಕುಂ" ಎಂದು ಹೇಳುವಲ್ಲಿ ತೆಂಗಾಳಿಯ ಧೀರಗಮನವು ರೂಪುಗೊಂಡಿರುವುದನ್ನು ನೋಡಿ. ಕಾವ್ಯಪ್ರಪಂಚದಲ್ಲಿ ಸುಳಿದಾಡಿರುವ ಮನಸ್ಸಿಗೆ ಸಂಸ್ಕೃತಕಾವ್ಯಗಳಲ್ಲಿ ಅನೇಕಕಡೆ ಬಂದಿರಬೇ ಕಾದ ಈ ಪದಸಂಯೋಜನದಿಂದ ತೋರಿಬರುವ ಭಾವನಾಪ್ರಪಂಚದ ವಿಸ್ತಾರವೆಂಥದೆಂದು ಊಹಿಸಿ. ಇದಿಷ್ಟರ ಜತೆಗೆ ಇಲ್ಲಿ ಜೋಡಿಸಿರುವ ಮಾತುಗಳ ಸೊಗಸನ್ನೂ ಔಚಿತ್ಯವನ್ನೂ ನೋಡಿ. ಬಿರಿಯೆ, ನೆರೆಯೆ, ಮೆರೆಯೆ ಎಂದು ಮಧ್ಯದಲ್ಲಿ ಅವ್ಯಕ್ತಮಧುರವಾಗಿ ಸೇರಿಬರುವ ಅಂತ್ಯ ಪ್ರಾಸದ ಸೊಗಸನ್ನು ನೋಡಿ. ಇನ್ನು ಈ ವರ್ಣನೆಯು ಉತ್ತಮ ಕವಿ ತೆಯ ಸರ್ವಲಕ್ಷಣಗಳಿಂದ ಸಂಪನ್ನವಾಗಿ ಕವಿಗೆ ಸಾಹಿತ್ಯದಲ್ಲಿ ಅತ್ಯುತ್ತ ಮವಾದ ಸ್ಥಾನವನ್ನು ಕೊಡತಕ್ಕುದಾಗಿದೆ ಎಂಬುದನ್ನು ಮತ್ತೆ ಹೇಳ ಬೇಕಾದದ್ದಿಲ್ಲ.

ಪ್ರಕೃತಿಯ ಸೌಂದರ್ಯದ ವರ್ಣನೆಯಲ್ಲಿ ಈ ಕವಿಯು ಯಾವ ಸೌಲಭ್ಯವನ್ನೂ ಕೌಶಲವನ್ನೂ ತೋರಿಸುವನೋ ಮನುಷ್ಯಸ್ವಭಾವ ನಿರೂಪಣದಲ್ಲಿಯೂ ಅದೇ ಸೌಲಭ್ಯವನ್ನೂ ಕೌಶಲವನ್ನೂ ತೋರಿಸು

ವನು. ಸೀತಾದೇವಿಯು ಒಂದುಸಲ ಕನ್ನೆವಾಡದ ನೆಲೆವನೆಯ ಮೊಗಸಾಲೆಯಲ್ಲಿ ತೂಗುಮಂಚದಲ್ಲಿ ಕುಳಿತು ಕೆಳದಿಯಾದ ಚಂದ್ರಮತಿಯೊಡನೆ ಇರುತ್ತಿರಲು ಎದುರಿಗೆ ಒಂದು ಗುಬ್ಬಚ್ಚಿಯು ತನ್ನ ಎಳೆಯಮರಿಗೆ ಗುಟುಕನ್ನು ಕೊಟ್ಟು ಅದನ್ನು ರೆಕ್ಕೆಯಲ್ಲಿ ಸೇರಿಸಿಕೊಂಡು ಮುದ್ದಿಸಿದುದನ್ನು ನೋಡಿ ಮಕ್ಕಳ ಬಯಕೆಯಿಂದ ಹೀಗೆಂದಳಂತೆ.

"ಮಿತ್ರೆ ನೋಡೆ! ನೋಡೆ! ನೀಡುಂ ನೀಡದ ಪಕ್ಕಿಯುಮೆನ್ನಂ ಬಂಜೆಯೆನುತೀಡಿಪಂತೆನ್ನಿದಿರೊಳ್ ಪಿಳ್ಳೆಯಂ ಮುದ್ದುಗೆಯ್ಗುಂ. ಇಂತಿರ್ಪಿನವಿನ್ನೊಲ್ಲೆನೀಯೆಡೆಯಂ. ಎತ್ತಾನುಂ ಪೆಱತೊಂದೆಡೆಗೆ ಪೋಪಂ. ಅಲಸುವೆನೀ ನೋಟಕ್ಕೆ. ಓ! ಈ ಪಕ್ಷಿಯನೊಂದನೆ ಪಗೆವನೇತರ್ಕೆಯೊ ನಿರ್ನೇರಂ! ಎನ್ನನ್ನರ್ಗೆ ಲೋಕವೆ ಪಗೆ! ಪಲವಾತಿನೇನಕ್ಕುಂ. ನಿಕ್ಕುವಂ ಮಕ್ಕಳಂ ಪಡೆದೋವಲಾಕ್ಕಂ ನೋಂತೆನಿಲ್ಲಕ್ಕುಂ. ಎಳವರಯದೊಳ್ ನಲ್ಗೂಸಂ ಪೆತ್ತು ಬಾಲಕೇಳಿಯಂ ಕಣ್ದಣಿಯೆ ಕಂಡು ಸಂಸಾರದ ಸಾರವಿದೆನುತೆ ಸಂತಸಂಬಡುವ ಪೆಣ್ಗಳೆ ಧನ್ಯರಲ್ತೆ! "ಬಂದಳಿವಳ್! ಬಂಜೆ! ಕಂದನಂ ಪಿಡಿಯಲ್ಕೀಯದಿರ್! ಬಡವಕ್ಕುಂ! ಕಿಟ್ಟವಿಡದಿರ್! ಕಂದಿ ಬಸವಳಿಗುಂ; ನೋಡವಿಡದಿರ್! ಕಣ್ ಕೊಂಕುಗುಂ; ನುಡಿಯಿಸಲೆಡೆಗುಡದಿರ್! ನುಡಿಯೊಗ್ಗುಗುಂ" ಎಂಬ ನಾಡ ಪೆಣ್ಗಳ ಬಿಱುನುಡಿಗೆ ತಡೆದುಂ ಬಾಳ್ವ ವಂಧ್ಯೆಯರೆ ಜೀವನ್ಮೃತೆಯರ್ ವಲಂ. ಸಖೀ! ಮಾಂಜದುಸಿರ್; ಕುಲವಂ ವರ್ಧಿಪ ಕಂದನಂ ಪಡೆದು ತೊರೆದ ಮೊಲೆಯೂಡಿ ತೊಟ್ಟಿಲೊಳಿಟ್ಟು ಪಾಡಿ ತೂಗಿ ಕೂಸು ನಿದ್ದೆವೋಪುದಂ ತಾನು ಮರೆಗಳಿಗೆ ಕೆಲದೊಳ್ ಮಂಡಿಸಿ ಬಾಲಲೀಲೆಯಂ ನೆನೆನೆನೆದು ಮತ್ತಂ ಕುವರನೆೞ್ಚತ್ತನಾಗೆ ಪಿಡಿದೆತ್ತಿ ಮುಂಡಾಡಿಯುಂ ಮುದ್ದಿಸಿಯುಂ ತೊದಲ್ನುಡಿಯೊಳ್ ನುಡಿಸಿಯುಂ ಕಿಱುನಗೆಯೊಳ್ ನಗಿಸಿಯುಂ ಪೊಸಬಿನದದಿನಾಡಿಸಿಯುಂ ಮನದ ಬೇಸಱಿಂ ಕಳೆವೊಂದು ಸೈಪೆನ್ನೊಳೆಂದಿಂಗಾದಪುದೋ!"

ಮುದ್ದಣನಿಗೆ ಈ ಪುಸ್ತಕವನ್ನು ಬರೆಯುವಾಗ್ಗೆ ಪ್ರಾಯಶಃ ಮಕ್ಕಳಿರಲಿಲ್ಲವೆಂದು ಈಗ ಹತ್ತುವರ್ಷಗಳ ಹಿಂದೆ ಒಂದು ಸಂದರ್ಭದಲ್ಲಿ ಊಹಿಸಿ ಹೇಳಿದೆನು. ಈ ಗ್ರಂಥಕರ್ತನ ಚರಿತೆಯು ಈಚೆಗೆ ತಿಳಿದು ಬಂದಿದೆ. ಅದನ್ನು ನೋಡುವುದರಲ್ಲಿಯೂ ಈ ಊಹೆಯು ಸರಿಯಾಗಿರಬೇಕೆಂದು ತೋರುವುದು. ಮುದ್ದಣನೂ ಮನೋರಮೆಯೂ ಆಡುವ ಮಾತು ಗಂಡಹೆಂಡಿರು ಹೊಸಸಂಸಾರದ ರಾಗರಸಭರಿತವಾದ ಪ್ರಣಯ

ದಲ್ಲಿ ಆಡುವ ಮಾತುಗಳು. ಕವಿಯು ಅಲ್ಲಲ್ಲಿ ಪತ್ನಿಯನ್ನು ಸಂಬೋಧಿಸಿ ಕರೆಯುವ ಸೊಗಸಿನಿಂದಲೇ ಇದು ಸ್ಪಷ್ಟವಾಗುವುದು.—ರಮಣೀ, ಪ್ರಾಣೇಶ್ವರಿ, ಎನ್ನರಸಿ, ಕೇಳೆಲೆ ಬಾಲೆ, ಬಾಲೇಂದುಫಾಲೆ, ಪೆಣ್ಮಣಿ ಕೇಳ, ಪ್ರಾಣನಾಯಿಕೆ, ದೇವೀ, ಎನ್ನ ರನ್ನಗೈಪಿಡಿ, ಮೋಹನಾಂಗಿ, ಎನ್ನ ನಿಚ್ಚದ ಪೂಜೆಯ ಕಟ್ಟೆಚ್ಚಿನ ಪ್ರಾಣಲಿಂಗಮೆ, ಒಚ್ಚೇರಗಣ್ಣ ಪೆಣ್ಣೆ, ಎನ್ನ ಕೈಮರ್ಚಿನ ಗೆಡೆಯೂಟದ ಮುತ್ತಿನ ಸೆಂಡೆ, ಎನ್ನ ಚೆನ್ನ ಪೊನ್ನರಸಿ, ಎನ್ನ ಸಿಂಗರದ ಸಿರಿಯೆ. ಇವನಿಗೆ ಹೆಂಡತಿಯನ್ನು ಏನೆಂದು ಕರೆಯುವುದೆಂಬ ವಿಷಯದಲ್ಲಿ ಯೋಚನೆಯಿಲ್ಲವೇ ಇಲ್ಲ. ಸಂಸಾರದಲ್ಲಿ ಕೆಲವುಕಾಲ ಕಳೆದಮೇಲಾದರೂ ಪತ್ನಿಯ ವಿಚಾರದಲ್ಲಿ ಈ ಉತ್ಸಾಹವಿರುವುದು ಅಪೂರ್ವ. ಈತನು ಪತ್ನಿಯನ್ನು ಹತ್ತು ಹೆಸರಿನಿಂದ ಸಂಬೋಧಿಸುವಂತೆಯೇ ಆಕೆಯು ಯುವತಿಗೆ ಸಹಜವಾದ ಒಂದು ನಾಚಿಕೆಯಿಂದಲೂ ಇವನ ಪ್ರೀತಿಗೆ ಕಡಮೆಯಲ್ಲದ ತನ್ನ ಒಂದು ಪ್ರೀತಿಯನ್ನು ಸೂಚಿಸುವಂತೆಯೂ, ಇವನನ್ನು ಒಂದೊಂದೇ ಮಾತಿನಿಂದ—ರಮಣ, ಎನ್ನೊಡೆಯ, ನಲ್ಲ, ಅಣ್ಮ, ಎನ್ನರಸ, ಎಂದು ಸಂಬೋಧಿಸುವಳು. ಅಲ್ಲದೆ ಮುಂದೆ ತಿಳಿಯುವಂತೆ ಕವಿಗೆ ಊಟದ ವಿಷಯದಲ್ಲಿ ಇನ್ನೂ ಉಜ್ವಲವಾದ ಉತ್ಸಾಹ. ಮಕ್ಕಳಾದವರಿಗೆ ಸಾಮಾನ್ಯವಾಗಿ ಈ ಉತ್ಸಾಹವಿರುವುದಿಲ್ಲ. ಮನೋರಮೆಯೂ ಹೊತ್ತು ಹೋಗುವುದಿಲ್ಲವೆಂದು ಬೇಸರಪಡುತ್ತಾ ಕವಿಯು ಬಂದೊಡನೆ ಕತೆ ಹೇಳೆಂದು ಕೇಳುವುದರಿಂದ ಎಲ್ಲ ಕೆಲಸಕ್ಕಿಂತ ದೊಡ್ಡದಾದ ಮಕ್ಕಳನ್ನು ಸಾಕುವುದೆಂಬ ಕೆಲಸವನ್ನು ಇನ್ನೂ ಕೈಗೊಂಡಿರಲಿಲ್ಲವೆಂದು ತೋರುವುದು. ಸೀತೆಯು ಪಕ್ಷಿಯನ್ನು ನೋಡಿ ತನ್ನ ಬಂಜೆತನವನ್ನು ನಿಂದಿಸಿಕೊಂಡಳೆಂಬ ಭಾಗದಲ್ಲಿ ಕವಿಯು ಎಂದಾದರೂ ತನ್ನ ಪತ್ನಿಯು ಹೇಗೆ ಎಣಿಸುವಳೋ ಎಂದು ತನಗೆ ತೋರಿದ ಭಾವವನ್ನು ವರ್ಣಿಸಿರಬಹುದು. ಇದರಂತೆಯೇ ಮಕ್ಕಳಿಲ್ಲದವರು ಮಕ್ಕಳು ಇರುವವರ ಸುಖವನ್ನು ಹೇಗೆ ನೆನೆಯುವರೆಂಬುದೂ ಈ

ಸಂದರ್ಭದಲ್ಲಿ ವರ್ಣಿತವಾಗಿದೆ. ಆ ವರ್ಣನೆಯಲ್ಲಿ ಕೂಡ ಇದೇ ಆತ್ಮೀಯತೆಯು ಕಂಡುಬರುವುದು.

ಕವಿಯು ಕತೆ ಹೇಳುವುದರಲ್ಲಿ ಅತಿಶಯವಾದ ಕೌಶಲವನ್ನು ತೋರಿಸಿರುವನೆಂದೂ ಮನೋರಮೆಯಿಂದ ಪಾಠಕರ ಅಭಿಪ್ರಾಯಕ್ಕೆ ರೂಪುಗೊಟ್ಟಿರುವನೆಂದೂ ಹೇಳಿದೆ. ಇದು ಈ ಗ್ರಂಥದಲ್ಲಿ ಅನೇಕಕಡೆ ಕಂಡುಬರುವುದು. ಶ್ರೀರಾಮನು ಸೀತೆಯನ್ನು ಕಾಡಿಗೆ ಒಯ್ದು ಅಲ್ಲಿ ಬಿಟ್ಟುಬರುವಂತೆ ಲಕ್ಷ್ಮಣನಿಗೆ ಆಜ್ಞೆಯನ್ನಿತ್ತು ಕಳುಹಿಸಲಾಗಿ ಆತನು ಅತ್ತಿಗೆಯನ್ನು ಕರೆದುಕೊಂಡು ಉತ್ತರಾಭಿಮುಖವಾಗಿ ಹೊರಟನು. ಇಲ್ಲಿ ಮೊದಲು ಸೀತೆಯನ್ನು ಕಳುಹಿಸುವುದೇ ಬಿಡುವುದೇ ಎಂದು ನಾಲ್ಕೈದು ಪುಟದಷ್ಟು ಚರ್ಚೆ ಇದೆ. ಲಕ್ಷ್ಮಣನ ಖೇದವನ್ನು ಕುರಿತು ವಿಸ್ತಾರವಾದ ವರ್ಣನೆಯಿದೆ. ಸೀತಾದೇವಿಯ ಪ್ರಯಾಣಸನ್ನಾಹದ ವಿವರವಾದ ವರ್ಣನೆ, ಗಂಗಾನದಿಯ ದೀರ್ಘವಾದ ವರ್ಣನೆ, ಗಾಳಿ, ನದಿ, ಕಾಡು, ಇವುಗಳ ಸರ್ವಲಕ್ಷಣಸಮನ್ವಿತವಾದ ಸುಂದರವಾದ ವರ್ಣನೆಗಳು ಇವೆ. ಇದಾದಮೇಲೆ ಲಕ್ಷ್ಮಣನು "ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳ್ ಅಣ್ಣನ ಕಟ್ಟಾಣತಿಯನೊರೆದು ಭೂಮಿಜೆಯ ನುಱೆಸಿ ಪೋದಂ" ಎಂದು ಹೇಳಿ ಕವಿಯು "ಶ್ರೀ ರಾಮಾಶ್ವಮೇಧದೊಳ್ ಸೀತಾಪರಿತ್ಯಾಗಮೆಂಬ ಪಂಚಮಾಶ್ವಾಸಂ ಸಂಪೂರ್ಣಂ" ಎಂದು ಆಶ್ವಾಸವನ್ನು ಮುಗಿಸುತ್ತಾನೆ. ಪಾಠಕರಿಗೆ ಕಾಡಿನ ಸೊಗಸೂ ಗಂಗಾನದಿಯ ನೀರಿನಲ್ಲಿಯ ಸುಳಿಯ ಚಂದವೂ ಬೇಕಾಗಿರುವುದಕ್ಕಿಂತ ಸೀತೆಯ ಪಾಡು ಏನಾಯಿತೆಂದು ತಿಳಿಯುವುದು ಹೆಚ್ಚಾಗಿ ಬೇಕಾಗಿರುತ್ತದೆ. ಕವಿಯು ಇದನ್ನು ಬಲ್ಲನು. ಆದುದರಿಂದ ಕವಿಯು ಕಾಡಿಗೂ ಸುಳಿಗೂ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಸೀತೆಯನ್ನು ಕಾಡಿನಲ್ಲಿ ಬಿಟ್ಟ ವಿಷಯವನ್ನು ಒಂದು ಮಾತಿನಲ್ಲಿ ಮುಗಿಸುತ್ತಾನೆ. ಇದರಿಂದ ಈ ಸಂದರ್ಭದ ದುಃಖವು ನೂರುಮಡಿ ಗುಣಿತವಾಗುವುದು. ಇದಲ್ಲದೆ ವರ್ಣನೆಯ ವಿಸ್ತಾರದಿಂದ ಮತ್ತೊಂದು ಪರಿಣಾಮವು ಪಾಠಕರ ಮನಸ್ಸಿನಲ್ಲಿ

ಉಂಟಾಗುತ್ತದೆ. ಸೀತೆಯು ತಪೋವನವನ್ನು ನೋಡಬೇಕೆಂದು ಹೊರಟಿದ್ದಳು. ಇಲ್ಲಿ ಸುಂದರವಾದ ವನವಿದೆ, ಪಾವನೆಯಾದ ಗಂಗೆ ಇದ್ದಾಳೆ. ಆದರೆ ಸೀತೆಗೆ ಆ ಬಯಕೆಯ ಸುಖವು ಪ್ರಾಪ್ತವಾಗಲಿಲ್ಲ. ಇದರಿಂದ ಈ ಎಲ್ಲ ಸೌಂದರ್ಯದ ವಿಷಯದಲ್ಲಿ ಸಾಮಾನ್ಯವಾಗಿ ಇರಬಹುದಾದ ಉತ್ಸಾಹಕ್ಕೆ ಬದಲಾಗಿ ಪಾಠಕರ ಮನಸ್ಸಿನಲ್ಲಿ ಒಂದು ವಿರಕ್ತಿಯುಂಟಾಗುವುದು. ಕತೆ ಕೇಳುವವರ ಮನಸ್ಸನ್ನು ವೀಣೆಯಂತೆ ಕೈಗೆ ತೆಗೆದುಕೊಂಡು ಅದರಲ್ಲಿ ಇಷ್ಟಬಂದ ಭಾವಗಳನ್ನು ಹೀಗೆ ಧಾರಾಳವಾಗಿ ಉಂಟುಮಾಡುವದು ಕವಿತಾಶಕ್ತಿಯ ಪೂರ್ಣಾವೇಶಕ್ಕೆ ಮಾತ್ರ ಸಾಧ್ಯ. ಈ ಕವಿಯು ಪಾಠಕರ ಮನಸ್ಸನ್ನು ಹೀಗೆ ಹಿಡಿದುಕೊಳ್ಳಬಲ್ಲನು. ಲಕ್ಷ್ಮಣನು ಸೀತೆಯನ್ನು ಬಿಟ್ಟುಹೋದನು ಎಂಬ ಮಾತನ್ನು ಕೇಳಿ ಮನೋರಮೆಯು ಕಂಬನಿಗರೆದು

> "ಆಃ! ಎನ್ನೊಡೆಯ! ನೀನುಮೆಂತು ಕಲ್ಮನನಾದಯ್. ಒರ್ತಡವೆಯೆ ದೇವಿಯಂ ಕಾರಡವಿಯೊಳುೞಿದು ಲಕ್ಷ್ಮಣಂ ಪೋದನೆಂಬೊಡೆ ಮೈದುನಂಗಮಾದೊಡಮೆಂತು ಮನಮಾದುದೋ! ಮೇಣೆಂತು ದೇವಿಯರ್ಗೆ ಕಾವಲಿರದೆ ಪೋದನೋ! ತೊಱೆದು ಪೋಪನ್ನಂ ಸೀತೆಯೇನೆಂದು ಮಱುಗಿದಳೋ! ಅಕ್ಕಟಾ! ಪೆಣ್ಗಳೊಂದು ಬಾೞ್ತೆ ಬಾೞ್ತೆಯೆ!"

ಎನ್ನುವಳು. ನಮಗೂ ಕಣ್ಣಿನಲ್ಲಿ ಚಿಮ್ಮಿರುವ ಅಶ್ರುಬಿಂದುವನ್ನು ಒರಸಿಕೊಳ್ಳುವುದಕ್ಕೆ ಸ್ವಲ್ಪ ಅವಕಾಶ ಸಿಕ್ಕುತ್ತದೆ. ಈ ಅವಕಾಶದಲ್ಲಿ ಒಂದು ಕ್ಷಣ ಕವಿಯು ವರ್ಣಿಸುವ ಮೊದಲೇ ಸೀತೆಯ ಅವಸ್ಥೆಯನ್ನು ಭಾವನೆಯಲ್ಲಿ ಸ್ವಲ್ಪ ಕಂಡು ಮತ್ತಷ್ಟು ಕುಗ್ಗುತ್ತೇವೆ. ಮನೋರಮೆಯ ಪ್ರಾರ್ಥನೆಯಂತೆ ಅವನು ಆ ಅವಸ್ಥೆಯನ್ನು ವರ್ಣಿಸುವುದಕ್ಕೆ ಆರಂಭಿಸುವ ವೇಳೆಗೆ ಆ ಖೇದದ ಬಹುಭಾಗವನ್ನು ಅನುಭವಿಸಿ ಮುಗಿಸಿ ನೊಂದರೂ ಸ್ತಿಮಿತವಾಗಿರುವ ಮನಸ್ಸಿನಿಂದ ಕವಿಯ ವರ್ಣನೆಯನ್ನು ಕೇಳಲು ಸಿದ್ಧರಾಗುತ್ತೇವೆ. ಇದೆಲ್ಲ ಮುದ್ದಣನ ಕತೆ ಹೇಳುವ ನೈಪುಣ್ಯವನ್ನು ತೋರಿಸುವುದು.

ಇದೇ ಸಂದರ್ಭದಲ್ಲಿ ಸಮಯಕ್ಕೆ ತಕ್ಕಂತೆ ಮಾತನಾಡಿಸುವ ಶಕ್ತಿಯು ಕಾವ್ಯದಲ್ಲಿ ತೋರಿಬರುವುದು. ತಾನು ಸೀತೆಯನ್ನು ಬಿಟ್ಟು ಹೋಗುವೆನೆಂದು ಲಕ್ಷ್ಮಣನು ಹೇಳುವ ಮೊದಲು ದೇವಿಯು ಸಂದರ್ಭವನ್ನರಿಯದೆ ಮೈದುನನನ್ನು ಕುರಿತು “ಕಂದ, ಈ ಅಡವಿಯಲ್ಲಿ ಆಶ್ರಮವೆಲ್ಲಿಯದು! ನೀನು ದಾರಿ ತಪ್ಪಿದೆ” ಎಂದು ಹೇಳುವಳು. ತಾನು ಮಾಡ ಬಂದಿರುವ ಕೆಲಸದ ಧ್ಯಾನದಿಂದ ಖಿನ್ನನಾಗಿರುವ ಲಕ್ಷ್ಮಣನು ಅತ್ತಿಗೆಯ ಈ ಪ್ರೇಮಪೂರಿತವಾದ ಸಂಬೋಧನೆಯನ್ನು ತಡೆಯಲಾರದೆ ಒಡನೆ ಅವಳ ಕಾಲಿಗೆ ಬಿದ್ದು ನನ್ನನ್ನು “ಕಂದ” ಎಂದು ಕರೆಯಬೇಡಿ, “ಹಗೆ” ಎಂದು ಎಣಿಸಿ; ಎಂದು ತಾನು ಮಾಡ ಬಂದಿರುವ ಕಾರ್ಯವನ್ನು ತಿಳಿಸುವನು. ಲಕ್ಷ್ಮಣನ ಮಾತನ್ನು ಕೇಳಿ ದೇವಿಯು ಮೈಮರೆತು ಮತ್ತೆ ಅರಿದು ಬಹುವಿಧವಾಗಿ ಹಂಬಲಿಸಿ ಕೊನೆಗೆ ತನ್ನ ತಾಯ ತಾಳ್ಮೆಗೆ ಎಣೆಯಾದ ತಾಳ್ಮೆಯಿಂದ ಆ ತಾಯ ಪ್ರೇಮಕ್ಕೆ ಸರಿಯಾದ ಪ್ರೇಮದಿಂದ

ಕಂದ, ನಿನ್ನಲ್ಲಿ ತಪ್ಪಿಲ್ಲ. ನಿಮ್ಮ ಅಣ್ಣನು ಕೇಳಿದರೆ “ನಿನ್ನಾಣತಿಗಬಲೆ ಮಱುಗಿದಳಿಲ್ಲ. ಮಾರ್ನುಡಿದಳಿಲ್ಲ. ಮುನಿಸಾಂತಳಿಲ್ಲ. ಬೆರ್ಚಿದಳಿಲ್ಲ. ಕೊಱ್ಕಿದಿಗೊಂಡಳಿಲ್ಲ. ದೂಱಿದಳಿಲ್ಲ. ನೀನೇ ಗತಿಯೆಂದು ನಿನ್ನಡಿಯಂ ನೆನೆಯುತ್ತೆ ಕಡೆಪೊೞ್ತಂ ಪಾರುತಿರ್ಪಳೆಂದು ಬಿನ್ನವಿಸಯ್”

ಎಂದು ಹೇಳುವಳು.

ಈ ಮಾತು ದೇವಿಯಲ್ಲಿ ಎಷ್ಟು ಉಚಿತವಾದುದು! ಹೀಗೆಯೇ ಊರ್ಮಿಳೆ ಮೊದಲಾದವರಿಗೆ ಏನು ಹೇಳುವುದೆಂದೂ ತಾನು ಇನ್ನು ಉಪಯೋಗಿಸಲಾಗದ ವಸ್ತ್ರಾಭರಣಗಳನ್ನು ತನ್ನ ದಾಸಿಯರಿಗೆ ಓರಗಿತ್ತಿಯರಿಗೆ ಯಾವಯಾವುದನ್ನು ಕೊಡಬೇಕೆಂದು ಲೋಕಮಾತೆಯು ಹೇಳಿರುವುದನ್ನು ಕವಿಯು ವರ್ಣಿಸಿರುವುದೂ ಸಂದರ್ಭೋಚಿತವಾಗಿ ಹೃದಯದ್ರಾವಕವಾಗಿ ಇವೆ. ಇದನ್ನೆಲ್ಲಾ ಕಾವ್ಯವನ್ನು ಓದಿಯೇ ತಿಳಿಯಬೇಕು.

ಸೀತೆಯನ್ನು ತ್ಯಜಿಸಿರುವುದರಿಂದ ರಾಮನ ವಿಷಯದಲ್ಲಿ ನಮಗುಂಟಾಗಿರುವ ಅಸಂತುಷ್ಟಿಯನ್ನು ಕವಿಯು ಇಷ್ಟರಲ್ಲೇ ಮನೋರಮೆಯ ಬಾಯಲ್ಲಿ ವ್ಯಕ್ತಗೊಳಿಸಿ ಮುಂದಣ ಕತೆಗೆ ಪಾಠಕರ ಮನಸ್ಸನ್ನು ಹೀಗೆ ಸರಿಪಡಿಸಿಕೊಳ್ಳುವನು.

ಮುದ್ದಣಂ—ಎನ್ನ ಕೊಂಡಾಟದ ಬಾಳ್ವೆಣವೆ! ಇಂತು ಭೂಜಾತೆ ಪ್ರಾಚೇತಸನೊಲ್ಮೆಗಾಪಿಂ ಪುಣ್ಯಾಶ್ರಮದೊಳಿರ್ಪಿನಮಿತ್ತಲ್ ಸಾಕೇತನಗರದೊಳ್ ಸೀತಾರಾಮಂ ತನ್ನ ಬಿರ್ದಿನ............

ಮನೋ—ನಲ್ಲ! ಏ ಮಾತೊ? ಸೀತೆಯನಂತುಱಿದುಮೇತಱ ಸೀತಾರಾಮಂ ಪೋ! ಮಾಣ್! ಅವಂಗಿನ್ನೆತ್ತಣ ಸೀತೆ? ಅಪ್ಪೊಡಿನ್ನಾಕಲ್ಲಿರ್ದೆಯಂ ರಾಮನೋ ಭೀಮನೋ? ಏನ್.

ಮುದ್ದಣಂ—ಎನ್ನ ಕೈಗಳಸವೆ! ಇಂತುಮೆಂಬರೆ! ಶ್ರೀರಾಮಂ ಕಲ್ಲಿರ್ದೆಯನೆ! ಆಃ! ಬಱಿಕ್ಕಮಾತನ ಪ್ರಳಾಪಮಂ ನೀಂ ಕೇಳ್ದುದಿಲ್ಲಂ.

ಮನೋ—ಏಂ ತಾನೆ ತಲೆವೊಯ್ದುಂ ಮಱುಗಿದನೆ?

ಮುದ್ದಣಂ—ರಾಮಂ ತಲೆವೊಯ್ದನೇಂ? ತಾಂ ಯಶೋಧನನಪ್ಪಿನಂ ಲೋಕಾಪವಾದ ಭೀತಿಗಡವಿಗಟ್ಟಿದರಸಿಯೊಳೇಂ ಪಗೆಯೆ?

ಮನೋ—ಪಗೆಯೇಂ ನಗೆಯೇಂ? ಬಡವೆಯೊರ್ವಳ್ ಕಾಡಿಂಗಾದಳ್ಸೆ.

ಮುದ್ದಣಂ—ಇಂತಿದನೆ ನೆನೆನೆನೆದಱಿಂಬಂ ಪಲುಂಬಿದಂ.

ಮನೋ—ಏಂ ತನಗೆ ಪೆಱರ್ ಪೆಂಡಿರಿಲ್ಲೆಂದೆಯೆ?

ಮುದ್ದಣಂ—ಪರಿಹಾಸಂ ಸಾಲ್ಗುಂ ಕೇಳ್; ಏಗಳ್ ಲಕ್ಷ್ಮಣಂ ಸೀತೆಯಂ ಕೊಂಡೊಯ್ದನೆಂಬ ವಾರ್ತೆ ಕೇಳಿಸಿದುದಾಗಳೆ ಪಶ್ಚಾತ್ತಾಪದಿಂ ರಾಘವನಂ ಮನವೊಳಗೊಳಗೆ ಬೆಂದು ಬೇಗುದಿಯೊಳಿರ್ದತ್ತು.

ಸೀತೆಯು ವಾಲ್ಮೀಕಿಯ ಆಶ್ರಮವನ್ನು ಸೇರಿದಳೆಂದು ಕವಿಯು ಈ ಮೊದಲೇ ತಿಳಿಸಿರುತ್ತಾನೆ. ಹೀಗೆ ಹೆಜ್ಜೆಹೆಜ್ಜೆಗೂ ಕತೆಹೇಳುವಲ್ಲಿ ಕವಿಯು ಪಾಠಕರ ಮನಸ್ಸಿನ ಯಾವ ಅವಸ್ಥೆಯನ್ನು ಹೇಗೆ ಉಂಟುಮಾಡಿಕೊಳ್ಳುವುದೆಂದು ಚೆನ್ನಾಗಿ ತಿಳಿದು ಆಯಾರೀತಿಯಲ್ಲಿ ಅವರ ಮನಸ್ಸನ್ನು ತಿದ್ದಿಕೊಳ್ಳುವನು.

ಈ ಕಾವ್ಯದ ಪ್ರಕೃತಿಸೌಂದರ್ಯದ ವರ್ಣನೆಯ ಸೊಗಸನ್ನು ತೋರುವಂತೆ ಈ ಮೊದಲೇ ಉದಾಹರಣೆಯನ್ನು ಕೊಟ್ಟಿದೆ. ಬಹು ಸುಂದರವಾದ ಮತ್ತೊಂದು ವರ್ಣನೆಯ ವಿಮರ್ಶೆಯಿಂದ ಈ ಅಭಿಪ್ರಾಯವನ್ನು ಪುಷ್ಟೀಕರಿಸಬಹುದು. ಶತ್ರುಘ್ನನು ಸೇನಾಸಮೇತನಾಗಿ ಯಜ್ಞಾಶ್ವದ ಹಿಂದೆ ಪ್ರಯಾಣಮಾಡುತ್ತಿರಲು ಮುಂದೆ ಒಂದು ನೀಲ ಪರ್ವತವು ಕಂಡಿತೆಂದು ಕವಿ ವರ್ಣಿಸುತ್ತಾನೆ. ಈ ವರ್ಣನೆಯಲ್ಲಿ ಚಿತ್ರಗಾರನು ಚಿತ್ರಬರೆಯುವುದರಲ್ಲಿ ಯಾವ ಉಪಾಯಗಳನ್ನು ಉಪಯೋಗಿಸುವನೋ ಆ ಉಪಾಯಗಳನ್ನೆಲ್ಲ ಕವಿಯು ಉಪಯೋಗಿಸಿರುವನು. ಈ ಪರ್ವತದ ವರ್ಣನೆಯುದ್ದಕ್ಕೂ ನೀಲಿಮೆಯ ಸಂಕೇತವು ಮತ್ತೆಮತ್ತೆ ಮೈದೋರುತ್ತದೆ. ಕತ್ತಲೆಯ ವೃಂದ; ನೆರೆದ ನೀರ್ವೊಟ್ಟಣ; ಮಾಕಾಳಿಯ ಎಡಮೊಲೆ; ಕರ್ಮಣಿಯ ಪಾಸರೆ; ಚಂಡಿಕೆ; ಮಹಿಷಾಸುರ; ಸಿಂಧುರಂಗಮಂಡಲ; ಬಾಣಸಿನ ಆವಿಗೆ; ಪುರುಷೋತ್ತಮನ ನಿಡುವಣೆ; ಪೊಂಬಾಳೆಯ ತೋಟ; ಈ ನೀಲಿಮೆಯ ಚಿತ್ರದ ಒಟ್ಟಿನ ಬಣ್ಣ; ಈ ಒಟ್ಟಿನ ಬಣ್ಣದ ಮೇಲೆ ಒಂದೆರಡು ಬೇರೆಯ ಬಣ್ಣಗಳು. ಮಹಿಷಾಸುರನ ದಂಡೆಗರುಳು, ಅಚ್ಚವಳಕಿನ ಗಂಡಶೈಲ; ತನಿಗೆಂಡದಂತಿರುವ ರಂಗಮಾಣಿಕ; ಮೂರುಕಡೆಯಿಂದ ಪುರುಷೋತ್ತಮನ ಹಣೆಯ ತ್ರಿಪುಂಡ್ರದಂತೆ ಹರಿದುಬರುವ ಬೇರೆಬೇರೆ ಬಣ್ಣದ ನೀರಿನ ಧಾರೆ; ಸ್ಪರ್ಶಶಿಲೆ; ಆ ಒಟ್ಟು ಬಣ್ಣದ ಮೇಲೆ ಈ ಬಣ್ಣಗಳು ಅಂದವಾಗಿ ಲೇಪಿಸಲ್ಪಟ್ಟು ಚಿತ್ರವು ಸುಂದರವಾಗಿದೆ. ಸಾಮಾನ್ಯವಾದ ಪರ್ವತವನ್ನು ಅದರ ಸೌಂದರ್ಯವನ್ನು ಗ್ರಹಿಸುವ ಬುದ್ಧಿಯಿಂದ ವರ್ಣಿಸುವ ಸಂದರ್ಭದಲ್ಲಿಯೂ ಈ ಲಕ್ಷಣಗಳು ಕಂಡುಬರಬಹುದು; ಆದರೆ ಇಲ್ಲಿ ಪರ್ವತವು ಪಾವನವೂ ಪುಣ್ಯಾತ್ರಯವೂ ಎಂಬ ಒಂದು ಧ್ವನಿಯೂ ಇದೆ. ಮಾಕಾಳಿ; ಮಹಿಷಾಸುರನನ್ನು ಕಡಿಯಹೋದ ಚಂಡಿಕೆ; ದಿನವೂ ಬರುತ್ತಿರುವ ಯಾತ್ರಿಕರು; ಪುರುಷೋತ್ತಮನ ನೀಳವಾದ ಹಣೆ. ಒಟ್ಟಿನ ಚಿತ್ರವು ಸುಂದರ

ವಾಗುವುದಲ್ಲದೆ ಆದರ ಒಂದೊಂದು ಭಾಗವೂ ಸಂಪೂರ್ಣವಾಗುವಂತೆ ಕರ್ಮಣಿಯ ಪಾಸರೆಯುನ್ನೂ ಪರ್ವತದ ತಳ್ಪಲನ್ನೂ ಗಂಡಶೈಲವನ್ನೂ, ರಂಗುಮಾಣಿಕದ ಅಗಲ್ತೆಯನ್ನೂ, ನೀರಿನ ಧಾರೆಯನ್ನೂ, ಕವಿಯು ವಿವರವಾಗಿ ವರ್ಣಿಸಿರುವನು. ಎಲ್ಲಕ್ಕೂ ತಕ್ಕ ಮಾತು ; ಮಾತಿನ ಸೇರಿಗೆ ಯಲ್ಲಿ ಸಣ್ಣಮಾತು ದೊಡ್ಡಮಾತು ಸೇರಿದ ಮಾತುಗಳ ಯುಕ್ತಿಯುಕ್ತ ವಾದ ವ್ಯೂಹರಚನೆಯಿಂದ ವಾಕ್ಯದ ಶಬ್ದವು ಮೃದುವಾಗಿ ಕೊನೆಯಾ ಗುವುದು. ಈ ವರ್ಣನೆಯ ಚಿತ್ರಕಾರ್ಯವು ಅಜಾಂತದ ಚಿತ್ರಗಳ ಕೌಶ ಲವನ್ನೂ ಇದರ ಶಬ್ದದ ಸೌಂದರ್ಯವು ಶಾಸ್ತ್ರಾನುಗುಣವಾಗಿ ಮೃದಂ ಗದಲ್ಲಿ ನುಡಿಸಬಹುದಾದ ಒಂದು ಆವರ್ತದ ನಾದತರಂಗದ ಸೌಂದರ್ಯ ವನ್ನೂ ಹೋಲುವುದು. ಈ ವರ್ಣನೆಯು ಭಾವನೆಯಲ್ಲಿಯೂ, ಊಹೆ ಯಲ್ಲಿಯೂ, ಶೈಲಿಯಲ್ಲಿಯೂ ಸಾಹಿತ್ಯಸಾಮ್ರಾಜ್ಯದ ಎಲ್ಲೆಯನ್ನು ಮುಟ್ಟಿರುವುದು.

ಈ ಕವಿಯು ಉಳಿದ ರಸಗಳನ್ನು ಸ್ವಾಧೀನಮಾಡಿಕೊಂಡಿದ್ದಂ ತಯೇ ಹಾಸ್ಯವನ್ನೂ ಪಡೆದಿದ್ದನೆಂದೂ ಈ ಕಾವ್ಯದಲ್ಲಿ ಅಲ್ಲಲ್ಲಿ ತೋರು ತ್ತದೆ. ಸತಿಪತಿಯರ ಆರಂಭಸಂಭಾಷಣದಲ್ಲಿ ಇದು ಕಾಣುವುದು. ಇದ ರಂತೆ ಇನ್ನೆರಡು ಸಂವಾದಗಳಲ್ಲಿ ಈ ರಸವು ಧಾರಾಳವಾಗಿ ಉಕ್ಕಿಬರು ವುದು. ಈ ಸಂವಾದಗಳಿಂದ ಈ ಕಾವ್ಯಕ್ಕೆ ಒಂದು ಅಪೂರ್ವವಾದ ಸೊಗಸು ಬಂದಿರುವುದರಿಂದ ಇವುಗಳನ್ನು ಇಲ್ಲಿ ಉದ್ಧರಿಸಿದೆ. ಕಥೆ ಹೇಳುತ್ತಾ ಮುದ್ದಣನು ಮನೋರಮೆಯನ್ನು ಒಂದುಸಲ 'ದೇವೀ' ಎಂದು ಸಂಬೋಧಿಸುವನು. ಸ್ವಲ್ಪಹೊತ್ತು ಕತೆಯನ್ನು ಕೇಳಿದ್ದು ಕವಿ ಯೊಡನೆ ಎರಡು ಮಾತನಾಡೋಣವೆಂದು ಆಕೆಯು ಯಾವ ದೇವಿ, ಶ್ರೀ ದೇವಿಯೇ, ಭೂದೇವಿಯೇ ಎಂದು ಸಂಭಾಷಣೆಯನ್ನು ಮೊದಲು ಮಾಡು ವಳು. ಆಮೇಲೆ ಮಾತು ಹೀಗೆ ನಡೆಯುವುದು.—

ಮು—ರತಿದೇವಿ.

ಮ—ಅಂತಪ್ಪೊಡೆ ನೀಂ ಕಾಮದೇವಂ.

ಮು—ಅಕ್ಕೆ ದೇವಿಯೊಂದು ಹಸಾದಂ.

ಮ—ಎಲೆ ಮದನ ಮೋಹನರಾಜ ! ಅಂತಿರ್ಪೊಡೆ ನೀಂ ಪೇೞ್ದ ರತಿಯನೆ ಬಣ್ಣಿಸಿ ಪೊಗೞ್ ನೋೞ್ಪೆಂ.

ಮು—ಓ ! ಏತಱ ಮಾತೊ ! ಎನ್ನಳವೆ ?

ಮ—ಆಃ ! ರತಿಯಂ ಬಣ್ಣಿಸಲ್ಕೆ ಸಲ್ಲದ ನೀನೇತರ ಕಾಮದೇವಂ ?

ಮು—ಅಂತಪ್ಪೊಡೆ ಸಲ್ವೆಂ ಸಲ್ವೆಂ ; ಕಾಮದೇವನೆಂಬೊಂದು ಬಿರುದಂ ಪಡೆದುಮಾಱೆನೆ ? ತೆಗಲ್ವಿರ್ಕೆ. ಇದೆ ಇದೆ ತೊಡಂಗಿದೆಂ. ಅಸಿದೊಡಲ ಪೂಗಣ್ಣ ಪೆಣ್ ; ಸಸಿಮೊಗದ ಕಿಸುವಾಯ ಪುಸಿನಡುವಿನರಸಿ ; ಮಿಡಿಮೊಲೆಯ ಪಿಡಿನಡೆಯ ಬಿಡುಜಡೆಯ ನೀಱ್ ; ಬೆಟ್ಟು.

ಮ—(ಅರೆನೋಟದಿಂ) ಆಃ ! ಕಬ್ಬಿಗರ್ಗೆ ನೀಂ ಕಲ್ಲಯ್ತನಕ್ಕುಂ. ಎಂದು ಕಾಣದರೊಂದು ಪಾಂಗಿನಿಂ ಪೇೞ್ದ ಪೊಚ್ಚರದ ನಿನ್ನೀ ಬಣ್ಣನೆಯ ನುಡಿಗೇನೆಂಬೆನೊ ! ಒಡಲಸಿದೇಂ ? ಮೊಗದೊಳೇತಱ ಸಸಿ ? ಕಣ್ಣೊಳೇತಱ ಪೂ ? ನಡುವಿನೊಳೇಂ ಪುಸಿ? ಎಂದು ಬಾಯಂ ಕಿಸಿದಳ್. ಜಡೆಯಂ ಬಿದಿರ್ಚಲ್ಕೇಂ ದೆವ್ವಮಾಳ್ದದೆ? ಪೋ, ನೀಂ ಕಾಮನಲ್ತು ಭೀಮಂ.

ಮು—(ಕಿಱುನಗೆಯಿಂ) ಎನ್ನ ಕುಲದೇವಿ ! ಇನಿತೊಂದು ಮುನಿಸೇಂ. ಎನ್ನ ನಗೆಯಿನಿಂತಾಯ್ತಕ್ಕುಂ ; ಸೈರಿಸು! ಸೈರಿಸು! ನುಡಿನಿಱುಗೆಯಂ ಬೆದಂಕಿ ಪಾರದಂತುಂ ಇರ್ದಂತೆ ಬಣ್ಣಿಪೊಂದು ಜಾಣ್ಮೆ ದೊರೆಕೊಳ್ವಂತುಂ ಬಾಸೆವೆಣ್ಣೊಂದೊಲ್ಮೆ ದಾಳ್ದ ವಾಕ್ಸಿದ್ಧಿಯಂ ಪಡೆದು ನಿನ್ನಂ ಎನ್ನ ಜನ್ನದಾರದಾಣೆ ! ರತಿಯಿಂ ನೂರ್ಮಡಿ ಮಿಗಿಲೆನಿಸಿ ಬಣ್ಣಿಪೆಂ—ಸುವ್ವಿ! ಸುವ್ವಿ! ನಾಲ್ಮೊಗನಗ್ಗಿಟ್ಟಿಕೆಯೊಳೊಗೆದ ಒಳ್ನಗೆಯ ಮುದ್ದುಗುವರಿ! ಸುವ್ವಿ! ಸುವ್ವಿ! ಬೀಣೆ ಹೊತ್ತಗೆಗಳಂ ಪೊತ್ತ ಕೈಯ ಚೆಲ್ವೆ! ಸುವ್ವಿ! ಸುವ್ವಿ! ಬಾಣಿ. ಎನ್ನೀ ಮಡದಿರನ್ನೆಯಂ ರತಿಗೆಣೆಯೆಂದು ಪೊಗೞ್ದು ಪಾಡುವೊಂದು ಜಾಣ್ಮೆಯ ಪೊರ್ದುಗೆಯ ನುಡಿಬಿನ್ನಣಮನೆನಗೆ ಕರುಣಿಸೌ! ನಿನಗೆಱಗುವೆಂ. ಸುವ್ವಿ! ಸುವ್ವಿ! ಆ! ಆ! ಆ! ಆ! ಆ!!!

ಮ—ನೀಂ ಗೈದ ಸರಸತಿಯ ಪೊಗೞ್ಕೆಯ ತುತ್ತ ತುದಿಯ "ಆ! ಆ!!" ಏಂ?

ಮು—ಅಂತದು ಪಾಡಿನ ಜೋಡಿನ ದಾಟಿಯೈಸೆ.

ಮ—ಆಯ್ತಾಯ್ತು ಚೆಲ್ವು. ಏಂ ನಿನ್ನಂ ಸರಸತಿಯೊಲ್ದಳ್?

ಮು—ಎಂತೆಂತೊ ಪಾಡಿ ಬೇಡಿ ಒಲ್ಮೆವಡೆದೆಂ. ಈಗಳೆನಸುಂ ತಡಂಬಡದೆ ಬಣ್ಣಿಸಿ ನಿನತೊಂದೊಲ್ಮೆವಡೆದಪೆಂ ಕೇಳ್! ಮಾಕಾಳಿಯ ಮೈಮೊಗರ್ಗೆ........

ಮ—ನಿನ್ನ ರತಿಯಂ ಬಣ್ಣಿಪೊಂದು ಸಂಧಿಯೊಳ್ ಮಾಕಾಳಿಯೊಳೇಂ ಕಜ್ಜಂ ?

ಮು—ಆಃ! ಎಡಗೇಡಿಯನೆ ಮಱೆತಂ; ಆತನಂ ಬಲಂಗೊಳದಿರ್ಪನಂ ಮೊತ್ತಮೊದಲಿನೊಳೆನಿತುಂ ವಿಘ್ನಂ. ಓ ಓ! ಒರ್ಪನೆಯ ಬಿಂಕಣಿಗಿವಿಯ ಮೂಗೊಂಕು ಮೂಗಿನ ಪೇರೊಡಲ ಇಲಿದೇರ ಬೆನಕ! ಇದೆ ಮಣಿವೆಂ. ಈ ರಮಣೀಯಮಪ್ಪ ರತಿದೇವಿಯಂ ಬಣ್ಣಿಪೊಂದು ಕವನದ ಕಜ್ಜದುಜ್ಜುಗದನಿತೊಂದು ಪೊೞ್ತುನೇಮಾೞ್ಕೆಯೊಳಮೆಡರ್ ಬಾರದಂತು ಕಾವುದು. ಇನಿತೊಂದು ಮೇಲನೊಡರ್ಚಿದೆಯಪ್ಪೊಡೆ ಆ ಬಣ್ಣನೆಯ ಪೊಗೞ್ಕೆಯ ಪಾಡಿಂಗೊಲ್ವಿನ್ನೀ ಮಡದಿ ಕೂರ್ಮೆಯಿನೆನಗೆ ತಿನವಡಿಸುವಾ ಪಸುಗೆಯ ಚಕ್ಕುಲಿಯಂ ಗಾರಿಗೆಯಂ ಪುರಿಗಡಲೆಯನವಲಂ ಕಬ್ಬಂ ತೆಂಗಾಯಂ ನಿನಗಂ ಪಾಲಿತ್ತು ಮೊದಲೊಳರ್ಪಿಸುವೆಂ.

ಮ—ನಿನ್ನ ಬೆನಕಂ ಒರ್ಪನೆವಾಯೊಳೆಂತುಱ್ಗುಂ.

ಮು—ಏಂ ರಮಣಿ ದೇವರುಱ್ಬರೆ? ಉಣ್ಬೊಡಂತೆಂಬೆನೆ?

ಮ—ಮೇಣೊರ್ವನೆ ತಿನಲ್ ಬಗೆವಾ!

ಮು—ನೀನೀವುದೇಂ ದಿಟಂ.

ಮ—ಎತ್ತಾನುಮಿತ್ತೊಡೇಂ ಗೆಯ್ವಯ್.

ಮು—ಇಸ್ಸಿ! ಅನಿತ್ತು ಭಕ್ಷ್ಯಮನೊರ್ವನೆ ನುಂಗಲಾಂ—ತಾವೆ(?)ಚಕ್ಕುಲಿ ಗಾರಿಗೆಗಳ್ ಕಾಮದೇವಂಗೆ; ಅವಲುಂ ಪುರಿಗಡಲೆಯುಂ ಮುದ್ದಣಂಗೆ; ಕಬ್ಬು ಕಬ್ಬಿಗಂಗೆ ; ತೆಂಗಾಯೆನಗ್ಗೈಸೆ.

ಮ—ನೀಂ ಜಾಣಂ. ನಿನ್ನ ರತಿದೇವಿಗೇಂ?

ಮು—ತಾನೆ ಒಲ್ದೀವ ದೇವಿಗಾವುದಱೊಳಾಸೆಯೊ?

ಮ—ಅಂತಿರೆಯುಂ ಮನೋರಮೆಗೇಂ?

ಮು—ಓವೊ! ರತಿಯಂ ಬಣ್ಣಿಪೊಂದು ಬೆಸನದೊಳ್ ಮನೋರಮೆಯಂ ಮಱೆದುಱಿದೆಂ; ಅಕ್ಕೆ! ಕಬ್ಬಿನ ಸಿಪುರುಂ ಮುಗ್ಗಿದ ಗಾರಿಗೆಪುಡಿಯುಂ ಮನೋರಮೆಗಿರ್ಕೆ.

ಮ—ನೀಂ ಬಲ್ಲಡಸುಗಾಱಂ ಸಾಜಂ; ಇರ್ಕೆ; ನೀಂ ಮನದೊಳೆ ಮಂಡಿಗೆಯನುಂಡಂತಾಯ್ತು. ಈಗಳಿಂ ಕೇಳ್ವೆಂ ರತಿಯ ಪೊಸಬಣ್ಣನೆಯಂ.

ಹೀಗೆ ಇನ್ನೆರಡು ಮಾತನಾಡಿ ಕವಿಯು ಕತೆಯನ್ನು ಮತ್ತೆ ಆರಂಭಿಸುವನು.

ಹಾಸ್ಯರಸಯುಕ್ತವಾದ ಇನ್ನೊಂದು ಸಂವಾದವನ್ನು ಮನೋರಮೆಯೇ ಆರಂಭಮಾಡುವಳು. ಶತ್ರುಘ್ನನು ಸೈನ್ಯದೊಡನೆ ಒಬ್ಬ ತಪ

ಸ್ವಿಯ ಆಶ್ರಮಕ್ಕೆ ಹೋಗಲು ಆತನು ಶತ್ರುಘ್ನನನ್ನೂ ಸೈನ್ಯವನ್ನೂ ಮನ್ನಿಸಿ ಮೃಷ್ಟಾನ್ನಭೋಜನದಿಂದ ತಣಿಸಿ ಸತ್ಕರಿಸಿದನೆಂದು ಕವಿಯು ಹೇಳುವನು.

ಮ—ಎನಗಿದಚ್ಚರಿ ಎಂತುಟಾರ್ತಂ?

ಮು—ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ? ಬೇಡಿದ ಪುರುಳನುಱದಿಂ ತಂದೀಗುಂ.

*   *   *   *

ಮ—ಓ! ಇನಿತೊಂದು ಜಪದ ಬಲ್ಮೆ ನೆರವಿರ್ಪಿನಂ ಪೆಱತೊಂದಱ ಗೊಡವೆಯಿಲ್ಲದಿರ್ಕುಂ ತಾಪಸರ್.

ಮು—ಅಪ್ಪುದಪ್ಪುದು. ತಪ್ಪೇಂ?

ಮ—ಅದಂತಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾೞ್ತೆಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮಕೆಮ್ಮನೆ ಪಾೞ್ಗತೆಯ ಕಬ್ಬದೊಳೇವೊೞ್ತುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ? ಉಣಲೇಂ ತಿನಲೇಂ? ಅಂತಿರೊಂದು ಜಪಮಂ ಪಿರಿಯದವಸಿಗಳತ್ತಣಿನುಪದೇಶಂಗೊಂಡೊಡಾಗದೆ?

ಮು—(ಮುಗುಳ್ನಗೆಯಿಂ) ಏಂ ಎಮ್ಮವರೊಂದಿರಿವಿಗೆ ನಗುವಾ? ಆಃ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊರತೆಯೋ! ತಾನೆ ಬಯಸಿದೊಡವೆಯನಾಗಳೇ ತಂದೀವ ಮಂತ್ರದ ಜಪದೊಂದು ನೆರಂ ತಮ್ಮೊಳೊಂದಿರದೊಡಲ್ತೆ ಕಾಡಜೋಗಿಗಳತ್ತಣಿನುಪದೇಶಂ. ನಾಡಂ ಕಾಡಂ, ಕಾಡಂ ಬೀಡಂ ಗೆಯ್ವೊಂದು ಪೆರ್ಮೆಯ ಬಲ್ಮೆಯ ಕಬ್ಬಿಗರೇಂ ಕಕ್ಕುಲಿತೆಯ ಮುದುದವಸಿಗಳತ್ತಣಿಂ ಪಿರಿಯರಾಗರೆ? ನುಡಿವರೇನದುವೆ ಪುರುಳ್. ಪಿಡಿವರೇನದುವೆ ತಿರುಳ್. ಪಲವೇಂ ಕೆಲವೇಂ? ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಱಿಯಿಸುವ ಪೊಗೞ್ವ ಕೊಳ್ವಾಳ್ವ ತಾಳ್ವ ತೂಳ್ವ ಪೂೞ್ವ ಪೇೞ್ವ ಬಾೞ್ವ ಸಿಂಗರದ ಬಣ್ಣಗಬ್ಬಿಗರೆಮ್ಮತೆಱನನಿನ್ನುಂ ನೀನಱಿಯಯ್.

ಮ—(ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ?

ಮು—ತಡೆಯೇನಳ್ಕೇಂ?

ಮ—ನಿನ್ನೊಳವೊಳವೆ?

ಮು—ಎನ್ನೊಳಿಂತಿದು ಪಾಸುವೊಕ್ಕು.

ಮನೋ—ಆಃ! ನೀನುಂ ಬಲ್ಮೆಮೆಗಾಱಂ. ನಿನಗಾರತ್ತಣಿನೆಂದುಪದೇಶಮಾಯ್ತು?

ಮು—ಗುರುಮತ್ತಣಿನಂದೆಳಮೆಯೊಳೆ.

ಮನೋ—ಎನ್ನೆಱೆಯ! ಅದಾವುದೊ ಮಂತ್ರಮೆನ್ನೊಳುಸಿರ ?

ಮು—ಆಃ! ಆಃ! ಒಳ್ಳಿತೊಳ್ಳಿತು!! ಮಂತ್ರಂಗಡ! ತನಗೊರೆವುದು ಗಡ! ಚೀ! ಚೀ! ಹೆಣ್ಗಳ್ಗೀಮಂತ್ರೋಪದೇಶಂ ಸಲ್ವುದೆ?

ಮನೋ—ಅನಱಿಯೆನೆ! ನಿನ್ನತ್ತಣಿನುಪದೇಶಂಬೇಡುವೆನೆ! ನೀನಾಗಳೆಂದ ಮಂತ್ರಂಗಳೊಳಾವುದದಱ ಪೆಸರೇನೆಂದೆ ಕೇಳ್ದೆಂ.

ಮುದ್ಧ—ಆಗಳೆಂದ ಮುನಿಗಳ ಮಂತ್ರಂಗಳೊಳಲ್ತು. ಎಮ್ಮ ಮಂತ್ರಂಗಳ ಬಗೆ ಬೇಱೆ, ಮೂಱೆಡಕ್ಕರದ ಮಂತ್ರಂಗಳೆಮಗಕ್ಕುಮೆ! ಎಮ್ಮ ತಂತು ಕಿಱಿದಲ್ತು ಬಲ್ಪಿರಿದು. ಒಂದಕ್ಕರಮಲ್ತೆರಡಲ್ತು ಮೂಱಲ್ತು, ನಾಲ್ಕಿದಲ್ತು, ಆಱುಮಲ್ತು. ಏೞಕ್ಕರದ ಬೀಜಮಂತ್ರಂ. ಅಂತದಱಿಂ ಸರ್ವಮಂತ್ರಂಗಳ್ಗೆ ತಲೆಯೊಳಿರ್ದು ಮೇಲೆನಿಪ್ಪ ಸಪ್ತಾಕ್ಷರೀಮಂತ್ರಮೆಂದು ಪೆಸರ್.

ಮನೋ—ಹಾಹಾ! ಆಮಂತ್ರಕ್ಕಭಿಮಾನದೇವತೆಯಾವುದು? ಮುನ್ನಮಾರಿದಂ ಜಪಿಸಿ ಸಿದ್ಧಿಗಂಡರ್?

ಮು—ಪೋಪೋ! ಇಂತಿವಱಿಂ ಕೊಂಡೇಂ ಕಜ್ಜಂ?

ಮನೋ—ಇರ್ಕೆ, ಕೇಳ್ವೆಂ.

ಮು—ಅಂತಾದೊಡೆ ಕೇಳ್ ಪೇೞ್ವೆಂ. ಇಂತೇರ್ಪಟ್ಟ ಮಂತ್ರದಧಿದೇವತೆ ಜ್ಯೇಷ್ಠೆ. ಮುನ್ನಮಿಾಶ್ವರಂ ತನ್ನೊಂದು ಲೀಲೆಯೊಳ್ ಜಪಿಸಿ ಸಿದ್ಧಿಗೊಂಡನಂತದಱಿನಾತನೆ ಋಷಿ.

ಮ—ಓ ಓ! ಇಂತುಟೆ ಮಂತ್ರದೊಂದು ಮ್ಮೆಮೆ! ಎಲೆ ರಮಣ! ನಿನ್ನಡಿಗಳ್ಗೆಱಗುವೆಂ. ಎನ್ನತಿನಿತೊಂದು ಬಿನ್ನಪಂ. ಅಂತು ಸಂದ ಸಿದ್ಧಿಯ ಮಂತ್ರಮಾವುದೊ ಕೊರ್ಮೆಯಂ ತಿಳಿಯೆ ಪೇೞ್.

ಮು—ಆಗಳೇ ಪೇೞ್ದೆನಲ್ತೆ ಸಪ್ತಾಕ್ಷರೀಮಂತ್ರಮೆಂದು.

ಮ—ಅಂತು ಪೆಸರನಲ್ತು ಮೂಲಮನೆ ಕುರಿತೆನ್ನೊಳಾಡಿ ತೋಱ.

ಮು—ಅಬ್ಬಾ! ಪೆಣ್ಣೇಂ ಗಡಸುಗಾರ್ತಿಯೊ! ಆಗಳ್ ಪೆಸರೇನೆಂದಳ್; ಈಗಳ್ ಮೂಲಮಂ ಕೇಳ್ವಳ್. ಇನ್ನೇವಳೋ? ಮೂಱೆಱೆಯ ಜನ್ನದಾರದಾಣೆ! ಉತ್ತರಿಗೆಯಾಣೆ! ಆಗದಾಗದು. ಕೇಳ್ವುದರ್ಕೆ ಪೇೞ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆ ಕಾಲ್ಗೆ ಕೇಡು!

ಎಂದು ಮತ್ತಷ್ಟು ಚರ್ಚೆ ಮಾಡಿ "ನೀಡುಂ ಭಾವಿಸಿ"

ಮು—ಎಲೆ ಪೆಣ್ಣೆ! ನೀನಾರೊಳಮೆಂದೆಂದಿಂಗಮುಸಿರಲ್ಬಾರದು. ಜೋಕೆ!

ಮ—ಎಂದುಮೆಂತುಮುಸಿರನಾಡೆಂ.

ಮು—ಅಂತಾದೊಡಿಂತಿದು ಕೇಳ್. ಭ........ವ........ಪೆಱರೊಳಾಡೆನೆಂಬ ನಂಬುಗ್ಗೆಯಂ ಪೊಯ್.

ಮ—ಇದೆ, ಪಿಡಿ ನಂಬುಗ್ಗೆಯಂ ನಿನ್ನಾಣೆ, ಕುಲದೈವದಾಣೆ, ಎಂದುಂ ಪೆಱವರೊಳೊರೆಯೆಂ.

ಮು—ಉಂ! ಭವ........ತಿ........ಭಿ........ಪೆಣ್ಗಳಂ ನಂಬಲಾಗದೆಂಬರ್ ಬಲ್ಲರ್. ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದ ಗುಟ್ಟಂ ಬಿಟ್ಟೊಡೆಮ್ಮನ್ನರ ಬಾೞ್ ಪಾೞಕ್ಕುಂ.

ಮ—ಆನೇಂ ಮೋಡೆಯೇ! ಪೋ! ತನ್ನಾಣೆ ಕಣ್ಣಾಣೆ ಕೇಳ್ವೆಂ.

ಮು—(ಎಕ್ಕಟಿಯೊಳ್) "ಭವತಿ ಭಿಕ್ಷಾಂ ದೇಹಿ" ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀಮಂತ್ರಂ. ಆರೊಳಾನುಮುಸಿರದಿರ್.

ಮ—(ಅರೆಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆಂ. ಈತೆಱನ ಮಾಟದ ಕವಡುನುಡಿಯ ಕೊಂಕೆಂಬುದನಱಿಯದಾದೆಂ. ನೀಂ ಕಬ್ಬಿಗನೋ ಸಬ್ಬವಕಾಱನೊ? ನಿನ್ನೀ ಕಬ್ಬದ ಸೊಗಸೆಮ್ಮನ್ನರಪ್ಪ ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?

ಮು—ಸಾಲ್ಗುಮೀ ಪರಿಹಾಸಂ. ಮುಂಗತೆಯಂ ಕೇಳ್.

ಮುದ್ದಣಮನೋರಮೆಯರ ಸಂವಾದವನ್ನು ನೋಡಿದವರಿಗೆ ಇದರಂಥ ಇನ್ನೆಷ್ಟು ಸಂವಾದವನ್ನಾದರೂ ಓದಬಹುದೆಂದು ಎನ್ನಿಸುವುದು. ಈ ಕಾರಣದಿಂದಲೂ ಕಾವ್ಯದ ವಿಷಯದಲ್ಲಿ ನಮ್ಮೆಲ್ಲರ ಅಭಿಪ್ರಾಯವನ್ನು ಮನೋರಮೆಯು ಸೂಚಿಸುವಳಾದ ಕಾರಣದಿಂದಲೂ ಈ ಕವಿಯ ಜತೆಗೆ ಇಲ್ಲಿ ಮಾಡಿರುವ ಪರಿಚಯವನ್ನು ಸಂತೋಷವಾಗಿ ಮುಗಿಸುವುದೆಂಬ ಉದ್ದೇಶದಿಂದಲೂ ಈಗ ಈ ಕಾವ್ಯದ ಉಪಸಂಹಾರದ ಸಂಭಾಷಣವನ್ನೂ ಇಲ್ಲಿ ಕೊಟ್ಟಿದೆ. ರಾಮನು ಸೀತೆಯನ್ನು ಕರೆದುಕೊಂಡು ಪಟ್ಟಣಕ್ಕೆ ಹೋದನೆಂದು ಕವಿಯು ಹೇಳಲು ಮನೋರಮೆಯು "ಓ! ರಾಮನೊಳ್ಪಿದನಕ್ಕೆ! ಸೊಗಂ ಬಾೞ್ಗೆ! ರಾಮಂಗೆ ಗೆಲವಕ್ಕೆ! ರಾಮನಂ ಕೊಂಡಾಡುಗೆ!" ಎಂದು ಹಲವು ವಿಧವಾಗಿ ಹರಸುವಳು. ಮುದ್ದಣನು "ನೀನು ಹರಸುವ ಹರಕೆ ಬಹಳ ಸೊಗಸು" ಎಂದು "ಇನ್ನೆತ್ತಂ ನಿರಾ

ಮಯಂ, ನಿರಾಕುಳಂ; ಸುಭಿಕ್ಷಂ; ಶಾಂತಿ······'' ಎಂದು ಹೇಳತೊಡಗುವನು.

ಮನೋರಮೆ ಏನೆಲೆ ರಮಣ ! ಇಂದಿದೇನೆತ್ತಣ ಶಾಂತಿಗಳ್ ? ಅಂತಪ್ಪೊಡೆ ನೀಂ ಪೇೞ್ವ ನಲ್ಗತೆ ಮುಗಿಯುವಂದುದು.

ಮುದ್ದ—ಉಂ ! ಎಂತೆಂತೊ ರಗಳೆಯ ಪಾೞ್ಗತೆ ಕಡೆಗಂಡುದು.

ಮನೋ—ಛೀ ! ಶ್ರೀರಾಮಪುಣ್ಯಚರಿತಮಂ ಪಾೞ್ಗತೆಯೆಂದು ಇೞಿಕೆಯುದ್ದತೆಗೞ್ವ !

ಮುದ್ದ—ಶ್ರೀರಾಮಚರಿತಮನಿೞಿಸಿ ಕುೞಿಸಿ ನುಡಿದೆನಿಲ್ಲಂ. ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಬಱುವಣ್ಣನೆಯ ಬೇಸಱಿಕೆಯ ಪಾೞ್ಗಬ್ಬಮಂ ಪೊಳ್ಳೆಂದೆ ನುಡಿದೆಂ.

ಮನೋ—(ಸವಿನಯಂ) ತಮ್ಮೊಡಮೆಯಂ ತಾಮೆ ಪೊಗೞ್ವರೆ ಬಲ್ಲರ್ ? ಅಲ್ಲದಂದು ನವರಸದ ತನಿರಸಮೊಱಿವ ಬಣ್ಣಗಬ್ಬಮಂ ಪೊಳ್ಳೆಂದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನ ಜಾಣ್ಮೆಯೊಳ್.

ಮುದ್ದ—ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ ?

ಮನೋ—ಎನಗೊರ್ವಳ್ಗಂದೊಡೇಂ. ನಾಡೊಳೆಲ್ಲರ್ಗಂ.

ಮುದ್ದ—(ನಕ್ಕು) ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ.

ಮನೋ—ಎನ್ನ ಮುದ್ದಿನರಸ ! ಅಂತಲ್ತು ; ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದುಮುದ್ದಾಯ್ತು ಜಗಕೆ.

ಮುದ್ದ—ಇಂತೀ ನುಡಿಯಿನೆನ್ನಂ ನೀನೇೞಿಪಂತಿರಿರ್ಕುಂ.

ಮನೋ—ಉಃ ! ಉಃ ! ಗುಣದೊಳ್ ಪುರುಡುಂಟೆ ? ಸಾಜಂ. ನಿನ್ನೀ ಜಾಣ್ಮೆಯ ಬಣ್ಣನೆಯ ನಲ್ಗತೆ ಕೇಳ್ವರನೆಂತಪ್ಪರುಮಂ ಬಗೆಯುನಿರ್ಕುೞಿಗೊಳ್ಗುಂ ನಾಡ ಮಾತೇಕೆ ! ಎನಗೆಂತೋ ಮೇಣುಂ ಮೇಣ್ ಕೇಳ್ವೆನೆಂಬೊಂದಾಸೆ ಪುಟ್ಟುಗುಂ.

ಮುದ್ದ—ಎನ್ನಾಣೆ !

ಮನೋ—ನಿನ್ನಾಣೆ ! ಕಡೆಯೇಂ ? ಕಮ್ಮಲರ್ ಮಗಮಗಿಸದೇಂ ಪೋಕುಂ!

ಮುದ್ದ—ಮುತ್ತಬ್ಬೆಯಾಣೆ !

ಮನೋ—ಮುತ್ತಬ್ಬೆಯಾಣೆ ! ಇಸ್ಸಿ ! ಪುಸಿಯನೇಪೊೞ್ತುಂಗಮುಸಿರೆಂ. ಈವಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು.

ಮುದ್ದ—ಎಂತುಂ ನಿನಗೆ ಸೊಗಸಾಯ್ತಲೇ ! ಇದುವೆ ಪರಮಾನಂದಮೆನಗೆ.

ಮನೋ—ಬಿನ್ನಣದ ಬಣ್ಣನೆಯ ನುಡಿಯಲ್ತು ; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದ—ಅಂತಪ್ಪೊಡೆ ತಾಱಿಲೆ ನೀನೆಂದ ಮೆಚ್ಚಿನುಡುಗೊಱೆಯಂ.

ಮನೋ—(ಕಣ್ಬೆಗಡು ಗೊಂಡಂತೆ ನಟಿಸಿ) ಇನ್ನೇಂ ಜಾಣನೋ ! ನೀನಱಿಯದರಂತೆ ವಿಣ್ಣನಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ. ನಿನಗೇನೆಂಬೆನೇನೆಂಬೆನೊ ! ನಿನ್ನಾ ಬಣ್ಣವಾತಿಗೆ ಮಾಱುವೋದೆಂ (ಎಂದು ವಿಚಾರದಿಂ) ಆಯ್ತಾಯ್ತು, ಪೇೞ್ದ ಕತೆಗೆ ಮಂಗಳಮಂ ಮಾಡು ; ಮೆಚ್ಚುಗಿಚ್ಚು ಬಱಿಕ್ಕಮಲ್ತೆ.

ಮುದ್ದ—ಬಱಿದೆ ಮಂಗಳಮಕ್ಕುಮೆ ! ಹೋಳಿಗೆ ತುಪ್ಪಮಂ ತಿನವಡಿಸವೇಡಾ !

ಮನೋ—ಹೋಳಿಗೆ ತುಪ್ಪಕ್ಕಿಂದೇಂ ನಿನಗೆ ಶೋಭನಮೆ ?

ಮುದ್ದ—ಇಂದೆನಗೆಂದೊಡೇಂ ? ಎನಗಂ ನಿನಗಂ.

ಮನೋ—ಪೋ ಸಾಲ್ಗುಮೀ ಬಣ್ಣದ ಕೊಂಕುನುಡಿ. ರಾಘವನ ಯಜ್ಞಮೆಂತು ಪರಿಸಮಾಪ್ತಿಯಾಯ್ತು ಪೇೞ್ ”.

ಹೀಗೆ ಮನೋರಮೆಯ ಅಪೇಕ್ಷೆಯಂತೆ ಕವಿಯು ಯಜ್ಞವು ಸಾಂಗವಾಗಿ ನಡೆದ ವಿಷಯವನ್ನು ಹೇಳಿ “ ಮಂಗಳಂ ಶುಭಂ ಭದ್ರಂ ಕಲ್ಯಾಣಂ” ಎಂದು ಮಂಗಳವನ್ನು ಹೇಳುವನು. ಅಷ್ಟರಲ್ಲಿ ಮನೋರಮೆಯು ಎದ್ದು ಹೋಗುವಳು. ಮುದ್ದಣನು ಅವಳನ್ನು ತಡೆದು

“ ಬಲ್ಸೆಡಕುಗಾರ್ತಿ ಕಣಾ ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ ? ಕೊಂಕುನುಡಿಯೊಂದು ನೆವದಿಂ ಬಿಂಕದಿನಿರ್ದೊಡಾಯ್ತೆ ! ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ !

ಮನೋ—ಕತೆಗೆ ಮಂಗಳಮಂ ಮಾಡದೆ ಬಱಿದೆ ಉಡುಗೊಱೆತುಡುಗೊಱೆಯೆಂದೊಡೇಂ ?

ಮುದ್ದ—ಕತೆಗೆ ಮಂಗಳಮನಾಗಳೆ ಪೇೞ್ದೆನುೞಿದೆನಿಲ್ಲ. ಈಗಳುೞಿದುದೊಂದೆ ನಿನ್ನುಡುಗೊಱೆ.

ಮನೋ—ಉಡುಗೊಱೆಯ ಕಾಟಕ್ಕಿನ್ನೆತ್ತ ಪೋಪೆಂ? ನೀನೇಂ ಬೇಡುವಯ್?

ಮುದ್ದ—(ಪುಸಿಮುನಿಸಿಂ) ಬೇಡುವೊಡೇಂ ತಿರಿಕನೇ ? ಮನೆಗೆ ಬಂದೆನೆ ? ಮೆಚ್ಚಿತ್ತೊಡದನೆ ಕೈಕೊಳ್ವೆಂ

ಮನೋ—ಆನೆಂತುಂ ಪರಾಧೀನೆ. ಮೇಣೆನಗೊಡಮೆಯಾವುದು ? ಏನನೀವೆನೆಂತೀವೆಂ ?

ಮುದ್ದ—ಏನೊ! ಎಂತೊ! ಆಂ ಮೆಚ್ಚುವಂತುಂ, ಕತೆಯ ಪುರುಳ್ಗೆ ವಂತುಂ ಸಾಲ್ವರ್ ತಲೆದೂಗುವಂತುಂ ಉಡುಗೊಱೆಗೆಯ್ದೊಡಾಯ್ತು.

ಮನೋ—ಅಂತಪ್ಪೊಡಿಂತಿದು............ನಿನ್ನೀಕಬ್ಬಮನೋದುವ ಜಾಣರೇ ವಗೆಯುಡುಗೊಱೆಯುನೀಯೆಂಬರಾವಗೆಯ ಮೆಚ್ಚನೀವೆಂ.

ಎಂದು ಉಡುಗೊಱೆಯನ್ನು ಕೊಡುವಳು. ಉಡುಗೊರೆ ಯಾವುದೆಂದು ಕವಿ ಹೇಳುವುದಿಲ್ಲ. ಪ್ರಾಯಃ ಅದು ಏನೆಂದು ನಾವು ಊಹಿಸಬಹುದು. ಅವಳು ಸೀತೆಗೆ ಒಳ್ಳೆಯದಾಯಿತೆಂಬ ಸಂತೋಷದಿಂದ ತುಂಬಿ ತುಳುಕುತ್ತಿದ್ದ ತನ್ನ ಆನಂದವನ್ನೂ ಇಂಥ ಒಳ್ಳೆಯ ಕತೆಯನ್ನು ಇಷ್ಟು ಚೆನ್ನಾಗಿ ಹೇಳಿದ "ಕಬ್ಬಿಗರ ಬಲ್ಲಹ" ಮುದ್ದಣನ ವಿಷಯದಲ್ಲಿ ತನಗೆ ಉಂಟಾಗಿದ್ದ ಮೆಚ್ಚುಗೆಯನ್ನೂ ತನ್ನ 'ನಿತ್ಯದ ಪೂಜೆಯ ಕಟ್ಟಚ್ಚಿನ ಪ್ರಾಣಲಿಂಗ' ವಾದ ಪತಿದೈವದ ವಿಷಯದಲ್ಲಿ ತನಗಿದ್ದ ಭಕ್ತಿಪ್ರೀತಿಗಳನ್ನು ತೋರಿಸುವಂತೆ ಸ್ವಲ್ಪ ಉತ್ಸಾಹದಿಂದಲೂ ಸ್ವಲ್ಪ ನಾಚಿಕೆಯಿಂದಲೂ ಒಂದು ಮುತ್ತನ್ನು ಕೊಟ್ಟಳೆಂದು ತೋರುತ್ತದೆ. ಸತಿಪತಿಗಳ ಈ ಸಂಭಾಷಣೆಗಳನ್ನು ಕೇಳಿರುವ ನಮಗೆ ಅರಮನೆಯಲ್ಲಿ ಕವಿಗೆ ಬರಬಹುದಾಗಿದ್ದ ಇನ್ನು ಯಾವ ಮರ್ಯಾದೆಗಿಂತಲೂ ಇದು ಅವನಿಗೆ ಹೆಚ್ಚು ಮರ್ಯಾದೆಯೆಂದು ಒಪ್ಪಬೇಕು. ಕವಿಯೂ ಹಾಗೆಯೇ ವರ್ಣಿಸುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಮುದ್ದಣನಿಗೆ ಇನ್ನು ಯಾವ ಸೌಭಾಗ್ಯವೂ ಸಂಪತ್ತೂ ಇದ್ದರೂ ಇಲ್ಲದಿದ್ದರೂ ದೇವರ ವಿಷಯದಲ್ಲಿ ನಿಶ್ಚಲವಾದ ಭಕ್ತಿಯಿಂದ ನಡೆದುಕೊಳ್ಳುವ ಸಂಸಾರದ ಶಾಂತಿಸೌಖ್ಯಗಳ ಅತುಲವಾದ ಸಂಪತ್ತು ಲಭಿಸಿತ್ತೆಂದು ನಾವು ಸಂತೋಷಪಡಬೇಕು.

ಮೇಲೆ ಉದ್ಧರಿಸಿರುವ ಕಾವ್ಯಭಾಗಗಳಿಂದ ಮುದ್ದಣ ಕವಿಯ ಕವಿತಾಶಕ್ತಿಯ ಸಮಗ್ರತೆಯು ವ್ಯಕ್ತವಾಗಿರಬೇಕು. ಇವುಗಳ ಜೊತೆಗೆ ಈ ಕಾವ್ಯದಿಂದ ಇಂಥ ಇನ್ನಷ್ಟು ಭಾಗಗಳನ್ನು ಸುಲಭವಾಗಿ ಎತ್ತಿ ತೋರಿಸಬಹುದು. ಕವಿತೆಯ ಆತ್ಮವಾದ ಭಾವದಲ್ಲಿ ಹೇಗೋ ಹಾಗೆ ಅದರ ದೇಹವಾದ ಭಾಷೆಯಲ್ಲೂ ಈತನಿಗೆ ಸಮಗ್ರಕೌಶಲವುಂಟೆಂದು ಮೇಲೆ

ಸೂಚಿಸಿದೆ. ಈ ಕಾವ್ಯವನ್ನು ಓದುತ್ತಿದ್ದರೆ ಮುದ್ದಣ ಕವಿಯು, ಕನ್ನಡ ಭಾಷೆಯಲ್ಲಿ ಮಾತ್ರವಲ್ಲ, ಪ್ರಪಂಚದ ಇನ್ನು ಯಾವ ಭಾಷೆಯಲ್ಲಾದರೂ ಕವಿಗೋಷ್ಠಿಯ ಅಗ್ರಸ್ಥಾನಗಳಲ್ಲಿ ಒಂದಕ್ಕೆ ಅಧಿಕಾರಿಯೆಂದು ಪಾಠಕರಿಗೆ ತೋರುವುದು. ಪ್ರಕೃತಿಸೌಂದರ್ಯದ ವರ್ಣನೆಯಲ್ಲಿ ಈತನು ಕಾಳಿದಾಸ ಷೇಕ್ಸ್‌ಪಿಯರರಿಗಿಂತ ಬಹಳ ಕಡಿಮೆಯಾದವನಲ್ಲ. ಪುರಾಣ ಪಾತ್ರಗಳ ಸ್ವಭಾವನಿರೂಪಣದಲ್ಲಿ ಈತನಿಗೆ ಶ್ಲಾಘನೀಯವಾದ ಔಚಿತ್ಯಜ್ಞಾನವಿದೆ. ಇವನ ಕನ್ನಡದ ಶೈಲಿಯ ಸೊಗಸು ರಸ್ಕಿನ್ ಡಿಕ್ವಿನ್ಸಿಗಳ ಇಂಗ್ಲಿಷ್ ಶೈಲಿಯ ಸೊಗಸಿಗೆ ಸಮಾನವಾಗುತ್ತದೆ. ಇಂಥ ಕವಿಯನ್ನು ಪಡೆದದ್ದು ಕರ್ಣಾಟಕದ ಸೌಭಾಗ್ಯ. ಇಂಥ ಕವಿಯನ್ನು ಅಷ್ಟು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡುದು ಕನ್ನಡಿಗರೆಲ್ಲರ ದುರ್ದೈವ. ಇಂಥ ಕವಿಯು ಜೀವಂತನಾಗಿದ್ದಾಗ ಅವನನ್ನು ಸರಿಯಾಗಿ ಕಾಣದೆ ಅವನ ಯೋಗ್ಯತೆ ಏನೆಂದು ಕಂಡುಹಿಡಿಯಲಾರದೆ ಇದ್ದದ್ದು ಕರ್ಣಾಟಕರ ಅನಭಿಜ್ಞತೆಯನ್ನು ತೋರಿಸುತ್ತದೆ. ಮುದ್ದಣ ಕವಿಯು ಸಾಮಾನ್ಯವಾಗಿ ಹುಟ್ಟಿ ಸಾಮಾನ್ಯವಾಗಿ ಬೆಳೆದು ಎಲ್ಲೋ ಒಂದು ಮೂಲೆಯಲ್ಲಿ ತನ್ನ ದಿನಗಳನ್ನು ಕಳೆದು ದಿವಂಗತನಾದನು. ಆದರೆ ಆತನ ಕಾವ್ಯದ ಸೌಂದರ್ಯ ಸೌರಭ್ಯಗಳನ್ನು ನೋಡಿದರೆ ಅವನ ಆತ್ಮವು ಎಷ್ಟು ಸಂಸ್ಕಾರದಿಂದ ಎಷ್ಟರ ಮಟ್ಟಿಗೆ ಉತ್ತೀರ್ಣವಾಗಿ ಅವನ ಜನರ ಇನ್ನೆಂತಹ ಪೂಜೆಗೆ ಅರ್ಹವಾಗಿತ್ತೆಂದು ನಮಗೆ ತಿಳಿಯುವುದು. ಮುದ್ದಣ ಕವಿಯ ಜೀವನಚರಿತೆಯನ್ನೂ ಅವನ ಕಾವ್ಯವನ್ನೂ ಕುರಿತು ಯೋಚಿಸುವವರಿಗೆ ನಮ್ಮ ಜನಾಂಗದ ಉತ್ತಮ ಜೀವನವೆಲ್ಲದರ ಪ್ರತಿನಿಧಿಯಂತೆ ತೋರುವ ಈತನ ವಿಷಯದಲ್ಲಿ ವರ್ಡ್ಸ್ವರ್ತ್ ಎಂಬ ಆಂಗ್ಲೇಯ ಕವಿಯು ಮಿಲ್ಟನ್ ಮಹಾಕವಿಯ ವಿಷಯದಲ್ಲಿ ಹೇಳಿದ ಕೆಲವು ಮಾತುಗಳನ್ನು

> Poet! thou shouldst be living at this hour:
> *India* hath need of thee:

ಎಂದು ಮುಂತಾಗಿ ಹೇಳೋಣವೆಂದು ತೋರುವುದು.

ಈ ಕಾವ್ಯವನ್ನು ಕುರಿತು ಇನ್ನೂ ಒಂದೆರಡು ವಿಷಯಗಳನ್ನು ಹೇಳಬಹುದಾಗಿತ್ತು. ಆದರೆ ಈಗಾಗಲೇ ದೀರ್ಘವಾಗಿರುವ ಈ ಉಪ ನ್ಯಾಸವನ್ನು ಮತ್ತಷ್ಟು ದೀರ್ಘವಾಗಿ ಮಾಡುವುದು ನಮಗೆ ಇಷ್ಟವಿಲ್ಲ. ಅಲ್ಲದೆ ಕಾವ್ಯದ ರುಚಿಯನ್ನು ತಿಳಿಯುವುದಕ್ಕೆ ಆ ವಿಷಯಗಳ ಚರ್ಚೆ ಯು ಆವಶ್ಯಕವಲ್ಲ. ಮುಖ್ಯವಾಗಿ ಈ ಪ್ರಶಂಸೆಯನ್ನು ಓದುವುದರಿಂದ ನಮ್ಮ ಜನರಿಗೆ ಶ್ರೀರಾಮಾಶ್ವಮೇಧ ಕಾವ್ಯದ ವಿಷಯದಲ್ಲೂ ಆದರ ಕರ್ತೃವಾದ ಮುದ್ದಣಕವಿಯ ವಿಷಯದಲ್ಲೂ ಆದರ ಉಂಟಾಗಿ ಮುದ್ದಣ ಕವಿಯು ನಿಖಿಲ ಕರ್ಣಾಟಕಕ್ಕೆ ಮಾಡಿರುವ ಪರಮೋಪಕಾ ರದ ಸ್ಮರಣೆಯು ನಮ್ಮ ಜನರಲ್ಲಿ ವಾಡಿಕೆಯಾಗಲೆಂದು ನಾವು ಹಾರೈಸು ತ್ತೇವೆ. ಈ ಕಾವ್ಯವನ್ನು ಯಾರೇ ಆಗಲಿ ಮತ್ತೆಮತ್ತೆ ಓದಿದಹಾಗೆ ಆದರ ವಿಷಯದಲ್ಲಿ ಹಫಿಸ್ ಕವಿಯು ತನ್ನ ಕಾವ್ಯದ ವಿಷಯದಲ್ಲಿ ಹೇಳಿದ ಈ ಮಾತುಗಳನ್ನು ಹೇಳುವರು.—

Song such as this hath need of no man's praise
Beauty like this can be concealed from none
Why should I hold a candle to the rays of such a sun?

ಅನುಬಂಧ

೧. ಜೋ ಜೋ.

(ನಂದಳಿಕೆ ಲಕ್ಷ್ಮೀನಾರಣಪ್ಪನವರು "ಸುವಾಸಿನೀ" ಪತ್ರಿಕೆಯಲ್ಲಿ ಬರೆದ ಒಂದು ಲೇಖನ.)

ಹೆಂಗುಸರು ತಮ್ಮ ಕಿರುಗೂಸುಗಳನ್ನು ತೊಟ್ಟಿಲಲ್ಲಿಟ್ಟು ತೂಗುವರು. ತೂಗುವಂದು ಒಲಿದು ಹಾಡುವರು. ಆಗಳಾಕೂಸು ಹಾಡಿನ ಇಂಚರಕ್ಕೆ ಪರವಶವಾಗಿ ಪ್ರೇಂಖಣದ ಯಾತಾಯಾತಕ್ಕೆ ಮೈಮರೆದು ನಿದ್ರಿಸುವುದು. ಇದಕ್ಕೆಯೆ ಹಾಡಿ ತೂಗುವರು. ಹಾಡು ನಾಡಿಗೊಂದು ಬಗೆಯಾಗಿರುವುದು.

ಅದೆಲ್ಲವಂತಿರಲಿ. ನಮ್ಮವರು ಈ ಬಗೆಯ ಹಾಡಿಗೆ 'ಜೋಗುಳ' ವೆಂಬರು. ಕೆಲವರು 'ಜೋಗಳ' ವೆಂದೂ ಹೇಳುವರು. ಇಂತಹ ಜೋಗುಳದಲ್ಲಿ ಹಾಡಿನ ನುಡಿಗಳ ಎಡೆಯೆಡೆಗೊಂದು 'ಜೋ' ಎಂಬ ಶಬ್ದವು ಇರುವುದು. ಕಡೆಗದು ಹಾಡಿನ ಕಡೆಗಾದರೂ ಬರುವುದು. ಮತ್ತಾ ಶಬ್ದವು ಒಮ್ಮೆ ದ್ವಿರುಕ್ತವಾಗಿಯೂ ಉಂಟು. ಎಂತೂ 'ಜೋ' ಶಬ್ದವಿಲ್ಲದ ಜೋಗುಳವಿಲ್ಲ. ಇದು ಸುಳ್ಳಲ್ಲ. ಬೇಕಾದರೆ ಕರ್ಣಾಟಕ ಕವಿಗಳನ್ನು ಕೇಳಿ.

ಜೋ ಸಕಲತತ್ವಮಯಿ ಜೋ |
ಜೋ ಸತ್ವಾದಿಗುಣರಹಿತೆ ಜೋ ನಿರ್ಮಲೆ ಜೋ |
ಜೋ ಜೋ ಶಂಕರನರ್ಧಮಂ ಕವರ್ದೆಕೊಳ್ವತ್ಯಂತರೂಪಾನ್ವಿತೇ ||

ಎಂದು ಹರಿಹರನೂ,

......................ಅಚ್ಯುತ ಜೋ ಮಹಾತ್ಮ ಜೋ |
ಸದಮಲಬೋಧ ಜೋ ಪರಮ ಜೋ ಹರಿ ಜೋ ಎನುತಂ ಲತಾಂಗಿಯರ್ ||

ಎಂದು ರುದ್ರನೂ,

..ಜನೋ |
ತ್ತುಂಗವಂದಿತ ಜೋ ಜಗನ್ನುತ ಜೋ ಜಯೋನ್ನತ ಜೋ ಎನು |
ತ್ತುಂಗನಾಜನಮೆಯ್ದೆ ಪಾಡುತ ಜೋಗುಳಂ ಮಿಗೆ ಪಾಡಿದರ್ ||

ಜಂಗಮಪ್ರಿಯ ಜೋ ಜಗನ್ಮಯ ಜೋ ಜಿತಸ್ಮರ ಜೋ ಎನು |
ತ್ತುಂಗನಾಮಣಿ ಜೋಗುಳಂಗಳ ಪಾಡಿ ತೂಗಿದಳಬ್ಜಮುಖಿ ||

ಎಂದು ಷಡಕ್ಷರದೇವನೂ,

ತಮ್ಮ ತಮ್ಮ ಗ್ರಂಥಗಳಲ್ಲಿ ಬರೆದಿರುವರು. ಇವರ ಮಾತೂ ಸಾಲದೆ ಹೋದರೆ, ಕೂಸನ್ನು ಹಾಡಿ ತೂಗುವ ನಿಮ್ಮ ಪ್ರಿಯತಮೆಯನ್ನು ಕೇಳಿ. ಆಗಳಾದರೂ ಒಪ್ಪದಿರಲಾರಿರಿ.

ಇಂತೀ ಸ್ವಾಪಗೀತಕ್ಕೆ ನಾವು ಜೋಗುಳವೆಂಬುದೇಕೆ? ಮತ್ತು ಜೋ ಜೋ ಎಂಬುದರ ಅರ್ಥವೇನು? ಮೊದಲಿಗೆ ಜೋ ಶಬ್ದದಲ್ಲಿ ಅರ್ಥವೇನಿರುವುದೆಂದು ನೋಡಿ ತರುವಾಯ ಜೋಗುಳಶಬ್ದಕ್ಕೆ ಕೈಯಿಡುವೆನು.

ಜೋ ಎಂಬುದು ಬರಿದೊಂದು ಅರ್ಥವಿಲ್ಲದ ನುಡಿಯೆಂದು ಹಲವರೆನ್ನುವರು. ತೋರಮಟ್ಟಿನಿಂದ ನೋಡಿದರೆ ನನಗೂ ಹಾಗೇ ತೋರುವುದು.

ನಂಟು ಗೊತ್ತಾದೊಡನೆಯೇ ಇದ್ದ ಹುರುಳೆಲ್ಲ ಬಯಲಿಗೆ ಬಂದು ಬಿಡುವುದರಿಂದ, ಈ ಜೋ ಶಬ್ದಕ್ಕೆ ಬೇರೆ ಶಬ್ದಗಳೊಡನೆತ್ತಲಾದರೂ ನಂಟಿರುವುದೋ ಎಂದು ಕನ್ನಡನುಡಿಗಳಲ್ಲಿ ಹಲವನ್ನು ನೋಡಿದೆನು. ಆದರೇನು? ನೋಡಿದರೆ ಒಂದೇ ಒಂದಾದರೂ ಅದರ ನಂಟುತನವನ್ನು ತೋರ್ಪಡಿಸಲಿಲ್ಲ.

ಈ ರೀತಿಯಾಗಿ ನನ್ನಾಸೆ ಬಯಲಾದುದನ್ನು ಕಂಡು, ಕನ್ನಡ ನುಡಿಗಳ ಗೊಡವೆ ಬಿಟ್ಟು, ಕನ್ನಡದೊಡಹುಟ್ಟುಗಳಾದ ಬೇರೆಮಾತುಗಳನ್ನಾದರೂ ಕೇಳಿ ನೋಡುವೆನೆಂದು ಎಣಿಸಿದೆನು.

ತೌಳವ ಭಾಷೆಯಲ್ಲಿ 'ಜೋಕುಳು' ಎಂಬೊಂದು ನುಡಿಯಿರುವುದು. ಈ ನುಡಿಯನ್ನು ಮರಕುಳು, ಕರೆಕುಳು, ಕೈಕುಳು ಮುಂತಹ ನುಡಿಗಳೊಡನಿಟ್ಟು ನೋಡಿದರೆ, ನುಡಿಯ ಕಡೆಯ 'ಕುಳು' ಎಂಬುದು ಒಂದು ಪ್ರತ್ಯಯವಾಗಿರಬಹುದೆಂದು ಎಣಿಸಿದೆನು. ("ಕುಳು" ಏನ

ಉತ್ವಗಳಿಗೆ ಸ್ವರಭಾರವು ಅಡ್ಡಪಾಲೆಂದು ಅರಿಯಬೇಕು. (" ಕ್ ಳ್ " ಎಂಬಂತು) ಈಗಳಾ ಪ್ರತ್ಯಯವನ್ನು ಕಳೆದುಬಿಟ್ಟರೆ ಜೋ, ಮರ, ಕರೆ, ಕೈ ಎಂದು ಬೇರಾಗಿ ಉಳಿವುವು. ಇವು ಪ್ರಕೃತಿಗಳಾಗಿರಬಹುದು. ಮತ್ತಿನ್ನು ನೋಡಿದರೆ ಈ ' ಕುಳು,' ಕರ್ಣಾಟಕದಲ್ಲಿ ಬಹುತ್ವವನ್ನು ಹೇಳುವ 'ಕಳ್' (ಗಳ್) ಪ್ರತ್ಯಯಕ್ಕೆ ಸರಿಬರುವುದು. ಆಕಳ್, ಮಕ್ಕಳ್, ನಾಟ್ಕಿಳ್, ಕೋಟ್ಕಿಳ್ (ನಾಡುಗಳ್, ಕೋಡುಗಳ್) ಮೊದಲಾದುವನ್ನು ಹೋಲಿಸಿ ನೋಡಿ, ಈ ಬಗೆಯಲ್ಲಿ ಜೋಕುಳೆಂಬ ಉದ್ದಿಷ್ಟ ಪದವು ಬಹುತ್ವವನ್ನು ಪಡೆದಿರುವುದೆಂದು ನಿರ್ಧರಿಸಿದೆನು. " ಜೋಕುಳು " ಬಹುವಚನದಲ್ಲಿದ್ದ ಮೇಲೆ ಇದರ ಪ್ರಕೃತಿ " ಜೋ " ಎಂಬುದೂ ಏಕವಚನದಲ್ಲಿರುವುದೂ ಸೈ.

ಜೋಕುಳೆಂದು ತುಳುವರು ಮಕ್ಕಳಿಗೆಂಬರು.* ಆದರೆ ಈ ಪದದ ಏಕವಚನರೂಪಕ್ಕೆ ಬೇರೆ ತಾನಾಗಿ ಪ್ರಯೋಗವು ಈಗಳಿಲ್ಲವೆಂಬಂತು ತೋರುವುದು. ಇಂತಿದ್ದರೂ ' ಆಣ್ಜೋವು,' ' ಪೊಣ್ಜೋವು ' ಎಂಬೀ ತುಳುಮಾತುಗಳ ಹುಟ್ಟು ನೋಡಿದರೆ, ಜೋವೆಂಬ ಏಕವಚನರೂಪವು ಮೊದಲಿನವರಲ್ಲಿ ರೂಢಿಯಿದ್ದುದೆಂದು ತಿಳಿದುಬರುವುದು. ಆಣ್ಜೋವು ಪೊಣ್ಜೋವು ಎಂಬೀ ಮಾತುಗಳನ್ನು ಬಿಡಿಸಿದರೆ, ಕ್ರಮದಿಂದ ಆಣ್ + ಜೋವು, ಪೊಣ್ + ಜೋವು ಎಂದಾಗುವುದು. ಆಣೆಂದು ಗಂಡು ; ಪೊಣ್ಣೆಂದು ಹೆಣ್ಣು; ಮತ್ತು ಜೋವೆಂದು ಕೂಸು, ಮಗುವೂ ಆಗುವುದು. ಹೀಗೆ ಆಣ್ಜೋವೆಂದು ಗಂಡುಮಗು (ಗಂಡುಕೂಸು) ಪೊಣ್ಜೋವೆಂದು ಹೆಣ್ಣುಮಗು (ಹೆಣ್ಣುಕೂಸು) ಈ ಮಾತುಗಳಿಗೆ ಈಗಳಿನವರ ರೂಢಪ್ರಯೋಗದಲ್ಲಿ ಗಂಡುಸು ಹೆಂಗುಸು ಎಂದರ್ಥವು. ನಮ್ಮಾ ಕನ್ನಡದ ' ಗಂಡುಸು ', ' ಹೆಂಗುಸು ' ಶಬ್ದಗಳಾದರೂ, ಮೊದಲನೆತ್ತಿದರೆ ಇದೇ ಅರ್ಥವನ್ನು ಕೊಡುವುವು. ಗಂಡು + ಕೂಸು ಎಂಬ ನುಡಿಗಳೆರಡರ ಸೇರಿಕೆ

* ರೂಢಿಯಲ್ಲಿ ಹುಡುಗರಿಗೂ ಹುಡುಗಿಯರಿಗೂ ಜೋಕುಳೆಂದು ಹೇಳುವರು.

ಯಿಂದ ಗಂಡುಗೂಸೆಂಬೊಂದು ಸಮಾಸ ಹುಟ್ಟಿ, ಬಳಿಕದು ಗಂಡೂಸು-ಗಂಡುಸು ಎಂಬ ರೂಪಾಂತರಗಳನ್ನು ಹೊಂದಿತು. ಪೆಣ್ಣು + ಕೂಸು ಸೇರಿ ಪೆಣ್ಗೂಸು ಎಂದಾಗಿ ಮತ್ತದರಿಂದ ಪೆಂಗೂಸು-ಹೆಂಗೂಸು-ಹೆಂಗುಸು ಎಂಬೀ ರೂಪಗಳು ಸಿದ್ಧಿಯಾದುವೆಂದು ತಿಳಿಯಬಹುದು.

ಈಗಳೀ ಕ್ರಮದಿಂದ ನೋಡಲು, 'ಜೋ'ವೆಂಬ ಮಾತಿಗೆ ಮಗು ಇಲ್ಲವೆ ಕೂಸು ಎಂಬುದು ಅರ್ಥವಾಗಿರಬಹುದೆಂದು ನನಗೆ ಕಂಡುಬಂತು.

'ಜೋಗುಳ'ವೆಂಬ ನುಡಿಯ ಅರ್ಥವನ್ನರಸುವುದಿನ್ನು ಅಸಾಧ್ಯವಲ್ಲ. ಆದರೊಂದಿಷ್ಟು ತೊಡಕುಂಟು.

'ಜೋಗುಳ ಪಾಡು' ಎಂದು ಮೊದಲಿದ್ದ ಮಾತು. 'ಜೋಗುಳ' ಎಂಬ ಪದವು 'ಜೋ' ಶಬ್ದದ ಷಷ್ಠೀ ಬಹುವಚನವು. ಆದರೆ ಮತ್ತಿನವರು ಜೋಗಳ ಪಾಡೆಂಬುದೊಂದು ಸಮಾಸಪದವೆಂದು ಬಗೆದು ಸಸೂತ್ರವಾಗಿ ಜೋಗುಳಪಾಡೆಂದು ಕಲ್ಪಿಸಿಕೊಂಡರು. ಬಳಿಕ ಪೂರ್ವಪದವನ್ನೇ ಸಂಭಾವಿಸಿಕೊಂಡು ಜೋಗಳ-ಜೋಗಳ ಎಂದು ಕರೆದಾಡಿದರು. ಜೋಗುಳ-ವೆಂಬ ರೂಪವು ಅಲ್ಲಿಂದ ಮೇಲೆ ಹುಟ್ಟಿದುದಾಗಿರಬಹುದು, ಇಲ್ಲವೆ 'ಜೋಕುಳೆಪದ' ಎಂಬ ತುಳುಮಾತಿನಿಂದ ಬಂದರೂ ಬರಬಹುದು. ಕವಿಮುಖ್ಯರೆಲ್ಲ ಜೋಗುಳಶಬ್ದಕ್ಕೆಯೆ ಮೊದಲೆಡೆಕೊಟ್ಟು ಇದುವೆ ಸಿದ್ಧರೂಪವೆನ್ನುವರು. ಇದಹುದಾದರೆ ಜೋ-ಜೋಗುಳ ಎಂಬೀಮಾತುಗಳನ್ನು ತುಳುಹೆಂಗಸರುಗಳ ಬಾಯಿಂದ ಹೆಕ್ಕಿಕೊಂಡಿರಬೇಕು.

ಚಕ್ರಧಾರಿ.

"ಸುವಾಸಿನೀ"—ಮಂಗಳೂರು, ಸಂಪುಟ ೧ ಪುಟ ೯೩-೯೪. (ಡಿಸೆಂಬರ್ ೧೯೦೦)

(೨)

(ಲಕ್ಷ್ಮೀನಾರಣಪ್ಪನವರ ಮಿತ್ರರಾದ ಮ|| ಬಿ. ಸೀತಾರಾಮಯ್ಯನವರು ಮ|| ಹುರುಳಿ ಭೀಮರಾಯರಿಗೆ ಬರೆದ ಕಾಗದ)

ಬೋಳಾರ, ತಾ|| 29-7-1925.

ಮ|| ರಾ|| ರಾ|| ಹುರುಳಿ ಭೀಮರಾಯರಿಗೆ

ಬೋಳಾರ ಸೀತಾರಾಮಯ್ಯನ ಸಾದರ ನಮಸ್ಕಾರ—ಅದಾಗಿ ಈವರೆಗೆ ಉಭಯಕ್ಷೇಮ ಸಾಂಪ್ರತ. ತಾವು ಕೇಳಿದ ಅನುಭವದ ವಿಷಯ ನನಗೆ ತಿಳಿದ ವಿಷಯವನ್ನು ಬರೆಯುತ್ತೇನೆ.

ನಂದಳಿಕೆ ಲಕ್ಷ್ಮೀನಾರಾಯಣನವರು ನನ್ನ ತಂದೆಯವರನ್ನೂ, ಉಡುಪಿಯಲ್ಲಿ ಇನ್ಸ್ಪೆಕ್ಟಿಂಗ್ ಸ್ಕೂಲ್ಮಾಸ್ತರರಾಗಿದ್ದ ನನ್ನ ದೊಡ್ಡತಂದೆ ಕೃಷ್ಣಪ್ಪಯ್ಯನವರನ್ನೂ ಮೊದಲೇ ತಿಳಿದವರೂ ಅವರಲ್ಲಿ ಗೌರವ ಮತ್ತು ಪೂಜ್ಯಭಾವವುಳ್ಳವರೂ ಆಗಿದ್ದರು. ನಾನು ಸೆಟಲ್‌ಮೆಂಟ್ ಆಫೀಸಿನಲ್ಲಿ ಸುಪರ್ವೈಜರರ ಗುಮಾಸ್ತನಾಗಿ ಉಡುಪಿಯಲ್ಲಿದ್ದಾಗ ನನಗೂ ಅವರಿಗೂ ಪರಿಚಯವಾಗಿ ಅವರಲ್ಲಿ ನಾನು ಹೋಗುವುದೂ ಅವರು ನನ್ನ ಬಿಡಾರಕ್ಕೆ ಬರುವುದೂ ಇತ್ತು. ಕನ್ನಡ ಗ್ರಂಥಗಳನ್ನೋದುವುದು, ಆ ವಿಷಯ ಸಂಭಾಷಣಮಾಡುವುದು, ಇತರ ಸುಖಗೋಷ್ಠಿಗಳು, ಮೊದಲಾದವುಗಳಲ್ಲಿ ನಾವು ವಿರಾಮಕಾಲಗಳಲ್ಲಿ ಸಂತೋಷಪಡುತ್ತಿದ್ದೆವು. ಆಗ ಅವರು ಉಡುಪಿಯ ಬಾಸೆಲ್ ಮಿಶ್ಯನ್ ಹ್ಯಾಸ್ಕೂಲಿನಲ್ಲಿ ಕನ್ನಡವನ್ನೂ ದೇಹವ್ಯಾಯಾಮವನ್ನೂ ಕಲಿಸುವ ಉಪಾಧ್ಯಾಯರಾಗಿದ್ದರು. ಅವರು ಬರೆದ "ರಾಮಾಶ್ವಮೇಧ" ದ ಸ್ವಹಸ್ತ ಲಿಖಿತಪ್ರತಿಯನ್ನು ನನ್ನ ವಶ ಕೊಟ್ಟು ಅದರಲ್ಲಿ ವ್ಯಾಕರಣವಿರುದ್ಧ ದೋಷಗಳೇನಾದರು ಇದ್ದರೆ ಸೂಚಿಸಬೇಕೆಂದು ಹೇಳಿದರು. ನಾನದನ್ನು ತೆಕ್ಕೊಂಡು ಅವಕಾಶದೊರೆತಾಗ ಓದಿ, ಸ್ವಲ್ಪದಿನಗಳ ಮೇಲೆ ಕೊಟ್ಟೆ. ವಿಶೇಷದೋಷಗಳೇನೂ ಇರಲಿಲ್ಲ. ಆಗ ಅದು ಅಂತ್ಯದಲ್ಲಿ ಸ್ವಲ್ಪ ಅಪೂರ್ಣವಾಗಿತ್ತು. ಗ್ರಂಥವು ಚಲೋದಾ

ಗಿತ್ತು. ನನ್ನ ತಂದೆಯವರು ಬರೆದ "ನಾನಾರ್ಥಶಬ್ದಾವಳಿ" ಯ ವಿಷಯ ಪುನಃ ಮುದ್ರಿಸುವಲ್ಲಿ ಮಾಡಬೇಕಾದ ಕೆಲವು ವಿಷಯಗಳನ್ನು ಸೂಚಿಸಿದ್ದರು. (ಅವರ ಶಾಲೆಯ ಹುಡುಗರ ಕನ್ನಡಪಾಠದ ಪರೀಕ್ಷಾ ಪತ್ರಗಳನ್ನು ತಿದ್ದುವದಕ್ಕೂ ನನ್ನವಶ ಕೊಟ್ಟಿದ್ದರು. ನಾನು ಎರಡು ವರ್ಷದವರೆಗೆ ಉಡುಪಿಯಲ್ಲಿದ್ದೆ. ಎರಡನೆಯ ಸರ್ತಿ ನಾನು ಉಡುಪಿಯ ಲ್ಲಿದ್ದಾಗ ಸೆಟಲ್ಮೆಂಟ್ ಪಟ್ಟಾ ಕೊಡುವ ಕಾಲವಾಗಿತ್ತು. ನನಗೆ ಅವರಲ್ಲಿ ಹೋಗಿ ಮಾತಾಡುವುದಕ್ಕೇನೂ ಅವಕಾಶ ದೊರೆತಿರಲಿಲ್ಲ.)

ಅವರು ತಮ್ಮ ಮನೆಯ ತೆಂಕಹಿತ್ತಲಲ್ಲಿದ್ದರು. ಅವರ ಹೆಂಡತಿ ಯೂ ಇನ್ನೊಬ್ಬ ವಿಧವೆಯೂ ಅವರಲ್ಲಿದ್ದ ಹೆಂಗುಸರು—ಮೂರುಜನರೇ ಇದ್ದವರು.

ಅವರು ನಿಗರ್ವಿ, ಶಾಂತಸ್ವಭಾವದವರು. ಗೃಹಕೃತ್ಯದ ಕೆಲಸಗ ಳನ್ನೂ, ಶಾಲೆಯಲ್ಲಿಯ ತನ್ನ ಉದ್ಯೋಗವನ್ನೂ ಮಾಡಿಕೊಂಡು ಉಳಿದ ಕಾಲವನ್ನು ಓದುವುದು ಬರೆಯುವುದು ಈ ವಿಷಯಗಳಲ್ಲೇ ಬಹಳ ಕಳೆ ಯುತ್ತಿದ್ದರು.

ಇವರು ಕುಂದಾಪುರದಲ್ಲಿಯ ಕನ್ನಡ ಸಂಸ್ಕೃತಗಳಲ್ಲಿ ಪಾಂಡಿತ್ಯ ವುಳ್ಳ ಒಬ್ಬ ಬ್ರಾಹ್ಮಣಗೃಹಸ್ಥರ* ವಿಷಯವಾಗಿ ಮಾತಾಡುತ್ತಿದ್ದರು. ಆ ಗೃಹಸ್ಥರ ಹೆಸರು ವಾಸಸ್ಥಾನಾದಿಗಳ ವಿಷಯ ಈಗ ನನ್ನ ನೆನಪಿನ ಲ್ಲಿಲ್ಲ. ಲಕ್ಷ್ಮೀನಾರಣಪ್ಪನವರು ಈ ಗೃಹಸ್ಥರ ತಿಳುವಳಿಕೆಯ ಮತ್ತು ಸದ್ಗುಣಗಳ ವಿಷಯ ಹೊಗಳುತ್ತಿದ್ದರು. ತಮಗೆ ಕುಂದಾಪುರದತ್ತ ಕಡೆಯ ಮಿತ್ರರಾರಾದರು ಸಿಕ್ಕಿದಾಗ ಈ ಗೃಹಸ್ಥರ ವಿಷಯ ಅಥವಾ ಅವರೇನಾದರೂ ಗ್ರಂಥವನ್ನು ಬರೆದ ವಿಷಯ ತಿಳಿಯುವ ಪ್ರಯತ್ನಮಾಡ ಬಹುದೆಂದು ತೋರುತ್ತವೆ.

ಇಂತೀ ನಮಸ್ಕಾರ

ಸೀತಾರಾಮಯ್ಯ.

---

* ಅವರ ಗುರುಗಳಾದ ಮ॥ ಮಳಲಿ ಸುಬ್ಬರಾಯರು.



ರಾಗ—ಹಿಂದೋಳ್.

ಮೊರೆ.

ಬಲ್ಲಿದನು ನಾನೆಂದು ಬಲುಮೆರೆದೆನಯ್ಯ ||ಪ||
ಎಲ್ಲ ಬಲವೆನದೆಂದು ಮೈಮರತೆ ನೀನೆನ್ನ ಸಲಹಬೇಕಯ್ಯ ||ಅನು||

ಎನ್ನ ಮಾನಸದಾಸೆಯಾಗಸಕೆ ಕೈನೀಡಿ |
ನಿನ್ನ ಸಂಕಲ್ಪಗಳ ಲೆಕ್ಕಿಸದೆ ಚೀರಿಡೆ ಸಂ ||
ಪನ್ನಬಲ ದಯೆತೋರ್ದ ದಾರಿವೆಳಗಾದೆ |
ಎನ್ನಹಂಕೃತಿ ತೊಲಗೆ ನೆರವಾದೆ ನಿಜವನೊರೆದೆ ||೧||

ಎನ್ನ ಸಾಸಕೆ ಜಗವು ಅಡಿಯಾಳುತನಮಾಡಿ |
ಮನ್ನಣೆಯ ತೋರುವುದು ತಾನೆಂದು ಬಗೆದೆ ||
ಇನ್ನು ಮೇಲಣ ಕಾರ್ಯವೆನ್ನಧೀನವದೆಂದು |
ಭಿನ್ನತತ್ತ್ವದ ದಾಳಿಗಾಂ ಶರಣುವೋದೆ ನಿರ್ಬೋಧನಾದೆ ||೨||

ವಿಶ್ವಸಾಮ್ರಾಜ್ಯದಧಿಕಾರ ನಿನಗಿರಲು |
ಅಸ್ವತಂತ್ರನು ಅದನು ಅಣಕಿಸುತೆ ಮಲೆತೆ ||
ನಿಸ್ಸೀಮಸಾಹಸದ ಬೆಡಗಿನಾತ್ಮನೆ ಪಿತನೆ |
ವತ್ಸನೆಂತಾದೊಡಂ ನಮಿಸಿ ಬೇಡುವೆನಯ್ಯ ಕರುಣೆದೋರಯ್ಯ ||೩||

ಜೀವವಾಹಿನಿ.

ರಾಗ—ಪೀಲು.

ಜೀವವೊಂದನಂತವಾಹಿನೀ ||ಪ||
ವಿಶ್ವಪಾತ್ರದೊಳು ಪರಿದು ಪಾರುವೀ ||ಅನು||

ಜೀವಕೋಟಿಗಳ ಕೋಟಲೆಗಳಿಹವಿಲ್ಲಿ |
ಭೀಮಸಂಭ್ರಮದ ತೀವ್ರಲಹರಿಯಿಹುದು ||
ಸಾವುನೋವುಗಳ ಭೇದ ಬಾಧೆಗಳಿಹವು |
ಜೀವ ಕುದಿವರಿಯುವ ಶೋಕಮಿಹುದು ||೧||

ಗರುವಗಾಂಭೀರ್ಯಗಳು ಮೆರೆವ ಒಯ್ಯಾರಗಳು |
ಪರಿಪರಿಯ ಸೌಂದರ್ಯವೌದಾರ್ಯವಿಹುದು |
ಮರೆಸಿ ಮೋಹದೊಳಿಳಿಪ ಲಾಸ್ಯಜಾಲಗಳಿಹವು |
ಉರುತರದ ರುಚಿಗಮನ ಮಂದಹಾಸಗಳು ||೨||

ಇದರಾಳ ಕಂಡವರಿಲ್ಲ ಮೂಲವರಿತವರಿಲ್ಲ |
ನೀಲಹೃದಯವ ಪೊಕ್ಕು ಪುಡುಕಿದವರಿಲ್ಲ ||
ಮೇಲೆ ಭೋರ್ಗರೆಯುತುರುಳಿ ರಭಸದೆ ಬರ್ಪ |
ಮಾಲೆಯುಲೆಗಳ ಜೀವ ಶೋಧಿಸಿದರಿಲ್ಲ ||೩||

ಆವ ಸಾಗರಕೆಲ್ಲಿ ಪೋಗಿ ಸೇರುವುದೊ |
ಆವ ಕಡೆ ಧುಮ್ಮಿಕ್ಕುತೆಲ್ಲಿ ಸುಳಿಯುವುದೊ ||
ಆವ ದೋಣಿಯನೆಳೆದು ತಡಿಗೆ ನೂಂಕುವುದೊ |
ಆವ ನಾವಿಕನಿದನು ದಾಂಟಲರಿದಿಹನೊ ||೪||

ವಿ. ಸೀ.



ಮ॥ ಬಿ. ರಾಮರಾಯರು, ಎಂ.ಎ., ಎಲ್‌ಎಲ್.ಬಿ.

ಶ್ರೀ ಲಕ್ಷ್ಮೀನಾರಾಯಣ ಕವಿ.

(ಮ|| ಬಿ. ರಾಮರಾವ್, ಎಂ.ಎ., ಎಲ್‌ಎಲ್.ಬಿ. ಯವರಿಂದ)

ಶ್ರೀ|| ಲಕ್ಷ್ಮೀನಾರಾಯಣ ಕವಿಯ ಹೆಸರು ಮೊತ್ತಮೊದಲು ನನ್ನ ಕಿವಿಗೆ ಬಿದ್ದುದೂ ಆತನ ವಿಷಯದಲ್ಲಿ ಗೌರವಬುದ್ಧಿಯುಂಟಾದುದೂ, ನನಗೆ ಈಗ ಜ್ಞಾಪಿಸಿಕೊಳ್ಳಲು ಬರುವ ಮಟ್ಟಿಗೆ ಕ್ರಿ.ಶ. ೧೮೯೧ನೇ ವರ್ಷದ ಅನಂತರವಾಗಿರಬೇಕೆಂದು ತೋರುತ್ತಿದೆ. ಏಕೆಂದರೆ ಪ್ರಥಮತಃ ಪ್ರಚುರಗೊಳಿಸಲಾದ ಅವರ 'ಕುಮಾರವಿಜಯ' ವೆಂಬ ಯಕ್ಷಗಾನ ಪ್ರಬಂಧವು ಆ ವರ್ಷದಲ್ಲಿ ಉಡುಪಿಯ ಹಿಂದೂ ಮುದ್ರಾಕ್ಷರ ಶಾಲೆಯಲ್ಲಿ ಅಚ್ಚಾಗಿ ಪ್ರಕಾಶಗೊಳಿಸಲಾಗಿದ್ದಿತು. ಮುದ್ರಣದ ಒಂದು ಪ್ರತಿಯು ಈಗಲೂ ನನ್ನಲ್ಲಿದೆ. ಈ ಪುಸ್ತಕದ ಕಡೆಗೆ ಆಗ ಬಾಲ್ಯದಲ್ಲಿದ್ದ ನಮ್ಮ ಲಕ್ಷ್ಯವು ವಿಶೇಷವಾಗಿ ಹೋಗುವುದಕ್ಕೆ ಹಲವು ಕಾರಣಗಳಿದ್ದುವು. ನಮ್ಮ ಚಿಕ್ಕ ವಯಸ್ಸಿನಲ್ಲಿ, ನಮ್ಮ ಮಂಗಳೂರು ಜಿಲ್ಲೆಯಲ್ಲಿ ಯಕ್ಷಗಾನದ ದಶಾವತಾರದ ಆಟಗಳು ಮತ್ತು *'ತಾಳಮದ್ದಳೆ'ಗಳು ಯಾವತ್ತು ಜಾತಿಗಳ ಜನರಿಗೆ ಸ್ತ್ರೀಪುರುಷ ಯುವಕವೃದ್ಧರೆಂಬ ಯಾವ ಭೇದವೂ ಇಲ್ಲದೆ ಸಮಾನವಾಗಿ ಪ್ರಿಯವಾಗಿದ್ದುವು. ಅಂದಿನಿಂದೀಚೆಗೆ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಪಾಶ್ಚಿಮಾತ್ಯ ನಾಗರಿಕತೆಯೂ ಹೊಸ ಪದ್ಧತಿಯ ನಾಟಕಗಳೂ ಅಪಾರವಾಗಿ ಬೆಳೆದಿರುವುವಾದರೂ, ಈ ಹೊತ್ತಿಗೂ ನಮ್ಮ ಜಿಲ್ಲೆಯವರ ಯಕ್ಷಗಾನ ಪ್ರೇಮವು ಕಡಮೆಯಾಗಿ

---

* ಕ್ರಮವಾಗಿ ವೇಷಗಳನ್ನು ಹಾಕಿಕೊಂಡು ರಂಗಸ್ಥಳದಲ್ಲಿ ಆಡುವುದಕ್ಕೆ ಬದಲಾಗಿ, ಮನೆಗಳಲ್ಲಿಯೇ ಚಿಕ್ಕ ಚಿಕ್ಕ ಅಥವಾ ದೊಡ್ಡ ಗುಂಪುಗಳಾಗಿ ಕುಳಿತು ತಾಳ ಮದ್ದಲೆಗಳೊಡನೆ ಭಾಗವತನಿಂದ ಹಾಡಿಸಿ, ತಿಳಿದವರು ಅರ್ಥ ಮಾತನಾಡುವ ಪದ್ಧತಿಯೂ ನಮ್ಮ ಜಿಲ್ಲೆಯಲ್ಲಿದೆ. ಹೆಚ್ಚಾಗಿ ಬಯಲಿನಲ್ಲಿ ಕ್ರಮವಾದ ಆಟವಾಡಲು ಬಾರದಿರುವ ಮಳೆಗಾಲದಲ್ಲಿ ಹೀಗೆ ಮಾಡುವರು. ಇದಕ್ಕೆ 'ತಾಳಮದ್ದಲೆ' ಹಾಕುವುದೆಂದು ಸಂಕೇತನಾಮವು.

ರುವುದೆಂದು ನಾನು ಧೈರ್ಯವಾಗಿ ಹೇಳಲಾರೆನು. ನಿಷ್ಪಕ್ಷಪಾತವಾಗಿ ಆಲೋಚಿಸಿದೆವಾದರೆ, ಅವುಗಳಲ್ಲಿ ಅಂಥ ಆಕರ್ಷಕಶಕ್ತಿಯಿರುವುದೆಂದು ಧಾರಾಳವಾಗಿ ಒಪ್ಪಬೇಕಾಗುವುದು. ಅದಂತಿರಲಿ; ಆ ಕಾಲದಲ್ಲಿ ಯಕ್ಷಗಾನವೇ ನಮ್ಮ ಕನ್ನಡ (Kanara) ಜಿಲ್ಲೆಯ ಜನಸಾಮಾನ್ಯರ ಕರ್ಣಾಟ ಪಾಂಡಿತ್ಯದ ಮತ್ತು ಗಾನದ ಆದರ್ಶವಾಗಿದ್ದಿತು. ದಶಾವತಾರದ ಆಟಗಳನ್ನು ಬಿಟ್ಟರೆ ಕನ್ನಡದಲ್ಲಿ ಬೇರೆ ಯಾವುದಾದರೂ ನಾಟಕಗಳಿವೆಯೆಂಬ ಕಲ್ಪನೆಯು ಕೂಡ ನಮ್ಮಲ್ಲಿ ಪ್ರಾಯಶಃ ಯಾರಿಗೂ ಇರಲಿಲ್ಲ. ೧೮೯೩ ನೇ ಇಸವಿಗೆ ಮೊದಲು ನಾನು ಕನ್ನಡದ ಯಾವುದೊಂದು (ಅರ್ವಾಚೀನ ಪದ್ಧತಿಯ) ನಾಟಕವನ್ನು ನೋಡಿದಂತೆ ನೆನಪು ತೋರುವುದಿಲ್ಲ. ಹೀಗಾದುದರಿಂದ ಈಗಳಿನ ಚಿಕ್ಕವಯಸ್ಸಿನವರು ಎಲ್ಲೆಂದರಲ್ಲಿ ಬಾಯಿಗೆ ಬಂದ ನಾಟಕದ ಹಾಡುಗಳನ್ನು ಹಾಡುತ್ತ ತಿರುಗುವಂತೆ ಯಕ್ಷಗಾನದ ಹಾಡುಗಳೇ ಆ ಕಾಲದಲ್ಲಿ ನಮ್ಮ ಬಾಯಲ್ಲಿ ಹೆಚ್ಚಾಗಿ ಬರುತ್ತಿದ್ದುವು.

ಶ್ರೀ|| ಲಕ್ಷ್ಮೀನಾರಾಯಣ ಕವಿಯ ‘ ಕುಮಾರವಿಜಯ ’ ವು ವಿಶೇಷವಾಗಿ ನಮ್ಮ ಲಕ್ಷ್ಯವನ್ನು ಸೆಳೆಯಿತೆಂದು ಮೇಲೆ ಹೇಳಿದೆನಲ್ಲವೆ? ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳಿದ್ದುವು. ಸಾಮಾನ್ಯತಃ ಯಕ್ಷಗಾನ ಪ್ರಸಂಗದ ಪುಸ್ತಕಗಳು ‘ ಬಜಾರೀ ನಾಟಕ ’ ದ ಪುಸ್ತಕಗಳ ಹಾಗೆಯೇ, ಕೆಟ್ಟಕಾಗದದ ಮೇಲೆ ನೂರಾರು ತಪ್ಪುಗಳೊಡನೆ (ಆದರೆ ‘ ಪಂಡಿತರಿಂದ ಪರಿಷ್ಕರಿಸಲ್ಪಟ್ಟು’ ಎಂಬ ಮಾತು ರಕ್ಷಾಪತ್ರದ ಮೇಲೆ ಹಾಕಲು ಮರೆಯದೆ) ಕಣ್ಣುಬೇನೆ ತರತಕ್ಕ ಮೊಳೆಗಳಿಂದ ಅಚ್ಚುಹಾಕಲ್ಪಡುತ್ತಿದ್ದುವು. ಅಂದವಾಗಿಯೂ ಶುದ್ಧವಾಗಿಯೂ ಒಳ್ಳೆಯ ಕಾಗದದ ಮೇಲೂ ಮುದ್ರಿತವಾದ ಯಕ್ಷಗಾನ ಪುಸ್ತಕಗಳೊಳಗೆ ನಾನೂ ನನ್ನ ಮಿತ್ರಮಂಡಲಿಯವರೂ ನೋಡಿದ ಮೊದಲನೆಯದು ‘‘ಕುಮಾರವಿಜಯ’’ ವೇ ಸರಿ. ಇದು ಮೊದಲನೆಯ ಕಾರಣವು. ‘ ಕುಮಾರವಿಜಯ ’ ದ

ಶೈಲಿಯು ಕೂಡ ಉದ್ಗ್ರಂಥಗಳ ಶೈಲಿಯೊಡನೆ ಹೋಲಿಸಿ ನೋಡಿದರೆ ಕಡಮೆಪ್ರತಿಯದೆಂದೇ ಹೇಳಬಹುದಾದರೂ, ಇತರ ಯಕ್ಷಗಾನ ಪುಸ್ತಕಗಗಳಲ್ಲಿ ಹೇಗೋ 'ಕುಮಾರವಿಜಯ' ದಲ್ಲಿಯೂ ಹಾಗೆಯೇ (ಆದರೆ ಕಡಮೆ ಪ್ರಮಾಣದಲ್ಲಿ)* ಛಂದೋದೋಷಗಳು ಕಂಡುಬರುವುವಾದರೂ, ಒಟ್ಟಾರ, ಕುಮಾರವಿಜಯದ ಶೈಲಿಯು ಇತರ ಯಕ್ಷಗಾನಗಳಿಗಿಂತ ಎಷ್ಟೋ ಪ್ರೌಢವೂ ಪಾಮರರಿಗೆ ದುರವಗಾಹವೂ ಆಗಿದ್ದಿತು. ಅದರಲ್ಲಿ ‡ಶಬ್ದಾಲಂಕಾರಗಳೂ ಪ್ರಾಸಚಮತ್ಕಾರಗಳೂ ಬಹಳವಾಗಿ ಕಂಡುಬರುತ್ತಿದ್ದುವು. ಹಾಡುಗಳ ಮಟ್ಟುಗಳಲ್ಲಿಯೂ ಕೂಡ ನೂತನತೆಯು ಕಂಡುಬರುತ್ತಿದ್ದಿತು. ಇದನ್ನೆಲ್ಲ, ಪುಸ್ತಕವನ್ನೋದಿಯೇ ಕಂಡುಕೊಳ್ಳಬೇಕಲ್ಲದೆ, ಉದಾಹರಣೆಗಳಿಂದ ವಿವರಿಸಲು ಸಾಧ್ಯವಿಲ್ಲ. ಯಕ್ಷಗಾನ ಲೇಖಕರಲ್ಲಿ ಗೋಚರವಾಗುವ ಸಾಹಿತ್ಯಜ್ಞಾನಕ್ಕಿಂತ ಈ ಕವಿಯ ಪಾಂಡಿತ್ಯವು ಎಷ್ಟೋ ಅಧಿಕವಾಗಿದ್ದಿತೆಂಬುದೂ ಆತನು ಕೆಲಕೆಲವು ಮೇಲ್ತರಗತಿಯ †ಗ್ರಂಥಗಳ ಪರಿಚಯವುಳ್ಳವನಾಗಿದ್ದನೆಂಬುದೂ, ಆತನ 'ಕುಮಾರ ವಿಜಯ' ದ ವಾಚನದಿಂದಲೇ ನಮಗೆ ತಿಳಿದುಬಂದು, ಆಗ ತಾನೇ ವಾಙ್ಮಯ ಕ್ಷೇತ್ರದಲ್ಲಿ ಪದಾರ್ಪಣ ಮಾಡುತ್ತಲಿದ್ದ ನಮಗೆ

---

* ಉದಾ—ಆರನೆಯ ಗಣದಲ್ಲಿ ಜಗಣ ಅಥವಾ ನಗಣ ಮಾತ್ರ ಬಾರದಿರುವುದು, ಮತ್ತು ಎರಡನೆಯ ಪಾದದ ಅಂತ್ಯಾಕ್ಷರವನ್ನು ಕೆಲವು ಕಡೆ ಲಘುವಾಗಿ ಇಟ್ಟಿರುವುದು.

ಕಂ|| ವಿಹಗನ ಮೇಗಿಹನಾರ್ವೊಗ | ವಿಹ ಘನ ಮಹಿಮನ ಪಾರ್ವತಿ
ಕಂದನ ಶರಜನ ||

[ಕುಮಾರವಿಜಯು ಪುಟ ೨].

‡ ಕುಮಾರವಿಜಯದ ೨ ನೇ ಪುಟದ ಮೇಲಣ ವಾರ್ಧಿಕ ಭಾಮಿನಿ ಷಟ್ಪದಿಗಳನ್ನು ನೋಡಿರಿ. ಪ್ರತಿ ಪುಟದಲ್ಲೆಂಬಂತೆ ಈತನ ಕುಶಲತೆಯು ಕಂಡುಬರುತ್ತಿದೆ.

† ಕುಮಾರವಿಜಯದ ಮುಖಪೃಷ್ಠದಲ್ಲಿಯೇ "ಅಳಿಯಲರಂ ಗಿಳಿಪಣ್ಣಂ" ಎಂಬ ಶಬರಶಂಕರವಿಲಾಸದೊಳಗಣ ಪದ್ಯವು ಸೂಚಕವಚನ (motto) ವಾಗಿ ಹಾಕಲ್ಪಟ್ಟಿದೆ.

ಆತನ ಮತ್ತು ಆ ಪುಸ್ತಕದ ವಿಷಯದಲ್ಲಿ ಗೌರವವನ್ನುಂಟುಮಾಡಿದುದು ಎರಡನೆಯ ಕಾರಣವು. ನಮ್ಮ ಪ್ರಾಂತದಲ್ಲಿ ಕುಮಾರಸ್ವಾಮಿಯು ಅಪ್ಪಟ ಬ್ರಹ್ಮಚಾರಿಯೆಂಬ ಭಾವನೆಯು ಪ್ರಬಲವಾಗಿರುವುದು. ನಮ್ಮ ಜಿಲ್ಲೆಗೆ ಸೇರಿದ ಶ್ರೀ ಸುಬ್ರಹ್ಮಣ್ಯಕ್ಷೇತ್ರದಲ್ಲಿ ಕುಮಾರಸ್ವಾಮಿಯ ದೇವಾಲಯವಿರುವ ಕುಮಾರಪರ್ವತದ ಮೇಲೆ ಹೆಂಗುಸರ ಬಳೆಗಳ ಶಬ್ದವು ಕೂಡ ಕೇಳಿಸಲಾಗದೆಂದೂ, ಅದಕ್ಕೆ ಏನೋ ತೀವ್ರವಾದ ಶಾಪವುಂಟೆಂದೂ ಹೇಳುವರು. ಇದಕ್ಕೆ ಆಧಾರವೇನೋ ನನಗೆ ತಿಳಿಯದು. ದ್ರಾವಿಡದೇಶದಲ್ಲಿ ಕುಮಾರಸ್ವಾಮಿಗೆ ವಲ್ಲಿನಾಯಕಿ ದೇವಸೇನೆಯರೆಂಬ ಇಬ್ಬರು ಪತ್ನಿಯರಿರುವಂತೆ ಹೇಳುವರು. "ವಲ್ಲೀಪರಿಣಯ" ವೆಂಬ ನಾಟಕವು ತಮಿಳರಿಗೆ ಬಹು ಪ್ರಿಯವಾಗಿರುವುದು. ಸ್ಕಾಂದಪುರಾಣದಲ್ಲಿ ಕೂಡ ಕುಮಾರಸ್ವಾಮಿಗೆ ಆಗಾಗ ವಿವಾಹವಾದ ವಿಷಯವು ಕಂಡು ಬರುತ್ತಿದೆ. ಶ್ರೀ|| ಲಕ್ಷ್ಮೀನಾರಾಯಣ ಕವಿಯಾದರೂ ತನ್ನ ಕಥೆಯನ್ನು 'ಶಂಕರಸಂಹಿತೆ' ಯಿಂದ ತೆಗೆದುಕೊಂಡಿರುವಂತೆ ಹೇಳಿರುವರು. ಆದರೇನು? ಈ ಗ್ರಂಥಗಳನ್ನೆಲ್ಲ ಸಾಮಾನ್ಯ ಜನರು ನೋಡುವರೇ? ತಮ್ಮ ಅಭಿಪ್ರಾಯವೇ ಸರಿಯಾದುದೆಂದು ಅವರ ಭಾವನೆ. ಹೀಗಾಗಿ, ಪದ್ಮಾಸುರನನ್ನು ಕೊಂದು ದೇವತೆಗಳನ್ನು ಕಾಪಾಡಿ ದೇವೇಂದ್ರಕುಮಾರಿಯನ್ನು ಮದುವೆಯಾದ ಕಥೆಯನ್ನು ಯಕ್ಷಗಾನರೂಪದಲ್ಲಿ ಓದಿ ನೋಡಿದ ಜನರ ಬಾಯಲ್ಲಿ 'ಇದೇನೋ ಪುರಾಣಗಳಲ್ಲಿ ಕಂಡುಬಾರದ ಕಥೆಯನ್ನು ಕಲ್ಪಿಸಿ ಕವಿಯು ಜನರನ್ನು ಮೋಸಗೊಳಿಸುತ್ತಿರುವನೆಂಬ ಒಂದು ವಿಧವಾದ ನಿಂದೆಯೂ * ಕೇಳಬರುತ್ತಲಿದ್ದಿತು. ಇದು ಮೂರನೆಯ ಕಾರಣವು. ಹೀಗಾಗಿ ಈ ಕವಿಯ ಹೆಸರು ನಮಗೆ ಸುಪರಿಚಿತ

---

* ಈ ಕಾರಣದಿಂದಲೇ ಆ ಪ್ರಸಂಗವು ಜನರ ಮೆಚ್ಚುಗೆಗೆ ಪಾತ್ರವಾಗಲಿಲ್ಲವೆಂದೂ, ರಂಗಸ್ಥಳದಲ್ಲಿಯೂ ಆಡಲ್ಪಡಲಿಲ್ಲವೆಂದೂ ಕೆಲವರು ಹೇಳುವರು. ತಾಳಮದ್ದಳೆಯ ರೂಪವಾಗಿಯೂ ಅದನ್ನು ನಾನು ನೋಡಿಲ್ಲ. ಆದರೆ ಅದರ ಪ್ರೌಢಿಮೆಯಿಂದಲೂ ಹೀಗಾಗಲು ಒಂದು ಕಾರಣವಾಗಿರಬಹುದೆಂದು ನಾನು ಊಹಿಸುವೆನು.

ವಾಗಿ, ಈತನು ಯಾರು? ಈತನ ಕುಲಗೋತ್ರಗಳೇನು? ಎಂಬೀ ಮುಂತಾದ ಸಮಾಚಾರಗಳನ್ನು ತಿಳಿದುಕೊಳ್ಳಬೇಕೆಂಬ ಆತುರವು ನಮ್ಮಲ್ಲಿ ಉಂಟಾಯಿತು, ಮತ್ತು ಕ್ಷಿಪ್ರದೊಳಗಾಗಿಯೇ, ಕವಿಯು ಕುಂದಾಪುರ ಹೈಸ್ಕೂಲಿನ ವ್ಯಾಯಾಮೋಪಾಧ್ಯಾಯನೆಂದೂ ಅದೇ ಶಾಲೆಯ ಮತ್ತೊಬ್ಬ ಉಪಾಧ್ಯಾಯರೂ, ಮರಾಠೀ ಭಾಷೆಯಲ್ಲಿ ಕೆಲಕೆಲವು ನಾಟಕಗಳನ್ನು ಬರೆದು ಪ್ರಸಿದ್ಧರೂ ಆಗಿದ್ದ ಶ್ರೀ|| ಮಳಲಿಯ ಸುಬ್ಬರಾಯರೆಂಬವರು ಆತನ ಗುರುವೆಂದೂ, ನಮಗೆ ತಿಳಿದುಬಂದಿತು.

ಆದರೆ, ಪತ್ರಮುಖದಿಂದಲಾದರೂ ನೇರಾಗಿ ಕವಿಯ ಪರಿಚಯವಾಗಲು ಇನ್ನು ಕೆಲವು ವರ್ಷಗಳು ತಗುಲಿದುವು. ಬರೀ ವಿದ್ಯಾರ್ಥಿಗಳಾದ ನಾವು, ಉಪಾಧ್ಯಾಯರೂ ಪಂಡಿತರೂ ಕವಿಯೂ ಆದ ಮಂಗಳೂರಿನಿಂದ ಸುಮಾರು ಆರುವತ್ತು ಮೈಲಿ ದೂರದಲ್ಲಿರುವ, ಈವೊದಲು ಎಂದೂ ಕಂಡರಿಯದ, ಶ್ರೀ|| ಲಕ್ಷ್ಮೀನಾರಣಪ್ಪನವರೊಡನೆ ಕಾಗದ ಪತ್ರಗಳನ್ನು ನಡೆಸುವುದು ತಾನೇ ಹೇಗೆ? ಹೀಗಾಗಿ ಕೆಲವು ಕಾಲ ಸುಮ್ಮನಿರಬೇಕಾಗಿದ್ದಿತು. ಬಳಿಕ ಕ್ರಿ. ಶ. ೧೮೯೭ನೇ ವರ್ಷದಲ್ಲಿ ನಾನು ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಒಡನೆಯೇ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಕನ್ನಡ ಪಂಡಿತನಾಗಿ ನೇಮಕಪಟ್ಟೆನು. ಆಗ ಕನ್ನಡವನ್ನು ಪ್ರಧಾನ ಭಾಷೆಯಾಗಿಯೂ ತೆಲುಗನ್ನು ಎರಡನೆಯ ಭಾಷೆಯಾಗಿಯೂ ಇಟ್ಟುಕೊಂಡು, ಎಂ. ಎ. ಪರೀಕ್ಷೆಗೆ ಖಾಸಗಿಯಾಗಿ ಓದಿಕೊಂಡಿರುತ್ತ, ತೆಲುಗಿನಲ್ಲಿ ಒಂದಿಷ್ಟು ಪರಿಶ್ರಮವುಂಟಾದೊಡನೆ ಪ್ರಸಿದ್ಧ ಆಂಧ್ರ ಲೇಖಕರಾದ ವೀರೇಶಲಿಂಗಂ ಪಂತುಲುಯವರ ಗದ್ಯ ಪುಸ್ತಕಗಳನ್ನು ಓದತೊಡಗಿ, ಅವು ರಸಭರಿತವಾಗಿಯೂ ನೂತನವಾಗಿಯೂ ಕಂಡುಬಂದುದರಿಂದ ಆಗಲೇ ಅವನ್ನು ಕನ್ನಡಿಸುವುದಕ್ಕೂ ಮೊದಲು ಮಾಡಿದೆನು. ಮತ್ತು ಪ್ರಥಮತಃ "ಕಲಹಪ್ರಿಯಾಪ್ರಹಸನ" ವೆಂಬ ಚಿಕ್ಕದೊಂದು ಗದ್ಯ ಪ್ರಹಸನವನ್ನು ಕನ್ನಡಿಸಿದೆನು. ಬಳಿಕ ೧೮೯೮ರಲ್ಲಿ

ನಾನು ಧಾರವಾಡಕ್ಕೆ ಹೋದಾಗ ಅಲ್ಲಿನ ಕ. ವಿ. ವ. ಸಂಘದವರು ಆ ಪ್ರಹಸನವನ್ನು ತಮ್ಮ "ವಾಗ್ಭೂಷಣ" ದಲ್ಲಿ ಪ್ರಕಟಗೊಳಿಸಿ ಕೆಲವು ಪ್ರತಿಗಳನ್ನು ನನಗೆ ಕೊಟ್ಟರು. ಇವುಗಳೊಳಗೆ ಒಂದು ಪ್ರತಿಯನ್ನು ನಮ್ಮ ಪ್ರಾಂತ್ಯದ ಪ್ರಸಿದ್ಧ ಕವಿಯೂದ, ಆಗ ಉಡುಪಿಯ ಮಿಶ್ಯನ್ ಹೈಸ್ಕೂಲಿನಲ್ಲಿದ್ದ ಶ್ರೀ|| ಲಕ್ಷ್ಮೀನಾರಣಪ್ಪನವರಿಗೂ ಅಭಿಪ್ರಾಯಕ್ಕಾಗಿ ಕಳುಹಿಸಿಕೊಟ್ಟೆನು, ಮತ್ತು ಅವರಿಗೊಂದು ಕಾಗದವನ್ನು ಬರೆದು ಕೆಲವು ವರ್ಷಗಳಿಗೆ ಹಿಂದೆ ಉಡುಪಿಯ 'ಸುದರ್ಶನ' ವೆಂಬ ಮಾಸ ಪತ್ರಿಕೆ ಯಲ್ಲಿ ಹಾಕುವುದಕ್ಕಾಗಿ ಕಳುಹಿಸಿ, ಆ ಪತ್ರಿಕೆಯು ಅಷ್ಟರಲ್ಲಿ ನಿಂತು ಹೋದುದರಿಂದ ಹಸ್ತಪ್ರತಿಯು ಏತತ್ಸಂಪಾದಕರೊಡನೆಯೇ ನಿಂತು ಹೋಗಿದ್ದ "ಏಕನಾಥಚರಿತ್ರ" ವೆಂಬ ಪುಸ್ತಕದ ಒಂದನೆಯ ಅಧ್ಯಾಯವನ್ನು ಆ ಸಂಪಾದಕರಿಂದ ಪಡೆದು ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿದೆನು. ಇದೇ ಶ್ರೀ|| ಲಕ್ಷ್ಮೀನಾರಣಪ್ಪನವರಿಗೂ ನನಗೂ ಉಂಟಾದ ಪ್ರಥಮ ಪರಿಚಯ. ನನ್ನ ಪತ್ರಿಕೆಗೆ ಪ್ರತಿಯಾಗಿ ಅವರು ಒಂದು ಕಾರ್ಡು (೯ ನೇ ಜುಲೈ ೧೮೯೮) ಬರೆದು 'ಪುಸ್ತಕಕ್ಕೆ ಭಾಷಾಂತರದ ಮಟ್ಟಿಗೆ ಮೆಚ್ಚುತ್ತೇನೆ. ವಸ್ತು (plot) ಪ್ರಶಸ್ತವಾದದ್ದೆಂದು ಹೊಗಳುವದಕ್ಕಾಗುವದಿಲ್ಲ. ತಮ್ಮ ಅನುಮತಿಯಂತೆ, ಹಿಂದೂ ಪ್ರೆಸ್ಸಿನಿಂದ ಏಕನಾಥನ ಚರಿತ್ರೆಯನ್ನು ತೆಗೆದುಕ್ಕೊಂಡು ಕಳುಹಿಸಿದ್ದೇನೆ. ...ಸ್ನೇಹಿತನ ಮೇಲೆ ತುಂಬಾ ವಿಶ್ವಾಸವಿಟ್ಟು ಆಗಾಗ ಪತ್ರವನ್ನು ಬರೆಯುತ್ತಿರಬೇಕಾಗಿ ಪ್ರಾರ್ಥಿಸುತ್ತೇನೆ" ಎಂಬುದಾಗಿ ಬರೆದು, ಏಕನಾಥ ಚರಿತ್ರೆಯನ್ನು ಕಳುಹಿಸುವಲ್ಲಿ ಅದರೊಳಗಿರುತ್ತಿದ್ದ ಶಬ್ದಗಳ ಮತ್ತು ಶಬ್ದರೂಪಗಳ ದೋಷಗಳನ್ನು ಕೂಡ ತಿದ್ದಿ ಕಳುಹಿಸಿಕೊಟ್ಟರು. ಇದರಿಂದ ಕವಿಯನ್ನು ಕುರಿತು ನಾವು ತಿಳಿಯಬೇಕಾದ ಕೆಲವು ಅಂಶಗಳಿವೆ. ಮೊದಲನೆಯದು ಅವರ ರಸಿಕತೆ ಮತ್ತು ನೈತಿಕ ಧೈರ್ಯ. ವೀರೇಶಲಿಂಗ ಕವಿಯಂಥ ಪ್ರಥಮ ಶ್ರೇಣಿಗೆ ಸೇರಿದ ಕವಿಯ ಪುಸ್ತಕವು ತನಗೆ ಮೆಚ್ಚುಗೆಗೆ ಬರಲಿಲ್ಲವೆಂದು

ಇಂಗ್ಲಿಷು ತಿಳಿಯದ ಬರೀ ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದ ಕನ್ನಡವನ್ನು ಕೂಡ ಕ್ರಮವಾಗಿ ಅಭ್ಯಾಸಿಸಿರದ ಉಪಾಧ್ಯಾಯರೊಬ್ಬರು ನಿರ್ಭಯೆ ವಾಗಿ ಬರೆದು ತಿಳಿಸುವುದೊಂದು ಸಾಮಾನ್ಯ ವಿಷಯವಲ್ಲ. ನನಗಾದರೂ ಈ ಅಭಿಪ್ರಾಯವು ಸಮ್ಮತವೇ ಸರಿ. ಆ ಚಿಕ್ಕಪುಸ್ತಕವನ್ನು ನಾನು ಅಭ್ಯಾಸಕ್ಕಾಗಿ ಕನ್ನಡಿಸಿದ್ದೆನೇ ವಿನಾ ಅದರ ಶ್ರೇಷ್ಠತೆಗಾಗಿ ಅಲ್ಲ. ಇನ್ನು ನನ್ನ ಅನುಮತಿಯೂ ಅಪೇಕ್ಷೆಯೂ ಇಲ್ಲದೆ ಸ್ವೇಚ್ಛೆಯಿಂದಲೇ ಏಕನಾಥ ಚರಿತ್ರವನ್ನು ತಿದ್ದಿ ಕಳುಹಿಸಿದುದರಿಂದ ವ್ಯಾಕರಣ ಮರ್ಯಾದೆ ಗಳನ್ನು ಮೀರದೆ ಶುದ್ಧವಾದ ಶೈಲಿಯಲ್ಲಿ ಬರೆಯುವ ವಿಷಯದಲ್ಲಿ ಅವ ರಿಗೆ ಎಷ್ಟು ಆದರವಿದ್ದಿತೆಂಬುದನ್ನು ಊಹಿಸಬಹುದಾಗಿದೆ. ಹಾಗೆಯೇ ಮೊದಲನೆಯ ಪತ್ರದಲ್ಲಿ ತೋರಿಸಿದ ಸ್ನೇಹ ಸೂಚನೆಯಿಂದ ಕನ್ನಡ ಲೇಖ ಕರ ವಿಷಯದಲ್ಲಿ ಇವರಿಗಿರುತ್ತಿದ್ದ ವಾತ್ಸಲ್ಯವೂ ಸ್ಪಷ್ಟವಾಗುತ್ತಲಿದೆ.

ಈ ತರುವಾಯ ಶ್ರೀ|| ಲಕ್ಷ್ಮೀನಾರಾಯಣ ಕವಿಗೂ ನನಗೂ ಆಗಾಗ ಪತ್ರವ್ಯವಹಾರವು ನಡೆಯುತ್ತಲೇ ಇದ್ದಿತು. ಆದರೆ ೧೯೦೦ ರ ಪರ್ಯಂತ ನನಗೂ ಅವರಿಗೂ ನಡೆದ ಪತ್ರವ್ಯವಹಾರಕ್ಕೆ ಸಂಬಂಧಪಟ್ಟ ಎಷ್ಟೋ ಕಾಗದಗಳು ಹುಡುಕಿದರೂ ಇದುವರೆಗೆ ದೊರೆತಿಲ್ಲ. ಅವುಗ ಳೊಳಗೆ ಪ್ರಕಟಗೊಳಿಸಲರ್ಹವಾದ ಅಂಶಗಳೆಷ್ಟೋ ಇರಬಹುದೆಂದು ನೆನಪು ತೋರುತ್ತಿದೆ. ಮುಂದೆ ಎಂದಾದರೂ ಅವು ಸಿಕ್ಕಿದ ಪಕ್ಷದಲ್ಲಿ ಅವನ್ನು ತಪ್ಪದೆ ಪ್ರಕಟಗೊಳಿಸಿ ನನ್ನ ಕನ್ನಡ ಬಂಧುಗಳ ಸನ್ನಿಧಿಯಲ್ಲಿ ಡುವೆನು.

ಶ್ರೀ|| ಲಕ್ಷ್ಮೀನಾರಣಪ್ಪನವರು ಅಂಗಸಾಧನೆಯಲ್ಲಿ 'ತರಬೇ ಯತ್ತು' ಹೊಂದುವುದಕ್ಕಾಗಿ ೧೮೮೯ ರಲ್ಲಿ ಮದ್ರಾಸಿಗೆ ಬಂದಿದ್ದಾಗ—ಆ ಶಾಲೆಯು ಈಗ ಇರುವಂತೆ ಸೈದಾಪೇಟೆಯಲ್ಲಿರಲಿಲ್ಲ—ಮದ್ರಾಸಿನ ಸಾರ್ವಜನಿಕ ಉದ್ಯಾನವನದಲ್ಲಿ (People's Park) ಆ ಶಿಕ್ಷಣವು ಕೊಡಲ್ಪಡುತ್ತಿದ್ದಿತು. ಆಗ ಕೇವಲ ತಾರುಣ್ಯದ ಭರದಲ್ಲಿದ್ದ ಈತನು

ಸ್ವಲ್ಪ ಮಟ್ಟಿಗಾದರೂ (ಇಂಗ್ಲಿಷು ಬಾರದುದರಿಂದ ನಿರುಪಾಯವಾಗಿ) ತಮಿಳು ಭಾಷೆಯನ್ನು ಮಾತನಾಡುವುದಕ್ಕೂ ಓದುವುದಕ್ಕೂ ಕಲಿತಿರಬೇಕೆಂದು ಊಹಿಸಲು ಅವಕಾಶವಿದೆ. ಅರವ ಭಾಷೆಯ ಪರಿಚಯದಿಂದ ಕನ್ನಡವನ್ನೂ ಸ್ವಭಾಷೆಯಾದ ತುಳುವನ್ನೂ (ಪ್ರಾಯಶಃ ಒಂದಿಷ್ಟು ಮಲೆಯಾಳವನ್ನು ಕೂಡ) ಈ ಮೊದಲೇ ತಿಳಿದಿದ್ದ ಕುಶಾಗ್ರಬುದ್ಧಿಯ ಈ ತರುಣನಿಗೆ ದ್ರಾವಿಡ ವರ್ಗಕ್ಕೆ ಸೇರಿದ ಭಾಷೆಗಳ ಪರಸ್ಪರ ಸಮೀಪ ಬಾಂಧವ್ಯವು ಗೋಚರಕ್ಕೆ ಬಂದಿರಬೇಕು. ಮತ್ತು ಮುಂದೆ ಈ ಭಾಷೆಗಳಲ್ಲಿ ಪರಿಶ್ರಮವು ಹೆಚ್ಚುತ್ತ ಹೋದಂತೆ ನೂತನವಾದ ರೀತಿಯಿಂದ ಒಂದು ವ್ಯಾಕರಣವನ್ನು ಬರೆಯಬೇಕೆಂಬ ಕುತೂಹಲವೂ ಈತನಲ್ಲಿ ಉಂಟಾಯಿತು. ಆಗ ಶ್ರೀ|| ಎಚ್. ನಾರಾಯಣರಾವ್ ಬಿ. ಎ., ಬಿ. ಎಲ್., * ಅವರು ಮದ್ರಾಸಿನಲ್ಲಿ ಹೈಕೋರ್ಟು ವಕೀಲರಾಗಿದ್ದು ಕನ್ನಡದ ವಿಷಯದಲ್ಲಿ ಅಭಿಮಾನವುಳ್ಳವರಾಗಿಯೂ ಇದ್ದುದರಿಂದ ಶ್ರೀ|| ಲಕ್ಷ್ಮೀನಾರಣಪ್ಪನವರು ಅವರ ಸ್ನೇಹವನ್ನು ಸಂಪಾದಿಸಿ ಅವರ ಪರಿಮುಖವಾಗಿಯೂ ನನ್ನ ಮೂಲಕವಾಗಿಯೂ ದ್ರಾವಿಡವರ್ಗದ ಬೇರೆ ಬೇರೆ ಭಾಷೆಗಳ ಶಬ್ದಗಳು ಶಬ್ದರೂಪಗಳು, ಸಾಹಿತ್ಯ, ವ್ಯಾಕರಣ, ನಿಘಂಟು ಮುಂತಾದ ವಿಷಯಗಳನ್ನು ಕುರಿತು ಎಷ್ಟೋ ಸಮಾಚಾರಗಳನ್ನು ತರಿಸಿಕೊಳ್ಳುತ್ತಿದ್ದರು. ಇವರ ಅದ್ಭುತರಾಮಾಯಣವು ೧೮೯೬

---

* ಈ ದೊಡ್ಡ ಮನುಷ್ಯರು ಮಂಗಳೂರು ಜಿಲ್ಲೆಗೆ ಸೇರಿದವರು. ಮೊದಲು ಮಡಿಕೇರಿಯಲ್ಲಿಯೂ ತರುವಾಯ ಮಂಗಳೂರು ಗೌ. ಕಾಲೇಜಿನಲ್ಲಿಯೂ ಆ ಬಳಿಕ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿಯೂ ಉಪಾಧ್ಯಾಯರಾಗಿದ್ದು, ಬಿ. ಎಲ್. ಪ್ಯಾಸುಮಾಡಿ ಕೆಲವು ಕಾಲ ಮದ್ರಾಸಿನಲ್ಲಿ ವಕೀಲರಾಗಿದ್ದು, ಅದು ಸರಿಬೀಳದೆ, ಬೊಂಬಾಯಿಯಲ್ಲಿ ಅನೇಕ ವರ್ಷಕಾಲ ಪತ್ರಿಕಾ ಸಂಪಾದಕರಾಗಿದ್ದರು. ಇವರಿಗೆ ಕನ್ನಡದಲ್ಲಿ ಪಾಂಡಿತ್ಯವೂ ಕವಿತಾಶಕ್ತಿಯೂ ಇದ್ದಿತು. ಪುರಾತನ ವಸ್ತುಶೋಧನದಲ್ಲಿಯೂ ನಿಪುಣರಾಗಿದ್ದರು. ಈಗ ೨-೩ ವರ್ಷಕ್ಕೆ ಹಿಂದೆ ಇವರು ಬೊಂಬಾಯಿಯಲ್ಲಿ ತೀರಿಕೊಂಡರು.

ರಲ್ಲಿಯೂ ಶ್ರೀರಾಮ ಪಟ್ಟಾಭಿಷೇಕವು ೧೮೯೭ ರಲ್ಲಿಯೂ 'ಕರ್ಣಾಟಕ ಕಾವ್ಯಮಂಜರಿ' ೧೪ ನೇ ಮತ್ತು ೧೫ ನೇ ಪುಷ್ಪಗಳಾಗಿ ಪ್ರಕಾಶಕ್ಕೆ ಬಂದಿದ್ದುವು. ನಾನು ಸುಮಾರು ಆ ಮೊದಲ್ಗೊಂಡೇ ಪ್ರಥಮತಃ ಸ್ವಲ್ಪ ಕಾಲ ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ಮುಂದೆ ಕ್ರಿಶ್ಚಿಯನ್ ಕಾಲೇಜಿನಲ್ಲಿಯೂ ಕನ್ನಡ ಪಂಡಿತನಾಗಿ ಕೆಲಸದಲ್ಲಿ ಸೇರಿದ್ದೆನು. ಆಗ ಉಡುಪಿ ಕುಂದಾಪುರ ಪ್ರಾಂತದ ಎಷ್ಟೋ ತರುಣರು ನನ್ನ ವಿದ್ಯಾರ್ಥಿಗಳಾಗಿಯೂ ಆಪ್ತ ಮಿತ್ರರಾಗಿಯೂ ಇದ್ದು ಬಿ. ಎ. ಕ್ಲಾಸಿನಲ್ಲಿ ಓದುತ್ತಿದ್ದರು. ಇವರಲ್ಲಿ ಕೆಲವರು ದೊಡ್ಡದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಈಗ ಉಚ್ಚಪದವಿಯಲ್ಲಿರುವರು. ಇವರುಗಳು ಹೈಸ್ಕೂಲು ತರಗತಿಗಳಲ್ಲಿ ಶ್ರೀ|| ಲಕ್ಷ್ಮೀನಾರಾಯಣಪ್ಪನವರಲ್ಲಿ ಓದಿದವರೂ ಅವರನ್ನು ಚೆನ್ನಾಗಿ ಬಲ್ಲವರೂ ಆಗಿದ್ದುದರಿಂದ ಅವರ ರಸಿಕತೆ, ಕವಿತಾಶಕ್ತಿ, ಕುಶಲತೆಗಳನ್ನು ಕುರಿತ ಎಷ್ಟೋ ಸಮಾಚಾರಗಳನ್ನು ನನಗೆ ಹೇಳಿ ಅವರ ಪರಿಚಯವನ್ನೂ ಸ್ನೇಹವನ್ನೂ ಸಂಪಾದಿಸಬೇಕೆಂಬ ನನ್ನ ಕುತೂಹಲವನ್ನು ಹೆಚ್ಚಿಸುತ್ತಿದ್ದರು. ಈ ವಿದ್ಯಾರ್ಥಿಗಳೇ ಅದ್ಭುತರಾಮಾಯಣಾದಿ ಗ್ರಂಥಗಳ ನಿಜವಾದ ಕವಿಯಾರೆಂಬುದನ್ನು ಪ್ರಥಮತಃ ನನಗೆ ತಿಳಿಯಪಡಿಸಿದವರು. ಹೀಗಾಗಿ ಆ ಕವಿಯಂತೆ ಪ್ರತ್ಯಕ್ಷ ಪರಿಚಯವನ್ನು ಮಾಡಿಕೊಳ್ಳಲು ಮೊದಲನೆಯ ಸಂದರ್ಭ ದೊರೆತೊಡನೆ, ಮೇಲೆ ಹೇಳಿದ ನನ್ನ "ಕಲಹಪ್ರಿಯಾ ಪ್ರಹಸನ"ದ ಪ್ರತಿಯನ್ನು ಅವರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿ ಅವರ ಮೈತ್ರಿಯನ್ನು ಸಂಪಾದಿಸಿದೆನು.

ನಮ್ಮ ಸ್ನೇಹವು ಕ್ರಮಕ್ರಮವಾಗಿ ಬೆಳೆಯುತ್ತ ಹೋದಂತೆ, ಅದ್ಭುತರಾಮಾಯಣಾದಿ ಗ್ರಂಥಗಳ ಲೇಖಕನಾರೆಂಬುದನ್ನು ಅವರ ಬಾಯಿಂದಲೇ ತರಿಸಬೇಕೆಂಬ ಉದ್ದೇಶದಿಂದ ನಾನು ಅವರಿಗೆ ಪುನಃ ಪುನಃ ಬರೆದು ಕೇಳುತ್ತಲಿದ್ದೆನು. ಅವರೂ ಪ್ರಯತ್ನ ಪುರಸ್ಸರವಾಗಿ ನನ್ನ ಪ್ರಶ್ನೆಗೆ ಉತ್ತರಕೊಡುತ್ತಿರಲಿಲ್ಲವೆಂಬ ಹಾಗೆ ನನಗೆ ತೋರಿತಾದರೂ,

ತಾನು ಅವುಗಳ ಕರ್ತೃವಲ್ಲವೆಂದು ಅವರು ಎಂದೂ ನನಗೆ ಬರೆಯಲಿಲ್ಲ. ಕರ್ತೃವು ತಾನಲ್ಲವಾದ ಪಕ್ಷದಲ್ಲಿ "ಕಾವ್ಯಮಂಜರಿ" ಯವರಿಗೆ ಬರೆದಂತೆ ನನಗೂ ಅವರು ಬರೆದು ತಿಳಿಸಬಹುದಾಗಿದ್ದಿತಲ್ಲವೇ? ಅವರ ಈ ಅಪಲಾಪದಿಂದ ನನ್ನ ಆತುರವೂ ತೀವ್ರವಾಗತೊಡಗಿತು. ಆದರೂ, ಮುಂದೆ ಎಂದಾದರೊಂದು ದಿನ ಪ್ರತ್ಯಕ್ಷವಾಗಿ ಕಂಡಾಗ ಕೇಳುವೆನೆಂದು ಸುಮ್ಮನಾಗಬೇಕಾಯಿತು. ಈ ಪ್ರತ್ಯಕ್ಷದರ್ಶನ ಸಂದರ್ಭವು ಮುಂದೆ ಒಂದೆರಡು ವರ್ಷಕಾಲ ಒದಗಿ ಬರಲಿಲ್ಲ.

ಬಳಿಕ ೧೯೦೦ ನೇ ಇಸವಿಯಲ್ಲಿ ನನಗೆ ಎಂ. ಎ. ಪರೀಕ್ಷೆಯಲ್ಲಿ ಜಯುವಾಯಿತೆಂದು ತಿಳಿದು ತಮ್ಮ ಸಂತೋಷವನ್ನು ಸೂಚಿಸಿ ಅವರು ನನಗೆ ಬರೆದ (೨೭-೨-೧೯೦೦) ಒಂದು ಕಾರ್ಡು ನನ್ನಲ್ಲಿದೆ. ಆಮೇಲೆ, ಕ್ರಿಶ್ಚಿಯನ್ ಕಾಲೇಜಿನಲ್ಲಿ ಮುಂದಿನ ಅಭಿವೃದ್ಧಿಗೆ ಅವಕಾಶವಿಲ್ಲದುದನ್ನು ಕಂಡು, ಕನ್ನಡ ಭಾಷಾಸೇವೆಯನ್ನು ಮಾಡುವವರಿಗೆ ಮೈಸೂರು ರಾಜ್ಯವೇ ಶರಣ್ಯವೆಂಬ ಭಾವನೆಯಿಂದ, ಸಾಧ್ಯವಾದರೆ ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖೆಯಲ್ಲಿ 'ನವುಕರಿ' ಯನ್ನು ಸಂಪಾದಿಸಬೇಕೆಂಬ ಪ್ರವೃತ್ತಿಯು ನನ್ನಲ್ಲಿ ಉಂಟಾಯಿತು. ಆದರೆ ಆಗಲೇ ಪ್ರಾಪ್ತವಾದ ಒಂದು ಸಾಂಸಾರಿಕ ತಾಪತ್ರಯದ ದೆಸೆಯಿಂದ ೧-೨ ತಿಂಗಳ ರಜ ಪಡೆದು ಮಂಗಳೂರು ಕಡೆಗೆ ಹೋಗಬೇಕಾಗಿ ಬಂದಿತು. ನನ್ನ ಉದ್ದೇಶವನ್ನು ಅರಿತ ಕ್ರಿಶ್ಚಿಯನ್ ಕಾಲೇಜು ಅಧಿಕಾರಿಗಳು ನನ್ನ ಅನಂತರ ನನ್ನ ಸ್ಥಾನಕ್ಕೆ ಅಧಿಕಾರಿಯನ್ನು ದೊರೆಯಿಸಿಕೊಡುವ ಭಾರವನ್ನು ನನ್ನ ಮೇಲೆಯೇ ಹೊರಿಸಿದ್ದರು. ಹೀಗಾದುದರಿಂದ, ಚೆನ್ನಾಗಿ ಆಲೋಚಿಸಿ, ನನ್ನ ತರುವಾಯ ನನ್ನ ಸ್ಥಳಕ್ಕೆ ಬರಲು ಕವಿಶ್ರೇಷ್ಠರೂ ಆಪ್ತ ಮಿತ್ರರೂ ಸ್ವಪ್ರಾಂತೀಯರೂ ಆದ ಶ್ರೀ|| ಲಕ್ಷ್ಮೀನಾರಣಪ್ಪನವರಿಗಿಂತ ಅಧಿಕ ಅರ್ಹರಾದವರು ಬೇರೊಬ್ಬರಿಲ್ಲವೆಂದೂ, ಅವರಿಗೆ ಮದ್ರಾಸಿನಂತಹ ದೊಡ್ಡ ನಗರದಲ್ಲಿ ವಾಸವಾಗಿರಲು ಅವಕಾಶ

ಮಾಡಿಕೊಟ್ಟದ್ದಾದರೆ ಅವರಿಂದ ಇತೋಪ್ಯತಿಶಯವಾದ ಭಾಷಾಸೇವೆಯಾಗಲು ಅನುಕೂಲಿಸುವುದೆಂದೂ ಮುಂದಟ್ಟಾಗಿ, ಒಡನೆಯೇ ಅವರಿಗೆ ಬರೆದು ಅಭಿಪ್ರಾಯವೇನೆಂದು ಕೇಳಿದೆನು. ಏಪ್ರಿಲ್ ೭ ನೇ ತಾರೀಖಿನಲ್ಲಿ ಅವರು ಪ್ರತ್ಯುತ್ತರವಾಗಿ ಬರೆದ ಕಾಗದದಲ್ಲಿ ಈ ಕೆಳಗಣ ಮಾತುಗಳಿವೆ: "ಸೇವಕನ ಮೇಲೆ ಅಭಿಮಾನವಿಟ್ಟು ಬರೆದುಕಳುಹಿಸಿದ ಪತ್ರವು ಮೊನ್ನೆ ಕೈಸೇರಿದ್ದರೂ ಶರೀರದಲ್ಲಿ ಕೊಂಚ ಜಾಡ್ಯವಿದ್ದುದರಿಂದ ಒಡನೆಯೆ ಪ್ರತ್ಯುತ್ತರ ಬರೆಯಲಾಗಲಿಲ್ಲ......ತಮ್ಮ ಕೆಲಸವನ್ನು ಕೆಲವು ಕಾಲದೊಳಗಾಗಿ ಬಿಡುವುದರಲ್ಲಿದ್ದೇನೆಂದು ಬರೆಯುತ್ತೀರಿ. ಮತ್ತಾವ ವಿಶೇಷವಾದ ಕಾರ್ಯಕ್ಕೆ ಮನಸ್ಸುಮಾಡಿರುವಿರಿ ? ಒಂದು ವೇಳೆ ನಾನೂ ಅದನ್ನು ತಿಳಿದು ಸಂತೋಷಪಡಬಹುದೇ ? ತಮ್ಮ ಸ್ಥಾನದಲ್ಲಿ ನನ್ನನ್ನು ಸೇರಿಸುವುದಕ್ಕೆ ತಮ್ಮಿಂದಾಗುವ ಸಾಹಾಯ್ಯವನ್ನು ಮಾಡುವಿರೆಂದು ಹೇಳುವುದನ್ನು ನೋಡಿದರೆ,......ನನಗೂ ೪೦ ರೂಪಾಯಿ ಸಿಕ್ಕಬಹುದೇ ? ಭಾಷಾಂತರವನ್ನು ಕಲಿಸಲಿಕ್ಕೆ ಇಂಗ್ಲಿಷ್ ಬಾರದ ಕಾರಣ ನಾನು ಅಯೋಗ್ಯನೆಂಬುದು ಗೊತ್ತಿರುವ ಸಂಗತಿಯಷ್ಟೆ ? ಆದುದರಿಂದ ಅಲ್ಲಿ ನಾನು ಬಂದರೆ ಆ ಕೆಲಸವನ್ನು ಸಂಪೂರ್ತಿಯಾಗಿ ಕೊನೆಹಾಯಿಸಲಿಕ್ಕೆ ನನ್ನಿಂದ ಸಾಗುವದೋ ? ಇಂಗ್ಲೀಷು ಬಾರದ ಮೊದಲಾದ ಪ್ರತಿಬಂಧನಗಳಿಂದ ಇದಕ್ಕೆ ವಿಡ್ಡೂರವೇನಾದರೂ ಬಾರದೇ ? ಒಂದು ವೇಳೆ ಅಲ್ಲಿಗೆ ಬಂದರೆ ಬಡಸ್ಥಿತಿಯಲ್ಲಿ ಬೀಡಾರಕ್ಕೆ ತಿಂಗಳಿಗೇನು ಬಾಡಿಗೆಯೋ ?...ಅಲ್ಲಿಯ ಕೆಲಸವೆಷ್ಟು ಹೊತ್ತು ? ಬೇರೆ ಕರ್ಣಾಟ ಪಂಡಿತರಾರಾದರೂ ಇರುವರೊ ? ಇದ್ದರೆ ಅವರ ವಿದ್ಯಮಾನ ಹೇಗೆ ? ಈಗ ಅವರಿಗೆ ಎಷ್ಟು ಸಂಬಳ ಸಲ್ಲುತ್ತೆ. ಇತ್ಯಾದಿಯನ್ನು ದಯವಿಟ್ಟು ಬರೆಯಿರಿ...ನನಗೆ ಮದ್ರಾಸಿಗೆ ಬರುವುದರಲ್ಲೇನೂ ಆಕ್ಷೇಪವಿಲ್ಲ. ಮೊದಲನೆಯದು ಸಂಬಳವು ೪೦ ಪೂರ್ಣ ಸಿಕ್ಕಬೇಕಾದುದು (ಏಕೆಂದರೆ ಇಲ್ಲಿ ಬರುವ ವರ್ಷಕ್ಕೆ ೨೫ ಕೊಡುತ್ತೇನೆಂದು ಹೇಳಿದ್ದಾರೆ) ಮುಖ್ಯತಃ ನಾನೊಂದೂ ಅರಿಯೆ. ತಾವು ಹೇಳಿ

ದಂತೆ ನಡಕೊಳ್ಳುತ್ತೇನೆ. ಬಾ ಎಂದರೆ ಬರುತ್ತೇನೆ. ಬೇಡವೆಂದರೆ ಬಿಡುತ್ತೇನೆ. ಇಷ್ಟೇ ನನ್ನ ಬುದ್ಧಿವಂತಿಕೆ...ತಾವು ಎಂದು ಮೊದಲ್ಗೊಂಡು ಆ ಕೆಲಸವನ್ನು ಬಿಡುವುದರಲ್ಲಿದ್ದೀರಿ? ಎಂಬುದನ್ನು ಮೊದಲು ಸೂಚಿಸಿರಿ. ನನ್ನ ಆಲೋಚನೆಗೆ ಈ ರಜಾಮುಗಿದ ಕೆಲವು ದಿನದ ಮೇಲೆ ಬಿಟ್ಟರೆ ನಮಗಿಬ್ಬರಿಗೂ ನಷ್ಟವಾಗದೆಂದು ತಿಳಿಯುತ್ತೇನೆ.'' ಈ ಕಾಗದದಲ್ಲಿ ಮಾಡಿರುವ 'ಶರೀರಜಾಡ್ಯದ ಸೂಚನೆಯನ್ನು ನೋಡಿದರೆ, ಅವರಲ್ಲಿ ಆಗಲೇ ಕ್ಷಯರೋಗದ ಪೂರ್ವಚಿಹ್ನಗಳು ಕಾಣಿಸಿಕೊಂಡಿದ್ದುವೆಂದು ಊಹಿಸಬಹುದಾಗಿದೆ.

ಮಂಗಳೂರಿಗೆ ಹೋದಾಗ, ಶ್ರೀಯುತರಾದ ಪಂಜೆ ಮಂಗೇಶರಾಯರು ಉಳ್ಳಾಲ ಮಂಗೇಶರಾಯರು ಮುಂತಾದ ಭಾಷಾಭಿಮಾನಿಗಳಾದ ಬಂಧುಮಿತ್ರರುಗಳ ಮೂಲಕ ಶ್ರೀಮಾನ್ ಬೋಳಾರ ವಿಟ್ಠಲರಾಯರ ಪರಿಚಯವುಂಟಾಗಿ ಭಾಷಾಸೇವೆಯನ್ನು ಮಾಡಬೇಕೆಂಬ ನವೋತ್ಸಾಹದಿಂದ ತುಂಬಿತುಳುಕುತ್ತಿದ್ದ ನಾವು ನಾಲುವರೂ ಸೇರಿ ಒಡನೆಯೇ ಹೆಂಗುಸರಿಗೂ ಮಕ್ಕಳಿಗೂ ತಕ್ಕುದಾಗುವಂತೆ 'ಸುವಾಸಿನಿ' ಯೆಂಬ ಮಾಸ ಪತ್ರಿಕೆಯನ್ನು ಹೊರಡಿಸಬೇಕೆಂದು ನಿಶ್ಚಯಿಸಿದೆವು. ಮ|| ವಿಟ್ಠಲರಾಯರು ಬೇಕಾದಂತೆ ಧನಬಲವನ್ನು ಒದಗಿಸಿಕೊಟ್ಟು ಪ್ರಕಾಶಕರಾಗಲು ಒಪ್ಪಿದರು. ನಾನು ವ್ಯಕ್ತ ಸಂಪಾದಕನಾಗಲು ಸಮ್ಮತಿಸಿದೆನು. ಶ್ರೀ|| ಮಂಗೇಶರಾಯರುಗಳಿಬ್ಬರೂ ಸ್ಥಳೀಯ ಸಂಪಾದಕರೆಂಬಂತೆ ಯಾವತ್ತು ಕೆಲಸಗಳನ್ನು ನೋಡಿಕೊಳ್ಳಲು ಕೈಕೊಂಡರು. ಇಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಸುಪ್ರಸಿದ್ಧ ಲೇಖಕರಾದ ಶ್ರೀ|| ಲಕ್ಷ್ಮೀನಾರಣಪ್ಪನವರನ್ನು ಬಿಡುವುದುಂಟೆ? ಮ|| ಪಂಜೆ ಮಂಗೇಶರಾಯರಿಗೂ ಈ ಕವಿಯ ಪರಿಚಯವು ಪೂರ್ವದಿಂದಲೂ ಇದ್ದೇ ಇದ್ದಿತು. ಮತ್ತು ನಾನೂ ಅವರೂ ಕೂಡ ಶ್ರೀ|| ಲಕ್ಷ್ಮೀನಾರಣಪ್ಪನವರಿಗೆ ಲೇಖನಗಳನ್ನು ಕಳುಹಿಸುವಂತೆ ಬರೆದೆವು. ಪ್ರಾಯಶಃ ಮಂಗಳೂರು ಪ್ರಾಂತದ ಲೇಖ

ಕರು ತಮ್ಮ ಲೇಖನಗಳನ್ನು ಮೊದಲು ಶ್ರೀ|| ಮಂಗೇಶರಾಯರುಗಳಿಗೆ ಕಳುಹಿಸಿ, ಅವರ ಅಭಿಪ್ರಾಯದೊಡನೆ ಅವು ನನಗೆ ಮದ್ರಾಸಿಗೆ ಬರುತ್ತಿದ್ದುವು. ಶ್ರೀ|| ಲಕ್ಷ್ಮೀನಾರಣಪ್ಪನವರ ಲೇಖನಗಳು ಕೂಡ ನೇರಾಗಿ ನನ್ನ ಬಳಿ ಬರುತ್ತಿದ್ದ ಹಾಗೆ ನೆನಪು ತೋರುವುದಿಲ್ಲ.

ಈ ಸಲವೇ ಕಾರಣಾಂತರಗಳಿಂದ ನಾನು ಉಡುಪಿಯವರೆಗೂ ಹೋಗಿ ಬರಬೇಕಾದ ಪ್ರಮೇಯವುಂಟಾಯಿತು. ನನ್ನ ಉದ್ದೇಶವು ಹೇಗಾದರೂ ಆಗಲಿ, ಇದರ ದೆಸೆಯಿಂದ ಇದುವರೆಗೆ ಪತ್ರಮುಖೇನ ಮಾತ್ರ ತಿಳಿದಿದ್ದ ಶ್ರೀ|| ಲಕ್ಷ್ಮೀನಾರಣಪ್ಪನವರನ್ನು ಕಣ್ಣಾರ ಕಾಣುವ ಭಾಗ್ಯವು ನನಗೆ ಪ್ರಾಪ್ತವಾಯಿತು. ಮ|| ಲಕ್ಷ್ಮೀನಾರಣಪ್ಪನವರು ನಾನು ಇಳಿದಿದ್ದ ಮನೆಗೆ ಬಂದು ನನ್ನನ್ನು ಕಂಡು ತುಂಬ ಉತ್ಸಾಹವನ್ನೂ ಉಲ್ಲಾಸವನ್ನೂ ವ್ಯಕ್ತಗೊಳಿಸಿ, ಬಹಳ ಹೊತ್ತಿನವರೆಗೆ ಮಾತನಾಡಿಸಿ ಹೊರಟುಹೋದರು. ನಾನು ಉಡುಪಿಯಲ್ಲಿದ್ದುದು, ಬರೀ ಎರಡು ಮೂರು ದಿನ ಮಾತ್ರವಾದುದರಿಂದ ಪುನಃ ಒಬ್ಬರನ್ನೊಬ್ಬರು ನೋಡುವುದಕ್ಕಾಗಲಿಲ್ಲ. ಆದರೆ ಇದೇ ನಮ್ಮ ಮೊದಲನೆಯ ಮತ್ತು ಕೊನೆಯ ಸಂದರ್ಶನವೆಂದು ಆಗ ನಾನಾಗಲೀ ಅವರಾಗಲೀ ಕನಸಿನಲ್ಲಿಯೂ ನೆನಸಿರಲಿಲ್ಲ. ಎಷ್ಟೆಷ್ಟೋ ಸಂಗತಿಗಳನ್ನು ಮಾತನಾಡಿದೆವು. ಏನೇನೋ ಆಲೋಚನೆಗಳನ್ನು ಮಾಡಿದೆವು. ಯಾವ ಯಾವುವೋ ಏರ್ಪಾಡುಗಳನ್ನು ಮಾಡಬೇಕೆಂದು ಗೊತ್ತುಪಡಿಸಿದೆವು. ಆದರೆ ಅದೆಲ್ಲ ಬರೀ ಆಕಾಶನಗರ ನಿರ್ಮಾಣದಂತಾಯಿತು. ಎಂಟು ತಿಂಗಳೊಳಗೇ ಈ ಮಹಾಕವಿಯು ನಾಮಶೇಷನಾದನು !

ನನಗೆ ಶ್ರೀ|| ಲಕ್ಷ್ಮೀನಾರಣಪ್ಪನವರ ಸಂದರ್ಶನವಾದ ದಿನ ೨೦ ನೇ ಏಪ್ರಿಲ್ ಶುಕ್ರವಾರವೆಂದು ನನ್ನ ದಿನಚರಿ (ಡೈರಿ) ಯಿಂದ ತೋರಿಬರುತ್ತಿದೆ. ಆಗ ಇವರು ಒಂದಿಷ್ಟು ಅಸ್ವಸ್ಥರಾಗಿದ್ದಂತೆ ತೋರಿದರೆಂದು ನನ್ನ ಜ್ಞಾಪಕವು. 'ಕುಸ್ತಿ ಮಾಸ್ತರ' ನೆನಿಸಿಕೊಳ್ಳುವುದಕ್ಕೆ

ತಕ್ಕವನಾದ ಸುದೃಢಕಾಯನಾದ ಪುರುಷನನ್ನು ಕಂಡ ಹಾಗೆ ನೆನಪು ತೋರುವುದಿಲ್ಲ. ಆದುದರಿಂದ ಕರ್ಣಾಟಕಸಂಘದಲ್ಲಿ ಅನಾವರಣಗೊಳಿಸಿದ ಸುಪುಷ್ಟ ಗಾತ್ರಯುಕ್ತವಾದ ಚಿತ್ರವು ಬಹಳ ಹಿಂದೆ ತೆಗೆದುದಾಗಿರಬೇಕೆಂದು ಭಾವಿಸುವೆನು.

ಒಬ್ಬರನ್ನೊಬ್ಬರು ಕಂಡಾಗ ನಾವು ಮಾತನಾಡಿದ ವಿಷಯಗಳು ಮುಖ್ಯವಾಗಿ ಮೂರಾಗಿದ್ದುವು. ಮೊದಲನೆಯದು, ಕ್ರಿಶ್ಚಿಯನ್ ಕಾಲೇಜಿನಲ್ಲಿ ನನ್ನ ಉದ್ಯೋಗಸ್ಥಾನಕ್ಕೆ ಅವರು ಬರುವುದು. ಎರಡನೆಯದು, ' ಸುವಾಸಿನಿ ' ಯನ್ನು ನಡೆಸುವುದು ಮತ್ತು ಅದಕ್ಕೆ ಲೇಖನಗಳನ್ನು ಕಳುಹಿಸುವುದು. ಮೂರನೆಯದು ತಮ್ಮ ಹೆಸರನ್ನಡಗಿಸಿ ಬೇರೊಂದು ಹೆಸರಿಂದ ಗ್ರಂಥಗಳನ್ನು ಪ್ರಚುರಗೊಳಿಸಿದುದು. ಇವುಗಳೊಳಗೆ ಮೊದಲನೆಯ ಮತ್ತು ಎರಡನೆಯ ಸಂಗತಿಗಳನ್ನು ಕುರಿತು ಹಿಂದಿನಿಂದ ಹೇಳುವೆನು. ಮೂರನೆಯ ವಿಚಾರವಾಗಿ ನನಗೂ ಅವರಿಗೂ ಈ ರೀತಿಯಾಗಿ * ಸಂಭಾಷಣೆ ನಡೆಯಿತು.

ನಾನು—ಅದ್ಭುತರಾಮಾಯಣ, ಶ್ರೀರಾಮಪಟ್ಟಾಭಿಷೇಕಗಳನ್ನು ಬರೆದ ಕವಿ ನೀವೇಯೆಂದು ಈ ಜಿಲ್ಲೆಯ ಜನರು ಆಡಿಕೊಳ್ಳುತ್ತಿರುವರು. ಅವನ್ನು ಪ್ರಚುರಗೊಳಿಸಿದ ' ಕಾವ್ಯಮಂಜರಿ ' ಯ ಚಾಲಕರು, ಅವು ನಿಮಗೆ ದೊರೆತ ಪ್ರಾಚೀನ ಹಸ್ತಪ್ರತಿಗಳೆಂದು ಹೇಳಿರುವರು. ಇದರ ನಿಜಾಂಶ ಹೇಗೆ ?

ಕವಿ—ಬರೆದವನು ನಾನೆಂಬುದು ನಿಜ.

ನಾನು—ಹಾಗಾದರೆ, ಖಾಸಗಿಯಾಗಿ ನಾನು ಕೇಳಿದರೂ ನೀವು ಉದ್ದೇಶಪೂರ್ವಕವಾಗಿ ಆ ವಿಷಯದಲ್ಲಿ ಪ್ರತ್ಯುತ್ತರ ಕೊಡದಿರಲು ಕಾರಣವೇನು ?

---

* ನಮ್ಮ ಸಂಭಾಷಣೆಯು ಇದೇ ರೀತಿಯಲ್ಲಿ ಅಥವಾ ಕ್ರಮದಲ್ಲಿ, ಇವೇ ಶಬ್ದಗಳನ್ನುಪಯೋಗಿಸಿ ನಡೆದಿದ್ದಿತೆಂದು ತಿಳಿಯತಕ್ಕುದಲ್ಲ. ಸಂಭಾಷಣೆಯ ತಾತ್ಪರ್ಯವನ್ನು ಮಾತ್ರ ಸಂಭಾಷಣರೂಪವಾಗಿ ಇಲ್ಲಿ ಕೊಟ್ಟಿರುವೆನು.

ಕವಿ—ಒಂದು ಬಾರಿಗೆ, ಯಾವ ಕಾರಣದಿಂದಲೇ ಆಗಲಿ, ನನ್ನವಲ್ಲವೆಂದೂ ಪ್ರಾಚೀನ ಗ್ರಂಥಗಳೆಂದೂ ನಂಬಿಸಿ, ಅವನ್ನು ಪ್ರಚುರಗೊಳಿಸುವಂತೆ ಮಾಡಿದ ತರುವಾಯ, ಒಡನೆಯೇ ಅವು ನನ್ನವೆಂದು ಖಾಸಗಿ ಕಾಗದದಲ್ಲಿಯಾದರೂ ಹೇಗೆ ಬರೆಯಲಿ? ನನ್ನ ಮರ್ಯಾದೆ ಏನು ಉಳಿದಂತಾಯಿತು? ನಾನಲ್ಲವಾದರೆ ನಮ್ಮ ಜಿಲ್ಲೆಯವರಾದರೂ ಬರೆದರೆಂಬ ಕೀರ್ತಿಯು ನಮಗೆ ಬಂತಲ್ಲವೇ?

ನಾನು—ಅದು ಅಹುದು. ಆದರೆ "ಕಾವ್ಯಮಂಜರಿ" ಯವರಿಗೆ ಇವನ್ನು ಪ್ರಚಾರಗೊಳಿಸಿದುದರ ದೆಸೆಯಿಂದ ತುಂಬಾ ಲಾಭ ಬಂದಂತಿದೆ. ಆ ಲಾಭದಲ್ಲಿ ನಿಮಗೂ ಏನಾದರೂ ಅಂಶವನ್ನು ಕೊಟ್ಟರೇ?

ಕವಿ—ಹಸ್ತಪ್ರತಿಗಳನ್ನು ಕಳುಹಿಸಿದುದಕ್ಕಾಗಿ...* ಪ್ರತಿಗಳನ್ನು ನನಗೆ ಉಚಿತವಾಗಿ ಕಳುಹಿಸಿಕೊಟ್ಟರು.

ನಾನು—ಕವಿಯು ನೀವಲ್ಲವಾದ ಪಕ್ಷದಲ್ಲಿ ಅಷ್ಟು ಪ್ರತಿಗಳನ್ನು ಕೊಟ್ಟರೆ ಆ ಪ್ರತಿಫಲವು ಕಡಮೆಯೆನ್ನುವಂತಿಲ್ಲ. ಆದರೆ ಕವಿಯು ನೀವಾಗಿರುವುದರಿಂದ ಒಂದು ವೇಳೆ ಪ್ರಾಚೀನ ಗ್ರಂಥ ಪ್ರಚಾರಕರೆಂಬ ನೆಲೆಯಲ್ಲಿ "ಕಾಪಿ ರೈಟು" ಕೂಡ ತಮ್ಮದೆಂದು ಅವರು ಸಾಧಿಸಿದರೆ, ಆ ಪ್ರತಿಫಲವು ಎಷ್ಟು ಮಾತ್ರಕ್ಕೂ ಸಮರ್ಪಕವೆಂದು ಹೇಳಲಾರೆ. ಅದು ಹೋಗಲಿ; ಹೀಗೆ ಒಬ್ಬರನ್ನು ಕೇಳದೆ ದುಡುಕಿ ಮುಂದರಿಸಿದುದರ ಕಾರಣವೇನು?

ಕವಿ—ನಮ್ಮ ಪ್ರಾಂತದಲ್ಲಿ ಕನ್ನಡವನ್ನು ಕೇಳುವವರು ಯಾರಿದ್ದಾರೆ? ಈ ಗ್ರಂಥಗಳು ಪ್ರಕಾಶಗೊಳ್ಳಲು ಬೇರೆ ಯಾವ ಉಪಾಯ ಎದ್ದಿತು?

---

* ಖಂಡಿತವಾಗಿ ಇಂತಿಷ್ಟು ಪ್ರತಿಗಳೆಂದು ಈಗ ಚೆನ್ನಾಗಿ ನೆನಪಿಲ್ಲ. ಬಹುಶಃ ಒಂದುನೂರು ಪ್ರತಿಗಳೆಂದು ಹೇಳಿದ ಹಾಗೆ ಜ್ಞಾಪಕ ತೋರುತ್ತಿದೆ.

ನಾನು—ಸ್ವಲ್ಪಮಟ್ಟಿಗೆ ನೀವು ಹೇಳುವುದು ನಿಜವೇ! ಲಾಭದಲ್ಲಿ ಅಧಿಕಾಂಶ ಬಾರದಿದ್ದರೂ ಹೋಗಲಿ. ಅವುಗಳ ಕರ್ತೃವು ನೀವೆಂದಾದರೂ ಲೋಕದಲ್ಲಿ ಪ್ರಸಿದ್ಧರಾದರೆ ನನಗೆಷ್ಟೋ ಸಂತೋಷವಾಗುತ್ತಿತ್ತು. ನೀವು ಒಂದೂ ಮಾತನಾಡಬೇಡಿ. "ಸುವಾಸಿನಿ" ಯಲ್ಲಿ ಈ ವಿಷಯವನ್ನು ನಾನು ಪ್ರಕಟಗೊಳಿಸಿಬಿಡಲೇ?

ಕವಿ—ದಯವಿಟ್ಟು ಹಾಗೆ ಮಾಡಬೇಡಿರಿ. ಏನೋ ಆದುದು ಆಗಿಹೋಯಿತು. ಅದಕ್ಕಾಗಿ ನಾನು ಚಿಂತಿಸುವುದಿಲ್ಲ. ಮುಂದೆ ಒಂದಲ್ಲ ಒಂದುದಿನ ಇದರ ನಿಜಾಂಶವು ಪ್ರಕಟವಾಗಿಯೇ ಆಗುವುದು. ಒಂದುವೇಳೆ ಆಗದಿದ್ದರೂ, ಅದೇನು ದೊಡ್ಡಮಾತು? ಅಂಥ ನೂರಾರು ಗ್ರಂಥಗಳನ್ನು ಬರೆಯಬಲ್ಲೆನು.

ನಾನು—ಅದು ನಿಜ. ಆದರೆ ಈ ರೀತಿ ನಿಮ್ಮ ಹೆಸರಡಗಿಸುವಲ್ಲಿ ನಿಮ್ಮ ಉದ್ದೇಶವೇನಿದ್ದಿತು?

ಕವಿ—ಬೇರೆ ಏನೂ ಇಲ್ಲ. ಹೇಗಾದರೂ ಗ್ರಂಥವು ಮೂಲೆಗೆ ಬೀಳದೆ ಪ್ರಚಾರಕ್ಕೆ ಬರಲೆಂಬುದೇ ಮುಖ್ಯ ಉದ್ದೇಶ. ನಾನು ಬರೆದ ಪುಸ್ತಕನೆಂದು ನನ್ನ ಹೆಸರನ್ನು ಹೇಳಿದ್ದರೆ ನನ್ನ ಪುಸ್ತಕಗಳು ಈ ಹೊತ್ತಿಗೂ ಹೊರಕ್ಕೆ ಬರುತ್ತಿರಲಿಲ್ಲ. ಮೈಸೂರು ವಿದ್ವಾಂಸರಿಗೆ ನಮ್ಮ ಜಿಲ್ಲೆಯ ಲೇಖಕರ ವಿಷಯದಲ್ಲಿ ಆದರವಿಲ್ಲ. ಈ ಗ್ರಂಥಗಳಿಗೆ ಮೈಸೂರಿನವರ ಮನ್ನಣೆ ದೊರೆತರೆ ಮುಂದೆ ನನ್ನ ಹೆಸರು ಹಾಕಿ ಇದೇ ರೀತಿ ಬರೆಯಬಹುದೆಂಬ ಆಶೆಯಿಂದ ಹೀಗೆ ಮಾಡಿದೆನು.

ಶ್ರೀ|| ಲಕ್ಷ್ಮೀನಾರಾಯಣ ಕವಿಗೂ ನನಗೂ ನಡೆದ ಸಂಭಾಷಣೆಯಲ್ಲಿ ಅವರ ಬಾಯಿಂದ ಹೊರಟ ಮಾತುಗಳ ರೀತಿಯನ್ನೂ, ದರಿದ್ರ ಸ್ಥಿತಿಯಲ್ಲಿಯೂ ತೋರಿಸಿದ ನಿರಪೇಕ್ಷವಾದ ಭಾಷಾಭಿಮಾನವನ್ನೂ, ಮಾತಿಗೆ ತಪ್ಪಬಾರದೆಂಬ ದೃಢನಿಶ್ಚಯವನ್ನೂ, ಮುಂದೆ ನೂರಾರು ಗ್ರಂಥಗಳನ್ನು

ಬರೆದು ತನಗೂ ತನ್ನ ಜಿಲ್ಲೆಗೂ ಕೀರ್ತಿ ತರುವೆನೆಂದು ಇಟ್ಟುಕೊಂಡಿದ್ದ ಅವರ ಆಶೋತ್ತರವನ್ನು ನೋಡಿ ನಾನು ಬೆರಗಾಗಿ ಹೋದೆನು. ಈಗಲೂ ಆ ಸಂಭಾಷಣೆಯೂ ನಾವಿಬ್ಬರೂ ನಿಂತು ಮಾತನಾಡುತ್ತಲಿದ್ದ ಸ್ಥಳವೂ ಕಣ್ಣಮುಂದೆ ನಿಂತಿದ್ದಂತಿದೆ. ಅಕಟಾ ! ಮುಂದಣ ಆರೆಂಟು ತಿಂಗಳೊಳಗಾಗಿಯೇ ಈ ಕವಿರತ್ನವನ್ನು ನಿರ್ಘೃಣನಾದ ಕಾಲನು ಒಯ್ಯುವನೆಂದು ಆಗ ಯಾರು ತಾನೇ ತಿಳಿದಿದ್ದರು ? ಈಹೊತ್ತಿಗೂ ಇಂತಹ ಎಷ್ಟೋ ಕನ್ನಡ ಕವಿಗಳು ದಾರಿದ್ರ್ಯಕ್ಕೀಡಾಗಿ ತಮ್ಮ ಉದ್ದೇಶಗಳನ್ನು ನೆರವೇರಿಸಲಾರದೆ ಅಕಾಲಮೃತ್ಯುವಿಗೆ ತುತ್ತಾಗುತ್ತಿರುವುದನ್ನೂ, ಇದರ ದೆಸೆಯಿಂದ ಕನ್ನಡ ದೇಶವೂ ಭಾಷೆಯೂ ಅಭಿವೃದ್ಧಿಗೆ ಬರಲವಕಾಶವಿಲ್ಲದೆ ಹಿಂದೆ ಬಿದ್ದಿರುವುದನ್ನೂ ನೋಡಿದ ದೇಶಾಭಿಮಾನಿಯಾದ ಯಾವ ಕನ್ನಡಿಗನ ಕಣ್ಣುಗಳು ತಾನೇ ನಿಮಿಷಕಾಲವಾದರೂ ನೀರು ತುಂಬಿ ಮಸುಳಿಸದೆ ಇರಲಾಪವು ?

ಆ ಸಂಭಾಷಣದ ಕಾಲದಲ್ಲಿಯೇ, "ಸುವಾಸಿನಿ" ಯ ವಿಷಯದಲ್ಲಿ ಶ್ರೀ|| ಲಕ್ಷ್ಮೀನಾರಣಪ್ಪನವರು ತುಂಬ ಸಂತೋಷವನ್ನು ವ್ಯಕ್ತಗೊಳಿಸಿ ತಪ್ಪದೆ ಲೇಖನಗಳನ್ನು ಕಳುಹಿಸುವುದಾಗಿ ಪ್ರೋತ್ಸಾಹಕರವಾದ ವಾಗ್ದಾನಮಾಡಿದರು. ಅವರು ಮೊತ್ತಮೊದಲು 'ಗೋದಾವರಿ' ಎಂಬ ಕಲ್ಪನಾ ಪ್ರಬಂಧದ ಪ್ರಥಮಾಧ್ಯಾಯವನ್ನು ಕಳುಹಿಸಿಕೊಟ್ಟರು. ಇದು 'ನಾರಾಯಣರಾವ್ ಆಣಿ ಗೋದಾವರಿ' ಎಂಬ ಮರಾಟೀ ನಾವೆಲಿನ ಭಾಷಾಂತರವೋ ರೂಪಾಂತರವೋ ಆಗಿದ್ದಿತು. ಅದಕ್ಕೆ ಮೊದಲೇ ನಾವು 'ರಮಾಮಾಧವ' ಮುಂತಾದ ಒಂದೆರಡು ಪುಸ್ತಕಗಳನ್ನು ಅನುಕ್ರಮವಾಗಿ ಹಾಕಲು ಕೈಕೊಂಡಿದ್ದುದರಿಂದ ಇದನ್ನು ಒಡನೆಯೇ ಪ್ರಾರಂಭಿಸಿದರೆ ವಾಚಕರಿಗೆ ಬೇಸರಿಕೆಯಾಗಬಹುದೆಂಬ ಭಯದಿಂದ, ಪುಸ್ತಕವನ್ನು ಪೂರ್ತಿಯಾಗಿ ಕಳುಹಿಸಿದ ಪಕ್ಷದಲ್ಲಿ, 'ರಮಾಮಾಧವ' ವು ಮುಗಿದೊಡನೆ ಅದನ್ನು ಪ್ರಚುರಗೊಳಿಸುವೆವೆಂದು ತಿಳಿಸಿ ಅದನ್ನು ಅವರಿಗೆ

೨೯೬೦

ತಿರಿಗಿ ಕಳುಹಿಸಿ ಕೊಟ್ಟೆವು. ಈ ಪುಸ್ತಕವು ಆ ಬಳಿಕ ಪೂರ್ತಿಯಾಗಿ ನಮ್ಮ ಕೈಗೆ ಬರಲೇ ಇಲ್ಲ ; 'ಜೋಜೋ' ಎಂಬದರ ವ್ಯುತ್ಪತ್ತಿಗೆ ಸಂಬಂಧಪಟ್ಟ ಅವರ ಒಂದೇ ಒಂದು ಉತ್ಕೃಷ್ಟವಾದ ಲೇಖನವು ಮಾತ್ರ 'ಚಕ್ರಧಾರಿ' ಎಂಬ ಹೆಸರಿಂದ 'ಸುವಾಸಿನಿ' ಯ ಮೊದಲನೆಯ ಸಂಪುಟದ ಆರನೆಯ (ಡಿಸೆಂಬರು ೧೯೦೦) ಸಂಚಿಕೆಯ ೯೩-೯೪ನೇ ಪುಟಗಳಲ್ಲಿ ಪ್ರಚುರ ವಾಯಿತು. ಈ ಒಂದು ಲೇಖನದಿಂದಲೇ ಅವರ ಪ್ರತಿಭೆಯು ಎಷ್ಟು ಉಚ್ಚ ಪ್ರತಿಯದಾಗಿದ್ದಿತೆಂಬದನ್ನೂ, ಅವರು ಇನ್ನು ಕೆಲವುಕಾಲ ಬದುಕಿದ್ದ ಪಕ್ಷದಲ್ಲಿ ಅವರ ಕಯ್ಯಿಂದ ಎಂತಹ ಅಮೋಘವಾದ ಭಾಷಾಸೇವೆ ನಡೆಯುವಂತಿದ್ದಿತೆಂಬುದನ್ನೂ ವಾಚಕರು ಊಹಿಸಬಹುದಾಗಿದೆ.

ಈ ಕಾಲದಲ್ಲಿ ಅವರು ದೃಢಕಾಯರಾಗಿ ಕಾಣಿಸದಿದ್ದರೂ ಕೇವಲ ಅಶಕ್ತರಾಗಿಯೂ ಕಾಣುತ್ತಲಿರಲಿಲ್ಲ. ಒಂದು ಬಾರಿ ಬರುತ್ತಿದ್ದ ಜ್ವರವು ನಿಂತು ಪುನಃ ಆರೋಗ್ಯವನ್ನು ಹೊಂದಿದ್ದರು. ಹೀಗಾಗಿ ಉದ್ದೇಶವು ನೆರವೇರುವ ಪಕ್ಷದಲ್ಲಿ ಜುಲೈಯಲ್ಲಿ ಅಥವಾ ಆ ತರುವಾಯ ಮದ್ರಾಸಿಗೆ ಹೊರಡಲು ಒಪ್ಪಿಕೊಂಡರು. ಬಳಿಕ ಜುಲೈ ತಿಂಗಳ ಮೊದಲನೆಯ ವಾರ ದಲ್ಲಿ ನಾನು ಮದ್ರಾಸಿಗೆ ಹೋಗಿ ನನ್ನ ಉದ್ಯೋಗಕ್ಕೆ ಸೇರಿದೆನು. ಸೆಪ್ಟೆಂಬರು ೮ ನೇ ತಾರೀಖಿನ ಕಾರ್ಡಿನಲ್ಲಿ ಅವರು ಹೀಗೆ ಬರೆದಿರುವರು : '...ಪುನಃ ಜ್ವರಕ್ಕಾರಂಭವಾಗಿದೆ. ಬರುವ ತಿಂಗಳ 'ಸುವಾಸಿನಿ' ಗೆ ಇನ್ನೊಂದು ಲೇಖವನ್ನು ಬರೆಯಬೇಕೆಂದಿದ್ದೆ, ಆದರೆ ಅಸ್ವಸ್ಥದ ದೆಸೆಯಿಂದ ಸದ್ಯಕ್ಕೆ ನಿಲ್ಲಿಸಿರುತ್ತೇನೆ. ಒಂದುವೇಳೆ ನನ್ನನ್ನು ನಿಮ್ಮ ಕಾಲೇಜಿನಲ್ಲಿ ನೇಮಿಸುವ ಪಕ್ಷದಲ್ಲಿ ಬರುವ ಜನವರಿ ಮೊದಲ್ಗೊಂಡು ನೇಮಿಸುವ ಏರ್ಪಾಡು ನೀವು ಮಾಡತಕ್ಕದ್ದು. ನಾರಾಯಣರಾಯರಿಗೆ ಬೇರೆ ಒಂದು ಪತ್ರ ಬರಕೊಂಡಿದ್ದೇನೆ.'' ಆ ಬಳಿಕ ಎರಡು ದಿನದಲ್ಲಿಯೇ ಎಂದರೆ ಸೆಪ್ಟೆಂಬರು ೧೦ ರಲ್ಲಿ ಬರೆದ ಒಂದು ಕಾರ್ಡಿನಲ್ಲಿ 'ಮೊನ್ನಿನ ಪತ್ರದಲ್ಲಿ ಬರೆದಂತೆ ಜ್ವರವು ಬರುತ್ತಿದೆ. ಬಹಳ ನಿತ್ರಾಣ. ಈಗ ರಜಾ ತೆಗೆದುಕೊಂಡು

ಮನೆಯಲ್ಲೇ ಇದ್ದೇನೆ. ಈಗ ಮದ್ರಾಸಿಗೆ ಬರಲಿಕ್ಕೆ ಎಷ್ಟುಮಾತ್ರಕ್ಕೂ ಅನುಕೂಲವಿಲ್ಲ. ಒಂದುವೇಳೆ ಜನವರಿ ಆರಂಭಕ್ಕಾಗಬಹುದು.'' ಎಂದು ಹೇಳಿ ಕೊನೆಗೆ '' ನನಗಿಲ್ಲಿ 23 ರೂಪಾಯಿ ಸಿಕ್ಕುತ್ತೆ. ಬರುವ ವರ್ಷ 25ಕ್ಕೆ ಶಿಪಾರಸು ಮಾಡಿದ್ದಾರೆ. ಈ 25 ರೂಪಾಯಿ ಅಲ್ಲಿಯ 40 ಕ್ಕಿಂತಲೂ ಅಧಿಕವಾದದ್ದೆಂದು ನಂಬುತ್ತೇನೆ···ನಾನು ಮದ್ರಾಸಿಗೆ ಹೋಗುವ ಆಲೋಚನೆಯನ್ನು ಇಂದಿನಿಂದ ಬಿಟ್ಟೆ. ಒಟ್ಟಾರೆ ನನ್ನನ್ನು ತಾವು ಮರೆಯದೆ ಇದ್ದರೆ ಸೈ. ಇದುವೆ ಪರಮಾನಂದವು '' ಎಂದು ಮುಗಿಸಿರುವರು. ಇದರಿಂದ ಅವರ ಮನಸ್ಸಿನ ಸ್ಥಿರತೆಯು ಆಗ ಕೆಟ್ಟಿದ್ದಿತೆಂದೂ ಮನಸ್ಸು ಆಶೆಭಯಗಳಿಂದ ತಲ್ಲಣಿಸುತ್ತಿದ್ದಿತೆಂದೂ ಊಹಿಸಬಹುದು.

ಪುನಃ ಅಕ್ಟೋಬರು ೨ ನೇ ತಾರೀಖಿನ ಕಾರ್ಡಿನಲ್ಲಿ ಹೀಗೆ ಬರೆದಿರುವರು. '···ಅಸ್ವಸ್ಥ ಏನೇನೂ ಗುಣಾಂಶವಿಲ್ಲ. ಪುನಃ 1 ತಿಂಗಳ ರಜೆಗೆ ಬರಕೊಂಡಿದ್ದೇನೆ. ಜ್ವರ ಬಿಡುವದೇ ಇಲ್ಲ. ಬಹಳ ನಿತ್ರಾಣ. ಹ್ಯಾಗೂ ಇರಲಿ. ಜೀವಯಿರುವವರೆಗೆ ನನ್ನನ್ನು ಮರೆಯದೆ ಈ ಹಿಂದೆ ಅಭಿಮಾನವಿಟ್ಟು ನಡೆಸಿದಂತೆಯೇ ಮುಂದೂ ನಾನು ಬದುಕಿಕೊಂಡಿರುವ ವರೆಗೆ ವಿಚಾರಿಸುತ್ತಿರಬೇಕಾಗಿ ಪ್ರಾರ್ಥನೆ. ನೋಡಿದವರು ಕ್ಷಯವೆಂದು ಹೇಳುತ್ತಾರೆ.'' ಈ ರೀತಿ ನನಗೂ ಅವರಿಗೂ ಅಪರೂಪವಾಗಿ ನಡುನಡುವೆ ಕಾಗದಗಳು ನಡೆಯುತ್ತಿದ್ದುವು. ಆದರೆ ಅವರ ಅಸ್ವಸ್ಥಕಾಲದಲ್ಲಿ ತೊಂದರೆಯಾಗಬಾರದೆಂಬುದರಿಂದಲೂ ನಾನೂ ಮೈಸೂರಿಗೆ ಹೊರಟು ಹೋಗುವ ಸಿದ್ಧತೆ ಮಾಡಿಕೊಳ್ಳುತ್ತಲಿದ್ದುದರಿಂದಲೂ ಬರೆಯುವುದನ್ನು ಬಹಳ ಕಡಮೆಮಾಡಿದ್ದೆನು. ಶ್ರೀ|| ಲಕ್ಷ್ಮೀನಾರಣಪ್ಪನವರು ಬರುವುದು ಬಾರದಿರುವುದು ಖಂಡಿತವಾಗುವವರೆಗೆ ನನ್ನ ಕೆಲಸಕ್ಕೆ ಹೆರವರಿಂದ ಅರ್ಜಿಗಳನ್ನು ತರಿಸಿಕೊಂಡಿರಲಿಲ್ಲ. ಇದು ನಿಶ್ಚಯವಾದ ಬಳಿಕ ಒಡನೆಯೇ ಮೈಸೂರು ಪ್ರಾಂತದಿಂದ ತಕ್ಕ ಯೋಗ್ಯತೆಯುಳ್ಳ ಒಬ್ಬರನ್ನು ಆ ಕೆಲಸಕ್ಕೆ ಗೊತ್ತುಪಡಿಸಿಕೊಟ್ಟು ಮೈಸೂರಿಗೆ ಹೊರಟು ಡಿಸೆಂಬರು ೧೫ನೇ

ತಾರೀಖಿನ ದಿನ ಈಗ ಟ್ರೇನಿಂಗ್ ಕಾಲೇಜೆಂದು ಕರೆಯಲ್ಪಡುವ ನಾರ್ಮಲ್ ಸ್ಕೂಲಿನಲ್ಲಿ ಕನ್ನಡ ಲೆಕ್ಚರರು ಉದ್ಯೋಗಕ್ಕೆ ಸೇರಿದೆನು.

ಮೈಸೂರಿಗೆ ಹೋದ ಕಿಂಚಿತ್ಕಾಲದೊಳಗಾಗಿ ಆ ಪಟ್ಟಣದ ಪ್ರಮುಖರಾದ ನಾಗರಿಕರನೇಕರ, ಹಾಗೂ, ಕವಿಗಳಾಗಿಯೂ ಲೇಖಕರಾಗಿಯೂ ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಸುಪ್ರಸಿದ್ಧರಾದ ಎಷ್ಟೋ ಮಂದಿ ವಿದ್ವಾಂಸರುಗಳ ಸ್ನೇಹವಿಶ್ವಾಸಗಳು ನನಗೆ ಪ್ರಾಪ್ತವಾದುವು. ಇವರೊಳಗೆ (ತದನಂತರ 'ಕಾವ್ಯಕಲಾನಿಧಿ' ಯೆಂದು ಕರೆಯಲ್ಪಟ್ಟು) 'ಕರ್ಣಾಟಕ ಕಾವ್ಯಮಂಜರಿ' ಯೆಂಬ ಮಾಸಪತ್ರಿಕೆಯ ಮುಖ್ಯ ಸಂಪಾದಕರಾದ ಶ್ರೀಮಾನ್ ಎಸ್. ಜಿ. ನರಸಿಂಹಾಚಾರ್ಯರವರು ಗಣ್ಯರಾದ ಒಬ್ಬರಾಗಿದ್ದರು. ಈ ದೊಡ್ಡಮನುಷ್ಯರು ಆಗ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಲೈಬ್ರೇರಿಯನ್ ಉದ್ಯೋಗದಲ್ಲಿದ್ದರು. ಅಗಾಧವಾದ ಪಾಂಡಿತ್ಯದೊಡನೆ ಸೌಜನ್ಯವೂ ಸರಳತೆಯೂ ಸತತೋದ್ಯೋಗ ಪ್ರೀತಿಯೂ, ನಿಸ್ಸೀಮವಾದ ಭಾಷಾಪ್ರೇಮವೂ ಮಾತ್ಸರ್ಯಕ್ಕೆಡೆಗುಡದ ಸರ್ವಸಮದೃಷ್ಟಿಯೂ ಇವರಲ್ಲಿ ನಿಸರ್ಗವಾಗಿ ಕಂಡುಬರುತ್ತಿದ್ದುವು. ಆಗ ತಾನೇ ಸಾಹಿತ್ಯಕ್ಷೇತ್ರದಲ್ಲಿ ಅಂಬೆಗಾಲಿಡತೊಡಗಿದ್ದ ನನಗೆ ಇವರು ಹಲವು ವಿಧವಾಗಿ ಕೊಟ್ಟ ಪ್ರೋತ್ಸಾಹವನ್ನು ನಾನು ಎಂದೂ ಮರೆಯುವಂತಿಲ್ಲ. ಒಂದೆರಡು ಸಲ ಇವರನ್ನು ಕಂಡು ಮಾತನಾಡುವುದರೊಳಗಾಗಿ ಇವರಿಗೂ ನನಗೂ ಆಂತರಿಕವಾದ ಸ್ನೇಹವುಂಟಾಯಿತು. ಮತ್ತು ಶ್ರೀಲಕ್ಷ್ಮೀನಾರಣಪ್ಪನವರೇ ಅದ್ಭುತರಾಮಾಯಣಾದಿ ಗ್ರಂಥಗಳ ಕವಿಯೆಂಬುದನ್ನು ನಾನು ಅವರಿಗೆ ಸ್ಪಷ್ಟವಾಗಿ ಹೇಳಿಬಿಟ್ಟೆನು. ಅವರು ಹೀಗೆಂದರು:—'ಈ ಸಂದೇಹವು ಮೊದಲಿಂದ ನಮಗೂ ಇದ್ದಿತು. ಕೇವಲ ಅರ್ವಾಚೀನವಾದ ಕೆಲಕೆಲವು ಪ್ರಯೋಗಗಳು ಆ ಗ್ರಂಥಗಳಲ್ಲಿ ಕಂಡುಬರೋಣವೂ, ಮೂಲಹಸ್ತಪ್ರತಿಯನ್ನು ಕಳುಹಿಸಿಕೊಡುವಂತೆ ಬರೆದಾಗ ಕಳುಹಿಸದೆ ಅವರು ತಪ್ಪಿಸಿಕೊಂಡುದೂ ನಿಮ್ಮ ಮಾತನ್ನು

ಒಂದು ವಿಧವಾಗಿ ಸಮರ್ಥಿಸುತ್ತವೆ. ನಿಮ್ಮ * ನಿಬಂಧದಲ್ಲಿಯೂ ನೀವು ಈ ಕುರಿತು ಬರೆದಿರುವುದನ್ನು ನಾನು ಓದಿರುವೆನು. ಮದ್ರಾಸಿನ ಶ್ರೀ|| ಎಚ್. ನಾರಾಯಣರಾಯರವರು (ಬಿ. ಎ., ಬಿ. ಎಲ್) ಕೂಡ ನಮಗೆ ಈ ವಿಷಯವಾಗಿ ಬರೆದಿದ್ದರು. ನಾವು ಶ್ರೀ|| ಲಕ್ಷ್ಮೀನಾರಣಪ್ಪನವರಿಗೆ ಒತ್ತಿ ಒತ್ತಿ ಬರೆದು ಕೇಳಿದರೂ, ಅವರು ಮಾತ್ರ ತಾವೇ ಕರ್ತೃವೆಂಬದನ್ನು ಒಪ್ಪಲಿಲ್ಲ. ಹೀಗಾದ ಬಳಿಕ ನಾವೇನು ಮಾಡುವಂತಿದೆ ? ಈ ಮುಂದಾದರೂ ಅವರು ಒಪ್ಪಿ ನಮಗೆ ತಿಳಿಸಿದರೆ ಅಗತ್ಯವಾಗಿ ಅವರ ಹೆಸರು ಹಾಕುವೆವು.'' ಈ ಹಿಂದೆ ನನಗೂ ಕವಿಗೂ ಈ ವಿಷಯವಾಗಿ ನಡೆದ ಮಾತುಗಳನ್ನು ಹೇಳಿಯೇ ಇರುವೆನು. 'ಹೇಗಾದರೂ ಆಗಲಿ, ಪುನಃ


* ದೇಶಭಾಷೆಗಳಲ್ಲಿ ಮದ್ರಾಸು ಎಂ. ಎ. ಪರೀಕ್ಷೆಗೆ ಹೋಗತಕ್ಕವರು ಆಗಿನ ನಿಬಂಧನೆಗಳ ಮೇರೆಗೆ ಸ್ವತಂತ್ರ ಪರಿಶೋಧನ ದರ್ಶಕವಾದ ಒಂದು ನಿಬಂಧವನ್ನು ಯೂನಿವರ್ಸಿಟಿಯ ಅಧಿಕಾರಿಗಳಿಗೆ ಮುಂದಾಗಿ ಕಳುಹಿಸಬೇಕಾಗಿದ್ದಿತು. 'ಅರ್ವಾಚೀನ ಕರ್ಣಾಟ ವಾಙ್ಮಯ' ವನ್ನು ಕುರಿತು ಬರೆದ ನನ್ನ ನಿಬಂಧದಲ್ಲಿ ಈ ಕವಿಯ ವಿಷಯವಾಗಿ ನಾನು ಹೀಗೆ ಬರೆದಿದ್ದೆನು:—

Only a single book has been written in charming Halegannada and it represents the first literary forgery committed at the present day. Lakshminaranappa of Udipi wrote a prose version of the Sanskrit Adbhuta Ramayana and sent it to the Editors of the Kavya Manjari, representing it as an old work which he came across in his search for Kannada manuscipts. The work did not bear the name of its author, who only subscribed himself as a servant working in the house of Kannada poets. So ancient and masterly did the work appear to be, that even the able editors of that journal were completely taken in and it was published in that journal, the Editors commenting upon it as the only simple and eloquent Halegannada prose work found as yet.

ಕವಿಯನ್ನು ಕಂಡಾಗ ಇನ್ನೊಮ್ಮೆ ಪ್ರಯತ್ನಿಸಿ ಈ ವಿಷಯವನ್ನು ನಿರ್ಣಾಯಕವಾಗಿ ತೀರಿಸುವೆನು' ಎಂಬದಾಗಿ ಮನಸ್ಸಿನಲ್ಲಿ ನಿಶ್ಚಯಿಸಿ ಶ್ರೀ|| ನರಸಿಂಹಾಚಾರ್ಯರವರಿಗೂ ತಿಳಿಸಿದೆನು. ಆದರೆ ಪುನಃ ಆ ಕವಿಯನ್ನು ಈ ಜನ್ಮದಲ್ಲಿ ಕಾಣುವ ಸಂದರ್ಭವು ದೊರೆಯದೆ ಹೋಗಿ ಆ ವಿಷಯವು ಅಲ್ಲಿಗೇ ನಿಂತು ಹೋಯಿತು. ೧೯೦೫ನೇ ಇಸವಿಯಲ್ಲಿ ಅಚ್ಚಾಗಿ ಪ್ರಕಟವಾದ 'ರಾಮಾಶ್ವಮೇಧ'' ದ 'ಕವಿಚರಿತೆ ಮತ್ತು ಗ್ರಂಥವಿಮರ್ಶೆ' ಗೆ ಸಂಪಾದಕರು ಕೊಟ್ಟಿರುವ ಅಡಿಟಿಪ್ಪಣವು ನನಗೂ ಶ್ರೀ|| ನರಸಿಂಹಾಚಾರ್ಯರವರಿಗೂ ನಡೆದ ಸಂಭಾಷಣೆಯ ಫಲಿತಾಂಶವಾಗಿರುವುದು.

ಅದುವರೆಗೂ ನಾನು ಅವಿವಾಹಿತನಾಗಿಯೇ ಇದ್ದೆನು. ೧೯೦೧ ನೇ ಇಸವಿ ಫೆಬ್ರವರಿ ೧೨ ನೇ ತಾರೀಖಿಗೆ ನನ್ನ ವಿವಾಹವು ಕುಂದಾಪುರದಲ್ಲಿ ನಡೆಯುವುದಾಗಿ ನಾನು ಮೈಸೂರು ನವುಕರಿಗೆ ಸೇರಿದ ತರುವಾಯ ಗೊತ್ತಾಯಿತು. ನನ್ನ ಇತರ ಸ್ನೇಹಿತರೆಲ್ಲರಿಗೂ ಆಹ್ವಾನ ಪತ್ರಿಕೆಗಳು ಹೋಗಿದ್ದ ಹಾಗೆಯೇ ಶ್ರೀ|| ಲಕ್ಷ್ಮೀನಾರಣಪ್ಪನವರಿಗೂ ಹೋಗಿದ್ದಿತು. ಇವು ಜನವರಿ ತಿಂಗಳ ಕೊನೆಯ ಸುಮಾರಿಗೆ ಟಪ್ಪಾಲಿಗೆ ಬಿದ್ದುದರಿಂದ ಮೈಸೂರಿಗೆ ಪ್ರತ್ಯುತ್ತರ ಬರೆದರೆ ನನಗೆ ತಲುಪಲಾರದೆಂಬ ಸಂದೇಹದಿಂದ ಶ್ರೀ|| ಲಕ್ಷ್ಮೀನಾರಣಪ್ಪನವರು ಜನವರಿ ೨೧ನೇ ತಾರೀಖಿಗೆ ಕುಂದಾಪುರದ ವಿಳಾಸಕ್ಕೆ ನನಗೊಂದು ಕಾರ್ಡು * ಬರೆದರು. ಅದು ಫೆಬ್ರವರಿ ೧೨ನೇ ತಾರೀಖಿನ ಪರ್ಯಂತ ಕುಂದಾಪುರದಲ್ಲಿಯೇ ಉಳಿದು, ಆ ದಿನವೇ ನನ್ನ ಕೈಗೆ ಮುಟ್ಟಿತು. ಅದರಲ್ಲಿ ಈ ಕೆಳಗಿನಂತೆ ಬರೆದಿದ್ದಿತು. '...ದೇಹದಲ್ಲಿ ಕ್ಷೇಮವಿಲ್ಲ. ಕ್ಷಯರೋಗವೆಂದು ಹೇಳುತ್ತಾರೆ. ಎದ್ದು ಕೂತುಕೊಳ್ಳುವ ತ್ರಾಣವಿಲ್ಲ. ಮಲಮೂತ್ರ ಇದ್ದಲ್ಲಿಯೇ ಸರಿ. ಒಮ್ಮೆ

* ಈ ಕಾರ್ಡು ಮುಂದಿನ ಪುಟದೊಳಗೆ ಮೂಲರೂಪದಲ್ಲಿ ಮುದ್ರಿತವಾಗಿರುವುದನ್ನು ವಾಚಕರು ನೋಡಬಹುದು.



ಲಕ್ಷ್ಮೀನಾರಣಪ್ಪನವರು ಮ|| ಬೆನಗಲ್ ರಾಮರಾಯರಿಗೆ
ಬರೆದ ಕಾಗದ.

(ಇದರ ಅಚ್ಚನ್ನು ಮ|| ವೆ. ಭ. ಆಲೂರರವರು ದಯೆಯಿಟ್ಟು ಕೊಟ್ಟಿರುತ್ತಾರೆ.)

ತಮ್ಮ ದರ್ಶನವನ್ನು ಕೊಟ್ಟರೆ ಬಹಳ ಉಪಕಾರವಾಗುತ್ತಿತ್ತು. ಹೆಚ್ಚಿಗೆ ಹೇಳಲು ಶಕ್ತನಲ್ಲ.'' ಕುಂದಾಪುರದಿಂದ ಉಡುಪಿಗೆ ಬರೀ ೧೫ ಮೈಲಿ ದೂರವಾದರೂ ಒಡನೆಯೇ ಹೋಗಿ ಶ್ರೀ|| ಲಕ್ಷ್ಮೀನಾರಣಪ್ಪನವರ ಆಪೇಕ್ಷೆಯನ್ನು ಸಲ್ಲಿಸುವುದು ಹೇಗೂ ಸಾಧ್ಯವಾಗಿರಲಿಲ್ಲ. ಇದಲ್ಲದೆ ಆ ಕಾರ್ಡಿನೊಳಗಣ ಅವರ ಕೈ ಬರೆಹದ ಬಿಗಿಯನ್ನು ನೋಡಿದರೂ, ಅವರಿಗೆ ಅಷ್ಟುಬೇಗನೆ ಮರಣ ಪ್ರಾಪ್ತವಾಗಬಹುದೆಂದು ಕೂಡ ನನಗೆ ತೋರಲಿಲ್ಲ. ಹೀಗಾಗಿ ವಿವಾಹವು ಸಂಪೂರ್ಣವಾದ ಬಳಿಕ ಹೋಗಿ ಬರುವೆನೆಂದು ನಿಶ್ಚಯಿಸಿದೆನು. ಆದರೆ ಅದಕ್ಕೆ ಮೊದಲೇ ಎಂದರೆ ಫೆಬ್ರವರಿ ೧೬ ನೇ ತಾರೀಖು ಶನಿವಾರವೇ ಈ ಮಹಾಕವಿಯು ದಿವಂಗತನಾದನು ಮತ್ತು ನನ್ನ ಉದ್ದೇಶವು ನನ್ನಲ್ಲಿಯೇ ಉಳಿದು ಹೋಗುವುದಾಯಿತು.

ಅವರ ಈ ಅಕಾಲಿಕವಾದ ಮರಣದಿಂದ ನನ್ನಲ್ಲಿ ತುಂಬಾ ನಿರುತ್ಸಾಹವೂ ವ್ಯಸನವೂ ಜುಗುಪ್ಸೆಯೂ ಉಂಟಾದುವು. ಎಷ್ಟೋ ದಿನಗಳವರೆಗೆ ನನ್ನ ಮನಸ್ಸು ಬಂದು ವಿಧವಾದ ಚಂಚಲಸ್ಥಿತಿಯಲ್ಲಿದ್ದಿತು. ಆ ಕಾರ್ಡಿನಲ್ಲಿ ತೋರಿಸಿದ್ದ ಉತ್ಕಟವಾದ ಅವರ ದರ್ಶನಾಭಿಲಾಷೆಯು ಬರೀ ಉಪಚಾರದ ಮಾತಾಗಿರಬಹುದೇ ? ತಿರಿತಿರಿಗಿ ಆಲೋಚಿಸಿ ನೋಡಿದರೂ ಅಲ್ಲವೆಂದೇ ನನ್ನ ಮನೋದೇವತೆಯು ನನಗೆ ಹೇಳುತ್ತಿದೆ. ಅವರ ಆ ಪ್ರಾರ್ಥನೆಯಲ್ಲಿ ಖಂಡಿತವಾಗಿಯೂ ಮಹತ್ತರವಾದ ಏನೋ ಉದ್ದೇಶವಿದ್ದಿತೆಂದು ನನಗೆ ಇಂದಿಗೂ ತೋರುತ್ತಲಿದೆ. ಮುಂದೆ ತನ್ನ ಸ್ವಂತ ಹೆಸರಿಂದ ನೂರಾರು ಗ್ರಂಥಗಳನ್ನು ಬರೆಯುವೆನೆಂದು ಇವರು ಮಾಡಿದ ಆಶೆಯು ವ್ಯರ್ಥವಾಗುವುದೆಂದು ಮನಗೊಂಡು, ಯಾವುದೊಂದು ರೂಪದಿಂದಲಾದರೂ ತಾನೇ ಅದ್ಭುತರಾಮಾಯಣಾದಿ ಗ್ರಂಥಗಳ ಕರ್ತೃವೆಂಬುದನ್ನು ನನ್ನ ಮೂಲಕ ಲೋಕಕ್ಕೆ ಸಾಧಾರಣವಾಗಿ ತಿಳಿಯಪಡಿಸಬೇಕೆಂಬ ಆಪೇಕ್ಷೆಯೋ ಅಲ್ಲ, ಅಚ್ಚಾದ ಮತ್ತು ಅಚ್ಚಾಗದಿರುವ ತನ್ನ

ಸಂಪೂರ್ಣವಾದ ಮತ್ತು ಅಪೂರ್ಣವಾದ ಹಸ್ತಪ್ರತಿಗಳನ್ನೂ * ಮುಖ್ಯವಾದ ಕಾಗದ ಪತ್ರಗಳನ್ನೂ ಭದ್ರತೆಯ ಬಗ್ಗೆ ನನ್ನ ಕೈಗೆ ಒಪ್ಪಿಸಿಕೊಡಬೇಕೆಂಬ ಉದ್ದೇಶವೋ, ಅಥವಾ ಕೇವಲ ದರಿದ್ರ ಸ್ಥಿತಿಯಲ್ಲಿ ಜೀವಿಸಿಕೊಂಡಿದ್ದು ಚಿಕ್ಕವಯಸ್ಸಿನ ಹೆಂಡತಿಯನ್ನೂ ಹಸುಗೂಸನ್ನೂ ನಿರಾಧಾರವಾಗಿ ಬಿಟ್ಟು ಹೋಗಬೇಕಾಗಿರುವ ಮನಸ್ಸಿನ ಕಳವಳವನ್ನು ನನಗೆ ತಿಳಿಸಿ, ಮಹಾಜನರಿಂದ ಏನಾದರೂ ಸಹಾಯವನ್ನು ನನ್ನ ಮೂಲಕವಾಗಿ ಕೇಳಿಸುವ ಇಚ್ಛೆಯೋ ?—ಹೀಗೆ ಅಲ್ಲೋಲ ಕಲ್ಲೋಲವಾದ ಅವರ ಮನಸ್ಸಿನೊಳಗಣ ಯಾವುದೋ ಒಂದು ಅಭಿಲಾಷೆಯನ್ನು ನನಗೆ ತಿಳಿಸುವುದಕ್ಕಾಗಿಯೇ ಅವರು ನನ್ನನ್ನು ಬರುವಂತೆ ಅಪೇಕ್ಷಿಸಿದ್ದರೇ ವಿನಾ ಆ ಪ್ರಾರ್ಥನೆಯು ಬರೀ ಔಪಚಾರಿಕವಾಗಿರಲಿಲ್ಲವೆಂದೇ ಈ ಹೊತ್ತಿಗೂ ನನ್ನ ಭಾವನೆಯು. ಆದರೆ, ದುರದೃಷ್ಟವಶಾತ್ ಅವರ ಅಂತಿಮಕಾಲದಲ್ಲಿ ಅವರ ರುಗ್ಣಶಯ್ಯೆಯ ಬಳಿ ಕುಳಿತು ಅವರ ಮನೋಗತವೇನೆಂದು ತಿಳಿದು ಅವರ ಮನಸ್ಸಿನ ಕಳವಳವನ್ನು ಪರಿಹರಿಸಿ ಅವರು ಶಾಂತಚಿತ್ತರಾಗಿ ಸಾಯುವಂತೆ ಮಾಡುವ ಅದೃಷ್ಟ ನನಗೆ ಲಭಿಸಲಿಲ್ಲ. ಆದರೆ ನನ್ನಿಂದ ಆಗ ಮಾಡಲು ಸಾಧ್ಯವಾದ ಒಂದು ಕೆಲಸವನ್ನು ಮಾತ್ರ ನಾನು ಮಾಡಿಬಿಟ್ಟೆನು. ಅದುವರೆಗೆ ಖಾಸಗಿಯ ಮಾತು ಕಥೆಗಳಲ್ಲಿಯೂ ಕಾಗದ ಪತ್ರಗಳಲ್ಲಿಯೂ ಮಾತ್ರ ಬಂದಿರುತ್ತಿದ್ದ ಈ ಕವಿಯ ' ಗುಪ್ತನಾಮ ' ದ ಸಮಾಚಾರವನ್ನು ಸುವಾಸಿನಿಯ (ಪುಸ್ತಕ ೧, ಸಂಚಿಕೆ ೯) ಮಾರ್ಚಿ ತಿಂಗಳ ಸಂಚಿಕೆಯಲ್ಲಿ ' ಸ್ಫುಟವಿಷಯ ' ರೂಪವಾಗಿ ಈ ಕೆಳಗಿನಂತೆ ಪ್ರಕಟಗೊಳಿಸಿದೆನು.

ಉಡುಪಿಯ ಕ್ರಿಶ್ಚನ್ ಹಾಯ್‌ಸ್ಕೂಲ್ ಕರ್ಣಾಟಕ ಪಂಡಿತರಾಗಿರುತ್ತಿದ್ದ ರಾ|| ನಂದಳಿಕೆ ಲಕ್ಷ್ಮೀನಾರಾಯಣಯ್ಯನವರ ಅಕಾಲಿಕ ಮರಣದಿಂದ ಕರ್ಣಾಟಕ

---

* ಕವಿಯ ಮರಣಾನಂತರದಲ್ಲಿ ಮುಖ್ಯವಾದ ಕೆಲವಲ್ಲದೆ ಉಳಿದ ಯಾವತ್ತು ಪುಸ್ತಕಗಳೂ ಹಸ್ತಪ್ರತಿಗಳೂ, ಅವುಗಳ ಬೆಲೆಯನ್ನರಿಯದ ಇವರ ಬಂಧುಗಳಿಂದ ನಾಶಗೊಳಿಸಲ್ಪಟ್ಟುವೆಂದು ತಿಳಿಯಬರುತ್ತದೆ.

ಭಾಷಾಭಿವೃದ್ಧಿಗೆ ದೊಡ್ಡ ಹಾನಿಯುಂಟಾಗಿದೆ. ರಾ|| ಲಕ್ಷ್ಮೀನಾರಾಯಣಯ್ಯನವರು ಕಳೆದ ಒಂದು ವರ್ಷ ಮೊದಲ್ಗೊಂಡು ಅಸುಸ್ಥರಾಗಿಯೇ ಇದ್ದು, ಕಳೆದ (16 ನೆಯ ಫೆಬ್ರವರಿ) ಶನಿವಾರ ದಿನ ಕ್ಷಯರೋಗದಿಂದ ಉಡುಪಿಯಲ್ಲಿಯೇ ತೀರಿಕೊಂಡರು. ಇವರಲ್ಲಿ ಅಸಾಧಾರಣವಾದ ಬುದ್ಧಿಬಲವೂ, ಗ್ರಹಣಶಕ್ತಿಯೂ ಕವಿತಾಚಮತ್ಕಾರವೂ ಇದ್ದುದಕ್ಕೆ ಇವರು ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು, ಕರ್ಣಾಟಕ ಕಾವ್ಯಮಂಜರಿಯಲ್ಲಿ ಪ್ರಕಟಗೊಳಿಸುವಂತೆ ಮಾಡಿದ ಅದ್ಭುತರಾಮಾಯಣ, ಶ್ರೀರಾಮ ಪಟ್ಟಾಭಿಷೇಕ, ರಾಮಾಶ್ವಮೇಧ ಮೊದಲಾದ ಗ್ರಂಥಗಳೇ ಸಾಕ್ಷ್ಯಗಳಾಗಿವೆ. ಸ್ವದೇಶವನ್ನು ಬಿಟ್ಟು ಹೊರಗೆ ಹೋಗದೆ ಇದ್ದರೂ, ಈ ಮಹನೀಯರು ತೆಲುಗು, ತಮಿಳು, ಮಲೆಯಾಳ, ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ತನ್ನ ಸ್ವಂತ ಉದ್ಯಮಬಲದಿಂದಲೇ ವಿಶೇಷವಾದ ವ್ಯವಸಾಯ ಮಾಡಿದ್ದರು. ಇವರ ಮನಸ್ಸು ಸರ್ವದಾ ನೂತನ ವಿಷಯಗಳನ್ನು ಕುರಿತು ಜ್ಞಾನಸಂಪಾದಿಸುವುದರಲ್ಲಿಯೇ ಮಗ್ನವಾಗಿರುತ್ತಿತ್ತು. ಅಂದಿನಿಂದ ಇಂದಿನವರೆಗೆ ಮಂಗಳೂರು ಜಿಲ್ಲೆಯಲ್ಲಿ ಯಾರಾದರೊಬ್ಬ ಉತ್ತಮ ಪ್ರತಿಯ ಕರ್ಣಾಟಕ ಕವಿಯೂ, ಲೇಖಕನೂ ಪಂಡಿತನೂ ಹುಟ್ಟಿದ್ದನೆಂದು ಅಭಿಮಾನ ಪಡುವುದಾದರೆ ರಾ|| ಲಕ್ಷ್ಮೀನಾರಾಯಣಯ್ಯನವರ ಹೆಸರು ಬಿಟ್ಟರೆ ಬೇರೆ ಗತಿ ಇಲ್ಲ. ಇವರಿಗೆ ಕರ್ಣಾಟಕ ಭಾಷೆಯ ಉತ್ತರಾಭಿವೃದ್ಧಿಯ ವಿಷಯದಲ್ಲಿ ಉತ್ಸಾಹಪೂರ್ವಕವಾದ ಪ್ರತ್ಯಾಶೆ ಇದ್ದಿತು. ಆದಿಯಿಂದಲೂ ಇವರಿಗೆ ಸುವಾಸಿನಿಯ ಮೇಲೆ ಬಲವಾದ ಮಮತೆ ಇತ್ತು, ಮತ್ತು ಇವರ ಅಸ್ವಸ್ಥದ ದೆಸೆಯಿಂದ ಅಲ್ಲದೆ ಹೋದರೆ, ಸುವಾಸಿನಿಯ ಪ್ರತಿಯೊಂದು ಸಂಚಿಕೆಯೂ ಇವರ ಲೇಖಗಳಿಂದ ಮೆರೆಯಬೇಕಾಗಿತ್ತು. " ಜೋಜೋ " ಪದದ ವ್ಯುತ್ಪತ್ತಿಯನ್ನು ಕುರಿತು " ಚಕ್ರಧಾರಿ " ಎಂಬ ಅಭಿಧಾನದಿಂದ ಇವರು ಸುವಾಸಿನಿಗೆ ಬರೆದ ಒಂದೇ ಒಂದು ಲೇಖವು ಎಷ್ಟು ಮನೋಹರವೂ ಜ್ಞಾನಪೂರ್ಣವೂ ಆಗಿದೆಯೆಂದು ನಾವು ಪ್ರತ್ಯೇಕವಾಗಿ ಹೇಳುವ ಅವಶ್ಯವಿಲ್ಲ. ಮೊದಲಿಂದಲೂ ಇವರಿಗೂ ನಮಗೂ ಸ್ನೇಹವಿದ್ದು ಆಗಿಂದಾಗ ಪತ್ರವ್ಯವಹಾರ ನಡೆಯುತ್ತಲೇ ಇತ್ತು ; ಸುವಾಸಿನಿಯ ಜನನವು ಈ ಸ್ನೇಹ ಪಾಶಗಳನ್ನು ಮತ್ತಷ್ಟು ಬಿಗಿಯಾಗಿ ಕಟ್ಟಿತು. ಹೀಗಾದುದರಿಂದ ಕರ್ಣಾಟಕ ಭಾಷೆಗಾಗಿ ನಾವು ವ್ಯಸನಪಡುತ್ತಿರುವುದು ಮಾತ್ರವಲ್ಲದೆ, ಅತ್ಯಂತ ಸನ್ಮಾನ್ಯರೂ ಪ್ರಿಯರೂ ಆದ ಮಿತ್ರರ ಮರಣವನ್ನು ಕುರಿತು ಸಹ ನಾವು ಬಹಳವಾಗಿ ಚಿಂತಿಸುತ್ತಿರುವೆವು. ಕರ್ಣಾಟಕ ಭಾಷಾವತ್ಸಲರಾದ ಸರ್ವರೂ ಒಂದಾಗಿ ಸೇರಿ ಇವರ ಹೆಸರು ಶಾಶ್ವತವಾಗಿ ನಿಲ್ಲುವಂತೆ ಮಾಡದಿರಲಾರರೆಂದು ದೃಢವಾಗಿ ನಂಬುವೆವು."

ಕವಿಯ ನಿಧನದ ದೆಸೆಯಿಂದ ಕನ್ನಡದ ವಿಷಯದಲ್ಲಿ ಪ್ರೇಮವುಳ್ಳ ಕೆಲಕೆಲವು ಭಾಷಾಭಕ್ತರು ಹಳಹಳಿಸಿದರಾದರೂ ಅವರ ಸ್ಮಾರಕದ ವಿಷಯದಲ್ಲಿ ಮಾಡಿದ ಪ್ರಾರ್ಥನೆಯು ಮಾತ್ರ ಮಹಾಜನರಿಂದ ಲೆಕ್ಕಿಸಲ್ಪಟ್ಟಂತೆ ತೋರಲಿಲ್ಲ. ಇದು ಕನ್ನಡಿಗರಲ್ಲಿ ಭಾಷೆಯ ಸಂಬಂಧದಿಂದ ಕಂಡುಬರುವ ಉಪೇಕ್ಷೆಗೆ ಅನುರೂಪವಾಗಿಯೇ ಇದೆ. ಆದರೆ ಕವಿಯ ಗುಣಪ್ರಶಂಸಾತ್ಮಕರೂಪವಾದ ಲೇಖಗಳು ಮಾತ್ರ ಆಗಳಿನ ಅನೇಕಾನೇಕ ಪತ್ರಿಕೆಗಳಲ್ಲಿ ಆಗಿಂದಾಗ ಪ್ರಚುರವಾಗುತ್ತಲೇ ಇದ್ದುವು.

ಕೆಲಕೆಲವು ತೊಂದರೆಗಳ ದೆಸೆಯಿಂದ ಮೈಸೂರಿನ ನನ್ನ ವಾಸವು ನಾನು ಮೊದಲು ಊಹಿಸಿದ್ದಷ್ಟು ಸುಖಕರವಾಗಲೀ ಪ್ರೋತ್ಸಾಹಕರವಾಗಲೀ ಆಗಲಿಲ್ಲ. ಆ ಪಟ್ಟಣದಲ್ಲಿದ್ದ ಎರಡು ವರ್ಷಗಳಲ್ಲಿಯೂ ಆರು ತಿಂಗಳಿಗೂ ಹೆಚ್ಚಾಗಿ ರಜಾಪಡೆದು ದೂರದೇಶದಲ್ಲಿರಬೇಕಾಯಿತು. ೧೯೦೨ನೇ ಅಕ್ಟೋಬರು ತಿಂಗಳಿಂದ ಮೈಸೂರಿನ ಕೆಲಸವನ್ನು ಪೂರ್ತಿಯಾಗಿ ಬಿಟ್ಟು ಬೊಂಬಾಯಲ್ಲಿ ಕೆಲಸವನ್ನು ಕೈಕೊಂಡೆನು. ನಾನು 'ಸುವಾಸಿನಿ' ಯ ಸಂಪಾದಕನಾಗಿರುವುದು ಬೊಂಬಾಯಿಯ ನನ್ನ ಮೇಲಧಿಕಾರಿಗಳಿಗೆ ಇಷ್ಟವಿಲ್ಲದೆ ಹೋದುದರಿಂದ ಮೈಸೂರಿನೊಂದಿಗೆ 'ಸುವಾಸಿನಿ' ಯ ಸಂಬಂಧವನ್ನು ಬಿಟ್ಟುಬಿಡಬೇಕಾಯಿತು. ಮಹಾಜನರುಗಳ ಪ್ರೋತ್ಸಾಹವು ಕಡಮೆಯಾದುದರಿಂದ ಆ ಪತ್ರಿಕೆಯೂ ಕ್ಷಿಪ್ರದೊಳಗಾಗಿ ನಿಂತು ಹೋಯಿತು. ಹೀಗಾಗಿ ೧೯೧೦ನೇ ಏಪ್ರಿಲ್‌ನಲ್ಲಿ ವರ್ಗಹೊಂದಿ ಪುನಃ ಮದ್ರಾಸಿಗೆ ಬರುವವರೆಗೂ ಶ್ರೀ|| ಲಕ್ಷ್ಮೀನಾರಣಪ್ಪನವರ ವಿಷಯದಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ನನಗೆ ಸಾಧ್ಯವಿಲ್ಲದೆ ಹೋಯಿತು. ಮದ್ರಾಸಿಗೆ ಬಂದ ಬಳಿಕ ನನ್ನ ಸಮೀಪದ ಬಂಧುಗಳೂ ಹೈಕೋರ್ಟು ವಕೀಲರೂ ಕವಿಯ ಶಿಷ್ಯಕೋಟಿಗೆ ಸೇರಿದವರೂ ಆದ ಶ್ರೀ|| ಗುಲವಾಡಿ ಅಣ್ಣಾಜಿರಾವ್ ಎಂ. ಎ., ಬಿ. ಎಲ್. ಮೂಲಕ ಕವಿಯಚರಿತ್ರೆಯ ಮತ್ತು ಹಸ್ತಪ್ರತಿಗಳ ವಿಚಾರದಲ್ಲಿ ಪ್ರಯತ್ನ

ಪಟ್ಟೆನು. ಆದರೂ ನನ್ನ ಪ್ರಯತ್ನಗಳಿಗೆ ಬೇಕಾದಷ್ಟು ಯಶಸ್ಸು ದೊರೆಯಲಿಲ್ಲ. ಕವಿಯ ಹಸ್ತಪ್ರತಿಗಳೊಳಗೆ ಬಂದೆರಡು ಮಾತ್ರ ಶ್ರೀ|| ಅಣ್ಣಾಜಿರಾಯರ ಮೂಲಕ ಬೆಂಗಳೂರಿನ ಶ್ರೀ|| ಎಚ್. ಚೆನ್ನಕೇಶವಯ್ಯಂಗಾರ್ಯರವರ ವಶಕ್ಕೆ ಹೋದಂತೆ ತಿಳಿದುಬಂದಿತು. ಶ್ರೀ|| ಅಯ್ಯಂಗಾರ್ಯರಿಗೂ ನನಗೂ ಆಗ ಅಷ್ಟೊಂದು ಪರಿಚಯವಿಲ್ಲದುದರಿಂದ ಈ ಹಸ್ತಪ್ರತಿಗಳನ್ನು ನೋಡುವ ಭಾಗ್ಯವು ಕೂಡ ನನಗೆ ಎರಡು ಮೂರು ವರ್ಷಗಳಷ್ಟು ಈಚೆಗೆ ಮಾತ್ರ ಪ್ರಾಪ್ತವಾಯಿತು.

೧೯೨೩ ನೇ ಇಸವಿಯ ಆದಿಭಾಗದಲ್ಲಿ ನಾನು ಮಂಗಳೂರಿಗೆ ಹೋಗಿದ್ದಾಗ ಭಾಷಾಭಿಮಾನಿಗಳಾದ ನನ್ನ ಸ್ನೇಹಿತರುಗಳೂ ನಾನೂ ಖಾಸಗಿಯಾಗಿ ಸಭೆ ಸೇರಿ, ಮಂಗಳೂರಿನಲ್ಲೊಂದು 'ಜಿಲ್ಲಾ ಸಾಹಿತ್ಯ ಸಮ್ಮೇಳನ' ವನ್ನು ನೆರೆಯಿಸಬೇಕೆಂದೂ, ಆ ಕಾಲದಲ್ಲಿ ಮಂಗಳೂರಿನಲ್ಲಿ ಒಂದು ಕರ್ಣಾಟಕ ಸಂಘವನ್ನು ಸ್ಥಾಪಿಸಬೇಕೆಂದೂ, ಕನ್ನಡ ಜಿಲ್ಲೆಯ ಕವಿಗಳ ಚರಿತ್ರೆಯನ್ನೂ ಗ್ರಂಥಗಳನ್ನೂ ಸಂಗ್ರಹಿಸಿ ಪ್ರಕಟಿಸಲು ಏರ್ಪಾಟುಮಾಡಬೇಕೆಂದೂ, ಶ್ರೀ|| ಲಕ್ಷ್ಮೀನಾರಾಯಣಕವಿಯ ಹೆಸರನ್ನು ಶಾಶ್ವತಗೊಳಿಸುವುದಕ್ಕಾಗಿ ಒಂದು ಸ್ಮಾರಕವನ್ನು ಮಾಡಬೇಕೆಂದೂ ಗೊತ್ತುಪಡಿಸಿದೆವು; ಮತ್ತು ಅದಕ್ಕೆ ಬೇಕಾದ ಸಿದ್ಧತೆಯೂ ಉತ್ಸಾಹದೊಡನೆ ನಡೆಯುತ್ತಿದ್ದಿತು. ಆದರೆ ಮಹಾಪ್ರವಾಹರೂಪವಾದ ದೈವಿಕಾಪತ್ತಿಯಿಂದ ಆ ವರ್ಷದಲ್ಲಿ ಅದನ್ನು ನೆರೆಯಿಸಲು ಸಾಧ್ಯವಾಗಲಿಲ್ಲ; ಅಷ್ಟೇ ಅಲ್ಲದೆ, ಮರುವರ್ಷ ಎಂದರೆ ೧೯೨೪ರಲ್ಲಿ ಪುನಃ ಕೈಕೊಳ್ಳುವುದರೊಳಗಾಗಿ ಮರಳಿಯೂ ಆದೇ ಸಂಕಷ್ಟವು ಪ್ರಾಪ್ತವಾಗಿ ನಮ್ಮ ಉದ್ದೇಶವು ನಿಂತೇ ಹೋಗುವುದಾಯಿತು; ಮತ್ತು ಯಾವ ಕೆಲಸವನ್ನು ಈಡೇರಿಸುವುದು ಮಂಗಳೂರು ಜಿಲ್ಲೆಯವರ ಆದ್ಯ ಕರ್ತವ್ಯವಾಗಿದ್ದಿತೋ ಅದನ್ನು ನಡೆಯಿಸಿದ ಕೀರ್ತಿಯು ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರಿಗೆ, ಮೈಸೂರು ಸೀಮೆಯ ನಮ್ಮ ಕನ್ನಡ ಬಂಧುಗಳಿಗೆ, ದೊರೆಯುವುದಾಯಿತು.

ರಾಮಾಶ್ವಮೇಧಾದಿ ಗ್ರಂಥಗಳನ್ನು ಬರೆದಾತನು ಶ್ರೀ|| ಲಕ್ಷ್ಮೀನಾರಾಯಣ ಕವಿಯೇ ಎಂಬುದನ್ನು ನಾನು ಈ ಉಪನ್ಯಾಸದಲ್ಲಿ ಪುನಃ ಪುನಃ ಹೇಳಿರುವೆನಾದರೂ ಅದನ್ನು ಅಂತರ್ಬಾಹ್ಯ ಪ್ರಮಾಣಗಳಿಂದ ಋಜುಪಡಿಸುವುದು ನನ್ನ ಈ ಲೇಖನಕ್ಕೆ ಹೊರಗಾದ ವಿಷಯವಾಗಿದೆ. ಹಲವು ವಿಧವಾದ ಆಧಾರಗಳನ್ನು ಕೊಟ್ಟು ವಿದ್ವನ್ಮಣಿಗಳು ಆ ಕೆಲಸವನ್ನು ಈ ಮೊದಲೇ ಮಾಡಿರುವರು ; ಈಗಲೂ ಮಾಡುತ್ತಲೇ ಇರುವರು. ತಥಾಪಿ, ನನ್ನ ಅಭಿಪ್ರಾಯದ ಮೇರೆಗೆ ಹೇಳಬಹುದಾದ ಈ ಕೆಳಗಣ ಕೆಲಕೆಲವು ಕಾರಣಗಳನ್ನು ಅರಿಕೆಮಾಡಿಕೊಳ್ಳುವೆನು.

(i) ಕವಿಯು ತನ್ನ ಸ್ವಂತ ಹೆಸರಿಂದ ಪ್ರಚುರಗೊಳಿಸಿರುವ ಯಕ್ಷಗಾನ, ರತ್ನಾವತೀ ಕಲ್ಯಾಣ, ಮತ್ತು ಕುಮಾರವಿಜಯಗಳ ಮೂಲಕ ಕಂಡುಬರುವ ಆತನ ಅದ್ಭುತವಾದ ಪ್ರತಿಭೆ.

(ii) ಕವಿಗೆ ಮುದ್ದಣ (ಮುತ್ತಣ್ಣ) ನೆಂಬುದಾಗಿ ಮನೆಯ ಹೆಸರೂ ; ಆತನ ತಾಯಿಗೆ ಲಕ್ಷ್ಮಮ್ಮ (ಮಹಾಲಕ್ಷ್ಮಿ) ನೆಂದೂ ಪತ್ನಿಗೆ ಕಮಲಮ್ಮ (ಮನೋರಮೆ) ಎಂದೂ ಹೆಸರು ಇರುವ ವಿಷಯ.

(iii) ಆತನ ಗುರುಗಳಾದ ಶ್ರೀ|| ಮಳಲಿಯ ಸುಬ್ಬರಾಯರ ಮತ್ತು ಸರ್ವದಾ ಆತನ ಸಹವಾಸದಲ್ಲಿದ್ದ ಮಿತ್ರರಾದ ಶ್ರೀ|| ಪಂಡಿತ ಐರೋಡಿ ಶಿವರಾಮಯ್ಯನಂಥವರ ಲೇಖನಗಳೂ ಹೇಳಿಕೆಗಳೂ ; ಆತನು ಬರೆಯುತ್ತಿದ್ದುದನ್ನು ಕಣ್ಣಾರ ಕಂಡವರಾಗಿದ್ದು ಈಗ ಉನ್ನತಪದವಿಗಳಲ್ಲಿರುವ ಆತನ ನೂರಾರುಮಂದಿ ಶಿಷ್ಯರುಗಳ ಹೇಳಿಕೆ ; ಆತನೊಂದಿಗೆ ಆಗಿಂದಾಗ ಪತ್ರವ್ಯವಹಾರವನ್ನು ನಡೆಸುತ್ತಿದ್ದ ಆತನ ವಿಶ್ವಾಸಪಾತ್ರರಾಗಿದ್ದ ಶ್ರೀ|| ಎಚ್. ನಾರಾಯಣರಾಯರೊಂದಿಗೂ ನನ್ನೊಂದಿಗೂ ಆತನು ಸ್ಪಷ್ಟವಾಗಿ ಒಪ್ಪಿಕೊಂಡಿರೋಣ ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯ ಪ್ರತಿಯೊಬ್ಬರಿಗೂ ಆತನು ಅವುಗಳ ಲೇಖಕನೆಂಬುದಾಗಿ ಇರುವ ಸಕಾರಣವಾದ ಅಭಿಪ್ರಾಯ.

(iv) ಆತನ ಸ್ವಂತ ಕೈ ಬರೆಹದ ಪ್ರತಿಗಳೇ ವಿನಾ ಬೇರೆ ಹಸ್ತ ಪ್ರತಿಗಳು ಸಿಕ್ಕದಿರೋಣ ; ಆ ಗ್ರಂಥಗಳ ಅಸ್ತಿತ್ವವು ಅದಕ್ಕೆ ಮೊದಲು ಯಾರಿಗೂ ತಿಳಿಯದಿರೋಣ; ಆ ಕೈ ಬರೆಹದ ಪ್ರತಿಗಳಲ್ಲಿ ಆತನೇ ಹೊಡೆದು ಹೊಡೆದು ತಿದ್ದಿ ಪುನಃ ಬರೆದಿರೋಣ.

(v) ಆತನ ಕೈ ಬರೆಹದಲ್ಲಿಯೇ ಹಸ್ತಪ್ರತಿಯ ಮುಖಪತ್ರದಲ್ಲಿ "ಅದ್ಭುತರಾಮಾಯಣಮೆಂಬೀ ನುಡಿಗಬ್ಬಂ ನಂದಳಿಕೆ ಲಕ್ಷ್ಮೀನಾರಾಯಣನಿಂ ರಚಿಸಲ್ಪಟ್ಟುದು. ೧೮೯೪" ಎಂಬುದಾಗಿ ಕನ್ನಡದಲ್ಲಿದ್ದು, ಅದರ ಅಡಿಗೆ ಆತನ ಕೈಬರೆಹದಲ್ಲಿಯೇ "N. Lakshminarayana-iah" ಎಂಬದಾಗಿ ದಸ್ಕತೂ, "Gymnastic Instructor, High School, Kundapur" ಎಂಬ ಲಿಖಿತವೂ ಇರೋಣ.

(vi) ಆತನ ಅದ್ಭುತರಾಮಾಯಣದ (ಶ್ರೀ|| ಚೆನ್ನಕೇಶವಯ್ಯಂಗಾರ್‍ಯರವರೊಡನೆ ಇರುವ) ಹಸ್ತ ಪ್ರತಿಯಲ್ಲಿ ೧೧ ರಿಂದ ೧೫ ರ ಪರ್ಯಂತದ ಆಶ್ವಾಸಗಳು ಕೇವಲ ಬೇರೆಯಾಗಿವೆ. ಇವು 'ಕಾವ್ಯಮಂಜರಿ' ಯವರಿಂದ ಪ್ರಚುರಗೊಳಿಸಲಾದ ಪುಸ್ತಕದಲ್ಲಿ ಇರುವುದಿಲ್ಲ. ಈ ಹಸ್ತ ಪ್ರತಿಯಲ್ಲಿ ಒಟ್ಟು ಇಪ್ಪತ್ತೊಂದು ಆಶ್ವಾಸಗಳಿವೆ.

(vii) ಆತನು ತನ್ನ ಹೆಸರು ಅಡಗಿಸಿದುದಕ್ಕೋಸ್ಕರ ಕೊಟ್ಟ ಕಾರಣವು ಸಾಧಾರವಾದುದೆಂದು ಜನರು ತಿಳಿಯಲು ಅವಕಾಶವಿರೋಣ.

ಇಷ್ಟು ಕಾರಣಗಳು ಯಾವ ವಿಚಾರಪರನಿಗಾದರೂ ಸಾಕಾದಷ್ಟು ಪ್ರಮಾಣವಾಗದೆ ಹೋಗಲಾರವು ಎಂದು ನನ್ನ ಅಭಿಪ್ರಾಯವು. 'ಲಕ್ಷ್ಮೀನಾರಾಯಣ ಕವಿಯು ತನಗೆ ಸಿಕ್ಕಿದ ಯಾವುವೋ ಹಸ್ತಪ್ರತಿಗಳನ್ನು ತನ್ನ ಕೈಬರೆಹದಿಂದ ಬರೆದು ಅಲ್ಲಲ್ಲಿ ಕೊಂಚ ತಿದ್ದಿ, ತಾನೇ ಕರ್ತೃವೆಂದು ಧೈರ್ಯವಾಗಿ ಹೇಳಲು ಅಂಜಿ ಈ ರೀತಿ ವರ್ತಿಸಿದನೆಂದು ನಾವು ಏತಕ್ಕೆ ತಿಳಿಯಬಾರದು ? ಅರ್ವಾಚೀನ ಕವಿಗಳೊಳಗೆ ಇಷ್ಟು ಉದ್ದಾಮವಾದ ಗ್ರಂಥಗಳನ್ನು ಬರೆಯತಕ್ಕವರು ಯಾರಿದ್ದಾರೆ ?'—

ಎಂಬುದಾಗಿ ಪಂಡಿತರೊಬ್ಬರು ಒಂದುಬಾರಿ ನನ್ನೊಡನೆ ವಾದವನ್ನು ಹೂಡಿದ್ದರು. ಈ ವಾದಕ್ಕೆ ಸಮಾಧಾನವು ಇಷ್ಟೇ:—ಶ್ರೀ|| ಲಕ್ಷ್ಮೀ ನಾರಣಪ್ಪನವರು ಬರೀ ಹಳ್ಳಿಯ ಹೆಡ್ಡನಾಗಿರಲಿಲ್ಲ. ಒಳ್ಳೆಯ ಕುಶಲ ಲೇಖಕ ರಾಗಿದ್ದರು. ಅವರಲ್ಲಿ ಸ್ವತಂತ್ರವಾಗಿ ಬರೆಯತಕ್ಕಷ್ಟು ಶಕ್ತಿಯು ಖಂಡಿತ ವಾಗಿಯೂ ಇದ್ದಿತು. ಅವರು ಬರೆಯುತ್ತಿದ್ದಾಗಲೇ ಪ್ರತಿ ನಿತ್ಯವೂ ನೋಡಿದ್ದ, ಬೇರೆ ಬೇರೆ ಜಾತಿಗೆ ಸೇರಿದ ಅವರ ಮಿತ್ರರೂ ವಿದ್ಯಾರ್ಥಿ ಗಳೂ ಇಂದಿಗೂ ಜೀವಿಸಿಕೊಂಡಿದ್ದಾರೆ. ಪುರಾತನ ಗ್ರಂಥಗಳನ್ನು ತನ್ನ ವೆಂದು ಆರೋಪಿಸಿಕೊಳ್ಳುವುದು ಸುಲಭವಲ್ಲ. ಮುಂದೆ ಎಲ್ಲಾದರೂ ಅದರ ಇತರ ಹಸ್ತಪ್ರತಿಗಳು ಸಿಕ್ಕಬಹುದೆಂಬ ಭಯವು ಇದ್ದೇ ಇರುವುದು. ಇನ್ನು ಅರ್ವಾಚೀನರು ಪ್ರಾಚೀನ ಕವಿಗಳಿಗೆ ಸಮಾನವಾದ ಪ್ರತಿಭೆ ಯನ್ನು ಪಡೆಯಲಾರರೆಂಬ ತರ್ಕವೇ ಅಸಾಧುವಾದುದು; ಇದಕ್ಕೆ ಪ್ರಪಂ ಚದ ಚರಿತ್ರೆಯಲ್ಲಿ ಯಾವ ಆಧಾರವೂ ಸಿಕ್ಕುವುದಿಲ್ಲ. ಕಾಳಿದಾಸ ಷೇಕ್ಸ್ಪಿಯರ್, ಪಂಪ, ರನ್ನ ಮೊದಲಾದ ಮಹಾಕವಿಗಳು ಕೂಡ ಅವರವರು ಜೀವಿಸಿಕೊಂಡಿದ್ದ ಕಾಲದಲ್ಲಿ ಅರ್ವಾಚೀನರಾಗಿಯೇ ಇದ್ದರಲ್ಲವೇ? ಕಾಲದೇವಿಯ ಗರ್ಭದಲ್ಲಿ ಹಿಂದಿನವರನ್ನು ಮೀರಿಸತಕ್ಕ ಇನ್ನೂ ಎಂತೆಂತಹ ರತ್ನಗಳಿರುವುವೋ ಹೇಳುವವರು ಯಾರು?

೬. ಸಮುದಾಯದ ಮಾಘಣಂದಿ

ಇವನ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿದ್ದಾರೆ:—

"ಈತನು ಶಾಸ್ತ್ರಸಾರಸಮುಚ್ಚಯ, ಪದಾರ್ಥಸಾರ, ಇವುಗಳಿಗೆ ಕರ್ಣಾಟಕ ಟೀಕೆಯನ್ನು ಬರೆದಿದ್ದಾನೆ. ಇವನು ಜೈನಕವಿ; ಇವನ ಗುರುಪರಂಪರೆ ಹೀಗೆ ಹೇಳಿದೆ: ಶ್ರೀ ಮೂಲಸಂಘದ ಬಲಾತ್ಕಾರಗಣದ ವರ್ಧಮಾನ; ಶಿಷ್ಯ ಪದ್ಮನಂದಿ; ಸಧರ್ಮ ಶ್ರೀಧರಾಚಾರ್ಯ; ಶಿಷ್ಯ ವಾಸುಪೂಜ್ಯ; ಶಿಷ್ಯ ಶುಭಚಂದ್ರ; ಶಿಷ್ಯ ಅಭಯನಂದಿ; ಶಿಷ್ಯ ಅರ್ಹನಂದಿ; ಶಿಷ್ಯ ದೇವಚಂದ್ರ; ಶಿಷ್ಯ ಅಷ್ಟೋಪವಾಸಿ ಕನಕಚಂದ್ರ; ಶಿಷ್ಯ ನಯಕೀರ್ತಿ; ಶಿಷ್ಯ ಮಾಸೋಪವಾಸಿ ರವಿಚಂದ್ರ; ಶಿಷ್ಯ ಶ್ರುತಕೀರ್ತಿ; ಶಿಷ್ಯ ವೀರಣಂದಿ; ಶಿಷ್ಯ ಗಂಡವಿಮುಕ್ತ ನೇಮಿಚಂದ್ರ; ಶಿಷ್ಯ ಗುಣಚಂದ್ರ; ಶಿಷ್ಯ ಪಕ್ಷೋಪವಾಸಿ ಜಿನಚಂದ್ರ; ಶಿಷ್ಯ ವರ್ಧಮಾನ; ಶಿಷ್ಯ ಶ್ರೀಧರ; ಶಿಷ್ಯ ವಾಸುಪೂಜ್ಯ; ಶಿಷ್ಯ ಉದಯಚಂದ್ರ; ಶಿಷ್ಯ ಕುಮುದಚಂದ್ರ; ಶಿಷ್ಯ ಮಾಘಣಂದಿ (ಕವಿ).....................ಈತನು 1273 ರಲ್ಲಿ ದ್ರವ್ಯಸಂಗ್ರಹಸೂತ್ರಟೀಕೆಯನ್ನು ಬರೆದ ಬಾಲಚಂದ್ರಪಂಡಿತನ ಗುರುವಿನ ಗುರುವೆಂದು ಬೇಲೂರು 131 ನೆಯ ಶಾಸನದಿಂದ (1215) ತಿಳಿವುದರಿಂದಲೂ ರಾಮಾಯಣವನ್ನು ಬರೆದಿರುವ ಕುಮುದೇಂದುಕವಿ (ಸು. 1275), ಕುಮುದೇಂದುಗುರುವಿನ ಶಿಷ್ಯನಾದ ಈ ಮಾಘಣಂದಿಯನ್ನು ತನ್ನ ಗುರುವೆಂದು ಹೇಳುವುದರಿಂದಲೂ, ಸುಮಾರು 1260ರಲ್ಲಿ ಇದ್ದಿರಬಹುದು.........ಮಾಘಣಂದಿಯ ಶ್ರಾವಕಾಚಾರ ಎಂದು ಒಂದು ಗ್ರಂಥ ವಿದೆ. ಇದು ಶಕ 1175 ಎಂದರೆ 1253 ರಲ್ಲಿ ಬರೆದುದು. ಇದನ್ನೂ ಈ ಮಾಘಣಂದಿಯೇ ಬರೆದಿರಬಹುದು."—(ಕವಿಚರಿತೆ ಪ್ರಥಮಸಂಪುಟದ ದ್ವಿತೀಯ ಮುದ್ರಣ, ಪುಟ ೩೮೮-೩೮೯).

೧೨೭೩ ರಲ್ಲಿ ದ್ರವ್ಯಸಂಗ್ರಹಸೂತ್ರ ಟೀಕೆಯನ್ನು ಬರೆದ ಬಾಲಚಂದ್ರನು ಶಾಸ್ತ್ರಸಾರಸಮುಚ್ಚಯವೇ ಮೊದಲಾದ ಗ್ರಂಥಗಳ ಕರ್ತೃವಾದ ಮಾಘಣಂದಿಯ ಶಿಷ್ಯನ ಶಿಷ್ಯನೆಂದು ಬೇಲೂರು ೧೩೧ ನೆಯ ಶಾಸನದಿಂದ ತಿಳಿದುಬರುವದೆಂದು ಕವಿಚರಿತಕಾರರು ಇಲ್ಲಿ ಮೇಲೆ ಹೇಳಿರುವ ಅಭಿಪ್ರಾಯವು ಭ್ರಮಮೂಲವಾದುದು. ಶಾಸ್ತ್ರಸಾರಸಮುಚ್ಚಯವೇ ಮೊದಲಾದ ಗ್ರಂಥಗಳ ಕರ್ತೃವಾದ ಮಾಘಣಂದಿಯು ಮೂಲಸಂಘದ ಬಲಾತ್ಕಾರಗಣಕ್ಕೆ ಸೇರಿದವನೆಂದೂ, ಅವನು ಕುಮುದಚಂದ್ರನೆಂಬವನ ಶಿಷ್ಯನಾಗಿದ್ದನೆಂದೂ ಕವಿಚರಿತಕಾರರು ಮೇಲೆ ಹೇಳಿರುವದರಿಂದಲೇ ಸ್ಪಷ್ಟವಾಗುವುದಲ್ಲದೆ ನಾವು ಮುಂದೆ ನಿರ್ದೇಶಿಸುವ (ಹಳೇಬೀಡಿನ) ಒಂದು ಶಿಲಾಲೇಖನದಿಂದಲೂ ಕೂಡ ಸ್ಪಷ್ಟವಾಗುವುದು. ಬೇಲೂರಿನ ೧೩೧ನೆಯ ಶಿಲಾಲೇಖನದಲ್ಲಿ (ಈ ಶಿಲಾಲೇಖನವೂ ಹಳೇಬೀಡಿಗೆ ಸೇರಿದ ಬಸ್ತಿಹಳ್ಳಿಯಲ್ಲಿರುವುದು.) ಕೀರ್ತಿತನಾಗಿರುವ ಮಾಘಣಂದಿಯಾದರೋ ದೇಶೀಯಗಣಕ್ಕೆ ಸೇರಿದವನೆಂದು ಆ ಶಿಲಾಲೇಖನದಲ್ಲಿರುವ 'ಸ್ವಸ್ತಿ ಶ್ರೀ ಮೂಲಸಂಘ ದೇಶಿಯಗಣ

ಪುಸ್ತಕಗಚ್ಛ ಕೊಂಡಕುಂದಾನ್ವಯದಿಂಗಳೇಶ್ವರದ ಬಳಿಯ ಶ್ರೀ ಸಮುದಾಯದ† ಮಾಘನಂದಿ ಭಟ್ಟಾರಕದೇವರ ಪ್ರಿಯಶಿಷ್ಯರುಂ ಶ್ರೀಮನ್ನೇಮಿಚಂದ್ರಭಟ್ಟಾರಕ ದೇವರುಂ ಶ್ರೀಮದಭಯಚಂದ್ರ-ಸಿದ್ಧಾಂತಚಕ್ರವರ್ತಿಗಳುಂ ದೀಕ್ಷಾಗುರುಗಳುಂ ಶ್ರುತಗುರುಗಳುಮಾಗೆ ತಪಶ್ರುತಂಗಳಿಂ ಜಗದೊಳ್ ವಿಖ್ಯಾತಂಬೆತ್ತ ಶ್ರೀಮದ್ಬಾಲ ಚಂದ್ರಪಂಡಿತದೇವರು' ಎಂಬ ಪದಗಳಿಂದ ಸ್ಪಷ್ಟವಾಗುವುದಲ್ಲದೆ, ಇದೇ ಬಸ್ತಿ ಹಳ್ಳಿಯಲ್ಲಿರುವ ಬೇಲೂರು ೧೩೩ ನೆಯ ಶಿಲಾಲೇಖನದಿಂದಲೂ ಕೂಡ ಸ್ಪಷ್ಟವಾ ಗುವುದು. ಈ ಶಿಲಾಲೇಖನದಲ್ಲಿ

ಶ್ರೀಸಂಘುರ್ಕೈಕುಭೃತಿ ದೇಶಿಯಸದ್ಗಣಾಖ್ಯ
ಕಲ್ಪಾಂಘ್ರಿಪೋ ಲಸತಿ ಪುಸ್ತಕಗಚ್ಛಶಾಖಃ |
ಶ್ರೀಕುಂಡಕುಂದಮುನಿಪಾನ್ವಯಚಾರುಮೂಲಃ
ಸಾರೇಂಗಳೇಶ್ವರಬಲಿಪ್ರಬಳೋಪಶಾಖಃ ||

ಎಂದು ಉಪಕ್ರಮಿಸಿ ಕ್ರಮವಾಗಿ ಕುಲಭೂಷಣಸೈದ್ಧಾಂತಿಕ; ಅವನ ಶಿಷ್ಯನೂ ಊರ್ಜಿತಜಿನಾಲಯವನ್ನು ಮಾಡಿಸಿದ ಸಾಮಂತನಿಂಬದೇವನ ಗುರುವೂ ಆದ ಮಾಘನಂದಿಸೈದ್ಧಾಂತಿಕ; ಅವನ ಶಿಷ್ಯ ಶುಭನಂದಿಯಾದ ಗಂಧವಿಮುಕ್ತ (ಗಂಡ ವಿಮುಕ್ತ); ಅವನ ಶಿಷ್ಯ ಚಾರುಕೀರ್ತಿ; ಅವನ ಶಿಷ್ಯ ಸಮುದಾಯದ ಮಾಘ ಣಂದಿ; ಅವನ ಶಿಷ್ಯರು ನೇಮಿಚಂದ್ರಭಟ್ಟಾರಕ, ಅಭಯಚಂದ್ರಸೈದ್ಧಾಂತಿಕರು; ಇವರ ಶಿಷ್ಯ ಬಾಲಚಂದ್ರ; ಮತ್ತು ಇವನ ಶಿಷ್ಯ ಅಭಯಚಂದ್ರ ಎಂದು ಇಷ್ಟು ಮಂದಿ ಜೈನಗುರುಗಳು ಕೀರ್ತಿತರಾಗಿರುವರು. ಹೀಗೆಯೇ ಬೇಲೂರಿನ ೧೩೪ನೆಯ ಶಿಲಾಲೇಖನದಲ್ಲಿಯೂ ಕೂಡ ಮೇಲೆ ಕಂಡ ಬಾಲಚಂದ್ರನ ಗುರುವಿನ ಗುರು ವಾದ ಮಾಘನಂದಿಯು 'ಮೂಲಸಂಘ ದೇಶಿಯಗಣಪುಸ್ತಕಗಚ್ಛ ಕುಂಡಕುಂ ದಾನ್ವಯದ ಇಂಗಳೇಶ್ವರದ ಬಳಿಯ ಶ್ರೀ ಸಮುದಾಯದ ಮಾಘನಂದಿಭಟ್ಟಾರಕ ದೇವರ್' ಎಂದು ಕೀರ್ತಿತನಾಗಿರುವನು. ಹೀಗೆ ಬೇಲೂರಿನ ೧೩೧, ೧೩೩, ೧೩೪ನೆಯ ಶಿಲಾಲೇಖನಗಳಲ್ಲಿ* ಕೀರ್ತಿತನಾಗಿರುವ ಮಾಘನಂದಿ-ಭಟ್ಟಾರಕನು

---

† ಹೀಗೆ ಶಿಲಾಲೇಖನದಲ್ಲಿ 'ಶ್ರೀ ಸಮುದಾಯದ ಮಾಘನಂದಿ' ಎಂದು ಇದ್ದರೂ ಕೂಡ ಕವಿಚರಿತಕಾರರು 'ಶ್ರೀ' ಎಂಬ ಪದವನ್ನು ಬಿಟ್ಟು ಕೇವಲ ಸಮುದಾಯದ ಮಾಘಣಂದಿ ಎಂದು ಇವನನ್ನು ಕರೆಯುವುದಕ್ಕೆ ಕಾರಣವೇನೆಂಬುದು ನನಗೆ ಗೊತ್ತಿಲ್ಲ.

* ಈ ಬೇಲೂರು ೧೩೩ನೆಯ ಶಿಲಾಲೇಖನದಲ್ಲಿ ಉಕ್ತವಾಗಿರುವ ಕುಲಭೂಷಣನೇ ಮೊದ ಲಾದ ಜೈನಗುರುಗಳ ಪರಂಪರೆಯೇ ಶ್ರವಣಬೆಳ್ಗೊಳದ ಒಂದು ಶಿಲಾಲೇಖನದಲ್ಲಿಯೂ (ಹಳೇ ನಂಬರು ೪೧; ಹೊಸ ನಂಬರು ೬೫) ಕೂಡ ಉಕ್ತವಾಗಿರುವುದು. ಶ್ರವಣಬೆಳ್ಗೊಳದ ಶಾಸನ ಗಳನ್ನು ಪರಿಷ್ಕರಿಸಿ ಎರಡನೆಯ ಆವೃತ್ತಿ ಪ್ರಕಾಶಪಡಿಸಿರುವ ಕವಿಚರಿತಕಾರರಾದ ಮ|| ಆರ್.

ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಕುಂದಕುಂದಾನ್ವಯದ ಇಂಗಳೇಶ್ವರದ ಬಳಿಯ ಶ್ರೀಸಮುದಾಯಕ್ಕೆ ಸೇರಿದವನೆಂದೂ, ಗಂಡವಿಮುಕ್ತಸಿದ್ಧಾಂತದೇವನ ಶಿಷ್ಯನಾದ ಚಾರುಕೀರ್ತಿಯ ಶಿಷ್ಯನೆಂದೂ, ನೇಮಿಚಂದ್ರಭಟ್ಟಾರಕ ಅಭಯಚಂದ್ರಭಟ್ಟಾರಕರ ಗುರುವೆಂದೂ ಸ್ಪಷ್ಟವಾಗಿರುವುದಷ್ಟೆ. ಈ ಮಾಘನಂದಿಯು ಮೂಲಸಂಘದ ಬಲಾತ್ಕಾರಗಣಕ್ಕೆ ಸೇರಿದ ಕುಮುದಚಂದ್ರನ ಶಿಷ್ಯನಾದ ಶಾಸ್ತ್ರಸಾರಸಮುಚ್ಚಯವೇ ಮೊದಲಾದ ಗ್ರಂಥಗಳ ಕರ್ತೃವಾದ ಮಾಘನಂದಿಯಿಂದ ಭಿನ್ನನೆಂಬುದು ಸ್ವತಃ ವ್ಯಕ್ತವಾಗಿರುವುದು. ಆದುದರಿಂದ ಶಾಸ್ತ್ರಸಾರಸಮುಚ್ಚಯವೇ ಮೊದಲಾದ ಗ್ರಂಥಗಳ ಕರ್ತೃವಾದ ಮಾಘಣಂದಿಯನ್ನು 'ಸಮುದಾ

ನರಸಿಂಹಾಚಾರ್ಯರು ಈ ಪರಂಪರೆಯಲ್ಲಿ ಕೀರ್ತಿತರಾದ ಗುರುಗಳು ಇಂಥವರೆಂದು ಗುರುತು ಹಿಡಿಯದೆ (ಅವರು ಬರೆದಿರುವ ಆಂಗ್ಲ ಉಪೋದ್ಘಾತದ ೮೬ ನೇ ಪುಟದಲ್ಲಿರುವ 'Then follows another succession of gurus without any intimation as to its connection with the previous one' ಎಂಬ ವಾಕ್ಯವನ್ನು ನೋಡಿ) ಈ ಶಿಲಾಲೇಖನವನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವರು. ಈ ಶಿಲಾಲೇಖನದಲ್ಲಿ ಮೊದಲು

ಮೇಘಚಂದ್ರ-ತ್ರೈವಿದ್ಯ
|
ವೀರಣಂದಿ
|
ಅನಂತಕೀರ್ತಿ
|
ಮಲಧಾರಿ-ರಾಮಚಂದ್ರ
|
ಶುಭಚಂದ್ರ
|
ಪದ್ಮನಂದಿ — ಮಾಧವೇಂದು

ಎಂಬ ಗುರುಪರಂಪರೆಯು ಹೇಳಲ್ಪಟ್ಟಿರುವುದೆಂದೂ, ತದನಂತರ

ಕುಲಭೂಷಣ
|
ಮಾಘನಂದಿ
|
ಶುಭಚಂದ್ರ-ತ್ರೈವಿದ್ಯ
|
ಚಾರುಕೀರ್ತಿ
|
ಮಾಘನಂದಿ
|

ಯದ ಮಾಘಣಂದಿ' ಅಥವಾ 'ಶ್ರೀ ಸಮುದಾಯದ ಮಾಘಣಂದಿ' ಎಂದು ವ್ಯವಹರಿಸುವುದು ಅನುಚಿತವೆಂದೂ ಸಿದ್ಧವಾಯಿತು.

ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರಿಂದ ಬರೆಯಲ್ಪಟ್ಟಿರುವ ೧೯೧೦-೧೯೧೧ನೆಯ ವರ್ಷದ ಮೈಸೂರ್ ಆರ್ಕೆಯಲಾಜಿಕಲ್ ಸರ್ವೆ

ಅಭಯಶಶಿ

|

ಬಾಲೇಂದು

|

ರಾಮಚಂದ್ರ

ಎಂಬ ಗುರುಪರಂಪರೆಯು ಕೊಡಲ್ಪಟ್ಟಿರುವುದೆಂದೂ, ಈ ದ್ವಿತೀಯ ಪರಂಪರೆಯಲ್ಲಿ ಕೀರ್ತಿತರಾದ ಗುರುಗಳಿಗೂ ಪ್ರಥಮಪರಂಪರೆಯಲ್ಲಿ ಪ್ರೋಕ್ತರಾದವರಿಗೂ ಏನು ಸಂಬಂಧವೆಂದು ಹೇಳಲ್ಪಟ್ಟಿಲ್ಲವೆಂದೂ ಮ|| ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿರುವರು (ಉಕ್ತ ಉಪೋದ್ಘಾತದ ೮೬ನೆಯ ಪುಟ).

ಇದು ತಪ್ಪು. ಇಲ್ಲಿ ಮ|| ನರಸಿಂಹಾಚಾರ್ಯರು ಕೊಟ್ಟಿರುವ ಎರಡನೆಯ ಪರಂಪರೆಯ ಅಂತ್ಯದಲ್ಲಿ ಉಕ್ತನಾಗಿರುವ ರಾಮಚಂದ್ರನೇ ಅವರು ಕೊಟ್ಟಿರುವ ಒಂದನೆಯ ಪರಂಪರೆಯಲ್ಲಿ ನಾಲ್ಕನೆಯವನೂ ಶುಭಚಂದ್ರನ ಗುರುವೂ ಆದ ರಾಮಚಂದ್ರ-ಮಲಧಾರಿ ಎಂಬವನು. ಈ ರಾಮಚಂದ್ರ-ಮಲಧಾರಿಯೂ, ಇವನ ಶಿಷ್ಯ ಶುಭಚಂದ್ರನೂ, ಮತ್ತು ಈ ರಾಮಚಂದ್ರಮಲಧಾರಿಯ ಗುರುವಾದ ದ್ರವ್ಯಸಂಗ್ರಹಸೂತ್ರಟೀಕೆಯನ್ನು ಬರೆದ ಬಾಲಚಂದ್ರಪಂಡಿತನೂ, ಈ ಮೂವರೂ ಮೇಲೆ ಹೇಳಿದ ಬೇಲೂರು ೧೩೪ನೆಯ ಶಿಲಾಲೇಖನದಲ್ಲಿ ಕೀರ್ತಿತರಾಗಿರುವರಲ್ಲದೆ, ಈ ರಾಮಚಂದ್ರಮಲಧಾರಿಯು ಶಕವರ್ಷ ೧೨೨೨ನೆಯ ಶಾರ್ವರಿ ಸಂವತ್ಸರದ ಚೈತ್ರಬಹುಳ ತದಿಗೆ ಬೃಹವಾರದಂದು (ಎಂದರೆ, ಕ್ರಿ. ಶ. ೧೩೦೦ನೆಯ ಏಪ್ರಿಲ್ ೮ನೇ ತಾರೀಖು ಬೃಹಸ್ಪತಿವಾರದ ದಿವಸ) ಸ್ವರ್ಗಗತನಾದನೆಂದು ಕೂಡ ಈ ಶಿಲಾಲೇಖನದಲ್ಲಿ ಹೇಳಲ್ಪಟ್ಟಿರುವುದು. ಆದುದರಿಂದ ಶ್ರ. ಬೆ. ೪೧ (೬೫) ನೆಯ ಶಿಲಾಲೇಖನದಲ್ಲಿನ ಮೊದಲನೆಯ ಗುರುಪರಂಪರೆಯಲ್ಲಿ ಶುಭಚಂದ್ರನ ಗುರುವೆಂದು ಕೀರ್ತಿತನಾದ ಮಲಧಾರಿ-ರಾಮಚಂದ್ರನೂ, ಎರಡನೆಯ ಪರಂಪರೆಯಲ್ಲಿ ಅಭಯೇಂದುವಿನ (ಎಂದರೆ, ಅಭಯಚಂದ್ರನ) ಶಿಷ್ಯನಾದ ಬಾಲೇಂದುವಿನ (ಎಂದರೆ, ಬಾಲಚಂದ್ರನ) ಶಿಷ್ಯನೆಂದು ಹೇಳಲ್ಪಟ್ಟಿರುವ ರಾಮಚಂದ್ರನೂ ಅಭಿನ್ನರೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಹೀಗೆಯೇ ಈ ಶ್ರ. ಬೆ. ಶಿಲಾಲೇಖನದಲ್ಲಿ ಕುಲಭೂಷಣನೇ ಆದಿಯಾಗಿ ಬಾಲೇಂದುವಿನ (ಎಂದರೆ, ಬಾಲಚಂದ್ರನ) ಶಿಷ್ಯನಾದ ರಾಮಚಂದ್ರನವರೆಗೆ ಹೇಳಲ್ಪಟ್ಟಿರುವ ಗುರುಪರಂಪರೆಯೂ, ಬೇಲೂರು ೧೩೩, ೧೩೪ನೆ ಶಿಲಾಲೇಖನಗಳಲ್ಲಿ ಕುಲಭೂಷಣನೇ ಆದಿಯಾಗಿ ಶುಭಚಂದ್ರದೇವನವರೆಗೆ ಹೇಳಲ್ಪಟ್ಟಿರುವ ಗುರುಪರಂಪರೆಯೂ ಒಂದೇ ಎಂಬುದರಲ್ಲಿ ಕೂಡ ಯಾವ ಸಂದೇಹವೂ ಇಲ್ಲ. ಕೇವಲ, ಈ ಬೇಲೂರು ೧೩೩ನೆಯ ಶಿಲಾಲೇಖನದಲ್ಲಿ 'ಶುಭನಂದಿಯಾದ ಗಂಧವಿಮುಕ್ತದೇವನು (ಗಂಡವಿಮುಕ್ತದೇವನು)' ಎಂದು ಕೀರ್ತಿತನಾದ ಮಾಘನಂದಿ ಶಿಷ್ಯನು ಮೇಲಿನ ಶ್ರ. ಬೆ. ಶಾಸನದಲ್ಲಿ 'ಶುಭಚಂದ್ರ-ತ್ರೈವಿದ್ಯ' ನೆಂದು ಕೀರ್ತಿಸಲ್ಪಟ್ಟಿರುವನು. ಆದುದರಿಂದ

ವಾರ್ಷಿಕ ರಿಪೋರ್ಟಿನ ೪೮-೪೯ನೆಯ ಪುಟಗಳಲ್ಲಿ († ೧೦೬) ಹಳೇಬೀಡಿನಲ್ಲಿ ಬೆಣ್ಣೆಗುಡ್ಡದ ಉತ್ತರಕ್ಕೆ ಒಂದು ನೆಲಮಾಳಿಗೆಯಲ್ಲಿರುವ ಒಂದು ಶಿಲಾಲೇಖನದಲ್ಲಿ ಉಕ್ತವಾಗಿರುವ ವಿಷಯಗಳು ಸಂಕ್ಷೇಪದಿಂದ ನಿರೂಪಿಸಲ್ಪಟ್ಟಿರುವುವು. ಮೂಲ ಸಂಘದ ಬಲಾತ್ಕಾರಗಣದ ಶ್ರೀಧರ-ತ್ರೈವಿದ್ಯ ; ಅವನ ಶಿಷ್ಯ ಪದ್ಮನಂದಿ-ತ್ರೈವಿದ್ಯ ; ಅವನ ಶಿಷ್ಯ ವಾಸುಪೂಜ್ಯ-ಸಿದ್ಧಾಂತಿ ; ಅವನ ಶಿಷ್ಯ ಶುಭಚಂದ್ರ ಭಟ್ಟಾರಕ ; ಅವನ ಶಿಷ್ಯ ಅಭಯನಂದಿ ಭಟ್ಟಾರಕ ; ಅವನ ಶಿಷ್ಯರಾದ ಅರುಹನಂದಿಸಿದ್ಧಾಂತಿ, ದೇವಚಂದ್ರಸಿದ್ಧಾಂತಿ, ಅಷ್ಟೋಪವಾಸಿ ಕನಕಚಂದ್ರಸಿದ್ಧಾಂತಿ, ನಯಕೀರ್ತಿಸಿದ್ಧಾಂತಿ, ಮಾಸೋಪವಾಸಿ ರವಿಚಂದ್ರಸಿದ್ಧಾಂತಿ, ಹರಿಯನಂದಿ ಸಿದ್ಧಾಂತಿ, ಶ್ರುತಕೀರ್ತಿ-ತ್ರೈವಿದ್ಯ, ವೀರಣಂದಿಸಿದ್ಧಾಂತಿ, ಗಂಡವಿಮುಕ್ತ-ನೇ

ಈ ಮಾಘನಂದಿಯ ಶಿಷ್ಯನ ನಿಜವಾದ ಹೆಸರು 'ಶುಭಚಂದ್ರ' ಎಂದೂ, 'ಗಂಡವಿಮುಕ್ತದೇವ' ಎಂಬುದು ಇವನ ಉಪನಾಮವೆಂದೂ ಸಿದ್ಧವಾಯಿತು.

ಈ ಮಾಘನಂದಿಯು ಈ ಬೇಲೂರು ೧೩೩ನೆಯ ಶಾಸನದಲ್ಲಿ 'ಊರ್ಜಿತ ಜಿನಾಲಯ ಕಾರಕ-ನಿಂಬದೇವಸಾಮಂತನ ಶುವ್ರತಕ್ಕೆ ಗುರು' ಎಂದು ಹೊಗಳಲ್ಪಟ್ಟಿರುವುದರಿಂದ, ನಾವು ಮೇಲೆ (ಪುಟ ೧೧; ೪೬) ಪ್ರಸ್ತಾವಮಾಡಿರುವ ಮಾಘನಂದಿಯೇ ಆಗಿರುವನು. ಇವನ ಶಿಷ್ಯನಾದ 'ಶುಭಚಂದ್ರ' ಎಂಬ ಹೆಸರುಳ್ಳ ಗಂಡವಿಮುಕ್ತದೇವನೂ ಕೂಡ ನಾವು ಮೇಲೆ (ಪುಟ ೧೧; ೪೬) ಪ್ರಸ್ತಾವಮಾಡಿರುವ ಗಂಡವಿಮುಕ್ತಸಿದ್ಧಾಂತದೇವನೇ ಆಗಿರುವನು. ಈ ಬೇಲೂರಿನ ಶಾಸನದಲ್ಲಿಯೂ ಮತ್ತು ಶ್ರ.ಬೆ. ೪೧ (೬೫) ನೆಯ ಶಾಸನದಲ್ಲಿಯೂ ಮಾಘನಂದಿಯ ಗುರುವೆಂದು ಕೀರ್ತಿತನಾಗಿರುವ ಕುಲಭೂಷಣನು ವಾಸ್ತವವಾಗಿ ಮಾಘನಂದಿಯ ಗುರುವಿನ ಗುರುವಾಗಿದ್ದನೆಂಬುದು ಶ್ರ. ಬೆ. ೪೦ (೪೬) ನೆಯ ಶಾಸನದಿಂದ ವ್ಯಕ್ತವಾಗುವುದು. ಮಾಘನಂದಿಯ ನಿಜವಾದ ಗುರುವು ಕುಲಚಂದ್ರನೆಂಬುದು ಇದೇ ಶ್ರ.ಬೆ. ಶಾಸನದಿಂದಲೂ ಮೇಲೆ (ಪುಟ ೪೬) ನಿರ್ದಿಷ್ಟವಾದ ತೇರ್ದಾಳದ ಶಾಸನದಿಂದಲೂ ಸ್ಪಷ್ಟವಾಗುವುದು.

ಆದುದರಿಂದ ಪ್ರಕೃತ ಶ್ರ. ಬೆ. ೪೧ (೬೫) ನೆಯ ಶಾಸನದಲ್ಲಿ ಮೇಘಚಂದ್ರ, ವೀರಣಂದಿ, ಅನಂತಕೀರ್ತಿ ಮುನಿಗಳನ್ನು ಸ್ತುತಿಸುವ ಮೊದಲು ಐದು ಶ್ಲೋಕಗಳಿಗೆ ಒಂದು ಭಾಗವೆಂದೂ, ಉಳಿದುದೆಲ್ಲಾ ಇನ್ನೊಂದು ಭಾಗವೆಂದೂ ನಾವು ತಿಳಿಯಬೇಕು. ಈ ಎರಡನೆಯ ಭಾಗದಲ್ಲಿ ರಾಮಚಂದ್ರ-ಮಲಧಾರಿಯ ಶಿಷ್ಯನಾದ ಶುಭಚಂದ್ರಮುನಿಯು ಸ್ವರ್ಗಗತನಾದ ವಿಷಯವೂ, ಅವನ ಗುರುಪರಂಪರೆಯೂ, ಅವನ ಶಿಷ್ಯರ ಸ್ತುತಿಯೂ, ಅವರು ಇವನಿಗೆ ನಿಷಿದಿಗೆಯನ್ನು ಮಾಡಿಸಿದರೆಂಬ ವಿಷಯವೂ, ಇವೆಲ್ಲವೂ ಹೇಳಲ್ಪಟ್ಟಿರುವುವು.

† ಶ್ರವಣಬೆಳ್ಗೊಳದ ಶಾಸನಗಳ ಎರಡನೆಯ ಮುದ್ರಣದ ೧೬೬ (ರೋಮನ್), ೧೫೦ (ಕನ್ನಡ) ನೇ ಪುಟಗಳಲ್ಲಿ ಮುದ್ರಿತವಾಗಿರುವ ೩೪೮ನೆಯ ಶಾಸನದಲ್ಲಿಯೂ ಕೂಡ ಇದೇ ಗುರುಪರಂಪರೆಯೇ ಕೀರ್ತಿತವಾಗಿರುವುದು. ೧೯-೨೦ನೇ ಪಂಕ್ತಿಗಳಲ್ಲಿ ಮಧ್ಯಾಹ್ನಕಲ್ಪವೃಕ್ಷವಾಸುಪೂಜ್ಯಯತಿಯೂ, ೨೯-೩೦ನೇ ಪಂಕ್ತಿಗಳಲ್ಲಿ ಅಭಿನವಸಾರಚತುಷ್ಟಯಕರ್ತೃ ಸಿದ್ಧಾಂತಿಚಕ್ರವರ್ತಿ ಮಾಘನಂದಿಯೂ ಹೊಗಳಲ್ಪಟ್ಟಿರುವರು.

ಮಿಚಂದ್ರಭಟ್ಟಾರಕ, ಗುಣಚಂದ್ರಭಟ್ಟಾರಕ, ಜಿನಚಂದ್ರಭಟ್ಟಾರಕ, ವರ್ಧಮಾನಭಟ್ಟಾರಕ, ಶ್ರೀಧರಸಿದ್ಧಾಂತಿ, ವಾಸುಪೂಜ್ಯ-ತ್ರೈವಿದ್ಯ, ವಿದ್ಯಾನಂದಸ್ವಾಮಿ, ಕಟಕೋಪಾಧ್ಯಾಯ-ಶ್ರುತಕೀರ್ತಿಸಿದ್ಧಾಂತಿ, ವಾದಿವಿಶ್ವಾಸಘಾತಕ ಮಲೆಯಾಳ ಪಾಂಡ್ಯದೇವ, ನೇಮಿಚಂದ್ರಭಟ್ಟಾರಕ ಮತ್ತು ಮಧ್ಯಾಹ್ನಕಲ್ಪವೃಕ್ಷ ವಾಸುಪೂಜ್ಯಭಟ್ಟಾರಕರು; ಶ್ರೀಧರದೇವನ ಶಿಷ್ಯ ವಾಸುಪೂಜ್ಯ-ತ್ರೈವಿದ್ಯ; ಅವನ 'ಮಗ' (ಎಂದರೆ ಶಿಷ್ಯ) ಉದಯೇಂದುಸಿದ್ಧಾಂತಿ; ಅವನ 'ಮಗ' ಕುಮುದೇಂದುಯೋಗಿ, ಅವನ 'ಮಗ' ಮಾಘನಂದಿ—ಎಂದು ಬಲಾತ್ಕಾರಗಣದ ಈ ಗುರುಪರಂಪರೆಯನ್ನು ಸ್ತುತಿಸಿದನಂತರ, ಅಂತ್ಯದಲ್ಲಿ ಉಕ್ತನಾದ ಈ ಮಾಘನಂದಿಗೆ ನಿಶ್ಶಂಕಪ್ರತಾಪಚಕ್ರವರ್ತಿ ಹೊಯ್ಸಲಭುಜಬಲ ವೀರನಾರಸಿಂಹದೇವನು ಕ್ರಿ. ಶ. ೧೨೬೫ರಲ್ಲಿ ಕಲುಕಣಿನಾಡಿನ ಕಲ್ಲಂಗೆರೆ ಗ್ರಾಮವನ್ನು ಅದಕ್ಕೆ ಸೇರಿದ ೧೪ ಉಪಗ್ರಾಮುಗಳ ಸಹಿತವಾಗಿ ದಾನವಾಗಿ ಕೊಟ್ಟನೆಂದು ಈ ಶಾಸನದಲ್ಲಿ ಹೇಳಿರುವುದು. ಅಲ್ಲದೆ, ಈ ಮಾಘನಂದಿಯು ಅಭಿನವಸಾರಚತುಷ್ಟಯದ ಎಂದರೆ ಸಿದ್ಧಾಂತಸಾರ, ಶ್ರಾವಕಾಚಾರಸಾರ, ಪದಾರ್ಥಸಾರ ಮತ್ತು ಶಾಸ್ತ್ರಸಾರಸಮುಚ್ಚಯಗಳ ಕರ್ತೃವೆಂದೂ, ಚತುರ್ವಿಧಪಾಂಡಿತ್ಯಚಕ್ರವರ್ತಿ ಪರವಾದಿಗಂಡಭೇರುಂಡ ಕುಮುದಚಂದ್ರಪಂಡಿತನ ಗುರುವೆಂದೂ ಈ ಶಾಸನದಲ್ಲಿ ನಿರೂಪಿಸಲ್ಪಟ್ಟಿರುವದು.

ಹೀಗೆ ತಮ್ಮಿಂದಲೇ ಕಂಡುಹಿಡಿಯಲ್ಪಟ್ಟು ಅಭಿವರ್ಣಿತವಾದ ಈ ಶಿಲಾಲೇಖನದಲ್ಲಿ ಶಾಸ್ತ್ರಸಾರಸಮುಚ್ಚಯದ ಕರ್ತೃವಾದ ಮಾಘನಂದಿಯು ಬಲತ್ಕಾರಗಣದವನೆಂದೂ, ಕುಮುದೇಂದುಯೋಗಿಯ ಶಿಷ್ಯನೆಂದೂ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದ್ದರೂ ಕೂಡ, ಕವಿಚರಿತಕಾರರು ಇವನು ದೇಶೀಯಗಣದ ಪುಸ್ತಕಗಚ್ಛದ ಚಾರುಕೀರ್ತಿಪಂಡಿತನ ಶಿಷ್ಯನಾದ ಮಾಘನಂದಿಯಿಂದ ಅಭಿನ್ನನೆಂದು ಹೇಳಿರುವುದು ನಮಗೆ ಆಶ್ಚರ್ಯವನ್ನುಂಟುಮಾಡುವುದು. ಹೀಗೆಯೇ, ಈ ಮೇಲಿನ ಶಿಲಾಲೇಖನದಲ್ಲಿ ಈ ಮಾಘನಂದಿಯು ಕ್ರಿ. ಶ. ೧೨೬೫ ರಲ್ಲಿ ದಾನವನ್ನು ಪ್ರತಿಗ್ರಹಿಸಿದನೆಂದು ಸ್ಪಷ್ಟವಾಗಿ ಹೇಳಿರುವಾಗ, ಇವನ ಜೀವನಕಾಲವನ್ನು ನಿರ್ಧರಿಸುವುದಕ್ಕಾಗಿ ಕವಿಚರಿತಕಾರರು ಇದನ್ನು ಬಿಟ್ಟು ದ್ರವ್ಯಸಂಗ್ರಹಸೂತ್ರಟೀಕೆಯನ್ನು ಬರೆದ ಬಾಲಚಂದ್ರಪಂಡಿತನ, ಮತ್ತು ರಾಮಾಯಣವನ್ನು ಬರೆದ ಕುಮುದೇಂದುವಿನ ಪ್ರಸ್ತಾವವನ್ನು ಮಾಡಿರುವುದೂ ಕೂಡ ನಮಗೆ ವಿಚಿತ್ರವಾಗಿ ಕಾಣಿಸುವುದು.

ಈ ಮೇಲಿನ ಶಿಲಾಲೇಖನದಲ್ಲಿ ಶ್ರಾವಕಾಚಾರಸಾರವೆಂಬ ಗ್ರಂಥವನ್ನು ಈ ಮಾಘನಂದಿಯು ಬರೆದನೆಂದು ಹೇಳಿರುವುದಷ್ಟೆ. ಕವಿಚರಿತಕಾರರು ಹೇಳಿರುವ

ಮಾಘನಂದಿಕೃತವಾದ ಶ್ರಾವಕಾಚಾರವೆಂಬುದು ಪ್ರಾಯಶಃ ಇದೇ ಗ್ರಂಥವಾಗಿರಬೇಕು. ಈ ಗ್ರಂಥವನ್ನು ಇವನು ಶಕ ೧೧೭೫ ಎಂದರೆ ಕ್ರಿ. ಶ. ೧೨೫೩ ರಲ್ಲಿ ಬರೆದುದರಿಂದ, ಮೇಲೆ ಹೇಳಿದ ಇವನ ಇತರ ಮೂರು ಗ್ರಂಥಗಳೂ ಕೂಡ ಪ್ರಾಯಶಃ ಅದೇ ಕಾಲದಲ್ಲಿಯೇ, ಎಂದರೆ ಕ್ರಿ. ಶ. ೧೨೫೦—೧೨೫೫ ರಲ್ಲಿಯೇ ಬರೆಯಲ್ಪಟ್ಟಿರಬಹುದು.

ಶ್ರವಣಬೆಳ್ಗೊಳದ ೧೨೯ (೩೩೪) ನೆಯ ಶಿಲಾಲೇಖನದ ಉಪಕ್ರಮದಲ್ಲಿ

ಉಕ್ತಂ ಶ್ರೀಮೂಲಸಂಘೇಸ್ಮಿನ್ಬಲಾತ್ಕಾರಗ............

..............................ಶಾಸ್ತ್ರಸಾರಾಖ್ಯಶಾಸ್ತ್ರಕೃತ್ ||

ಎಂದು ಹೇಳಿ, ತದನಂತರ ಒಬ್ಬ ಕುಮುದಚಂದ್ರದೇವನನ್ನೂ ಒಬ್ಬ ಮಾಘನಂದಿಯನ್ನೂ ಹೊಗಳುವ ಶ್ಲೋಕಗಳು ಹೇಳಲ್ಪಟ್ಟು ಆಮೇಲೆ ಶ್ರೀಮನ್ಮಹಾಮಂಡಲಾಚಾರ್ಯರೂ, ಆಚಾರ್ಯವರ್ಯರೂ ಹೊಯ್ಸಲರಾಯರಾಜಗುರುಗಳೂ ಆದ ಶ್ರೀ ಮಾಘನಂದಿ-ಸೈದ್ಧಾಂತಚಕ್ರವರ್ತಿಗಳ ಕೆಲವು ಗುಡ್ಡುಗಳು ಒಂದು ಜಿನಾಲಯಕ್ಕೆ ಶಕವರ್ಷ ೧೨೦೫ನೆಯ ಚಿತ್ರಭಾನುಸಂವತ್ಸರದ ಶ್ರಾವಣ-ಸು ೧೦ ಬೃಹಸ್ಪತಿವಾರದಂದು ದತ್ತಿಯನ್ನು ಕೊಟ್ಟರೆಂದು ಹೇಳಲ್ಪಟ್ಟಿರುವುದು. ಈ ವಿಶೇಷಣಗಳೆಲ್ಲವೂ ಕುಮುದೇಂದುವಿನ ಶಿಷ್ಯನೂ, ಮೇಲೆ ನಾವು ನೋಡಿದಂತೆ ೧೨೬೫ ರಲ್ಲಿ ಹೊಯ್ಸಲ ಚಕ್ರವರ್ತಿಯಾದ ವೀರನರಸಿಂಹದೇವನಿಂದ ಪೂಜಿತನೂ, ಆದ ಬಲಾತ್ಕಾರಗಣದ ಶಾಸ್ತ್ರಸಾರಾದಿಗ್ರಂಥಗಳ ಕರ್ತೃವಾದ ಮಾಘನಂದಿಯನ್ನೇ ನಿರ್ದೇಶಿಸುವುವಷ್ಟೆ. ಈ ಮಾಘನಂದಿಯು ಮೇಲೆ ಹೇಳಲ್ಪಟ್ಟ ಶ್ರಾವಣಶುದ್ಧ ದಶಮಿಯಲ್ಲಿ, ಎಂದರೆ, ಕ್ರಿ. ಶ. ೧೨೮೨ ನೆಯ ಜೂಲೈ ೧೬ನೇ ತಾರೀಖು ಬೃಹಸ್ಪತಿವಾರದಲ್ಲಿ* ಜೀವಿಸಿದ್ದನೆಂದು ಈ ಶಿಲಾಲೇಖನದ ಪದಗಳಿಂದ ಸೂಚಿತವಾದಂತೆ ತೋರುವುದು.

ಆದುದರಿಂದ ಈ ಮಾಘನಂದಿಯು ಸಿದ್ಧಾಂತಸಾರ,† ಪದಾರ್ಥಸಾರ, ಶ್ರಾವಕಾಚಾರಸಾರ, ಮತ್ತು ಶಾಸ್ತ್ರಸಾರಸಮುಚ್ಚಯ ಎಂಬ ನಾಲ್ಕು ಗ್ರಂಥಗಳನ್ನು ಸುಮಾರು ಕ್ರಿ. ಶ. ೧೨೫೦—೧೨೫೫ ರಲ್ಲಿ ಬರೆದನೆಂದೂ ಅವನು ಕ್ರಿ. ಶ. ೧೨೮೨ ರಲ್ಲಿ ಕೂಡ ಜೀವಿಸುತ್ತಿದ್ದನೆಂದೂ ಕೂಡ ನಾವು ಹೇಳಬಹುದು.

---

* ಎಪಿಗ್ರಾಫಿಯ ಇಂಡಿಕ, ಸಂಪುಟ ೭, ಅನುಬಂಧ, ಪುಟ ೧೫೭, ನಂಬರು ೯೮೦ ನ್ನು ನೋಡಿ.

† ಈ ಗ್ರಂಥವನ್ನು ಕವಿಚರಿತಕಾರರು ಹೇಳಿಲ್ಲ. ಆದರೂ ಮೇಲೆ ಹೇಳಿದ ಹಳೇಬೀಡಿನ ಶಿಲಾಲೇಖನದಲ್ಲಿ ಈ ಗ್ರಂಥವು ಮಾಘನಂದಿ ಕೃತವೆಂದು ಹೇಳಲ್ಪಟ್ಟಿರುವುದರಿಂದ, ಇದರ ಹೆಸರನ್ನು ನಾವು ಮೇಲೆ ಮಾಘನಂದಿ ಕೃತಗ್ರಂಥಗಳಲ್ಲಿ ಸೇರಿಸಿರುವೆವು. ಪದಾರ್ಥಸಾರ, ಶ್ರಾವಕಾಚಾರಸಾರ, ಶಾಸ್ತ್ರಸಾರಸಮುಚ್ಚಯಗಳಂತೆಯೇ ಈ ಗ್ರಂಥವೂ ಕನ್ನಡದಲ್ಲಿ ಬರೆಯಲ್ಪಟ್ಟಿರಬೇಕೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ತಲಕಾಡು.

ತಲಕಾಡು ಮೈಸೂರು ದೇಶದ ಪ್ರಾಚೀನ ಪಟ್ಟಣಗಳಲ್ಲಿ ಒಂದಾಗಿದೆ. ಈಗ ಇದು ಮರಳ ಕಾಡಾಗಿದ್ದರೂ ಒಂದಾನೊಂದು ಕಾಲದಲ್ಲಿ ಪ್ರಬಲವಾದ ರಾಜ್ಯಕ್ಕೆ ರಾಜಧಾನಿಯಾಗಿತ್ತು. ಇದು ಮೈಸೂರಿನಿಂದ ೨೮ ಮೈಲಿಯ ದೂರದಲ್ಲಿ ಕಾವೇರಿಯ ಎಡತೀರದ ಮೇಲಿದೆ. ಕಾವೇರಿಯು ಈ ಡಿಸ್ಟ್ರಿಕ್ಟಿನಲ್ಲಿ ಪೂರ್ವಕ್ಕೆ ಹರಿದು ತಿರುಮಕೂಡ್ಲು-ನರಸಿಪುರದಲ್ಲಿ ಕಪಿಲಾನದಿಯನ್ನು ಸ್ವೀಕರಿಸಿ ತಟ್ಟನೆ ದಕ್ಷಿಣಾಭಿಮುಖವಾಗಿ ತಲಕಾಡಿನ ಮಗ್ಗುಲಲ್ಲಿಯೇ ಹೋಗಿ ಪುನಃ ಪೂರ್ವಾಭಿಮುಖವಾಗುತ್ತದೆ. ಅನಂತರ ಉತ್ತರಕ್ಕೆ ಹರಿದು ಶಿವಸಮುದ್ರಕ್ಕೆ ಹೋಗುತ್ತಗೆ.

ತಲಕಾಡು ೧೮೬೮ನೆ ಇಸವಿಯವರೆಗೂ ಅದೇ ಹೆಸರಿನ ತಾಲ್ಲೂಕಿಗೆ ಮುಖ್ಯ ಸ್ಥಳವಾಗಿತ್ತು ಆ ಇಸವಿಯಲ್ಲಿ ತಾಲ್ಲೂಕು ಕಚೇರಿಯು ತಿರುಮಕೂಡ್ಲು-ನರಸೀಪುರಕ್ಕೆ ಹೋದದ್ದಲ್ಲದೆ ೧೮೮೨ರಲ್ಲಿ ಈ ತಾಲ್ಲೂಕಿಗೂ ತಿರುಮಕೂಡ್ಲು-ನರಸೀಪುರದ ತಾಲ್ಲೂಕು ಎಂದೂ ಹೆಸರು ಕೊಡಲ್ಪಟ್ಟಿತು.

ಈ ಊರಿಗೆ ಸಂಸ್ಕೃತದಲ್ಲಿ ‘ ದಲವನಪುರ ’ ವೆಂದೂ ತಮಿಳಿನಲ್ಲಿ ತಲೈಕ್ಕಾಡು, ಎಂದೂ ಕನ್ನಡದಲ್ಲಿ ತಲೆಕಾಡು ಅಥವಾ ತಲಕಾಡು ಎಂದೂ ಹೆಸರು. ಚೋಳರು ಈ ಊರನ್ನು ಜಯಿಸಿದಾಗ ಇದಕ್ಕೆ ರಾಜರಾಜಪುರವೆಂದು ಹೆಸರಿಟ್ಟರು ; ಆದರೆ ಇದು ಬಹಳ ದಿವಸ ನಿಲ್ಲಲಿಲ್ಲ ; ಕ್ರಿ. ಶ. ೧೧೧೬ರಲ್ಲಿ ಚೋಳರು ಹೋದಮೇಲೆ ಹಳೆಯ ಹೆಸರೇ ಪುನಃ ಬಂದುನಿಂತಿತು.

ಈ ಊರಿಗೆ ಹೋಗುವುದಕ್ಕೆ ಮೂರು ದಾರಿಗಳಿವೆ. ಮೊದಲನೆಯದು —ತಿರುಮಕೂಡ್ಲು-ನರಸಿಪುರದಿಂದ ಹೋಗುವುದು ; ಇಲ್ಲಿಗೂ ಅಲ್ಲಿಗೂ ಎಂಟು ಮೈಲಿ ; ಈ ದಾರಿಯಲ್ಲಿ ತಿರುಮಕೂಡ್ಲು-ನರಸಿಪುರದ ಹತ್ತಿರ ಒಂದುಸಲ, ತಲಕಾಡಿನ ಹತ್ತಿರ ಒಂದುಸಲ, ಈ ರೀತಿ ಎರಡುಸಲ



ಕೀರ್ತಿನಾರಾಯಣಸ್ವಾಮಿ ದೇವಸ್ಥಾನ.

ಹೊಳೆಯನ್ನು ದಾಟಬೇಕಾಗುತ್ತದೆ. ಈ ಎರಡು ಕಡೆಗಳಲ್ಲಿಯೂ ಸೇತುವೆಯಿಲ್ಲದ್ದರಿಂದ ಹೊಳೆಯನ್ನು ದೋಣಿಯಲ್ಲಿ ಹಾಯಬೇಕು. ಎರಡನೆಯದು—ಶ್ರೀರಂಗಪಟ್ಟಣದಿಂದ ಬನ್ನೂರು ಮತ್ತು ಸೋಸಲೆಗಳ ಮಾರ್ಗವಾಗಿ ಹೋಗತಕ್ಕದ್ದು. ಇದು ಸುಮಾರು ೪೨ ಮೈಲಿಯಾಗುತ್ತದೆ. ಮೂರನೆಯದು—ಮದ್ದೂರಿನಿಂದ ಮಳವಳ್ಳಿ ಮತ್ತು ಶಿವಸಮುದ್ರಗಳ ಮಾರ್ಗವಾಗಿ ಹೋಗತಕ್ಕದ್ದು. ಇದು ಸುಮಾರು ಐವತ್ತು ಮೈಲಿಯಾಗುತ್ತದೆ. ಬೆಂಗಳೂರಿನಿಂದ ಬರತಕ್ಕವರಿಗೆ ಇದೇ ಅನುಕೂಲವಾದದ್ದು.

ತಲಕಾಡು ಹುಟ್ಟಿದ್ದು ಪ್ರಾಚೀನತೆಯ ಮಬ್ಬಿನಲ್ಲಿ ಮುಚ್ಚಿಹೋಗಿದೆ. ಶ್ರೀರಾಮರು ಲಂಕೆಗೆ ಹೋಗುವಾಗ ಇಲ್ಲಿ ತಂಗಿದ್ದರಂತೆ; ಸೂರ್ಯವಂಶಜನಾದ ದಿಲೀಪಚಕ್ರವರ್ತಿಯ ಮಗ ಸಗರನು ಹುಟ್ಟಿದ್ದು ಇಲ್ಲಿಯೇಯಂತೆ. ಸ್ಥಳಪುರಾಣವು ಸ್ಕಾಂದಪುರಾಣೋಕ್ತವಾದ ಗಜಾರಣ್ಯಕ್ಷೇತ್ರವು ಇದೇ ಎಂದು ಹೇಳುತ್ತದೆ. ಈ ಪುರಾಣದಿಂದ ತಿಳಿದುಬರುವ ಅಂಶಗಳೇನೆಂದರೆ :—

ಪೂರ್ವದಲ್ಲಿ ಇದು ಋಚೀಕ ಮಹಾಮುನಿಗಳ ಸಿದ್ಧಾಶ್ರಮವಾಗಿತ್ತು. ಕಾಶಿಯ ವಿಶ್ವೇಶ್ವರಸ್ವಾಮಿಯು ಸೋಮದತ್ತ ಋಷಿಗಳನ್ನೂ ಅವರ ಶಿಷ್ಯರನ್ನೂ ಈ ಕ್ಷೇತ್ರಕ್ಕೆ ಹೋಗಿ ತಪಸ್ಸುಮಾಡಬೇಕೆಂದು ನಿಯಮಿಸಿದನು. ಅವರು ಬರುತ್ತ ದಾರಿಯಲ್ಲಿ ಕಾಡಾನೆಗಳ ಕೈಗೆ ಸಿಕ್ಕಿ ಹತರಾದರು. ಸಾಯುವಾಗ ಅವರು ಆನೆಯ ಯೋಚನೆಯಲ್ಲಿಯೇ ಇದ್ದದ್ದರಿಂದ ಅವರೂ ಅವರ ಶಿಷ್ಯರೂ ಆನೆಯ ಜನ್ಮವನ್ನು ಪಡೆದು ಸಿದ್ಧಾಶ್ರಮವನ್ನು ತಲಪಿದರು. ಈ ಮಧ್ಯೆ ವಿಶ್ವೇಶ್ವರನು ಮಣಿಕರ್ಣಿಕೆಯೊಡನೆ ಸಿದ್ಧಾರಣ್ಯಕ್ಷೇತ್ರಕ್ಕೆ ಬಂದು ಶಾಲ್ಮಲೀವೃಕ್ಷ (ಬೂರುಗದ ಮರ)ದ ಬುಡದಲ್ಲಿ ನೆಲಸಿದನು. ಮಣಿಕರ್ಣಿಕೆಯು ಸ್ವಚ್ಛವಾದ ನೀರುಳ್ಳ "ಗೋಕರ್ಣತೀರ್ಥ" ವೆಂಬ ಸರಸ್ಸಾದಳು. ಆನೆಗಳಾಗಿದ್ದ ಸೋಮದತ್ತ ಮತ್ತು ಆತನ ಶಿಷ್ಯರು ಪ್ರತಿನಿತ್ಯವೂ ಗೋಕರ್ಣದಲ್ಲಿ ಸ್ನಾನಮಾಡಿ ತಾವರೆಗ

ಳನ್ನು ಕಿತ್ತು ಅವುಗಳಿಂದ ಶಾಲ್ಮಲಿಯ ಬುಡದಲ್ಲಿದ್ದ ಈಶ್ವರನನ್ನು ಆರಾಧಿಸುತ್ತಿದ್ದರು. ಇದನ್ನು ನೋಡಿದ 'ತಲ,' 'ಕಾಡ' ಎಂಬ ಇಬ್ಬರು ಬೇಡರು ಆ ಬೂರುಗದ ಮರದಲ್ಲಿ ಏನಿದೆಯೋ ನೋಡೋಣವೆಂದು ಅದನ್ನು ಕಡಿಯುತ್ತಿರಲು ಅವರ ಕೊಡಲಿಯು ಶಿವಲಿಂಗಕ್ಕೆ ತಗಲಿ ಅದರಿಂದ ಛಿಲ್ಲನೆ ರಕ್ತವು ಹೊರಟಿತು. ಇದನ್ನು ನೋಡಿ ಅವರಿಗೆ ಆಶ್ಚರ್ಯವಾಗಿ ಶಿವಲಿಂಗವನ್ನು ಒಡೆದ ಮಹಾಪಾತಕಕ್ಕೆ ಗುರಿಯಾದೆವಲ್ಲಾ ಎಂಬ ಗಾಬರಿಯಿಂದ ಮೂರ್ಛೆಹೋದರು. ಸ್ವಲ್ಪ ಹೊತ್ತಿನಮೇಲೆ ಎಚ್ಚೆತ್ತು ತಮ್ಮ ಅಪರಾಧವನ್ನು ಕ್ಷಮಿಸಬೇಕೆಂದು ದೇವರನ್ನು ಪ್ರಾರ್ಥಿಸಲು, ರಕ್ತಬಂದ ಕಡೆಗೆ ಬೂರಗದ ಗಿಡದ ಹಾಲನ್ನು ಸವರಬೇಕೆಂದು ಒಂದು ಅಶರೀರವಾಣಿಯು ಕೇಳಿಸಿತು. ಹಾಗೇ ಮಾಡಲು ಕೂಡಲೆ ವ್ರಣವು ವಾಸಿಯಾಗಿಹೋಯಿತು. ಈ ಮಧ್ಯೆ ಶಿವಲಿಂಗದಿಂದ ಹರಿದ ರಕ್ತವು ಹಾಲಾಗಿತ್ತು; ಅದನ್ನು ದೇವರ ಆಜ್ಞೆಯನುಸರಿಸಿ ಪಾನಮಾಡಲು ಅವರು ತತ್ಕ್ಷಣವೇ ಪ್ರಮಥಗಣಗಳಾದರು.

ಈ ಸ್ಥಳಕ್ಕೆ ಅಲ್ಲಿಂದ ಮುಂದೆ ಗಜಾರಣ್ಯಕ್ಷೇತ್ರವೆಂದೂ, ಈ ಬೇಡರ ಹೆಸರನ್ನು ಅನುಸರಿಸಿ ತಲಕಾಡೆಂದೂ ಹೆಸರಾಯಿತು. ವೀರಭದ್ರ ದೇವಾಲಯದ ಮುಂದೆ ಇಂದಿಗೂ ಇರುವ ಎರಡು ಶಿಲಾವಿಗ್ರಹಗಳು ಅವರ ಪ್ರತಿಮೆಗಳೆಂದು ತೋರಿಸುತ್ತಾರೆ. ಈಶ್ವರನು ಔಷಧವನ್ನು ತಾನೇ ಹೇಳಿದ್ದರಿಂದ ವೈದ್ಯೇಶ್ವರನೆಂದು ಪ್ರಸಿದ್ಧನಾದನು. ಆ ದೇವರೇ ಉತ್ತರವಾಹಿನಿಯ ದಡದಮೇಲೆ ಅರ್ಕೇಶ್ವರನಾಗಿ ಉದ್ಭವಿಸಿ ಸೂರ್ಯನಿಂದಲೂ, ಪೂರ್ವವಾಹಿನಿಯ ದಡದಮೇಲೆ ಪಾತಾಳೇಶ್ವರನಾಗಿ ಉದ್ಭವಿಸಿ ವಾಸುಕಿಯಿಂದಲೂ, ದಕ್ಷಿಣವಾಹಿನಿಯ ದಡದಮೇಲೆ ಸೈಕತೇಶ್ವರನಾಗಿ ಉದ್ಭವಿಸಿ ಬ್ರಹ್ಮನಿಂದಲೂ, ಪಶ್ಚಿಮವಾಹಿನಿಯ ದಡದಮೇಲೆ ಮಲ್ಲಿಕಾರ್ಜುನನಾಗಿ ಉದ್ಭವಿಸಿ ಕಾಮಧೇನುವಿನಿಂದಲೂ ಪೂಜಿತನಾದನು. ಈ ಐದುಲಿಂಗಗಳೂ ಈಶ್ವರನ ಐದುಮುಖಗಳೆಂದು ಭಾವಿಸಲ್ಪಟ್ಟಿರುವುವು.



ವೈದ್ಯೇಶ್ವರ ದೇವಾಲಯ.

ಇವುಗಳಲ್ಲಿ ಒಂದೊಂದರ ಅರ್ಚನೆಗೂ ಬೇರೆಬೇರೆ ದಿವಸಗಳು ನಿರ್ದೇಶಿಸಲ್ಪಟ್ಟಿವೆ. ವೃಶ್ಚಿಕಮಾಸದಲ್ಲಿ ಕಾರ್ತಿಕ-ಸೋಮವಾರ-ಅಮಾವಾಸ್ಯೆಯೂ ಶೋಭನ ನಾಮ ಯೋಗವೂ ಸೇರಿದ ದಿವಸ ಐದು ಲಿಂಗಗಳನ್ನೂ ದರ್ಶನ ಮಾಡಿ ಅರ್ಚನೆಮಾಡುವುದು ಮಹಾಪುಣ್ಯಪ್ರದವಾದದ್ದೆಂದು ಹೇಳಲ್ಪಟ್ಟಿದೆ. ಇದೇ ಪಂಚಲಿಂಗದರ್ಶನ ಮಹೋತ್ಸವ.

ಮೈಸೂರುದೇಶದಲ್ಲಿ ಅಲ್ಲಲ್ಲಿಯೇ ಸಿಕ್ಕುವ ಶಾಸನಗಳನ್ನು ನೋಡಿದರೆ ಮೈಸೂರಿನ ಪ್ರಾಚೀನಚರಿತ್ರೆಯಲ್ಲಿ ತಲಕಾಡಿಗೆ ಬಹು ಪ್ರಾಶಸ್ತ್ಯವಿತ್ತೆಂದು ತಿಳಿಯಬಹುದಲ್ಲದೆ, ಅವುಗಳು ತಲಕಾಡಿನ ವಿಚಾರವಾಗಿ ಹೇಳುವ ಅಂಶಗಳಿಂದ ಅದರ ಅಭಿವೃದ್ಧಿನಾಶಗಳನ್ನು ಸಂಬದ್ಧವಾಗಿರುವಂತೆ ಗೊತ್ತುಮಾಡಲೂಬಹುದು. ಕ್ರಿ. ಶ. ಮೂರನೆಯ ಶತಮಾನದ ಆದಿಭಾಗದಲ್ಲಿ ಆಳುತ್ತಿದ್ದ ಗಂಗರಾಜರ ಸಂಬಂಧವಾಗಿ ತಿಳಿದುಬಂದಿರುವುದೇ ನಂಬಿಕೆಗೆ ಅರ್ಹವಾದ ಬಹು ಪ್ರಾಚೀನಸಂಗತಿ. ಆಗ ಕ್ರಿ. ಶ. ೨೪೭ ರಿಂದ ೨೬೬ ರ ವರೆಗೆ ಅಲ್ಲಿ ಹರಿವರ್ಮನು ಆಳುತ್ತಿದ್ದನೆಂದು ಗೊತ್ತಾಗುತ್ತದೆ. ಎಂಟನೆಯ ಶತಮಾನದಲ್ಲಿ ಆಳುತ್ತಿದ್ದ ಗಂಗರಾಜನಾದ ಶ್ರೀಪುರುಷನ ಆಳಿಕೆಯಲ್ಲಿ ತಲಕಾಡುರಾಜ್ಯವು ಅತ್ಯುನ್ನತಸ್ಥಿತಿಯಲ್ಲಿದ್ದಂತೆ ತೋರುತ್ತದೆ. ಒಂಬತ್ತನೆಯ ಶತಮಾನದಹೊತ್ತಿಗೆ, ಗಂಗರಾಜರೇ ಸಾಮಂತರಾಗಿ ಆಳುತ್ತಿದ್ದರೂ, ತಲಕಾಡು ರಾಷ್ಟ್ರಕೂಟರಾಜ್ಯಕ್ಕೆ ಸೇರಿಹೋಗಿತ್ತು. ರಾಷ್ಟ್ರಕೂಟರು ಕ್ರಿ.ಶ. ೯೭೨ ರಲ್ಲಿ ಚಾಳುಕ್ಯರಿಂದ ಪರಾಜಿತರಾದಮೇಲೆ ಗಂಗರು ಚೋಳರ ಅಧೀನರಾದರು. ಪೆರ್ಮಾನಡಿ ಗಂಗರಾಜನು ಕ್ರಿ.ಶ. ೯೯೬ ರಲ್ಲಿ ಕರ್ಣಾಟರಾಜನಾಗಿದ್ದನೆಂದೂ ಅವನನ್ನು ಒಂದನೆಯ ರಾಜರಾಜನ ಮಗನಾದ ರಾಜೇಂದ್ರಚೋಳನು ಜಯಿಸಿದನೆಂದೂ ಶಾಸನಗಳು ಹೇಳುತ್ತವೆ. ಈ ಜಯದ ಜ್ಞಾಪಕಾರ್ಥವಾಗಿ ಈವೂರಿಗೆ ರಾಜರಾಜಪುರವೆಂಬ ಹೆಸರನ್ನು ಕೊಟ್ಟು, ರಾಜೇಂದ್ರಚೋಳನು ತಾನು "ಗಂಗೈಕೊಂಡ ಚೋಳ" ಎಂಬ ಬಿರುದನ್ನು ಧರಿಸಿದನು.



ಸೋಮಗಿರಿ ಅಥವಾ ಮುಡುಕುತೊರೆ ಬೆಟ್ಟ.


ವಿಕ್ರಮಚೋಳನು ಆಳುತ್ತಿರುವಾಗ ೧೧೧೬ ರಲ್ಲಿ ಹೊಯಿಸಳ ವಿಷ್ಣುವರ್ಧನನ ಆಶ್ರಯದಲ್ಲಿದ್ದ ಗಂಗವಂಶೀಯನಾದ ಗಂಗರಾಜನೆಂಬ ವನು ತಲಕಾಡನ್ನು ಪುನಃ ಜಯಿಸಿದನು. ತಲಕಾಡು ಹೊಯಿಸಳರ ದಕ್ಷಿಣರಾಜಧಾನಿಯಾಯಿತು. ವಿಷ್ಣುವರ್ಧನನು "ತಲಕಾಡು ಗೊಂಡ" ಎಂಬ ಬಿರುದನ್ನು ಕೈಕೊಂಡನು. ಇಲ್ಲಿಂದ ಮುಂದೆ ೧೪ ನೆಯ ಶತಮಾನದ ಮಧ್ಯದಲ್ಲಿ ವಿಜಯನಗರದ ರಾಜರು ಜಯಿಸುವವರೆಗೂ ಇದು ಹೊಯಿಸಳರ ವಶದಲ್ಲಿಯೇ ಇತ್ತು. ಮೂರನೆಯ ಬಲ್ಲಾಳನ ಕಾಲದಲ್ಲಿ (ಕ್ರಿ.ಶ. ೧೨೯೧-೧೩೪೨) ಅವನ ಪ್ರಧಾನಿಯಾದ ಪೆರುಮಾಳ್ ಡಣಾಯಕನು ತಲಕಾಡಿನಹತ್ತಿರವೇ ಹೊಳೆಯ ದಡದಮೇಲೆ ಇರುವ ಮಾಲಂಗಿ ಎಂಬ ಊರಿನಲ್ಲಿ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅದಕ್ಕೆ ಜಹಗೀರಿಗಳನ್ನು ಬಿಟ್ಟನು. ೧೩೮೪ ರಲ್ಲಿ ರಾಮದೇವನೆಂಬ ಸಾಳ್ವರಾಜನು ತಲಕಾಡಿನಲ್ಲಿ ಅಧಿಕಾರಿಯಾಗಿ ಆಳುತ್ತಿದ್ದಂತೆಯೂ ಅವನು ತುರುಕರೊಡನೆ ಯುದ್ಧಮಾಡುತ್ತಿದ್ದಾಗ ಕೋತಕೊಂಡದಲ್ಲಿ ಮಡಿದನೆಂದೂ ಗೊತ್ತಾಗುತ್ತದೆ. ೧೪೩೯ ರಲ್ಲಿ ತಲಕಾಡಿನ ಅಧಿಕಾರಿಯಾಗಿದ್ದ ಪೆರುಮಾಳದೇವರಸನು ಎರಡನೆಯ ದೇವರಾಯನ ಆಳಿಕೆಯಲ್ಲಿ ಕೀರ್ತಿನಾರಾಯಣಸ್ವಾಮಿಗೆ ಭೂಮಿಯನ್ನು ಬಿಡಿಸಿಕೊಟ್ಟನು.

ಹೀಗೆಯೇ ೧೬೧೨ ರ ವರೆಗೆ ತಲಕಾಡು ವಿಜಯನಗರದ ರಾಜರ ಅಧೀನದಲ್ಲಿಯೇ ಇತ್ತು. ಆಗ ಬೆಟ್ಟದ ಚಾಮರಾಜವೊಡೆಯರ ತಮ್ಮಂದಿರಾದ ರಾಜವೊಡೆಯರು ಇದನ್ನು ಅವರಿಂದ ಕಿತ್ತುಕೊಂಡರು. ಈ ಸಂದರ್ಭದಲ್ಲಿ ನಡೆದ ಕೆಲವು ಸಂಗತಿಗಳನ್ನು "ವಂಶರತ್ನಾಕರವು" ಈರೀತಿ ತಿಳಿಸುತ್ತದೆ :—

"ಶ್ರೀರಂಗಪಟ್ಟಣವೂ ಸಿಂಹಾಸನವೂ ಬಂದದ್ದು :—ಅನಂತರದಲ್ಲಿ ಶ್ರೀರಂಗರಾಯರಿಗೆ ಚಿಕಿತ್ಸೆಗೆ ಅಸಾಧ್ಯವಾದ ಬೆನ್ನುಫಣಿಯೆಂಬ ವ್ರಣಜಾಡ್ಯವು ಸಂಭವಿಸಿದ್ದರಿಂದ ಅವರು ಇನ್ನುಮೇಲೆ ತಮ್ಮ ದೇಹವು

ನಿಲ್ಲುವುದಿಲ್ಲವೆಂದು ತಿಳಿದು...ರಾಜಒಡೆಯರವರನ್ನು ಕರೆಯಕಳುಹಿಸಿ... ಶ್ರೀರಂಗಪಟ್ಟಣವನ್ನೂ ಸಿಂಹಾಸನವನ್ನೂ ಸಹಾ ಕೊಟ್ಟು ಪತ್ನಿಯರಾದ ಅಲಮೇಲಮ್ಮನವರು ರಂಗಮ್ಮನವರಿಂದೊಡಗೂಡಿ ತಲಕಾಡು ಸಮೀಪದ ಲ್ಲಿರುವ ಮಾಲಂಗಿಗೆ ಹೋಗಿ ಅಲ್ಲಿ ಕೆಲವು ದಿನಗಳಿದ್ದು ಕೀರ್ತಿನಾರಾಯಣ ಸ್ವಾಮಿಯವರ ಪಾದದಲ್ಲಿ ಐಕ್ಯವಾದರು.''

''ಅಲಮೇಲಮ್ಮನವರು ಮಾಲಂಗೀಮಡುವನ್ನು ಪ್ರವೇಶಿಸಿದ ವಿಚಾರ :—ರಾಜಒಡೆಯರವರು...ಸಿಂಹಾಸನಾರೋಹಣವನ್ನು ಮಾಡಿ ...ಪೃಥ್ವೀಸಾಮ್ರಾಜ್ಯವನ್ನು ಗೆಯ್ಯುತಿದ್ದರು. ಆಗ ರಂಗಸ್ವಾಮಿ ದೇವ ಸ್ಥಾನದ ಅಧಿಕಾರಿಯು ರಾಜಒಡೆಯರವರ ಬಳಿಗೆ ಬಂದು ಪೂರ್ವ ದಿಂದಲೂ ರಂಗನಾಯಕಿಅಮ್ಮನವರಿಗೆ ಶುಕ್ರವಾರ ಮಂಗಳವಾರಗಳಲ್ಲಿ ಅಲಂಕಾರವನ್ನು ಮಾಡುತ್ತಿದ್ದ ದೊಡ್ಡ ಮುತ್ತಿನ ಮೂಗುತಿ ಮುಂತಾದ ರತ್ನಪಡಿ ನಗಗಳನ್ನು ಶ್ರೀರಂಗರಾಯನ ಪತ್ನಿಯಾದ ಅಲಮೇಲಮ್ಮನವರು ಕೊಟ್ಟು ಅಲಂಕಾರವನ್ನು ಮಾಡಿಸಿ ಪುನಃ ತರಿಸಿಕೊಳ್ಳುತ್ತಿದ್ದರೆಂತಲೂ ಅವುಗಳನ್ನು ಈಗಲೂ ಅಪ್ಪಣೆಕೊಡಿಸಬೇಕೆಂತಲೂ ಬಿನ್ನವಿಸಿದನು. ರಾಜ ಒಡೆಯರವರು ಬೊಕ್ಕಸದ ಅಧಿಕಾರಿಯನ್ನು ಕರೆಯಿಸಿ ವಿಚಾರಿಸಲಾಗಿ ಅಲಮೇಲಮ್ಮನವರು ಸಂಗಡಲೇ ತೆಗೆದುಕೊಂಡುಹೋಗಿ ಇದ್ದಾರೆಂದು ಅವನು ಶ್ರುತಪಡಿಸಿದನು. ಅನಂತರದಲ್ಲಿ ರಾಜವೊಡೆಯರು ರಂಗನಾಯಕಿ ಅಮ್ಮನವರಿಗೆ ಅಲಂಕಾರಾರ್ಥವಾಗಿ ಕೊಟ್ಟಿದ್ದ ಆಭರಣಗಳನ್ನು ಈಗಲೂ ಕೊಟ್ಟುಕಳುಹಿಸಬೇಕೆಂದು ಅಲಮೇಲಮ್ಮನವರಿಗೆ ಅಪ್ಪಣೆಕೊಟ್ಟು ಕಳು ಹಿಸಿದರು. ಆಕೆಯು ಕೊಡುವುದಿಲ್ಲವೆಂದು ಹೇಳಿ ಕಳುಹಿಸಲು, ರಾಜ ವೊಡೆಯರವರು ರಂಗನಾಯಕಿಅಮ್ಮನವರಿಗೆ ಆ ಆಭರಣಗಳು ಶಾಶ್ವತ ವಾಗಿ ಇರಬೇಕೆಂದು ಯೋಚಿಸಿ ತಮ್ಮ ಅಧಿಕಾರಿಗಳನ್ನು ಕರೆದು 'ಈಗ ನಿಮಗೆ ಆಭರಣಗಳಿಂದ ಉಪಯುಕ್ತವಿಲ್ಲ. ರಂಗನಾಯಕಿಅಮ್ಮನವರಿಗೆ ಕೊಟ್ಟರೆ ನಿಮ್ಮ ಯಶಸ್ಸು ಬಹುಕಾಲಪರ್ಯಂತವೂ ಇರುವುದು. ಇದಕ್ಕೂ



ವಿಜಯಾಪುರದಲ್ಲಿರುವ ಅರ್ಕೇಶ್ವರದೇವಾಲಯ.

ಕೊಡದೆ ಇದ್ದಪಕ್ಷದಲ್ಲಿ ಬಲಾತ್ಕಾರದಿಂದ ತರಿಸತಕ್ಕದ್ದು ಸ್ವಧರ್ಮವಾಗಿದೆ' ಎಂದು ಆಕೆಯೊಡನೆ ಖಂಡಿತೋಕ್ತಿಯನ್ನು ಹೇಳಿ ತೆಗೆದುಕೊಂಡುಬನ್ನಿ' ಎಂದು ಪುನಃ ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಆ ಮಾತನ್ನು ಕೇಳಿ ಅಲಮೇಲಮ್ಮನವರು ದೇವತಾವಿಷಯವಾಗಿ ಹೇಳಿ ಕಳುಹಿಸಿದರೆಂದು ತಿಳಿಯದೆ ಯುಕ್ತಾಯುಕ್ತಪರಿಜ್ಞಾನವಿಲ್ಲದೆ ಸ್ತ್ರೀಚಾಪಲ್ಯಾಸೂಯಾ ಬುದ್ಧಿಯಿಂದ ರಾಜಒಡೆಯರ ವಿಷಯವಾಗಿ ಸಹಿಸಲಶಕ್ಯವಾದ ಕಠಿಣೋಕ್ತಿಯನ್ನು ಹೇಳಿ ಮೂಗುತಿಮಾತ್ರ ಕೊಟ್ಟು ಕಡಮೆ ಒಡವೆಗಳನ್ನೆಲ್ಲ ಮಡುಲಿನಲ್ಲಿ ಕಟ್ಟಿಕೊಂಡು ಮಾಲಂಗಿ ಮಡುವಿನಲ್ಲಿ ಪ್ರವೇಶಮಾಡಿದರು.

ಅನಂತರದಲ್ಲಿ ರಾಜಒಡೆಯರವರು ಈ ವೃತ್ತಾಂತವನ್ನು ಕೇಳಿ ನಾವು ದೇವತಾವಿಷಯವಾಗಿ ಹೇಳಿಕಳುಹಿಸಿದ್ದಕ್ಕೆ ಈಕೆಯು ಇಂಥಾ ಅಕೃತ್ಯವನ್ನು ಮಾಡಿದಳಲ್ಲಾ ಎಂದು ಚಿಂತಿಸುತ್ತಿದ್ದರು. ಹೀಗಿರುವಲ್ಲಿ ಆದಿನ ರಾತ್ರಿ ಅಲಮೇಲಮ್ಮನವರು ರಾಜಒಡೆಯರವರ ಸ್ವಪ್ನದಲ್ಲಿ ಪ್ರತಿಬಂಧರೂಪವಾಗಿ ಕಾಣಿಸಿಕೊಳ್ಳಲು ರಾಯರು ಆಕ್ಷಣವೇ ಎದ್ದು ತಮ್ಮ ಪತ್ನಿಯರಾದ ವೀರಾಜಮ್ಮಣ್ಣಿಯವರು ಮುಂತಾದವರೊಡನೆ ಸ್ವಪ್ನವೃತ್ತಾಂತವನ್ನು ಹೇಳಿ ಪ್ರತಿಬಂಧದ ಬಾಧೆಯನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಅಲಮೇಲಮ್ಮನವರ ರೂಪದಿಂದ ಒಂದು ಚಿನ್ನದ ಪ್ರತಿಮೆಯನ್ನು ಮಾಡಿಸಿ ಪ್ರತಿನಿತ್ಯದಲ್ಲೂ ಆ ಪ್ರತಿಮೆಗೆ ಪೂಜೆನಡೆಯುವಂತೆ ಕಟ್ಟುಮಾಡಿಸಿದ್ದಲ್ಲದೆ ಮಹಾನವಮಿಯದಿನ ಅರಮನೆಯಲ್ಲಿ ಆ ಸ್ತ್ರೀಪ್ರತಿಮೆಗೆ ಆಭರಣಗಳನ್ನು ಧರಿಸಿ ಅತಿನೇಮದಿಂದ ಪೂಜೆಮಾಡಿ ಅನೇಕ ಶಾಕಪಾಕ ಭಕ್ಷ್ಯಭೋಜ್ಯ ನೈವೇದ್ಯಗಳನ್ನು ಮಾಡಿಸಿ ಎಲ್ಲರೂ ಕಾಣಿಕೆಗಳನ್ನು ಕೊಟ್ಟು ಭಯಭಕ್ತಿಗಳಿಂದ ನಡೆಯುತ್ತೇವೆಂದು ಪ್ರಾರ್ಥನೆಯನ್ನು ಮಾಡಿ ಆದಿನ ಕಾಣಿಕೆಯನ್ನು ಕಟ್ಟಿ ಈ ಸಾಧಾರಣಸಂವತ್ಸರದ ಮಹಾನವಮಿಯು ಮೊದಲು ನಮ್ಮ ವಂಶಪಾರಂಪರ್ಯವಾಗಿ ಇದೇಮೇರೆಗೆ ನಡೆಯುತ್ತಿರಲಿ ಎಂದು ನಿಬಂಧನೆಯನ್ನು ಮಾಡಿದರು.''—ವಂಶರತ್ನಾಕರ ಪುಟ ೨೭, ೩೧-೩೩.

ಹಿಂದಿದ್ದ ತಲಕಾಡು ಪಟ್ಟಣವು ಈಗ ಒಂದುಮೈಲಿ ಉದ್ದಕ್ಕಿಂತಲೂ ಹೆಚ್ಚಾಗಿ ಬೆಟ್ಟದಹಾಗೆ ಬಿದ್ದಿರುವ ಮರಳಿನಕೆಳಗೆ ಸ್ವಲ್ಪ ಹೆಚ್ಚು ಕಡಿಮೆ ಪೂರ್ತಿಯಾಗಿ ಹೂತುಹೋಗಿದೆ. ಇದರಲ್ಲೆಲ್ಲಾ ಕಣ್ಣಿಗೆ ಕಾಣಿಸುತ್ತಿರುವುದು ಅಲ್ಲೊಂದು ಇಲ್ಲೊಂದರಂತೆ ಎಲ್ಲೋ ಎರಡುಮೂರು ದೇವಸ್ಥಾನಗಳು ಮಾತ್ರ. ಹೀಗೆ ಸುಮಾರು ಮುವ್ವತ್ತು ದೇವಸ್ಥಾನಗಳು ಮರಳಿನೊಳಗೆ ಹೂತುಹೋಗಿವೆಯೆಂದು ಹೇಳುತ್ತಾರೆ. ಈ ಮರಳು ಕೆಲವು ಕಡೆಗಳಲ್ಲಿ ಸುಮಾರು ೬೦ ಅಥವಾ ೭೦ ಅಡಿಗಳಷ್ಟು ಎತ್ತರವಾಗಿ ಬಿದ್ದುಬಿಟ್ಟಿದೆ. ಮರಳು ಇನ್ನೂ ಹೆಚ್ಚಾಗಿ ಸೇರದಿರುವಂತೆ ಗಿಡಗಳನ್ನೂ ಬಳ್ಳಿಗಳನ್ನೂ ಬೆಳೆಸಿದ್ದಾರೆ. ಕತ್ತಾಳೆಯ ಬೇಲಿಗಳನ್ನು ಹಾಕಿಸಿದ್ದಾರೆ. ಆದರೂ ಇದುವರೆಗೂ ಇದ್ದ ಊರು ಮರಳಿನ ಕಾಟವಿಲ್ಲದೆ ಸುರಕ್ಷಿತವಾಗಿರಲಾರದೆಂದು ಅನುಭವಕ್ಕೆ ಬಂದದ್ದರಿಂದ ಇದಕ್ಕೆ ಉತ್ತರ ದಿಕ್ಕಿನಲ್ಲಿ ತಕ್ಕಷ್ಟು ದೂರವಾಗಿ ಹೊಸ ಊರು ಕಟ್ಟಲ್ಪಟ್ಟಿದೆ. ಹೀಗೆ ಮೇಲಿಂದಮೇಲೆ ಮರಳು ನುಗ್ಗಿಬರುವುದಕ್ಕೆ ಮುಖ್ಯವಾಗಿ ಪ್ರಕೃತಿಜನ್ಯವಾಗಿರುವ ಎರಡು ಕಾರಣಗಳಿವೆ. ಮೊದಲನೆಯದು—ಇಲ್ಲಿ ಕಾವೇರಿಯು ತಿರುಗುವಾಗ ಮರಳನ್ನು ಬಹುವಾಗಿ ತಂದು ಚಾಚುತ್ತದೆ. ಎರಡನೆಯದು—ವಿಶೇಷವಾಗಿ ಪಶ್ಚಿಮದ ಕಡೆಯಿಂದ ಬೀಸುವ ಗಾಳಿಯು ಈ ಮರಳನ್ನು ಸಂತತವಾಗಿ ಊರಿನ ಮೇಲೆ ಹೊತ್ತು ತಂದುಹಾಕುತ್ತದೆ. ಆದರೆ ಇದಕ್ಕೆ, ಹಿಂದೆ ಹೇಳಿದಂತೆ, ಶ್ರೀರಂಗರಾಯನ ಹೆಂಡತಿಯು ಕೊಟ್ಟ ಶಾಪವೇ ಕಾರಣವೆಂದು ಜನರ ಭಾವನೆ.

ತಲಕಾಡಿನ ಪಂಚಲಿಂಗದೇವಾಲಯಗಳಲ್ಲಿ ವೈದ್ಯೇಶ್ವರ ದೇವಾಲಯವೇ ಮುಖ್ಯವಾದದ್ದು ಮತ್ತು ಶ್ಲಾಘ್ಯತೆಯಲ್ಲಿ ಎರಡನೆಯದು. ಮರಳಿನ ಕಾಟಕ್ಕೆ ಸಿಕ್ಕದೇ ಇರುವುದು ಇದು ಒಂದೇ. ಇದೂ ಕೂಡ ಒಂದಾನೊಂದು ಕಾಲದಲ್ಲಿ ಹೂತುಹೋಗಿದ್ದಂತೆ ಗುರುತುಗಳಿವೆ. ಈಗಂತೂ ಇದು ಮರಳಿಗೆ ಸಿಕ್ಕಿಲ್ಲ, ಇರುವುದೂ ಸುರಕ್ಷಿತವಾಗಿದೆ. ಸ್ಥಳ



ಪಾತಾಳೇಶ್ವರ ದೇವಾಲಯ.

ಪುರಾಣದ ರೀತಿಯಾಗಿ ವೈದ್ಯೇಶ್ವರನೇ ಈ ಕ್ಷೇತ್ರಗಳಲ್ಲಿ ಉದ್ಭವಿಸಿದ ದೇವರುಗಳೆಲ್ಲೆಲ್ಲಾ ಮೊದಲನೆಯವನು. ಇದರ ಗರ್ಭಗೃಹವು ಬಹಳ ಪ್ರಾಚೀನವಾದದ್ದು, ಆದರೆ ಅದರ ಹೊರಕಟ್ಟಡವು ವಿಜಯನಗರದ ಕಾಲದ್ದು. ಈ ದೇವಾಲಯವು ದ್ರಾವಿಡರೀತಿಯಲ್ಲಿ ಕಗ್ಗಲ್ಲಿನಿಂದ ಕಟ್ಟಿದ ಸುಂದರವಾದ ಕಟ್ಟಡವಾಗಿದೆ. ಇದರಲ್ಲಿ ಗರ್ಭಗೃಹ, ಸುಕನಾಸಿ, ನವ ರಂಗ ಈ ಭಾಗಗಳೂ ನವರಂಗದ ಒಳಮುಖಕ್ಕೆ ಎರಡು ಸಣ್ಣ ಗೃಹ ಗಳೂ ಇವೆ. ದೇವಾಲಯವು ಪೂರ್ವಮುಖವಾಗಿದ್ದು ಅದರ ಹೊರಗೋ ಡೆಯಲ್ಲಿ ಸಣ್ಣ ಗೋಪುರಗಳೂ ಕಂಬಗಳೂ ಮತ್ತು ದೇವತಾವಿಗ್ರಹಗಳೂ ಕೆತ್ತಲ್ಪಟ್ಟಿವೆ. ಪೂರ್ವದ್ವಾರದ ಅಕ್ಕಪಕ್ಕಗಳಲ್ಲಿರುವ ದ್ವಾರಪಾಲಕವಿಗ್ರ ಹಗಳು ಸುಮಾರು ೧೦ ಅಡಿ ಎತ್ತರವಾಗಿವೆ ಇಷ್ಟು ಎತ್ತರವಾದ ದ್ವಾರಪಾಲಕವಿಗ್ರಹಗಳು ನಮ್ಮ ಸಂಸ್ಥಾನದ ದೇವಸ್ಥಾನಗಳಲ್ಲಿ ಇದುವ ರೆಗೆ ಎಲ್ಲಿಯೂ ಕಂಡುಬಂದಿಲ್ಲ. ದಕ್ಷಿಣದ್ವಾರದ ಮುಂದೆ ಸುಂದರವಾದ ಒಂದು ದ್ವಾರಮಂಟಪವಿದೆ. ದ್ವಾರಪಾಲಕರ ಪಕ್ಕಗಳಲ್ಲಿ ಕೆತ್ತಿಮಾಡಿದ ಎರಡು ಕಂಬಗಳೂ ಇವೆ. ನವರಂಗದ ಭುವನೇಶ್ವರಿಗಳು ಅಚಿತ್ರಿತವಾ ಗಿವೆ, ಆದರೆ ಇವುಗಳಲ್ಲಿ ಮಧ್ಯದರೊಳಗೆ ಮಾತ್ರ ಶಿವಲೀಲೆಗಳನ್ನು ತೋರಿ ಸುವ ವಿಗ್ರಹಗಳು ಕೆತ್ತಲ್ಪಟ್ಟಿವೆ. ನವರಂಗದಲ್ಲಿ ದೊಡ್ಡ ಪ್ರಭಾವಳಿಯೊ ಡನೆ ಕುಳಿತುಕೊಂಡಿರುವ ಒಂದು ಸರಸ್ವತೀ ವಿಗ್ರಹವಿದೆ. ದೇವಸ್ಥಾನದ ಅಮ್ಮನವರಿಗೆ ಮನೋನ್ಮನಿಯಮ್ಮನವರೆಂದು ಹೆಸರು. ಇದು ಬಹು ಸುಂದರವಾಗಿದ್ದು ಎರಡು ಕೈಗಳಲ್ಲಿ ಕಮಲಗಳನ್ನೂ ಮತ್ತೆರಡು ಕೈಗಳಲ್ಲಿ ಅಭಯವರದ ಮುದ್ರೆಗಳನ್ನೂ ಧರಿಸಿರುತ್ತದೆ. ದೇವಸ್ಥಾನದ ಪ್ರಾಕಾರದ ಒಳಗೇ ಬೇರೆಬೇರೆ ಗುಡಿಗಳಲ್ಲಿ ದಕ್ಷಿಣಾಮೂರ್ತಿ ಮತ್ತು ಶಕ್ತಿಗಣಪತಿ ಗಳ ವಿಗ್ರಹಗಳು ಪ್ರತಿಷ್ಠಿಸಲ್ಪಟ್ಟಿವೆ; ಮತ್ತು ಅಂಗಳದೊಳಗೆ ಕೆತ್ತಿಮುಗಿ ಯದ ಒಂದು ದೊಡ್ಡ ಸುಬ್ರಹ್ಮಣ್ಯವಿಗ್ರಹವೂ ಬಿದ್ದಿದೆ.

ಮಿಕ್ಕ ನಾಲ್ಕರಲ್ಲಿ, ವಾಸ್ತುಪ್ರಾಶಸ್ತ್ಯವನ್ನು ನೋಡಿದರೆ, ಸೋಮಗಿರಿ ಅಥವಾ ಮುಡುಕುತೊರೆ ಬೆಟ್ಟದಮೇಲೆ ಇರುವ ಮಲ್ಲಿಕಾ



ಸೈಕತೇಶ್ವರ ಅಥವಾ ಮರಳೇಶ್ವರ ದೇವಾಲಯ.

ರ್ಜುನದೇವಾಲಯವು ಮುಖ್ಯವೆಂದು ಹೇಳಬೇಕು. ಈ ಬೆಟ್ಟವು ತಲಕಾಡಿನಿಂದ ಉತ್ತರಕ್ಕೆ ಸುಮಾರು ಮೂರುಮೈಲಿಯದೂರದಲ್ಲಿ ಹೊಳೆಯ ಪೂರ್ವದಡದಲ್ಲಿದೆ. ಇದರ ಮೇಲಿನಿಂದ ಪಶ್ಚಿಮದಕಡೆಗೆ ನೋಡಿದರೆ ಸುತ್ತುಮುತ್ತಿನ ಪ್ರದೇಶಗಳೆಲ್ಲವೂ ಬಹುದೂರದವರೆಗೂ ಕಾಣುವುವು. ಮತ್ತು ದಿಗಂತದಲ್ಲಿ ಎದುರಿಗೆ ಸರಿಯಾಗಿ ಚಾಮುಂಡಿಬೆಟ್ಟವು ದೂರದಿಂದ ಕಾಣುತ್ತಿರುವುದು. ಮೇಲೆಹೇಳಿದ ಬೆಟ್ಟವೇನು ಅಷ್ಟುದೊಡ್ಡದಲ್ಲ. ನದೀಪಾತ್ರದಿಂದ ಸುಮಾರು ೩೦೦ ಅಡಿಯಷ್ಟು ಎತ್ತರವಾಗಿರಬಹುದು ಅಷ್ಟೆ. ಆದರೆ ಇದರಬುಡದಲ್ಲಿ ನಿಂತು ನೋಡಿದರೆ ಮೇಲೆ ಬೆಳ್ಳಗಿರುವ ದೇವಸ್ಥಾನವೂ ಅದರಹಿಂದೆ ನೀಲವಾದ ಆಕಾಶವೂ ಸೇರಿ ಸೊಗಸಾದ ವರ್ಣಚಿತ್ರದಂತೆ ಕಾಣುತ್ತದೆ. ದೇವಸ್ಥಾನವು ನೋಡುವುದಕ್ಕೆ ಸಾಮಾನ್ಯವಾಗಿದ್ದು ಗರ್ಭಗೃಹ, ಸುಕನಾಸಿ, ನವರಂಗ ಮತ್ತು ದ್ವಾರಮಂಟಪಗಳನ್ನುಳ್ಳದ್ದಾಗಿದೆ. ಸ್ವಾಮಿಯ ದೇವಸ್ಥಾನದ ಪಕ್ಕದಲ್ಲಿ ಅಮ್ಮನವರ ದೇವಸ್ಥಾನವಿದೆ; ಇದರಲ್ಲಿರುವ ದೇವತೆಯು ಸ್ಥಳಪುರಾಣದಲ್ಲಿ ಚಾಮುಂಡಿಯೆಂದು ಉಕ್ತವಾಗಿದೆ ಆದರೆ ಜನರು ಅದನ್ನು ಭ್ರಮರಾಂಬಿಕೆಯೆಂದು ಕರೆಯುತ್ತಾರೆ. ಪ್ರಾಕಾರದ ಒಳಗೇ ಚಿತ್ರಮಂಟಪವೆಂಬ ಒಂದು ಮಂಟಪವಿದೆ. ಇದರಲ್ಲಿ ಶೈವಪುರಾಣಕಥೆಗಳನ್ನು ಬಣ್ಣಗಳಿಂದ ಚಿತ್ರಿಸಿದ್ದಾರೆ. ಮಹಾದ್ವಾರದ ಎರಡುಕಡೆಯಲ್ಲೂ ಇಟ್ಟಿಗೆಗಾರೆಯಿಂದ ಮಾಡಿದ ಎರಡು ವೃಷಭಗಳು ಮಲಗಿವೆ. ದ್ವಾರದಮೇಲೆ ಒಳ್ಳೆಯ ಸೊಗಸಾದ ಗೋಪುರವಿದೆ.

ವಿಜಯಾಪುರದ ಹತ್ತಿರ ಇರುವ ಅರ್ಕೇಶ್ವರದೇವಸ್ಥಾನವೂ ಮರಳುಗುಡ್ಡೆಗಳಲ್ಲಿ ಸಿಕ್ಕಿಕೊಂಡಿರುವ ಪಾತಾಳೇಶ್ವರ ಮರಳೇಶ್ವರ ದೇವಸ್ಥಾನಗಳೂ ಪ್ರಾಮುಖ್ಯತೆಯಲ್ಲಿ ಇದಾದಮೇಲೆ ಬರತಕ್ಕವುಗಳು. ಇವೆಲ್ಲ ಸಣ್ಣಸಣ್ಣ ಕಟ್ಟಡಗಳು. ಇವುಗಳಲ್ಲಿ ವಾಸ್ತುಕುಶಲತೆಯೇನೂ ಇಲ್ಲ. ಅರ್ಕೇಶ್ವರದೇವಾಲಯವು ಈಚಿನದಾದರೂ ಚೆನ್ನಾಗಿ ಕೆಲಸಮಾಡಿದ್ದಾಗಿದೆ. ಮಿಕ್ಕ ಎರಡೂ ಗಂಗರಕಾಲದಷ್ಟು ಪ್ರಾಚೀನವಾದವುಗಳು.

ತಲಕಾಡಿನಲ್ಲೆಲ್ಲಾ ವಾಸ್ತುದೃಷ್ಟಿಯಿಂದ ಪ್ರಾಮುಖ್ಯತೆಯನ್ನು ಪಡೆದಿರುವ ಹೊಯಿಸಳರೀತಿಯ ಕಟ್ಟಡವು ಕೀರ್ತಿನಾರಾಯಣದೇವಾಲಯ. ಇದನ್ನು ಶಾಸನದ ಇಲಾಖೆಯವರು ಈಚೆಗೆ ಮರಳುತೆಗೆದು ಕಾಣುವಂತೆ ಮಾಡಿದರು. ೧೯೧೧ ನೇ ಇಸವಿಯವರೆಗೂ ಅದರ ಗೋಪುರವೂ ಮುಂದುಗಡೆಯ ಮೇಲ್ಭಾಗವೂ ಮಾತ್ರ ಕಾಣುತ್ತಿದ್ದುವು. ಆಗಾಗ್ಯೆ ಎಂದರೆ ಪಂಚಲಿಂಗಜಾತ್ರೆಯು ಬಂದುಬಂದಾಗ ಮರಳನ್ನು ತೆಗೆಸುತ್ತಿದ್ದರು. ಆದರೆ ಪುನಃ ಸ್ವಲ್ಪಕಾಲದಲ್ಲಿಯೇ ಕಟ್ಟಡವು ಮರಳಿನ ರಾಶಿಯಲ್ಲಿ ಹೂತುಹೋಗುತ್ತಿತ್ತು. ೧೯೧೧ರಲ್ಲಿ ಪ್ರಾಕಾರದ ಬಹುಭಾಗವು ಬಿಡಿಸಲ್ಪಟ್ಟಿತು ಮತ್ತು ಈವರ್ಷ ಮಿಕ್ಕಭಾಗಗಳನ್ನೂ ಬಿಡಿಸುವುದಕ್ಕೆ ತಕ್ಕ ಪ್ರಯತ್ನಗಳು ನಡೆಯುತ್ತಿವೆ. ಈ ದೇವಾಲಯದಲ್ಲಿ ಗರ್ಭಗುಡಿ, ಸುಕನಾಸಿ ಮತ್ತು ನವರಂಗಗಳಿವೆ. ನವರಂಗದ ಕಂಬಗಳು ಚೆನ್ನಾಗಿ ಕೆತ್ತಿಮಾಡಿದವಾಗಿವೆ. ಮೇಲಿನ ತೊಲೆಗಳಿಗೆ ಬಳ್ಳಿಯ ಕೆಲಸವಾಗಲಿ ಮಣಿಯಕೆಲಸವಾಗಲಿ ಮಾಡಲ್ಪಟ್ಟಿರುತ್ತದೆ. ಭುವನೇಶ್ವರಿಗಳಲ್ಲಿ ನಾಲ್ಕು ಮಾತ್ರ ಚೆನ್ನಾಗಿ ಕೆತ್ತಿ ಚಿತ್ರಕೆಲಸಮಾಡಿದವುಗಳು ಮಿಕ್ಕವು ಅಚಿತ್ರಿತವಾಗಿವೆ. ಈಗ ನವರಂಗಕ್ಕೆ ಪೂರ್ವದಲ್ಲಿ ಒಂದು, ಉತ್ತರದಲ್ಲಿ ಒಂದು, ಈರೀತಿಯಾಗಿ ಎರಡೇ ದ್ವಾರಗಳಿವೆ. ಹೀಗೆಯೇ ಇದರ ದಕ್ಷಿಣದಲ್ಲಿಯೂ ಒಂದು ದ್ವಾರವಿತ್ತು. ಆದರೆ ಅದನ್ನು ಈಚೆಗೆ ಮುಚ್ಚಿ ಅಮ್ಮನವರಿಗೆ ಒಂದು ಗುಡಿ ಮಾಡಿದ್ದಾರೆ. ಅಮ್ಮನವರಿಗೆ ಮೊದಲು ಇದ್ದ ಗುಡಿಯು ಈಗ ದೇವಸ್ಥಾನದ ದಕ್ಷಿಣದಲ್ಲಿ ಹೂತುಹೋಗಿದೆ. ಕೀರ್ತಿನಾರಾಯಣವಿಗ್ರಹವು ಸುಮಾರು ಎಂಟು ಅಡಿ ಎತ್ತರವಿರುವ ಸುಂದರವಾಗಿ ಕೆತ್ತಿಮಾಡಿದ ವಿಗ್ರಹವಾಗಿದೆ. ಇದು ಮುಂದಿನ ಎರಡುಕೈಗಳಲ್ಲಿ ಶಂಖಚಕ್ರಗಳನ್ನೂ ಹಿಂದಿನ ಎರಡುಕೈಗಳಲ್ಲಿ ಗದಾಪದ್ಮಗಳನ್ನೂ ಧರಿಸಿಕೊಂಡಿದೆ.

ಈ ದೇವಾಲಯದ ಕಾಲವು ಕ್ರಿ.ಶ. ೧೧೧೭. ಇದನ್ನು ವಿಷ್ಣುವರ್ಧನನು ಬೇಲೂರು, ಮೇಲುಕೋಟೆ, ತೊಣ್ಣೂರು ಗದಗು ಈ ಊರುಗ



ಗೋಕರ್ಣತೀರ್ಥ ಮತ್ತು ಗೋಕರ್ಣೇಶ್ವರ ದೇವಾಲಯ.

ಳಲ್ಲಿ ಕಟ್ಟಿಸಿದ ನಾರಾಯಣದೇವಾಲಯಗಳಂತೆಯೇ ಇಲ್ಲಿಯೂ ಕಟ್ಟಿಸಿದನು. ಈ ದೇವಾಲಯವು ಹಿಂದಿದ್ದ ಊರಿನ ಮಧ್ಯರಸ್ತೆಯಲ್ಲಿದ್ದದ್ದರಿಂದ ಈ ದೇವರಿಗೆ ನಡುಕೇರಿನಾರಾಯಣ ಎಂದೂ ಹೆಸರಿದ್ದಂತೆ ಹೇಳುತ್ತಾರೆ.

ಮೇಲೆ ವರ್ಣಿಸಿದ ದೇವಾಲಯಗಳಲ್ಲದೆ ಗಮನಿಸಬಹುದಾದ ಇನ್ನೂ ಕೆಲವು ಸಣ್ಣ ದೇವಾಲಯಗಳೂ ಇವೆ:—

ವೈದ್ಯೇಶ್ವರದೇವಾಲಯಕ್ಕೆ ದಕ್ಷಿಣದಲ್ಲಿರುವ ವೀರಭದ್ರದೇವಾಲಯವು ತಕ್ಕಮಟ್ಟಿಗೆ ದೊಡ್ಡ ಕಟ್ಟಡವೇ. ಈ ದೇವಸ್ಥಾನದ ಮುಂದೆಯೇ ಇಬ್ಬರು ಬೇಡರವಿಗ್ರಹಗಳು ನಿಂತಿರುವುದು.

ಗೌರೀಶಂಕರದೇವಾಲಯವು ಚಿಕ್ಕದೇವರಾಜವೊಡೆಯರ (೧೬೭೨-೧೭೦೪) ಆಳಿಕೆಯಲ್ಲಿ ಕಟ್ಟಿದ್ದು. ಇದು ಆ ದೇವಸ್ಥಾನದೊಳಗಿರುವ ಶಾಸನದಲ್ಲಿ ಮಲ್ಲೇಶದೇವಾಲಯವೆಂದು ಕರೆಯಲ್ಪಟ್ಟಿದೆ ಕ್ರಿ. ಶ. ೧೦೪೦ರಲ್ಲಿ ವೈಕುಂಠನಾರಾಯಣಸ್ವಾಮಿಗಾಗಿ ಒಂದು ದೇವಾಲಯವು ಕಟ್ಟಲ್ಪಟ್ಟಿತ್ತು. ಆದರೆ ಅದು ಈಗ ಇಲ್ಲ. ಅದರ ವಿಗ್ರಹವನ್ನು ಇದುವರೆಗೂ ಊರಮಧ್ಯೆ ಇರುವ ಆಂಜನೇಯ ದೇವಸ್ಥಾನದಲ್ಲಿಟ್ಟಿರುತ್ತಿದ್ದರು. ಈಗ ಅದು ಹೊಸದಾಗಿ ಕಟ್ಟಿದ ಊರಿನಲ್ಲಿ ಟ್ರಾವೆಲರ್ಸ್ ಬಂಗಲಿಯ ಹತ್ತಿರ ಕಟ್ಟಿದ ದೇವಾಲಯದಲ್ಲಿ ತಂದು ಇಡಲ್ಪಟ್ಟಿದೆ. ಇದರಂತೆ ರಾಜರಾಜೇಶ್ವರ ದೇವಾಲಯವೆಂಬ ಒಂದು ದೇವಾಲಯವಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಅದೂ ಈಗ ಇಲ್ಲ. ಹಿಂದಿನ ಊರಿನ ಉತ್ತರಬಾಗಿಲಲ್ಲಿ ಇರುವ ಗಣೇಶದೇವಸ್ಥಾನವು ಈ ಊರಿನ ಹಳೆಯ ಕಟ್ಟಡಗಳಲ್ಲಿ ಒಂದಾಗಿದೆ.

ತಲಕಾಡಿನಲ್ಲಿ ಕೊಪ್ಪಲುಮಠವೆಂಬ ಒಂದು ಭಾಗವತ ಸಂಪ್ರದಾಯದ ಸ್ಮಾರ್ತಮಠವಿದೆ. ಇದರ ಸ್ವಾಮಿಗಳು ಶ್ರೀಶಂಕರಾಚಾರ್ಯರ ಸಾಕ್ಷಾಚ್ಛಿಷ್ಯರಾದ ಪದ್ಮಪಾದಾಚಾರ್ಯರ ಪರಂಪರೆಗೆ ಸೇರಿದವರೆಂದು ಹೇಳುತ್ತಾರೆ.


ಮುಡುಕುತೊರೆಯ ಹತ್ತಿರ ಹೊಳೆಗೆ ಹಾಕಿರುವ ಅಣೆಕಟ್ಟಿಗೆ ಮಾಧವ ಮಂತ್ರಿಯ ಅಣೆಕಟ್ಟು ಎಂದು ಹೆಸರು. ಇದನ್ನು ವಿಜಯ ನಗರದ ರಾಜರಲ್ಲಿ ಮಂತ್ರಿಯಾಗಿದ್ದ ಮಾಧವಾಚಾರ್ಯರು ಕಟ್ಟಿಸಿದರೆಂದು ಹೇಳುತ್ತಾರೆ. ಆದರೆ ಅದಕ್ಕಿಂತಲೂ ಪುರಾತನವಾದ್ದೆಂದು ಹೇಳುವುದಕ್ಕೆ ಕೆಲವು ದಾಖಲೆಗಳಿವೆ.

ಈ ಊರಿನಲ್ಲಿ ಬಂದರಸಮ್ಮನೆಂಬ ಒಂದು ಗ್ರಾಮದೇವತೆಯಿದೆ. ಅದಕ್ಕೆ ಪ್ರತಿ ವರ್ಷವೂ ಮಾಘಮಾಸದಲ್ಲಿ ಒಂದು ಜಾತ್ರೆಯು ನಡೆಯುತ್ತದೆ. ಅದೇ ಮಾಸದಲ್ಲಿಯೇ ಮುಡುಕುತೊರೆಯಲ್ಲಿ ಒಂದು ದೊಡ್ಡ ಜಾತ್ರೆಯಾಗುತ್ತದೆ. ಅದಕ್ಕೆ ಮೈಸೂರು ದೇಶದ ಎಲ್ಲಾ ಕಡೆಯಿಂದಲೂ ಸಾವಿರಾರು ಜನರು ಸೇರುತ್ತಾರೆ. ಈ ಕಾಲದಲ್ಲಿ ಒಂದು ದನಗಳ ಪ್ರದರ್ಶನವೂ ನಡೆಯುತ್ತದೆ. ಜಾತ್ರೆಯ ಕೊನೆಯ ದಿವಸ ನಡೆಯುವ ಗೂಳಿಗಳ ಓಟವು ಪ್ರಸಿದ್ಧವಾದದ್ದು. ಇದರಲ್ಲಿ ಜನರಿಗೆ ಬಹು ಆಸಕ್ತಿ. ಈ ಓಟದಲ್ಲಿ ಗೆದ್ದ ಗೂಳಿಗೆ ಅರ್ಚಕನು ದೇವರ ಮುಂದೆ ಒಂದು ವಿಜಯ ಮಾಲೆಯನ್ನು ತಂದು ಹಾಕುವನು. ಈ ಜಾತ್ರೆಯಾದ ಕೂಡಲೆ ಕರ್ನೂಲು ಡಿಸ್ಟ್ರಿಕ್ಟಿನ ಶ್ರೀಪರ್ವತದಲ್ಲಿ ಜಾತ್ರೆಯು ನಡೆಯುವುದು ಹಿಂದಿನಿಂದಲೂ ಸಂಪ್ರದಾಯವಾಗಿ ನಡೆದುಬಂದಿದೆ. ಆಗ ಮೇಲೆ ಹೇಳಿದಂತೆ ಜಯಶಾಲಿಯಾದ ಗೂಳಿಯು ಮಿಕ್ಕ ದನಗಳ ಮುಂದೆ ಹೊರಟು ಅವೆಲ್ಲಕ್ಕೂ ಅಧಿನಾಯಕನಾಗುವ ಗೌರವವನ್ನು ಪಡೆಯುತ್ತದೆ.

ಹೀಗೆ ತಲಕಾಡು ಬಹು ಪ್ರಾಚೀನವಾದದ್ದಲ್ಲದೆ ಚರಿತ್ರಕಾರರಿಗೂ ಪ್ರಾಕ್ತನ ವಿಚಾರ ವಿಮರ್ಶಕರಿಗೂ ಬಹು ಸ್ವಾರಸ್ಯವಾದದ್ದೂ ಆಗಿದೆ. ಭಕ್ತರಿಗೆ ಕಾಶಿ ಎಷ್ಟು ಪವಿತ್ರವಾದ ಪುಣ್ಯಕ್ಷೇತ್ರವೋ ಇದೂ ಅಷ್ಟೇ ಪವಿತ್ರವಾದ ಪುಣ್ಯಕ್ಷೇತ್ರವಾಗಿದೆ. ಎಲ್ಲೆಲ್ಲಿ ನೋಡಿದರೂ ಹಿಂದಿನಕಾಲದಲ್ಲಿ ಈ ಪಟ್ಟಣವು ಇದ್ದ ಉಚ್ಚಸ್ಥಿತಿಯನ್ನು ಸೂಚಿಸುವ ಚಿಹ್ನೆಗಳೇ ಕಂಡುಬರುತ್ತವೆ. ಇವುಗಳನ್ನು ನೋಡಿದಾಗ, ಇಷ್ಟು ಔನ್ನತ್ಯಕ್ಕೆ

ಪಶ್ಚಿಮ.

ದಕ್ಷಿಣ.



ಉತ್ತರ.

ತಲಕಾಡು ಪ್ರದೇಶವನ್ನು ತೋರಿಸುವ ನಕ್ಷೆ.

ಬಂದು ದಕ್ಷಿಣದೇಶದ ಚರಿತ್ರೆಯಲ್ಲೆಲ್ಲಾ ಪ್ರಸಿದ್ಧಿಪಡೆದಿದ್ದ ಈ ದೊಡ್ಡ ಪಟ್ಟಣವು ನಮ್ಮ ದೇಶದಲ್ಲಿ ಇದ್ದಿತೆಂಬ ಹೆಮ್ಮೆಯೂ, ಅಂಥ ಔನ್ನತ್ಯ ಮಹತ್ವಗಳೂ ಎಷ್ಟು ಅಶಾಶ್ವತವೆಂಬ ಒಂದು ವಿಧವಾದ ಉದ್ವೇಗವೂ ಪ್ರತಿಯೊಬ್ಬ ಮೈಸೂರು ದೇಶೀಯನಿಗೂ ಏಕಕಾಲದಲ್ಲಿ ಉಂಟಾಗುವುವು.

ದರ್ಶನಕ್ರಮ.

ಮುಂದೆ ಹೇಳುವ ದಿನಗಳು ಈ ಕ್ಷೇತ್ರದಲ್ಲಿರುವ ಆಯಾದೇವರುಗಳನ್ನು ದರ್ಶನಮಾಡಲು ಸರಿಯಾದ ದಿವಸಗಳೆಂದು ಹೇಳಿದೆ :—

೧. ವೈದ್ಯನಾಥ :—ವೈಶಾಖ ಶುದ್ಧ ಪೂರ್ಣಿಮೆ.

೨. ಅರ್ಕೇಶ್ವರ :—ಮಾಘ ಶುದ್ಧ ಸಪ್ತಮಿ.

೩. ಪಾತಾಳೇಶ್ವರ :—ಶ್ರಾವಣ ಶುದ್ಧ ಪಂಚಮಿ.

೪. ಮರಳೇಶ್ವರ :—ಮಾಘಬಹುಳ ಚತುರ್ದಶಿ.

೫. ಮಲ್ಲಿಕಾರ್ಜುನ :—ಕಾರ್ತಿಕ ಶುದ್ಧ ಅಷ್ಟಮಿ.

೬. ಚಾಮುಂಡೇಶ್ವರಿ :—ಭಾದ್ರಪದ ಶುದ್ಧ ತದಿಗೆ ಮತ್ತು ಆಶ್ವಯುಜ ಶುದ್ಧ ನವಮಿ.

ಆದರೆ ಈ ದೇವರೆಲ್ಲರನ್ನೂ ಕಾರ್ತಿಕಸೋಮವಾರ ಅಮಾವಾಸ್ಯೆ ವೃಶ್ಚಿಕಮಾಸ ಶೋಭನನಾಮಯೋಗಗಳು ಸೇರಿದಾಗ ದರ್ಶನಮಾಡುವುದು ಅತ್ಯಂತ ಪುಣ್ಯಪ್ರದವಾದದ್ದು.

ಗಜಾರಣ್ಯ ಮಾಹಾತ್ಮ್ಯದಲ್ಲಿ ದರ್ಶನಕ್ರಮವು ಹೀಗೆ ಹೇಳಲ್ಪಟ್ಟಿದೆ:

ಮೊದಲು ಗೋಕರ್ಣ ತೀರ್ಥದಲ್ಲಿ ಸ್ನಾನಮಾಡಿ ಚಂಡೀದೇವಿಯನ್ನು ಪೂಜಿಸಿ ಮೂರು ನಮಸ್ಕಾರ ಹಾಕಿ ವೈದ್ಯೇಶ್ವರನ ದರ್ಶನಮಾಡಬೇಕು. ಆಮೇಲೆ ಅರ್ಕೇಶ್ವರನನ್ನು ಅರ್ಚಿಸಿ ಪುನಃ ವೈದ್ಯೇಶ್ವರನ ದರ್ಶನಮಾಡಬೇಕು. ಅನಂತರ ಕ್ರಮವಾಗಿ ಪಾತಾಳೇಶ್ವರ ಮರಳೇಶ್ವರ ಮಲ್ಲಿಕಾರ್ಜುನ ಮತ್ತು ಚಾಮುಂಡೇಶ್ವರಿ ಈ ಕ್ರಮದಲ್ಲಿ ಒಂದೊಂದನ್ನಾಗಿ ಅರ್ಚನೆಮಾಡಿ, ಆಯಾ ಪೂಜೆಯನ್ನು ವೈದ್ಯೇಶ್ವರನಿಗೆ ಅರ್ಪಿಸಬೇಕು.

ವೈದ್ಯೇಶ್ವರ ಅರ್ಕೇಶ್ವರ ಪಾತಾಳೇಶ್ವರ ಮರಳೇಶ್ವರ ಮತ್ತು ಮಲ್ಲಿಕಾರ್ಜುನೇಶ್ವರ ಇವು ಐದೂ, ಈಶಾನ, ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ ಎಂಬ ಈಶ್ವರನ ಐದು ಮುಖಗಳೆಂದೂ ಇವುಗಳನ್ನು ಭಕ್ತಿಯಿಂದ ಪೂಜಿಸಿದವರು ಶಿವಸಾಯುಜ್ಯವನ್ನು ಪಡೆಯುವರೆಂದೂ ಹೇಳಿದೆ.

ಭ:ಟ

ವಿಗಡ ವಿಕ್ರಮರಾಯ

(ನಾಂದ್ಯಂತದಲ್ಲಿ ಸೂತ್ರಧಾರನ ಪ್ರವೇಶ.)

ಸೂತ್ರಧಾರ :—(ಸಭೆಗೆ ಬಾಗಿ ವಂದಿಸಿ,)

ಶ್ರೀಮತ್ಪನ್ನಗತಲ್ಪನುದ್ಧತರಟಚ್ಚಕ್ರಾಯುಧಂ ಮೋಹಿನೀ |
ರಾಮಾವಲ್ಲಭನುಗ್ರಗೃಧ್ರಪತಿಗಂ ತಾಂ ಸ್ವಾಮಿಯಾಗಿರ್ದೊಡಂ ||
ಪ್ರೇಮಂ ತನ್ನೊಳಮಾ ಪರಸ್ಪರರೊಳಂ ಸಾಲ್ವಂತಿರಾಳ್ವಾತನು |
ದ್ದಾಮಂ ತತ್ಪ್ರಭುಶಕ್ತಿಯಿಂ ಪೊರೆಯುತುಂ ಪಾಲಿಕ್ಕೆ ! ಭೂಮೀ
ಶರಂ ||

ಸ್ವಾಮಿದ್ರೋಹಾಡಂಬರ |
ನಾಮಾನಿಯ ವಿಗಡವಿಕ್ರಮನ ಚರಿತಮನೀ ||
ನಾಮರಿದಂತಭಿನಯಿಪೆವು |
ಧೀಮತ್ಸಭ್ಯರಿರ, ತಿದ್ದಿ ಪೊರೆವುದು ನಮ್ಮಂ ||

(ಹೋಗುವನು.)

ಪ್ರವೇಶ ೧.

[ಸ್ಥಾನ—ಶ್ರೀರಂಗಪಟ್ಟಣ, ದಳವಾಯಿ ವಿಕ್ರಮರಾಯನ ಹರ್ಮ್ಯದ ಅಂತರಾಳ.]

(ವಿಕ್ರಮರಾಯನು ಶಯ್ಯೆಯಲ್ಲಿ ತಲೆಗಿಂಬಿನ ಕವುಳುಡೆಯನ್ನೊರಗಿ ಕುಳಿತಿರುವನು. ಬಾಗಿಲ ಪಾರ್ಶ್ವದಲ್ಲಿ ಆಸ್ಥಾನದ ಕರಣಿಕರಿಬ್ಬರೂ ತಲೆವಾಗಿ, ವಿಷಣ್ಣಭಾವದಿಂದ ನಿಂತಿರುವರು.)

ಒಬ್ಬ ಕರಣಿಕ :—(ಸ್ವಲ್ಪಹೊತ್ತಿನ ಬಳಿಕ, ದೈನ್ಯದಿಂದ,) ಶ್ರೀಮನ್ಮಹಾರಾಜರವರೇ ಸ್ವತಃ ಬಿಜಯಮಾಡಿಸಿ.........

ವಿಕ್ರಮರಾಯ :—(ನಿಷ್ಠುರಸ್ವರದಿಂದ) ಸಾಕು, ಮುಚ್ಚು, ಗುಲಾಮ !— ಮಹಾರಾಜನಂತೆ! ಇತರರೊಬ್ಬರನ್ನೂ ಒಲ್ಲದೆ, ನಿಮ್ಮಿಬ್ಬರನ್ನೇ

ನಮ್ಮ ವಿಶ್ವಾಸದ ಅಂತರ್ಯದ ಕರಣಿಕರನ್ನಾಗಿ ಆಯ್ದುಕೊಂಡೆವೇಕೆ? ಆಯ್ದುವರುಷಗಳಿಂದ ತಿಂಗಳೊಂದಕ್ಕೆ ಎರಡೆರಡುಸಾಯಿರ ವರಹಗಳಂತೆ ನಿಮಗೆ ತೆತ್ತು, ತೆತ್ತು, ಹಾಳಾಗುತ್ತಿರುವೆವೇ ತಕ್ಕೋಸ್ಕರವಾಗಿ? ಕೃತಜ್ಞತೆ! ಸ್ವಾಮಿಭಕ್ತಿ! ....
(ವೊಳಕಯ್ಗಳ ಮೇಲಿದ್ದು,) ತೊಲಗಿ!............ನಡೆಯಿರಿ! ಇಂದಿನಿಂದ ಕರಣಿಕತನವನ್ನು ಕಾಳಸರ್ಪಗಳಿಗೆ ವಹಿಸಿ, ನಿರಾತಂಕದಿಂದಿರುವೆವು; ಅವಕ್ಕೆ ಎರೆದ ಹಾಲೂ ವಿಷವಾಗುವುದಾದರೂ ಕೊಟ್ಟ ನಿಕ್ಷೇಪವನ್ನು ಅವು ನಿಮ್ಮಂತೆ ಬಯಸುವವರಿಗೆ ಬಿಟ್ಟುಕುಡದೆ, ಪ್ರಾಣಪಣದಿಂದ ರಕ್ಷಿಸಿರಿಸುವುವು.

ಕರಣಿಕ :—ಶ್ರೀಮಂತರು...............

(ಹೊರಗೆ) :—(ಮಹಾರಾಜವಾದ್ಯಗಳು ಘೋಷಿಸತೊಡಗುವುವು.)

ವಿಕ್ರಮರಾಯ :—(ಹುಬ್ಬುಗಂಟಿಕ್ಕಿ,) ಏನಿದು? ನಮ್ಮ ಆಜ್ಞೆಯನ್ನು ಮರೆತವನಾರು?

ಕರಣಿಕ : —ಅರಮನೆಯ ವಾದ್ಯಗಳೆಂಬಂತಿವೆ.

ವಿಕ್ರಮರಾಯ :—ಕಣ್ಗಳನ್ನರಲಿಸುವೆಯೇಕೆ, ಹೇಡಿ? ಹೋಗಿ, ನಮ್ಮ ಪ್ರಾಸಾದದೆಡೆಯಲ್ಲಿ ಆರ ಆವ ವಾದ್ಯಗಳಾದರೂ ಮೌನವಾಗಿ ನಡೆಯಬೇಕೆಂಬ ನಮ್ಮ ಕಟ್ಟಳೆಯನ್ನು ಆ ದುರುಳನಾವನಾದರೂ ಅವನಿಗೆ ತಿಳಿಹಿ ಬಾ—ಹೋಗು.

(ಹಠಾತ್ತಾಗಿ ವಾದ್ಯಗಳು ನಿಲ್ಲುವುವು. ಸಪರಿವಾರ ಶ್ರೀಮನ್ಮಹಾರಾಜ ಇಮ್ಮಡಿರಾಜಒಡೆಯ—ಪ್ರವೇಶ.)

ಮಹಾರಾಜ :—(ಪ್ರವೇಶಿಸುತ್ತ ನಕ್ಕು,) ಆ ದುರುಳನೇ ಶ್ರೀಮಂತರ ಕಟ್ಟಾಣತಿಯನ್ನು ಕಿವಿಯಾರೆ ಕೇಳಿ ಕೃತಾರ್ಥನಾದನಾಯ್ತು.

ಕರಣಿಕರು :—(ಮಹಾರಾಜನಿಗೆ ಮುಗಿದ ನೀಡುಂಗಯ್ಗಳಿಂದ ಬಾಗಿ ನಮಸ್ಕರಿಸುವರು.)

ಮಹಾರಾಜ :—(ಕರಣಿಕರತ್ತ ನಿರ್ದೇಶಿಸಿ, ವಿಕ್ರಮರಾಯನನ್ನು ಕುರಿತು,) ರಾಜ್ಯದಾಡಳಿತದ ಲೆಕ್ಕಪತ್ರಗಳನ್ನು ನಮಗೆ ತೋರಿಸಿದ ಮಹಾಪರಾಧಿಗಳು !—ದಣ್ಡನವಾಗುತ್ತಿದ್ದಿತೇನೊ !

ವಿಕ್ರಮರಾಯ :—(ಮಲಗಿರುವಂತೆಯೇ ಮುಗುಳ್ನಗೆನಕ್ಕು,) ಶಾಸ್ತಿಯಹುದು ; ಆದರೆ, ರಾಜತಂತ್ರಕ್ಕೆ ಸಂಬಂಧಿಸಿದ ಅತಿ ಗೋಪ್ಯವಾದ ಹಲವು ಲೆಕ್ಕಪತ್ರಗಳನ್ನು ಅವರು ಮಹಾರಾಜರಿಗೆ ಕಾಣಗುಡದುದರಿಂದ.—ಬಾ, ಪುಟ್ಟಸ್ವಾಮಿ !......ಇದೇನಿಂದೀ ಅಪೂರ್ವಯಾತ್ರೆ ? ನಮ್ಮ ದೀನಕುಟೀರದವರೆಗೆ ! (ಮಹಾರಾಜ ಪರಿವಾರದವರನ್ನೂ ಕರಣಿಕರನ್ನೂ ದುರದುರನೆ ನೋಡಿ,) ಮಹಾಸ್ವಾಮಿಯವರು ನಿಂತಿರುವುದು ಕಣ್ಗೆ ಕಾಣದೆ ? ಅತ್ತಣ ಸುಖಾಸನವನ್ನು ಅನುಗೊಳಿಸಿಟ್ಟರೆ, ನೀವು ತಿನ್ನುವ ಉಪ್ಪಿಗೆ ದ್ರೋಹಮಾಡಿದಂತಾಗುವುದೇನು ?

ಕರಣಿಕರು :—(ಸಂಭ್ರಮದಿಂದ ಸುಖಾಸನವನ್ನು ಮಂಚದ ಬಳಿಗೆಳೆದು, ಆದರೊಳಗಣ ಮೂಡಾವಿಗಳನ್ನು ಓಜೆಗೊಳಿಸಿಟ್ಟು, ಹಿಂಜರಿದು ನಿಲ್ಲುವರು.)

ಮಹಾರಾಜ :—(ಗಂಭೀರಭಾವದಿಂದ,) ದಳವಾಯಿ ವಿಕ್ರಮರಾಯ ! ನಿನ್ನ ಲೆಕ್ಕಿಗರು ಹೊರಗೆಡಹದೆ ಬಚ್ಚಿಟ್ಟು ಮಾಯಮಾಡಿದ, ರಾಜಮುದ್ರೆಗೆ ಸಂಬಂಧಿಸಿದ, ಆ ಲೆಕ್ಕಪತ್ರಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ ತಿಳಿಯಬೇಕೆಂಬ ಉದ್ದೇಶದಿಂದ ನಾವಿಲ್ಲಿಗೆ ಈಗ ಬಂದಿರುವೆವು.

ವಿಕ್ರಮರಾಯ :—ಇರಬಹುದು.

ಮಹಾರಾಜ :—ಅವೆಲ್ಲಿ ? ಬೇಗನೆ ತರಿಸು.

ವಿಕ್ರಮರಾಯ :—(ನಕ್ಕು,) ಆಗಬಹುದು.—ಬಾ, ಪುಟ್ಟಸ್ವಾಮಿ ! ನನ್ನಿದಿರಲ್ಲಿ ನಿಂತಿರುತ್ತಲೇ ಮಾತನಾಡುವುದನ್ನು ಇನ್ನಾದರೂ ಬಿಟ್ಟು, (ಸುಖಾಸನದತ್ತ ಕೈಯ್ತೋರಿಸಿ,) ಕುಳ್ಳಿರು. ನಿನಗೆ ಇಂದೀಗಳೇನುಬೇಕು ? ಬಿಜಾಪುರದ ಆಸ್ಥಾನದಲ್ಲಿರುವ ವಿದೇಶದ ಗಾಯಕನ ಆ ವಾದ್ಯ ;

ಬಳ್ಳಾರಿಯ ಮನೋರಮೆ; ದೆಹಲಿಯ ಬಾದಷಹನ ಮಹಲ್ಗಳನ್ನಪಹಾಸ್ಯಮಾಡುವಂತಹುದೊಂದು ಅಂತಃಪುರ; ಅದನ್ನು ಬಳಸಿ, ನಂದನವನವನ್ನು ನಾಚಿಸುವಂತೆ ಸಾಂಗವಾದ ಪರಿಪರಿಯ ಪುಷ್ಪೋದ್ಯಾನಗಳು; ಅವುಗಳೊಳಗೆ............ವನಲಕ್ಷ್ಮಿಯಂತೆ ಕುಸುಮಸಮಯಾಲಂಕೃತೆಯಾಗಿ, ಕಳಹಂಸೆಯಂತೆ ಅಲ್ಲಲ್ಲಿ ನಡೆಗಾಣಿಸಿ, ಶುಕಸತಿಯಂತೆ ನುಡಿದು, ಕೋಗಿಲೆಯಂತೆ ಮದಿಸಿ ಹಾಡುತ್ತ, ಅಪ್ಸರೆಯಂತೆ ಸ್ವೈರದಿಂದ ನರ್ತಿಸುವ ಲತಾಂಗಿಯಾದ ಆ ಗಾಲವನಗರಿಯ ಕುಟ್ಟಿ;.........

ಮಹಾರಾಜ :—(**ಕೊರಲ್ಸಾಗಿದ್ದು,**) ಆಯ್ತೆ ?

ವಿಕ್ರಮರಾಯ :—ಬಾ, ಪುಟ್ಟಸ್ವಾಮಿ; ನೀನು ಕುಳಿತಿರದಿದ್ದರೆ ನಾವಾವಮಾತನ್ನೂ ಆಡುವುದಿಲ್ಲ.

ಮಹಾರಾಜ :—ನಾವು ಸೂಚಿಸಿದಂತೆ ಆ ಲೆಕ್ಕಪತ್ರಗಳನ್ನು ಒಪ್ಪಿಸಬಹುದಷ್ಟೆ ?

ವಿಕ್ರಮರಾಯ :—(**ಅಂಗಯ್ಗಳ ಮೇಲೆದ್ದು, ಬದ್ಧಭ್ರುಕುಟಿಯಾಗಿ, ಕಣ್ಣಾಲಿಗಳನ್ನೆಬ್ಬಿಸಿ, ಮಹಾರಾಜನನ್ನಡಿಯಿಂದ ಶಿರಸ್ಸಿನವರೆಗೆ ದಿಟ್ಟಿಸಿ,**) ನಮಗಿದು ಅರ್ಥವಾಗುತ್ತಿಲ್ಲ !

ಮಹಾರಾಜ :—ಏನು ?

ವಿಕ್ರಮರಾಯ :—ನಿನ್ನ ಇಂದಿನ ಈ ವೇಷವಿದು; ಆ ವೃದ್ಧ—ರಂಗಜೋಯಿಸರೇನಾದರೂ ತಪ್ಪಿ, ಈಪೊತ್ತು ಮಹಾನವಮಿಯ ಪಾಡ್ಯಮಿಯೆಂದು ನಿನಗೆ ಭ್ರಮೆಯನ್ನು ಹುಟ್ಟಿಸಿಟ್ಟರೋ ?

ಮಹಾರಾಜ :—ಹುಂ.

ವಿಕ್ರಮರಾಯ :—ಮತ್ತೆ, ಈಪೊಡ್ಡೋಲಗದ ಉಡುಗೆತುಡುಗೆಗಳು ....ಪಟ್ಟದ ಕತ್ತಿಯು, ಶಿಖಾಸರವು—ಮುದ್ರೆಯುಂಗುರವೂ ಹೀಗೆ ಇಂದೇಕೆ ? ಇವೆಲ್ಲವನ್ನೂ ಬೊಕ್ಕಸದಿಂದ ನಿನಗೆ ತೆಗೆದಿತ್ತವರಾರು ? ನಮಗೆ ಅರ್ಥವಾಗಿಲ್ಲ.

ಮಹಾರಾಜ :—ದಳವಾಯಿ ಮಹಾಶಯರೆ, ನಮ್ಮಿದಿರಲ್ಲಿಯಾದರೂ ನಮಗೆ ಸಲ್ಲತಕ್ಕ ಗೌರವಮರ್ಯಾದೆಗಳನ್ನರಿತು ನೀನು ನಡೆದುಕೊಳ್ಳಬೇಕೆಂದು ನಾವಾಗಿ ನಿರವಿಸೋಣವೆ?

ವಿಕ್ರಮರಾಯ :—(ನಕ್ಕು.) ಹಾಗೆಂದರೆ ?

ಮಹಾರಾಜ :—(ತನ್ನೆದೆಯನ್ನು ಮುನ್ನೀಡಿ, ಮೊಗವೆತ್ತಿ, ದರ್ಪದಿಂದ.) ನಿನ್ನ ವಿಷಯವನ್ನು ಏಕವಚನದಲ್ಲಿ ಹೇಳಿಕೊಳ್ಳುತ್ತ, ನಾವಾರೆಂಬುದನ್ನು ಮರೆಯದಿರು.

ವಿಕ್ರಮರಾಯ :—(ನೆಟ್ಟನೆ ಕುಳಿತು, ಕೌತುಕದಿಂದ.) ನೀವಾರು ?

ಮಹಾರಾಜ :—ನಾವಾರು ! (ಥಟ್ಟನೆ ಪಾರ್ಶ್ವಕ್ಕೆ ತಿರುಗಿ, ವಂದಿಮಾಗಧರತ್ತ ನೋಡುವನು.)

ವಂದಿಮಾಗಧರು :—(ಕಯ್ಮುಗಿದು.) ಜಯಜಯ ಮಹಾರಾಜ! ಜಯ ಜಯ ಮಹಾಸ್ವಾಮಿ !

ಸ್ವಸ್ತಿಶ್ರೀಮತ್ಪಶ್ಚಿಮರಂಗನಾಥಪಾದಾರವಿಂದಮಧುಕರಾಯಿತ ಚಿತ್ತ !

ಮತ್ತರಿಪುಷಂಡಖಣ್ಡನೋದ್ದಂಡದೋರ್ದಂಡ !
ಅರ್ಥಿಜನೇಪ್ಸಿತಾರ್ಥದಾನಶೌಂಡ !
ಅಂಗನಾಜನಕುಸುಮಕೋದಣ್ಡ !
ಬಾಹುದಂಡಧೃತವಿವಿಧಾಯುಧಪ್ರಕಾಂಡ !
ಬಿರುದಂತೆಂಬರಗಂಡ !
ಮಿತ್ರಕುಲಕಮಲಮಾರ್ತಾಂಡ !
ಮೊನೆಗಾರ !
ಸುಗುಣಗಂಭೀರ !
ರಾಜಕಂದರ್ಪ !
ವೀರ !

ಶೂರ !
ಮಲೆವರಗಂಡ !
ಅಭಯಪ್ರತಾಪಾಧೀಶ್ವರ !
ಶರಣಾಗತಪರಿಪಾಲಕ !
ಸಂಗೀತಲೋಲ !
ಸಾಹಿತ್ಯರತ್ನಾಕರ !
ಸೂರ್ಯಚಂದ್ರಶಂಖಚಕ್ರಾಂಕುಶಕುಠಾರಮಕರಮತ್ಸ್ಯಹನೂಮದ್ಗರುಡಕಂಠೀರವಾದ್ಯನೇಕಬಿರುದಾಂಕಿತ !
ರಾಜಾಧಿರಾಜ !
ಮಹಾರಾಜ !
ಶ್ರೀಮನ್ಮಹೀಶೂರರತ್ನಸಿಂಹಾಸನಾಧೀಶ್ವರ !
ಶ್ರೀಇಮ್ಮಡಿರಾಜಒಡೆಯ !
ಜಯಜಯಮಹಾಸ್ವಾಮಿ !
ವಿಜಯೀಭವ !

ಮಹಾರಾಜ :—(ವಿಕ್ರಮರಾಯನತ್ತಕ್ಕೆ ನಿಂತು,) ನಾವಾರೆಂಬುದನ್ನೀಗ ಅರಿವುಗೊಂಡೆಯ, ವಿಕ್ರಮರಾಜಯ್ಯ ?

ವಿಕ್ರಮರಾಯ :—(ಚಕ್ಕನೆ ಮಂಚದಿಂದಿಳಿದು, ಮಹಾರಾಜನಿಗೆ ಮಣಿದು ನೀಡುಂಗಯ್ಯಿಂದ ವಂದಿಸಿ, ಕಿಳ್ಮೊಗನಾಗಿ ನಿಂತು, ವಿನೀತಭಾವದಿಂದ,) ಪಾದದ ಸೇವಕನ ಸರ್ವಾಪರಾಧಗಳನ್ನೂ ಕ್ಷಮಿಸಿ, ಮಹಾಸ್ವಾಮಿಯವರು ಕಾಪಿಡಬೇಕು.

ಮಹಾರಾಜ :—(ವಿಕ್ರಮರಾಯನನ್ನೇ ಅಭೀಕ್ಷಿಸುತ್ತಿದ್ದು, ಸಂದಿಗ್ಧಸ್ವರದಿಂದ,) ಉಳಿದ ಆ ಲೆಕ್ಕಪತ್ರಗಳೆಲ್ಲಿ ?

ವಿಕ್ರಮರಾಯ :—(ಹಿಂದಣಂತೆ ಪುನಃ ತುಳಿಲ್ಗೆಯ್ದು,) ಮಹಾಸ್ವಾಮಿಯವರ ಅಪ್ಪಣೆಯಾದರೆ, ಇಲ್ಲಿಗೇ ಅವನ್ನು ತರಿಸುವೆನು.

ಮಹಾರಾಜ :—ಇನ್ನಿಲ್ಲಿ ನಾವು ನಿಲ್ಲಲಾರೆವು. ನಾಳಿನ ಪ್ರಾತಃಕಾಲಕ್ಕೆ ಆಸ್ಥಾನದ ಮಹಾಸಭೆಯು ನೆರೆಯುವುದು. ಆಗಳ್ಗೆ ರಾಜ್ಯದ ಅಖಿಲ ಲೆಕ್ಕಪತ್ರಗಳೂ ಅಲ್ಲಿ ನಮ್ಮ ಪರಾಂಬರಿಕೆಗೆ ಸಿದ್ಧವಾಗಿರ ಬೇಕು.

ವಿಕ್ರಮರಾಯ :—ಅಪ್ಪಣೆ, ಮಹಾಸ್ವಾಮಿ.

ಮಹಾರಾಜ,
ಅವನ ಪರಿವಾರದವರು } :—(ಹಿಂದಿರುಗಿ ಹೊರಟುಹೋಗುವರು.)

(ಹೊರಗೆ):—(ಓಲಗದ ವಾದ್ಯಗಳು ಮತ್ತೆ ವೊಳಗಲಾರಂಭಿಸಿ, ಸ್ವಲ್ಪಸ್ವಲ್ಪವಾಗಿ ಕ್ಷೀಣವಾಗುವುವು.)

ವಿಕ್ರಮರಾಯ :—(ಹವ್ವನೆ ಹಿಂದಣ್ಗೆ ನೆಗೆದುನಿಂತು, ಪ್ರಬಲಮುಷ್ಟಿಯನ್ನೆತ್ತಿ ಬೀಸಿ, ರೋಷವಿಕಾರವಾದ ಮುಖವನ್ನೆತ್ತಿ ಸುತ್ತನೋಡಿ, ಹಲ್ಮೊರೆದು,) ವಿಕ್ರಮರಾಜಯ್ಯ! ಏಕವಚನದಲ್ಲಿ ಮಾತನಾಡಿಕೊ! ಮಿಕ್ಕ ಲೆಕ್ಕಪತ್ರಗಳು!.........ಹೂಂ!.............ಸುಣ್ಣಿಲ ಹಿಡಿದಾಟಕ್ಕೆ ಮೆಯ್ಗೊಟ್ಟಡಕವಾಗದೆ ತಪ್ಪಿಸಿಕೊಂಡು ಉರುಳ್ದು ಹೊರಳಿಯಾಡುವ ಬೇಲದ ಕಸುಗಾಯದು ಆನೆಯ ಕಾಲ ಕೆಳಗೆ ಜಜ್ಜಿಹೋಗುವುದು ಸಂಭವವಲ್ಲವೆ? (ಕರಣಿಕರನ್ನು ಕಂಡು,) ತೊಲಗಿಹೋಗಿ! ಆ ಗುಪ್ತವಾದ ಲೆಕ್ಕಪತ್ರಗಳನ್ನೆಲ್ಲಾ ಈ ನಿಮಿಷವೇ ತಂದು, ನಮ್ಮಿದಿರಿಗೆ ಸುಟ್ಟು ನೀರಲ್ಲಿ ಕದಡಿ ತೀರಿಸಬೇಕು— ತಿಳಿಯಿತೆ? ಆ ಬಳಿಕ ನೀವು ಮಾಡಿಟ್ಟಿರುವ ಪೈಶುನ್ಯದ ಕುಚೇಷ್ಟಿತವನ್ನು ತಿದ್ದುವುದಾಗಲಿ.

ಪ್ರವೇಶ ೨.

[ಸ್ಥಾನ :—ಶ್ರೀರಂಗಪಟ್ಟಣ, ಅರಮನೆಯೊಳಗೆ ನಾಟ್ಯಶಾಲೆ.]

(ಪರಮಸುಂದರಿಯರಾದ ಹೊನಹುಗಾರ್ತಿಯರನೇಕರು ವಿವಿಧಾಲಂಕಾರಭೂಷಿತೆಯರಾಗಿ, ಅಲಂಕೃತಿಮಾಡಿಕೊಳ್ಳುತ್ತ, ನಾನಾ ಅವಸ್ಥೆಗಳಲ್ಲಿರುವರು. ಕೆಲವರು ವೀಣೆ ಕೊಳಲು ಮದ್ದಳೆ ಮುಂತಾದ ಸಂಗೀತವಾದ್ಯಗಳನ್ನು ಬಾಜಿಸುತ್ತಲೂ, ಹಲ

ವರು ಮೆಲ್ಲಗೆ ಹಾಡಿಕೊಳ್ಳುತ್ತಲೂ, ಅರೆಬರು—ಅದೃಶ್ಯರಾಗಿರುವ ವಾದಕರ ವಾದಿತ್ರಗಳಿಗೆ ಅನುಸಾರವಾಗಿ—ನರ್ತನಮಾಡುತ್ತಲೂ, ಕೆಲರು ಬಳಲ್ದು ಮಲಗಿನ ವಿಶ್ರಾಮಪೀಠಗಳ ಮೇಲೆ ಪರಿವಡೆದೊರಗಿಯೂ, ಹಲಬರು ಮುದ್ದಾಗಿ ನಿದ್ರಿಸುತ್ತಲೂ, ಅನ್ಯರು ಸಕಲ ಸಾಧನಗಳಿಂದ ಸುಸಜ್ಜಿತೆಯರಾಗಿ ಪಟಗಳ ಮೇಲೆ ಚಿತ್ರಿಸುತ್ತಲೂ, ಹೆರರು ಓಲೆಯ ಪುಸ್ತಕಗಳನ್ನೋದಿಕೊಳ್ಳುತ್ತಲೂ ಇರುವರು. ಪಲರು ಆ ಅಂತರಂಗಣದ ಮಣಿಭಿತ್ತಿಗಳಲ್ಲಿ ಸಾಧಿತವಾದ ಚಮತ್ಕಾರಿಕವೂ ಚಿತ್ರವಿಧವೂ ಆದ ಚಿತ್ತಾರಗಳನ್ನು ನೋಡಿ ನೋಡಿ ಮಾತನಾಡಿಕೊಳ್ಳುತ್ತಿರುವರು. ಬೇರೆಯವರು ಅಕ್ಷಚತುರಂಗಾದಿಗಳನ್ನಾಡುತ್ತಿರುವರು. ಉಳಿದ ನೀರೆಯರಲ್ಲಿ ಕೆಲಬರು ಅವರಿವರನ್ನು ನೋಡಿ ವಿಮರ್ಶಿಸುತ್ತ ಮಿಕ್ಕವರು ಪುಷ್ಪಗಳನ್ನು ಕೋಯುತ್ತ ಸುಗಂಧದ್ರವ್ಯಗಳನ್ನು ನೇರ್ಪಡಿಸುತ್ತ ಇರುವರು.)

(ಈಷತ್ಕಾಲಾನಂತರ, ಮಹಾರಾಜನ ಪ್ರವೇಶ.)

(ಒಡನೆಯೇ ಅಲ್ಲಿ ಗಭೀರ ನಿಶ್ಶಬ್ದವಾಗಿದ್ದು, ತೆರೆತೆರೆಯಾಗಿ ಕಳಕಳವೇರುತ್ತಿರುವುದು.)

ಎಲ್ಲರೂ :—(ಎದ್ದು, ಹರ್ಷವಿಸ್ಮಯಗಳಿಂದ ಅವನನ್ನೇ ಈಕ್ಷಿಸುತ್ತಿರುವರು).

ಒರ್ವಳು :—(ಕಯ್ಮುಗಿದು) ಸುಸ್ವಾಗತವು, ಮದನಮೋಹನರಾಜ !

ಮಹಾರಾಜ :—(ದರಸ್ಮಿತನಾಗಿ, ತಲೆದೂಗುವನು.)

ಆಸುಂದರಿ :—(ಪುನಃ) ಜಯಜಯ ಶೃಂಗಾರರತ್ನಾಕರ !

ಸಕಲರೂ :—(ಕಯ್ಮುಗಿದು) ಜಯಜಯ ಶೃಂಗಾರರತ್ನಾಕರ !

ಆಕೆ :—ಜಯಜಯ ಪ್ರಣಯಪರಮೇಶ್ವರ !

ಸಮಸ್ತರೂ :—ಜಯಜಯ ಪ್ರಣಯಪರಮೇಶ್ವರ !

ಆಕೆ :—ಜಯಜಯ ಸಂಗೀತಲೋಲ !

ಅನಿಬರೂ :—ಜಯಜಯ ಸಂಗೀತಲೋಲ !

ಆಕೆ :—ಜಯಜಯ ಲಲ್ಲೆಯ ಲಾವಣ್ಯಲೀಲಾಲಲಿತ !

ಯಾವಲ್ಲಲನೆಯರೂ :—ಜಯಜಯ ಲಲ್ಲೆಯ ಲಾವಣ್ಯಲೀಲಾಲಲಿತ !

ಆಕೆ :—ಜಯಜಯ ಸಾನಂದಪರಮಸೌಂದರ್ಯಾವತಾರ !

ಸರ್ವರೂ :—ಜಯಜಯ ಸಾನಂದಪರಮಸೌಂದರ್ಯಾವತಾರ !

ಮತ್ತೊರ್ವಳು :—(ಎಲ್ಲರ ಬಗಸೆಗಳಿಗೂ ಪುಷ್ಪಗಳನ್ನು ತುಂಬುತಿದ್ದು, ತನ್ನ ಅಂಜಲಿಪುಟಗಳೊಳಗೂ ನಿಗುಂಬಿಸಿ ನಿಲಿಸಿಕೊಂಡು, ಅವನ್ನು ಸೇರ್ಕೆಗೆಯ್ದು, ಅನುವಾಗಿ ನಿಲ್ಲುವಳು.)

ಆಕೆ :—ಜಯಜಯ ಪ್ರಿಯದೇವ ! ರಾಜಕಂದರ್ಪ !

ಅಖಿಲರೂ :—ಜಯಜಯ ಪ್ರಿಯದೇವ ! ರಾಜಕಂದರ್ಪ ! ವಿಜಯೀಭವ! (ಎಂದು ಉದ್ಘೋಷಿಸುತ್ತ ಕುಸುಮಾಂಜಲಿಗಳನ್ನು ಮಹಾರಾಜನ ಮೇಲೆ ಚೆಲ್ಲುವರು.)

ಮಹಾರಾಜ :—(ಸುತ್ತನೋಡಿ, ನಿಡುಸುಯ್ದು, ಅವಾಙ್ಮುಖನಾಗಿ, ಒಂದು ಸುಖಾಸನದೆಡೆಗೆ ಹೋಗಿ ಕುಳಿತುಕೊಳ್ವನು.)

ಎಲ್ಲರೂ :—(ನಗುತನಗುತ ಮಹಾರಾಜನ ಸುತ್ತಮುತ್ತಿಕೊಳ್ಳುವರು.)

ಮೊದಲನೆಯ ಸುಂದರಿ :—ಪಾಮರತೆ !......ನಿನ್ನ ಆ ಲಜ್ಜೆಯಿಲ್ಲದ ದೀರ್ಘನಿಶ್ವಾಸವು ಈ ಅಪ್ಸರೆಯರ ಸದಸ್ಸಿನ ಆತ್ಮಗೌರವಕ್ಕೆ ಪುಣ್ಯ ಪರಿಪೂರ್ಣತೆಗೆ ಅಪಮಾನವನ್ನು ಅಳವಡಿಸುತ್ತಿರುವುದೆಂಬುದರ ಅರಿವು ನಿನಗುಂಟಾಯ್ತೆ, ರಾಜಕಂದರ್ಪ ? ಅದರ ಅರ್ಥವೇನು ?

ಬೇರೊರ್ವಳು :—(ಮಹಾರಾಜನ ತೊಡೆಯಮೇಲೆ ಕುಳಿತು, ಅವನ ಗಲ್ಲವನ್ನೆತ್ತಿ ಮುಖವನ್ನು ಕಣ್ಬೇಟದಿಂದ ಕಟಾಕ್ಷಿಸಿ, ಆ ತರುವಾಯ ಅವನನ್ನು ಹಾಗೆಯೇ ಆಲಿಂಗಿಸಿಕೊಳ್ಳಲು ನಳಿದೋಳ್ಗಳನ್ನು ಸಾಚುರ್ವಳು.)

ಮಹಾರಾಜ :—(ಮೆಲ್ಲಗೆ ದೃಢತೆಯಿಂದ ಅವಳ ಕಯ್ಗಳನ್ನು ಹಿಡಿದವಳನ್ನೆಬ್ಬಿಸಿ ನಿಲ್ಲಿಸಿ, ತಲೆಯನ್ನಲ್ಲಾಡಿಸಿ,) ಬೇಗನೆಯೇ ಈ ಅಪ್ಸರೆಯರ ಮಹಾ ಸದಸ್ಸು ಇಲ್ಲಿಂದ—ಈಯರಮನೆಯಿಂದ ಹೊರಟುಹೋಗುವುದು.

ನಿಖಿಳರೂ :—(ಬೆಚ್ಚಿ ನಿಂತು,) ಏನು !

ಮೊದಲನೆಯವಳು :—(ಅನತಿಕಾಲದಬಳಿಕ,) ಸ್ಥಾನಭ್ರಷ್ಟತ್ವವೆ ?

ಮಹಾರಾಜ :—(ತಲೆಯೆತ್ತಿ, ದೃಢಕಂಠದಿಂದ,) ಅಲ್ಲ. ಎಲ್ಲಿಯೇ ಆದರೂ ಇಂದಿನಿಂದ ನನಗೆ ಇಂತಹ ಆಟಪಾಟಗಳಿಗೆ ಅವಕಾಶವಿರದು.

ಮೊದಲವಳು :—ಅಂತದೇನು ?

ಇನ್ನೊರ್ವಳು :—ರಾಜಕಂದರ್ಪನು ಸನ್ಯಾಸವನ್ನು ಸ್ವೀಕರಿಸುವನು !

ಎಲ್ಲರೂ :—(ನಗುವರು.)

ಎರಡನೆಯ ಸುಂದರಿ :—(ಮಹಾರಾಜನ ಕತ್ತಿನಿಂದ ಮುತ್ತಿನ ಕಂಠಿಕೆಯನ್ನೂ, ತನ್ನ ಕೊರಲ ಬಿರಿಮುಗುಳ್ಗಳ ತೋರದಂಡೆಯನ್ನೂ, ತೆಗೆದುಕೊಂಡು, ಜೋಡಿಸಿ ಹಿಡಿದೆತ್ತಿ, ಆರನ್ನೋ ಬಾಗಿಲತ್ತ ಹೊಡೆದಟ್ಟುವಂತೆ ಅಭಿನಯಿಸುತ್ತ ಹೋಗಿ, ಕಪಟರೋಷದಿಂದ,) ಹೋಗೆ! ನಾಚುಗೆಯಿಲ್ಲದ ಹೇಡಿ! ತೊಲಗು! (ಹಿಂದಿರುಗುವಳು.)

ಮಹಾರಾಜ :—ಅದಾರು ?

ಎರಡನೆಯವಳು :—ಓೕ! ಅವಳೇ ?—ವೈರಾಗ್ಯದೇವತೆ.

ಸರ್ವರೂ :—(ಸುಹಾಸಿನಿಯರಾಗುವರು.)

ಮೂರನೆಯ ಸುಂದರಿ :—(ಆ ಸುಖಾಸನದ ಕೆಲದಲ್ಲಿ ಮಂಡಿಸಿ, ಮಹಾರಾಜನ ಬಾಹುವನ್ನೆತ್ತಿ ತನ್ನ ಕೊರಲ್ಗೆ ಸುತ್ತಿಕೊಳ್ಳುತ, ಪ್ರಣಯಪೂರಿತ ಸ್ವರದಿಂದ,) ಏನಾಯ್ತು, ಪ್ರಿಯಕಾಂತ ? ಇದೇಕೆ ನೀನಿಂದು ನಮ್ಮನ್ನು ಹೀಗೆ ಪರೀಕ್ಷಿಸುವೆ ? ನಮ್ಮ ಅಪರಾಧವಾವುದು ?

ಮಹಾರಾಜ :—(ತನ್ನ ಬಾಹುವನ್ನು ಮೆಲ್ಲಿನಿಂದೆಳೆದುಬಿಡಿಸಿಕೊಂಡು, ಅವರನಿಬರನ್ನೂ ನೋಡಿ,) ನೀವೆಲ್ಲರೂ ನನ್ನನ್ನು ಪ್ರೀತಿಸುವಿರಿ ;—

ಸಮಸ್ತರೂ .—(ಕಣ್ಮೊಗಗಳರಲ್ದು, ಪ್ರಣಯಸಾತ್ತ್ವಿಕಸ್ವರದಿಂದ,) ಅಹುದು !

ಮಹಾರಾಜ :—ನಿಮ್ಮ ಪರಿಶುದ್ಧವಾದ ಪ್ರೇಮಕ್ಕೆ ಪಾತ್ರನಾದ ನಾನು ಆವಾಗಳೂ ಇಲ್ಲಿ ನಿಮ್ಮೊಡನೆ ವಿಹಾರಿಸುತ್ತ ಕ್ರೀಡಿಸುತ್ತ ಸ್ವರ್ಗಸುಖವನ್ನಾರಾಧಿಸಿ ಅನುಭವಿಸುತ್ತಿರಲೇ ?

ಸಕಲರೂ :—ಅಹುದು, ರಾಜಕಂದರ್ಪ !

ಮಹಾರಾಜ :—(ಎದ್ದು ನಿಂತು,) ಅಥವಾ, ಸರ್ವಕರ್ತನಾದ ಪರಮೇಶ್ವರನು ನನ್ನ ಈ ಭುಜಕ್ಕೆ ಹೊರಿಸಿಟ್ಟಿರುವ ರಾಜ್ಯಭಾರವನ್ನಂಗೀಕರಿಸಿ ಅರ್ಥಮಾಡಿಕೊಂಡು, ನನ್ನ ಪ್ರಜಾಲೋಕವನ್ನು ಮಕ್ಕಳಂತೆ ಪರಿಪಾಲಿಸುತ್ತ, ನಾನು ಜನ್ಮಿಸಿದ ವೀರಕ್ಷತ್ರಿಯ ವಂಶಕ್ಕೆ ಪರಿಭವ ವಡಸದಂತೆ ಉದ್ದಾಮಶೌರ್ಯಔದಾರ್ಯಗಳನ್ನು ಬಳಸಿ, ನನ್ನ

ಹೆಸರನ್ನು ಸಾರ್ಥಕಮಾಡಿಕೊಂಡು, ಸತ್ತ್ವತಃ ಬಿರುದಂತೆಂಬರ ಗಣ್ಡನಾಗಿ, ಕಡುಪಿನ ಗಂಡುಗಲಿಗಳೂ ರಾಜನೀತಿವಿಶಾರದರೂ ಆದ ನನ್ನ ಶತ್ರುಗಳು ಸನ್ತತವೂ ನಡುಗುತ್ತಿರುವಂತೆ, ನಿಮ್ಮ ಪ್ರಣಯದ ಪುಣ್ಯದಿಂದ—ದಿಗನ್ತ ವಿಶ್ರಾಂತ ಕೀರ್ತಿಯ ಮಹಾ ರಾಜನಾಗಿ ರಾಜಿಸಲೆ ?

ಎಲ್ಲರೂ :—(ವಿವರ್ಣೆಯರಾಗಿ, ನಿಶ್ಶಬ್ದ.)

ಮೊದಲನೆಯವಳು :—(ಕಿರಿದುಹೊತ್ತಿನ ತರುವಾಯ, ಕ್ಷೀಣಕಂಪಿತಸ್ವರದಿಂದ,) ಅಹುದು, ರಾಜಕಂದರ್ಪ ; ನೀನು ಅಂತಹ ಮಹಾರಾಜನಾಗಬೇಕೆಂಬುದು ನಮ್ಮೆಲ್ಲರ ಆಸೆ.

ಪೆರಳೊರ್ವಳು :—(ಬಾಷ್ಪಗದ್ಗದಸ್ವರದಿಂದ,) ಆದರೆ,......ಆದರೆ,......

ಮೊದಲನೆಯವಳು :—(ಕಣ್ಣೊರಸಿಕೊಂಡು, ಮಾತನಾಡಿದವಳನ್ನು ಕಿಸುಗಣ್ಣಿ, ಮಹಾರಾಜನತ್ತ ತಿರುಗಿ,) ಆದರೆ, ಏನೂ ಇಲ್ಲ, ರಾಜಕಂದರ್ಪ ; ನೀನು ಅಂತಹ ಮಹಾರಾಜನೇ ಆಗಿ, ಪರಮೇಶ್ವರನ ಹೆಸರಿಗೆ, ಮಹೀ ಶೂರದೇಶಕ್ಕೆ, ನಿನ್ನ ಶೂರವಂಶದ ಬಿರುದಿಗೆ, ನಮ್ಮೆಲ್ಲರ ಪ್ರೇಮದ ವಿಶ್ವಾಸಕ್ಕೆ—ಆಸ್ತಿಕತೆಯನ್ನು ನೀನು ಒದವಿಸಬೇಕು. (ಸ್ವಲ್ಪ ಕಾಲದ ಅನಂತರ, ಅವನತಮುಖಿಯಾಗಿ, ಕಿರುದನಿಯ ಗದ್ಗದದಿಂದ,) ಹೋಗಿಬರುವೆವು, ರಾಜಕಂದರ್ಪ.

ಮಹಾರಾಜ :—(ನಿರ್ವಿಣ್ಣನಾಗಿರುವನು.)

ಮೊದಲನೆಯವಳು :—(ಮೊಗವೆತ್ತಿ, ತನ್ನಗೆಳತಿಯರಿಗೆಲ್ಲ ಸನ್ನೆಮಾಡುವಳು.)

ಹೆಂಗುಸರೆಲ್ಲ :—(ಹೊರಡುವರು.)

ಮೂರನೆಯವಳು :—(ಮಹಾರಾಜನನ್ನೆಯ್ದಿ, ಅಳುತಳುತ್ತ,) ನಿನ್ನ ಕಾಲ ಕಿರಿಯುಂಗುಟದ ನಖಮಣ್ಡಲವನ್ನಾದರೂ, ಒಮ್ಮೆ—ಕಡೆಯಬಾರಿ—ಒಮ್ಮೆ, ಮುದ್ದಿಸಿಹೋಗುವೆನು, ಪ್ರಿಯತಮ ! (ಅವನ ಕೆಂದಳವನ್ನು ಹಿಡಿದುಕೊಳ್ಳಳು.)

ಇತರೆಯೊರ್ವಳು :—ಅಯ್ಯೋ ! ಇನ್ನು ನಮ್ಮ ಜೀವನಕ್ಕೆ—

ಮಹಾರಾಜ :—ನಿಮಗೆ ಒಬ್ಬೊಬ್ಬರಿಗೂ ಹತ್ತು ಹತ್ತು ಸಾಯಿರವರಹಗಳನ್ನು ನನ್ನ ಕೋಶಗೃಹದಿಂದ ಕುಡಬೇಕೆಂದು ನಿಯಮಿಸಿರುವೆನು.

ಮೊದಲ ಆಕೆ :—**(ಆ ಇತರೆಯನ್ನು ನೀರುತುಂಬಿದ ಕಣ್ಣುಗಳಿಂದ ದೃಷ್ಟಿಸಿನೋಡಿ, ಔಡುಗಚ್ಚಿ,)** ಕೀಳ್ವಣ್ಣದ ಹೆಣ್ಣು !

ಸ್ತ್ರೀಜನರೆಲ್ಲ :—**(ಹೋಗುವರು.)**

ಮಹಾರಾಜ :—**(ಅತ್ತನೋಡುತಿದ್ದು, ಆ ಸುಖಾಸನದೊಳಗೆ ಕುಳಿತು, ಕಯ್ಮೊಗನಾಗಿ ಚಿಂತಿಸುತ್ತಿರುವನು.)**

(ಮಹಾಮಾತೃಶ್ರೀ ಶಿವಮ್ಮಾಜಮ್ಮಣ್ಣಿಯ ಪ್ರವೇಶ.)

ಮಹಾಮಾತೃಶ್ರೀ :—**(ನಿಂತು, ಮಾತೃವಾತ್ಸಲ್ಯದ ಪುಣ್ಯದೃಷ್ಟಿಯಿಂದ ಮಹಾರಾಜನನ್ನು ಪಾವನಮಾಡಿ, ಹೋಗಿ, ಅವನ ಉಷ್ಣೀಷದ ಮೇಗೆ ಕಯ್ಯಿರಿಸಿ,)** ಪುಟ್ಟಸ್ವಾಮಿ !

ಮಹಾರಾಜ :—**(ತಲೆಯೆತ್ತಿನೋಡಿ, ತಟ್ಟನೇಳುತ್ತ,)** ಅಮ್ಮಯ್ಯ !—ಬನ್ನಿ, ಕುಳಿತುಕೊಳ್ಳಿ. ನಾಟ್ಯಶಾಲೆಗೆ· ·ನೀವು!· · · · · ·ಇಲ್ಲಿಗೆ· ·ಬರುವುದೆಂದರೆ—

ಮಹಾಮಾತೃಶ್ರೀ :—ಇಂದು ಬೆಳಗಾಗುತ್ತಲೇ ನನಗೆ ಪುತ್ರೋತ್ಸವವಾಯ್ತು ; ಆ ಆನಂದ ಸಂಭ್ರಮದಲ್ಲಿ ನನಗೆ ಕಾಲದೇಶನಿಮಿತ್ತಗಳ ಪರಿಜ್ಞಾನವು ನಷ್ಟವಾಗಿ ಹೋಗಿದೆ, ಕಂದ.

ಮಹಾರಾಜ :—**(ನಕ್ಕು,)** ಅಹುದು, ಅಮ್ಮಯ್ಯ ; ಇಂದೇ ತಾನೇ ನನಗೂ ಜನ್ಮಾಂತರ ಪ್ರವೇಶವಾದುದು.—ಅಮ್ಮಯ್ಯ, ನೀವು ಕುಳಿತುಕೊಳ್ಳಿ !

ಇಬ್ಬರೂ :—**(ಸುಖಾಸನಗಳಲ್ಲಿ ಆಸೀನರಾಗುವರು.)**

ಮಹಾಮಾತೃಶ್ರೀ :—ಪುಟ್ಟಸ್ವಾಮಿ, ಹೀಗೆ ಅಕಸ್ಮಾತ್ತಾಗಿ ಈ ವಿಪರೀತ ಪ್ರಚಾರದ ಸೌಭಾಗ್ಯಕ್ಕೆ ಕಾರಣವೇನು ? **(ಸುತ್ತನೋಡಿ, ಪ್ರಫುಲ್ಲಾಸ್ಯೆಯಾಗಿ,)** ಮತ್ತೆ,· · · · · · · ·

ಮಹಾರಾಜ :—(ಬೆಳ್ನಗೆವೆರಸು,) ಅಹುದು, ಅಮ್ಮಯ್ಯ ; ನನ್ನ ಅಪ್ಸರೆಯರನ್ನು ಬೀಳ್ಕೊಂಡು, ಅವರವರ ಸ್ಥಾನಗಳಿಗೆ ಕಳಿಹಿಕಳಿದೆನು. ಇನ್ನು ಆ ಅಪ್ಸರೆಯರಿಗೆ ಬದಲಾಗಿ ಪ್ರಧಾನಮಂತ್ರಿಗಳೂ, ಸಂಗೀತವಾದ್ಯಗಳೆಡೆಯಲ್ಲಿ ಶಸ್ತ್ರಾಸ್ತ್ರಗಳೂ, ಸಾರಿಮೇಳಕ್ಕೆ ಪ್ರತಿಯಾಗಿ ಸಪ್ತಾಂಗಮುದ್ರೆಯ ಮಂತಣಗಳೂ, ಆ ಸ್ವರ್ಗಸುಖದ ಪದವಿಗೆ ನನ್ನ ಪ್ರಜೆಗಳ ಕ್ಷೇಮಾಭ್ಯುದಯಗಳೂ ಕಯ್ಗೂಡಿ ನೆರವೇರಿ—ನಿಮ್ಮ ಆಶೀರ್ವಾದದಿಂದ—ನನ್ನನ್ನು ಚರಿತಾರ್ಥನನ್ನಾಗಿ ಮಾಡಬೇಕಾಗಿದೆ.

ಮಹಾಮಾತೃಶ್ರೀ :—(ಕಂಪಿತಸ್ವರದಿಂದ,) ಮಹಾದೇವನು ನಿನಗೆ ಮಂಗಳವನ್ನುಂಟುಮಾಡಿ, ರಕ್ಷಿಸಿಕೊಳ್ಳಲಿ, ಕಂದ !

ಮಹಾರಾಜ :—(ಎದ್ದು, ತನ್ನ ಮಾತೆಗೆ ನಮಸ್ಕರಿಸಿ, ಕುಳ್ಳಿರುವನು.)

ಮಹಾಮಾತೃಶ್ರೀ :—(ಅನತಿಕಾಲದಬಳಿಕ,) ಪುಟ್ಟಸ್ವಾಮಿ, ವಿಕ್ರಮರಾಯನನ್ನು ಏನುಮಾಡುವೆ ?

ಮಹಾರಾಜ :—ಅವನ ಕೃತ್ರಿಮತೆಯನ್ನು ಸುಳ್ಳುಲೆಕ್ಕಪತ್ರಗಳನ್ನು ದ್ರೋಹವನ್ನು ನಾಳಿನ ಓಲಗಸಾಲೆಯಲ್ಲಿ ಲೋಕಕ್ಕೆ ತಿಳಿಯುವಂತೆ ವಿಚಾರಿಸಿ, ವ್ಯಕ್ತಗೊಳಿಸಿ, ತರುವಾಯ ಅವನ ಸರ್ವಸ್ವವನ್ನೂ ಅರಮನೆಗೆ ತೆಗೆದುಕೊಂಡು, ಅವನನ್ನು ದೊಡ್ಡಗಿಡ್ಡಂಗಿಗೋ—ಶೂಲದಮರದ ತುತ್ತತುದಿಗೋ ನೂಕಿತೀರಿಸುವೆನು.

ಮಹಾಮಾತೃಶ್ರೀ :—ಎರಡನೆಯದೇ ಕ್ಷೇಮಕರವಾದುದು.

ಮಹಾರಾಜ :—ಹಾಗೆಯೇ ಆಗಲಿ, ಅಮ್ಮಯ್ಯ.

ಮಹಾಮಾತೃಶ್ರೀ :—(ಬೇವಸದಿಂದಿದ್ದು,) ಆದರೂ, ಅವನ ವಿಷಯದಲ್ಲಿ ಎಚ್ಚರಿಂದಿರು, ಪುಟ್ಟಸ್ವಾಮಿ !—ನಿನ್ನ ಅಪ್ಪಾಜಿಯವರ ಕಾಲಾನಂತರದಲ್ಲಿ, ಎಂದರೆ ಸುಮಾರು ಇಪ್ಪತ್ತು ವರುಷಗಳಿಂದ, ರಾಜ್ಯದ ಆಯವ್ಯಯಗಳೆಲ್ಲಾ ದಳವಾಯಿಗಳ ಕಯ್ಯಳತೆಯಾ

ಗಿದ್ದು, ಆ ದುರಾಶೆಯ ಧೂರ್ತರು ರಾಜಶಕ್ತಿಯ ದುರುಪಭೋಗದ...ಆ ಸವಿಯನ್ನು ಕಂಡುಕೊಂಡಿದ್ದಾರೆ. ನಿನಗೆ ಮೊದಲು ಆಳಿದ ನಿನ್ನ ಅಣ್ಣಾಜಿಯವರ ಮಕ್ಕಳು, ಚಾಮರಾಜಒಡೆಯರು, ಪಟ್ಟಕ್ಕೆ ಬಂದಾಗ ಏನೊಂದನ್ನೂ ಅರಿಯದ ಮಗುವಾಗಿದ್ದರು; ಅವರಿಗೆ ಪಾಠವನ್ನೋದಿಸುತ್ತಿದ್ದ ರಂಗನಾಥ ದೀಕ್ಷಿತ, ದಳವಾಯಿಯಾಗಿದ್ದ ಬೆಟ್ಟದ ಅರಸು, ಬೊಮ್ಮರಸ ಪಂಡಿತ—

ಮಹಾರಾಜ:—ಆರು! ಈಗಳೂ ಅರಮನೆಗೆ ಔಷಧವನ್ನೊಪ್ಪಿಸುವ ನಿಯೋಗಿ ಬೊಮ್ಮರಸ ಪಂಡಿತನೆ?

ಮಹಾಮಾತೃಶ್ರೀ:—ಅಹುದು, ಇವರೆಲ್ಲ ಆ ಚಾಮರಾಜಒಡೆಯರಿಗೆ ರಾಜ್ಯದಾಡಳಿತಗಳಲ್ಲಿ ಒಮ್ಮೆಯೂ ಮನವಾಗದಂತೆ—ಅವರು ಸರ್ವದಾ ಸ್ತ್ರೀಲೋಲರಾಗಿರುವಂತೆಯೂ ಸಮಕಟ್ಟಿ,ಆಳುತ್ತಿದ್ದರು.

ಮಹಾರಾಜ:—ನೀಚರು! ......ಅದಕ್ಕೆ ವಿಕ್ರಮರಾಯನ ಒಪ್ಪಿಗೆಯೂ ಸಹಾಯವೂ ಇದ್ದಿತಷ್ಟೆ?

ಮಹಾಮಾತೃಶ್ರೀ:—ಆಗ ಅವನೂ ಒಬ್ಬ ದಳವಾಯಿಯಲ್ಲವೆ?

ಮಹಾರಾಜ:—(ನೆಗೆದೆದ್ದು ಶತಪಥ ತಿರುಗುತಿದ್ದು, ಥಟ್ಟನೆ ನಿಂತು,) ಆಗ ನೀವು—ಅರಮನೆಯವರು......ಅನ್ತಃಪುರದವರು......ನೀವು ಮಾಡುತ್ತಿದ್ದುದೇನು?

ಮಹಾಮಾತೃಶ್ರೀ:—(ಮೆಲ್ಲಗೆ,) ನಮ್ಮಿಂದೇನೂ ಆಗುವಂತಿರಲಿಲ್ಲ; ನಾವು ಅಬಲೆಯರಾದ ಹೆಂಗುಸರು.

ಮಹಾರಾಜ:—ಹೆಂಗುಸರು! (ದಡದಡನೆ ಶತಪಥ ತಿರುಗುತ್ತಿದ್ದು, ನಿಂತು, ಎದೆಯಮೇಲೆ ಕರತಳವನ್ನಿಟ್ಟು ಒಂದೆರಡುಬಾರಿ ಕೆಮ್ಮಿ, ಸಮೀಪದ ಸುಖಾಸನವೊಂದರಲ್ಲಿ ಕುಳಿತು, ಮುಂಗಯ್ಯಿಂದ ಕಪೋಲಗಳನ್ನು ಪರೀಕ್ಷಿಸಿಕೊಳ್ಳುತಿದ್ದು, ಹಿಂದಕ್ಕೊರಗಿ, ಕಯ್ಗಳನ್ನು ಹೆಡಕಿನ ಕೆಳಗೆ ಜೋಡಿಸಿಕೊಳ್ಳುತ್ತ ದೀರ್ಘನಿಶ್ವಾಸವನ್ನು ಬಿಡುವನು.)

ಮಹಾಮಾತೃಶ್ರೀ :—(**ಭಯಗೊಂಡೆದ್ದು ಹೋಗಿ, ಮಹಾರಾಜನ ಕೆನ್ನೆಯನ್ನು ಮುಟ್ಟಿನೋಡಿ, ತಳ್ಳಂಕದಿಂದ,**) ಜ್ವರ!—ಕಂದ, ನಿನಗೆ ಜ್ವರವು ಬಂದಿದೆ!

ಮಹಾರಾಜ :—(**ಎವೆಗಳನ್ನು ಮುಚ್ಚಿ ತೆರೆದು, ಮೆಲ್ಲನೆ,**) ಇರಬಹುದು, ಅಮ್ಮಯ್ಯ ; ನನ್ನ ದೇಹಕ್ಕೆ ಬಹಳ ಆಯಾಸವಾದಂತಿದೆ. ಓ! ಆದೇನೂ ಇಲ್ಲ, ಅಮ್ಮಯ್ಯ ; ನೀವು ಹೆದರಬೇಡಿ. ಇಂದು ಬೆಳಗಿನಿಂದಳವಟ್ಟ ಅನೇಕ ಉದ್ವೇಗ—ಮನೋವಿಕಾರಗಳಿಂದ ನನಗೆ ಬಳಲ್ಕೆಯಾಗಿದೆ, ಅಷ್ಟೇ. ಸ್ವಲ್ಪ ಅಭ್ಯಾಸವಾದರೆ,.........
(**ಕಣ್ಮುಚ್ಚಿಕೊಳ್ವನು**)

ಮಹಾಮಾತೃಶ್ರೀ :—ಪಂಡಿತರಿಗೆ ಹೇಳಿಕಳುಹುವೆನು.

ಮಹಾರಾಜ :—(**ಕಿರಿದುಹೊತ್ತಿನಬಳಿಕ, ಕನವರಿಸುವನೆಂಬಂತೆ,**) ಹುಂ.

ಪ್ರವೇಶ ೩.

[**ಸ್ಥಾನ:—ಶ್ರೀರಂಗಪಟ್ಟಣ, ವಿಕ್ರಮರಾಯನ ಹರ್ಮ್ಯಾಗ್ರದ ಮೊಗಸಾಲೆ.**]

(**ವಿಕ್ರಮರಾಯನು ಬರೆಯುತ್ತಿರುವನು.**)

ವಿಕ್ರಮರಾಯ :—(**ಕಡೆಗೆ,**) ತುಂಗ!—ತುಂಗ!—ತುಂಗ!

(**ತುಂಗರಾಯನು ಓಡಿಬರುವನು.**)

ತುಂಗರಾಯ :—ಶ್ರೀಮಂತರು ಕರೆದಂತಾಯ್ತು.

ವಿಕ್ರಮರಾಯ :—ಈವೋಲೆಗೆ ಕರಣಿಕರಿಂದ ನಮ್ಮ ಮುದ್ರೆಯನ್ನು ಹಾಯ್ಕಿಸಿ, ಒಡನೆಯೇ ನೀನಿದನ್ನು ತೆಗೆದುಕೊಂಡು ಹೊರಟು, ನಾಳೆ ಬೆಳಗಾಗುವುದರೊಳಗಾಗಿ ತೆರಕಣಾಂಬಿಯಲ್ಲಿರುವ ನಮ್ಮ ನರಸರಾಜನಿಗೆ ಮುಟ್ಟಿಸಬೇಕು.

ತುಂಗರಾಯ :—ಶ್ರೀರಣಧೀರಕಂಠೀರವನರಸರಾಜರಿಗೆ ?

ವಿಕ್ರಮರಾಯ :—ಅಹುದು.

ತುಂಗರಾಯ :—ಅಪ್ಪಣೆ.

ವಿಕ್ರಮರಾಯ :—ಅಲ್ಲಿಯವರಾರಾದರೂ ರಾಜಧಾನಿಯ ವೃತ್ತಾಂತ ವೇನೆಂದು ಬೆಸಗೊಂಡರೆ, ಶ್ರೀಮನ್ಮಹಾರಾಜ ಇಮ್ಮಡಿರಾಜಬಡೆಯರು ಸ್ವರ್ಗಸ್ಥರಾದರೆಂದು ಹೇಳು.

ತುಂಗರಾಯ :—(**ನಡನಡುಗಿ, ಬಣ್ಣಗೆಟ್ಟು, ಬಿಡುಗಣ್ಣನಾಗಿದ್ದು, ಒಣಗಿದ ತುಟಿಗಳನ್ನು ಇರ್ಪುಗುಂದಿದ ನಾಲಗೆಯಿಂದ ಸವರಿಕೊಂಡು,**) ಆದರೆ,...... ಆದರೆ,......ಮಹಾರಾಜರು ಇನ್ನೂ ಬದುಕಿರುವರು ; ಅವರು ಇನ್ನೂ—ಸತ್ತಿಲ್ಲ.

ವಿಕ್ರಮರಾಯ :—(**ತುಂಗರಾಯನನ್ನು ಕೆಂಡಗಣ್ಗಳಿಂದ ನಿಟ್ಟಿಸುತಿದ್ದು,**) ನಮ್ಮ—ದಳವಾಯಿ ವಿಕ್ರಮರಾಯನ—ಮಾತಿನಲ್ಲಿ ನಿನಗೆ ಅವಿಶ್ವಾಸವುಂಟಾಯ್ತೆ ? ಇಲ್ಲದಿದ್ದರೆ, ನೀನು ಹೇಡಿಯಾದೆಯೊ ?

ತುಂಗರಾಯ :—(**ನಿಮಿರಿನಿಂತು,**) ಎರಡೂ ಇಲ್ಲ.

ವಿಕ್ರಮರಾಯ :—ಹೋಗು......ರಾಜಧಾನಿಯಲ್ಲಿ ಏನು ?

ತುಂಗರಾಯ :—(**ಅದೃಢಸ್ವರದಿಂದ,**) ಆಳಿದ ಮಹಾಸ್ವಾಮಿಯವರು ಶ್ರೀಮನ್ಮಹಾರಾಜ ಇಮ್ಮಡಿರಾಜಬಡೆಯರು ನಿನ್ನೆ ಸ್ವರ್ಗಸ್ಥರಾದರು. ರಾಜಧಾನಿಯು...ದೇಶವೇ ಶೋಕಸಾಗರದಲ್ಲಿ ಮುಳುಗಿಹೋಗಿದೆ.

ವಿಕ್ರಮರಾಯ :—ಹುಂ. ಹಾಗೆಂದೂ ಈ ಓಲೆಯಲ್ಲಿ ಬರೆದಿರುವೆವು ; ಜೋಕೆ !

ತುಂಗರಾಯ :—(**ಓಲೆಯನ್ನು ತೆಗೆದುಕೊಂಡು, ಹೊರಡುವನು.**)

ವಿಕ್ರಮರಾಯ :—ತಡೆ, ತುಂಗ ; ಆ ಕಳ್ಳಕರಣಿಕರು ಅದಕ್ಕೆ ಮುದ್ರೆಯನ್ನಂಕಿಸುವಾಗ ಒಳಗಣ ಬರೆಹವನ್ನೋದಿಕೊಳ್ಳದಂತೆ ಎಚ್ಚತ್ತು ನೋಡಿಕೊಳ್ಳುತ್ತಿರು.

ತುಂಗರಾಯ :—ಅಪ್ಪಣೆ.

ವಿಕ್ರಮರಾಯ :—ಕೆಳಗಣ ಅಂಗಳದಲ್ಲಿರುವ ಬೊಮ್ಮರಸಪಣ್ಡಿತನನ್ನಿತ್ತ ಕಳಿಹಿ, ಆ ಬಳಿಕ ನೀನು ಕರಣಿಕರ ಚಾವಡಿಗೆ ಹೋಗು.

ಹೈದರಾಲಿಯ ನ್ಯಾಯಪಕ್ಷಪಾತ.

(೧)

ಈ ದಿನ ಮದನನ ಅರಮನೆಯಲ್ಲಿ ದೊಡ್ಡದೊಂದು ಉತ್ಸವ. ಮದನನ ಅರಮನೆಯೆಂಬುದು ಕೊಯಿಮತ್ತೂರಿನ ಪಶ್ಚಿಮಭಾಗದಲ್ಲಿ ಒಂದು ದೊಡ್ಡಪ್ರಸಾದ. ಅದು ಅಲ್ಲಿಗೆ ರಾಜನಾಗಿದ್ದ ಮದನನು ವಾಸಮಾಡುತ್ತಿದ್ದ ಅರಮನೆ. ಆತನ ಕಾಲವು ಕಳೆದು ಹೈದರಾಲಿಯು ಅಲ್ಲಿ ವಾಸಮಾಡತೊಡಗಿ ಆರೇಳು ವರ್ಷಗಳಾದರೂ ಆ ಪ್ರಾಸಾದಕ್ಕೆ 'ಮದನನ ಅರಮನೆ' ಯೆಂಬ ಅಂಕಿತವು ತಪ್ಪಿರಲಿಲ್ಲ. ಹೈದರಾಲಿಯು ಅದನ್ನು ಆವಾಸಸ್ಥಾನವನ್ನಾಗಿ ಏರ್ಪಡಿಸಿಕೊಂಡವನು ಶಿಥಿಲವಾಗಿ ಅತ್ಯಂತ ಕ್ಷೀಣದಶೆಯಲ್ಲಿದ್ದ ಆ ಕಟ್ಟಡವನ್ನು ಉದ್ಧರಿಸಿ ಅಲಂಕಾರಮಾಡಿ ಮದನನ ಅರಮನೆಯೆಂಬ ಹೆಸರನ್ನು ಅನ್ವರ್ಥನಾಮವನ್ನಾಗಿ ಮಾಡಿದನು. ಅಲ್ಲಿನ ಅಣಿಯನ್ನು ನೋಡಿದರೆ ನವಾಬನು ಭೋಗಿಯೆಂದೂ ಸುಖಜೀವಿಯೆಂದೂ ಊಹಿಸಬಹುದಾಗಿತ್ತು.

ಅದರ ರಂಗಮಹಲಿನ ಅಗ್ರಭಾಗದಲ್ಲಿ ಪೂರ್ವದಿಕ್ಕಿಗೆದುರಾಗಿ ಚಚ್ಚೌಕನಾದೊಂದು ಎತ್ತರವಾದ ಸ್ಥಳವಿದ್ದಿತು. ಅದರ ಅಂಚಿನಲ್ಲಿ ನಾಲ್ಕು ಮೂಲೆಗಳಲ್ಲಿಯೂ ಜೋಡಿಗಂಬಗಳು ಜರತಾರಿಯ ಕೆಲಸಮಾಡಿದ ಕಿಂಕಾಬಿನ ಬಟ್ಟೆಯನ್ನು ಹೊದ್ದ ಮಂಟಪವನ್ನು ಹೊತ್ತುಕೊಂಡು ನಿಂತಿದ್ದುವು. ಚಾವಣಿಗೂ ಸೂರುಗಳಿಗೂ ಅನುರೂಪವಾದ ಅಲಂಕಾರ. ವೇಜ್ಜದ ಮೇಲೆ ಗಣನೆಯಿಲ್ಲದ ರೀತಿಯಲ್ಲಿ ಅಲಂಕೃತವಾದ ಆ ಪ್ರದೇಶದಲ್ಲಿ ನವಾಬನು ಕುಳಿತು ರಾಜ್ಯದಾಡಳಿತವನ್ನು ನಡೆಯಿಸುತ್ತಿದ್ದನು.

ಈ ದಿನ ಮಧ್ಯಾಹ್ನ ನವಾಬನು ತನ್ನ ಬಳಿಯಲ್ಲಿ ನೌಕರನಾಗಿದ್ದು ಈಗ ವಯಸ್ಸಾದುದರಿಂದ ಆ ನೌಕರಿಯನ್ನು ಬಿಡುವುದರಲ್ಲಿದ್ದ ಆಗಾಮಹಮದನಿಗೆ ಬಹುಮಾನ ಮಾಡುವನು. ಆಗಾಮಹಮದನು ನವಾಬನ ವಿಶ್ವಾಸಕ್ಕೆ ಪಾತ್ರನಾದವನು. ಬಹು ಕಾಲದಿಂದಲೂ ಅವನ ಬಳಿಯಲ್ಲಿಯೇ ಇರುತ್ತ ಕಷ್ಟಸುಖಗಳೆರಡರಲ್ಲಿಯೂ ನವಾಬನನ್ನು ಅನುಸರಿಸಿದ್ದನು. ನವಾಬನೆಂದು ಅಂಕಿತವನ್ನು ಧರಿಸಿ ಮೈಸೂರು ರಾಜ್ಯವನ್ನು ಆಳಲಾರಂಭಿಸಿದ ಮೇಲೆ, ಹೈದರನು ಅವನನ್ನು ಬಿಟ್ಟಿರ

ಈ ಕಥೆಯು M. M. D. L. T. ಎಂಬ ಫ್ರೆಂಚ್ ಲೇಖಕನೊಬ್ಬನು ಬರೆದ ಹೈದರ್ ಅಲಿಯ ಚರಿತ್ರೆಯ ಒಂದು ಸಂಗತಿಯನ್ನು ತೆಗೆದುಕೊಂಡು ವಿಸ್ತರಿಸಿದ್ದಾಗಿದೆ.

ಲಾರದೆಯೂ ಅವನು ಹೈದರನನ್ನು ಬಿಟ್ಟಿರಲಾರದೆಯೂ ಆಗಿ ಆಗಾಮಹಮದನು ಖಾಸ್‌ಭಕ್ಷಿಯೆಂದು ಅಧಿಕಾರವನ್ನು ಪಡೆದು ನವಾಬನ ಬಳಿಯಲ್ಲಿ ನಿಂತನು. ಆಗಿನಿಂದ ಇದುವರೆಗೆ ತನ್ನಂತಹ ಸೇವಕನಿಲ್ಲವೆನ್ನಿಸಿಕೊಂಡು ಕೆಲಸಮಾಡಿದನು. ನವಾಬನು ಅವನಿಗೆ 'ಖಾನ್' ಎಂಬ ಬಿರುದನ್ನೂ ಇತರ ಖಿಲ್ಲತ್ತುಗಳನ್ನೂ ರಾಮಗಿರಿಯೆಂಬ ಜಹಗೀರಿಯನ್ನೂ ಅನುಗ್ರಹಿಸುವುದಾಗಿ ನಿಷ್ಕರ್ಷೆಯಾಗಿತ್ತು.

ಸಭೆಗೆ ಬಂದು ಕುಳಿತು ಆ ದಿನದ ವಿಶೇಷ ಸಮಾಚಾರಗಳನ್ನು ಕೇಳಿ, ಬಂದಿದ್ದ ಮುಖ್ಯಸ್ಥರೊಡನೆ ಕುಶಲಪ್ರಶ್ನೆಗಳಾದ ಮೇಲೆ ಹೈದರನು ಆಗಾಮಹಮದನನ್ನು ಕರೆಯಿಸಿದನು. ಅವನು ಕಾಣಿಸಿಕೊಂಡು ಮುಜರೆ ಮರ್ಯಾದೆಗಳಾದ ಮೇಲೆ ನವಾಬನು ಹಾರವನ್ನು ತರಿಸಿ ಅವನ ಕೊರಳಿಗೆ ಹಾಕಿದನು. ನವಾಬನ ಸ್ವಂತಹಸ್ತದಿಂದ ಆ ರೀತಿಯಾಗಿ ಬಹುಮಾನವನ್ನು ಪಡೆಯುವುದು ಸುಲಭವಲ್ಲ. ಅಂತಹ ಮನುಷ್ಯನ ಯೋಗ್ಯತೆಯು ಅಪರಿಮಿತವಾದುದೆಂದು ಎಣಿಸಲ್ಪಡುತ್ತಿದ್ದಿತು. ಹಾರಹಾಕಿದ ಮೇಲೆ ಆಗಾಮಹಮದನು ನೆಟ್ಟಗೆ ನಿಂತು ಸಲಾಮುಮಾಡಿ ಕೈಜೋಡಿಸಿ ನಿಂತನು. ಖಿಲ್ಲತ್ತುಗಳನ್ನು ಅಧಿಕಾರಿಗಳು ಸಲ್ಲಿಸಿದರು. ಭಕ್ಷಿಯೊಬ್ಬನು ಕಾಗದದ ಸುರುಳಿಯೊಂದನ್ನು ಅವನ ಕೈಗಿಟ್ಟನು. ನವಾಬನು ಅದನ್ನು ತೋರಿಸುತ್ತ ಹೀಗೆಂದನು. "ಆಗಾಮಹಮದ್, ಜಹಗೀರಿಯು ಪುತ್ರಪೌತ್ರ ಪರಂಪರೆಯಾಗಿ ನಿನ್ನಿಂದ ಅನುಭವಿಸಲ್ಪಡತಕ್ಕದ್ದೆಂದು ಆ ಸನ್ನದು ನಿನ್ನ ಸ್ವಾಮ್ಯವನ್ನು ಹೊಗಳುವುದು. ಅದನ್ನು ತೆಗೆದುಕೊ; ಸುಖದಿಂದ ಜೀವನಮಾಡು. ಪಟ್ಟಣದಲ್ಲಿ ಬಂದು ಆಗಾಗ್ಗೆ ನಮ್ಮನ್ನು ಕಾಣುತ್ತಿರು. ದೇವರು ನಿನಗೆ ಶ್ರೇಯಸ್ಸನ್ನೂ ಕಲ್ಯಾಣವನ್ನೂ ಉಂಟುಮಾಡಲಿ!"

ಆಗಾಮಹಮದ್‌ಖಾನನು ಆ ಗೌರವವನ್ನು ಶಿರಸಾವಹಿಸಿ ತಾನು ಇಂದಿಗೆ ಧನ್ಯನಾದೆನೆಂದೂ ಜನ್ಮವನ್ನೆತ್ತಿದುದು ಸಾರ್ಥಕವಾಯಿತೆಂದೂ ಎಣಿಸಿಕೊಂಡನು. ಆ ಕಾಲದಲ್ಲಿ ಅವನಂತಹ ಸುಖಿಯು ಮತ್ತೊಬ್ಬನಿರಲಿಲ್ಲ.

ಸಭೆಯು ಕೊನೆಗೊಂಡಿತು. ಆದರೆ ಪುರಸ್ಕಾರವು ಇನ್ನೂ ಪೂರೈಸಲಿಲ್ಲ. ಆಗಾಮಹಮದ್‌ಖಾನನ ಗೌರವಕ್ಕಾಗಿ ಸಂಜೆಗೆ ನಾಟಕವೊಂದನ್ನು ನವಾಬನ ನಾಟಕದ ಪಡೆಯವರು ಅಭಿನಯಿಸಿದರು. ಅದರಲ್ಲಿ ಮೆಹರಳು ತನ್ನ ಅಭಿನಯದಿಂದಲೂ ನರ್ತನದಿಂದಲೂ ಎಲ್ಲರನ್ನೂ ಮೋಹಗೊಳಿಸಿಬಿಟ್ಟಳು.

(೨)

ಆಗಾಮಹಮ್ಮದನಂತೆ ಮೆಹರಳೂ ಸುಲ್ತಾನರ ಆಶ್ರಿತಳು. ಅವಳು ಖಾಸ್ ಭಕ್ಷಿಯಷ್ಟು ದೊಡ್ಡ ಅಧಿಕಾರಕ್ಕೆ ಬರದಿದ್ದರೂ ತನ್ನ ಕೆಲಸದಲ್ಲಿ ಒಳ್ಳೆಯ

ಹೆಸರನ್ನು ಪಡೆದು ಹೈದರನ ಮೆಚ್ಚಿಕೆಗೆ ಪಾತ್ರಳಾಗಿದ್ದಳು. ಆದ್ದರಿಂದ ಭಕ್ಷಿಗೆ ಅವಳಮೇಲೆ ಮೊದಲಿಂದ ಅನುರಾಗವಿದ್ದರೂ ಅದನ್ನು ಬಾಯಿಬಿಟ್ಟು ಹೇಳುವಂತಿರಲಿಲ್ಲ. ಮೊದಲು ಸಾಮಾನ್ಯನಾಗಿದ್ದರೂ ಕ್ರಮೇಣ ಧನಸಂಪಾದಿಸಿಯಾಯಿತು, ಇತರರಿಗಿಂತ ಒಂದು ಕೈ ಮೇಲಾಗಿ ಜೀವಿಸುವಷ್ಟು ಸಿರಿವಂತನಾದನು. ಆದರೆ ಅವನ ರಾಣಿವಾಸವು ಬರಿದಾಗಿದ್ದಿತು. ಈಗ ಅದನ್ನು ತುಂಬಬೇಕೆಂಬ ಆಶೆಯು ಬಲವಾಗಿತ್ತು; ಯಾರನ್ನು ಬೇಕಾದರೂ ಕೈಹಿಡಿಯುವಷ್ಟು ಅಂತಸ್ತೂ ಗೌರವವೂ ಹೊಸದಾಗಿ ಬಂದಿದ್ದುವು. ಅಲ್ಲದೆ ಈದಿನ ನವಾಬರು ತನಗೆ ಮಾಡಿದ ಮನ್ನಣೆಗಳನ್ನು ನೋಡಿ ಮೆಹರಳು ಮೂಗಿನಮೇಲೆ ಬೆರಳಿಡುವಳೆಂದುಕೊಂಡನು. ಒಂದು ಮಾತು ಹೇಳಿದರೆ ಸಾಕು, ಮೆಹರಳಂಥವರು ನೂರುಮಂದಿ ಓಡಿಬಂದು ತನ್ನ ಕೈಹಿಡಿಯಲೆಳಸುವರೆಂದು ಅವನಿಗೆ ಅಹಂಭಾವವುಂಟಾಯಿತು. ಅವಳನ್ನು ಕೇಳುವುದೊಂದೇ ಉಳಿದಿದೆಯೆಂದೂ ಹಾಗೆ ಕೇಳುವುದೂ ವಸ್ತುತಃ ಅನುಗ್ರಹವೆಂದೂ ಅವನು ಭಾವಿಸಿಕೊಂಡನು.

ಅಂತು ಆ ರಾತ್ರಿಯೇ ನಾಟಕವಾದಮೇಲೆ ಹೊಂಚುಕಾದು ಅವಳನ್ನು ಕಂಡನು. ಮೆಹರಳು ಅರಮನೆಯ ಹಜಾರಕ್ಕೆ ಬಂದು ಅಲ್ಲಿ ಯಾರೂ ಇಲ್ಲದಿದ್ದುದರಿಂದ ಬುರುಕಿಯನ್ನು ಅರುಗುಮಾಡಿ ಹಣೆಯಮೇಲಿನ ಬೆವರುಹನಿಗಳನ್ನು ಒರಸಿಕೊಳ್ಳುತ್ತ ಮುಂದೆ ಹೋಗುತ್ತಿದ್ದಳು. ದೀಪದ ಬೆಳಕಿನಲ್ಲಿ ಆಗಾಖಾನನು ಮೆಹರಳನ್ನು ನೋಡಿದನು. ಎಂತಹ ಲಾವಣ್ಯ! ಖಾನನ ದೇಹವು ಪುಲಕಹೊಂದಿತು. ಹೃದಯದಲ್ಲಿ ಪ್ರೇಮವು ಉಕ್ಕಿಬಂದಿತು. ಆ ಪ್ರೇಮಭರದಿಂದ ಅವನು ಧೈರ್ಯಹೊಂದಿ ಕತ್ತಲೆಯನ್ನು ಬಿಟ್ಟು ಹೊರಗೆಬಂದು ಮೃದುಸ್ವರದಿಂದ "ಮೆಹರ್" ಎಂದು ಉಚ್ಚರಿಸಿದನು. ಮೆಹರಳು ಅದನ್ನು ಕೇಳಿ ತತ್‌ಕ್ಷಣವೇ ಬುರುಕಿಯನ್ನು ಎಳೆದುಕೊಳ್ಳಲು ಪ್ರಯತ್ನಿಸಿದಳು. ಆಗಾಖಾನನು ಸಮೀಪಿಸಿ "ಮೆಹರ್, ನನ್ನೆದುರಿಗೂ ನಾಚಿಕೆಯೇಕೆ? ನಾನೇನು ಹೊಸಬನೆ? ಇಷ್ಟೊಂದು ಲಜ್ಜೆಯು ತೀರ ಅನಾವಶ್ಯಕ" ಎಂದು ಧೈರ್ಯ ಹೇಳಿದನು.

ಮೆಹರಳಿಗೆ ಅವನ ಮಾತು ಗಮನಕ್ಕೆ ಬರಲಿಲ್ಲ. ಸನ್ನಿವೇಶದ ವಿಚಿತ್ರತೆಯನ್ನು ಸೂಚಿಸುತ್ತ ಅವಳ ಅಧರದಲ್ಲಿ ಒಂದು ಮಂದಹಾಸವು ಮಾತ್ರ ತಲೆದೋರಿತು.

ಆ ಮಂದಹಾಸವು ಅನುರಾಗಸೂಚಕವೆಂದು ಅರ್ಥಮಾಡಿಕೊಂಡು ಖಾನನು ಉಲ್ಲಾಸಗೊಂಡು ಹೀಗೆಂದನು. "ಪ್ರಿಯೆ, ಮೆಹರ್, ನಿನ್ನೊಡನೆ ಒಂದು ಮಾತನಾಡಲು ಬಂದೆನು."

ಮೆಹರಳು ಸುಮ್ಮನಿದ್ದಳು.

"ಮೆಹರ್, ನವಾಬರು ನನ್ನಮೇಲೆ ಬಹಳ ಕೃಪೆಮಾಡಿದರು. ಅವರ ಅನುಗ್ರಹವು ಅನಂತವಾಯಿತು. ಜಹಗೀರಿಯನ್ನು ಕೊಟ್ಟಿದ್ದಾರೆ. ಅದನ್ನು ಅನುಭವಿಸಿಕೊಂಡು ಸುಖವಾಗಿರೆಂದು ಆಶೀರ್ವಾದಮಾಡಿದ್ದಾರೆ. ನನಗೆ ಮಾತ್ರ ಅದೊಂದರಲ್ಲಿಯೂ ಸುಖವು ಕಾಣದು. ಒಡನಾಡಿಯೊಬ್ಬರಿಲ್ಲದ ಮೇಲೆ ಅವುಗಳೆಲ್ಲವೂ ಇದ್ದು ಪ್ರಯೋಜನವೇನು? ನವಾಬರ ಆಶ್ರಯದಲ್ಲಿರಲಾಗಿ ಇದುವರೆಗೆ ಒಂದು ಚಿಂತೆಯಾಗಲಿ ಅಂಕುರಿಸಿರಲಿಲ್ಲ. ಈಗ ನೋಡಲಾಗಿ ಅಲ್ಲಿ ಹೋದಮೇಲೆ ಒಂಟಿಯಾಗಿರಬೇಕಾಗುವುದು. ನನ್ನದೆಂದು ಕರೆಯಲು ಯಾವ ಪದಾರ್ಥವೂ ಇಲ್ಲ. ಆದುದರಿಂದ ಆ ಸಂಬಂಧವಾಗಿ ನನ್ನದೊಂದು ಪ್ರಾರ್ಥನೆಯುಂಟು. ನೀನು ನಡೆಯಿಸಿ ಕೊಡುವೆಯಾ?"

ಮೆಹರಳಿಗೆ ಉತ್ತರ ಹೇಳಲು ತಿಳಿಯಲಿಲ್ಲ. ಅವನ ಮನೋಗತವನ್ನು ತಿಳಿಯುವುದಕ್ಕೆ ಮುಂಚೆಯೇ ಖಂಡಿತವಾದ ಉತ್ತರವನ್ನು ಹೇಳಿ ನಿರ್ಬಂಧದಲ್ಲಿ ಸಿಕ್ಕಿಕೊಳ್ಳುವುದು ಯುಕ್ತವಲ್ಲವೆಂದು ತೋರಿತು. ಆದಕಾರಣ ಅವಳು, "ಖಾನರೆ, ನಿಮ್ಮ ಅಪೇಕ್ಷಿತವೇನು, ಹೇಳಿರಿ ನೋಡೋಣ. ಸಾಧ್ಯವಾದರೆ ನಡೆಯಿಸುವೆನು" ಎಂದು ನುಡಿದಳು.

"ಇಲ್ಲಿ ನೋಡು, ಮೆಹರ್, ನಾನು ನಿಜವಾಗಿ ತೃಪ್ತಿಹೊಂದಿ ಇರಲಾರೆನು. ಜೊತೆಯಲ್ಲಿದ್ದುಕೊಂಡು ನನ್ನ ಸುಖದುಃಖಗಳಲ್ಲಿ ಭಾಗಿನಿಯಾಗಿ ನನ್ನ ಹೃದಯೇಶ್ವರಿಯಾಗಿರಲು ಯಾರೂ ಇಲ್ಲ. ಅಂತಹ ಜೀವನವನ್ನು ನಡೆಯಿಸಿ ತಾನೇ ಫಲವೇನು? ಸಂಜೆಯಲ್ಲಿ ನಡೆದ ಪ್ರದರ್ಶನವನ್ನು ನೋಡಿದೆನು. ಮೆಹರ್, ನಿನ್ನ ಪಾತ್ರವು ಬಹಳ ಆನಂದವನ್ನುಂಟುಮಾಡಿತು. ತೀರ ಮುಗ್ಧನಾಗಿದ್ದೇನೆ. ಪಡೆದರೆ ನಿನ್ನನ್ನು ಪತ್ನಿಯಾಗಿ ಪಡೆಯಬೇಕೆಂದು ಆಶಿಸಿದೆನು. ನಿನ್ನ ಸೌಂದರ್ಯವೂ ಲಾವಣ್ಯವೂ ಮತ್ತಾರಲ್ಲಿಯೂ ಕಾಣಬರುವುದಿಲ್ಲ. ಮೆಹರ್, ಅವುಗಳನ್ನು ಈ ರೀತಿ ವ್ಯರ್ಥವೇಕೆ ಮಾಡಬೇಕು? ನನ್ನೊಡನೆ ಬಾ, ನನ್ನ ಜಹಗೀರಿಗೆ ಯಜಮಾನಿಯಾಗಿರು. ನಿನ್ನನ್ನು ಚಕ್ರವರ್ತಿನಿಯಂತೆ ಸುಖದಿಂದಿಟ್ಟಿರುವೆನು. ನೀನು ಅಪೇಕ್ಷಿಸುವುದನ್ನು ಪ್ರಾಣವನ್ನು ತೆತ್ತಾದರೂ ತಂದೊಪ್ಪಿಸುವೆನು. ಯಾವುದಕ್ಕೂ ಕೊರತೆಯನ್ನುಂಟುಮಾಡುವುದಿಲ್ಲ. ಮೆಹರ್, ಅಷ್ಟೊಂದು ಕೃಪೆಮಾಡು. ಮರುಭೂಮಿಯಂತೆ ಶುಷ್ಕವಾದ ನನ್ನ ಜೀವನವನ್ನು ನಿನ್ನ ಅನುಗ್ರಹವೃಷ್ಟಿಯಿಂದ ಸಾರವತ್ತಾಗಿ ಮಾಡು......" ಎಂದು ಮೊದಲಾಗಿ ಬಗೆಬಗೆಯಾಗಿ ಪ್ರಾರ್ಥಿಸಿದನು.

ಖಾನನು ಎಷ್ಟು ಹೊತ್ತಿಗೆ ಮುಗಿಸುವನೆಂದು ತವಕಿಸುತ್ತಿದ್ದ ಮೆಹರಳು ಒಡನೆಯೇ ಉತ್ತರ ಹೇಳಿದಳು. "ಖಾವಂದ್, ಅಲ್ಪಳಾದೀ ಗುಲಾಮಳ ಮೇಲೆ ಅಷ್ಟೊಂದು ಕೃಪೆಮಾಡಿದುದಕ್ಕಾಗಿ ಬಹಳ ಕೃತಜ್ಞಳಾಗಿದ್ದೇನೆ. ಆದರೆ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಲಾರೆನು. ಬಾಲ್ಯದಿಂದಲೂ ನವಾಬ ಬಹದ್ದರವರ ಆಶ್ರಯ ದಲ್ಲಿದ್ದು ಆ ಆಶ್ರಯದಲ್ಲಿಯೇ ಬೆಳೆದಿರುವ ನಾನು ಈಗ ಅವರನ್ನು ಉಪೇಕ್ಷಿಸಿ ಹೊರಟುಹೋಗುವುದು ಯುಕ್ತವಲ್ಲ. ನವಾಬರು ಉಳಿದವರೆಲ್ಲರಿಗಿಂತ ನನ್ನಲ್ಲಿ ಹೆಚ್ಚಾಗಿ ಅನುಗ್ರಹವನ್ನೂ ಪಕ್ಷಪಾತವನ್ನೂ ಉಳ್ಳವರೆಂಬುದು ಅವರ ಸಮಿಾ ಪದಲ್ಲಿಯೇ ಇರುತ್ತಿದ್ದ ತಮಗೂ ತಿಳಿದ ವಿಷಯವೇ. ಹೀಗಿರುವಾಗ ಅವರನ್ನು ಬಿಟ್ಟು ಹೋಗುವುದು ಹೇಗೆ ? ಮತ್ತಾವ ವಿಧದಲ್ಲಿ ಕೃತಜ್ಞತೆಯನ್ನು ತೋರಿಸಲು ನನಗೆ ಸಾಧ್ಯವಿಲ್ಲವಾದರೂ ಅವರ ಬಳಿಯಲ್ಲಿಯೇ ಇರುತ್ತ ಅವರನ್ನು ಸಂತೋಷ ಪಡಿಸುವಷ್ಟಾದರೂ ಮಾಡಬೇಡವೆ ? ಅಂತರಾತ್ಮವೇನೆಂದೀತು ? ಜನರೇನೆನ್ನು ವರು, ನವಾಬರೇನು ತಿಳಿದುಕೊಂಡಾರು ?...ಇಲ್ಲ. ತಮ್ಮ ಕೋರಿಕೆಯನ್ನು ಪೂರ್ತಿಗೊಳಿಸಲಾರೆನು. ಕ್ಷಮಿಸಬೇಕು."

ಖಾನನು ನಿರಾಶನಾಗಲಿಲ್ಲ. "ಮೆಹರ್, ಯೋಚನೆಮಾಡಿ ನೋಡು. ನಿನ್ನ ಸುಖಸಂತೋಷಗಳಿಗೆ ಎಣೆಯಿಲ್ಲದಂತೆ ಮಾಡುವೆನು. ನನಗೂ ಮಹತ್ತರ ವಾದ ಉಪಕಾರವನ್ನು ಮಾಡುವೆ" ಎಂದನು.

"ಖಾವಂದ್, ಈ ಅಂಶವನ್ನು ಯೋಚಿಸಬೇಕಾಗಿಯೇ ಇಲ್ಲ. ಉತ್ತರ ವನ್ನು ಆಗಲೇ ಹೇಳಿದ್ದೇನೆ. ಮತ್ತೂ ಹೇಳುತ್ತೇನೆ—ಆಗಲಾರದು. ಖುದಾ ಅಲ್ಲಾನು ನವಾಬರಿಗೆ ಕ್ಷೇಮಾಭ್ಯುದಯಗಳನ್ನುಂಟುಮಾಡಲಿ. ನನಗೆ ಅವರೇ ಪಾಲಕರು !"

ಖಾನನಿಗೆ ಅಪಮಾನವೂ ತೇಜೋವಧೆಯೂ ಆದಂತಾಯಿತು. ಇಪ್ಪ ತ್ತೈದು ವರ್ಷದಿಂದ ನವಾಬನಂತೆಯೇ ಅಧಿಕಾರವನ್ನು ಚಲಾಯಿಸಿದ್ದನು. ಅವನ ಮಾತಿಗೆ ಪ್ರತಿ ಹೇಳಿದವರಿರಲಿಲ್ಲ. ಹೈದರನನ್ನು ನೋಡಬೇಕೆಂದು ಬಂದವರು ಮೊದಲು ಈತನನ್ನು ಕಂಡು ಪೂಜಿಸಬೇಕಾಗಿದ್ದಿತು. ನವಾಬನೂ ಕೂಡ ಅವನ ಮಾತಿನಲ್ಲಿ ವಿಶ್ವಾಸಗೌರವಗಳನ್ನಿಟ್ಟು ಎಷ್ಟೋಸಲ ಅದನ್ನು ಅನುಸರಿಸಿದ್ದನು. ಹೀಗಿರುವಲ್ಲಿ ಈ ಹುಲುಹೆಂಗಸು ತನಗೆ ನಿರಾಶೆಮಾಡುವುದೆಂದರೇನು ? ಆಗಾ ಮಹಮದ್‌ನು ಕೋಪಮಾಡಿಕೊಂಡನು. "ಇರಲಿ, ಮೆಹರ್, ನನ್ನ ಕೋರಿಕೆ ಯನ್ನು ಸಲ್ಲಿಸದೇ ಹೋಗಿದ್ದೀಯೆ. ಈ ಅಸಡ್ಡೆಯ ಫಲವನ್ನು ನೀನು ಅನುಭವಿ

ಸುವೆ. ಆಗಲಾದರೂ ಆಗಾಖಾನನು ಎಂಥವನೆಂಬುದು ನಿನಗೆ ತಿಳಿದುಬಂದೀತು!'' ಎಂದು ಹೇಳಿ ಅಲ್ಲಿಂದ ಮುಂದೆ ಸರಸರನೆ ಹೊರಟುಹೋದನು.

ಮೆಹರಳು ಒಂದುಕ್ಷಣ ಅಲ್ಲಿಯೇ ನಿಂತು ಅವನು ಹೋಗುವುದನ್ನು ನೋಡುತ್ತ ಚಿಂತಿಸಿದಳು :—'' ಆಗಾಖಾನನು ಪ್ರಾಯಶಃ ನವಾಬರ ಸಂಗಡ ದೂರು ಹೇಳಬಹುದು. ನಾನು ಧಿಕ್ಕರಿಸಿದೆನೆಂದೋ ಅಥವಾ ಮತ್ತೇನನ್ನಾದರೂ ಆರೋಪಣೆ ಮಾಡಿದೆನೆಂದೋ ಹೇಳಿಯಾನು. ಹೇಳಲಿ, ಮಹಾರಾಜರಿಗೆ ನಡೆದ ಸಂಗತಿಯನ್ನು ಆದ್ಯಂತವಾಗಿ ನಾನೇ ತಿಳಿಸುವೆನು. ಅವರು ಜನರ ಯೋಗ್ಯತೆಯನ್ನೂ ನಿಜವನ್ನೂ ಕಂಡುಹಿಡಿಯಲಾರರೇ ?''

ಹೀಗೆಂದು ಹೇಳಿಕೊಳ್ಳುತ್ತ ಅವಳು ಸ್ವಸ್ಥಾನವನ್ನು ಕುರಿತು ನಡೆದಳು. ಖಾನನ ದುರಾಲೋಚನೆಯು ಅವಳಿಗೆ ಗೊತ್ತಾಗಲಿಲ್ಲ.

(೩)

ನವಾಬನು ದರ್ಬಾರನ್ನು ನಡೆಯಿಸದಿದ್ದ ದಿನವೇ ಇರಲಿಲ್ಲ. ಸಾಮಾನ್ಯವಾಗಿ ದಿನವೆಲ್ಲವೂ ಸಮಾಚಾರಗಳು ಬರುತ್ತಿದ್ದುವು. ರಾಜ್ಯದ ನಾನಾಭಾಗಗಳಿಂದ ರಾಜಕರ್ಮಚಾರಿಗಳು ತಮ್ಮತಮ್ಮ ಪ್ರದೇಶಗಳ ವಿದ್ಯಮಾನಗಳನ್ನು ತಿಳಿಸುತ್ತಲೂ ಅಧಿಕಾರ ವಿಷಯದಲ್ಲಿ ನವಾಬನ ಅನುಮತಿ ಅಭಿಪ್ರಾಯ ಅಥವಾ ಅನುಜ್ಞೆಗಳನ್ನು ಕೇಳುತ್ತಲೂ ಇದ್ದರಾದಕಾರಣ ದೂತರು ಗಂಟೆಗಂಟೆಗೂ ಬರುತ್ತಿದ್ದರು. ಮತ್ತೊಂದು ಕಡೆಯಲ್ಲಿ ಗೂಢಚಾರರು ಸುದ್ದಿಯನ್ನು ತರುತ್ತಿದ್ದರು. ಹೀಗೆ ಎಲ್ಲಾ ದಿಕ್ಕುಗಳಿಂದ ಬರುವ ವೃತ್ತಾಂತಗಳನ್ನು ಕೇಳಿ ಯುಕ್ತವಾದ ರೀತಿಯಲ್ಲಿ ವ್ಯವಹರಿಸುವುದು ಅಗತ್ಯವಾದುದರಿಂದ ನವಾಬನು ಅದಕ್ಕಾಗಿ ಪ್ರತ್ಯೇಕವಾದ ಸ್ಥಳವನ್ನು ಏರ್ಪಡಿಸಿ ಅಲ್ಲಿ ದರ್ಬಾರು ಮಾಡುತ್ತಿದ್ದನು. ಅಷ್ಟೇ ಅಲ್ಲ. ಪ್ರಾಯಶಃ ಬಲವತ್ತರವಾದ ಮತ್ತೊಂದು ಕಾರಣವಿದ್ದಿತು. ಪ್ರಜೆಗಳಲ್ಲಿ ಅತಿಶಯವಾದ ವಾತ್ಸಲ್ಯವನ್ನಿಟ್ಟಿದ್ದ ಹೈದರನು ಪ್ರಜೆಗಳ ಅಹವಾಲನ್ನು ಕೇಳುವುದನ್ನು ನಿತ್ಯಕರ್ಮವಾಗಿ ಮಾಡಿಕೊಂಡಿದ್ದನು. ರಾಜಧಾನಿಯಲ್ಲಿ ಈ ರೀತಿಯಾಗಿದ್ದುದು ಈ ಪ್ರದೇಶದಲ್ಲಿ ಅತ್ಯಂತ ಮುಖ್ಯವಾಗಿದ್ದಿತು. ಪಶ್ಚಿಮಘಟ್ಟದ ಪ್ರಾಂತಗಳನ್ನು ಜಯಿಸಲು ಹೊರಟಿದ್ದ ಅವನಿಗೆ ಜಯಿಸಬೇಕಾಗಿದ್ದ ಭೂಭಾಗವೂ ಪ್ರಕೃತದಲ್ಲಿ ಇಳಿದಿದ್ದ ಭಾಗವೂ ಅಪರಿಚಿತವಾಗಿದ್ದುವು. ಅವನು ಇಳಿದಿದ್ದ ಭಾಗವು ಅವನ ರಾಜ್ಯದಲ್ಲಿ ಮೊದಲೇ ಸೇರಿದ್ದಿತು. ಮತ್ತೊಂದು ಸೇರುವುದರಲ್ಲಿದ್ದಿತು. ಆದರೆ ಅವು ಅಷ್ಟು ಬಳಕೆಯಲ್ಲಿರಲಿಲ್ಲ. ಆ ಪ್ರದೇಶಗಳಲ್ಲೆಲ್ಲಾ ತಿರುಗಿ, ಪ್ರಜೆಗಳು ತನ್ನೊ

ಡನೆಯೂ ತಾನು ಪ್ರಜೆಗಳೊಡನೆಯೂ ಬಳಕೆಯನ್ನು ಸಂಪಾದಿಸುವುದು ರಾಜ ನೀತಿಯೆಂದು ಹೈದರನು ನಂಬಿದ್ದನು. ಆ ಜನಗಳನ್ನು ಒಲಿಸಿಕೊಂಡು, ಅನ್ಯನು ಬಂದು ತಮ್ಮನ್ನು ಅಧೀನಪಡಿಸಿಕೊಂಡು ಆಳುತ್ತಿರುವನೆಂದು ಅವರ ಮನಸ್ಸಿನಲ್ಲಿ ಹುಟ್ಟುವ ಭಾವನೆಯನ್ನು ಹೋಗಲಾಡಿಸಲು ಅವನು ಆತುರನಾಗಿದ್ದನು. ಹಾಗೆ ಮಾಡುವುದರಿಂದ ರಾಜ್ಯವನ್ನು ಜಯಿಸುವುದು ಸುಲಭವಾಗುತ್ತಿದ್ದಿತಲ್ಲದೆ ಜಯಿಸಿದ ರಾಜ್ಯವು ಸ್ವಾಧೀನದಲ್ಲಿಯೇ ನಿಲ್ಲುತ್ತಿದ್ದಿತು. ಪ್ರಜೆಗಳಿಗೆ ಕ್ಷೇಮವನ್ನೂ ರಾಜ್ಯಕ್ಕೆ ನೆಮ್ಮದಿಯನ್ನೂ ಉಂಟುಮಾಡುವ ಗುಣವಂತರಾಜನನ್ನು ಜನಗಳು ಬಯಸುವರೆಂದರಿತು ಹೈದರನು ತನ್ನಲ್ಲಿ ಅಂತಹ ಗುಣಗಳುಂಟೆಂಬುದನ್ನು ಪ್ರಕಾಶಪಡಿಸುವುದಕ್ಕಾಗಿ ಅಲ್ಲಿಯ ಜನಗಳ ಕಷ್ಟನಷ್ಟಗಳನ್ನು ವಿಚಾರಿಸಿ ನಾನಾರೀತಿಯಲ್ಲಿ ಸರಿಪಡಿಸುವುದೂ ಸಮಯ ದೊರೆತಾಗ ಯೋಗ್ಯರಿಗೆ ವಿಪುಲವಾಗಿ ಬಹುಮಾನ ಮಾಡುವುದೂ ಮೊದಲಾದ ಅನೇಕ ಸಾಧನಗಳನ್ನು ಅನುಸರಿಸುತ್ತಿದ್ದನು.

ಇದೂ ಅಲ್ಲದೆ ಹೈದರನು ಸಹವಾಸಪ್ರಿಯನು. ಜನಗಳ ನಡುವೆ ಅವರ ಗೋಷ್ಠಿಯಲ್ಲಿಯೇ ಇರಲಪೇಕ್ಷಿಸುತ್ತ, ಇವರು ಇಂಥವರು ಅಂಥವರೆಂಬ ಪ್ರಭೇದವಿಲ್ಲದೆ ಎಲ್ಲರೊಡನೆಯೂ ಒಂದೇ ಸಮನಾಗಿ ವ್ಯವಹರಿಸುತ್ತ ಎಲ್ಲರೊಡನೆ ಸರಸ ಸಲ್ಲಾಪದಲ್ಲಿ ವಿನೋದವಾಗಿ ಕಾಲವನ್ನು ಕಳೆಯಲು ಅವನಲ್ಲಿದ್ದಷ್ಟು ಇಷ್ಟವು ಮತ್ತಾರಲ್ಲಿಯೂ ಇರಲಿಲ್ಲ. ಅವನ ಈ ಚಿತ್ತವೃತ್ತಿಯನ್ನು ನೋಡಿದರೆ, ನಿತ್ಯವೂ ದರ್ಬಾರು ಮಾಡುತ್ತಿದ್ದುದು ಜನರನ್ನು ತನ್ನಲ್ಲಿಗೆ ಬರಮಾಡಿಕೊಂಡು ಅವರೊಡನೆ ಕಾಲವನ್ನು ಕಳೆಯಲು ಅವನು ಚಿಂತಿಸಿದ ಉಪಾಯವೆಂದೂ ಹೇಳಬಹುದಾಗಿದ್ದಿತು.

ಸುಮಾರು ಮಧ್ಯಾಹ್ನದ ವೇಳೆಗೆ ನವಾಬನು ದರ್ಬಾರುಮಹಲನ್ನು ಪ್ರವೇಶಿಸಿ ಗದ್ದುಗೆಯನ್ನೇರಿ ಕುಳಿತು ವಿಶ್ರಮಿಸಿಕೊಂಡಮೇಲೆ ಖಾಸ್‌ಭಕ್ಷಿಯು ಉಪಚಾರವನ್ನು ಅನ್ಯರಿಗೊಪ್ಪಿಸಿ ಹೊರವಳಯದಲ್ಲಿ ಬಂದು ನಿಲ್ಲುತ್ತಿದ್ದನು. ಅಲ್ಲಿ ನಿಯಮದಂತೆ ಅರ್ಜಿ ಅಹವಾಲುಗಳನ್ನು ತಂದಿದ್ದವರು ಕಾದಿರುತ್ತಿದ್ದು, ಆತನು ಬಂದ ಕೂಡಲೇ ತಾವು ಬರೆದು ತಂದಿದ್ದ ಅರ್ಜಿ ಮುಂತಾದುವುಗಳನ್ನು ಆತನ ಕೈಗೆ ಒಪ್ಪಿಸುತ್ತಿದ್ದರು. ಖಾಸ್‌ಭಕ್ಷಿಯು ಅವುಗಳನ್ನು ಜೋಡಿಸಿಕೊಂಡು ಅರ್ಜಿದಾರರಿಗೆಲ್ಲರಿಗೂ ಮೂರನೆಯ ದಿನ ಫಲಿತಾಂಶವನ್ನು ತಿಳಿಯಲು ಬನ್ನಿರೆಂದು ಉತ್ತರ ಹೇಳುತ್ತಿದ್ದನು. ನವಾಬನು ಆ ಪ್ರಾರ್ಥನೆಗಳನ್ನು ಪರಿಶೀಲಿಸಿ ಮೂರನೆಯದಿನ ಪ್ರತಿಯೊಬ್ಬರಿಗೂ ಅವರವರ ಪ್ರಾರ್ಥನೆಗನುಸಾರವಾಗಿ ಪ್ರತ್ಯುತ್ತರ ಕೊಡುತ್ತಿದ್ದುದ

ರಿಂದ ಅರ್ಥಿಗಳು ಆ ದಿನವೇ ನವಾಬನನ್ನು ನೋಡಬೇಕೆಂದು ಒತ್ತಾಯಮಾಡದೆ ಹಿಂದಿರುಗುತ್ತಿದ್ದರು. ಈ ವ್ಯವಸ್ಥೆಯಿಂದ ಆ ಜನಗಳಿಗೆ ನವಾಬನಲ್ಲಿ ಪ್ರತ್ಯಕ್ಷ ವಾಗಿ ಸ್ವಂತವಾಗಿ ಮಾತನಾಡಲು ಅವಕಾಶವು ಸಿಕ್ಕುತ್ತಿದ್ದಿತಲ್ಲದೆ ನವಾಬನಿಗೂ ನಿರ್ವಿಘ್ನವಾಗಿ ರಾಜಕಾರ್ಯವನ್ನು ನಡೆಯಿಸಲು ಅವಕಾಶವುಂಟಾಗುತ್ತಿದ್ದಿತು.

ಒಂದು ದಿನ ಹೊಸ ಖಾಸ್ ಭಕ್ಷಿಯಾದ ಹೈದರ್‌ಷಹನು ಯಥಾ ಸ್ಥಾನದಲ್ಲಿ ಬಂದು ನಿಲ್ಲಲಾಗಿ ಅಲ್ಲಿ ಮೊದಲೇ ಬಂದಿದ್ದವರನೇಕರು ಅರ್ಜಿಗಳನ್ನೂ ಕೆಲವರು ಯಥಾಶಕ್ತಿಯಾಗಿ ತಾವು ತಂದಿದ್ದ ನಜರುಗಳನ್ನೂ ಅರ್ಪಿಸಿದರು. ಅಂಥವರೊಳಗೆ ಮುದುಕಿಯೊಬ್ಬಳು ಇತರರಂತೆಯೇ ಅರ್ಥಿಯಾಗಿ ಬಂದಿದ್ದವಳು ಮುಂದೆ ಬಂದು ತಾನು ಬರೆಯಿಸಿ ತಂದಿದ್ದ ಅರ್ಜಿಯನ್ನು ಹೈದರ್‌ಷಹನ ಕೈಗೆ ನೀಡುತ್ತ ಹೀಗೆಂದಳು :—"ಭಕ್ಷಿಜಿ, ನಾನು ಮುದುಕಿ, ಬಹಳ ಸಂಕಟದಲ್ಲಿ ಸಿಕ್ಕಿಬಿದ್ದಿದ್ದೇನೆ. ಜೀವನಾಧಾರಳಾಗಿದ್ದ ಮಗಳನ್ನು ಯಾವನೋ ಒಬ್ಬ ದುಷ್ಟನು ಅಪಹರಿಸಿಕೊಂಡು ಹೋಗಿದ್ದಾನೆ. ಅವಳನ್ನು ಹುಡುಕಿಸಿಕೊಟ್ಟು ಅಪರಾಧಿಗೆ ಶಿಕ್ಷೆಮಾಡಬೇಕೆಂಬುದೇ ನನ್ನ ಪ್ರಾರ್ಥನೆ. ತಾವೂ ಸ್ವಲ್ಪ ಶಿಫಾರಸು ಮಾಡಬೇಕಾಗಿ ಬೇಡುತ್ತೇನೆ."

ಈ ಮಾತುಗಳು ಹೈದರ್‌ಷಹನ ಕಿವಿಗೆ ಅರ್ಥಿಯಾದೊಬ್ಬ ಹೆಂಗಸಿನ ದುಃಖದಂತೆ ಬೀಳಲಿಲ್ಲ. ನ್ಯಾಯವನ್ನಪೇಕ್ಷಿಸಿ ಬಂದಿರುವ ಜನದ ಪ್ರಾರ್ಥನೆಯಂತೆ ಕಿವಿಗೆ ಬೀಳಲಿಲ್ಲ. ನವಾಬರಿಗೆ ಶಿಫಾರಸುಮಾಡಿ ತನ್ನನ್ನು ಈ ಅಧಿಕಾರಕ್ಕೆ ತಂದ ತನ್ನ ಪ್ರಭುವಾದ ಆಗಾಮುಹಮದ್‌ಖಾನನಲ್ಲಿ ಅನ್ಯಾಯವನ್ನು ಆರೋಪಿಸಲೆಳಸುತ್ತಿರುವ ದುಷ್ಟೆಯ ಮಾತಿನಂತೆ ಅರ್ಥವಾದುವು. ಅವನು ಕೋಪಗೊಂಡು ಮುಖವನ್ನು ಗಂಟಿಕ್ಕಿ "ಆಗಲಿ, ನನಗೇಕೆ ಇದನ್ನೆಲ್ಲಾ ಹೇಳುತ್ತೀ ? ನೀನು ಅರ್ಜಿಯಲ್ಲಿ ಆ ವಿವರವನ್ನೆಲ್ಲಾ ಬರೆದಿಲ್ಲದಿದ್ದರೆ ಬೇರೆ ಬರೆದುಕೊಂಡು ಬಾ. ಇಲ್ಲಿ ಹೀಗೆಲ್ಲಾ ಹರಟುತ್ತ ನಿಲ್ಲಬೇಡ !" ಎಂದು ಗದರಿಸಿಕೊಂಡು ಅರ್ಜಿಯನ್ನು ಅವಳ ಕಡೆಗೆಸೆದನು. ಮುದುಕಿಯು ಖಿನ್ನಳಾದಳು. ಆದರೂ ತಾನು ಅರ್ಥಿಮಾತ್ರಳಾದ್ದರಿಂದ ಸ್ಥೈರಣೆಯನ್ನು ಹೊಂದಿ, ಕೆಳಗೆ ಬಿದ್ದುಹೋದ ಅರ್ಜಿಯನ್ನು ಎತ್ತಿಕೊಂಡು, ಹೆಜ್ಜೆಹೆಜ್ಜೆಗೂ ಕ್ಷಮಾಪಣೆಯನ್ನು ಬೇಡಿ ಸಲಾಮುಹಾಕುತ್ತ ಮತ್ತೆ ಖಾಸ್ ಭಕ್ಷಿಯ ಬಳಿಗೆ ಬಂದು ಬಿನ್ನೈಸಿಕೊಂಡಳು. "ಎಲ್ಲವನ್ನೂ ಅಲ್ಲಿ ಬರೆದಿದೆ. ಬಾಯಲ್ಲಿ ಹೇಳುವುದು ಏನೂ ಇಲ್ಲ" ಎಂಬ ದೈನ್ಯದ ಮಾತುಗಳು ಹೊರಬಿದ್ದುವು. ಅವಳು ಹೊರಟುಹೋದಳು. ಖಾಸ್‌ಭಕ್ಷಿಯು ಉಳಿದಿದ್ದ ಕೆಲವರ ಅರ್ಜಿಯನ್ನು ಸ್ವೀಕರಿಸಿ ನಾಳೆ ಬನ್ನಿರೆಂದು ಅವರಿಗೆ ಹೇಳಿ ಒಳಕ್ಕೆ ಹೊರಟುಹೋದನು.

(೪)

ಸುಮಾರು ನಾಲ್ಕೂವರೆಗಂಟೆಯ ಸಮಯ. ಕೊಯಿಮುತ್ತೂರಿನ ಹೊರವಳಯದಲ್ಲಿ ಮಾತ್ರ ಐದು, ಐದೂವರೆಗಂಟೆಯಾಗಿದ್ದಂತೆಯೇ ಕಾಣಿಸುತ್ತಿದ್ದಿತು. ನವಾಬನು ಪರಿವಾರಸಹಿತನಾಗಿ ಸಂಚಾರ ಹೊರಟಿದ್ದನು. ಒಟ್ಟು ಹದಿನೈದುಮಂದಿ ಇದ್ದರು. ಎಲ್ಲರೂ ಗುಂಪಾಗಿ ಸಾಗುತ್ತಿದ್ದರು. ಎಲ್ಲರೂ ಕುದುರೆಯನ್ನೇರಿದ್ದರು. ಅವರೆಲ್ಲರ ಮುಂದುಗಡೆಯಲ್ಲಿ ಹೈದರನು ತನ್ನ ಬಿಳಿಯಕುದುರೆಯನ್ನು ನಡೆಯಿಸಿಕೊಂಡು ಹೋಗುತ್ತಿದ್ದನು. ಕುದುರೆಯು ಮಂದಗತಿಯಿಂದಲೇ ನಡೆಯುತ್ತಿದ್ದಿತು. ಆತನು ಶ್ವೇತವಸ್ತುಪ್ರಿಯನೆಂಬುದು ಆಗ ಸ್ಪಷ್ಟವಾಗುತ್ತಿದ್ದಿತು. ಏರಿದ್ದ ಕುದುರೆಯು ಬಿಳಿಯದು; ತೊಟ್ಟಿದ್ದ ಉಡುಪು ಬಿಳಿಯದು. ಬಿಳಿಯ ಕಿಂಕಾಬಿನ ಆ ಉಡುಪಿನಲ್ಲಿ ವರ್ಣವ್ಯತ್ಯಾಸವನ್ನುಂಟುಮಾಡಿ ಆ ವರ್ಣವ್ಯತ್ಯಾಸದ ದೆಸೆಯಿಂದಲೇ ರೇಷ್ಮೆಯ ಧವಳತೆಯನ್ನೂ ಬಿಳಿಯ ಉಡುಪಿನ ಸೊಬಗನ್ನೂ ಹೆಚ್ಚಿಸುತ್ತ, ನಡುವೆ ಏಹಿತವಾದೆಡೆಗಳಲ್ಲಿ ಕೆಂಪುರೇಷ್ಮೆಯ ಪಟ್ಟಿಗಳೂ ಇತರ ವಸ್ತ್ರಭಾಗಗಳೂ ಸೇರಿದ್ದುವು. ಸೊಂಟದಲ್ಲಿ ಒರೆಯೊಡನೆಕೂಡಿದ ಒಂದು ಕಠಾರಿಯು ಸಿಕ್ಕಿಸಿದ್ದಿತು. ನವಾಬನ ತಲೆಯಮೇಲಿನ ದಪ್ಪ ಪೇಟವೂ ಅದರ ಅಗ್ರಭಾಗದಲ್ಲಿದ್ದ ರತ್ನಖಚಿತವಾದ ಸಿರಪೇಷವೂ ಮುಖಕ್ಕೆ ಅಲಂಕಾರವನ್ನು ಕೊಡುತ್ತಿದ್ದುವು.

ಪಕ್ಕದಲ್ಲಿ ನವಾಬನ ಎರಡನೆಯ ಮಗನು ಅಶ್ವಾರೋಹಿಯಾಗಿ ಸಂಗಡಲೇ ಸಾಗುತ್ತಿದ್ದನು. ಸ್ವಲ್ಪ ಹಿಂದೆಡೆಯಾಗಿ ಸೇನಾಪತಿಯಾದ ಮೊಗದುಂ ಆಲಿಯೂ ಇತರ ಹತ್ತಿರದ ಸಂಬಂಧಿಗಳೂ ಫ್ರೆಂಚಸೈನ್ಯದ ಅಧಿನಾಯಕನೂ ಅವನ ಪಕ್ಷದ ಮುಖ್ಯ ಅನುಚರನೂ ಪರಿಚಾರಕರೊಬ್ಬಿಬ್ಬರೂ ಅನುಯಾಯಿಗಳಾಗಿದ್ದರು. ಎಲ್ಲರ ಹಿಂದುಗಡೆಯಲ್ಲಿ ಇಬ್ಬರು ರಾವುತರು ಆಯುಧಸಮೇತರಾಗಿ ನಡೆದುಬರುತ್ತಿದ್ದರು.

ಸೂರ್ಯನು ಅಸ್ತನಾಗಿಲ್ಲದಿದ್ದರೂ ಆ ಪ್ರದೇಶದಲ್ಲಿ ಅಸ್ತನಾಗಿದ್ದಂತೆಯೇ ತೋರುತ್ತಿದ್ದಿತು. ಆ ಭಾವನೆಗೆ ಅಲ್ಲಿನ ಭೂಸ್ಥಿತಿಯೇ ಕಾರಣ. ಕೊಯಿಮುತ್ತೂರಿನ ಸುತ್ತಲೂ ಪರ್ವತಗಳು—ಅವು ಸಾಲುಸಾಲಾಗಿ ಒಂದರಹಿಂದೆ ಒಂದು ಸ್ತರಸ್ತರವಾಗಿ ಜೋಡಿಸಲ್ಪಟ್ಟಂತಿದ್ದುವು. ಅವುಗಳಮೇಲೂ ಮುಂದಿನ ಪ್ರದೇಶಗಳಲ್ಲಿಯೂ ದಟ್ಟವಾದ ಕಾಡು ಹಬ್ಬಿದ್ದಿತು. ಊರನ್ನು ಬಿಟ್ಟು ಒಂದೆರಡು ಮೈಲಿಗಳಷ್ಟುದೂರ ಹೋಗುವುದರೊಳಗೆ ಕಾಡು—ಅಷ್ಟರೊಳಗೆ ಕಾಡು ನಮ್ಮಸುತ್ತಲೂ ಆವರಿಸಿದೆಯೆಂದು ಅಚಿಂತಿತವಾಗಿ ಅರಿವಾಗುತ್ತಿದ್ದಿತು. ಈಗ--ನಮ್ಮ ಕಾಲದಲ್ಲಿ--ಊರಿನಹೊರಗೆ ಎಲ್ಲೆಲ್ಲಿ ನೋಡಿದರೂ ಪರ್ವತದ ತಪ್ಪಲವರೆಗೆ ಸೊಗಸಾದ ಪೈರು

ಪಚ್ಚೆಗಳಿಂದ ಕೂಡಿದ ಕ್ಷೇತ್ರವಿದೆ. ಆದರೆ ಹದಿನೆಂಟನೆಯ ಶತಮಾನದಲ್ಲಿ ಚಿತ್ರವು ಮತ್ತೊಂದು ಬಣ್ಣವಾಗಿದ್ದಿತು. ಕಾಡುಗಳಿಗೆ ಕಾಲಾನಂತರದಲ್ಲಿ ಬಂದ ಮುಳಿಯು ಆಗ ಇನ್ನೂ ಬಹುದೂರದಲ್ಲಿದ್ದಿತು—ಪ್ರಾಯಶಃ ಹುಟ್ಟಿಯೇ ಇರಲಿಲ್ಲ.

ನವಾಬನು ಎಲ್ಲರೊಡನೆಯೂ ಸರಸವಾಗಿ ಮಾತನಾಡುತ್ತಿದ್ದನು. ಸಲ್ಲಾಪ ಸಮಯದಲ್ಲಿ ಅವನಿಗೆ ಅಧಿಕಾರಜ್ಞಾನದಿಂದ ಉತ್ಪನ್ನವಾಗುವ ಭೇದಬುದ್ಧಿಯಿರಲಿಲ್ಲ. ಮಗನೊಡನೆ ಮನೆಯ ಮಾತನ್ನಾಡುತ್ತಿದ್ದನು. ಸೇನಾಪತಿಯೊಡನೆ ಮಲಬಾರುಪ್ರಾಂತಗಳನ್ನು ಜಯಿಸಿ ಅಲ್ಲಿನ ದಂಗೆಯನ್ನು ಅಡಗಿಸುವುದು ಹೇಗೆಂಬುದನ್ನು ಚರ್ಚಿಸುತ್ತಿದ್ದನು. ಫ್ರೆಂಚ ದಳಪತಿಯನ್ನು ಕಂಡರೆ ಆತನಿಗೆ ಬಹಳ ವಿಶ್ವಾಸ; ಆತನ ಮಾತಿನಲ್ಲಿ ಬಹಳ ಗೌರವ. ತನ್ನ ಸೈನ್ಯದಲ್ಲಿ ಗೋಲಂದಾಜ ದಳವನ್ನು ಚೆನ್ನಾಗಿ ತರಪೇತುಮಾಡಿ ಬಲಗೊಳಿಸುವ ಮಾರ್ಗವನ್ನು ಅವನೊಡನೆ ವಿಚಾರಮಾಡುತ್ತ ವಿಷಯವನ್ನು ಸಂಗ್ರಹಮಾಡುತ್ತಿದ್ದನು. ಆತನೊಡನೆ ಮಾತನಾಡದಿದ್ದವರು ಅಥವಾ ಆತನು ಮಾತನಾಡಿಸದಿದ್ದವರು ಆ ಗುಂಪಿನಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಹಸನ್ಮುಖಿಗಳಾಗಿದ್ದರು. ತಾವು ಅಧಿಕಾರಿಗಳೆಂದು ತಿಳಿದು ಪ್ರವರ್ತಿಸುವವರಿರಲಿಲ್ಲ. ಆದರೆ ಮರ್ಯಾದೆಯನ್ನು ಮರೆತು ಮಾತನಾಡುವವರೂ ಅಲ್ಲಿರಲಿಲ್ಲ.

ಹೀಗೆ ಎಲ್ಲರೂ ಮಾತನಾಡುತ್ತ ಒಂದುಮೈಲಿಯಷ್ಟನ್ನು ಕಳೆದಿರಬಹುದು. ಆ ಹೊತ್ತಿನಲ್ಲಿ, "ಹುಜೂರ್, ಹುಜೂರ್! ಕಾಪಾಡಬೇಕು!" ಎನ್ನುತ್ತ ಮುದುಕಿಯೊಬ್ಬಳು ಓಡಿಬಂದಳು. ಎಲ್ಲರೂ ಕುದುರೆಯನ್ನು ನಿಲ್ಲಿಸಿದರು. ನವಾಬನು ಹಿಂದಿರುಗಿ ನೋಡಿದನು. ಮುದುಕಿಯು ಏದುತ್ತ ಓಡಿ ಬಂದವಳು ನವಾಬನ ಮುಂದೆ ಅಡ್ಡಬಿದ್ದು "ಜಹಾಪನಾ, ಕಾಪಾಡಬೇಕು! ಫಿದವಿಯು ಪಾದದರ್ಶನವನ್ನು ಪಡೆಯಬೇಕೆಂದು ಬಹಳದಿನಗಳಿಂದ ಕಾದಿದ್ದಾಳೆ" ಎಂದು ಪ್ರಾರ್ಥಿಸಿದಳು. ಅವಳಿಗೆ ಆ ಮಾತುಗಳನ್ನು ಹೇಳುತ್ತ ದುಃಖವೇರಿ ಬಂದಿತು. ಬಿಕ್ಕಿಬಿಕ್ಕಿ ಅಳುತ್ತ ವೃದ್ಧೆಯು ಹುಜೂರ್, ಹುಜೂರ್, ಎಂದು ಜಪಿಸಲಾರಂಭಿಸಿದಳು. ನವಾಬನು ಉಪಶಮನಮಾಡಿಕೊಳ್ಳುವಂತೆ ಹೇಳಿ ಕುದುರೆಯಿಂದ ಇಳಿದನು. ಮುದುಕಿಯು ಹೇಳಬೇಕಾದುದು ಬಹಳವಿರುವಂತೆಯೂ, ಅವಳನ್ನು ಒಂದೆರಡು ಮಾತಿನಿಂದ ಸಮಾಧಾನಪಡಿಸಲಾಗುವುದಿಲ್ಲವೆಂತಲೂ ಆತನು ಊಹಿಸುತ್ತ, ತನ್ನೊಡನೆ ಬಂದಿದ್ದವರ ಮನೋಭಾವನೆಯು ಹೇಗಿದೆಯೆಂಬುದನ್ನು ತಿಳಿಯುವ ಉದ್ದೇಶದಿಂದ ಹಿಂದಿದ್ದವರಕಡೆಗೆ ತಿರುಗಿದನು. ಎಲ್ಲರೂ ಈಕೆಯು ಯಾರಿರಬಹುದು, ನವಾಬರನ್ನು ಇಲ್ಲಿ ಬಂದು ಕಾಣುವಂತಹ ಆಶಯವೇನಿರಬಹುದು ಎಂಬದಾಗಿ ಲೆಕ್ಕಹಾಕು

ತ್ತಿದ್ದರು. ಆ ಗುಂಪಿನಲ್ಲಿ ಸೇರಿದ್ದ ಹೈದರ್‌ಷಹನು ಮಾತ್ರ ತಾನು ತೊಟ್ಟಿದ್ದ ಉಡುಪು ತನ್ನನ್ನು ಹಿಂಡಿಹಾಕುವಷ್ಟು ಬಿಗಿಯೆಂಬ ಭಾವನೆಯಿಂದ ಕತ್ತಿನಪಟ್ಟಿಯ ಮೇಲೆ ಬೆಟ್ಟಾಡಿಸುತ್ತ ಅದನ್ನು ಸಡಿಲಮಾಡುತ್ತಿದ್ದನು. ಮುದುಕಿಯು ಮೆಹರಳ ತಾಯಿ ; ತನ್ನ ಅರ್ಜಿಗಳೆಲ್ಲವೂ ನಿಷ್ಫಲವಾದದ್ದನ್ನು ನೋಡಿ ತನ್ನ ಬಂಧುವೊಬ್ಬನ ಸಲಹೆಯಂತೆ ನವಾಬನು ಸಂಚಾರಹೊರಟಾಗ ಸಾಕ್ಷಾತ್ತಾಗಿ ವಿಜ್ಞಾಪಿಸಿ ಕೊಳ್ಳಲು ಬಂದಿದ್ದಳು. ಅವಳು ಬಹಳಮಟ್ಟಿಗೆ ದುಃಖವನ್ನು ಅಡಗಿಸಿಕೊಂಡು ಈರೀತಿಯಾಗಿ ಹೇಳಿದಳು:—“ ಖಾವಂದ್, ತಮ್ಮ ಅನುಗ್ರಹಕ್ಕೆ ವಿಶೇಷವಾಗಿ ಪಾತ್ರಳಾಗಿದ್ದ ಮೆಹರಳು ನನ್ನಮಗಳು. ಅವಳನ್ನು ತಾವು ಮಗಳಂತೆ ಸಾಕುತ್ತಿದ್ದಿರೆಂದು ನಾನು ಹೇಳಬೇಕಾಗಿಯೇ ಇಲ್ಲ. ತಾಯಿಯಾದ ನಾನೂ ನನ್ನ ಮಗಳೂ ತಮ್ಮ ಆಶ್ರಯದಲ್ಲಿಯೇ ಇದ್ದುಕೊಂಡು ಮಕ್ಕಳಂತೆ ಬೆಳೆದೆವು. ಮುಂದೆಯೂ ಕೂಡ ತಮ್ಮ ಅನುಗ್ರಹವು ಸ್ಥಿರವಾಗಿರಲೆಂದೇ ಅಲ್ಲಾನಲ್ಲಿ ನನ್ನ ನಿರಂತರವಾದ ಪ್ರಾರ್ಥನೆ. ಅಲ್ಲಾ ಅಕ್ಬರನು ತಮಗೆ ಸಮಸ್ತವಾದ ಶ್ರೇಯಸ್ಸನ್ನೂ ಕರುಣಿಸಲಿ.

“ ನನ್ನಾ ಮೆಹರಳು--ತಾಯಿಗೆ ತಾಯಿಯಾಗಿದ್ದ ಆ ಮೆಹರಳು ಕಳುವಾಗಿದ್ದಾಳೆ. ಹುಜೂರ್‌ರವರ ಬಳಿಯಲ್ಲಿ ಖಾಸ್‌ಭಕ್ಷಿಯಾಗಿದ್ದ ಆಗಾಮಹಮದ್ ಖಾನನು ಅವಳನ್ನು ಅಪಹರಿಸಿಕೊಂಡು ಹೋಗಿಬಿಟ್ಟನು. ಅದು ನಡೆದು ಆಗಲೇ ಒಂದು ತಿಂಗಳಷ್ಟಾಯಿತು. ಖಾವಂದರಿಂದ ಜಹಗೀರಿಯನ್ನು ಪಡೆದು ಆತನು ಅಲ್ಲಿಗೆ ಹೋಗುವ ಮೊದಲು ನನ್ನ ಬಳಿಗೆ ಬಂದು ಮೆಹರಳ ಮೇಲೆ ತನಗೆ ಮನಸ್ಸುಂಟಾಗಿದೆಯೆಂದೂ ಅವಳನ್ನು ತನ್ನೊಡನೆ ಕಳುಹಿಸಬೇಕೆಂದೂ ಪ್ರತಿಯಾಗಿ ತಾನು ಯಥೇಚ್ಛವಾಗಿ ಸಂಭಾವನೆ ಕೊಡುವೆನೆಂದೂ ಕೇಳಿದನು. ಅದಕ್ಕೆ ಮುಂಚೆ ಹಿಂದಿನ ರಾತ್ರಿ ಮೆಹರಳನ್ನು ಸಂಧಿಸಿ ಅದೇ ವಿಷಯವಾಗಿ ಪ್ರಾರ್ಥಿಸಿಕೊಂಡನಂತೆ. ಅದನ್ನು ಮಗಳು ನನಗೆ ತಿಳಿಸಿದಳು. ನಾನೂ ಒಪ್ಪಲಿಲ್ಲ. ಮಗಳೂ ಒಪ್ಪಲಿಲ್ಲ. ಅವನ ಜಹಗೀರಿಯಲ್ಲಿ ಅಧೀಶ್ವರಿಯಾಗಿರುವುದಕ್ಕಿಂತ ಖಾವಂದರ ಪಾದಸೇವೆ ಮಾಡಿಕೊಂಡಿರುವುದೇ ಉತ್ತಮವೆಂದು ಇಬ್ಬರೂ ಮುಕ್ತಕಂಠರಾಗಿ ಉತ್ತರಹೇಳಿದೆವು. ಆಗಾಮಹಮದ್‌ನು ರಾತ್ರಿ ನಿದ್ರೆಯಹೊತ್ತಿನಲ್ಲಿ ಆಳುಗಳನ್ನು ಕಟ್ಟಿಕೊಂಡು ಬಂದು ನಮ್ಮ ಮನೆಗೆ ನುಗ್ಗಿ ಮೆಹರಳನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೊರಟುಹೋದನು. ಅಂದಿನಿಂದ ಮಗಳನ್ನು ಕಳೆದುಕೊಂಡೆನು. ಖಾವಂದ್, ಮೆಹರಳು ಎಲ್ಲಿ ಹೋದಳೋ ತಿಳಿಯದು. ಜೀವಸಹಿತ ಇದ್ದಾಳೆಯೋ ಇಲ್ಲವೋ ಅದೂ ತಿಳಿಯದು.”

"ಆಗಾಮಹಮದನು ಹೊರಟುಹೋಗಿ ಒಂದು ತಿಂಗಳ ಹತ್ತಿರಕ್ಕೆ ಬಂದಿತು. ನೀನು ಈಗ ಬಂದು ಅವನ ಮೇಲೆ ಫಿರ್ಯಾದು ಹೇಳುತ್ತಿದ್ದೀಯೆ. ಇದಿಷ್ಟು ಕಾಲವೂ ಏನುಮಾಡುತ್ತಿದ್ದೆ? ನಿನ್ನ ಮಾತನ್ನು ನೋಡಿದರೆ ಒಂದ ಕ್ಕೊಂದು ಸಂಬಂಧವಿರುವಂತೆ ತೋರುವುದಿಲ್ಲ. ಅಂತಹ ಫಿರ್ಯಾದನ್ನು ನಂಬುವುದು ಹೇಗೆ?" ಎಂದು ಹೈದರನು ಗಂಭೀರಭಾವದಿಂದ ಪ್ರಶ್ನೆಮಾಡಿದನು.

ಖಾಸ್‌ಭಕ್ಷಿಗೆ ತನ್ನ ಅಂಗಿಯೇಕೆ ಬಿಗಿಯುತ್ತಿದ್ದಿತೆಂಬುದು ಈಗ ಗೊತ್ತಾಯಿತು. ಮುದುಕಿಯು ನವಾಬನನ್ನು ಕುರಿತು ಕೂಗಿಕೊಳ್ಳುತ್ತ ಬಂದಾಗಲೇ ಏನೋ ಪೀಕಲಾಟವು ಬಂದಿತೆಂದು ಹೆದರಿಕೆಯುಂಟಾಗಿ ಅವನಿಗೆ ಜಂಗಾಬಲವೇ ಹೋಯಿತು. ಮುದುಕಿಯು ಮತ್ತಾವುದಾದರೂ ಕಾರಣದ ಮೇಲೆ ನವಾಬನನ್ನು ಅರಸಿಕೊಂಡು ಬಂದಿರಬಹುದೆಂದು ಅವನು ಒಂದು ಕ್ಷಣ ಆಶಿಸಿದನು. ಆದರೆ ಅದು ಬರಿಯ ಆಶೆ. ಮುದುಕಿಯು ಮಗಳ ವಿಷಯವನ್ನೇ ಕುರಿತು ಮಾತೆತ್ತಿದಳು. ಇನ್ನು ಅರ್ಜಿಯ ವಿಷಯವೂ ತಾನು ಮಾಡಿದ ಕೆಲಸವೂ ಒಂದೊಂದಾಗಿ ಬಯಲಾಗುವುದೆಂದು ಅವನು ಖಂಡಿತಮಾಡಿದನು. ತನ್ನ ತಲೆಗೆ ವಿಪತ್ತು ಬಂದಿತೆಂದು ಅವನ ಮನಸ್ಸಿಗೆ ತೋರಿತು. ಆಗಾಖಾನನು ಹೊರಟು ಹೋದಮೇಲೆ ತನ್ನ ಪಾಡಿಗೆ ತಾನು ಯಾವ ವಿಚಾರಕ್ಕೂ ಹೋಗದೆ ಸುಮ್ಮನಿದ್ದಿದ್ದರೆ ಚೆನ್ನಾಗಿದ್ದಿತೆಂದು ವಿವೇಕಜ್ಞಾನವುಂಟಾಯಿತು. ಕೃತಜ್ಞತೆಗೆ ಕಟ್ಟುಬಿದ್ದು ತಾನು ಈರೀತಿ ಎಡವಿದೆನೆಂದೂ ಕೃತಜ್ಞತಾಬುದ್ಧಿಯುಳ್ಳವರಿಗೆ ಅದು ಕಾಲವಲ್ಲವೆಂದೂ ಹೇಳಿಕೊಂಡನು. ಧೈರ್ಯದಿಂದಿರುತ್ತ ಸಮಯೋಚಿತವಾದ ಉತ್ತರವನ್ನು ಹೇಳಿ ಈ ಅಪಾಯದಿಂದ ಪಾರಾಗಬೇಕೆಂದು ಅವನು ಯೋಚಿಸಿಕೊಂಡನು. ಅಷ್ಟರೊಳಗೆ ಮುದುಕಿಯ ಅಹವಾಲು ಪೂರೈಸಿ ನವಾಬನು ಅವಳ ಮಾತಿನಲ್ಲಿ ತನಗುಂಟಾದ ಸಂದೇಹವನ್ನು ತೋರ್ಪಡಿಸಿದನು. ಅದನ್ನು ಕೇಳಿದ ಕೂಡಲೇ ಖಾಸ್‌ಭಕ್ಷಿಗೆ ಉಸಿರುಕೂಡಿ ಬಂದಿತು. ದೇವರ ದಯದಿಂದ ಅವರ ಸಂಶಯವು ಬೇರೂರಿ ನಿಂತು ಮತ್ತಾವ ಬುದ್ಧಿಗೂ ಆಸ್ಪದಕೊಡದಿರಲೆಂತಲೂ ಮುದುಕಿಯ ಪ್ರಾರ್ಥನೆಯು ವ್ಯರ್ಥವಾಗಲೆಂತಲೂ ಹಾರೈಸಿದನು.

ಆದರೆ ಮುದುಕಿಯು ಹೈದರನ ಮಾತಿಗೆ ಹೀಗೆ ಪ್ರತ್ಯುತ್ತರ ಹೇಳಿದಳು. "ಹುಜೂರ್, ಅಲ್ಲಾನು ತಮಗೆ ಕಲ್ಯಾಣವನ್ನುಂಟುಮಾಡಲಿ. ಆಗಾಮಹಮದ್ ಖಾನನು ಮೆಹರಳನ್ನು ಅಪಹರಿಸಿಕೊಂಡು ಹೋದ ಮಾರನೆಯ ದಿವಸವೇ, ಮಗಳನ್ನು ನನಗೆ ಹೊಂದಿಸಿಕೊಟ್ಟು ರಕ್ಷಿಸಬೇಕೆಂದು ನಾನು ಹದಿನೈದು ಇಪ್ಪತ್ತು ವೇಳೆ ಅರ್ಜಿಯನ್ನು—"

"ಹುಜೂರ್, ಈಕೆಯ ಮಗಳೂ ಈಕೆಯೂ ಕುತ್ಸಿತವಾದ ಪ್ರವೃತ್ತಿಯುಳ್ಳವರು. ಅವರಿಗೆ ಆ ಮೂಲಕವೇ ಜೀವನ—" ಎಂದು ಖಾಸ್‌ಭಕ್ಷಿಯು ಮುಂದೆ ಮಾತಿಕ್ಕಿದನು. ಹೈದರ್‌ಷಹನಿಗೆ ಈಗ ನಿಜವಾಗಿ ರೋಷವೇ ಬಂತು. ಅವನು ಅಷ್ಟಕ್ಕೇ ನಿಲ್ಲಿಸಲಿಲ್ಲ.—"ಖಾವಂದ್, ಈ ಬದ್ಮಾಷಳು ಮಹಾಪಾತಕಿಯಾದ ವೇಶ್ಯೆ. ಸನ್ನಿಧಿಯಲ್ಲಿ ಇಲ್ಲದಿರುವವರ ಮೇಲೆ ಇಲ್ಲದ ಚಾಡಿಹೇಳಿ ಆ ಮೂಲಕ ಯಾವುದಾದರೊಂದು ರೂಪದಲ್ಲಿ ಪ್ರಯೋಜನವನ್ನು ಪಡೆಯಬೇಕೆಂಬುದು ಇವಳ ಉದ್ದೇಶವೆಂದು ತೋರುತ್ತದೆ. ಹಿಂದೊಂದುತಡವೆಯೂ ಇವಳು ಹೀಗೆಯೇ ಮಾಡಿ ದುಡ್ಡು ಸುಲಿದಳು" ಎಂದು, ಬಳಿಕ ಅವಳಕಡೆಗೇ ತಿರುಗಿ "ಏನೇ ಹರಾಮಿ, ಗಂಡಸರು ಹೆಂಗಸರೆಂಬ ಭೇದವಿಲ್ಲದೆ ಇಲ್ಲಿ ಬಂದು ತೊಂದರೆ ಮಾಡುತ್ತೀ! ನವಾಬರು ಹೆಚ್ಚಾಗಿ ಶ್ರಮಪಟ್ಟಿರುವಕಾರಣ ಆಯಾಸಪರಿಹಾರಾರ್ಥವಾಗಿ ಸಂಚಾರಹೊರಟರೆ ಅಲ್ಲಿಗೂ ಬಂದು ಅವರನ್ನು ಪೀಡಿಸುತ್ತಿದ್ದೀಯೆ! ಅಹವಾಲುಗಳನ್ನು ತರಲು ಇದು ಸಮಯವಲ್ಲವೆಂದು ನಿನಗೆ ತಿಳಿಯದೋ? ಹಾಗೆ ತಿಳಿಯದಿದ್ದಪಕ್ಷದಲ್ಲಿ ಈಗ ತಿಳಿದುಕೊ. ನಾಳೆ ಅರ್ಜಿಕೂಗಿಸುವ ಹೊತ್ತಿಗೆ ದರ್ಬಾರಿನ ಮಂದಿರದಬಳಿಗೆ ಬಂದು ಕಾಣಿಸಿಕೊ. ಆಗ ನಿನ್ನ ಫಿರ್ಯಾದನ್ನು ಲಕ್ಷ್ಯಕ್ಕೆ ತಂದುಕೊಳ್ಳಲಾಗುವುದು. ಈಗ ಹೊರಡು" ಎಂದು ಗದರಿಸಿಕೊಂಡನು.

ನವಾಬನೊಡನೆ ಬಂದಿದ್ದ ಸಂಗಡಿಗರು ಅವನ ಮಾತನ್ನು ವಿಹಿತವೆಂದು ಒಪ್ಪಿಕೊಂಡರು. ಖಾಸ್‌ಭಕ್ಷಿಯನ್ನು ಸ್ವಾಮಿಭಕ್ತಿಗಾಗಿ ಹೊಗಳಿದರು. ತರುವಾಯ ಒಬ್ಬಿಬ್ಬರು ಹಾಗೆಯೇ ಮಾಡೆಂದು ಮುದುಕಿಗೆ ಬುದ್ಧಿಯನ್ನು ಹೇಳಿದರು. ಇದನ್ನೆಲ್ಲಾ ನೋಡಿ, ನವಾಬನ ಮುಖವು ಮತ್ತಷ್ಟು ಗಂಭೀರವಾಯಿತು. ಅವರ ಮುಖವನ್ನೆಲ್ಲಾ ಒಂದುಸಾರಿ ಬಿರುಗಣ್ಣಿನಿಂದ ದೃಷ್ಟಿಸಿ ನೋಡಿದನು.

ಮುದುಕಿಯು ಗೋಳಿಟ್ಟಳು. ಖಾಸ್‌ಭಕ್ಷಿಯು ಇಲ್ಲಿಯೂ ಇದ್ದುದೂ ಅವನು ಮಾನಕಳೆದುದೂ ಸಭಿಕರ ಸಲಹೆಯೂ ನವಾಬನ ಮೌನವೂ ತನ್ನ ಕೋರಿಕೆಯನ್ನು ನಿರರ್ಥಕಮಾಡಿದುವೆಂದು ಅವಳಿಗೆ ದುಃಖವು ಮಿತಿಮೀರಿತು. ಅವಳು ಕಣ್ಣೀರು ಸುರಿಸುತ್ತ, ಕೊನೆಯಾವೃತ್ತಿ ಹೇಳೋಣವೆಂದು ಯೋಚಿಸಿ, "ಜೀಯಾ, ಈ ಸಂಭಾವಿತರು ಹೇಳಿದಂತೆಯೇ ಮಾಡಬಹುದಾಗಿದ್ದಿತು. ಆದರೆ ಅರ್ಜಿಗಳಿಂದ ಯಾವ ಉಪಯೋಗವೂ ಆಗಲಿಲ್ಲ. ಅವು ಯಾವುವುಗಳಿಂದಲೂ ನನ್ನ ಅಹವಾಲು ತಮಗೆ ವೇದ್ಯವಾದಂತಿಲ್ಲ. ಆದ್ದರಿಂದಲೇ, ಅರ್ಥಿಗಳನ್ನು ನೋಡಲು ಇದು ತಮಗೆ ಹೊತ್ತಲ್ಲವೆಂದು ಅರಿತವಳಾಗಿದ್ದರೂ ಕೂಡ, ರೂಬುರೂಬು ಹೇಳಿಕೊಳ್ಳಲು

ಇದೊಂದುಮಾತ್ರವೇ ಮಾರ್ಗವೆಂದು ಯೋಚಿಸಿ ಇಲ್ಲಿಗೆ ಓಡಿಬಂದೆನು. ಹುಜೂರ್, ಪಾದದಲ್ಲಿ ಬಿದ್ದು ಕೇಳಿಕೊಳ್ಳುತ್ತೇನೆ. ನನ್ನನ್ನು ಸರ್ವಥಾ ಮನ್ನಿಸಿರಿ. ಮೆಹರ ಳನ್ನು ಪುನಃ ಪಡೆಯುವ ಭಾಗ್ಯವು ನನ್ನ ಹಣೆಯಲ್ಲಿ ಬರೆದಿಲ್ಲ......ಹೊರಡು ತ್ತೇನೆ. ಅಲ್ಲಾನು ನಿಮಗೆ ಮಂಗಳವನ್ನುಂಟುಮಾಡಲಿ.'' ಎಂದು ಹೇಳಿ ನೆಲ ಮುಟ್ಟಿ ಸಲಾಮು ಹಾಕಿ ನಗರಾಭಿಮುಖವಾಗಿ ಹೊರಟಳು.

ಆಗಾಮುಹಮದನ ಮೇಲೆ ಫಿರ್ಯಾದುಮಾಡುವುದಕ್ಕೂ ಖಾಸ್‌ಭಕ್ಷಿಯು ಆ ಮುದುಕಿಯ ಅರ್ಜಿಗಳನ್ನು ಗೋಪ್ಯ ಅಥವಾ ತಿರಸ್ಕಾರಮಾಡುವುದಕ್ಕೂ ಸಂಬಂಧವೇನುಂಟೆಂದು ಹೈದರನು ಲೆಕ್ಕಹಾಕಿದನು. ಹಿಂದೆ ತಾನು ಹೊರಟು ಹೋಗುವಾಗ ಆಗಾಖಾನನು ಈ ಮನುಷ್ಯನಿಗೆ ಶಿಫಾರಸು ಮಾಡಿ ತನ್ನ ಕೆಲಸ ವನ್ನು ಕೊಡಿಸಿದುದು ಜ್ಞಾಪಕಕ್ಕೆ ಬಂದಿತು. ಸಮಸ್ಯೆಯು ಅರ್ಥವಾದಂತೆಯೂ ಮುದುಕಿಯ ಮಾತಿನಲ್ಲಿ ಸುಳ್ಳಿಲ್ಲವೆಂತಲೂ ತೋರಿತು.

ನವಾಬನು ಇನ್ನು ಸುಮ್ಮನಿರಲಿಲ್ಲ. ಅವನು ಮುದುಕಿಯನ್ನು ಹಿಂದಕ್ಕೆ ಕರೆಸಿ ತನ್ನ ಜೊತೆಯಲ್ಲಿ ಬರುವಂತೆ ಹೇಳಿ, ಸಂಗಡ ಬಂದಿದ್ದವರಿಗೆ ಹಿಂದಿರುಗು ವಂತೆ ಆಜ್ಞಾಪಿಸಿ ತಾನು ಕಾಲುನಡಿಗೆಯ ವೇಗದಿಂದ ಊರಿನಕಡೆಗೆ ನಡೆದನು. ಮುದುಕಿಯೊಬ್ಬಳೇ ಸ್ವಲ್ಪದೂರದಲ್ಲಿ ಅವನನ್ನು ಹಿಂಬಾಲಿಸಿಬರುತ್ತ ಅವನು ಆಗಾಗ್ಯೆ ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ತರಕೊಡುತ್ತಿದ್ದಳು.

(೫)

ನವಾಬನು ಎಂದಿನ ಹೊತ್ತಿಗಿಂತ ಬಹಳ ಮುಂಚೆ ಹಿಂದಕ್ಕೆ ಬಂದುದನ್ನು ನೋಡಿ ಅರಮನೆಯ ಜನರು ಸ್ವಲ್ಪ ಭಯಹೊಂದಿದರು. ಆತನ ಮುಖದ ಕ್ರೋಧ ಮುದ್ರೆಯು ಆ ಭಯವನ್ನು ಹೆಚ್ಚಿಸದಿರಲಿಲ್ಲ. ಏನೋ ವಿಶೇಷ ಸಂಗತಿಯು ನಡೆ ದಿರಬೇಕೆಂದು ಅಲ್ಲಿದ್ದವರು ನವಾಬನ ಸಂಗಡ ಹೋಗಿದ್ದ ಪರಿವಾರ ದೇವತೆಗಳನ್ನು ವಿಚಾರಿಸಿದರು. ವಾರ್ತೆಯು ಕರ್ಣಾಕರ್ಣಿಕೆಯಾಗಿ ಹಬ್ಬಿತು. ಅತಿಶಯವಾದ ಪ್ರೀತಿಗೆ ಪಾತ್ರನಾಗಿದ್ದ ಹೈದರ್‌ಷಹನು ಈ ತಪ್ಪಿತಕ್ಕಾಗಿ ಯಾವುದಾದರೊಂದು ಪ್ರಬಲವಾದ ದಂಡನೆಗೆ ಗುರಿಯಾಗುವನೆಂದೂ ಅವನ ಅಧಃಪತನವು ಸಿದ್ಧವೆಂದೂ ಎಲ್ಲಾ ಕಡೆಯಲ್ಲಿಯೂ ತರ್ಕ. ಎಂದಿನಂತೆ ಅಲ್ಲಿನ ಜನಗಳು ನವಾಬನ ಕಣ್ಣಿಗೆ ಬೀಳದ ದೂರದ ಸ್ಥಳಗಳಲ್ಲಿ ಗುಂಪುಸೇರುತ್ತ ಈ ಹೊಸ ವಿಷಯವನ್ನೂ ಅದರ ಪರಿಣಾಮವನ್ನೂ ಕುರಿತು ಚರ್ಚಿಸತೊಡಗಿದರು.

ಹೈದರನು ತನ್ನ ಬಿಡದಿಗೆ ಹೊರಟುಹೋಗಿ ಯಾರೂ ಬಂದು ತನ್ನನ್ನು ತೊಂದರೆಮಾಡದಂತೆ ಕಾವಲಿರಲು ಆಳುಗಳಿಗೆ ಕಟ್ಟುಮಾಡಿ ಒಳಗಿದ್ದುಬಿಟ್ಟನು. ಅವನ ಕೋಪವಿಳಿಯಲಿಲ್ಲ.

ಹೈದರನ ಮಗನು ಯಾವ ರೀತಿಯಲ್ಲಿ ತಂದೆಯ ಕೋಪವು ದೂರವಾಗುವುದು, ಯಾರಿಂದಲಾದರೂ ಹೇಳಿಸಿದರೆ ಆತನು ಕೋಪವನ್ನು ಬಿಟ್ಟು ಪ್ರಸನ್ನನಾಗುವನೆ? ಎಂಬ ವಿಚಾರಗಳನ್ನು ಚಿಂತಿಸಿದನು. ಯಾರಿಂದಲಾದರೂ ಹೇಳಿಸುವುದೇ ಸಾಧುವಾಗಿ ಕಂಡುಬಂದಿತು. ಆದರೆ ಸಿಕ್ಕಿದವರ ಕಡೆಯಿಂದ ಶಿಫಾರಸು ಹೇಳಿಸಲು ಹೊರಡಲಾಗಿ ನವಾಬನ ಮನಸ್ಸಿನಲ್ಲಿ ಖಾಸ್‌ಭಕ್ಷಿಯ ಮೇಲಿನ ಕ್ರೋಧವು ಕಡಿಮೆಯಾಗುವುದಕ್ಕೆ ಬದಲಾಗಿ ಹೆಚ್ಚಿ ಮತ್ತೇನಾದರೂ ಮುಳಿಗೆ ಕಾರಣವಾಗುವುದಾದ್ದರಿಂದ ಈ ಪ್ರಯತ್ನದಲ್ಲಿ ಬಹಳ ಎಚ್ಚರಿಕೆ ಇರಬೇಕೆಂತಲೂ, ಯಾರಮಾತಿನಲ್ಲಿ ನವಾಬನಿಗೆ ಗೌರವವೂ ವಿಶ್ವಾಸವೂ ಅಧಿಕವಾಗಿವೆಯೋ ಅಂಥವರ ಮೂಲಕ ಅಪರಾಧಿಗೆ ಬಿಡುಗಡೆಹೊಂದಿಸಬೇಕೆಂದೂ ಅವನು ಯೋಚಿಸಿದನು. ನವಾಬನಂತೆಯೇ ಗುಣಿಸಿ ಮಗನೂ ಕೂಡ ಹೈದರ್‌ಷಹನು ಅಪರಾಧ ಮಾಡಿದವನೆಂದು ಮುಂದಟ್ಟುಮಾಡಿಕೊಂಡಿದ್ದನು. ಹೀಗೆ ಒಂದು ಕಡೆ ಕುಳಿತು ಯೋಚಿಸುತ್ತಿರುವ ಕಾಲದಲ್ಲಿಯೇ ಖಾಸ್‌ಭಕ್ಷಿಯು ಯಾರನ್ನು ಶರಣುಹೋಗಲೆಂದು ಎರಡು ಪಕ್ಕಗಳಲ್ಲಿಯೂ ನೋಡುತ್ತ ಅಲ್ಲಿಗೆ ಬಂದನು. ಬಂದವನು ನವಾಬನ ಮಗನನ್ನು ನೋಡಿದೊಡನೆ ಗೋಳಿಡುತ್ತ ಓಡಿಬಂದು ಅಡ್ಡಬಿದ್ದು ಕಾಲುಮುಟ್ಟಿ ಸಲಾಮು ಹಾಕುತ್ತ, ಈ ಪ್ರಸಂಗದಲ್ಲಿ ತನಗೆ ಅಕ್ಷೇಮವಾಗುವುದು ನಿಶ್ಚಿತವೆಂದೂ ತನ್ನನ್ನು ಹೇಗಾದರೂ ಮಾಡಿ ರಕ್ಷಿಸಬೇಕೆಂದೂ ನವಾಬರು ಸ್ವಯಂ ಮಗನ ಮಾತನ್ನು ತೆಗೆದುಹಾಕುವುದಿಲ್ಲವಾದ ಕಾರಣ ಶಿಫಾರಸು ಹೇಳಬೇಕೆಂದೂ ಪ್ರಾರ್ಥಿಸಿದನು. ಹುಡುಗನು ಹೀಗೆಂದನು. " ಹೈದರ್‌ಷಹ, ನಾನು ಅದೇ ಪ್ರಯತ್ನವನ್ನು ಮಾಡುತ್ತಲಿದ್ದೇನೆ. ನವಾಬರನ್ನು ಸಮೀಪಿಸಿ ನಿನಗೆ ಬೆಂಬಲವಾಗಿ ನಿಂತು ಕಾರ್ಯವನ್ನು ಸಾಧಿಸುವಂತಹ ಸಮರ್ಥರಾರಿದ್ದಾರೆಂಬುದನ್ನು ಮನಸ್ಸಿನೊಳಗೇ ಹುಡುಕುತ್ತಿದ್ದೇನೆ. ಆದರೆ ನಾನೇ ಸ್ವಂತವಾಗಿ ಹೋಗಿ ಹೇಳುವುದು ಮಾತ್ರ ಸುಳ್ಳು. ಏಕೆಂದರೆ ನಾನು ಹೋದಪಕ್ಷದಲ್ಲಿ " ನೀನು ಶುದ್ಧ ಹುಡುಗ; ಈ ವಿಚಾರಗಳಲ್ಲಿ ತಿಳುವಳಿಕೆಯಿಲ್ಲದವನು. ಇದಕ್ಕೆಲ್ಲಾ ಕೈಹಾಕಿಕೊಂಡು ಬರಬೇಡ " ಎಂದು ನನ್ನನ್ನು ಗದರಿಸಿ ಕಳುಹಿಸಿಬಿಡುತ್ತಾರೆಂದು ನನಗೆ ಗೊತ್ತು. ಅಷ್ಟು ಮಟ್ಟಿಗೆ ಮೃದುವಾಗಿ ನನಗೆ ಉತ್ತರ ಹೇಳುವರೇ ಎಂಬುದು ವಿಶೇಷವಾಗಿ ನಂಬಿಕೆಯಿಲ್ಲದ ಮಾತು. ಸಿಕ್ಕಿದವರೆಲ್ಲಾ ಪ್ರಯತ್ನಮಾಡಿದರೆ ಇದ್ದದ್ದನ್ನು ಕೆಡಿಸಿದೆಯಾ ಪೆದ್ದಭಟ್ಟ ಎಂಬಂ

ತಾಗುವುದು. ನಿನ್ನ ಪರಿಣಾಮವು ಇನ್ನೂ ಕಷ್ಟತರವೇ ಆದೀತು. ಆದ್ದರಿಂದ ಯೋಗ್ಯರೂ ಗೌರವಸ್ಥರೂ ಆದವರು ಯಾರಿದ್ದಾರೆಂಬುದನ್ನು ಪರ್ಯಾಲೋಚಿಸುತ್ತಿದ್ದೇನೆ. ಹೈದರ್‌ಷಹ, ನಿನಗೆ ಯಾರಾದರೂ ಸ್ಫೂರ್ತಿಗೆ ಬರುತ್ತಾರೆಯೆ ?"

"ಜೀಯಾ, ತಮ್ಮ ಬುದ್ಧಿಯ ಮುಂದೆ ನನ್ನದು ಹಾಯುವುದೆಂದರೇನು ? ಆದರೂ ಈ ಸೂಚನೆಯನ್ನು ವೇದ್ಯಮಾಡುತ್ತೇನೆ. ಹಜರತ್ ನವಾಬರಿಗೆ ಫರಂಚಿ ಯಜಮಾನರಲ್ಲಿ ಬಹಳ ಗೌರವವಿರುವಂತೆ ತೋರುತ್ತದೆ. ಸಾಮಾನ್ಯವಾಗಿ ಅವರ ಪ್ರತಿಯೊಂದು ಮಾತಿಗೂ ನವಾಬರು, ಯುಕ್ತ, ಸಹಜ ಎಂದು ಮೊದಲಾಗಿ ಹೇಳುತ್ತಿರುತ್ತಾರೆ. ಅಂತಹ ವಿಶ್ವಾಸಿಗಳ ಮಾತನ್ನು ಪ್ರಾಯಶಃ ನಿರಾಕರಿಸಲಾರರು. ಜಿಯಾ ಬಹಳ ಭೀತಿಗೊಂಡಿದ್ದೇನೆ. ನಾನು ಮಾಡಿದುದು ಶುದ್ಧಾಂಗವಾಗಿ ತಪ್ಪು, ತಮ್ಮಂತಹ ಶರಣ್ಯರೇ ನನ್ನನ್ನು ಕಾಪಾಡಬೇಕು. ತಾವು ಅವರ ಮೂಲಕ ಹೇಳಿಸಲಾಗುವುದೆ ?"

"ಹೌದು, ಹೌದು; ಅವರ ಕಡೆಯಿಂದಲೇ ನಿನಗೆ ಅನುಕೂಲವಾಗುವಂತೆ ಕಾಣುತ್ತದೆ. ನಾನು ಹೋಗಿ ಅವರನ್ನು ನೋಡುತ್ತೇನೆ. ಕರೆಯಿಸಿದ ತತ್‌ಕ್ಷಣವೇ ಬರಲು ಅವಕಾಶವಾಗುವಂತೆ ನೀನು ಇಲ್ಲಿಯೇ ಇರು. ಆದರೆ ತಂದೆಯವರ ಕಣ್ಣಿಗೆ ಮಾತ್ರ ಬೀಳಬೇಡ. ಬಿದ್ದೆಯೋ ನಿನ್ನ ವಿನಾಶವನ್ನು ನೀನೇ ತಂದುಕೊಳ್ಳುತ್ತೀಯೆ !" ಎಂದು ಹೇಳಿ ಟಿಪ್ಪುವು ಫ್ರೆಂಚ ಸೈನ್ಯದ ದಳಪತಿಯನ್ನು ಹುಡುಕಿಕೊಂಡು ಹೋದನು.

(೬)

ಕಮಂಡಾರ (Commander) ನನ್ನು ಕಾಣುವುದು ಕಷ್ಟವಾಗಲಿಲ್ಲ. ಆತನು ಇತರ ಸಂಗಡಿಗರಂತೆ ಅರಮನೆಯಲ್ಲಿ ಇಲ್ಲಿಂದಲ್ಲಿಗೆ ಓಡಾಡುತ್ತ ಕಂಡಕಂಡವರೊಡನೆ ಇತಿಕರ್ತವ್ಯವನ್ನು ಚರ್ಚಿಸುತ್ತಿದ್ದನು. ಟೀಪುವು ಆತನನ್ನು ಹಿಡಿದು ನಿಲ್ಲಿಸಿಕೊಂಡು ಖಾಸ್‌ಭಕ್ಷಿಯ ವಿಚಾರದಲ್ಲಿ ತಾನು ಮಾಡಬೇಕೆಂದಿದ್ದುದನ್ನು ತಿಳಿಸಿ ಆತನ ಸಹಾಯವನ್ನು ಪ್ರಾರ್ಥಿಸಿದನು. ದಳಪತಿಯು ಮೊದಲು ಒಪ್ಪಲಿಲ್ಲ. ನವಾಬನ ಮನಸ್ಸು ಹೇಗಿರುವುದೋ ಅದನ್ನು ದೃಢಪಡಿಸಿಕೊಳ್ಳದೆ ತಾನು ಬಳಿಸಾರೆನೆಂದು ಆತನು ಹಿಂದೆಗೆದನು. ಅಪರಾಧಿಯ ಮೇಲಿನ ಕೋಪವು ಅನಪೇಕ್ಷಿತವಾದ ತನ್ನ ಪ್ರವೇಶದ ದೆಸೆಯಿಂದ ತನ್ನಲ್ಲಿ ಅಸ್ನಿಗ್ಧತೆಯ ರೂಪವನ್ನು ತಾಳಿದ ಪಕ್ಷದಲ್ಲಿ ಕ್ಷೇಮಕರವಲ್ಲವೆಂದು ಆತನು ಬಹಳ ಅಂಜಿದನು. ಹೈದರ್‌ಷಹನು ಅದನ್ನು ಕಂಡು ತೀರ ಎದೆಗೆಟ್ಟನು. ತನಗೆ ಅಧಃಪತನವು ನಿಶ್ಚಿತವಾದುದೆಂದು

ಅವನು ಗೋಳಿಡುತ್ತ "ಮೆಹರ್‌ಬಾರ್, ತಮ್ಮ ಮಾತನ್ನು ಅವರು ತೆಗೆದುಹಾಕು ವುದಿಲ್ಲ. ಉಳಿದ ಸ್ವಜಾತಿಯವರು ಯಾರಾದರೂ ಹೋದರೆ ಆ ರೀತಿ ಪರಿಣಮಿಸ ಬಹುದೆಂಬ ಭಾವನೆಯಿಂದಲೇ ನಾನು ತಮ್ಮಲ್ಲಿ ಶರಣಾಗತನಾಗಿದ್ದೇನೆ. ತಮ್ಮಲ್ಲಿ ಅವರಿಗೆ ಬಹಳ ನಂಬಿಕೆಯಿದೆಯೆಂಬುದು ತಮಗೆ ಗೊತ್ತಿದೆ. ನನಗೋಸ್ಕರ ಇದೊಂದು ತಡವೆ ಆ ನಂಬಿಕೆಯನ್ನು ಉಪಯೋಗಿಸಿ ನನ್ನನ್ನು ಕಾಪಾಡಬೇಕು." ಎಂದು ಇನ್ನೂ ಅನೇಕ ವಿಧವಾಗಿ ಕಾಲಮೇಲೆ ಬಿದ್ದು ಬೇಡಿದನು.

ಅಷ್ಟರಲ್ಲಿ ಕಾಕತಾಲನ್ಯಾಯದ ಸಂಗತಿಯೊಂದು ಒದಗಿತು. ಆ ಸಮ ಯಕ್ಕೆ ಸರಿಯಾಗಿ ನವಾಬನ ಬಿಡಾರದಿಂದ ಹೊರಬಿದ್ದು ಪ್ಯಾದೆಯೊಬ್ಬನು ಎಡ ಬಲಗಳಿಗೆ ನೋಡುತ್ತಾ, ಆತುರ ಆತುರವಾಗಿ ಕಮಂಡಾರನೇ ಮೊದಲಾದವರು ಮಾತನಾಡುತ್ತಿದ್ದ ಬಳಿಗೆ ಬಂದನು. ಬಂದವನು ಸಲಾಮುಮಾಡಿ "ತಮ್ಮನ್ನು ಕರೆದುಕೊಂಡು ಬರಲು ಹುಜೂರಿಂದ ಅಪ್ಪಣೆಯಾಗಿದೆ. ಜೊತೆಯಲ್ಲಿಯೇ ದಯ ಮಾಡಿಸಬೇಕು" ಎಂದು ದಳಪತಿಯಲ್ಲಿ ಅರಿಕೆಮಾಡಿಕೊಂಡನು. ಅವನ ಮಾತ ನ್ನು ಕೇಳಿ ಟಿಪ್ಪುವು ದಳಪತಿಯ ಕಡೆಗೆ ಒಂದಾವೃತ್ತಿ ನೋಡಿ ನಕ್ಕನು. ಇದೋ ಸಮಯವು ಒದಗಿದೆ, ನೀವು ಈಗ ಉಪಕಾರ ಮಾಡಬೇಕು ಎಂದು ಆ ನಗುವು ತಿಳಿಸಿತು. ಎಲ್ಲರೂ ಹೊರಟರು. ಬಿಡಾರದ ಬಾಗಲಿಗೆ ಬಂದ ಮೇಲೆ ದಳಪತಿಯು ಹೈದರ್‌ಷಹನನ್ನು ಕುರಿತು, "ನೀನು ಇಲ್ಲಿಯೇ ಇರು. ಒಳಕ್ಕೆ ಬಂದರೆ ಪ್ರಮಾದ ವಾದೀತು. ನಾನು ಸವಾರಿಯ ಬಳಿಯಲ್ಲಿ ನಿನಗೆ ಅನುಕೂಲವಾಗುವಂತೆಯೇ ಮಾತನಾಡಿ ನೋಡುತ್ತೇನೆ" ಎಂದು ಸೂಚನೆ ಹೇಳಿ, ನವಾಬನ ಮಗನೊಡನೆ ಒಳಹೊಕ್ಕನು.

ಯಥಾವಿಧಿಯಾದ ಮುಜರೆಗಳು ನಡೆದುವು. ಟಿಪ್ಪುವೂ ದಳಪತಿಯೂ ತಮಗಾಗಿ ಏರ್ಪಡಿಸಿದ ಆಸನವನ್ನು ಸ್ವೀಕರಿಸಿ ನವಾಬನು ಮಾತನ್ನು ಪ್ರಾರಂಭಿ ಸಲೆಂದು ನಿರೀಕ್ಷಿಸಿ ಅವನ ಕಡೆ ನೋಡುತ್ತ ಕುಳಿತರು. ಆದರೆ ನವಾಬನು ಸ್ವಲ್ಪ ಹೊತ್ತು ಮಾತನಾಡಲಿಲ್ಲ. ಆ ಮೇಲೆ ಮೌನವನ್ನು ವಹಿಸಿ ಇರಲೂ ಅಸಮರ್ಥ ನಾಗಿ ಮಾತನ್ನು ಪ್ರಾರಂಭಿಸಿದನು.

"ಆ ಸೈತಾನನೆಲ್ಲಿ?"

ಬಾಗಲಿಂದಾಚೆಗೆ ಹೊರಭಾಗದಲ್ಲಿ ಕಾದಿದ್ದಾನೆಂದು ಆದಷ್ಟು ಮಟ್ಟಿಗೆ ಸಮಾಧಾನಪಡಿಸುವ ಧ್ವನಿಯಿಂದ ಮಗನು ಉತ್ತರಹೇಳಿದನು.

"ಖಾವಂದರು ಅಪರಾಧಿಯನ್ನು ಕ್ಷಮಿಸಬೇಕು" ಎಂದು ಫ್ರೆಂಚ ದಳ ಪತಿಯು ಮಾತಿಕ್ಕಿದನು.

"ಕುಮುಂದಾನರೆ! ಆತನ ಮಾತೆತ್ತುವುದು ಯಾರಿಗೂ ಯೋಗ್ಯವಲ್ಲ. ಕ್ರಿಯಾಭ್ರಷ್ಟನು ಪಶುಗಳಿಗಿಂತ ಕಡೆಯಾದವನು. ಅವಾದರೋ ಇದನ್ನು ಮಾಡಬೇಕು ಇದನ್ನು ಮಾಡಬಾರದೆಂಬ ವಿವೇಚನೆಯ ಶಕ್ತಿಯಿಲ್ಲದೆ ಮಾಡುತ್ತವೆ. ಆದರೆ ಆ ಶಕ್ತಿಯನ್ನು ಯಥೇಚ್ಛವಾಗಿ ಉಳ್ಳ ಮನುಷ್ಯನು ಉದ್ದೇಶಪೂರ್ವಕವಾಗಿ ಹೀನವಾದ ಕೆಲಸಮಾಡಿದರೆ ಪ್ರಾಣಿಗಳಿಗಿಂತಲೂ ಕೀಳಲ್ಲದೆ ಮತ್ತೇನು? ಅವನದು ಎಂತಹ ಹೀನಪ್ರವೃತ್ತಿಯೆಂಬುದು ಪ್ರಾಯಶಃ ನಿಮಗೆ ತೋರಿರಲಾರದು. ಅಪರಾಧದಲ್ಲಿ ಅನೇಕ ವಿಧವುಂಟು. ಅದರೊಳಗೆ ಪ್ರಭುವಿಗೂ ಪ್ರಜೆಗೂ ಸಂಸರ್ಗವನ್ನು ತಪ್ಪಿಸಿ ಕುಂದಕಮಾಡುವುದು ಒಂದು. ಆದರೆ ಇದು ಅಪರಾಧವೆಂದು ನೀವು ಒಂದುವೇಳೆ ಭಾವಿಸದಿದ್ದರೂ, ಇದಕ್ಕಿಂತ ಹೆಚ್ಚಾಗಿ ಇನ್ನು ಯಾವುದರಲ್ಲಿಯೂ ದೋಷವಿರಲಾರದೆಂಬುದು ನನ್ನ ಭಾವನೆ. ಪ್ರಾಯಶಃ ಈ ಪ್ರವರ್ತನೆಯು ಅಪರಾಧವಲ್ಲವೆಂದು ತಿಳಿದುಕೊಂಡು ನೀವು ಆತನ ಪರವಾಗಿ ಕ್ಷಮಾಪಣೆಯನ್ನು ಬೇಡುತ್ತೀರಿ. ಅದು ಆಗಲಾರದು."

"ಮಹಾರಾಜ, ನನ್ನಮೇಲೆ ಅನುಗ್ರಹಮಾಡಿ ನಾನು ಹೇಳಬೇಕೆಂದಿರುವುದನ್ನು ಕೇಳಬೇಕೆಂದು ಮೊದಲು ಪ್ರಾರ್ಥಿಸಿಕೊಳ್ಳುತ್ತೇನೆ—ಹೈದರ್‌ಷಹನು ಅಪರಾಧಿಯಲ್ಲವೆಂದು ನಾನು ಎಂದಿಗೂ ಹೇಳುವುದಿಲ್ಲ. ಅವನು ತಪ್ಪುಮಾಡಿರುವುದು ವಾಸ್ತವವಲ್ಲದ ಪಕ್ಷದಲ್ಲಿ ನಾನು ತಮ್ಮೆದುರಿಗೆ ನಿಂತು ವಿಜ್ಞಾಪಿಸಿಕೊಳ್ಳುತ್ತಿರುವುದೂ ವಾಸ್ತವವಲ್ಲವಾದೀತು. ಎಂದಿಗೆ ಹಾಗೆ ಹೇಳಿಯೇನು! ಖಾಸ್ ಭಕ್ಷಿಯು ಎಲ್ಲವನ್ನೂ ನಮ್ಮೊಡನೆ ಹೇಳಿ ತಾನು ಮಾಡಿದುದನ್ನು ತಪ್ಪೆಂದು ಒಪ್ಪಿಕೊಂಡಿದ್ದಾನೆ. ಆದರೆ ಈ ಸಂಘಟನೆಗೆ ಅವನು ಮುಖ್ಯಕಾರಣನಲ್ಲ. ಆಗಾ ಮಹಮದ್‌ಖಾನನು ಅವನಿಗೆ ಯಜಮಾನನಾಗಿದ್ದನೆಂಬ ವಿಷಯವು ತಮಗೆ ಹೊಸದಲ್ಲ. ಆತನು ಜಹಗೀರಿಗೆ ಹೋಗುವುದಕ್ಕೆ ಒಂದುದಿವಸ ಮುಂಚೆ ಆ ವೃದ್ಧೆಯ ವಿಷಯವಾಗಿ ಹೈದರ್‌ಷಹನಿಂದ ಮಾತುತೆಗೆದುಕೊಂಡನಂತೆ. ಆತನು ಹೇಳಿದುದನ್ನು ಇವನು ಅಲ್ಪವಿಷಯವೆಂದು ಭಾವಿಸಿ ಒಪ್ಪಿದುದಾಗಿ ತಿಳಿಯಬಂದಿತು. ಬೇಕಾದಲ್ಲಿ ತಾವು ಇದೆಲ್ಲವನ್ನೂ ಆತನ ಮುಖದಿಂದಲೇ ಕೇಳಬಹುದು. ಆದ್ದರಿಂದ ದೋಷದ ಮೂಲವು ಹೈದರ್‌ಷಹನಲ್ಲಿಲ್ಲ. ತಾವು ಹೇಳುವುದೂ ಯುಕ್ತವೇ. ಪ್ರಜೆಯು ಪ್ರಭುವಿನ ಆಶ್ರಯವನ್ನು ಪಡೆದು ತನಗೆ ಉಂಟಾಗಿರುವ ಅನ್ಯಾಯವನ್ನು ನ್ಯಾಯವಾಗಿ ಸರಿಪಡಿಸಿಕೊಳ್ಳದಂತೆ ಮಾಡಿದುದು ದಂಡನೆಗೆ ಅರ್ಹವಾದುದಲ್ಲದೆ ಸಂಭಾವನೆಗೆ ಅರ್ಹವಾದುದಲ್ಲ. ಆದರೂ ಕೂಡ ಅಪರಾಧವು ಹುಟ್ಟಿದುದು ಮತ್ತೊಂದು ಕಡೆಯಾದಕಾರಣ ಖಾವಂದರು ಈತನಲ್ಲಿ ಕೃಪೆಯಿಡಬೇಕು."

ಹೈದರನು ಸ್ವಲ್ಪ—ಸ್ವಲ್ಪವೇ ಸ್ವಲ್ಪ—ಅಸಮಾಧಾನವನ್ನೂ ವಿಸ್ಮಯವನ್ನೂ ಮುಖದಲ್ಲಿ ತೋರ್ಪಡಿಸಿ ಉತ್ತರ ಹೇಳಿದನು. “ಕುಮಂದಾನರೆ, ಆ ಬದಮಾಯಿಷನನ್ನು ಮನ್ನಿಸಬೇಕೆಂದು ನೀವೇನೋ ಹೇಳುವಿರಿ. ಆದರೆ ಈ ಸ್ಥಾನದಲ್ಲಿ ನೀವೇ ಇದ್ದ ಪಕ್ಷದಲ್ಲಿ ಏನು ಮಾಡುತ್ತಿದ್ದಿರೆಂಬುದನ್ನು ನೀವು ಯೋಚಿಸಿದಂತೆ ಕಾಣುವುದಿಲ್ಲ. ಪ್ರಭುವಾದವನು ಪ್ರಜೆಯನ್ನು ಪರಿಪಾಲಿಸದಿದ್ದ ಮೇಲೆ ಆ ಕೆಲಸವನ್ನು ನಿರ್ವಹಿಸಲು ಮತ್ತಾರಿದ್ದಾರೆ? ಅಲ್ಲಾ ಅಕ್ಬರನು ರಾಜರನ್ನೂ ಇತರ ಪ್ರಭುಗಳನ್ನೂ ಈ ಲೋಕದಲ್ಲಿಟ್ಟಿರುವುದು ಆ ಉದ್ದೇಶದಿಂದಲೇ ಎಂದು ನನಗೆ ತೋರುತ್ತದೆ. ಹೀಗಿರುವಲ್ಲಿ ಪ್ರಭುವಾದವನು ಉಪೇಕ್ಷೆ ಮಾಡಿದರೆ ಹೇಗಾದೀತು? ಯೋಗ್ಯರನ್ನು ಸಂಭಾವಿಸದೆಯೂ ದುಷ್ಟರನ್ನು ದಂಡಿಸದೆಯೂ ಇದ್ದಲ್ಲಿ ಆತನು ರಾಜನಾಗಿ ಫಲವೇನು? ವಸ್ತುತಃ ಅಪರಾಧಿಯು ಹೈದರ್‌ಷಹನಲ್ಲ;—ಆಗಾಮುಹಮ್ಮದ್‌ನೇ ಇಷ್ಟೆಲ್ಲಾ ಅನರ್ಥಕ್ಕೆ ಕಾರಣವಾದವನು. ಆದ್ದರಿಂದ ದಂಡನೆಯು ಅವನಿಗಾಗಬೇಕೇ ಹೊರತು ಯಾವುದಕ್ಕೂ ಕಾರಣಭೂತನಲ್ಲದ ಈತನಿಗಲ್ಲವೆಂದು ನಿಮ್ಮ ಮನಸ್ಸಿನೊಳಗೆ ತರ್ಕವುಂಟಾಯಿತು. ಆದರೆ ಅಪರಾಧಿಯು ಅವನಾದರೂ ಹೈದರ್‌ಷಹನು ನಿರಪರಾಧಿಯೆಂಬುದು ಅದರಿಂದ ದೃಢಪಡುವುದಿಲ್ಲ. ಇಬ್ಬರೂ ತಪ್ಪಿತಸ್ಥರು. ಇವರಿಬ್ಬರಿಗೂ ಅಪರಾಧಬಾಹುಳ್ಯದಲ್ಲಿ ತಾರತಮ್ಯವಿದೆಯೇ ವಿನಾ ಒಬ್ಬನು ಅಪರಾಧಿಯೆಂತಲೂ ಮತ್ತೊಬ್ಬನು ನಿರಪರಾಧಿಯೆಂತಲೂ ಹೇಳುವ ಹಾಗಿಲ್ಲ.” ಹೈದರನು ನಿಲ್ಲಿಸಿ ಸ್ವಲ್ಪ ನಕ್ಕು ಮುಂದೆ ಹೇಳಿದನು. “ಕುಮಂದಾನರೆ, ನೀವು ಯಾವ ಯಾವ ಮಾರ್ಗದಲ್ಲಿ ಆತನ ಪರವಾಗಿ ಶಿಫಾರಸು ಮಾಡಿ ವಾದಿಸಲು ಹೋದರೂ ಆ ಬದಮಾಯಿಷನು ಅಪರಾಧಿಯೆಂಬುದೇ ವ್ಯಕ್ತವಾಗುತ್ತದೆ. ನಾನು ಈಗ ನಿಮ್ಮೊಡನೆ ಹೇಳಿದ ಅಂಶಗಳನ್ನೆಲ್ಲಾ ಸಂಜೆ ಹಿಂದಿರುಗಿ ಬರುವಾಗಲೇ ಆಲೋಚಿಸಿ ನೋಡಿದೆನು. ಹೈದರ್‌ಷಹನು ನನಗೂ ಬೇಕಾಗಿದ್ದವನು. ಭಕ್ತಿಯಿಂದ ಕೆಲಸಮಾಡಿ ಯೋಗ್ಯನೆನ್ನಿಸಿಕೊಂಡವನು. ಆದಕಾರಣವೇ ಆಗಾಖಾನನು ಹೊರಟುಹೋದ ಮೇಲೆ ಅವನನ್ನು ಖಾಸ್‌ಭಕ್ಷಿಯ ಕೆಲಸಕ್ಕೆ ನೇಮಿಸಿಕೊಂಡೆನು. ಆದರೂ ಅವನು ಈಬಾರಿ ಎಡವಿದ್ದಾನೆ. ಎಡವಿದುದರ ಫಲವನ್ನು ಅನುಭವಿಸಿಯೇ ತೀರಬೇಕು.”

ಹೊರಗೆ ಬಾಗಿಲ ಬಳಿಯಲ್ಲಿ ನಿಂತು ತನ್ನ ಹಣೆಯುಬರಹವನ್ನು ನವಾಬನ ಮಾತಿನ ರೂಪದಲ್ಲಿ ತಿಳಿಯುತ್ತಿದ್ದ ಹೈದರ್‌ಷಹನಿಗೆ ನವಾಬನು ತನ್ನನ್ನು ಶಿಕ್ಷಿಸಲು ಬದ್ಧಸಂಕಲ್ಪನಾಗಿದ್ದುದನ್ನು ಕೇಳಿ ಮೈನಡುಗಿ ನೀರಾಯಿತು. ಆಗಾಮುಹಮದನ ಮಾತನ್ನು ಕೇಳಬಾರದಾಗಿದ್ದಿತೆನ್ನಿಸಿತು. ತನ್ನ ತಲೆಯನ್ನು ತೆಗೆಯಿಸುವುದಾದರೆ

ಮನೆಯೊಳಗೆ ಹೆಂಡತಿ ಮಕ್ಕಳು ಅನಾಥರಾದರೆಂದು ಅವನು ಶೋಕಗೊಂಡು ಕಣ್ಣೀರುಹಾಕಿದನು. ಸ್ವಲ್ಪ ಜಾರಲಾಗಿ ಬೆಟ್ಟವನ್ನೇ ತೆಗೆದು ತಲೆಯಮೇಲೆ ಕವಿಚಿದ ವಿಧಿಯು ಬಹು ಕ್ರೂರವಾದುದೆಂದುಕೊಂಡನು.

ಒಳಗೆ ಕೊಠಡಿಯಲ್ಲಿ ಪ್ರಸಂಗವು ಇನ್ನೂ ಮುಗಿದಿರಲಿಲ್ಲ. ದಳಪತಿಯು ತಾನು ಹೇಳಬೇಕಾಗಿ, ನವಾಬನು ಇದುವರೆಗೆ ಪೂರ್ವಭಾವಿಯಾಗಿ ಊಹಿಸದಿರುವಂತಹ ಮಾತೇನಾದರೂ ಉಳಿದಿದೆಯೇ ಎಂದು ಯೋಚಿಸಿದನು. ಯೋಚನೆಯಲ್ಲಿ ಸ್ವಲ್ಪಹೊತ್ತು ಕಳೆದಬಳಿಕ ಪ್ರತ್ಯುತ್ತರ ಹೇಳಲು "ಹುಜೂರ್!" ಎಂದು ಮಾತೆತ್ತಿದನು. ಅದನ್ನು ಕೇಳಿ ನವಾಬನ ಮಗನಿಗೆ ಚಿಂತೆ ಹತ್ತಿತು. ಫ್ರೆಂಚ್ ಸೇನಾಪತಿಯು ಸಮಂಜಸವಾದ ಉತ್ತರವನ್ನು ಕೊಡಲರಿಯದೆ ಏನನ್ನಾದರೂ ಹೇಳುವುದಕ್ಕೆ ಹೋಗಿ ನವಾಬರ ಕೋಪವನ್ನು ಹೆಚ್ಚಿಸುವುದಲ್ಲದೆ, ಮನ್ನಣೆಗಾಗಲಿ ಅಥವಾ ಕಡಿಮೆಯಾದ ಶಿಕ್ಷೆಗಾಗಲಿ ಪ್ರಾಯಶಃ ಇರಬಹುದಾದ ಅಲ್ಪಸ್ವಲ್ಪ ಅವಕಾಶವನ್ನೂ ಕೂಡ ಹಾಳುಮಾಡುತ್ತಿದ್ದಾನೆಂದು ಅವನು ಭೀತನಾದನು. ಆದರೂ ಒದಗುವ ಸಂಭಾಷಣೆಯನ್ನು ಯಾವರೀತಿಯಲ್ಲಿಯೂ ತಿರುಗಿಸಲರಿಯದವನಾಗಿ ಸುಮ್ಮನೆ ಮಿಟಮಿಟಗುಟ್ಟುತ್ತ ಕುಳಿತನು. ದಳಪತಿಯು ಹೀಗೆಂದನು: "ಹುಜೂರ್! ತಮ್ಮೊಡನೆ ವಾದಮಾಡಿ ಜಯಿಸಲು ನನ್ನಿಂದಾಗದು. ಹೈದರ್ ಷಹನು ಅಪರಾಧಿಯಾಗಿರುವುದು ನಿಜವಾಗಿರುವಾಗ ನಾವು ಆತನನ್ನು ಮನ್ನಿಸಬೇಕೆಂದು ಕೇಳುವುದು ವ್ಯರ್ಥವಾದುದು; ಯುಕ್ತವಾದುದೂ ಅಲ್ಲ. ಆದರೆ ಘೋರತರವಾಗಿ ತಪ್ಪುಮಾಡಿರುವವನು ಮತ್ತೊಬ್ಬನಿರುವನಾದಕಾರಣ ಈತನು ಹೆಚ್ಚಿನ ದಂಡನೆಗೆ ಅರ್ಹನಲ್ಲವೆಂಬುದೊಂದೇ ನನ್ನ ಅರಿಕೆ."

ನವಾಬನು ಆ ಮಾತುಗಳನ್ನು ಕೇಳಿ ನಕ್ಕು ಮಗನಕಡೆಗೆ ತಿರುಗಿ, "ಏನಪ್ಪ, ಅಪರಾಧಿಯ ಪರವಾಗಿ ನೀನೇದಾರೂ ಹೇಳಬೇಕಾದ್ದಿದೆಯೇನಯ್ಯ?" ಎಂದು ಪ್ರಶ್ನೆಮಾಡಿದನು.

ಮಗನೂ ನಗುತ್ತ, "ಕ್ಯಾ ದಾದಾ, ನನ್ನನ್ನು ಹಾಸ್ಯಮಾಡುತ್ತೀರಾ?" ಎಂದು ಪ್ರತಿಯಾಗಿ ಪ್ರಶ್ನೆಮಾಡಿದನು. "ಇದೆ, ಇದೆ–ನಾನೂ ಒಂದು ಮಾತನ್ನು ಹೇಳಬೇಕಾಗಿದೆ. ಹೈದರ್‌ಷಹನು ವಿಶೇಷ ಅಪರಾಧಿ; ಅವನ ತಲೆಯನ್ನು ಕಡಿಸಿಬಿಡಿ!"

ಫ್ರೆಂಚ ದಳಪತಿಯು ವಿಸ್ಮಯದಿಂದಲೂ ಗಾಬರಿಯಿಂದಲೂ ಟಿಪ್ಪುವಿನ ಕಡೆಗೆ ತಿರುಗಿದನು. ಅವನಿಗೆ ಆ ಹುಡುಗನ ಮನಸ್ಸು ಅರಿವಾಗಲಿಲ್ಲ. ನವಾಬನು

ಆ ಮಾತಿಗೆ ಉತ್ತರವೇನು ಹೇಳುವನೆಂಬುದನ್ನು ನಿರೀಕ್ಷಿಸುತ್ತ ನವಾಬನ ಮುಖವನ್ನು ನೋಡಿದನು.

ಹೈದರನು ಮಗನ ಮಾತಿನ ಅರ್ಥವನ್ನೂ ಮನಸ್ಸನ್ನೂ ತಿಳಿದವನಾಗಿ ಸ್ವಲ್ಪ ಗಟ್ಟಿಯಾಗಿ ನಗುತ್ತ ಬಹಳ ವಿನೋದಗೊಂಡವನಾಗಿ, "ಏಕೆ ಹಾಗೆ ಹೇಳುತ್ತೀ? ಅಂತಹ ಅಭಿಪ್ರಾಯಕ್ಕೆ ಕಾರಣವೇನು?" ಎಂದು ಕೇಳಿದನು.

"ಅಲ್ಲದೆ ಮತ್ತೇನು? ಒಬ್ಬ ಮುದುಕಿಯು ಬಂದು ನಿಮ್ಮನ್ನು ನೋಡಲು ಬಿಡದಿದ್ದುದಕ್ಕಾಗಿ ಭಕ್ಷಿಯು ದಂಡನೆಯನ್ನು ಅನುಭವಿಸಬೇಕಲ್ಲವೆ! ತಲೆಗಡಿಸಿಬಿಟ್ಟರೆ ಕೆಲಸವು ನಿಶ್ಶೇಷವಾಗಿ ಪೂರೈಸುವುದಲ್ಲ!"

"ಮಗು, ನೀನಿನ್ನೂ ಹುಡುಗ, ಅವನು ತಪ್ಪುಮಾಡಿದವನು. ತಪ್ಪಿತದ ಫಲವನ್ನು ಅನುಭವಿಸಲೇಬೇಕು. ನಾಳೆ ನೀನು ತಪ್ಪುಮಾಡಿದರೂ ನಿನಗೂ ದಂಡನೆಯು ತಪ್ಪುವುದಿಲ್ಲ."

ಮುಂದೆ ಯಾರೊಬ್ಬರೂ ಮಾತನಾಡಲಿಲ್ಲ. ಹೈದರನು ಹೊರಗೆ ಕಾದಿದ್ದ ಪ್ಯಾದೆಯನ್ನು ಕರೆದು, ಜಮಾದಾರ್ ಸೈಯದ್ ಕಮಾಲುದ್ದೀನನನ್ನು ಕರೆದು ತರಲು ಅಪ್ಪಣೆಮಾಡಿದನು.

ಐದು ನಿಮಿಷವೆನ್ನುವುದರೊಳಗೆ ಜಮಾದಾರನು ಬಂದನು. ಮುಜರೆಯಾದ ಮೇಲೆ ಹೈದರನು ಅವನನ್ನು ಕುರಿತು, "ನೀನು ಈಗಲೇ ಹೊರಟು ರಾಮಗಿರಿಗೆ ಹೋಗಿ ಆಗಾಮಹಮದ್‌ಖಾನನನ್ನು ಪತ್ತೆಮಾಡಬೇಕು. ಮೆಹರಳನ್ನು ಅಪಹರಿಸಿಕೊಂಡುಹೋದ ಅಪರಾಧಕ್ಕಾಗಿ ಸಮಜಾಯಿಷಿ ಹೇಳಲು ಸನ್ನಿಧಿಗೆ ಬರಬೇಕೆಂದು ನಮ್ಮ ಅಪ್ಪಣೆಯನ್ನು ತಿಳಿಸು. ಅವನು ಹಿಂದುಮುಂದು ನೋಡಿದರೆ ತಲೆಯನ್ನು ಕತ್ತರಿಸಿಹಾಕಿ ಅವನ ವಶದಲ್ಲಿರುವ ಸ್ತ್ರೀಯನ್ನು ಇಲ್ಲಿಗೆ ಕರೆದುಕೊಂಡು ಬಾ. ಅವನು ಬರಲಿ, ಬರದೇ ಇರಲಿ, ಸ್ತ್ರೀಯನ್ನು ಮಾತ್ರ ಕರೆದುಕೊಂಡುಬರಬೇಕು. ಆಕೆಯು ನಿನಗೆ ತಾಯಿಯೆಂಬ ಭಾವನೆಯಿರಲಿ" ಎಂದು ಆಜ್ಞೆಮಾಡಿದನು. ಜಮಾದಾರನು ಆಜ್ಞೆಯನ್ನು ಶಿರಸಾವಹಿಸಿ ಮುಜರೆಮಾಡುತ್ತ ಹೊರಬಿದ್ದನು. ನವಾಬನು ಮತ್ತೊಬ್ಬ ಜಮಾದಾರನನ್ನು ಕರೆಯಿಸಿ, "ನಾಳೆಯಬೆಳಗ್ಗೆ ಸೂರ್ಯೋದಯಕಾಲಕ್ಕೆ ಸರಿಯಾಗಿ ಸೈನ್ಯವೆಲ್ಲದರ ಮುಂಭಾಗದಲ್ಲಿ ಹೊರಗಡೆ ಈಗ ನಿಂತಿರುವ ಭಕ್ಷಿಯನ್ನು ನಿಲ್ಲಿಸಿ, ನೂರು ಛಡಿಯೇಟುಗಳನ್ನು ಹೊಡೆಯಿಸಬೇಕು. ಅವನನ್ನು ಈಕ್ಷಣದ ಲಾಗಾಯಿತು ಖಾಸ್‌ಭಕ್ಷಿಯ ಕೆಲಸದಿಂದ ವಜಾ ಮಾಡಿದೆ" ಎಂದನು. ಬಳಿಕ ಆತನನ್ನು ಕುರಿತು, "ನಾಳೆಯ ಬೆಳಗಿನಿಂದ ನಿನ್ನನ್ನು

ಖಾಸ್‌ಭಕ್ಷಿಯಾಗಿ ನೇಮಕಮಾಡಿ ಬಡ್ತಿ ಮಾಡಿದ್ದೇವೆ. ಮುಂದೆ ಮತ್ತೊಂದು ಹುಕುಂ ಆಗುವವರೆಗೂ ನೀನು ಆ ಕೆಲಸವನ್ನು ನೋಡಬೇಕು'' ಎಂದು ಹೇಳಿದನು. ಜಮಾದಾರನು ತನ್ನ ಭಾಗದ ದೇವರು ದೊಡ್ಡವನೆಂದು ಹೇಳುತ್ತ ಸಲಾಂ ಮಾಡಿ ಹೊರಕ್ಕೆ ಹೋದನು.

ನವಾಬನು ಮಗನ ಮತ್ತು ದಳಪತಿಯಕಡೆಗೆ ಒಂದಾವೃತ್ತಿ ನೋಡಿದನು. ಪ್ರಸಂಗವು ಅಲ್ಲಿಗೆ ಮುಗಿಯಿತೆಂದೂ ತಾವು ಇನ್ನು ಹೊರಡಬೇಕೆಂಬುದು ನವಾಬರ ಅಪೇಕ್ಷೆಯೆಂದೂ ಅವರು ಆ ದೃಷ್ಟಿಯಿಂದ ಅರಿತು ಯಥಾಕ್ರಮವಾಗಿ ನವಾಬನನ್ನು ಬೀಳ್ಕೊಂಡು ಹೊರಟರು. ಬಾಗಿಲಿಂದಾಚೆಗೆ ಹೈದರ್‌ಷಹನು ಕಾಣಿಸಿಕೊಂಡನು. ''ಖಾವಂದ್, ತಮ್ಮ ವಾಕ್ಸಹಾಯದಿಂದ ನನ್ನ ಪ್ರಾಣವುಳಿಯಿತು'' ಎಂದು ಹೇಳಿಕೊಂಡನು. ಎಲ್ಲರೂ ತಮ್ಮ ದಾರಿಯನ್ನು ಹಿಡಿದು ಹೊರಟು ಹೋದರು.

ಪ್ರಾಣವುಳಿಯಿತೆಂಬುದೊಂದೇ ಸಮಾಧಾನ; ಮಾರನೆಯದಿನ ಬೆಳಗ್ಗೆ ಊರಹೊರಗಿನ ಪಾಳೆಯದಲ್ಲಿ ಜನಸಮೂಹವು ಸೇರಿ ನೋಡುತ್ತಿರಲು ಬೆನ್ನಮೇಲೂ ಭುಜದಮೇಲೂ ಲೆಕ್ಕಮಾಡಿಮಾಡಿ ನೂರು ಛಡಿಯ ಏಟುಗಳು ಬಿದ್ದುವು...

...ಚರ್ಮವು ಸುಲಿದುಹೋಗಿ ರಕ್ತವು ಕೋಡಿಹರಿಯುತ್ತಿದ್ದಿತು. ಊದಿ ಮೈಯು ಒಂದಕ್ಕೆರಡರಷ್ಟಾಗಿದ್ದಿತು. ನವಾಬನ ಮಗನು ಆವೇಳೆಗೆ ಮುಂದೆ ಬಂದು ನಾಲ್ಕುಮಂದಿ ಆಳುಗಳನ್ನು ಕರೆಯಿಸಿ ಅವನನ್ನು ಹಕೀಮನ ಮನೆಗೆ ಹೊರಿಸಿಕೊಂಡುಹೋಗಿ ಚಿಕಿತ್ಸೆಮಾಡಿಸಿದನು.

(೭)

ರಂಗನಾಥದೇಶಿಕನೂ ಸಂಗಡಿಗನೂ ಮನೆಯಲ್ಲಿ ಮಾತನಾಡುತ್ತ ಕುಳಿತಿದ್ದರು.

ರಂಗನಾಥ—ಎಲ್ಲಿ ನೀನು ಈ ಹೊತ್ತು ಕಾಣಿಸಲಿಲ್ಲ? ದರ್ಬಾರಿಗೆ ಹೋಗುವಾಗ ನಿಮ್ಮ ಮನೆಗೆ ಹೋಗಿ ಕೂಗಿದೆ. ನೀನು ಇರಲೇ ಇಲ್ಲ.

ಸಂಗಡಿಗ—ಇಲ್ಲಪ್ಪಾ, ಮಗಳಿಗೆ ವರನನ್ನು ಹುಡುಕಲು ಹೋಗಿದ್ದೆ. ಮೊನ್ನೆಹೋದವನು ಸಂಜೆಯಲ್ಲಿ ಬಂದೆ. ಬರುವಾಗಲೇನು ದರ್ಬಾರಿಗೆ ಹೋಗಿದ್ದ ಜನಗಳು ಪ್ರವಾಹದಹಾಗೆ ಕೊನೆಮೊದಲಿಲ್ಲದೆ ಬರುತ್ತಿದ್ದರು. ಈದಿನ ದರ್ಬಾರಿನಲ್ಲಿ ವಿಶೇಷವೇನು?

ರಂಗನಾಥ—ವಿಶೇಷವೇನೆಂದು ಕೇಳು! ಈಹೊತ್ತಿನಹಾಗೆ ದರ್ಬಾರಿನಲ್ಲಿ ವಿಶೇಷವನ್ನು ನಾಲ್ಕೈದುವರ್ಷಗಳಿಂದ ಕಂಡಿರಲಿಲ್ಲ.

ಸಂಗಡಿಗ—ಅದೆಂಥಾದ್ದು ಹಾಗಾದರೆ ?

ರಂಗನಾಥ—ಈಹೊತ್ತು ಬೆಳಗ್ಗೆ ಊರ ಹೆಬ್ಬಾಗಿಲಲ್ಲಿ ಆಗಾ ಮಹಮ್ಮದನ ತಲೆಯು ತಗಲುಹಾಕಿತ್ತು. ದರ್ಬಾರಿನ ಕಾಲದಲ್ಲಿ ನವಾಬರು ಈ ಕಥೆಯನ್ನೆಲ್ಲಾ ವಿವರಿಸುವರೆಂದು ತಿಳಿದುಕೊಂಡು ಅಲ್ಲಿಗೆ ಹೋದೆವು.

ಸಂಗಡಿಗ—ನವಾಬರೇನು ಹೇಳಿದರು ?

ರಂಗನಾಥ—ಎಂದಿನಹೊತ್ತಿಗಿಂತಲೂ ಮುಂಚೆಯೇ ಜನರು ಸಭೆಸೇರಿ ನಿರೀಕ್ಷಿಸುತ್ತಿದ್ದರು. ಒಂದು ಇರುವೆ ಹರಿದಾಡುವುದಕ್ಕೂ ಸ್ಥಳವಿರಲಿಲ್ಲ. ಎಲ್ಲರೂ ಪಿಸುಮಾತಿನಲ್ಲಿ ಮಾತನಾಡಿಕೊಳ್ಳುತ್ತ ಕುಳಿತೆವು. ಎಲ್ಲರ ಬಾಯಲ್ಲಿಯೂ ಬೆಳಗಿನ ವಿಚಾರವೇ.

ಇದ್ದಕ್ಕಿದ್ದಹಾಗೆ ಒಂದು ಪಾರ್ಶ್ವದಲ್ಲಿ ಗುಂಪುಕೂಡಿದ್ದ ಸಭಿಕರ ಕಡೆಯಿಂದ ಶಬ್ದವು ಸ್ವಲ್ಪ ಜೋರಾಗಿ ಕೇಳಿಬಂದಿತು. ಉಳಿದವರೆಲ್ಲರೂ ಆ ಕಡೆಗೆ ತಿರುಗಿದರು. ಆಗಾ ಮಹಮದ್‌ನ ಚರಿತವನ್ನು ಚರ್ಚಿಸುತ್ತಲಿದ್ದ ಇಬ್ಬರಿಗೆ ಪರಸ್ಪರವಾಗಿ ಮಾತು ಹೊಂದದಿರಲಾಗಿ ವಾದವೆದ್ದಿತು. ಅವರು ತಮ್ಮ ಮಾತಿನ ಧ್ವನಿಯನ್ನು ಜೋರುಮಾಡಿದರು. ತಾವಿದ್ದ ಪ್ರದೇಶವೂ ನವಾಬರ ಸಾನ್ನಿಧ್ಯವೂ ಸ್ಫೂರ್ತಿಗೆ ಬರಲಿಲ್ಲ. ಜನರೆಲ್ಲರೂ ಅವರ ದಿಕ್ಕಿನಲ್ಲಿ ತಿರುಗಿದುದನ್ನು ಕಂಡು ನವಾಬರು ಅದೇ ದಿಕ್ಕಿನಲ್ಲಿ ತಾವೂ ನೋಡಿ ನಡೆಯುತ್ತಿದ್ದ ಪ್ರಸಂಗವನ್ನು ಊಹಿಸಿದರು. ಬಳಿಕ ಭಕ್ಷಿಯಕಡೆಗೆ ನೋಡಲು ಆತನು ಕೂಡಲೇ "ಹುಜೂರ್‌ಮೆ ಹುಕುಂ!" ಎಂದು ಕೂಗಿದನು. ಸದ್ದು ಅಡಗಿಹೋಯಿತು. ಎಲ್ಲರೂ ಆಲೈಸಿದರು. ನವಾಬರು ನಗುತ್ತ ಹೀಗೆಂದರು:—"ನೀವು ಅಷ್ಟೊಂದು ಆಗ್ರಹದಿಂದ ಚರ್ಚಿಸುತ್ತಿರುವ ವಿಷಯವು ನನಗೆ ಹೊಸದಲ್ಲ. ಮುಂಡವಿರಹಿತವಾದ ತಲೆಯನ್ನು ನೋಡಿ ನೀವು ಹೀಗೆ ಕುತೂಹಲವುಳ್ಳವರಾಗಿರುವಿರಿ. ಅದಕ್ಕೆ ಕಾರಣವೂ ಅನೇಕರಿಗೆ ಗೊತ್ತಿರಬಹುದು."—ನವಾಬರು ಹುಬ್ಬು ಗಂಟಿಕ್ಕಿದರು; ಅವರ ಮುಖದ ಆಕೃತಿಯೇ ಬೇರೆಯಾಯಿತು—"ತಪ್ಪುಮಾಡಿದವರಿಗೆ ಎಂದಿಗೂ ಉಳಿಗಾಲವಿಲ್ಲ. ಹೊಟ್ಟೆಯಲ್ಲಿ ಹುಟ್ಟಿದ ಮಗನಾದರೂ ಅಪರಾಧಿಯಾದವನು ಸುರಕ್ಷಿತನಲ್ಲ. ತಪ್ಪಿನೊಳಗೂ ಪರಿಮಾಣಗಳುಂಟು. ಆದರೆ ಅಬಲೆಯಾದ ಹೆಂಗಸಿನಮೇಲೆ ಕೈಮಾಡಿ ಅತ್ಯಾಚಾರವನ್ನು ನಡೆಯಿಸುವುದು ಮಹಾ ಘೋರವಾದ ಅಪರಾಧ. ಏನನ್ನೂ ಅರಿಯದ ಹಸುಳೆಗಳನ್ನು ಹಿಂಸೆಮಾಡುವುದಕ್ಕೆ ಸಮಾನವಾದುದು. ಅಂಥ ತಪ್ಪಿತಕ್ಕೆ ಮರಣವೇ ಪ್ರಾಯಶ್ಚಿತ್ತವೆಂದು ಖುರಾನಿನಲ್ಲಿ ಹೇಳಿದೆ. ಭಗವದ್ವಾಕ್ಯಸ್ವರೂಪ

ವಾದ ಖುರಾನಿನ ಶಾಸನವನ್ನು ಈ ಸಂದರ್ಭದಲ್ಲಿ ಪ್ರಯೋಗಿಸಿದ್ದೇವೆಯೇ ಏನಾ ಅನ್ಯಥಾ ಅಲ್ಲ. ಹೆಂಗಸರ ವಿಷಯದಲ್ಲಿ ಮರ್ಯಾದೆಯನ್ನು ಮೀರಿ ಪ್ರವರ್ತಿಸುವವರೆಲ್ಲರಿಗೂ ಮರಣವೇ ಯುಕ್ತವಾದ ದಂಡನೆ.'' ಇಷ್ಟು ಹೇಳಿ ನವಾಬರು ಸುಮ್ಮನಾದರು.

ಸಂಗಡಿಗ—ಆಮೇಲೆ ಏನಾಯಿತು ?

ರಂಗನಾಥ—ಆಗುವುದೇನು, ಎಲ್ಲರೂ ತಲೆತೂಗಿದರು.

ಸಂಗಡಿಗ—ಆಮೇಲೆ ?

ರಂಗನಾಥ—ಆಮೇಲೆ ಇನ್ನೇನಾಗಬೇಕು ? ಸೂರ್ಯಾಸ್ತವಾಯಿತು. ಖಾಜಿಯು ಭಗವತ್ಪ್ರಾರ್ಥನೆಗೆ ಕಾಲವೊದಗಿತೆಂದು ಅರಿಕೆಮಾಡಿಕೊಂಡನು. ನವಾಬರು ಸಭೆಯನ್ನು ಮುಕ್ತಾಯಮಾಡಿದರು.

ಕಾವ್ಯಾವಲೋಕನ

"ವಿಶ್ವಬಂಧು" ವಿನ ವಿಶೇಷಸಂಚಿಕೆ—ಜೈನಧರ್ಮದ ಪ್ರಥಮಪ್ರಕಾಶಕರಾದ ಮಹಾವೀರಾಚಾರ್ಯರು ಮುಕ್ತಿಹೊಂದಿದ್ದು ಕಾರ್ತಿಕಮಾಸದಲ್ಲಿ; ಆದಿಪಂಪನು ತನ್ನ ಆದಿಪುರಾಣವನ್ನು ಮುಗಿಸಿದ್ದು ಕಾರ್ತಿಕಮಾಸದಲ್ಲಿ; ಆದ್ದರಿಂದ ಈ ವರ್ಷದ ಕಾರ್ತಿಕಮಾಸದಲ್ಲಿ ಇವರಿಬ್ಬರ ಜ್ಞಾಪಕಾರ್ಥವಾಗಿ "ವಿಶ್ವಬಂಧು" ವಿನ ಚಾಲಕರು ಈ ವಿಶೇಷಸಂಚಿಕೆಯನ್ನು ಪ್ರಕಟಗೊಳಿಸಿದ್ದಾರೆ. ಇದು "ಕರ್ಣಾಟಕ ವಾಙ್ಮಯಕ್ಕೆ ಆಶ್ರಯದಾತರಾದ ಮೈಸೂರಿನ ಶ್ರೀಮನ್ಮಹಾರಾಜರವರ ಪರಂಪರೆಯ...ಕರ್ಣಾಟಕ ವಾಙ್ಮಯ ಸೇವೆಯನ್ನು ಮಾಡಿಯೂ ಮಾಡುತ್ತಲೂ ಇರುವ ಹಾಗೂ ಜೈನಶಾಸನಗಳ ಮತ್ತು ವಾಙ್ಮಯ ಪ್ರಚಾರದಲ್ಲಿ ಬಹಳ ಶ್ರಮೆಯನ್ನು ವಹಿಸಿ ಜೈನಸಮಾಜಕ್ಕೆ ಮಹದುಪಕಾರಮಾಡಿದ ಕೆಲವು ವಿದ್ವನ್ಮಣಿಗಳ" ಚಿತ್ರಗಳಿಂದ ಅಲಂಕೃತವಾಗಿಯೂ, ಜೈನಧರ್ಮ, ಪಂಪ ಮತ್ತು ಅವನ ಗ್ರಂಥಗಳು ಈ ಸಂಬಂಧವಾಗಿ ಬರೆದ ಲೇಖನಗಳಿಂದ ಪೂರ್ಣವಾಗಿಯೂ ಇದೆ. ಸಂಪಾದಕರಾದ ಶ್ರೀ|| ಆಸ್ಥಾನವಿದ್ವಾನ್ ನ್ಯಾಯತೀರ್ಥ ಎ. ಶಾಂತಿರಾಜಶಾಸ್ತ್ರಿಗಳು ಶ್ರೀ ಮಹಾವೀರಚರಿತ, ಜೈನಮತ, ಆಸ್ತಿಕನಾಸ್ತಿಕವಿಚಾರ, 'ಹಿಂದು' ಶಬ್ದವಿವೇಚನೆ ಮುಂತಾದ ಹಲವು ಉತ್ತಮ ಲೇಖನಗಳನ್ನು ಬರೆದಿದ್ದಾರೆ. ಸಾಮಾನ್ಯವಾಗಿ ವಿಶೇಷಸಂಚಿಕೆಗಳಿಗೆ ಒಳ್ಳೊಳ್ಳೆಯ ಚಿತ್ರಗಳನ್ನು ಆಯ್ದುಕೊಳ್ಳುವಂತೆ ಒಳ್ಳೊಳ್ಳೆಯ ಲೇಖಕರನ್ನೂ ಆಯ್ದುಕೊಳ್ಳುವುದು ರೂಢಿಯಾಗಿದೆ. ಆದ್ದರಿಂದ ಇಂಥ ಲೇಖನಗಳು ಚೆನ್ನಾಗಿವೆ, ಅಂಥ ಲೇಖನಗಳು ಚೆನ್ನಾಗಿವೆ, ಎಂದು ಹೇಳುವುದು ಧಾರ್ಷ್ಟ್ಯವಾದೀತು. ಆದರೂ ಸಾಮಾನ್ಯಪಾಠಕರಿಗೆ ಸಂಪಾದಕರ 'ಜೈನಮತ' ವೂ ಡಾ|| ಶ್ಯಾಮಶಾಸ್ತ್ರಿಗಳ 'ಜೈನಸಿದ್ಧಾಂತ' ವೂ ಶ್ರೀ ಅನಂತರವರ 'ಪಂಪಭಾರತ ಪ್ರಸ್ತಾವ' ವೂ ಉಪಯುಕ್ತವಾಗಿಯೂ ರಂಜಕವಾಗಿಯೂ ಇವೆಯೆಂದು ಸೂಚಿಸಲಪೇಕ್ಷಿಸುವೆವು. ಮ|| ಶಾಂತಿರಾಜಶಾಸ್ತ್ರಿಗಳು ಈಗ ಕೆಲವು ವರ್ಷಗಳಿಂದ ಸ್ವಧರ್ಮಕ್ಕೂ ಸ್ವಭಾಷೆಗೂ ಪಡುತ್ತಿರುವ ಶ್ರಮವು ಅವರ ಕೆಲಸವನ್ನು ಕಣ್ಣಾರ ನೋಡುತ್ತಿರುವವರಿಗೆ ಮಾತ್ರ ಗೊತ್ತಾಗಿರುತ್ತದೆ. ಈ ದೇಹಶ್ರಮ ಬುದ್ಧಿ

ಶ್ರಮಗಳೂ ಧರ್ಮಪಕ್ಷಪಾತವೂ ಅಪೂರ್ವ. ಅವರು ಬರೆಯುವ ಲೇಖನಗಳಲ್ಲಿ ಸ್ವಮತೈಕಪಕ್ಷಪಾತವಿಲ್ಲದ ಯುಕ್ತಿಯುಕ್ತವಾದ ವಿಚಾರವಿರುತ್ತದೆ. ಶೈಲಿಯು ಸುಲಭವಾಗಿ ಶುದ್ಧವಾಗಿರುತ್ತದೆ. ಶಬ್ದಬಾಹುಳ್ಯದಿಂದಾಗಲಿ ಶಬ್ದಾಡಂಬರದಿಂದಾಗಲಿ ಲೇಖನವು ಊದಿಕೊಂಡಿರುವುದಿಲ್ಲ. ವಿವರಣಕ್ರಮವು ಸುಗಮವಾಗಿರುವುದರಿಂದ ಅನ್ಯಮತಾನುಯಾಯಿಗಳಿಗೂ, (ಸ್ವಮತದಲ್ಲಿ ಹೆಚ್ಚು ಪರಿಜ್ಞಾನವಿಲ್ಲದ ಲೌಕಿಕಜೈನರಿಗೂ) ಜೈನ ವಿಷಯಗಳು ಸುಲಭವಾಗಿ ತಿಳಿಯುವಂತಾಗುತ್ತಿದೆ.

ಕೇವಲ ಕಾಡುಜನಗಳ ಮಾತನ್ನು ಬಿಟ್ಟು ಬುದ್ಧಿಶಕ್ತಿಯುಳ್ಳ ಯಾವ ಜನರ ಧರ್ಮವನ್ನೇ ತೆಗೆದುಕೊಳ್ಳಲಿ, ಅವುಗಳಲ್ಲಿ ಒಳಗೆ ತಿರುಳು ಇದ್ದೇ ಇರುತ್ತದೆ—ಅಷ್ಟೇ ಅಲ್ಲ, ಅವುಗಳ ತಿರುಳು ಒಂದೇ ಆಗಿರುತ್ತದೆ.* ಪ್ರಾಯಶಃ ಇದನ್ನು ಅನೇಕರು ಒಪ್ಪಲಾರರು. ಆದರೂ ಇತರರಲ್ಲಿ ಇಲ್ಲದ ನಮ್ಮ ಗುಣಗಳನ್ನು ಹೊಗಳಿಕೊಂಡು ನಮ್ಮಲ್ಲಿಲ್ಲದಿರಬಹುದಾದ ಇತರರ ದೋಷಗಳನ್ನು ಎತ್ತಿಯಾಡುತ್ತ ಕಿತ್ತಾಡುವುದಕ್ಕಿಂತ ವಿಚಾರಪೂರ್ವಕವಾಗಿ ಗುಣಗಳನ್ನೇ ಗ್ರಹಿಸಬೇಕಾದದ್ದು ನಾಗರಿಕತೆಯ ಲಕ್ಷಣ. ತೋಟಗಾರರು ತಮ್ಮ ತೋಟಗಳ ಹೊರಗೆ ಕಾಣುತ್ತಿರಬಹುದಾದ ಮುಳ್ಳುಬೇಲಿಗಳನ್ನು ಕಿತ್ತುಕೊಂಡು ಹೊಡೆದಾಡುವುದೇಕೆ ? ತಾವು ತಾವು ಬೆಳೆದ ರಸವತ್ತಾದ ಹಣ್ಣುಹಂಪಲುಗಳನ್ನು ಕೊಟ್ಟು ಕೊಂಡು ತಿನ್ನುತ್ತ ಏಕೆ ಸುಖಪಡಬಾರದು ? ಮ|| ಶಾಂತಿರಾಜಶಾಸ್ತ್ರಿಗಳು ಈ ಕೆಲಸವನ್ನು ಆರಂಭಿಸಿದ್ದಾರೆ. ಅವರು ಈ ದೃಷ್ಟಿಯನ್ನು ಇಟ್ಟುಕೊಂಡೇ ಮುಂದುವರಿಯುವುದು ಅವರು ಅವಲಂಬಿಸಿರುವ ಮತಕ್ಕೂ ನಾಮಧೇಯಕ್ಕೂ ಭೂಷಣವಲ್ಲವೆ ?

ಸಾಹಿತ್ಯಪಕ್ಷಪಾತಿಗಳಾದ ನಮ್ಮ ಪಾಠಕರಿಗೆ ಸ್ವಾರಸ್ಯವಾಗಿರುವ ಕೆಲವು ವಾಕ್ಯಗಳನ್ನು ಶ್ರೀ ಅನಂತರವರ 'ಪಂಪಭಾರತ ಪ್ರಸ್ತಾವ'ದಿಂದ ಉದ್ಧರಿಸಿ ಇಲ್ಲಿ ಬರೆಯುತ್ತೇವೆ :—

"ಪಂಪಕೃತಭಾರತವು ವ್ಯಾಸಭಾರತವೇ ಆಗಿ ಒಪ್ಪುತ್ತಿರುವುದು. ಕನ್ನಡದಲ್ಲಿ ಸಾಳ್ವಭಾರತವು ಜೈನಕಥೆಯಾಗಿದ್ದಂತೆ ತೋರುತ್ತದೆ. ಸಂಸ್ಕೃತದಲ್ಲಿ ಮಲಧಾರಿದೇವನೆಂಬವನು ಪಾಂಡವಚರಿತವೆಂಬ ಜೈನಭಾರತವನ್ನು ಬರೆದಿದ್ದಾನೆ....

---

* ದಯಾಮೂಲೋ ಭವೇದ್ಧರ್ಮೋ ದಯಾ ಪ್ರಾಣಾನುಕಂಪನಂ | ದಯಾಯಾಃ ಪರಿರಕ್ಷಾರ್ಥಂ ಗುಣಾಃ ಶೇಷಾಃ ಪ್ರಕೀರ್ತಿತಾಃ || ಎಂದೂ, ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಇವು ಧರ್ಮಲಿಂಗಗಳೆಂದೂ ಜೈನರು ಹೇಳುತ್ತಾರೆ. ಅಹಿಂಸಾದಿಗಳು ಯೋಗದ ಪ್ರಥಮಾಂಗವೆಂದು 'ಅಹಿಂಸಾಸತ್ಯಾಸ್ತೇಯಬ್ರಹ್ಮಚರ್ಯಾ, ಪರಿಗ್ರಹಾ ಯಮಾಃ' ಎಂದು ಯೋಗಸೂತ್ರವು ಹೇಳುತ್ತದೆ. ತನಗೂ ತನ್ನ ಸುತ್ತುಮುತ್ತಿನ ಜನರಿಗೂ ಮಂಗಳವನ್ನು ಅಪೇಕ್ಷಿಸುವವನು ಯಾರುತಾನೇ ಮೇಲಣ ಅಭಿಪ್ರಾಯವನ್ನು ಮೆಚ್ಚುವುದಿಲ್ಲ? ಇವು ಆವಶ್ಯಕವೆಂದು ಹೇಳುವುದಿಲ್ಲ?

....'ಉಚಿತಪದ' ವೆಂಬ ಪಂಪನ ಕಾವ್ಯಲಕ್ಷಣವು ಭಾರತದಲ್ಲಿ ಲಕ್ಷ್ಯವಾಗಿರುವದು. ಕವಿಯು ಆಮೂಲಾಗ್ರವಾಗಿ ಅತಿ ಜಾಗರೂಕತೆಯಿಂದ ಕಥಾಸೂತ್ರವನ್ನು ಎಲ್ಲಿಯೂ ಸಡಿಲಾಗ ದಂತೆ ಸಾಗಿಸಿರುವನು........ವರ್ಣನ ಪ್ರಸಂಗಗಳಲ್ಲಿ ಬೇಕಷ್ಟು ಸ್ಥಳವನ್ನೇ ಉಪಯೋಗಿಸಿದ್ದು ಅತಿಶಯ ಮನೋಹರವಾಗಿ ಕಾಣುತ್ತಿರುವದು. ಒಂದೊಂದು ರಸವು ಒಂದೆರಡೇ ಪದ್ಯಗಳಲ್ಲಿ ಶಿಖರವನ್ನು ಮುಟ್ಟಿತು ಮುಟ್ಟಿತೆನ್ನುವಷ್ಟರಲ್ಲಿ ಪಂಪನು ಕಥಾರಥವನ್ನು ಚಾತುರ್ಯದಿಂದ ಮುಂ ದಕ್ಕೆ ನೂಕಿದ ಮಾತು ಎಷ್ಟು ಆಹ್ಲಾದದಾಯಕವೆನ್ನುವದನ್ನು ಅವಲೋಕಿಸಿ ನೋಡಿಯೇ ತಿಳಿಯ ಬೇಕಾಗಿದೆ.

ಪಂಪನ ಎರಡೂ ಕೃತಿಗಳಲ್ಲಿ ಆತನ ಉದಾರತೆಯು ಅನೇಕ ಮತಮತಾಂತರಗಳಿಗೆ ಜನ್ಮ ಭೂಮಿಯಾದ ನಮ್ಮ ಭಾರತವರ್ಷದ ಈಗಿನ ಸಮಯದಲ್ಲಿ ಸಹ ಅಭೀಷ್ಟವಾಗಿರುವದು. ಅನ್ಯ ಮತನಿಂದೆಯು ಆತನ ಕೃತಿಯಲ್ಲಿಲ್ಲ........"

ಎ. ಆರ್. ಕೃ.

ಪೂರ್ವಪುರಾಣಂ (ಪೂರ್ವಭಾಗ) :—ಡೆಮ್ಮಿಕ್ವಾರ್ಟೋ, ಪುಟಗಳು viii + ೫೪೯; ಬೆಲೆ ೬ ರೂ.

ಕನ್ನಡಿಗರಿಗೆ ಪಂಪನ ಆದಿಪುರಾಣವು ಈಗ ಸುಪರಿಚಿತವಾದ ಗ್ರಂಥವಾಗಿ ದೆಯಷ್ಟೆ; ಆ ಗ್ರಂಥದಲ್ಲಿ ಮೊದಲಿಂದ ಸುಮಾರು ೨೫೦ ಪುಟಗಳೊಳಗೆ ಸಂಕ್ಷೇ ಪವಾಗಿ ಪ್ರತಿಪಾದಿತವಾಗಿರುವ ವಿಷಯವು ಈ ಪುಸ್ತಕದಲ್ಲಿಯೂ ಪ್ರತಿಪಾದಿತ ವಾಗಿದೆ. ಇದರಲ್ಲಿ ಎರಡು ಭಾಗಗಳಿವೆ:—ಒಂದು, ನೃಪತುಂಗನ ಗುರುಗಳಾಗಿದ್ದ ಜಿನಸೇನಾಚಾರ್ಯರು ಸಂಸ್ಕೃತ ಶ್ಲೋಕರೂಪವಾಗಿ ಬರೆದ ಮೂಲಕಾವ್ಯ; ಮತ್ತೊಂದು, ಮೇಲೆ ಕೀರ್ತಿತರಾದ ಮ|| ನ್ಯಾಯತೀರ್ಥ ಎ. ಶಾಂತಿರಾಜಶಾಸ್ತ್ರಿ ಗಳು ಅದಕ್ಕೆ ಬರೆದಿರುವ ಕನ್ನಡ ಗದ್ಯಭಾಷಾಂತರ. ಪ್ರತಿ ಪುಟದಲ್ಲಿಯೂ ಮೇಲಿನ ಅರ್ಧದಲ್ಲಿ ಮೂಲವೂ ಕೆಳಗಿನ ಅರ್ಧದಲ್ಲಿ ಭಾಷಾಂತರವೂ ಕೊಡಲ್ಪಟ್ಟಿವೆ. ಸಂಸ್ಕೃತ ಗ್ರಂಥವಿಚಾರವು ಇಲ್ಲಿ ಪ್ರಕೃತವಲ್ಲ. ಕನ್ನಡಭಾಷಾಂತರದ ಭಾಷೆ ಮುಂತಾದ ವಿಚಾರವಾಗಿ ವಿಶ್ವಬಂಧುವಿನ ವಿಶೇಷಸಂಚಿಕೆಯ ಮೇಲೆ ಹಿಂದೆ ಬರೆ ದಿರುವುದಕ್ಕಿಂತ ಹೆಚ್ಚಾಗಿ ಇಲ್ಲಿ ಹೇಳುವುದೇನೂ ಇಲ್ಲ. ಮ|| ಶಾಸ್ತ್ರಿಗಳು ಮೂಲ ಗ್ರಂಥಕರ್ತೃಗಳಾದ ಜಿನಸೇನಾಚಾರ್ಯರ ಕಾಲ ಗ್ರಂಥಗಳು ಮುಂತಾದ ವಿಚಾರ ವಾಗಿ ಸಿಕ್ಕುವ ಅಂಶಗಳನ್ನೆಲ್ಲಾ ಸಂಗ್ರಹಿಸಿ ಅವುಗಳನ್ನು ಉಪಯುಕ್ತವಾದ ಒಂದು ಉಪೋದ್ಘಾತದಲ್ಲಿ ಸೇರಿಸಿದ್ದಾರೆ.

ತ್ರಿಷಷ್ಟಿ(೬೩)ಶಲಾಕಾಪುರುಷರ ಚರಿತ್ರೆಯನ್ನು ಪ್ರತಿಪಾದಿಸುವ ಗ್ರಂಥಕ್ಕೆ 'ಮಹಾಪುರಾಣ' ವೆಂದು ಹೆಸರು. ಅದು ಪೂರ್ವಪುರಾಣ ಉತ್ತರಪುರಾಣವೆಂದು ಎರಡು ಭಾಗವಾಗಿದೆ. ಪೂರ್ವಪುರಾಣದಲ್ಲಿ ಪ್ರಥಮತೀರ್ಥಂಕರರ ಮತ್ತು ಪ್ರಥಮ

ಚಕ್ರವರ್ತಿಗಳ ಚರಿತ್ರೆಯೂ ಉತ್ತರಪುರಾಣದಲ್ಲಿ ಮಿಕ್ಕ ಶಲಾಕಾಪುರುಷರ ಚರಿತ್ರೆಯೂ ಬರುತ್ತದೆ. ಪ್ರಕೃತಪುಸ್ತಕವು ಪೂರ್ವಪುರಾಣದ ಪೂರ್ವಭಾಗವಾಗಿದೆ.

ಪೂರ್ವಪುರಾಣದ ಮೂಲವು ೧೨,೦೦೦ ಶ್ಲೋಕಗಳುಳ್ಳದ್ದೆಂದರೆ, ಇದನ್ನು ಕನ್ನಡ ವ್ಯಾಖ್ಯಾನದೊಡನೆ ಶುದ್ಧವಾಗಿಯೂ ಚೆನ್ನಾಗಿಯೂ ಮುದ್ರಿಸುವ ಕೆಲಸವು ಎಷ್ಟು ಶ್ರಮಸಾಧ್ಯ ಮತ್ತು ದ್ರವ್ಯಸಾಧ್ಯವೆಂಬುದು ಸ್ಪಷ್ಟವಾಗಿದೆ. ಮ|| ಶಾಸ್ತ್ರಿಗಳು ದೇಹಶ್ರಮವನ್ನು ಬುದ್ಧಿಶ್ರಮವನ್ನೂ ವಹಿಸಿದರು. ಮ|| ಗಳಾದ ಕೃಷ್ಣಯ್ಯಗೌಡರು, ಸುಬ್ಬಯ್ಯಗೌಡರು ಮುಂತಾದ ಧರ್ಮಪಕ್ಷಪಾತಿಗಳು ದ್ರವ್ಯದ ಭಾರವನ್ನು ವಹಿಸಿದರು. ಪ್ರಕೃತ ಪುಸ್ತಕವು ಇವೆರಡರ ಫಲವಾಗಿದೆ. ಭರತಖಂಡದ ಸ್ವರೂಪವು ವಿಲಕ್ಷಣವಾದದ್ದು. ಅದು ಕರ್ಮಭೂಮಿಯೂ ಹೌದು ಧರ್ಮಭೂಮಿಯೂ ಹೌದು. ಇಲ್ಲಿ ನಡೆಯಬೇಕಾದ ಮಹಾಕಾರ್ಯಗಳೆಲ್ಲಾ ಹೀಗೆ ನಡೆದಿವೆಯೇ ಹೊರತು ಕೇವಲ ಲೆಕ್ಕಾಚಾರದ ವರ್ತಕಬುದ್ಧಿಯಿಂದಲ್ಲ.

ಕನ್ನಡ ಜೈನಕಾವ್ಯಗಳನ್ನೋದುವಾಗ ಜೈನಮತ ಪ್ರಕ್ರಿಯೆಗಳೂ ಪಾರಿಭಾಷಿಕ ಶಬ್ದಗಳೂ ಅರ್ಥವಾಗದಿದ್ದರೆ ಆಗ ಸಾಮಾನ್ಯವಾಗಿ ವಿವರಣೆಗೆ ಆದಿಪುರಾಣವನ್ನು ಹುಡುಕಿಕೊಂಡು ಹೋಗುತ್ತಿದ್ದೆವು. ಅಂಥ ವಿಷಯಗಳು ಪ್ರಕೃತ ಗ್ರಂಥದಲ್ಲಿಯೂ ಅದರ ಭಾಷಾಂತರ ಮತ್ತು ವ್ಯಾಖ್ಯಾನಗಳಲ್ಲಿಯೂ ವಿಶದವಾಗಿ ಸಿಕ್ಕುತ್ತವೆ. ಆದ್ದರಿಂದ ಈ ಗ್ರಂಥವು ಸಂಸ್ಕೃತವನ್ನರಿಯದ ಜೈನ ಜನರಿಗೇ ಅಲ್ಲದೆ ಹಳಗನ್ನಡ ಜೈನಗ್ರಂಥಗಳನ್ನೋದಬೇಕೆನ್ನುವವರಿಗೂ ಉಪಕಾರಿಯಾಗಿದೆ.

ಇಂಥ ಶಬ್ದಗಳಿಗೂ ವಿಷಯಗಳಿಗೂ ಒಂದು ಅಕಾರಾದಿ ಸೂಚಿಕೆಯನ್ನು ಸಿದ್ಧಮಾಡಿ ಎರಡನೆಯ ಸಂಪುಟದ ಕೊನೆಯಲ್ಲಿ ಮುದ್ರಿಸಿದರೆ ಈ ಉಪಕಾರವು ಮತ್ತಷ್ಟು ಅತಿಶಯವಾದೀತೆಂದು ಸೂಚಿಸಲಪೇಕ್ಷಿಸುತ್ತೇವೆ.

ಎ. ಆರ್. ಕೃ.

ಲೀಲೆ, ಶ್ರೀ ದೇಶಬಂಧು ದಾಸರ ಜೋಗುಳ, ರಾಷ್ಟ್ರಗೀತಾ ರತ್ನಾಕರ:—ಮ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರವರಿಂದ.

ಕಾವ್ಯರತ್ನಾಕರ:—ಮ|| ಉಗ್ರಾಣಮಂಗೇಶರಾಯರಿಂದ ಸಂಗ್ರಹಿಸಲ್ಪಟ್ಟದ್ದು.

ಮ|| ಪುಣಿಂಚತ್ತಾಯರು ಅನೇಕ ರಾಷ್ಟ್ರಗೀತೆಗಳನ್ನು ಬರೆದು ಪ್ರಸಿದ್ಧರಾಗಿರುವರು. 'ಲೀಲೆ' ಯೆಂಬ ಪುಸ್ತಕದ ೩೬ ಪದ್ಯಗಳಲ್ಲಿ ಭಗವಂತನ ಲೀಲೆಯು ಮೂರು ಭಾಗವಾಗಿ ವಿವೃತವಾಗಿದೆ. ಇದಕ್ಕೆ ಉಪೋದ್ಘಾತವನ್ನು ಬರೆದಿರುವ ವಕೀಲ್ ಮ|| ಅನಂತಶಾಸ್ತ್ರಿಗಳು, ಕನಕಪುರಂದರಾದಿಗಳ ತರುವಾಯ ಈ ಕೀರ್ತ

ನೆಗಳೇ ಭಕ್ತಿರಸಪ್ರಧಾನವಾದ ಶ್ರೇಷ್ಠ ಕೀರ್ತನೆಗಳು ಎಂದು ಅಭಿಪ್ರಾಯಪಟ್ಟಿರುವರು. ಇರಬಹುದು; ಅವು ಅವರಿಗೆ ಹಾಗೆ ರುಚಿಸಿರಬಹುದು. ಇವುಗಳ ಕೊನೆಯ ಚರಣದಲ್ಲಿ

"ನೀನು ನಾನೆಂಬ ಭೇದವನೆಣಿಸದೆ ದೀನದಾಸನ ಕಾಯೊ! ದೇವ! ಲಕ್ಷ್ಮೀಶ"

ಎಂದು ಕವಿಗಳು ಬರೆದಿದ್ದಾರೆ. ಜೀವನನ್ನು ಕುರಿತು 'ತತ್ತ್ವಮಸಿ' ಎಂದು ಹೇಳುವುದನ್ನು ಕೇಳಿದ್ದೇವೆ, ಆದರೆ ಪರಮಾತ್ಮನಿಗೆ ಜೀವಾಭೇದವನ್ನು ಉಪದೇಶಿಸುವುದು ವಿಚಿತ್ರವಾಗಿದೆ. ಅದನ್ನೇ ಮತ್ತೊಂದು ವಿಧವಾಗಿ ಉಪಪಾದಿಸೋಣ:- ಆನೆಯ ಬಾಲವು ಆನೆಯದೆಂದು ಹೇಳಬಹುದು; ಆದರೆ ಆನೆಯು ಅದರ ಬಾಲದ್ದೆಂದು ಹೇಳಬಹುದೇ?

"ಜೋಗುಳ" ವೆಂಬುದು ಸಾಮಾನ್ಯವಾಗಿ ಮಕ್ಕಳನ್ನು ತೂಗಿ ಮಲಗಿಸುವಾಗ ಹೇಳುವ ಹಾಡು; ರಾಮ, ಕೃಷ್ಣ ಮುಂತಾದ ದೇವರ ವಿಚಾರವಾಗಿ ಉಪಚಾರಕಾಲದಲ್ಲಿ ಜೋಗುಳಗಳನ್ನು ಹೇಳುವುದೂ ಉಂಟಾದರೂ, ದೇಶಬಂಧು ದಾಸರವಿಚಾರವನ್ನು 'ಜೋಗುಳ' ದಲ್ಲಿ ಬರೆದಿರುವುದರ ಔಚಿತ್ಯವು ಸಂದಿಗ್ಧವೇ.

ಮ|| ಪುಣೆಂಚತ್ತಾಯರೂ ಮ|| ಮಂಗೇಶರಾಯರೂ ಒಂದೊಂದು ರತ್ನಾಕರವನ್ನು ನಮ್ಮ ಮುಂದಿಟ್ಟಿರುವರು. ನಾಮೈಕ್ಯವೊಂದೇ ಇವುಗಳಿಗಿರುವ ಸಾಮಾನ್ಯಧರ್ಮ; ರಾಯರ ರತ್ನಗಳು ಆಧುನಿಕ ಮತ್ತು ಪ್ರಾಚೀನ ಕನ್ನಡ ಸಾಹಿತ್ಯಗಳಿಂದ ಆರಿಸಿ ತೆಗೆದವುಗಳು; ಪುಣೆಂಚತ್ತಾಯರ ರತ್ನಗಳು ತಮ್ಮ ಕವಿತಾಖನಿಯಿಂದ ತೆಗೆದವುಗಳು; ಒಂದನ್ನು ಕಾವ್ಯದೃಷ್ಟಿಯಿಂದಲೇ ಪರಿಗಣಿಸಬೇಕು; ಇನ್ನೊಂದನ್ನು ಹಾಗೆ ಪರಿಗಣಿಸುವುದು ಅನ್ಯಾಯ. ಪುಣೆಂಚತ್ತಾಯರ ಪುಸ್ತಕದ ಕೊನೆಯಲ್ಲಿ ಬಂಕಿಂಬಾಬುಗಳ 'ವಂದೇ ಮಾತರಂ' ಗೀತೆಯೂ, 'ಭಾರತರಾಣಿ' ಎಂಬ ಪ್ರಥಮಗೀತೆಯ ಅರ್ಥಸೌಂದರ್ಯಾದಿಗಳ ಗದ್ಯಪ್ರಕಾಶಿಕೆಯೂ ಇವೆ.

ಮ|| ರಾಯರು ರಸಜ್ಞರಾದ ಕವಿಗಳು; ಆದ್ದರಿಂದ ಅವರ ಪದ್ಯಸಂಗ್ರಹ ಕಾರ್ಯವು ಚೆನ್ನಾಗಿಯೇ ಇದೆ. ಹೊಸರೀತಿಯ ಆಧುನಿಕ ಕವಿತೆಗಳಲ್ಲಿ ಯಾವುವು ನಿಲ್ಲುವುವೋ ಯಾವುವು ನಿಲ್ಲವೋ ಹೇಳುವುದು ಕಷ್ಟ. ಅವುಗಳಲ್ಲಿ ಗುಣಪೂರ್ಣವಾಗಿರುವ ಕೆಲವಾದರೂ ನಿಲ್ಲಲರ್ಹವೆಂದು ತಿಳಿದು ಈ ಮುವ್ವತ್ತು ಕವಿತೆಗಳನ್ನು ಆರಿಸಿ ಇವರು ಪ್ರಚುರಗೊಳಿಸಿರುತ್ತಾರೆ. ಕವಿಗಳ ಪರಿಚಯವನ್ನು ಹೊಸದಾಗಿ ಮಾಡಿ ಕೊಡಬೇಕಾಗಿರುವಾಗ ಅವರವರು ಬರೆದಿರುವ ಅತ್ಯುತ್ತಮ ಕವಿತೆಗಳಿಂದ ಅದನ್ನು ಮಾಡಿಕೊಟ್ಟರೆ ಸಂಗ್ರಹಕಾರರ ಶ್ರಮವು ಸಫಲವಾಗಿ ಆ ಕವಿಗಳ ವಿಷಯದಲ್ಲಿ ನಮಗೆ ಆದರಾಭಿಮಾನಗಳುಂಟಾಗುವುವು. ಕೆಲವು ಕರ್ತೃಗಳ ವಿಷಯ

ವಾಗಿಯಂತೂ ಅಂಥ ಪರಿಚಯವನ್ನೇ ನಮಗೆ ರಾಯರು ಮಾಡಿಕೊಟ್ಟಿರುವರೆಂದು ನಿಸ್ಸಂದೇಹವಾಗಿ ಹೇಳಬಹುದು.

" ಮೂರುಗಂಟೆಯಕಾಲ ರಾಷ್ಟ್ರಕಂಠೀರವರು |
ಸೇರಿದ ಸಭಾಮಧ್ಯದಲಿ ಗರ್ಜಿಸಿದರು ‖ "

ಇತ್ಯಾದಿಯಾಗಿ ಬರೆಯುತ್ತಿರುವ ರಸರಹಿತವಾದ ಪದಸಮುದಾಯವನ್ನು ಕವಿತೆಯೆಂದು ಕೊಂಡಾಡುವ ಕಾಲವು ದೇಶದಲ್ಲಿ ಬರುತ್ತಿರುವಾಗ ಉತ್ತಮ ಕಾವ್ಯಸಂಗ್ರಹದ ಕೆಲಸವು ಸತ್ಕವಿತೆಯ ಸವಿಯನ್ನು ಅರಿಯುಬಲ್ಲವರಿಂದಲೇ ಆಗಬೇಕು. ಈ ಪುಸ್ತಕದ ಕವಿತೆಗಳೆಲ್ಲಾ ಹೃದ್ಯವಾಗಿಯೂ ಲಲಿತವಾಗಿಯೂ ಇವೆ. ಆದರೆ ಕಾವ್ಯಸೌಂದರ್ಯವು ಇವುಗಳೆಲ್ಲದರಲ್ಲೂ ಒಂದೇ ಸಮನಾಗಿರುವುದಿಲ್ಲ. ಒಂದೆರಡರಲ್ಲಿ ಸುತರಾಂ ಇಲ್ಲವೇ ಇಲ್ಲವೆಂದು ಹೇಳಬಹುದು. ಆದರೂ ಅದು ಗೋಚರಿಸುವ ಕಡೆಗಳಲ್ಲಿ—ಭೂಮಾತೆ, ಕನ್ನಡನಾಡ ರಾಣಿ, ಹುತ್ತರಿ ಹಾಡು, ಮುಂತಾದವುಗಳಲ್ಲಿ—ಚೆನ್ನಾಗಿಯೇ ಗೋಚರವಾಗುತ್ತದೆ.

ಅರಳಿ ಹೂವಾಗದೆಯೆ ಪರಿಮಳವ ಬೀರದೆಯೆ| ....ಪೋದೆಯ ಎನ್ನ ಮುದ್ದು ಲಲಿತೆ ‖
(ಭೂಮಾತೆಯು)

ತಾವರೆಯ ಕೋಮಲಸುವಾಸನೆಯೊಳಿಹಳು | ಮಾವಿನಾಸವಿಯೊಳತಿ ಮಧುರವಾಗಿಹಳು ‖

ಇತ್ಯಾದಿಗಳಲ್ಲಿರುವ ತಾನವೂ ಮಧುರಗೀತವೂ ಆನಂದಜನಕವಾಗಿವೆ. ಕನ್ನಡನಾಡು "ಶೂರಪುರುಷರ ಕೊನೆಯು ವೀರಕವಿಗಳ ಗೊನೆಯು" ಮುಂತಾದ ಭಾಗಗಳು ಉತ್ತೇಜಕಗಳಾಗಿವೆ.

ಮುಂದೆ ಈರೀತಿ ಕಾವ್ಯ ಪರಿಚಯಮಾಡಿಕೊಡತಕ್ಕವರು ನವೀನ ರೀತಿಯ ಕವಿತೆಗಳಲ್ಲಿ ಮುಖ್ಯವಾದ ಎಲ್ಲಾ ಜಾತಿಯ ಕವಿತೆಗಳಿಗೂ ಒಂದೊಂದು ಉದಾಹರಣೆಯನ್ನು ತಕ್ಕಮಟ್ಟಿನ ಸಾಕಲ್ಯದಿಂದ ಒದಗಿಸಿಕೊಟ್ಟೋ; ಅಥವಾ ಬೇರೆ ಬೇರೆ ಕಾಲದವರು ಒಂದೇ ಜಾತಿಯ ಕಾವ್ಯಗಳನ್ನು ಹೇಗೆ ಹೇಗೆ ಬರೆದಿರುವರೆಂಬುದನ್ನು ಸೂಚಿಸುವಂತೆಯೋ; ಅಥವಾ ಈಗಿನ ಸಾಹಿತ್ಯವು ಎಷ್ಟರಮಟ್ಟಿಗೆ ಹಿಂದಿನ ಸಾಹಿತ್ಯದೊಡನೆ ಸೇರಿ ಬೆಳೆದುಕೊಂಡು ಬಂದಿದೆ, ಸುಮಾರು ಮುವ್ವತ್ತು ವರ್ಷಗಳಿಂದೀಚೆಗೆ ಯಾವಯಾವ ಮುಖದಲ್ಲಿ ಹರಿಯುತ್ತ ಬಂದಿದೆ, ಎಂಬುದನ್ನು ಒಂದು ಕ್ರಮದಲ್ಲಿ ಪ್ರತಿಪಾದಿಸುವಂತೆಯೋ ಸಂಗ್ರಹಮಾಡಿದರೆ ಭಾಷಾಭಿಮಾನಿಗಳಿಗೆ ಇನ್ನೂ ಹೆಚ್ಚು ಉಪಕಾರವಾಗಬಹುದು.

ರಾಯರ "ಕನಕಾಂಗಿ" ಯನ್ನು ಓದಿದಾಗ 'ಶ್ರೀ' ಯವರ ಅದೇ ಹೆಸರಿನ ಕವನವು ನೆನಪಿಗೆ ಬಂತು. ಈ ರಮಣಿಯರು ಇಂಗ್ಲೆಂಡಿನಿಂದ ನಮ್ಮ ದೇಶಕ್ಕೆ

ಬಂದು ನೆಲಸಿ ಕನ್ನಡಿಗರಾಗಿರುವ ಸಾಧ್ವಿಯರು. ಒಬ್ಬಳು ಕನಕತೃಷ್ಣಾಮೂರ್ತಿ ಸ್ವರೂಪನಾದ ಮೈಡಾಸ್‌ರಾಜನ ಮಗಳು; ಇನ್ನೊಬ್ಬಳು ಕೋಲರಿಜ್‌ಕವಿಯ 'ಪ್ರೇಮ'ದ ನಾಯಕಿ. "ಶ್ರೀ"ಯವರ ಒಂದೆರಡು ಕವನಗಳಿಗಾದರೂ ಇಲ್ಲಿ ಎಡೆಗೊಡಬಹುದಾಗಿತ್ತು. ಅವರ ಪದ ಭಾಷಾಸರಣಿ ಇವುಗಳಲ್ಲಿ ಒಂದು ಅಪೂರ್ವವಾದ ವ್ಯಕ್ತಿತ್ವವಿದೆ. ವಿ. ಸೀ.

ಬಾಲರಾಮಾಯಣ, ಬಾಲಭಾರತ—ಮ|| ಬಾದಾಮಿ ಕೃಷ್ಣರಾಯರಿಂದ ರಚಿಸಲ್ಪಟ್ಟವು.

ಈ ಪುಸ್ತಕಗಳಲ್ಲಿ ಮ|| ಕೃಷ್ಣರಾಯರು ರಾಮಾಯಣ ಭಾರತಕಥೆಗಳನ್ನು ಸಂಕ್ಷೇಪಿಸಿ ಮಧುರವಾದ ಗೋವಿನಹಾಡಿನ ಮಟ್ಟಿನಲ್ಲಿ ರಚಿಸಿದ್ದಾರೆ. ಭಾಷೆಯು ಪ್ರಾಯಿಕವಾಗಿ ಹೊಸಗನ್ನಡ. ಇವುಗಳಲ್ಲಿ ಛಂದೋದೋಷ ಮುಂತಾದ ಕೆಲವು ದೋಷಗಳು ಕಂಡುಬರುತ್ತವೆ. ಇಂಥವು ಪ್ರಾಯಶಃ ಗೋವಿನಹಾಡಿನಲ್ಲಿಯೂ ಕಂಡುಬರುತ್ತವೆಯೆಂದೂ ಬಾಯಲ್ಲಿ ಹೇಳುವಾಗ ಪದಗಳನ್ನು ಹಿಂದಕ್ಕೆ ಮುಂದಕ್ಕೆ ಎಳೆದು ಸರಿಪಡಿಸಿಕೊಳ್ಳಬೇಕೆಂದೂ ಗ್ರಂಥಕರ್ತರು ಅಭಿಪ್ರಾಯಪಡಬಹುದು. ಭಾಷೆಯು ಬಹುಮಟ್ಟಿಗೆ ಸುಲಭವಾಗಿದೆ.

ಶ್ರೀ ಚೆಲ್ವನಾರಾಯಣಶತಕಂ—ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ರಚಿಸಲ್ಪಟ್ಟದ್ದು. ತೃತೀಯ ಮುದ್ರಣ. ಬೆಲೆ ೭ ಆಣೆ.

ಪಂಡಿತ ಅಳಸಿಂಗರಾಚಾರ್ಯರು ಸ್ವಪ್ನವಾಸದತ್ತವನ್ನು ಕನ್ನಡಿಸಿ ಪ್ರಬುದ್ಧ ಕರ್ಣಾಟಕದ ಪಾಠಕರಿಗೆ ಪರಿಚಿತರಾಗಿದ್ದಾರೆ. ಅವರ ಗದ್ಯರಾಮಾಯಣ ಭಾಗವತಗಳೂ ಅನೇಕರಿಗೆ ಪರಿಚಿತವಾದವುಗಳು. ಚೆಲ್ವನಾರಾಯಣಶತಕವು ಸುಪ್ರಸಿದ್ಧವಾದ ಸಂಸ್ಕೃತ ನೀತಿಶ್ಲೋಕಗಳ ಮತ್ತು ಅಭಿಪ್ರಾಯಗಳ ಭಾಷಾಂತರವಾಗಿದೆ. ಪುಸ್ತಕದ ಕೊನೆಯಲ್ಲಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಟಿಪ್ಪಣವಿದೆ.

ವನಮಾಲೆ—ಕ್ರೌನ್ ಪುಟಗಳು ೧೧೩; ಗ್ರಂಥಕರ್ತರು ಮ|| ಕೆ. ಎಸ್. ಧರಣೀಂದ್ರಯ್ಯ, ಮೈಸೂರು. ಬೆಲೆ ೬ ಆಣೆ.

ಇದರಲ್ಲಿ ಒಂದು ಪ್ರಾಚೀನ ಜೈನಕಥೆಯು ಉಕ್ತವಾಗಿದೆ. ಆದರೆ ಸರಣಿಯು ಆಧುನಿಕ ಕಾದಂಬರಿಯ ಸರಣಿ; ಭಾಷೆಯು ಹೊಸಗನ್ನಡ; ಗ್ರಂಥಕರ್ತರು ತಮಗೆ ಆವಶ್ಯಕವೆಂದು ತೋರಿದ ಕೆಲವು ಬದಲಾವಣೆಗಳನ್ನು ಮಾಡಿಕೊಂಡಿರುವಂತೆ ತಿಳಿಸುತ್ತಾರೆ. ಮೂಲಕಥೆಯನ್ನರಿಯದ ನಮಗೆ ಇವುಗಳ ಔಚಿತ್ಯಾನೌಚಿತ್ಯಗಳನ್ನು ತಿಳಿಯುವುದು ಕಷ್ಟವಾಗಿದೆ. ಶೈಲಿಯು ಸುಲಭವಾಗಿದೆ.

ವ ಸ್ತು ಕೋ ೕ ಶ

ಮನೆಯಲ್ಲಿ ಏನಾದರೂ ಹೆಚ್ಚುಕಟ್ಟಲೆಯಾದರೆ ದುಡ್ಡುಕಾಸಿನ ಸ್ಥಿತಿಯು ತಿರುಗಣಿ ತಪ್ಪಿದ ಕದದಂತಾಗಿ, ಆ ತಿಂಗಳು ಅಂಗಡಿ ಮುಂಗಟ್ಟುಗಳಿಗೆ ಸಲ್ಲಿಸಬೇಕಾದ ಹಣಕಾಸುಗಳನ್ನು ಯಥಾಕಾಲದಲ್ಲಿ ಸಲ್ಲಿಸಲಾಗುವುದಿಲ್ಲ; ಮುಂದಿನತಿಂಗಳು ಹಿಂದಿನ ತಿಂಗಳ ತಮ್ಮ; ಹೀಗಾಗಿ ಪೂರ್ವಸ್ಥಿತಿಯು ಬಂದು ಎಂದಿನಂತೆ ಮಾನದಿಂದ ಬದುಕಬೇಕಾದರೆ ಸ್ವಲ್ಪಕಾಲ ಚೇತರಿಸಿಕೊಳ್ಳಬೇಕಾಗುವುದು; ಹಾಗೆ, ಕಳೆದ ಸಂಚಿಕೆಯು ಬರುವುದು ತಡವಾಗಲಾಗಿ ಈ ಸಂಚಿಕೆಯೂ ತಡವೆಂಬುದು ಸಿದ್ಧವೇ; ಪಾಠಕರು ಇದನ್ನು ಆಗಲೇ ಕಂಡುಕೊಂಡಿದ್ದಾರೆಂದು ನಾವು ಧೈರ್ಯವಾಗಿದ್ದೇವೆ. ದೀವಳಿಗೆಯಹಬ್ಬದಲ್ಲಿ ಪ್ರಬುದ್ಧಕರ್ಣಾಟಕವನ್ನು ಓದುವುದಕ್ಕೆ ಬದಲು, ಪ್ರಬುದ್ಧಕರ್ಣಾಟಕವು ಕೈಗೆ ಬಂತೆಂದು ಮಾರ್ಗಶಿರಮಾಸದಲ್ಲಿ ಇನ್ನೊಂದು ದೀವಳಿಗೆಯಹಬ್ಬ ಮಾಡಿಕೊಂಡು ಹೋಳಿಗೆ ಪಾಯಸದ ಊಟಮಾಡಿಬಿಟ್ಟರೆ ಸರಿ!

ಮಾರ್ಗಶಿರದ ದೀಪಾವಳಿ

ಆದರೆ ಒಂದು ಸಮಾಧಾನ; ತಡವಾದರೂ ಪತ್ರಿಕೆಯು ಬಡವಾಗಿಲ್ಲ; ಅಷ್ಟೂ ಅಷ್ಟು ಪುಷ್ಟವಾಗಿಯೇ ಬಂದಿದೆ. ಹೊತ್ತಿಗೆ ಸರಿಯಾಗಿ ಕದನ್ನವನ್ನು ಅರೆ ಹೊಟ್ಟೆ ಊಟಮಾಡುವುದಕ್ಕಿಂತ ಸ್ವಲ್ಪ ಹೊತ್ತಾದರೂ ಹೊಟ್ಟೆತುಂಬ ಔತನದ ಊಟಮಾಡುವುದು ಸ್ಪೃಹಣೀಯವಲ್ಲವೇ? ಕನ್ನಡಿಗರೆ, ಪ್ರಬುದ್ಧಕರ್ಣಾಟಕದ ಅಭಿಮಾನಿಗಳೇ, "ಹೌದು" ಎಂದು ಉತ್ತರಕೊಟ್ಟು ಮರ್ಯಾದೆಯನ್ನುಳಿಸಿ!

ಮ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು (ರೈಟ್ ಆನರಬಲ್, ಪಿ.ಸಿ. ಇತ್ಯಾದಿ) ಕಳೆದ ತಿಂಗಳು ಮದ್ರಾಸಿನ ಮೈಲಾಪುರ ಸಂಸ್ಕೃತಪಾಠಶಾಲೆಯಲ್ಲಿ ಪಾರಿತೋಷಕಗಳನ್ನು ವಿನಿಯೋಗಮಾಡುವಾಗ ಸಂಸ್ಕೃತ ವ್ಯಾಸಂಗಕ್ಕೆ ಇರಬೇಕಾದ ಪ್ರಾಶಸ್ತ್ಯದಮೇಲೆ ಒಂದು ಉಪನ್ಯಾಸಮಾಡಿದರು. ಸಂಸ್ಕೃತದಲ್ಲಿ ಸ್ವಲ್ಪವಾದರೂ ಗೌರವವೋ ಆದರವೋ ಇರತಕ್ಕ ಪ್ರತಿಯೊಬ್ಬನೂ ಅದನ್ನು ಓದಬೇಕು. ಆದರಿಂದ ಪ್ರಕೃತೋಪಯುಕ್ತವಾದ ಕೆಲವು ಅಂಶಗಳನ್ನು ಸಂಗ್ರಹಿಸಿ ಇಲ್ಲಿ ಬರೆದಿದ್ದೇವೆ:—

ಮ|| ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು ಮತ್ತು ಸಂಸ್ಕೃತ

"ಈಗ ಇಂಡಿಯಾದೇಶದ ಯಾವ ಭಾಗದಲ್ಲಿ ನೋಡಿದರೂ ಆಧುನಿಕರೀತಿಯಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕವರಲ್ಲಿಯೂ, ಸಂಸ್ಕೃತ ಸಂಸ್ಕೃತಸಾಹಿತ್ಯ ಸಾಂಸ್ಕೃತಿಕರ ಅಭಿಪ್ರಾಯಗಳು ಇವುಗಳ ವಿಚಾರಗಳು ವಿಶೇಷವಾಗಿ ಕಂಡುಬರುತ್ತಿವೆ. ಇದು ಮದ್ರಾಸಿನಲ್ಲಿರುವುದಕ್ಕಿಂತ ಇತರ ಭಾಗಗಳಲ್ಲಿ ಹೆಚ್ಚು. ಇದಕ್ಕೆ ಪ್ರತಿಯಾಗಿ ನಾವು 'ನಮ್ಮ ಇಂಗ್ಲೀಷ್‌ಮಾತು ಚೆನ್ನಾಗಿದೆಯಲ್ಲಾ' ಎಂದು ಜಂಭ ಹೇಳಿಕೊಳ್ಳಬಹುದು; ಆದರೆ ಇದಕ್ಕೆ ಭರತಖಂಡದ ಇತರ ಭಾಗಗಳವರು ಗೌರವವನ್ನು ಕೊಡುವುದಿಲ್ಲ. ಆದಕ್ಕೆ ಬದಲಾಗಿ ಅವರು 'ನೀವು ನಿಮ್ಮ ಮಾತೃಭಾಷೆಯನ್ನು ಅಸಡ್ಡೆಮಾಡಿದ್ದೀರಿ. ಪ್ರಪಂಚದಲ್ಲೆಲ್ಲಾ ಪ್ರಾಚೀನತಮವಾದ ಸಾಹಿತ್ಯವನ್ನೂ ದರ್ಶನಗಳನ್ನೂ ಒಳಕೊಂಡಿರುವ ಸಂಸ್ಕೃತಭಾಷೆಯನ್ನು ಮಿಕ್ಕ ಪ್ರಾಂತದವರಿಗಿಂತ ಎಷ್ಟೋ ಕೀಳಾಗಿ ಮಾಡಿದ್ದೀರಿ' ಎಂದು ಹಂಗಿಸುವರು. ಈ ವ್ಯತ್ಯಾಸವು ಈಚಿನದು. ಸುಮಾರು ೨೦ ವರ್ಷಗಳಕೆಳಗೆ ಈ ಮಾತನ್ನು ಹೇಳುವಂತಿರಲಿಲ್ಲ.

ಈಗ ಕೆಲವುವರ್ಷಗಳ ಕೆಳಗೆ, ಸಂಸ್ಕೃತವು ಬ್ರಾಹ್ಮಣನಿಗೆ ಗೌರವತರತಕ್ಕದ್ದೆಂದೂ ಆದ್ದರಿಂದ ಅದರ ವ್ಯಾಸಂಗವನ್ನು ಮುರಿದರೆ ಅವನ ತಲೆಯಮೇಲೆ ಮೊಟಕಿದಂತಾಗುವುದೆಂದೂ ಈ ವಿಶ್ವವಿದ್ಯಾಲಯದಲ್ಲಿ ದ್ವಿತೀಯಭಾಷೆಯಾಗಿದ್ದ ಸಂಸ್ಕೃತವನ್ನು ಐಚ್ಛಿಕವನ್ನಾಗಿ ಮಾಡಿದರು. ಸಂಸ್ಕೃತ ಪಕ್ಷಪಾತಿಗಳೂ ಇದನ್ನು ಅನುಮೋದಿಸಿ, ಅನೇಕರು ಚೂರುಚೂರು ಕಲಿಯುವುದಕ್ಕಿಂತ ಕೆಲವರಾದರೂ ವಿಶೇಷ ಗಮನಕೊಟ್ಟು ವ್ಯಾಸಂಗಮಾಡಿ ಒಳ್ಳೆಯ ಪಂಡಿತರಾಗುವುದು ಹೆಚ್ಚು ಫಲಕಾರಿಯೆಂದು ಹೇಳತೊಡಗಿದರು. ಆದರೆ ಆಗ ಇದರ ವಿಫಲಪರಿಣಾಮವು ಗೊತ್ತಿಗೆ ಬರಲಿಲ್ಲ.

ಸಾಲದುದಕ್ಕೆ ಸಂಸ್ಕೃತಕ್ಕೆ ಪ್ರಾಶಸ್ತ್ಯಕೊಟ್ಟಷ್ಟೂ ಪ್ರಾಚೀನ ದ್ರಾವಿಡ ಸಂಸ್ಕೃತಿಗೆ ಅಪ್ರಾಶಸ್ತ್ಯ ಬರುವುದೆಂದು ಮದರಾಸುಪ್ರಾಂತದಲ್ಲಿ ಬ್ರಾಹ್ಮಣೇತರರಿಗೆ ಒಂದು ನಂಬಿಕೆಯುಂಟಾಗಿದೆ. ಆದ್ದರಿಂದ ಸಂಸ್ಕೃತವಿಷಯದಲ್ಲಿ ಇಂಡಿಯದ ಇತರಭಾಗಗಳೊಳಗೆ ಇಲ್ಲದ ಒಂದು ಮತವೈಷಮ್ಯವು ನಮ್ಮಲ್ಲಿ ಕಂಡುಬರುತ್ತದೆ. ಇದು ಶುದ್ಧ ಅನ್ಯಾಯ. ಸಂಸ್ಕೃತವು ತನ್ನಭಾಷೆಯೆಂದು ಪ್ರತಿಯೊಬ್ಬನೂ ಭಾವಿಸಿ ಇಂಗ್ಲಿಷಿಗೆ ಕೊಡುವಷ್ಟು ಪ್ರಾಧಾನ್ಯವನ್ನು ತನ್ನ ವಿದ್ಯಾಭ್ಯಾಸಕ್ರಮದಲ್ಲಿ ಅದಕ್ಕೂ ಕೊಟ್ಟರೆ ನನಗೆ ಅತ್ಯಂತ ಸಂತೋಷ. ಆ ದಿವಸವೇ ಸುದಿವಸ.

ನಮ್ಮಲ್ಲಿ ವಿದ್ಯಾವಂತರೆನ್ನಿಸುವವರೊಳಗೆ ಬಹುಪಾಲು ಜನರು ವಿದ್ಯಾರ್ಥಿದಶೆಯಲ್ಲಿ ಸಂಸ್ಕೃತವನ್ನು, ಅದು ಎಷ್ಟೇ ಸ್ವಲ್ಪವಾಗಲಿ, ಪರಿಚಯಮಾಡಿಕೊಳ್ಳು

ವಂತೆ ಸರ್ವಪ್ರಯತ್ನವನ್ನೂ ಮಾಡಬೇಕು. ಈಗ ಒಬ್ಬ ವಿದ್ಯಾರ್ಥಿಯು ನಾಲ್ಕನೆಯ ಫಾರಂಗೆ ಬಂದೊಡನೆಯೇ ಸಂಸ್ಕೃತದ ಅಥವಾ ತನ್ನ ದೇಶಭಾಷೆಯ ಸಂಪರ್ಕವೇ ಇಲ್ಲದಂತೆ ಆಗಿಬಿಡಬಹುದು. ಇದನ್ನು ನೋಡಿಕೊಂಡು ನಮ್ಮ ಹುಡುಗರ ವಿದ್ಯಾವ್ಯಾಸಂಗದಲ್ಲಿ ಆಸಕ್ತಿ ಇರುವವರು ಹೇಗೆ ಶಾಂತಚಿತ್ತರಾಗಿದ್ದಾರೋ ತಿಳಿಯದು. ನನಗೆ ಈಗ ಬರುತ್ತಿರುವಷ್ಟು ಸಂಸ್ಕೃತವೂ ಬರದಿದ್ದಿದ್ದರೆ ಹೇಗಿರುತ್ತಿತ್ತು ಎಂದು ಯೋಚಿಸಿದರೆ, ಜೀವನವು ಜೀವಿಸುವುದಕ್ಕೇ ಯೋಗ್ಯವಾಗುತ್ತಿರಲಿಲ್ಲವೆನ್ನಿಸುತ್ತದೆ.''

ನಮ್ಮ ದೇಶದಲ್ಲಿ ಸಂಸ್ಕೃತದ ಸ್ಥಿತಿ.

ಮ|| ಶಾಸ್ತ್ರಿಗಳು ಸ್ವದೇಶ ಪರದೇಶಗಳೆರಡರಲ್ಲಿಯೂ ಗಣನೀಯರಾಗಿದ್ದಾರೆ. ಅವರ ಮಾತಿಗೆ ಎಲ್ಲರೂ ಗೌರವ ಕೊಡುತ್ತಾರೆ. ಈ ವರ್ಷ, ಕಾಲೇಜು ವ್ಯಾಸಂಗವನ್ನು ಮುಗಿಸಿಕೊಂಡು ಪಟ್ಟಾಂಚಿತರಾಗಿ ಹೊರಟ ವಿದ್ಯಾರ್ಥಿಗಳಿಗೆ ಉಪದೇಶಮಾಡುವಂಥ ಘನಕಾರ್ಯವನ್ನು ನಮ್ಮ ವಿಶ್ವವಿದ್ಯಾನಿಲಯದವರು ಇವರಿಗೆ ಒಪ್ಪಿಸಿದ್ದೇ ಅವರಲ್ಲಿ ನಮ್ಮೆಲ್ಲರಿಗೂ ಗೌರವವನ್ನುಂಟುಮಾಡುವುದಕ್ಕೆ ಸಾಕಾದಷ್ಟು ಕಾರಣವಾಗಿದೆ. ಇಂಥವರು ಸರ್ವಜನಾಪೇಕ್ಷಣೀಯವಾದ ಸಂಸ್ಕೃತದ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಅದನ್ನು ನಾವು ಲಕ್ಷ್ಯಕೊಟ್ಟು ಗಮನಿಸಬೇಕೆಂದು ಹೇಳಬೇಕೆ? ಅವರು ಅಪ್ಪಣೆ ಕೊಡಿಸಿರುವ ವಿಚಾರವು ಮದ್ರಾಸಿಗೆ ಮಾತ್ರ ಸಂಬಂಧಪಟ್ಟಿರುವುದಿಲ್ಲ; ಪ್ರಕೃತದಲ್ಲಿ, ಅದನ್ನು ಮದ್ರಾಸಿನವರಿಗಿಂತ ಹೆಚ್ಚಾಗಿ ನಾವು—ಮೈಸೂರು ದೇಶದವರು—ಮನಸ್ಸಿಗೆ ತೆಗೆದುಕೊಳ್ಳಬೇಕಾಗಿದೆ. ನಮ್ಮ ಶ್ರೀಮನ್ಮಹಾರಾಜರವರು ತಮ್ಮ ಪೂರ್ವಿಕರ ಸ್ತೋತ್ರಾರ್ಹವಾದ ಮೇಲ್ಪಂಕ್ತಿಯನ್ನು ಅನುಸರಿಸಿ ಸಂಸ್ಕೃತವ್ಯಾಸಂಗಕ್ಕೆ ಪ್ರೋತ್ಸಾಹವನ್ನೂ ಸಂಸ್ಕೃತ ವಿದ್ವತ್ತಿಗೆ ಗೌರವವನ್ನೂ ಕೊಟ್ಟುಕೊಂಡು ಬರುತ್ತಿರುವುದರಿಂದ ನಮ್ಮ ಸಂಸ್ಥಾನದ—ಅಷ್ಟೇಕೆ, ದಕ್ಷಿಣ ಹಿಂದೂಸ್ಥಾನದ—ಅನೇಕ ಭಾಗಗಳಲ್ಲಿ ಇಲ್ಲಿಂದ ಪಾಂಡಿತ್ಯವನ್ನು ಸಂಪಾದಿಸಿ ಪಂಡಿತರಾಗಿ ಹೋಗಿ ತಮ್ಮ ಜ್ಞಾನಜ್ಯೋತಿಯಿಂದ ಪ್ರಕಾಶವನ್ನು ಬೀರುತ್ತಿರುವುದು ಕಂಡುಬರುತ್ತಿದೆ. ಇಂಥ ಹತ್ತಾರುಮಂದಿಗಳ ಮಾತನ್ನು ಬಿಟ್ಟು, ಮ|| ಶಾಸ್ತ್ರಿಗಳು ಪ್ರಸ್ತಾಪಿಸಿರುವಂತೆ ನಮ್ಮ ಇಂಗ್ಲಿಷ್ ಸ್ಕೂಲುಗಳಲ್ಲಿ ಓದುವ ಬಹುಜನ ವಿದ್ಯಾರ್ಥಿಗಳ ವಿಷಯವನ್ನು ಯೋಚನೆ ಮಾಡಿದರೆ ನಮ್ಮ ಸ್ಥಿತಿಯು ಮದ್ರಾಸಿನವರ ಸ್ಥಿತಿಗಿಂತ ಹೆಚ್ಚು ಶೋಚನೀಯವಾಗಿದೆ—ಅಥವಾ ಆಗುವಂತಿದೆ—ಎಂದು ಹೇಳಬಹುದು. ಈಗ, “ಇತೋಭ್ರಷ್ಟಸ್ತತೋಭ್ರಷ್ಟಃ”

ಎಂಬಂತೆ ಸಂಸ್ಕೃತ ಕನ್ನಡ ಎರಡೂ ಕೈಬಿಟ್ಟುಹೋಗುವಂತಾಗಿದೆ. ಒಂದುಕಡೆ--ವಿದ್ಯಾಭ್ಯಾಸದ ಇಲಾಖೆಯವರು ಕೆಳಗಣ (ಮಿಡಲ್) ಸ್ಕೂಲುಗಳಲ್ಲಿ ಸಂಸ್ಕೃತವನ್ನು ಐಚ್ಛಿಕಭಾಷೆಯನ್ನಾಗಿ ಮಾಡಿದರು. ಇದರಿಂದ ನೂರಾರು ಹುಡುಗರು ಓದುವ ಸ್ಕೂಲುಗಳಲ್ಲಿ ಸಂಸ್ಕೃತವನ್ನು ಓದುವ ಹುಡುಗರು ಒಬ್ಬಿಬ್ಬರೂ ಇಲ್ಲದಂತಾಗಿದೆ; ಇಲ್ಲಿಂದ ಕಲಿತುಕೊಂಡು ಮುಂದೆ ಹೋದರೆ ತಾನೇ ಹುಡುಗರು ಹೈಸ್ಕೂಲು ತರಗತಿಗಳಲ್ಲಿ ಸಂಸ್ಕೃತವನ್ನು ಓದುವುದು? ಆದ್ದರಿಂದ ಇನ್ನು ಸ್ವಲ್ಪ ಕಾಲದೊಳಗೆ ಹೈಸ್ಕೂಲಿನ ಸಂಸ್ಕೃತ ತರಗತಿಗಳಲ್ಲಿ ಪಂಡಿತರು ಬರಿಯ ಬೆಂಚುಗಳಿಗೆ ಪಾಠಹೇಳುವ ಅವಸ್ಥೆಗೆ ಬಂದು ಆ ಕಷ್ಟಸ್ಥಿತಿಯಿಂದ ನಿವೃತ್ತರಾಗುವ ಸ್ಥಿತಿಯೂ ಬರಬಹುದು. ಅಧ್ಯಯನ ಅಧ್ಯಾಪನಾದಿಗಳಲ್ಲಿ ಫಲಾಕಾಂಕ್ಷೆಯಿಲ್ಲದೆ ಕೇವಲ ಧರ್ಮವೆಂದು ಪ್ರವರ್ತಿಸುವ ಕಾಲವು ಹೋಗುತ್ತಿರುವುದರಿಂದ ಇತರ ಕಾರಣಗಳ ಜೊತೆಗೆ ಇದೂ ಸಹಾಯಮಾಡಿ ಸಂಸ್ಕೃತ ಪಾಠಶಾಲೆಗಳೂ ಬಡವಾಗಬಹುದು. ಹೀಗಾಗಿ ಯಾವುದು ಇಲ್ಲದಿದ್ದರೆ "ಜೀವನವು ಜೀವಿಸುವುದಕ್ಕೆ ಯೋಗ್ಯವೆನ್ನಿಸುವುದಿಲ್ಲ"ವೋ ಅಂಥ ಸಂಸ್ಕೃತವನ್ನು ಎಷ್ಟುಜನ ಓದುವರು? ಈಗ ನಿತ್ಯಕರ್ಮಾದಿಗಳನ್ನು ಇಟ್ಟುಕೊಂಡಿರುವವರು ಸಂಸ್ಕೃತ ಮಂತ್ರಗಳನ್ನೇ ಹೇಳುತ್ತಿದ್ದರೂ ಅವುಗಳ ಅರ್ಥವನ್ನು ತಿಳಿದುಕೊಂಡಿರಲೇಬೇಕೆಂಬ ನಿರ್ಬಂಧವೇನೂ ಇಲ್ಲದೆ ಇರುವುದರಿಂದ—ಈಗ ಪ್ರಾಕೃತವನ್ನು ಎಲ್ಲೋ ಸಾವಿರಕ್ಕೆ ಒಬ್ಬರು ವ್ಯಾಸಂಗಮಾಡುತ್ತಿರುವಂತೆ—ಮುಂದೂ ಭಾಷಾಶಾಸ್ತ್ರ, ಧರ್ಮಸಾದೃಶ್ಯ ಮುಂತಾದ ವಿಷಯಗಳಲ್ಲಿ ಹೆಚ್ಚು ಆಸಕ್ತರಾದ ಕೆಲವರು ಸಂಸ್ಕೃತವನ್ನು ವ್ಯಾಸಂಗ ಮಾಡಬಹುದು. ಇದು ಸ್ವಮತಸ್ಥಾಪನೆಗೋಸ್ಕರ ಹೇಳುವ ಅತಿಶಯೋಕ್ತಿಯಲ್ಲ. ನಮ್ಮ ಹಿಂದೆ ಇತ್ತೆಂದು ನಮ್ಮ ತಾಯಿತಂದೆಗಳು ವರ್ಣಿಸುತ್ತಿರುವ ಸ್ಥಿತಿಯನ್ನೂ, ನಮ್ಮ ಬಾಲ್ಯದಲ್ಲಿ ನಾವೇ ನೋಡಿದ ಸ್ಥಿತಿಯನ್ನೂ ಈಗಿನ ಸ್ಥಿತಿಯನ್ನೂ ಪರಿಶೀಲಿಸಿದರೆ—ಪಟ್ಟಣವಾಸಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಸಂಸ್ಕೃತಪಾಠ ಹೇಳುವವರೂ ಓದುವವರೂ ಕಡಿಮೆಯಾಗುತ್ತಹೋಗಿ ದೇಶವು ಕ್ರಮೇಣ ನೀರು ಬತ್ತಿಹೋಗುತ್ತಿರುವ ಕೆರೆಯ ಅಂಗಳದಂತೆ ಕಾಣುತ್ತಿದೆ. ಸಂಸ್ಕೃತವೂ ಅದರ ಶಾಸ್ತ್ರಗಳೂ ಪ್ರಾಚೀನ ಭಾರತೀಯರು ಸಂಪಾದನೆಮಾಡಿಟ್ಟು ಹೋಗಿರುವ ಆಸ್ತಿ; ನಾವು ಅದನ್ನು ಎಂದಿಗೆ ಕಳೆದುಕೊಂಡು ಅದಕ್ಕೂ—ಈಗಾಗಲೇ ಆರಂಭವಾಗಿರುವಂತೆ—"ಭವತಿ ಭಿಕ್ಷಾಂ ದೇಹಿ" ಎಂದು ಪಾಶ್ಚಾತ್ಯರ ಬಾಗಿಲಿಗೆ ಹೋಗಿ ನಿಲ್ಲುವೆವೋ ಅಲ್ಲಿಗೆ ನಮ್ಮ ಅಧಃಪತನವು ಪೂರ್ಣವಾಗುವುದು. ಇಷ್ಟುದೂರ ಯೋಚಿಸದಿದ್ದರೂ, ಸಂಸ್ಕೃತವ್ಯಾಸಂಗವು ಕಡಿಮೆಯಾಗುವುದು ಎಳೆಯಮಗುವಿಗೆ ತಾಯಿ

ಯ ಹಾಲು ಕಡಿಮೆಯಾದ ಹಾಗೆಂದು ಭಾವಿಸಿ ಸಂಸ್ಕೃತ ಪಠ್ಯಪುಸ್ತಕಗಳ ಉಪಸಭೆಯವರು ಈಗ ಎರಡುವರ್ಷಗಳಿಂದ ಸಂಸ್ಕೃತವನ್ನು ಸ್ಕೂಲುಗಳಲ್ಲಿ ಪುನಃ ದ್ವಿತೀಯಭಾಷೆಯಾಗಿ ಇರಿಸಬೇಕೆಂದು ಸಲಹೆಕೊಡುತ್ತಲೇ ಬಂದರು. ಲೋಕಲ್ ಎಗ್ಸ್ಸಾಮಿನೇಷರ್ಸ್ ಬೋರ್ಡಿನಲ್ಲಿಯೂ ಅದರ ಪ್ರಸ್ತಾಪ ಬಂದಿತ್ತು. ಆದರೂ ಫಲ ವೇನೂ ಆಗಲಿಲ್ಲ.

ಕನ್ನಡದ ಸ್ಥಿತಿ.

ಇದು ಒಂದು ಕಡೆ. ಮತ್ತೊಂದು ಕಡೆ ಮೈಸೂರು ವಿಶ್ವವಿದ್ಯಾನಿಲಯದ ನೂತನ ವ್ಯವಸ್ಥೆಯ ಪ್ರಕಾರ ಕನ್ನಡಕ್ಕೂ ಈ ಗತಿಯೇ ಬರಬೇಕಾಗಿದೆ. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಓದನ್ನು ನಿರ್ಬಂಧವಾಗಿ ಇರಿಸುತ್ತೇವೆಂದೂ ಅದು ಮೈಸೂರ ವಿಶ್ವವಿದ್ಯಾನಿಲಯದ ಅಸಾಧಾರಣ ಧರ್ಮವೆಂದೂ ಹೇಳಿಕೊಂಡು ಹೊರಟದ್ದೇನು ? ಪರಿಣಾಮದಲ್ಲಿ ಆಗು ತ್ತಿರುವುದೇನು ? ಪಂಚಪಾಂಡವರು ಮಂಚದ ಕಾಲಿನ ಹಾಗೆ ಮೂರುಜನ ಎಂದು ಹೇಳಿ ಎರಡು ತೋರಿಸಿ ಒಂದನ್ನು—ಅದು ಒಂದೂ ಅಲ್ಲ ಸೊನ್ನೆಯೂ ಅಲ್ಲ ಹಾಗೆ —ಬರೆಯುವಂತೆ ಆಗಿದೆಯಲ್ಲ! ಛಾನ್ಸೆಲರಾದ ನಮ್ಮ ಮಹಾರಾಜರವರು ಹಿಂದೆ ದೇಶಭಾಷಾವಾತ್ಸಲ್ಯದಿಂದಲೂ ದೂರದರ್ಶಿತೆಯಿಂದಲೂ ಕನ್ನಡದ ವ್ಯಾಸಂ ಗಕ್ಕೆ ಅಷ್ಟೊಂದು ಪ್ರಾಶಸ್ತ್ಯವನ್ನು ಕೊಡಬೇಕೆಂದು ಸೂಚಿಸಿ ಈ ವಿದ್ಯಾಪೀಠ ವನ್ನು ಪ್ರತಿಷ್ಠಿಸಿದರೂ ಘಟನಾಪ್ರವಾಹವು ಅದಕ್ಕೆ ಕೇವಲ ವಿರುದ್ಧವಾಗಿ ಹೋಗುತ್ತಿರುವುದು ಆಶ್ಚರ್ಯವಾಗಿದೆ. ನಮ್ಮ ವೈಸ್‌ಛಾನ್ಸೆಲರವರು ದೇಶಭಾ ಷಾವಾತ್ಸಲ್ಯಗಳಿಗೆ ತೌರೂರಾದ ಬಂಗಾಳಾದೇಶದವರು ; ಅವರಿಗೆ ಬಂಗಾಳಿಭಾಷೆ ಹೇಗೋ ನಮಗೆ ಕನ್ನಡ ಹಾಗೆ; ಇದನ್ನು ಅವರಿಗೆ ಯಾರಾದರೂ ಹೇಳಿಕೊಡ ಬೇಕೆ ? ಇಂಥ ಅಧಿಕಾರಿಗಳ ಕಾಲದಲ್ಲಿ—ವಿಶ್ವವಿದ್ಯಾನಿಲಯ ಪ್ರಾಸಾದದಲ್ಲಿ— ಕನ್ನಡಕ್ಕೆ ಕ್ಷಯರೋಗ ತಗಲುವುದುಂಟೇ ? ಎಂದಿಗೂ ಇಲ್ಲ. ಒಬ್ಬೊಬ್ಬರು ಒಂದೊಂದು ಕಾರಣವನ್ನಿಟ್ಟುಕೊಂಡು ಮನಸ್ಸಿದ್ದರೂ ಮಾತನಾಡದೆ ನಮ್ಮ ಬುಡಕ್ಕೆ ನಾವೇ ನೀರು ತಿದ್ದಿಕೊಳ್ಳುತ್ತಿದ್ದೇವೆ; ಪುನರ್ವ್ಯವಸ್ಥೆಯ ಸಭೆಯಲ್ಲಿದ್ದ ವರು ನಮ್ಮವರೇ; ಈ ಆತ್ಮಹತ್ಯಸದೃಶವಾದ ತೀರ್ಮಾನವನ್ನು ಮಾಡಿದವರು ನಮ್ಮವರೇ. ನಾಳೆ ಆದನ್ನು ಸೆನೇಟ್ ಸಭೆಯಲ್ಲಿ ಕೈಯೆತ್ತಿ ಆಶೀರ್ವದಿಸಿ ಚಿರಜೀವಿ ಯಾಗಿ ಮಾಡುವವರೂ ಅವರೇ. ನಾವು ಕೇಳಿರುವಮಟ್ಟಿಗೆ ಸೆನೇಟ್ ಸಭಿಕರು ಕನ್ನಡದ ಪರವಾಗಿ ವಾದಿಸಿದರೆ ವೈಸ್‌ಛಾನ್ಸೆಲರವರು ಅವರಿಗೆ ವಿರುದ್ಧವಾಗಿ ಹೋಗುವಹಾಗಿಲ್ಲ. ಆದರೆ ಇದು ಬೆಕ್ಕಿಗೆ ಗಂಟೆಕಟ್ಟುವಂಥ ಕೆಲಸ; ಎಲ್ಲ ಇಲಿ

ಗಳಿಗೂ ಬೆಕ್ಕಿನಮೇಲೆ ಕಣ್ಣು. ಆದರೂ ಒಂದೊಂದೂ ಒಂದೊಂದು ನೆವಹೇಳಿ ತಪ್ಪಿಸಿಕೊಳ್ಳುತ್ತದೆ. ಕ್ಷಯರೋಗವು ಬಂದು ಸೇರುವಾಗ ಅದು ಅದೃಶ್ಯವಾಗಿ ಬರುತ್ತದೆ; ಖಾಯಿಲೆಯು ಬಂದುನಿಂತು ಕೆಲಸವು ಎಡವಟ್ಟಾದರೆ ಅದನ್ನು ತಿದ್ದುವುದು ಕಷ್ಟವಾದೀತು. ಹಿಂದಿನ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಬದಲಾಯಿಸುವುದಕ್ಕೆ ಹೋಗಿ ಅದು ಈಗ ಹಳಸಿದ ಹಿಟ್ಟಿನಂತಾಗಿದೆ; ಅದಕ್ಕೆ ಪ್ರತಿನಿತ್ಯವೂ ಒಂದೊಂದು ಮಸಾಲೆಯನ್ನು ಬೆರಸುತ್ತಲೇ ಇದೆ; ಆದರೇನು, ಇದರಿಂದ ಅಡಿಗೆ ಮಾಡುವವರಿಗೆ ಸುಖವಿಲ್ಲ; ಊಟಮಾಡುವವರಿಗೆ ಹಿತವಿಲ್ಲ. ಕನ್ನಡದ ವಿಚಾರವೂ ಮುಂದೆ ಹೀಗಾದೀತು ಎಂದು ನಮಗೆ ಭಯ. ಈಗಲೇ ಕನ್ನಡ ಓದುವವರಿಲ್ಲದೆ ಕನ್ನಡಸಾಹಿತ್ಯದ ದಾರಿಯಲ್ಲಿ ಕಾಡುಕೊಂಟುಗಳನ್ನು ಏರಿಸಿಟ್ಟಂತಾಗಿದೆ; ಮುಂದೆ ಕನ್ನಡ ಓದುಬರಹಗಳನ್ನು ಬಲ್ಲವರು ಇನ್ನೂ ಕಡಿಮೆಯಾದರೆ ನಮ್ಮ ಮೈಸೂರು ದೇಶವು "ಮಕ್ಕಳಿಲ್ಲ ಮರಿಯಿಲ್ಲ, ಹೆಸರು ತಾಯಮ್ಮ" ಎಂಬಂತೆ "ಕನ್ನಡ ಓದುವವರಿಲ್ಲ ಬರೆಯುವವರಿಲ್ಲ ಹೆಸರು ಕನ್ನಡದೇಶ" ಎನ್ನುವ ಹಾಗಾಗುತ್ತದೆ. ಮೈಸೂರುದೇಶವು ಕನ್ನಡದೇಶದ ಮಧ್ಯದಲ್ಲಿದೆ, ಆದರ ಜಾತಿಯು ಶುದ್ಧವಾಗಿದೆ, ಸಂಕರವಿಲ್ಲ ಎಂದು ನಾವು ಹೇಳಿಕೊಳ್ಳುತ್ತಿರುವುದು ಬರಿಯ ಬಣ ಹೆಮ್ಮೆಯಾಗುತ್ತದೆ. ತಾಯಿಯ ಹಾಲು ಸಾಲದೆ ಮಗುವಿಗೆ ಹುಯ್ಯುವ ಹಾಲು ಕುಡಿಸುತ್ತಿರುವಾಗ, ಇರುವ ಸ್ತನ್ಯವನ್ನೂ ಬಿಡಿಸಿ ಮಗುವನ್ನು ಉಪವಾಸ ಕೆಡವುವವರುಂಟೇ? ಆದ್ದರಿಂದ ಈ ವಿಚಾರದಲ್ಲಿ ಬಾಯಿ ನಡೆಯತಕ್ಕ ಪ್ರತಿಯೊಬ್ಬರೂ, ನಮ್ಮ ಜನಗಳಲ್ಲಿ ಸಾಮಾನ್ಯವಾಗಿ ಸ್ವಭಾವಸಿದ್ಧವಾಗಿ ಬಂದಿರಬಹುದಾದ ಔದಾಸೀನ್ಯವನ್ನು ಬಿಟ್ಟು, ಯಾವ ಯಾವುದೋ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಲೆಕ್ಕಾಚಾರ ಮಾಡುತ್ತ ಹಿಂದೆಮುಂದೆ ನೋಡಿ "ಹೋದರೆ ಹೋಗಲಿ" ಎಂದು ಉಪೇಕ್ಷೆಮಾಡುವುದನ್ನು ಬಿಟ್ಟು ಕನ್ನಡವು ಬಲಿಯುವುದಕ್ಕೆ ತಕ್ಕ ಏರ್ಪಾಟನ್ನು ಮಾಡಿಸುವರೆಂದು ಭಾವಿಸುತ್ತೇವೆ.

ಈ ವಿಚಾರದಲ್ಲಿ ಆಸಕ್ತಿವಹಿಸಬೇಕಾದವರು ಕೇವಲ ಮೈಸೂರುದೇಶಿಯರೇ ಅಲ್ಲ; ಇದನ್ನು ಕರ್ಣಾಟಕದ ಸಕಲಭಾಗಗಳವರೂ ಯೋಚಿಸಿ, ಮಾಡತಕ್ಕದ್ದನ್ನು ಮಾಡಬೇಕಾಗಿದೆ. ಈಗ ಕರ್ಣಾಟಕಕ್ಕೆಲ್ಲಾ ಒಂದು ವಿಶ್ವವಿದ್ಯಾಲಯವು ಬೇಕೆಂದೂ ಅದು ಮೈಸೂರು ವಿಶ್ವವಿದ್ಯಾನಿಲಯವೇ ಏಕೆ ಆಗಬಾರದೆಂದೂ ವಿಚಾರವು ನಡೆಯುತ್ತಿದೆಯಷ್ಟೆ; ಅದರ ಸಾಧ್ಯಾಸಾಧ್ಯತೆಯು ಹೇಗಾದರೂ ಇರಲಿ; ಒಂದುವೇಳೆ ಸಾಧ್ಯವಾಗಿ, ಅಷ್ಟುಹೊತ್ತಿಗೆ ನಮ್ಮಲ್ಲಿ ಕನ್ನಡವು ಗಗನಕುಸುಮವಾಗಿ, ಇತರ ಪ್ರಾಂತಗಳ ಕರ್ಣಾಟಕರು ನಮ್ಮ ವಿಶ್ವವಿದ್ಯಾನಿಲಯದೊಳಕ್ಕೆ ಹಸಿದು


ಬಂದರೆ ಗೋಕುಲಾಷ್ಟಮಿಯೂ ಶಿವರಾತ್ರಿಯ ಮನೆಗೆ ಊಟಕ್ಕೆ ಹೋದಹಾಗಾಗುವುದಿಲ್ಲವೇ ?

ಕನ್ನಡವನ್ನು ಐಚ್ಛಿಕವಾಗಿಮಾಡಿ ಅದಕ್ಕೆ ಹೆಚ್ಚುಪ್ರಾಶಸ್ತ್ಯವನ್ನು ಕೊಟ್ಟಿದ್ದೇವೆನ್ನಬಹುದು ; ಇದು ಖಂಡೇರಾಯನನ್ನು ಗಿಣಿಯಹಾಗೆ ಸಾಕಿದಂತೆಯೇ ಹೊರತು ಮತ್ತೆಬೇರೆ ಅಲ್ಲ ; ಈ ಅಂಶಕ್ಕೆ ಪ್ರಾಮಾಣ್ಯವನ್ನು ಒದಗಿಸುವುದಕ್ಕಾಗಿಯೇ ಮ|| ಶಾಸ್ತ್ರಿಗಳ ಬೆಂಬಲವನ್ನು ಇಟ್ಟುಕೊಂಡು ಈ ಗೋಳಾಟವನ್ನು ಮೊದಲುಮಾಡಿದ್ದು.

ಕನ್ನಡಕ್ಕೆ ಪ್ರಾಶಸ್ತ್ಯ ಕೊಡಲು ಇರುವ ಒಂದು ಮುಖ್ಯವಾದ ಅಡ್ಡಿ ಯಾವುದೆಂದರೆ—" ಮೈಸೂರು ದೇಶದಲ್ಲಿ ಇಷ್ಟೊಂದು ಭಾಷೆಗಳಿವೆಯಲ್ಲ ಇವುಗಳಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ, ಇವು ಮೂಲೆಗೆ ಬಿದ್ದುಹೋಗುವುದಿಲ್ಲವೇ " ಎಂದು ಆಕ್ಷೇಪಿಸುತ್ತಿರುವವರ ಕೂಗು;—ಹೊಟ್ಟೆಯಲ್ಲಿ ಹುಟ್ಟಿ ಹೆಸರು ಹೇಳುವ ಮಗನಿಗೆ ಅನ್ನ ಹಾಕಬೇಕಾದರೆ ಭಿಕ್ಷಾನ್ನದ ಹುಡುಗರಿಗೆಲ್ಲಾ ಹೊಟ್ಟೆ ತುಂಬಿದೆಯೇ ಇಲ್ಲವೇ ಎಂದು ವಿಚಾರಮಾಡುವಂಥ ಪ್ರಕರಣ. " ಸರ್ವೇಜನಾಸ್ಸುಖಿನೋ ಭವಂತು " ಎಂಬ ಪಾರಮಾರ್ಥಿಕ ಬುದ್ಧಿಯು ಸ್ತುತ್ಯವಾದದ್ದೇ ! ಆದರೆ ಕನ್ನಡ ದೇಶದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದೆ ಹೋದರೆ ಮೆಕ್ಸಿಕೋ ದೇಶದವರೋ ನ್ಯೂಜೀಲ್ಯಾಂಡ್‌ನವರೋ ಕೊಡುತ್ತಾರೆಯೇ ? ಅಲ್ಲದೆ ಎಷ್ಟು ದೇಶ ಭಾಷೆಗಳಿಗಾದರೂ ಏಕೆ ಪ್ರಾಶಸ್ತ್ಯಕೊಡಬೇಕು ? ಈಗ ಮೈಸೂರು ದೇಶದಲ್ಲಿ—ಅವರವರ ಮನೆಯಮಾತು ಯಾವುದಾದರೂ ಆಗಿರಲಿ—ಕನ್ನಡವನ್ನು ಅರಿಯದವರು ಎಷ್ಟು ಜನರಿದ್ದಾರೆ? ಬಹುಸ್ವಲ್ಪ. ನಮ್ಮ ದೇಶದಲ್ಲಿ ಎಲ್ಲರೂ ಕನ್ನಡವನ್ನು ಕಲಿಯಬೇಕೆಂದು ನಿರ್ಬಂಧಪಡಿಸಿದರೆ ಇಂಥವರ ಮಕ್ಕಳು ಮೊದಲಿಂದ ಕನ್ನಡವನ್ನೇ ಆರಂಭಿಸುತ್ತಾರೆ. ಬೇಕಾದರೆ, ಇಂಥವರೆಲ್ಲರೂ ತಕ್ಕಷ್ಟು ಕನ್ನಡವನ್ನು ಕಲಿಯಲು ಸಾಕಾದಷ್ಟು ಅವಕಾಶಕೊಟ್ಟು ೧೯೩೩ನೇ ಇಸವಿಯಿಂದ ಕನ್ನಡವನ್ನು ನಿರ್ಬಂಧವಾಗಿ ಎಲ್ಲರೂ ಓದಬೇಕು ಎಂದು ವಿಧಿಸಬಹುದು. ಇದರಿಂದ ನಮ್ಮ ದೇಶದ ತಮಿಳರೂ ತೆಲುಗರೂ ತಮ್ಮ ಮಾತನ್ನೇನು ಮರೆಯುವುದಿಲ್ಲ; ತಮ್ಮ ಮಾತಿನ ಮೇಲೆ ಅಷ್ಟು ಮಮತೆಯಿದ್ದರೆ ಮನೆಯಲ್ಲಿಯೇ ಹೆಚ್ಚಾಗಿ ಓದಿಕೊಳ್ಳುತ್ತಾರೆ; ಸಾಲದಿದ್ದರೆ ತಮಿಳು ವಿಶ್ವವಿದ್ಯಾಲಯವನ್ನೋ ಆಂಧ್ರ ವಿಶ್ವವಿದ್ಯಾಲಯವನ್ನೋ ಆಶ್ರಯಿಸುತ್ತಾರೆ ! ಇಲ್ಲದಿದ್ದರೆ ಇವರ ಭಾಷೆಗಳನ್ನು ಐಚ್ಛಿಕವಾಗಿಡೋಣ ; ಅಂಥ ಆಸಕ್ತಿ ಇರುವವರು ಅವುಗಳನ್ನು ತೆಗೆದುಕೊಂಡು ಪಂಡಿತರಾಗಲಿ ! ಭಾಷಾವ್ಯವಸ್ಥೆಯನ್ನನುಸರಿಸಿ ಹೊಸಹೊಸ ವಿದ್ಯಾಪೀಠಗಳು ಹುಟ್ಟುತ್ತಿರುವಾಗ ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದಿದ್ದರೆ ಅಸ್ವಾಭಾವಿಕವೂ ದೇಶಕಾಲವಿರುದ್ಧವೂ ಆಗುತ್ತದೆ.

ಕಳೆಕೀಳದಿದ್ದರೆ ಪೈರು ಹೇಗೆ ಬೆಳೆದೀತು ?

V. Sitaramaiah



ಮಾಟಗಾರ.

(೧)

ಮಾಟಗಾರನೆ ನಿನ್ನ ಮಾಟಂಗಳಿನಿಸಿರಲು
ಪಿರಿದಿದೆನುತರಿವುದೆಂತೋ |
ಕೋಟಿ ಬೆರಗುಗಳೆನ್ನ ಮರುಳುವಡಿಸಲದೊಂದ
ಮಿಗಿಲೆನುತ ಬಗೆವುದೆಂತೋ ||

ಒಡಲ ತಣಿಪುದೆ ಪಿರಿದೊ ಮನವನಲೆಪುದೆ ಪಿರಿದೊ
ಮತಿಯ ತೊಳೆಯಿವುದೆ ಪಿರಿದೋ |
ಪೊಡವಿಯೊಳು ಬೆಳೆದಿಹುದೊ ಬಾಂದಳದಿ ಬೆಳಗಿಹುದೊ
ಜೀವಿಗಳೊಳಾಡುತಿಹುದೋ ||

ಪೊಂಬಿಸಿಲೊ ತಂಬೆಲರೊ ತಾರಗೆಯೊ ಕಾರಿರುಳೊ
ಸುರಿಮಳೆಯೊ ಸುಳಿವ ಮುಗಿಲೋ |
ಪೊನಲ ತೆರೆಗಳ ಪೆಂಪೊ ಬನದ ಪೂಗಳ ಕಂಪೊ
ಪಕ್ಕಿಗಳ ಪಾಡಿನಿಂಪೋ ||

ಪಸುಳೆಗಳ ಪೊಸನುಡಿಯೊ ಮುಗುದೆಯರ ಮೆಲುನಡೆಯೊ
ಕಲಿತರೋದುಗಳ ಪಡೆಯೋ |
ಚೆಂದುಟಿಯೊ ಸುಣ್ದನಿಯೊ ಕಂಬನಿಯೊ ಕಿರುನಗೆಯೊ
ಪಿರಿಯರರಿವಿನ ನಲುಮೆಯೋ ||

(೨)

ಮಲೆಯ ಸಾಲಿನ ಬಲುಹೊ ಕಡಲಿನಲೆಗಳ ಸೆಡಕೊ
ಸಿಡಿಲು ಮಿಂಚುಗಳ ಬೆಡಗೋ |
ಚೆಂದಳಿರೊ ತಣ್ಗದಿರೊ ಪಸಿರೆಲೆಯೊ ಬಿಸಿಬೆಳಕೊ
ನಸುಮರಲೊ ಮುಸುರ್ವ ನೆರಲೋ ||

ಚೆಲುವೊಗದ ಪುಸಿಮುನಿಸೊ ನಲುಮೆನೋಟದ ಮಿನಿಸೊ
ಬಲುಮೆಯುಬ್ಬರದ ಸೆಣಸೋ |
ನಲಿದು ಕುಣಿದಾಡುವುದೊ ಮುಳಿದು ಪರಿದೋಡುವುದೊ
ಅಲುಗದುಲಿಯದೆ ಬಾಳ್ವುದೋ ||

ಇಳೆಯ ಮೈಸಿರಿ ಪಿರಿದೊ ಗಗನದೈಸಿರಿ ಪಿರಿದೊ
ನರನ ಮಾನಸವೆ ಪಿರಿದೋ |
ತಿಳಿಯಲರಿಯದು ಮತಿಯು ತಿಳಿಯದಿರ್ದೊಡದೇನು
ಪಿರಿದು ಕಿರಿದುಗಳಾವುವೊ ||

ಗಳಿಗೆಯೊಂದರಲೊಂದು ತಿಳಿಪುತಿದೆ ನಿನ್ನೊಂದು
ಬೆರಲ ಮಾಳ್ಕೆಗಳನೆನಗೆ |
ಚಿತ್ರಗರ ಚಿತ್ರಗನೆ ಕವಿವರರ ಕವಿವರನೆ
ಸೊಗಸುಗಳ ಸೊಗದ ನೆಲೆಯೇ ||

ಡಿ. ವಿ. ಜಿ.

ನಂದಳಿಕೆ ಲಕ್ಷ್ಮೀನಾರಣಪ್ಪನವರು.

(ಮ|| ಮಳಲಿ ಸುಬ್ಬರಾಯರಿಂದ.)

ನಂದಳಿಕೆ ಲಕ್ಷ್ಮೀನಾರಣಪ್ಪನವರ ಕೃತಿಗಳ ವಿಷಯವಾಗಿ ಕಾವ್ಯರಸಜ್ಞರಾದ ಪಂಡಿತರನೇಕರು ವಿಮರ್ಶಪೂರ್ವಕವಾದ ಉಲ್ಲೇಖಗಳನ್ನು ಬೇರೆಕಡೆಯಲ್ಲಿ ಬರೆದಿರುವುದರಿಂದ ತದ್ವಿಷಯಪ್ರಸ್ತಾಪವನ್ನುಳಿದು, ನಮ್ಮಿಬ್ಬರ ಮೈತ್ರಿಯನಂತರದ ಅವರ ಸಾರಾಂಶವಾದ ಜೀವನಚರಿತ್ರ ವಿದ್ಯಾಸಂಗ್ರಹದ ಪರಿಸ್ಥಿತಿ ಇತ್ಯಾದಿ ಕೆಲವು ವಿಷಯಗಳನ್ನು ಮಾತ್ರ ಉದ್ದೇಶಿಸಿ ನನ್ನ ಅನುಭವದ ಮಟ್ಟಿಗೆ ಸಂಕೋಚರೀತ್ಯಾ ಬರೆಯುವೆನು.—

ಲಕ್ಷ್ಮೀನಾರಣಪ್ಪನವರು ಉಡುಪಿಯ ಬೋರ್ಡ್‌ಶಾಲೆಯ ವ್ಯಾಯಾಮೋಪಾಧ್ಯಾಯರಾಗಿ ಬಂದ ಸಮಯದಲ್ಲಿ ಇವರಲ್ಲಿದ್ದ ಕಾವ್ಯಪರಿಶ್ರಮವು ನಂದಳಿಕೆಯ ಮೂಲಪಾಠಶಾಲೆ (Primary School) ಯಲ್ಲಿ ಕಲಿತ ಕಾವ್ಯಪುಂಜ, ಮತ್ತು ಹಳ್ಳಿಯೂರುಗಳಲ್ಲಿ ನಿತ್ಯಪ್ರಚಾರದಲ್ಲಿರುವ ಯಕ್ಷಗಾನ ಕೃತಿಗಳ ಅರ್ಥಪ್ರವಚನ ಇಷ್ಟರಮಟ್ಟಿನದೇ. ಇದೇ ಉಡುಪಿ ಶಾಲೆಯಲ್ಲೇ ನಮ್ಮಿಬ್ಬರ ಮೈತ್ರಿಯಾರಂಭವು. ಕೆಲವು ಯಕ್ಷಗಾನಕೃತಿಗಳನ್ನೂ ಮರಾಟಿ ನಾಟಕಗಳನ್ನೂ ನಾನು ರಚಿಸಿರುವ ವಿಷಯವನ್ನು ಇವರು ಕೇಳಿದ್ದರಂತೆ. ಆದ್ದರಿಂದ ನೂತನವಾಗಿ ರಚಿಸಿದ ಯಕ್ಷಗಾನ ಪ್ರಸಂಗಗಳು ಇದ್ದರೆ ತಮಗೆ ನೋಡಲಿಕ್ಕೆ ಬೇಕಾಗಿ ಅವರು ಅಪೇಕ್ಷಿಸಿದರು. ರಾಮಾಶ್ವಮೇಧದಲ್ಲಿಯ ವೀರಮಣಿಕಾಳಗ, ಭಾರತದಲ್ಲಿಯ ಕಚೋಪಾಖ್ಯಾನ, ದೇವಯಾನಿಸ್ವಯಂವರ, ಶಕುಂತಲಾಸ್ವಯಂವರ ಮೊದಲಾದ ನೂತನ ಪ್ರಸಂಗಗಳನ್ನು ಕೊಂಡುಹೋಗಿ ಓದಿನೋಡಿದರು. 'ತಮಗೂ ಯಕ್ಷಗಾನ ಕೃತಿಗಳನ್ನು ಬರೆಯಬೇಕೆಂಬ ಕುತೂಹಲವಿದೆ, ಪ್ರಚಾರದಲ್ಲಿಲ್ಲದ ಹೊಸ ಕಥಾನಕಗಳಿದ್ದರೆ ತಿಳಿಸಬೇಕು.'—ಎನಲು, ಸಂಸ್ಕೃತ ರತ್ನಾವಲೀನಾಟಕದ ಕಥಾನಕವನ್ನು ಹೇಳಿ ಬರೆಸಿದೆನು. ಇದನ್ನು 'ರತ್ನಾವತೀ ಕಲ್ಯಾಣ' ವೆಂಬ ಹೆಸರಿಂದೊಂದು ಯಕ್ಷಗಾನ

ಪ್ರಸಂಗವಾಗಿ ಬರೆಯತೊಡಗಿದರು. ಆದರೆ, 'ರಾಗ-ತಾಳ-ಧಾಟಿಗಳನ್ನು ಎಂದರೆ ಅವನ್ನು ಹಾಡುವ ಬಗೆಯನ್ನು ನಾನರಿಯೆ; ಇತರ ಪ್ರಸಂಗಗಳ ಧಾಟಿಗಳನ್ನನುಸರಿಸಿ ಬರೆಯುವೆನು. ಇದಕ್ಕಾದರೂ ತಮ್ಮ ಸಹಾಯವು ಅಗತ್ಯವಿದೆ' ಎಂದರು. ಸಂಸ್ಕೃತಜ್ಞಾನವು ಬಹಳ ಕೊಂಚವಾದುದರಿಂದ ನಾಂದೀಶ್ಲೋಕವನ್ನು ಒಂದೆರಡು ಬಾರಿ ಬರೆದರೂ ಸರಿಯಾಗದುದರಿಂದ ನಾನೇ ಮಾಡಿಕೊಟ್ಟೆನು. ಮುಂದಿನ ಕಥಾಸರಣಿಯನ್ನೂ ಇತರ ಧಾಟಿಗಳನ್ನನುಸರಿಸಿ ಪದ್ಯಗಳನ್ನೂ ರಚಿಸಿ ಆಗಾಗ ಬರೆದಂಶವನ್ನು ವಿಮರ್ಶೆಗೊಳಿಸಿ ಹೇಗೋ ಅದನ್ನು ಕೊನೆಗಾಣಿಸಿದರು.

ಆದಾದಮೇಲೆ ಸ್ಕಾಂದಪುರಾಣದಲ್ಲಿನ ಷಣ್ಮುಖಚರಿತ್ರೆಯನ್ನು "ಕುಮಾರವಿಜಯ" ಎಂಬ ಹೆಸರಿಂದ ಬರೆಯಲಾರಂಭಿಸಿದರು. ಇದನ್ನು ಬರೆಯುವಾಗ ಶಾಲೆಯ ಮೇಲ್ದರ್ಜೆಗಳಲ್ಲಿ ಕಲಿಸುತ್ತಿದ್ದ ಹಿಂದಿನ ವರ್ಷಗಳ ಮೆಟ್ರಿಕ್ಯುಲೇಶನ್ ಪರೀಕ್ಷೆಯ ಪಠ್ಯಪುಸ್ತಕಗಳನ್ನೂ ನಿತ್ಯವೂ ಶಾಲೆಯ ಅವಕಾಶಸಮಯದಲ್ಲಿ ಕಾದಂಬರಿಗಳನ್ನೂ ಓದುತ್ತಿದ್ದ ಅಭ್ಯಾಸಬಲದಿಂದ ಪರಿಪಕ್ವವಾದ ಶಾಬ್ದಿಕಜ್ಞಾನದಿಂದ ಈ ಎರಡನೆಯ ಕೃತಿಯು ಮೊದಲಿನದಕ್ಕಿಂತ ಉತ್ತಮರಚನೆಯುಳ್ಳುದೂ ಇವರ ಇಚ್ಛೆಯಂತೆ ಒದಗಿಸಿಕೊಟ್ಟ ಕನ್ನಡ ನಾಟಕಗಳಲ್ಲಿನ ಮತ್ತು ದಕ್ಷಿಣಾದಿ ಪದ್ಯಗಳ ಹೊಸಧಾಟಿಗಳ ಸಮಾವೇಶದಿಂದ ಹೆಚ್ಚಿನ ಸೊಗಸುಳ್ಳುದೂ ಆಯಿತು. ಇವೆರಡನ್ನೂ ಛಾಪಿಸಿದರು. ರತ್ನಾವತೀ ಕಲ್ಯಾಣವು ಕೆಲವು ಕಡೆಗಳಲ್ಲಿ ರಂಗಭೂಮಿಯಲ್ಲಿ ನಟಿಸಲಾಯಿತು. ಕುಮಾರವಿಜಯವಾದರೊ ನೂತನ ಧಾಟಿಗಳಿದ್ದುದರಿಂದ ಹಾಡುವವರಿಗೆ ದುಸ್ಸಾಧ್ಯವೂ ನಟವರ್ಗಕ್ಕೆ ಅನ್ವಯಿಸಲಿಕ್ಕೆ ಬಿರುಸೂ ತೋರಿ ರಂಗಭೂಮಿಯನ್ನು ಪ್ರವೇಶಿಸಲೇ ಇಲ್ಲ. ಇಷ್ಟರಲ್ಲಿ ನಾನು ಕುಂದಾಪುರ ಶಾಲೆಗೆ ವರ್ಗಪಟ್ಟುದರಿಂದುಂಟಾದ ಮಿತ್ರವಿಯೋಗವು ಇಬ್ಬರಿಗೂ ದುಸ್ಸಹವಾದರೂ ನಮ್ಮೊಳಗೆ ಪತ್ರವ್ಯವಹಾರವು ನಡೆಯುತ್ತಲಿತ್ತು.

ಮಿತ್ರರೊಡನೆ ಮಾತಾಡುವಲ್ಲಿ ದೈನ್ಯಭಾವವೂ ಮಂದಸ್ಮಿತ ಮಧುರಭಾಷಣವೂ ಭಾಷಣದಲ್ಲಿ ದೃಷ್ಟಪದಾರ್ಥಗಳಲ್ಲಿ ಅಂತಸ್ಥಿತವಾದ ಕವಿಕಲ್ಪನೋದ್ಗಾರಗಳೂ ಹಾಸ್ಯೋತ್ಪಾದಕ ಪ್ರಣಯ ವಿನೋದೋಕ್ತಿಗಳೂ ತುಂಬಿದ್ದುದರಿಂದ ಇವರೊಡನೆ ಬರೇ ಭಾಷಣವಾದರೂ ಪ್ರಿಯವಾಗಿತ್ತು.

ದೈವವಶಾತ್ ಕೆಲವು ತಿಂಗಳಲ್ಲೇ ಕುಂದಾಪುರಶಾಲೆಯಲ್ಲಿ ವ್ಯಾಯಾಮೋಪಾಧ್ಯಾಯಸ್ಥಾನವು ಖಾಲಿಬಿತ್ತು. ಅದಕ್ಕಿವರು ಮಾಡಿದ ಅರ್ಜಿಯು ಫಲಪ್ರದವಾಗಿ ಕುಂದಾಪುರ ಶಾಲೆಗೆ ವರ್ಗಹೊಂದಿದುದರಿಂದ ಪುನಃ ನಮ್ಮ ಸಮ್ಮೇಲನವಾಯಿತು. ಈ ಕಾಲದಲ್ಲಿ ಇವರಲ್ಲಿದ್ದ ಯಕ್ಷಗಾನಕೃತಿಗಳ ಅಭಿರುಚಿಯು ಕುಂದಿ ಅಡಗಿಹೋಗಿತ್ತು. ಗದ್ಯಪದ್ಯರಚನೆಯ ಲವಲವಿಕೆಯು ಇವರುಕ್ತಿಗಳಲ್ಲಿ ಉಕ್ಕಿಬರುತ್ತಲಿತ್ತು. ಈ ಸಂದರ್ಭದಲ್ಲಿ ನನ್ನಲ್ಲಿದ್ದ ಪುಸ್ತಕಸಂಗ್ರಹವನ್ನು ನೋಡಬೇಕೆಂದು ಇವರು ಆತುರಪಟ್ಟು ಅಪೇಕ್ಷಿಸಿ ಎರಡು ಮೂರು ವರ್ಷದಿಂದ ಮೈಸೂರಿನಲ್ಲಿ ಪ್ರಕಟಿಸುತ್ತಿದ್ದ ಕಾವ್ಯಮಂಜರಿ ಆಫೀಸಿನ ಮಾಸಿಕ ಪತ್ರಗಳಿಗೆ ಚಂದಾದಾರನಾಗಿದ್ದು ತರಿಸಿದ್ದ ಮಾಸಿಕ ಸಂಚಿಕೆಗಳು-ಕನ್ನಡ ಕಾದಂಬರಿಗಳು-ನಾಟಕ ಪುಸ್ತಕಗಳು-ಅಪೂರ್ವ ಸಂಸ್ಕೃತ ಗ್ರಂಥಗಳು-ಶಬ್ದಮಣಿದರ್ಪಣ ಮುಂತಾದ ಹಳಗನ್ನಡ ವ್ಯಾಕರಣಗಳು-ಹಲಧರ ಮುಂತಾದ ನಿಘಂಟುಗಳು ಇವೇ ಮೊದಲಾದ ವಿವಿಧಪುಸ್ತಕಗಳ ಸಂಗ್ರಹವನ್ನು ನೋಡಿ ಸಂತೋಷಪಟ್ಟು ಕನ್ನಡ ಪುಸ್ತಕಗಳನ್ನೊಂದೊಂದಾಗಿ ತಕ್ಕೊಂಡು ಶಾಲೆಯಲ್ಲಿ ದೊರೆತ ಅವಕಾಶಸಮಯದಲ್ಲಿ ಕಿಟ್ಟಲ್ ಡಿಕ್ಷನೆರಿ ಎಂಬ ನಿಘಂಟಿನ ಸಹಾಯದಿಂದ ಅಭ್ಯಾಸಮಾಡತೊಡಗಿದರು. ಇವರಿಗೆ ಹಳಗನ್ನಡದಲ್ಲಿ ಅತಿಶಯಪ್ರೀತಿ ಇದ್ದುದರಿಂದ ಶಬ್ದಮಣಿದರ್ಪಣ-ಕಬ್ಬಿಗರ ಕೈಪಿಡಿ-ಹಳಗನ್ನಡ ವ್ಯಾಕರಣಸೂತ್ರಗಳು-ಮುಂತಾದವುಗಳನ್ನು ಓದುತ್ತ ಹಳಗನ್ನಡ-ಅಪಭ್ರಂಶಪದಗಳನ್ನು ಕೂಡಿಹಾಕಿ ಗುರುತುಮಾಡಿಕೊಳ್ಳ

ವುದು ಇವರ ನಿತ್ಯನಿಯಮವು ; ಶಬ್ದಮಣಿದರ್ಪಣ ಮುಂತಾದ ವ್ಯಾಕರಣಗಳು ನಿತ್ಯದ ಪಾರಾಯಣಪುಸ್ತಕಗಳು ; ನಿರಂತರವಾದ ಅಭ್ಯಾಸವು ಔಪಾಸನೆಯು ; ಹಳಗನ್ನಡಭಾಷಾವಾಗ್ದೇವಿಯೇ ಇಷ್ಟದೇವತೆ, ಇವುಗಳಲ್ಲಿ ಅತ್ಯಾಸಕ್ತಿಯೇ ದೃಢಭಕ್ತಿ; ಇವರ ಇಂತಹ ಏಕಾಗ್ರವಾದ ತಪಸ್ಸಾಧನೆಗೆ ಸಂತುಷ್ಟಳಾದ ಈ ದೇವತೆಯು ಪ್ರಸನ್ನಚಿತ್ತಳಾಗಿ ಹಳಗನ್ನಡದ ನೂತನ ಭಾಷಾಶೈಲಿಯನ್ನು ವರಪ್ರದಾನವಾಗಿತ್ತಳೊ-ಎಂಬಂತೆ ಇವರ ನೂತನಕವಿತಾಪಾಂಡಿತ್ಯವು ಅಭಿವೃದ್ಧಿಗೊಂಡಿತು. ಯತ್ಕಿಂಚಿತ್ ಪರಶಿಕ್ಷಣಯುತವಾದ ಬರೇ ಪುಸ್ತಕಾಭ್ಯಾಸದಿಂದ ಜ್ಞಾನಸಂಪತ್ತನ್ನು ಸ್ವಾರ್ಜಿತವಾಗಿ ಗಳಿಸಿ ಲೋಕಮಾನ್ಯವಾದ ಗ್ರಂಥರಚನಾಶಕ್ತಿಯುಂಟಾಗುವುದಾದರೆ ಅನೇಕರು ಮಹಾಕವಿಗಳಾಗಬಹುದಿತ್ತಲ್ಲವೇ ? ಹಾಗಾದರೆ ಇವರಿಗಿದೆಂತು ಸಾಧ್ಯವಾಯಿತು ? '' ಶೈಲೇ ಶೈಲೇ ನ ಮಾಣಿಕ್ಯಂ '' ಎಂಬಂತೆ, ಇವರ ಗ್ರಂಥರಚನೌತ್ಸುಕ್ಯ-ನಿರಂತರವಾದ ಅಭ್ಯಾಸ-ದೃಢೈಕನಿಷ್ಠೆ-ಏಕಾಗ್ರವಾದ ಚಿತ್ತಸ್ಥೈರ್ಯ-ಶೀಘ್ರಗ್ರಹಣಧಾರಣಶಕ್ತಿ-ಮನೋನಿರ್ಧಾರ-ಈ ಎಲ್ಲಾ ಗುಣಗಳಿಗಾಧಾರಭೂತವಾದ ಪೂರ್ವವಾಸನೋದ್ದೀಪಿತವಾದ ಅಭಿನವಕಲ್ಪನಾಸಾಮರ್ಥ್ಯ (Originality) ಇವೇ ಮೊದಲಾದ ಗುಣಗಳೇ ಇವರ ಔನ್ನತ್ಯಕ್ಕೆ ಕಾರಣೀಭೂತಗಳಾಗಿರಬೇಕು.

ಕ್ರಮೇಣ ಇವರಿಗೆ ಹಳಗನ್ನಡದಲ್ಲಿ ಗದ್ಯಗ್ರಂಥಗಳನ್ನು ರಚಿಸಬೇಕೆಂಬ ಕುತೂಹಲ ಉಂಟಾಗಿ ಪ್ರಚಾರದಲ್ಲಿಲ್ಲದ ನೂತನ ಗ್ರಂಥವಾದ ಅದ್ಭುತರಾಮಾಯಣದ ಕಥೆಯನ್ನು ಬರೆಯುವುದಕ್ಕೆ ಮೊದಲು ಮಾಡಿದರು. ಆದರೆ ನಾಗರಿ ಲಿಪಿಯನ್ನೋದಲು ಬಾರದೆ ಸಂಸ್ಕೃತಭಾಷೆಯ ಅನ್ವಯಜ್ಞಾನವು ಇಲ್ಲದುದರಿಂದ ಮೂಲಗ್ರಂಥವನ್ನೋದಿ ಕನ್ನಡಿಸಿ ಹೇಳಬೇಕಾಗಿ ಅಪೇಕ್ಷಿಸಿದಂತೆ ದಿನಂಪ್ರತಿಯಲ್ಲೂ ಒಂದೆರಡು ಅಧ್ಯಾಯಗಳನ್ನು ಓದಿ ಅರ್ಥವನ್ನು ಕನ್ನಡಿಸಿ ಹೇಳಿದ್ದನ್ನು ಬರೆದುಕೊಂಡು ಅದನ್ನು ಹಳಗನ್ನಡದಲ್ಲಿ ವಿಸ್ತರಿಸಿ ಬರೆದು ತೋರಿಸುವ ಪರಿಪಾಟು ನಡೆಯು


ತ್ತಿತ್ತು. ಮೊದಲುಮೊದಲು ಇವರ ಅಪೇಕ್ಷೆಯಂತೆ ಅದನ್ನು ವಿಮರ್ಶಿಸಿ ಅಲ್ಲಲ್ಲಿ ಸೂಚಿಸುತ್ತಿದ್ದೆನು. ಕಡೆಕಡೆಗೆ ಅಂಥ ಸೂಚನೆಗೆಡೆಗಾಣದಷ್ಟು ಅವರ ಗ್ರಂಥರಚನೆಯು ಬಿರುಸಾಗುತ್ತ ಬಂತು. ಇವರ ಅಸಾಧಾರಣ ರಚನಾಶಕ್ತಿಯನ್ನು ಕಂಡು ಬೆರಗುಗೊಂಡು ಇವರ ನಿತ್ಯದ ಕೃತಿರಚನೆ ಯನ್ನು ನೋಡುವ ತವಕವು ಹೆಚ್ಚುತ್ತ ಬಂತು. ನನ್ನಲ್ಲಿ ಕುತೂಹಲವು ಹೆಚ್ಚುವಷ್ಟಕ್ಕೆ ಇವರ ಸ್ಫೂರ್ತಿಯು ಇಮ್ಮಡಿ ಮುಮ್ಮಡಿ ವೃದ್ಧಿಂಗತವಾ ಗುತ್ತ ಬಂತು. ಇದೇ ಕ್ರಮದಲ್ಲಿ ಮುಂದರಿಸಿ ಕೆಲವು ತಿಂಗಳೊಳಗೆ ಈ ಗ್ರಂಥವನ್ನು ಮುಗಿಸಿದರು. ಈ ಕೃತಿಯ ವಿಷಯ ನನ್ನ ಅಭಿಮತವನ್ನು ಕೇಳಿದರು. ‘ ಬಹಳ ಚೆಲೋದಿದೆ; ಛಾಪೆಯಾದರೆ ಯೂನಿವರ್ಸಿಟಿ ಪರೀಕ್ಷೆ ಗಳಿಗೆ ಪಠ್ಯಪುಸ್ತಕವಾಗತಕ್ಕುದಾಗಿದೆ.’ ಎಂದು ನನ್ನ ಅಭಿಪ್ರಾಯವನ್ನು ಹೇಳಿದೆನು. ಇದಕ್ಕಿವರು ‘ ಛಾಪಿಸುವ ಯೋಗ್ಯತೆ ನನಗಿಲ್ಲ ; ಎರಡು ಯಕ್ಷಗಾನಕೃತಿಗಳನ್ನು ಛಾಪಿಸಿ ನಷ್ಟಹೊಂದಿದೆನು. ಛಾಪಿಸಿದರೂ ಖರ್ಚಾಗುವ ಬಗೆ ಹೇಗೆ ? ಕನ್ನಡಜಿಲ್ಲೆಯವರ ಕಾವ್ಯವೆಂದರೆ ಮಾನ್ಯ ವಾಗುವುದು ಪ್ರಯಾಸ ’ ಎಂದರು. ‘ ಹಾಗಾದರೆ—ಕುದುರೆ ಲಾಯ ದಲ್ಲೇ ಮುಪ್ಪು—ಎಂಬಂತೆ ನಿರುಪಯೋಗವಾಗುವುದಲ್ಲ ! ಆದರೆ ಇದು ಛಾಪೆಯಾಗುವದಕ್ಕೆ ಒಂದುಪಾಯವಿದೆ. ಗ್ರಂಥಕಾರರ ನಾಮನಿರ್ದೇಶ ಪಡಿಸದೆ ಹಳೆಯ ಪುಸ್ತಕಸಂಗ್ರಹದಲ್ಲಿ ದೊರೆತ ಒಂದು ಓಲೆಯಪುಸ್ತಕ ದಿಂದೆತ್ತಿ ಬರೆದದ್ದು, ಯೋಗ್ಯವೆಂತ ಕಂಡರೆ ಛಾಪಿಸಬಹುದಾಗಿ ಮೈಸೂ ರಿನ ಕಾವ್ಯಮಂಜರಿ ಆಫೀಸಿಗೆ ಕಳುಹಿಸುವ ; ನಾನು ಎರಡುಮೂರು ವರ್ಷಗಳಿಂದ ಅದರ ಚಂದಾದಾರನಿದ್ದೇನೆ ’ ಎನಲು, ಒಪ್ಪಿ ಹಾಗೆ ಮಾಡ ಲಾಯಿತು. ಇದರ ಪರಿಣಾಮವು ನಮ್ಮ ಕೋರಿಕೆಯಂತೆ ಸಫಲವಾಗಿ ಸ್ವಲ್ಪಕಾಲದಲ್ಲೇ “ ಅದ್ಭುತರಾಮಾಯಣ ” ವು ಕಾವ್ಯಮಂಜರಿಯ ಮಾಸಪತ್ರಿಕೆಯ ಸಂಚಿಕೆಗಳಲ್ಲಿ ಅಚ್ಚಾಗಿ ಬರಲಾರಂಭಿಸಿತು.

ಅದ್ಭುತರಾಮಾಯಣವನ್ನು ಮುಗಿಸಿದಮೇಲೆ ಇನ್ನೊಂದಪೂರ್ವ ಗ್ರಂಥವಾದ ರಾಮಾಶ್ವಮೇಧವನ್ನು ಬರೆಯುವ ಇಚ್ಛೆಯನ್ನು ಪ್ರದರ್ಶಿ

ಸಲು, ಅದನ್ನೊದಲಾರಂಭಿಸಿ ಪ್ರಥಮದ ಮೂರುನಾಲ್ಕಧ್ಯಾಯಗಳನ್ನು ಕನ್ನಡಿಸಿ ಬರೆಯುವಷ್ಟರಲ್ಲಿ ಇವುಗಳಲ್ಲಿ ರಾಮನ ಪಟ್ಟಾಭಿಷೇಕದ ಕಥೆಯೂ ಲಂಕೆಯಿಂದಯೋಧ್ಯೆಗೆ ಪುನರಾಗಮನದ ಕಥಾಭಾಗವೂ ವರ್ಣಿತವಾಗಿದ್ದುದರಿಂದ ವಾರ್ಧಕಷಟ್ಪದಿಗಳಾಗಿ ಪದ್ಯಕಾವ್ಯವಾಗಿ ಬರೆಯಬೇಕೆಂಬ ಆತುರ ಉಂಟಾಗಿ ವಾರ್ಧಕಷಟ್ಪದಿಗಳಲ್ಲಿ ಶ್ರೀರಾಮಪಟ್ಟಾಭಿಷೇಕವನ್ನು ಬರೆದರು. ಈ ಕಾವ್ಯವು ಅಭಿನವ ಉಪಮಾನ ಉತ್ಪ್ರೇಕ್ಷಾದ್ಯಲಂಕಾರ-ವಿಚಿತ್ರವರ್ಣನಾದಿಗಳಿಂದ ಜೈಮಿನಿಭಾರತದ ಸಾಮ್ಯವನ್ನು ಹೊಂದಿತು. ಇದನ್ನು ಮುಗಿಸಿದಮೇಲೆ ಪೂರ್ವಕ್ರಮದಲ್ಲೇ ರಾಮಾಶ್ವಮೇಧವನ್ನು ಗದ್ಯದಲ್ಲಿ ಬರೆಯಲುಪಕ್ರಮಿಸಿ ಸುಮಾರು ಮುಗಿಸುವಷ್ಟರಲ್ಲಿ ಉಡುಪಿ ಮಿಷನ್ ಶಾಲೆಗೆ ವರ್ಗಪಟ್ಟರು. ಈ ಗ್ರಂಥತ್ರಯವು ನನ್ನ ಸಮಕ್ಷವೇ ಬರೆಯಲ್ಪಟ್ಟವುಗಳು. ಇವೆರಡು ಮೂಲಗ್ರಂಥಗಳನ್ನು ಟೀಕಿಸಿ ಬರೆದುಕೊಳ್ಳುತ್ತಿರುವಷ್ಟಕ್ಕೆ ಸಂಸ್ಕೃತಭಾಷಾಜ್ಞಾನವೂ ಕೊಂಚ ಮಟ್ಟಿಗಾಯಿತು. ಗ್ರಂಥಕರ್ತರ ಹುಸಿ ಹೆಸರುಗಳಿಂದ ರಚಿಸಿದ ಈ ಕೃತಿಗಳೂ ಅದೇ ರೀತಿಯಲ್ಲಿಯೇ ಅಚ್ಚಾದುವು.

ಹಳ್ಳಿಪಳ್ಳಿಯ ಮೂಲೆಯಲ್ಲಿ ಹುಟ್ಟಿ ಬಳೆದು ಅಕ್ಷರವಿದ್ಯೆಯನ್ನು ವೃದ್ಧಿಗೊಳಿಸುವ ಅನುಕೂಲ್ಯವಿಲ್ಲದ ದೆಸೆಯಿಂದ ಗರಡಿಸಾಧಕವಿದ್ಯೆಯಿಂದ ಪ್ರಪಂಚವ್ಯಾಪಾರವನ್ನು ನಡೆಸುತ್ತಿದ್ದ ಒಬ್ಬ ವ್ಯಕ್ತಿಯು ಆರೇಳು ವರ್ಷಗಳ ಪರಿಮಿತಿಯೊಳಗೆ ಸ್ವಪ್ರಯತ್ನಾಭ್ಯಾಸದಿಂದ ಕವಿತಾಭಿಜ್ಞತೆಯನ್ನು ಸಂಪಾದಿಸಿ ಮಹಾಕಾವ್ಯರಚನಾಶಕ್ತಿಯನ್ನು ಪಡೆದು ತನ್ನ ನೂತನವಿದ್ಯಾಸಾಮರ್ಥ್ಯವನ್ನು ಸ್ವಕಲ್ಪಿತ ಭಾಷಾಶೈಲಿಯಿಂದ ಗ್ರಂಥತ್ರಯರಚನಾಮೂಲಕ ವ್ಯಕ್ತಸಡಿಸಿ ಪಂಡಿತರಿಂದ ಮಹಾಕವಿಗಳಲ್ಲಿ ಗಣ್ಯನಾಗಿ ಲೋಕಮಾನ್ಯನಪ್ಪಂತೆ ಮಾಡಿದ ವಿಧಾತನು ಇವರ ಆಯುಃಪ್ರಮಾಣವನ್ನು ಸ್ವಲ್ಪ ವರ್ಧಿಸಿಬರೆಯುವಲ್ಲಿ ಏತಕ್ಕೆ ಕಶೀಶಿಮಾಡಿದನೊ! —ಎಂಬೀದೈವಲೀಲೆಯ ಕಾರಣವನ್ನು ಶೋಧಿಸಲೆಂತು ಶಕ್ಯವು? ಇವರು

ಪುರಾಕೃತ ಕರ್ಮಸೂತ್ರಬದ್ಧರಾಗಿ ಅನತಿಕ್ರಮ್ಯವಾದ ಕಾಲಗತಿಯನ್ನನುಸರಿಸಿ ಅಕಾಲದಲ್ಲಿ ಕಾಲನ ತುತ್ತಾಗಿ ಸ್ವರ್ಗತರಾಗಲು, ಅದು ಇವರ ಬಂಧುಬಾಂಧವವರ್ಗಕ್ಕೂ ಆಪ್ತಮಿತ್ರಮಂಡಲಿಗೂ ಎಷ್ಟೋ ವಿಷಾದೋತ್ಪಾದಕವು ಎಂಬ ವಿಷಯವು—ಕಲ್ಪನಾತೀತವಿರುವುದು !





ಮ|| ಕೆ. ವೆಂಕಟಪ್ಪನವರಿಂದ ರಚಿತವಾದ

ವೈಣಿಕ ಶಿಖಾಮಣಿ ಶೇಷಣ್ಣನವರ

ಪ್ರತಿಮೆಯ ಚಿತ್ರಗಳು.

ವೀಣಾಗಾನ.

ರಾಗ—ಶ್ರೀರಂಜಿನಿ.

ಗಂಧರ್ವಗಾನಕಿದು ಮಿಗಿಲೆನಿಸಿ ರಂಜಿಪುದು |
ಚೆಂದದಿಂ ಗಾಂಧಾರ ನುಡಿಯುತಿಹುದು ||ಪ||
ತಂಬುರಿಯ ಇನಿನಾದದೊಡನೈಕ್ಯವೊಂದುತಲಿ |
ತುಂಬಿದಾನಂದದಿಂ ಝೇಂಕರಿಸುತಿಹುದು ||ಅನು||

ಎಳೆದುಂಬಿ ಮಧುವಿಂಗೆ ಬಾಯಾರುತೈತಂದು |
ತಳಿತ ಮಾಮರನೇರಿ ಮೊರೆಯುವಂತೆ ||
ಅಲರ ಪರಿಮಳಮಿಳಿತವೆಳೆಗಾಳಿ ಸುಳಿವಂತೆ |
ನಲವಿಂದ ಬಳಿವರ್ಪ ಇನಿಯಳಂತೆ ||೧||

ಬಳಿವಂದು ನಗುನಗುತೆ ಮೊಗದೆ ಮೊಗವಿರಿಸುತ್ತೆ |
ನಲಿಯುತುಲಿಯುತಲಿರ್ಪ ಪಸುಳೆವೋಲು ||
ಸುಳಿಗಾಳಿಯೊಡನಾಡಿ ವಿಹರಿಸುವ ಮಲ್ಲಿಗೆವೊ |
ಲೆಳೆಮಿಂಚು ಗಗನವಂ ತಿವಿದು ಪೊಳೆವಂತೆ ||೨||

ಮನದ ಸಂತಸವೇಗದೊಳಗೆದ್ದು ಮೊಳಗುತ್ತ |
ಲನುನಯದಿ ರಸರಾಗಪೂರ್ಣಮಾಗಿ ||
ದನಿಯೊಳಗೆ ದನಿ ಸೇರಿ ತನಿಗೊಂಡು ಮೆರೆವಂತೆ |
ಮನದಾಳವನ್ನಳೆದ ಮನ ಸೋಲುವಂತೆ ||೩||

ನಾದದೇವನು ತಾನು ಸೇವೆಗೊಳ್ಳಲು ಬಂದು |
ಆದರದೆ ಗಾಯಕನ ಮೈಸೋಂಕುತಿಹನೊ ||
ಮೇದಿನಿಯ ಸೌಂದರ್ಯವಿಂಬುವೆತ್ತುದ ಕಂಡು |
ಸೋದರತೆಯಿಂ ದನಿಯ ಸೇರಿಸುತ್ತಿಹನೊ ||೪||

ನಮಿಸುತ್ತೆ ಭ್ರಮಿಸುತ್ತೆ ಕ್ರಮದೊಳಾಕರ್ಷಿಸುತೆ |
ಗಮಕಲಯತಾನಗಳಿನಾವರಿಸುತಿಹುದು ||
ಅಮರರನು ಗೆಲ್ದೊಲಿಪ ಮೇಲ್ಗಾನ ತನದೆಂದು |
ಮಮತೆಯೊಳು ದೆಸೆದೆಸೆಗೆ ಸಾರುತಿಹುದು ||೫||

ಪೊಸಪರಿಯ ಸೊಬಗೊಂದು ಪರಿದು ಬಂದಿಹುದೆಂದು |
ವಿಸುಪ ಕಳೆತಳೆದಿಳೆಯು ನಲಿಯುತಿಹುದು ||
ರಸಭಾವದನುಭವವು ಹೃದಯತಂತ್ರಿಯ ಮಿಾಂಟಿ |
ಸರಸತಮಭಾವದೊಳು ಅನುಸರಿಸುತಿಹುದು ||೬||

ವಿ. ಸೀ.

ಸಿದ್ಧಾರ್ಥನ ರಾಜ್ಯಪರಿತ್ಯಾಗ.

ರಾಗ—ನಾದನಾಮಕ್ರಿಯ.

ನಡೆ ಹಯವೆ ನಡೆ ಮುಂದಕೀಗ ||ಪ||

ಸಾರಮಿಲ್ಲದ ಸುತಸತೀವ್ಯಾಮೋಹದಿಂ ದೂರ |
ಸಾರಿ ಪೋಗುವ ನಾವು ಮುಂದಕೀಗ ||ಅನು||

ನಡುರಾತ್ರಿ ಮೀರಿಹುದು ಜಗ ನಿದ್ರಿಸುತ್ತಿಹುದು |
ಗಡಿನಾಡುಗಳ ದಾಂಟಿ ಮುಂದೆ ಸಾರುವೆವು ||
ತಡೆಯವಿನ್ನೆನ್ನನೀರಾಜ್ಯಸುಖದಾಶೆಗಳು |
ನಿಡುಕಾಡುದಾರಿಗಳ ಪಿಡಿದು ನಡೆ ಪೋ ಪೋಗು ||೧||

ತಿರುತಿರುಗಿ ಎನ್ನ ಕಡೆ ನೋಡದಿರು ಬೇಡದಿರು |
ಕೊರಗದಿರು ಮರುಗದಿರು ಎನ್ನಸಲುವಾಗಿ ||
ಅರಿವಿನಾ ಮಾರ್ಗವಿದು ಪರದ ಸನ್ಮಾರ್ಗವಿದು |
ಧರೆಯ ದುಃಖದ ಭಾರವಿಳಿಪ ಮಾರ್ಗವಿದು ||೨||

ಜನರು ಸುಳಿಯದಗಮ್ಯ ಕಾನನವ ಸೇರುತ್ತೆ |
ವನದ ಏಕಾಂತದೊಳು ಶಾಂತಿಯಾರ್ಜಿಸುವ ||
ಮನವನೇಕಾಂತದೊಳು ನಿಲಿಸಿ ಜಾನಿಸುತಲ್ಲಿ |
ಗಹನತತ್ತ್ವರಹಸ್ಯವರಿಯುತಾನಂದಿಸುವ ||೩||

ವಿಶ್ವಹೃದಯವನಿರಿದ ವಿಷಬಾಣವೀವಿಧಿ |
ಯೆಸಹ್ಯಹಿಂಸೆಗಳಿತ್ತು ಪೀಡಿಸುತ್ತಿಹುದು ||
ಸ್ವಸ್ಥಚಿತ್ತದೊಳಿನ್ನೆಂತು ತಾಳುವುದಿದನು |
ಅಶ್ವವರ ತಡವೇಕೆ ನೀನೆನ್ನ ದೃಢವ ಕಂಡವನು ||೪||

ಅರಿದನಂತರದಲ್ಲಿ ಧರೆಗೆ ಹಿಂದಿರುಗುತ್ತೆ |
ನರರ್ಗೆ ಬಳಲಿದವರ್ಗೆ ದಾರಿತೋರುವೆನು ||
ಉರಿಯುತಿದೆಯಿಾಯೊಡಲು ನೆನೆನೆನೆದು ಹಿಂಸೆಗಳ |
ದಯೆಯ ಹಿಂಸೆಯ ಧರ್ಮವಿವರ ಪೇಳುವೆನು ||೫||

ವಿ. ಸೀ.



ಮ|| ಕೆ. ವೆಂಕಟಪ್ಪನವರಿಂದ ರಚಿತವಾದ

ಸಿದ್ಧಾರ್ಥನ ರಾಜ್ಯಪರಿತ್ಯಾಗದ

ಪ್ರತಿಕೃತಿಯ ಚಿತ್ರ.

(ಶ್ರೀಮನ್ ಮಹಾರಾಜರವರು ದಯೆಪಾಲಿಸಿದ ಅನುಜ್ಞೆಯಿಂದ ಪ್ರಕಟಿಸಲ್ಪಟ್ಟಿದೆ.)

ಅಭಿನವ ಕರ್ಣಾಟಕ ಕಲಾಸಂಪ್ರದಾಯ.

ಮತ್ತು

ಮೈಸೂರಿನ ಚಿತ್ರಶಿಲ್ಪಿಗಳಾದ ಮ॥ ಕೆ. ವೆಂಕಟಪ್ಪನವರು.

ಈಗ ಕೆಲವು ಸಂವತ್ಸರಗಳಿಂದ ಈಚೆಗೆ ಭಾರತೀಯ ಚಿತ್ತವೃತ್ತಿ ಮತ್ತು ಸಂಸ್ಕೃತಿಗಳಲ್ಲಿ ಪುನರುಜ್ಜೀವನ ಉಂಟಾಗಿ ಕಲಾಕಾವ್ಯಸಾಹಿತ್ಯಾದಿಗಳಲ್ಲಿ ನೂತನ ಜೀವದ ಚಿಹ್ನೆಗಳು ಸುಸ್ಪಷ್ಟವಾಗಿ ಕಂಡುಬರುತ್ತಿವೆ. ಅಷ್ಟೇ ಅಲ್ಲ; ಇದುವರೆಗೆ ಪ್ರಬಲವಾಗಿದ್ದ ಪಾಶ್ಚಾತ್ಯಭಾವಗಳು ಮತ್ತು ನಾಗರಿಕತೆಗಳ ಉತ್ಪಾಟನ ಕಾರ್ಯಗಳಿಗೆ ಪ್ರತಿಪ್ರವಾಹವೊಂದು ಕ್ರಮವಾಗಿ ಆರಂಭವಾಗಿದೆ. ಈ ಉಜ್ಜೀವನದ ಫಲವಾಗಿ ಕಲಾಪ್ರಪಂಚದಲ್ಲಿ, ಪರಸ್ಪರ ವಿರುದ್ಧವಾದ ಅಭಿಪ್ರಾಯಗಳೂ ಆದರ್ಶಗಳೂ ಉಳ್ಳ ಎರಡು ಸಂಪ್ರದಾಯಗಳು ಹುಟ್ಟಿವೆ. ಇವುಗಳಲ್ಲಿ, ಸರ್ಕಾರದವರಿಂದ ಪಾಶ್ಚಾತ್ಯರ ಸಂಪ್ರದಾಯಾನುಸಾರವಾಗಿ ನಡೆಸಲ್ಪಡುತ್ತಿರುವ ಕಲಾಶಾಲೆಗಳ ಪದ್ಧತಿಯೊಂದು.—ಇದನ್ನು "ತಾತ್ತ್ವಿಕಸಂಪ್ರದಾಯ" (Realistic School) ಎಂದು ಕರೆಯಬಹುದು ; ಅಭಿನವ ವಂಗೀಯ ಶಿಲ್ಪಿಗಳೆಂದು ಕರೆಯಲ್ಪಡುತ್ತಿರುವವರ ಪದ್ಧತಿ ಇನ್ನೊಂದು.—ಇದನ್ನು "ಆದರ್ಶಸಂಪ್ರದಾಯ" (Idealistic School) ಎಂದು ಕರೆಯಬಹುದು.

ಇವುಗಳಲ್ಲಿ, ಜಗತ್ತಿನೊಳಗೆ ಇದ್ದದ್ದನ್ನು ಇದ್ದಹಾಗೆ ಚಿತ್ರಿಸುವುದು ಶಿಲ್ಪದ ಕಾರ್ಯವೆಂದೂ ಇರುವುದನ್ನು ಯಾವ ವಿಧದಲ್ಲಿಯೇ ಆಗಲಿ ಬದಲಾಯಿಸುವುದು ಅನಾಚಾರವೆಂದೂ ತಾತ್ತ್ವಿಕಸಂಪ್ರದಾಯದವರ ಮತ. ಆದರೆ, ಆದರ್ಶಸಂಪ್ರದಾಯಾನುಯಾಯಿಗಳು ಪ್ರಾಚೀನಭರತಖಂಡದಲ್ಲಿದ್ದ ಕಲಾಪ್ರವೀಣರ ಕೃತಿಗಳನ್ನು ವ್ಯಾಸಂಗಮಾಡಿ ಅವುಗಳ ಅವಲಂಬನದಮೇಲೆ ನೂತನವಾದ ಕಲಾಕ್ರಮವೊಂದನ್ನು ರೂಪುಗೊಳಿಸಿಕೊಂಡು ಅದರಿಂದ ಒಂದು ಅಜ್ಞಾತಪೂರ್ವವಾಗಿದ್ದ ಹೊಸ ರೂಪಪ್ರಪಂಚವನ್ನು ಅಭಿವ್ಯಕ್ತಿಗೊಳಿಸುವುದು ಸಾಧ್ಯವೆಂದು ನಿದರ್ಶನಮಾಡಿಕೊಡುತ್ತಿದ್ದಾರೆ.

ಈ ಭಾರತೀಯ ಕಲಾಪುನರುಜ್ಜೀವನಕಾರ್ಯದಲ್ಲಿ ಕರ್ಣಾಟಕದ ಕೈವಾಡವೂ ಕೇವಲ ಸ್ತೋತ್ರಾರ್ಹವಾಗುವಷ್ಟು ಇದೆ ಎಂಬುದು ನಾವೆಲ್ಲರೂ ಬಹು ಸಂತೋಷಪಡತಕ್ಕ, ಹೆಮ್ಮೆಪಡತಕ್ಕ, ಸಂಗತಿ.

ಈ ಸಂಚಿಕೆಯಲ್ಲಿ ಕೊಟ್ಟಿರುವ ಚಿತ್ರಗಳು ಶಿಲ್ಪಕಲಾನಿಪುಣರಾದ ಮ॥ ಕೆ. ವೆಂಕಟಪ್ಪನವರ ಕೃತಿಗಳವು. ಮ॥ ವೆಂಕಟಪ್ಪನವರು ಅಭಿನವವಂಗೀಯ ಶಿಲ್ಪಿಗಳಿಂದ

ಸ್ಥಾಪಿತವಾದ ಸಂಪ್ರದಾಯದ ಶಿಕ್ಷಣವನ್ನು ಮೊದಮೊದಲು ಪಡೆದವರಲ್ಲಿ ಒಬ್ಬರು. ಅದನ್ನು ದಕ್ಷಿಣಹಿಂದೂಸ್ಥಾನಕ್ಕೆ ತಂದು ಹರಡುತ್ತಿರುವವರಲ್ಲಿ ಮೊದಲನೆಯವರು ; ಅವರು ಅಭಿನವವಂಗೀಯ (ಅಥವಾ "ಠಾಕೂರ") ಸಂಪ್ರದಾಯದ ಶಿಷ್ಯರಾದರೂ ತಮ್ಮ ಕೃತಿಗಳಲ್ಲಿ ಆ ಸಂಪ್ರದಾಯದ ಸಾಮಾನ್ಯ ಲಕ್ಷಣಗಳಿಗಿಂತ ಭಿನ್ನವಾದ ವೈಯಕ್ತಿಯತೆಯೊಂದನ್ನು ಬೆಳೆಸಿಕೊಂಡು ಬಂದಿರುವುದರಿಂದ ಇವರನ್ನು ನಮ್ಮ ದೇಶದ ಕಲೆಯಲ್ಲಿ ಒಂದು ಹೊಸ ಸಂಪ್ರದಾಯಕ್ಕೇ ಕರ್ತರೆಂದು ಹೇಳಬಹುದಾಗಿದೆ. ಇವರ ಕಲಾಪದ್ಧತಿಯನ್ನೇ "ಅಭಿನವಕರ್ಣಾಟಕ ಕಲಾಸಂಪ್ರದಾಯ" ಎಂದು ಕರೆದಿದ್ದೇವೆ.

ಮ|| ವೆಂಕಟಪ್ಪನವರು ಮೈಸೂರಿನಲ್ಲಿರುವ ಕೈಗಾರಿಕೆ ಪಾಠಶಾಲೆಯಲ್ಲಿ ವ್ಯಾಸಂಗಮಾಡಿ ಚಿತ್ರವಿದ್ಯೆಯಲ್ಲಿ ಪ್ರಶಸ್ತಿಯನ್ನು ಪಡೆದು ತೇರ್ಗಡೆ ಹೊಂದಿ ೧೯೦೯ರಲ್ಲಿ ಇ. ಬಿ. ಹ್ಯಾವೆಲ್ ಮತ್ತು ಅವನೀಂದ್ರನಾಥ ಠಾಕೂರರಿಂದ ಪ್ರಾಚ್ಯ ಕಲೆಯನ್ನು ಕಲಿಯಲು ಕಲ್ಕತ್ತೆಗೆ ಹೋದರು. ಅಲ್ಲಿ ೧೯೧೪ರ ವರೆಗೆ ಚಿತ್ರವಿದ್ಯೆಯ ನಾನಾ ಸಂಪ್ರದಾಯಗಳನ್ನು ಅಭ್ಯಾಸಮಾಡಿದರು. ಈ ಮಧ್ಯೆ ೧೯೧೦ರಲ್ಲಿ ಅಜಿತ ಕುಮಾರ ಹಲಧರರೊಡನೆ ಮಿಸಸ್ ಹೆರಿಂಗ್ಹಮ್ ಎಂಬಾಕೆಯ ಜೊತೆಯಲ್ಲಿ ಅಜಂಟಾ ಗುಹೆಗೆ ಹೋಗಿ ಅಲ್ಲಿ ಎರಡನೆಯ ಗುಹೆಯ ಗೋಡೆಗಳ ಮೇಲೆ ಬರೆದಿರುವ ಪ್ರಾಚೀನ ಚಿತ್ರಗಳನ್ನು ನಕಲುಮಾಡಿದರು. ೧೯೧೪ ರಿಂದ ೧೯೧೬ರ ವರೆಗೆ ಪೂರ್ವದೇಶೀಯ ಚಿತ್ರವಿದ್ಯೆಯಲ್ಲಿಯೂ ದಂತದಮೇಲೆ ಸೂಕ್ಷ್ಮ ಚಿತ್ರವನ್ನು ಚಿತ್ರಿಸುವುದರಲ್ಲಿಯೂ ನೈಪುಣ್ಯವನ್ನು ಸಂಪಾದಿಸಿದ್ದಲ್ಲದೆ ಬಿಳಿಯ ಜೇಡಿಮಣ್ಣಿನಲ್ಲಿ ಮಾದರಿಗಳನ್ನು ಮಾಡಿ ಮೂರ್ತಿಗಳನ್ನು ತೆಗೆಯುವುದನ್ನೂ ಪ್ರತಿಕೃತಿರಚನೆಯನ್ನೂ (Bass-relief) ಕಲಿತರು. ಇವರಿಗೆ ವೇತನಕೊಟ್ಟು ಇಂಗ್ಲೆಂಡಿನ ರಾಜಕಲಾಶಾಲೆಗೆ ಕಳುಹಿಸಬೇಕೆಂಬ ಯೋಜನೆಯಿತ್ತು. ಆದರೆ ಅದು ಯುದ್ಧಾರಂಭದ ದೆಸೆಯಿಂದ ಮಾನಸಿಕವಾಯಿತು.

* * * *

ಇವರ ಕಲಾವ್ಯವಸಾಯವು ಹೀಗೆ ಚಿತ್ರವಿದ್ಯೆಯ ನಾನಾಶಾಖೆಗಳಲ್ಲಿಷ್ಟರಲ್ಲೇ ಮುಗಿದಿಲ್ಲ. ಮೊದಲಿನಿಂದಲೂ ಸಂಗೀತವನ್ನು ಅಭ್ಯಾಸಮಾಡುತ್ತಿದ್ದು ಈಗ ಸುಮಾರು ಎಂಟುವರ್ಷಗಳಿಂದ ಸಂಗೀತ ವಿದ್ವಾನ್ ವೈಣಿಕಶಿಖಾಮಣಿ ಶೇಷಣ್ಣನವರಲ್ಲಿ ಶಿಷ್ಯವೃತ್ತಿಮಾಡಿ ವೀಣಾ ವಾದನದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದರು. ಇದೂ ಅಲ್ಲದೆ ಇಪ್ಪತ್ತೆರಡು ಸ್ವರಗಳು ಹುಟ್ಟುವ "ಶ್ರುತಿ ವೀಣೆ" ಯೆಂಬ ವೀಣಾ ವಿಶೇಷವನ್ನು ಸ್ವಬುದ್ಧಿಯಿಂದ ಕಲ್ಪಿಸಿ ತಯಾರುಮಾಡಿಸಿರುತ್ತಾರೆ.

ಅವರ ಕುಶಲಕರ್ಮವನ್ನು ಪ್ರಪಂಚದ ಪ್ರತಿಯೊಂದು ದೇಶವೂ ಹೊಗಳುತ್ತಿದೆ. ರಾಜಾಧಿರಾಜರು ಅವರಿಗೆ ನಾನಾವಿಧವಾದ ಚಿತ್ರಕಾರ್ಯವನ್ನು ಒಪ್ಪಿಸುತ್ತಿದ್ದಾರೆ.

ಈ ಸಂಚಿಕೆಯಲ್ಲಿ ಕೊಟ್ಟಿರುವ ಮೂರುಚಿತ್ರಗಳೂ ಮ|| ವೆಂಕಟಪ್ಪನವರ ಮೂರ್ತಿನಿರ್ಮಾಣಕೌಶಲ್ಯವನ್ನು ಹೊಗಳುತ್ತಿವೆ. ಇವುಗಳೊಳಗೆ ಒಂದರ ಪಕ್ಕದಲ್ಲಿ ಒಂದು ಇರುವ ಎರಡು ಚಿತ್ರಗಳು ಅವರ ಸಂಗೀತವಿದ್ಯಾಗುರುಗಳಾದ ವೈಣಿಕ ಶಿಖಾಮಣಿ ಶೇಷಣ್ಣನವರ ಮೂರ್ತಿಯವು; ಮೂರನೆಯದು ಸಿದ್ಧಾರ್ಥ (ಬುದ್ಧ) ನ ಜೀವನದಿಂದ ಒಂದು ಸಂಗತಿಯನ್ನು ತೆಗೆದುಕೊಂಡು ರಚಿಸಿದ ಪ್ರತಿಕೃತಿಯದು. ಶೇಷಣ್ಣನವರ ಪ್ರತಿಮೆಯು ' ತಾತ್ತ್ವಿಕ ಸಂಪ್ರದಾಯ '' ಕ್ಕೆ ಉದಾಹರಣೆ. ಇಲ್ಲಿ ಶಿಲ್ಪಿಯು ಕಣ್ಣೆದುರಿಗೆ ಆಗಲೇ ಇರುವ ಒಂದು ವಸ್ತುವನ್ನು ತೆಗೆದುಕೊಂಡು ಆ ಬಿಂಬಕ್ಕೆ ತಕ್ಕ ಪ್ರತಿಬಿಂಬವನ್ನು ಮಾಡಿಟ್ಟಿದ್ದಾನೆ. ಇದನ್ನು ಒಂದು ಮಗುವಿಗೆ ತೋರಿಸಿದರೂ ಅದು ನೋಡುತ್ತಿದ್ದಹಾಗೆಯೇ ನಮ್ಮ ವೈಣಿಕಶಿಖಾಮಣಿಗಳನ್ನು ಗುರುತಿಸಿ ಇದು ಶೇಷಣ್ಣನವರದೆಂದು ಹೇಳಿಬಿಡುವುದು; ಇದು ಅಷ್ಟು ತದ್ವತ್ತಾಗಿದೆ. ಮೂರ್ತಿನಿರ್ಮಾಣದಲ್ಲಿ ಬಾಹ್ಯರೂಪರೇಖಾದಿಗಳು ಮುಖ್ಯವಲ್ಲ; ಗೌಣ. ಮುಖ್ಯವಾದದ್ದು ಅಂತರ್ಹೃದಯ; ಅದನ್ನು ಚೆನ್ನಾಗಿ ಅಭಿವ್ಯಕ್ತಿಗೊಳಿಸಬೇಕು. ಇದೇ ಎಲ್ಲಾ ಉತ್ತಮ ಕಲೆಯ ತಿರುಳು. ಮ|| ವೆಂಕಟಪ್ಪನವರು ಇದನ್ನು ಈ ಮೂರ್ತಿಯಲ್ಲಿ ಬಹುಸೊಗಸಾಗಿ ತಂದಿದ್ದಾರೆ. ಮ|| ಶೇಷಣ್ಣನವರ ಹತ್ತಿರ ಓಡಾಡಿ ಅವರನ್ನು ಚೆನ್ನಾಗಿ ಬಲ್ಲವರು ಈ ಮೂರ್ತಿಯನ್ನು ನೋಡಿದಕೂಡಲೆ ಅವರ ಗುಣಸ್ವಭಾವಗಳು ಅವರ ಮುಖದಲ್ಲಿ ಹೇಗೋ ಇದರಲ್ಲಿಯೂ ಹಾಗೇ ವ್ಯಕ್ತವಾಗಿರುವುದನ್ನು ಕಾಣಬಹುದು.

ಸಿದ್ಧಾರ್ಥನ ಚಿತ್ರವು ಕೇವಲ ಪ್ರತಿಭಾಕಲ್ಪಿತ. ಇದು " ಆದರ್ಶ ಸಂಪ್ರದಾಯ '' ಕ್ಕೆ ಉದಾಹರಣೆ. ಇದರ ಬಿಂಬವನ್ನು ಶ್ರೀಮನ್ಮಹಾರಾಜರವರ ಮೈಸೂರ ಅರಮನೆಗಾಗಿ ಈಚೆಗೆ ಸುದ್ದೆಯಲ್ಲಿ (Plaster of Paris) ಮಾಡಿಕೊಟ್ಟಿದ್ದಾರೆ. ಸಿದ್ಧಾರ್ಥನು ಪ್ರಪಂಚಸುಖವನ್ನು ಪರಿತ್ಯಾಗಮಾಡಿ ತನ್ನ ಅರಮನೆಯನ್ನು ಬಿಟ್ಟು ಹೊರಟುಹೋದದ್ದು ಚರಿತ್ರೆಯಲ್ಲಿ ಸುಪ್ರಸಿದ್ಧವಾದ ಸಂಗತಿ; ಅದನ್ನು ಪುನಃ ಇಲ್ಲಿ ವಿವರಿಸಬೇಕಾದ ಆವಶ್ಯಕತೆಯಿಲ್ಲ. ಸಿದ್ಧಾರ್ಥನು ಪ್ರಾಪಂಚಿಕ ಸಂಬಂಧಗಳನ್ನೂ ಬಂಧನಗಳನ್ನೂ ಕಿತ್ತೊಗೆದು ಪಾರಮಾರ್ಥಿಕ ತತ್ತ್ವವನ್ನು ತಿಳಿಯಬೇಕೆಂದು ನಿಶ್ಚಯಮಾಡಿದಾಗ ಒಳ್ಳೆಯ ಅರ್ಧರಾತ್ರಿ; ಆಗ ಕಂಟಕವೆಂಬ ತನ್ನ ಪ್ರೀತಿ

ಪಾತ್ರವಾದ ಮುದ್ದುಕುದುರೆಯನ್ನು ಕರೆದು ಅದರಮೇಲೆ ಕುಳಿತು ನಿಶ್ಚಲವಾದ ಶಾಂತಿಯಿಂದ ಅರಮನೆಯನ್ನು ಬಿಟ್ಟು ಕಾಡನ್ನು ಪ್ರವೇಶಮಾಡಿ ಅಲ್ಲಿ ಒಬ್ಬ ವ್ಯಾಧನಿಗೆ ತನ್ನ ಉಡುಪನ್ನು ಕೊಟ್ಟು ಅವನ ಬಟ್ಟೆಗಳನ್ನು ತೆಗೆದುಕೊಂಡು, ತ್ಯಾಗಿಗೆ ಯೋಗ್ಯವಾದ ಆ ಹರಕುಬಟ್ಟೆಗಳನ್ನು ಧರಿಸಿಕೊಂಡು ಹೊರಟುಹೋದನು.

ಈ ಚಿತ್ರವು ಈ ಕಥೆಯೆಲ್ಲವನ್ನೂ, ಕಣ್ಣುತೆರೆದು ನೋಡುವವರಿಗೆ ಇನ್ನೂ ಎಷ್ಟೋ ಸಂಗತಿಗಳನ್ನೂ, ತಿಳಿಸಬಲ್ಲುದು. ರಾಜಪುತ್ರನ ಮುಖವನ್ನು ನೋಡಿ! ಅದರೊಳಗೆ ಪ್ರಾಪಂಚಿಕ ವಿಷಯಗಳಲ್ಲಿ ಉಂಟಾದ ತೀವ್ರ ವೈರಾಗ್ಯವು ಕಾಣುತ್ತಿದೆ. ಆ ಮುಖಭಾವವು ತಾನು ಹೊರಟೇ ಹೋಗಬೇಕೆಂಬ ಅಚಲವಾದ ನಿರ್ಧರವನ್ನು ಸೂಚಿಸುತ್ತಿದೆ; ಅವನ ತುಟಿಗಳ ಇರುವಿಕೆಯೂ ಕೈಗಳನ್ನು ಇಟ್ಟುಕೊಂಡಿರುವಿಕೆಯೂ "ಅಯ್ಯೋ ದುಃಖತಪ್ತವಾದ ಪ್ರಪಂಚವೇ! ಮರಣ ಬೇಡವೆನ್ನುವುದೇನು, ಸ್ವರ್ಗಲೋಕದಲ್ಲಿ ಜನ್ಮವನ್ನು ಅಪೇಕ್ಷಿಸುವುದೇನು! ಏನು ಅಜ್ಞಾನ, ಏನು ಮಾಯೆ!" ಎನ್ನುವಂತಿದೆ. ಕುದುರೆಯು ತನ್ನ ಯಜಮಾನನ ಮನೋನಿರ್ಧರವನ್ನು ಅರಿತು ಯೋಚನಾಪರವಾದಂತಿದೆ. ಇವರ ಹಿಂದೆ ಅರಮನೆಯ ಒಂದು ಭಾಗ ಕಾಣುತ್ತಿದೆಯಷ್ಟೆ. ಅದರ ವಾಸ್ತುರೀತಿಯನ್ನು ನೋಡಿ!—ಅದು ಮೌರ್ಯರ ಕಾಲಕ್ಕಿಂತ ಹಿಂದಿನದು. ಕುದುರೆಯ ಕತ್ತಿನಲ್ಲಿ ತೂಗಾಡುತ್ತಿರುವ ಕುಸುಮ ಕೋಮಲವಾಗಿರುವಂತಿರುವ ಆ ಗೊಂಡೆಯೋ! ಎಷ್ಟು ಸುಂದರವಾಗಿದೆ! ಕುದುರೆಯ ತೇಜಃಪೂರ್ಣವಾದ ಕಣ್ಣುಗಳೋ, ಸಿದ್ಧಾರ್ಥನ ಮತ್ತು ಅದರ ದೇಹಗಳ ಆಯಕಟ್ಟು ಅವಯವ ಸನ್ನಿವೇಶಗಳೋ! ಇವೊಂದೊಂದೂ ಎಷ್ಟು ಸೊಗಸಾಗಿ ರಚಿತವಾಗಿವೆ! ಆದರೂ ಇವುಗಳ ರಚನೆಯೆಲ್ಲಾ ಎಷ್ಟು ಅವಕಾಶದಲ್ಲಿ! ಚಿತ್ರದ ಯಾವ ಭಾಗವನ್ನು ತೆಗೆದುಕೊಂಡು ನೋಡಿದರೂ ಅಲ್ಲಿರುವ ಮಣ್ಣು ಅರ್ಧ ಅಂಗುಲ ದಪ್ಪಕ್ಕಿಂತ ಹೆಚ್ಚಾಗಿಲ್ಲ! ಹೀಗೆಯೇ, ಇದನ್ನು ಎಷ್ಟು ವರ್ಣಿಸುತ್ತ ಹೋದರೂ ಸ್ವಲ್ಪವೇ; ಇದರ ಒಂದೊಂದು ಅಂಶವೂ ಆಶ್ಚರ್ಯಾವಹವಾಗಿದೆ. ಇದು ಪ್ರಪಂಚದ ಪ್ರತಿಕೃತಿರಚನೆಗಳೊಳಗೆ ಉತ್ತಮೋತ್ತಮವಾದವುಗಳಲ್ಲಿ ಒಂದು ಎನ್ನಿಸಿಕೊಳ್ಳುವುದರಲ್ಲಿ ಏನೂ ಸಂದೇಹವಿಲ್ಲ.

೭. ಕುಮುದೇಂದು

“ಕುಮುದೇಂದುರಾಮಾಯಣ” ವೆಂದು ವ್ಯವಹರಿಸಲ್ಪಡುವ ರಾಮಾಯಣದ ಕರ್ತೃವಾದ ಈ ಕುಮುದೇಂದುವಿನ ವಿಷಯವಾಗಿ ಕವಿಚರಿತಕಾರರು ಹೀಗೆಂದು ಬರೆದಿರುವರು.—

“ಇವನು ಒಂದು ರಾಮಾಯಣವನ್ನು ಬರೆದಿದ್ದಾನೆ. ಇದಕ್ಕೆ ಕುಮುದೇಂದುರಾಮಾಯಣವೆಂದು ವ್ಯವಹಾರವಿದೆ.

ಈತನು ಜೈನಮತದವನು........ಇವನ ಗುರು ಮಾಘಣಂದಿಮುನಿ. ಹಿಂದಣ ಕವಿಗಳಲ್ಲಿ ಜನ್ನನನ್ನು (1230) ಸ್ತುತಿಸುವುದರಿಂದ ಕುಮುದೇಂದು ಅವನಿಗಿಂತ ಈಚೆಯವನೆಂಬುದು ವ್ಯಕ್ತವಾಗಿಯೇ ಇದೆ. ಈತನು ತನ್ನ ಗುರುವಾದ ಮಾಘಣಂದಿಮುನಿಯನ್ನು “ಸಿದ್ಧಾಂತತ್ರಯಚಕ್ರೇಶ್ವರಂ” “ಅವನತಹೊಯ್ಸಳರಾಜಮಕುಟಮಣಿಗಣಕಿರಣಂ” ಎಂದು ಹೊಗಳಿದ್ದಾನೆ. 1283* ರಲ್ಲಿ ಬರೆದ ಶ್ರವಣಬೆಳ್ಗೊಳದ 129ನೆಯ ಶಾಸನದಲ್ಲಿ “ಶ್ರೀಮನ್ಮಹಾಮಂಡಲಾಚಾರ್ಯರುಂ ಆಚಾರ್ಯವರ್ಯರುಂ ಹೊಯ್ಸಳರಾಯರಾಜಗುರುಗಳುಂ” ಎಂದು ಒಬ್ಬ ಶ್ರೀ ಮಾಘಣಂದಿಸಿದ್ಧಾಂತಚಕ್ರವರ್ತಿಗಳನ್ನು ಸ್ತುತಿಸಿದೆ. ಈ ಮಾಘಣಂದಿಯೇ ಕುಮುದೇಂದುವಿನ ಗುರುವಾಗಿರಬೇಕು. ಆದುದರಿಂದ ಈ ಕುಮುದೇಂದು ಸುಮಾರು 1275ರಲ್ಲಿ ಇದ್ದಿರಬಹುದು. (ಕವಿಚರಿತೆ I. ೩೧೬-೩೧೭)


ಕವಿಚರಿತಕಾರರಂತೂ ಶುಭಚಂದ್ರ, ಮೇಘಚಂದ್ರ, ಬಾಲಚಂದ್ರ ಎಂಬ ಇದೇ ಮೊದಲಾದ ಹೆಸರಿನ ಜೈನಗುರುಗಳು ಗ್ರಂಥಕರ್ತೃಗಳಿಂದ ಕೀರ್ತಿತರಾಗಿದ್ದು ಶಿಲಾಲೇಖನಗಳಲ್ಲಿಯೂ ಕೂಡ ಪ್ರಸ್ತುತರಾದಾಗೆಲ್ಲಾ ಬೇರೆ ಯಾವ ವಿಚಾರವನ್ನೂ ಮಾಡದೆ ಆ ನಾಮೈಕ್ಯದ ಆಧಾರವೊಂದರ ಬಲದಿಂದಲೇ ಈ ಶಿಲಾಲೇಖನಗಳಲ್ಲಿ ಕೀರ್ತಿತರಾದ ಆ ಹೆಸರಿನ ಗುರುಗಳು ಗ್ರಂಥಕರ್ತೃಗಳಿಂದ ಹೊಗಳಲ್ಪಟ್ಟವರೇಯೆ ಎಂದು ಒಡನೆಯೇ ನಿರ್ಣಯಮಾಡುವರೆಂಬುದನ್ನು ನಾವು ಮೇಲೆಯೇ ನೋಡಿರುವೆವಷ್ಟೆ. ಹೀಗಿರುವಲ್ಲಿ ಪ್ರಕೃತ ಶ್ರ. ಬೆ. ೧೨೯ನೆಯ ಶಾಸನದಲ್ಲಿ ಮಾಘನಂದಿಯೆಂಬ ಹೆಸರು ವೊಂದಲ್ಲದೆ ‘ಸಿದ್ಧಾಂತಚಕ್ರವರ್ತಿ’ ‘ಹೊಯ್ಸಳರಾಯರಾಜಗುರು’ ಎಂದು ಕುಮುದೇಂದುಪ್ರೋಕ್ತವಾದ (‘ಸಿದ್ಧಾಂತತ್ರಯಚಕ್ರೇಶ್ವರಂ’ ‘ಅವನತಹೊಯ್ಸಳರಾಜಮಕುಟಮಣಿಗಣಕಿರಣಂ’ ಎಂಬ) ವಿಶೇಷಣಗಳಿಗೆ ಸದೃಶವಾದ ವಿಶೇಷಣಗಳೂ ಕೂಡ ಉಪಯೋಗಿಸಲ್ಪಟ್ಟಿರುವುದರಿಂದ, ಈ ಶಾಸನದಲ್ಲಿ ಪ್ರಸ್ತುತನಾದ ಮಾಘನಂದಿಯು ಕುಮುದೇಂದುವಿನಿಂದ (ತನ್ನ ರಾಮಾಯಣದಲ್ಲಿ) ಕೀರ್ತಿತನಾದ ಮಘನಂದಿಯೇಯೆ ಎಂದು ಕವಿಚರಿತಕಾರರು

---

* ಇದು ತಪ್ಪು. ಈ ಶಾಸನವು ವಸ್ತುತಃ ೧೨೮೨ರಲ್ಲಿ ಹುಟ್ಟಿತು. ಮೇಲೆ ೬೩ನೆಯ ಪುಟವನ್ನು ನೋಡಿ.

ಅಭಿಪ್ರಾಯಪಡುವದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ನಮಗಾದರೆ ಈ ಎರಡು ಕಡೆಗಳಲ್ಲಿ ಕೀರ್ತಿತರಾದ ಮಾಘನಂದಿಯೆಂಬ ಹೆಸರಿನ ಗುರುಗಳು ಅಭಿನ್ನರೆಂದು ಇಷ್ಟು ಮಾತ್ರ ಆಧಾರದಿಂದ ನಿರ್ಣಯಿಸುವುದಕ್ಕೆ ಸಾಮರ್ಥ್ಯವಿಲ್ಲದುದರಿಂದ ಈ ವಿಷಯದಲ್ಲಿ ಸ್ವಲ್ಪ ವಿಚಾರವನ್ನು ಮಾಡಬೇಕಾಗಿರುವುದು.

ಈ ಕುಮುದೇಂದುವು ತನ್ನ ರಾಮಾಯಣದ ಪ್ರಾರಂಭದಲ್ಲಿ ಸ್ತುತಿಸಿರುವ ಜೈನಗುರುಗಳ ಪರಂಪರೆಯಿಂದ ನಾವು ಇವನ ಗುರುವಾದ ಮಾಘನಂದಿಯ ಗುರುಪರಂಪರೆಯನ್ನು ಈ ಕೆಳಗೆ ಇರುವಂತೆ ನಿಶ್ಚಯಿಸಬಹುದು :—



ಈ ಪರಂಪರೆಯನ್ನು ಮೇಲೆ (ಪುಟ ೫೭; ೬೧-೬೨) ಹೇಳಿರುವ ಶಾಸ್ತ್ರಸಾರ ಸಮುಚ್ಚಯ ಟೀಕಾಕಾರನಾದ ಮಾಘನಂದಿಯ ಗುರುಪರಂಪರೆಗಳೊಡನೆ ಹೋಲಿಸಿ ನೋಡಿದಲ್ಲಿ ೩ನೆಯ ಪಂಕ್ತಿಯಲ್ಲಿ ಅಭಯೇಂದು ಎಂಬುದಕ್ಕೆ ಬದಲು ಆ ಪರಂಪರೆಗಳಲ್ಲಿ ಉದಯೇಂದು ಎಂದು ಹೇಳಲ್ಪಟ್ಟಿರುವುದೆಂಬ ಒಂದು ಅಂಶವನ್ನು ಬಿಟ್ಟರೆ, ಈ ಮೂರು ಪರಂಪರೆಗಳೂ ಒಂದೇ ಎಂಬುದು ಸ್ಪಷ್ಟವಾಗುವುದು. ಮೂರನೆಯ ಪಂಕ್ತಿಯಲ್ಲಿ ಅಭಯೇಂದು ಎಂಬುದು ರಾಮಾಯಣದಲ್ಲಿ ಅಪಪಾಠವಿದ್ದರೂ ಇರಬಹುದು. ಅಥವಾ ಮೇಲೆ ಹೇಳಿರುವ ವಾಸುಪೂಜ್ಯನಿಗೆ ಉದಯೇಂದು ಅಭಯೇಂದು ಎಂದು ಇಬ್ಬರು ಶಿಷ್ಯರು ಇದ್ದು ಒಬ್ಬನ ಹೆಸರು ಹಿಂದೆ ಹೇಳಿದ ಪರಂಪರೆಗಳಲ್ಲಿಯೂ, ಇನ್ನೊಬ್ಬನ ಹೆಸರು ರಾಮಾಯಣದಲ್ಲಿ ಹೇಳಿರುವ ಪರಂಪರೆಯಲ್ಲಿಯೂ ಹೇಳಲ್ಪಟ್ಟಿರಬಹುದು*. ಅದು ಹೇಗಾದರೂ ಆಗಲಿ; ಈ ಮೂರು ಪರಂಪರೆಗಳೂ ವಸ್ತುತಃ

* ನಮಗಂತೂ ಮೇಲೆ ೫೭, ೬೨ನೆಯ ಪುಟಗಳಲ್ಲಿ ಹೇಳಿರುವ 'ಉದಯಚಂದ್ರ, ಉದಯೇಂದು' ಎಂಬುದೇ ಸರಿಯಾದ ಹೆಸರೆಂದೂ 'ಅಭಯೇಂದು' ಎಂಬುದು ತಪ್ಪುಪಾಠವೆಂದೂ ತೋರುವುದು.

ಒಂದೇ ಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ರಾಮಾಯಣಕರ್ತೃ ವಾದ ಕುಮುದೇಂದುವಿಗೆ ಶಾಸ್ತ್ರಸಾರಸಮುಚ್ಚಯಾದಿಟೀಕಾಕಾರನಾದ ಮಾಘ ನಂದಿಯು ಗುರುವೆಂದೂ, ಇವನೇ ಶ್ರ. ಬೆ. ೧೨೯ನೆಯ ಶಾಸನದಲ್ಲಿ ಕೀರ್ತಿತನಾಗಿ ರುವ ಮಾಘನಂದಿಯೆಂದೂ ಹೇಳುವ ಕವಿಚರಿತಕಾರರ ಅಭಿಪ್ರಾಯವು ಸಾಧುವೇ ಆಗಿರುವುದು. ಮೇಲೆ (೬೨ನೆಯ ಪುಟದಲ್ಲಿ) ಹೇಳಲ್ಪಟ್ಟಿರುವ ಹಳೇಬೀಡಿನ ಶಿಲಾ ಲೇಖನದಲ್ಲಿ ಶಾಸ್ತ್ರಸಾರಸಮುಚ್ಚಯಾದಿ ಕರ್ತೃವಾದ ಮಾಘನಂದಿಗೆ ಚತುರ್ವಿಧ ಪಾಂಡಿತ್ಯಚಕ್ರವರ್ತಿ ಪರವಾದಿಗಂಡಭೇರುಂಡ ಕುಮುದಚಂದ್ರಪಂಡಿತನೆಂಬ ಶಿಷ್ಯನಿ ದ್ದನೆಂದು ನಿರೂಪಿಸಲ್ಪಟ್ಟಿರುವುದಷ್ಟೆ. ಆದುದರಿಂದ ಈ ಕುಮುದಚಂದ್ರಪಂಡಿತನೇ ಪ್ರಕೃತ ರಾಮಾಯಣದ ಕರ್ತೃವಾದ ಕುಮುದೇಂದು ಯೆಂಬುದು ವ್ಯಕ್ತವಾಗಿರು ವುದು. ಈ ಕುಮುದೇಂದುವಿಗೆ ಕ್ರಿ. ಶ. ೧೨೬೫ ರಲ್ಲಿ ಹುಟ್ಟಿದ ಈ ಮೇಲಿನ ಶಿಲಾಲೇಖನದಲ್ಲಿ 'ಚತುರ್ವಿಧಪಾಂಡಿತ್ಯಚಕ್ರವರ್ತಿ' 'ಪರವಾದಿಗಂಡಭೇರುಂಡ' ಎಂಬ ಬಿರುದುಗಳು ಹೇಳಲ್ಪಟ್ಟಿರುವದರಿಂದ ಇವನು ಆ ಕಾಲದಲ್ಲಿಯೇ ದೊಡ್ಡ ಪಂಡಿತನಾಗಿ ಪ್ರಥಿತನಾಗಿದ್ದನೆಂಬುದು ವ್ಯಕ್ತವಾಗುವುದು. ಇವನು ಪ್ರಾಯಶಃ ತನ್ನ ಗ್ರಂಥಗಳನ್ನು ಕ್ರಿ. ಶ. ೧೨೬೫ಕ್ಕೆ ಹಿಂದಿಯೇ ಬರೆದಿರಬಹುದು. ಕ್ರಿ. ಶ. ೧೨೬೫ರಲ್ಲಂತೂ ಇವನ ಗ್ರಂಥಗಳು ಹುಟ್ಟಿ ಪ್ರಥಿತಗಳಾಗಿದ್ದುವೆಂದು ಧಾರಾಳ ವಾಗಿ ಹೇಳಬಹುದೆಂದು ತೋರುವುದು.

ಕುಮುದೇಂದು ಅಥವಾ ಕುಮುದಚಂದ್ರ ಯೆಂಬವನಿಂದ ವಿರಚಿತವಾದ ಪ್ರತಿಷ್ಠಾಕಲ್ಪಟಿಪ್ಪಣವೆಂಬ ಗ್ರಂಥವೊಂದುಂಟು. ಈ ಕುಮುದೇಂದುವು ರಾಮಾ ಯಣಕರ್ತೃವಾದ ಕುಮುದೇಂದುವಿನಿಂದ ಭಿನ್ನನೆಂದೂ ಸುಮಾರು ಕ್ರಿ. ಶ. ೧೧೦೦ ರಲ್ಲಿ ಇದ್ದನೆಂದೂ ಕವಿಚರಿತಕಾರರ ಅಭಿಪ್ರಾಯ. ಅವರು ಇವನನ್ನು 'ವಾದಿಕುಮು ದಚಂದ್ರ' ಎಂದು ವ್ಯವಹರಿಸಿ ಇವನ ವಿಷಯವಾಗಿ ಹೀಗೆಂದು ಬರೆದಿರುವರು :—

"ವಾದಿ ಕುಮುದಚಂದ್ರ—ಸು. 1100—ಈತನು ಜಿನಸಂಹಿತೆಯೆಂಬ ನಾಮಾಂ ತರವುಳ್ಳ ಪ್ರತಿಷ್ಠಾಕಲ್ಪಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿದ್ದಾನೆ. ಇವನು ಜೈನಕವಿ; ಮಾಘ ಣಂದಿ ಸಿದ್ಧಾಂತಚಕ್ರವರ್ತಿಯ ಮಗನು; ಚತುರ್ವಿಧಪಾಂಡಿತ್ಯಚಕ್ರವರ್ತಿ ಎಂದು ತನ್ನನ್ನು ವಿಶೇ ಷಿಸಿ ಹೇಳಿಕೊಂಡಿದ್ದಾನೆ. ವ್ಯಾಖ್ಯಾನದ ಆರಂಭದಲ್ಲಿ—

ಶ್ರೀಮಾಘಣಂದಿ ಸಿದ್ಧಾಂತಚಕ್ರವರ್ತಿತನೂಭವಃ |
ಕುಮುದೇಂದುರಹಂ ವಚ್ಮಿ | ಪ್ರತಿಷ್ಠಾಕಲ್ಪಟಿಪ್ಪಣಂ ||

ಎಂಬ ಶ್ಲೋಕವೂ, ಅಂತ್ಯದಲ್ಲಿ—

ಇತಿ ಶ್ರೀ ಮಾಘಣಂದಿಸಿದ್ಧಾಂತಚಕ್ರವರ್ತಿಸುತ ಚತುರ್ವಿಧಪಾಂಡಿತ್ಯಚಕ್ರವರ್ತಿ ಶ್ರೀ ವಾದಿ ಕುಮುದಚಂದ್ರಪಂಡಿತದೇವ ವಿರಚಿತೇ ಪ್ರತಿಷ್ಠಾಕಲ್ಪಟಿಪ್ಪಣೇ ಎಂಬ ಗದ್ಯವೂ ಇವೆ.

ದೇವಚಂದ್ರನು ತನ್ನ ರಾಮಕಥಾವತಾರದಲ್ಲಿ (1797) ಪಂಪರಾಮಾಯಣದ ವಿಷಯವಾಗಿ–

"ಶ್ರೀ ಮೂಲಸಂಘ ಬಲೋತ್ಕಾರಗಣ ಶ್ರೀ ಮಾಘಣಂದಿಸಿದ್ಧಾಂತಚಕ್ರವರ್ತಿ ಸುತ ಚತುರ್ವಿಧಪಾಂಡಿತ್ಯ (ಚಕ್ರವರ್ತಿ) ಶ್ರೀ ವಾದಿಕುಮುದಚಂದ್ರಪಂಡಿತದೇವ ರಚಿತ ರಾಮಾಯಣ ಸಮಾನವಾದ ಶ್ರೀಮದಭಿನವಪಂಪರಚಿತ ರಾಮಾಯಣಂ" ಎಂಬುದರಿಂದ ಈ ಕವಿ ಒಂದು ರಾಮಾಯಣವನ್ನೂ ಬರೆದಿರುವಂತೆ ತಿಳಿಯುತ್ತದೆ. ಇವನ ಕಾಲವು ಸುಮಾರು 1100 ಆಗಿರಬಹುದೆಂದು ಊಹಿಸುತ್ತೇವೆ.

ಬಾಲಚಂದ್ರನು (ಸು. 1170) ತನ್ನ ತತ್ತ್ವಾರ್ಥತಾತ್ಪರ್ಯವೃತ್ತಿಯನ್ನು ಒಬ್ಬ ಕುಮುದ ಚಂದ್ರಭಟ್ಟಾರಕನ ಪ್ರತಿಬೋಧನಾರ್ಥವಾಗಿ ರಚಿಸಿದಂತೆ ಹೇಳುತ್ತಾನೆ. ಈ ಕುಮುದಚಂದ್ರನು ಬೇರೆ. (ಕವಿಚರಿತೆ ೩ನೆಯ ಸಂಪುಟ, ಪುಟ ೧೧; ಕವಿಚರಿತೆ ೧ನೇ ಸಂಪುಟದ ದ್ವಿತೀಯಮುದ್ರಣ, ಪುಟ ೧೧೩-೧೧೪)

ಪ್ರತಿಷ್ಠಾಕಲ್ಪಟಿಪ್ಪಣಕ್ಕೆ ಕನ್ನಡ ವ್ಯಾಖ್ಯಾನವನ್ನು ಬರೆದಿರುವ ಈ ಕುಮುದೇಂದು ತನ್ನನ್ನು 'ಚತುರ್ವಿಧಪಾಂಡಿತ್ಯಚಕ್ರವರ್ತಿ' 'ಮಾಘನಂದಿಸಿದ್ಧಾಂತ ಚಕ್ರವರ್ತಿಸುತ' ಎಂದು ಹೇಳಿಕೊಳ್ಳುವುದರಿಂದ ಇವನು ಮೇಲೆ ಹೇಳಿದ ಶಾಸ್ತ್ರ ಸಾರಸಮುಚ್ಚಯಾದಿ ಕರ್ತೃವಾದ ಮಾಘನಂದಿ ಸಿದ್ಧಾಂತಚಕ್ರವರ್ತಿಯ ಶಿಷ್ಯನೂ 'ಚತುರ್ವಿಧಪಾಂಡಿತ್ಯಚಕ್ರವರ್ತಿ' 'ಪರವಾದಿಗಂಡಭೇರುಂಡ' ಎಂಬ ಬಿರುದುಗಳುಳ್ಳವನೂ, ರಾಮಾಯಣದ ಕರ್ತೃವೂ ಆದ ಕುಮುದೇಂದುವೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇವನು ಕ್ರಿ. ಶ. ಸುಮಾರು ೧೨೭೫ ರಲ್ಲಿ ಇದ್ದನೆಂದೂ ಅದಕ್ಕಿಂತ ಹಿಂದೆಯೇ ತನ್ನ ಗ್ರಂಥಗಳನ್ನು ಪ್ರಾಯಶಃ ಬರೆದಿದ್ದನೆಂದೂ ನಾವು ಮೇಲೆಯೇ ಹೇಳಿರುವೆವು. ಆದುದರಿಂದ ಇವನು ಕ್ರಿ. ಶ. ಸುಮಾರು ೧೧೦೦ ರಲ್ಲಿ ಇದ್ದನೆಂಬ ಕವಿಚರಿತಕಾರರ ಊಹೆಯು ತಪ್ಪಾಗಿರುವುದು.

'ಚತುರ್ವಿಧಪಾಂಡಿತ್ಯಚಕ್ರವರ್ತಿ' ಯೂ, ರಾಮಾಯಣಕರ್ತೃವೂ ಆದ ಈ ಕುಮುದೇಂದುವು ನಾವು ಮೇಲೆ ನೋಡಿದಂತೆ ಮೂಲಸಂಘದ ಬಲಾತ್ಕಾರ ಗಣಕ್ಕೆ ಸೇರಿದವನಾದುದರಿಂದ, 'ಮೂಲಸಂಘದ ಬಲೋತ್ಕಾರಗಣದ ಶ್ರೀ ಮಾಘಣಂದಿ ಸಿದ್ಧಾಂತಚಕ್ರವರ್ತಿಸುತನಾದ ಚತುರ್ವಿಧಪಾಂಡಿತ್ಯ(ಚಕ್ರವರ್ತಿ) ಶ್ರೀ ವಾದಿ ಕುಮುದಚಂದ್ರಪಂಡಿತದೇವನು ಒಂದು ರಾಮಾಯಣವನ್ನು ಬರೆದನು' ಎಂಬ ಅರ್ಥವನ್ನು ಕೊಡುವ ದೇವಚಂದ್ರನ ಮೇಲೆ ಹೇಳಿರುವ ಮಾತುಗಳು ವಸ್ತುಸ್ಥಿತಿಗೆ ಅವಿರುದ್ಧಗಳಾಗಿರುವುವು. ಆದರೆ ಈ ಮಾತುಗಳಿಂದ ಈ ರಾಮಾಯಣವು ಪಂಪ ರಾಮಾಯಣಕ್ಕಿಂತ ಹಿಂದೆ ಇದ್ದಿರಬೇಕೆಂದು ಊಹಿಸುವುದು ಮಾತ್ರ ತಪ್ಪು. ವಸ್ತುತಃ ಈ ದೇವಚಂದ್ರನೇ ತನ್ನ ರಾಮಕಥಾವತಾರದಲ್ಲಿ—

" ಈ ರಾಮಕಥೆಯಂ ಮುನ್ನಂ ಆದಿದೇವನ ಸಮವಸರಣದೊಳ್ ಆದಿಚಕ್ರಿಯಪ್ಪ ಭರತೇಶ್ವರಂಗಂ ಪುರುಪರಮೇಶ್ವರಂ ಮೃದುಮಧುರಶ್ರಾವ್ಯನವ್ಯದಿವ್ಯಭಾಷೆಯಿಂ ನಿರೂಪಿಸಿದುದು ಪರಂಪರಾತೀರ್ಥಸಂತಾನದಿಂ ಬರೆ, ಪಶ್ಚಿಮತೀರ್ಥಂಕರರಪ್ಪ ಶ್ರೀ ವೀರವರ್ಧಮಾನಸ್ವಾಮಿ ಸರ್ವಭಾಷಾ ಸ್ವಭಾವದಿಂ ಶ್ರೇಣಿಕಮಹಾಮಂಡಲೇಶ್ವರಂಗಱಿಯೆ ಪೇೞ್ದುದುಂ, ಅದು ಅನುಕ್ರಮದಿಂ ಗುರುಪರಂಪರೆಯಿಂ ವ್ಯಕ್ತಮಾಗುತ್ತುಂ ಬರೆ ಕೂಚಿಭಟ್ಟಾರಕರುಂ ನಂದಿಮುನಿವರರುಂ ಕವಿಪರಮೇಷ್ಠಿಗಳುಂ ರವಿಷೇಣಾರ್ಯರುಂ ವೀರಸೇನ ಸಿದ್ಧಸೇನರುಂ ಪದ್ಮನಂದೀಶರುಂ ಗುಣಭದ್ರರುಂ ಸಕಲಕೀರ್ತಿಗಳೆಂದಿವರಾದಿಯಾಗಿ ಪೇೞ್ದುದಂ ಚಾವುಂಡರಾಯ, ನಾಗಚಂದ್ರ, ಮಾಘಣಂದಿಸಿದ್ಧಾಂತಿ, ಕುಮುದೇಂದು, ನಯಸೇನಾದಿಗಳ್ ಪುರಾಣದೊಳಂ ರಾಮಚರಿತ್ರದೊಳಂ ಕುಮುದೇಂದುರಾಮಾಯಣದೊಳಂ ಪುಣ್ಯಾಸ್ರವ ಕಥಾಸಾರದೊಳಂ ಪೇೞ್ದರ್. "

ಎಂದು ಬರೆದಿರುವನೆಂದು ಕವಿಚರಿತಕಾರರು ಹೇಳಿ, ಈ ವಾಕ್ಯವನ್ನು ತಮ್ಮ ಕವಿಚರಿತೆಯಲ್ಲಿ (I. ೮೫, ೮೬) ಉದ್ಧರಿಸಿ ಬರೆದಿರುವರು. ಈ ವಾಕ್ಯದಲ್ಲಿ ' ಚಾವುಂಡರಾಯ, ನಾಗಚಂದ್ರ, ಮಾಘಣಂದಿಸಿದ್ಧಾಂತಿ, ಕುಮುದೇಂದು, ನಯಸೇನ ' ಎಂಬುದು ಅಪಪಾಠವೆಂದೂ, ದೇವಚಂದ್ರನು ' ಚಾವುಂಡರಾಯ, ನಾಗಚಂದ್ರ, ಮಾಘಣಂದಿಸಿದ್ಧಾಂತಿಸುತ ಕುಮುದೇಂದು, ನಯಸೇನ ' ಎಂದು ನಾಲ್ಕುಜನ ರಾಮಾಯಣಕಥಾವಕ್ತೃಗಳ ಹೆಸರನ್ನೇ ಹೇಳಿರಬೇಕೆಂದೂ ಎಂಬ ವಿಷಯವು ಈ ಮೇಲಿನ ವಾಕ್ಯದಲ್ಲಿ ' ಪುರಾಣ ' ಎಂದರೆ, ಚಾವುಂಡರಾಯನು ಬರೆದ ಚಾವುಂಡರಾಯ ಪುರಾಣ, ' ರಾಮಚರಿತ್ರ ' (ಎಂದರೆ, ನಾಗಚಂದ್ರನ ರಾಮಚಂದ್ರಚರಿತ ಪುರಾಣ) ' ಕುಮುದೇಂದುರಾಮಾಯಣ ' (ಎಂದರೆ, ಈ ಹೆಸರಿನ ಪ್ರಸಿದ್ಧವಾದ ಗ್ರಂಥ) ' ಪುಣ್ಯಾಸ್ರವ ಕಥಾಸಾರ ' ಎಂದು ನಾಲ್ಕು ಮಾತ್ರ ಗ್ರಂಥಗಳ ಹೆಸರು ಕೊಡಲ್ಪಟ್ಟಿರುವುದರಿಂದಲೂ, ನಮಗೆ ತಿಳಿದಂತೆ ಮಾಘನಂದಿಸಿದ್ಧಾಂತಿಯೆಂಬ ಹೆಸರಿನ ಯಾವ ಕವಿಯೂ ರಾಮಾಯಣಕಥಾಗ್ರಂಥವನ್ನು ಬರೆದಿಲ್ಲವಾದುದರಿಂದಲೂ, ಕುಮುದೇಂದುರಾಮಾಯಣದ ಕರ್ತೃವಾದ ಕುಮುದೇಂದುವು (ನಾವು ಮೇಲೆ ನೋಡಿದಂತೆಯೂ ದೇವಚಂದ್ರನೂ ಹೇಳಿರುವಂತೆಯೂ) ಮಾಘನಂದಿಸಿದ್ಧಾಂತಿಯ ' ಸುತ ' ನಾಗಿದ್ದುದರಿಂದಲೂ ಕೂಡ, ಈ ಮೂರು ವಿಷಯಗಳನ್ನೂ ಪರ್ಯಾಲೋಚಿಸುವುದರಿಂದ ನಮಗೆ ಸುವ್ಯಕ್ತವಾಗುವುದು. ಈ ವಾಕ್ಯದಲ್ಲಿ ದೇವಚಂದ್ರನು ರಾಮಕಥೆಯು ಕಾಲಕ್ರಮದಲ್ಲಿ ಹೇಗೆ ಪ್ರಚಾರಗೊಂಡಿತೆಂಬುದನ್ನು ನಿರೂಪಿಸುತ್ತಾ ಮೊದಲು ಚಾವುಂಡರಾಯನ ಹೆಸರನ್ನೂ, ತದನಂತರ ನಾಗಚಂದ್ರನ ಹೆಸರನ್ನೂ, ತದನಂತರ ಮಾಘನಂದಿಸುತ ಕುಮುದೇಂದುವಿನ ಹೆಸರನ್ನೂ, ತದನಂತರ ನಯಸೇನನ ಹೆಸರನ್ನೂ ಹೇಳಿರುವುದರಿಂದ ಅವನೂ ಕೂಡ ನಾಗಚಂದ್ರನ ' ರಾಮಚರಿತ್ರ ' (ಎಂದರೆ, ರಾಮಚಂದ್ರ

ಚರಿತಪುರಾಣ)ದ ನಂತರ ಕುಮುದೇಂದುವಿನ ರಾಮಾಯಣವು ಹುಟ್ಟಿತೆಂದು ಅಭಿಪ್ರಾಯಪಡುತ್ತಿದ್ದನೆಂಬುದು ಸುಸ್ಪಷ್ಟವಾಗಿರುವುದು. ಹೀಗಿರುವಲ್ಲಿ 'ಅಭಿನವ ರಾಮಾಯಣಕ್ಕಿಂತ ಹಿಂದೆಯೇ ಕುಮುದಚಂದ್ರ ಅಥವಾ ಕುಮುದೇಂದುವಿನಿಂದ ವಿರಚಿತವಾದ ರಾಮಾಯಣವು ಒಂದಿತ್ತು' ಎಂದು ದೇವಚಂದ್ರನು ಹೇಳಿರುವನೆಂದು ಭಾವಿಸಿ, ಈ ಆಧಾರದ ಮೇಲೆ ಹಾಗೆಂದು ಹೇಳಿರುವ ಕವಿಚರಿತಕಾರರ ಅಭಿಪ್ರಾಯವು ಭ್ರಮಮೂಲಕವೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಈ ಮೇಲೆ ಪ್ರಸ್ತುತನಾದ ನಯಸೇನನ ಮತ್ತು ಅವನಿಂದ ರಚಿತವಾದ ಪುಣ್ಯಾಸ್ರವಕಥಾಸಾರದ ವಿಷಯವಾಗಿ ನಮಗೆ ಏನೂ ತಿಳಿಯದು. ಕವಿಚರಿತಕಾರರೂ ಕೂಡ ಈ ಕವಿಯ ವಿಷಯದಲ್ಲಾಗಲಿ, ಈ ಕಾವ್ಯದ ವಿಷಯದಲ್ಲಾಗಲಿ ಏನನ್ನೂ ಹೇಳಿಲ್ಲ. ಈ ನಯಸೇನನು ರಾಮಾಯಣಕರ್ತೃವಾದ ಕುಮುದೇಂದುವಿನಿಂದ ಈಚೆ ಜೀವಿಸಿದ್ದಿರಬೇಕೆಂಬ ಒಂದು ಅಂಶ ಮಾತ್ರ ಮೇಲಿನ ದೇವಚಂದ್ರ ವಾಕ್ಯದಿಂದಲೇ ಸ್ಪಷ್ಟವಾಗುವುದು. ಆದುದರಿಂದ ಇವನು ಧರ್ಮಾಮೃತದ ಕರ್ತೃವಾದ ನಯಸೇನನಿಂದಲೂ, ಅವನ ಹಿಂದೆ ಇದ್ದ ವ್ಯಾಕರಣಗ್ರಂಥಕಾರನಾದ ನಯಸೇನನಿಂದಲೂ ಭಿನ್ನನಾಗಿರಬೇಕು.

ತುಂಗರಾಯ :—ಅಪ್ಪಣೆ (ಹೋಗುವನು.)

ವಿಕ್ರಮರಾಯ :—(ಚಿಂತಾಮಗ್ನನಾಗಿರುವನು.)

(ಬೊಮ್ಮರಸಪಂಡಿತನ ಪ್ರವೇಶ.)

ಬೊಮ್ಮರಸ:—(ವಿಕ್ರಮರಾಯನಿಗೆ ಕಯ್ಮುಗಿಯುವನು.)

ವಿಕ್ರಮರಾಯ :—(ಕತ್ತೆತ್ತಿನೋಡಿ,) ಬಾ, ಪಂಡಿತ, ಕುಳಿತುಕೊ. ನಿನ್ನ ವೇಷವು ಅರಮನೆಗೆ ತವಕದ ಪ್ರಯಾಣವನ್ನು ಸಾರುತ್ತಿರುವುದು.

ಬೊಮ್ಮರಸ :—(ಕುಳಿತುಕೊಳ್ಳುತ್ತ,) ಅಹುದು ; ಪುಟ್ಟಸ್ವಾಮಿಯು ಆ ಯಾಸದಿಂದ ಮೂರ್ಛಿತನಾಗಿರುವನಂತೆ.

ವಿಕ್ರಮರಾಯ :—(ಗಂಭೀರಭಾವದಿಂದ,) ಪಂಡಿತ, ನೀನು ಅರಮನೆಗೆ ಹೋಗಿ, ಅಲ್ಲಿ ಅಪಮಾನಿತನಾಗಬಾರದೆಂಬ ಅಭಿಪ್ರಾಯದಿಂದಲೇ ನಾವು ನಿನ್ನನ್ನಿಲ್ಲಿಗೆ ಹೀಗೆ ಬರಮಾಡಿದುದು ; ನಮ್ಮನ್ನಾಳುವ ಶ್ರೀಮನ್ಮಹಾರಾಜ ಶ್ರೀಇಮ್ಮಡಿರಾಜಒಡೆಯರನ್ನು ,ಇನ್ನು— ಈಗಳಿನಿಂದ ಪುಟ್ಟಸ್ವಾಮಿಯೇ ಮುಂತಾದ ಸಲ್ಗೆಯ ಅತಿಪರಿಚಯದ ಹೆಸರುಗಳಿಂದ ಸಂಬೋಧಿಸಿದರೆ,······ರಾಜದ್ರೋಹವೆನಿಸುವುದು !

ಬೊಮ್ಮರಸ :—(ನಸುನಗೆವೆರಸು,) ಶ್ರೀಮನ್ತರು ಹಾಗೆ ವಿಧಿಸಿದರೆ,··· ಅಪ್ಪಣೆ.

ವಿಕ್ರಮರಾಯ :—ಶ್ರೀಮಂತರಿಗೂ ಅದೇ ಗತಿಯಾಗಿದೆ. ನಮ್ಮ ದಳವಾಯಿತನದ ಆಯುಸ್ಸು ನಾಳಿನ ಪ್ರಭಾತಕ್ಕೆ ಬರಿದಾಗುವುದು.

ಬೊಮ್ಮರಸ :—(ಬಿಲ್ಲುಂಬೆರಗಾಗಿ,) ಹಾಗೆಂದರೇನು ?

ವಿಕ್ರಮರಾಯ :—ಅಹುದು, ಬೇರೆ ದಳವಾಯಿಯನ್ನಾಳುವ ಶಕ್ತಿಯು ಮಹಾಸ್ವಾಮಿಯವರಿಗೆ ಮೆಯ್ದೋರಿ ಸಿದ್ಧವಾಗಿರುವುದು······ ಇನ್ನೆಂದರೆ, ಆಳುವ ಮಹಾಸ್ವಾಮಿಯವರು ನಾಳಿನ ಹೊತ್ತರೆಗೆಂದು ಸ್ವತಂತ್ರವಾಗಿ—ಸ್ವತಂತ್ರವಾಗಿ ನಿರ್ಣಯಿಸಿರುವ ಒಡ್ಡೋ

ಲಗದಲ್ಲಿ ತಮ್ಮ ಅಪ್ಪಾಜಿಯವರ ಆಳ್ಕೆಗಡೆಯಿಂದ ಇಂದಿನವರೆಗೆ ನಡೆದಿರುವ ರಾಜ್ಯದಾಡಳಿತದ ಆಯವ್ಯಯದ ಲೆಕ್ಕಪತ್ರಗಳನ್ನೆಲ್ಲಾ ಕೂಲಂಕಷವಾಗಿ ಒಪ್ಪಿಸಿಕೊಳ್ಳುವರು.

ಬೊಮ್ಮರಸ :—(ಎರ್ದೆಗಲಂಕಿ,) ಅದಕ್ಕೆ ನಾವು ಅನುಗೊಂಡಿರುವೆವಷ್ಟೆ ?

ವಿಕ್ರಮರಾಯ :—ಇಲ್ಲ, ಪಂಡಿತ ; ಮಹೀಶೂರರಾಜವಂಶದ ಅಪ್ರತಿಹತವಾದ ಬುದ್ಧಿಶಕ್ತಿಯ ತೀಕ್ಷ್ಣತೆಯನ್ನು ನೀನು ತಿಳಿಯಲಾರೆ; ಇಂದು ಪ್ರಾತಃಕಾಲದಲ್ಲಿಯೇ ಆರಿಗೂ—ನಮಗೂ ಅರಿವಾಗದಂತೆ ಹಠಾತ್ತಾಗಿ ಕರಣಿಕರ ಚಾವಡಿಗೆ ನುಗ್ಗಿ, ಮುಕ್ಕಾಲುಮೂರುವೀಸಪಾಲು ಲೆಕ್ಕಪತ್ರಗಳನ್ನೆಲ್ಲ·····ಮಹಾಸ್ವಾಮಿಯವರು ಪರಾಂಬರಿಸಿ···ಅರ್ಥಮಾಡಿಕೊಂಡಿರುವರು.

ಬೊಮ್ಮರಸ :—(ಬಗೆಗೆಟ್ಟು,) ಹಾಗಾದರೆ, ನಾನು···ನಾನು—

ವಿಕ್ರಮರಾಯ :—ಹತ್ತೊಂಭತ್ತುವರುಷ ಎರಡುತಿಂಗಳು ಹದಿನಾರು ದಿನಗಳಿಂದೀಚೆಗೆ—ನಿನಗೆ ನಿಯೋಗಿತನವಾದ ಬಳಿಕ ವಿಶೇಷವಾಗಿ—ಮಹಾಸ್ವಾಮಿಯವರ ಅರಮನೆಯ ಬೊಕ್ಕಸದಿಂದ ನಿಷ್ಕಾರಣವಾಗಿ ಮೋಸದಿಂದ ನೀನು ಪಡೆದಿರುವ ಎರಡು ಲಕ್ಷದ ನಾಲ್ವತ್ತೆಂಟು ಸಹಸ್ರದ ಮುನ್ನೂರ ಅರುವತ್ತುನಾಲ್ಕು ದುರ್ಗೀ ವರಹಗಳ ಲೆಕ್ಕವು ಮಹಾಸ್ವಾಮಿಯವರಿಗೆ ಅಳವುಗೊಟ್ಟು, ನಿರ್ಧಾರಿತವಾಗಿದೆ.

ಬೊಮ್ಮರಸ :—(ಬೆಳ್ಮೊಗನಾಗಿ, ಕಂಪಿಸುತ್ತ ಎದ್ದು, ಕಯ್ಗಳನ್ನು ಹೊಸೆಹೊಸೆದುಕೊಳ್ಳುತ್ತ,) ಅಯ್ಯೋ ! ಅಯ್ಯೋ !

ವಿಕ್ರಮರಾಯ :—ನಿಯೋಗಿಬೊಮ್ಮರಸಪಂಡಿತ ! ಇದಕ್ಕೆ ನಿನ್ನ ಉತ್ತರವಾದವೇನು ?

ಬೊಮ್ಮರಸ :—(ಸುತ್ತನೋಡಿ, ಗದ್ಗದಸ್ವರದಿಂದ) ನನ್ನ ಉತ್ತರವೆ ?······ ಉತ್ತರವೆ ?—ಕಾವೇರಿಯ······ಪ್ರವಾಹದಲ್ಲಿ·········

ವಿಕ್ರಮರಾಯ :—(ಪರುಷಕಂಠದಿಂದ,) ಪಂಡಿತ! ಇಲ್ಲಿ ಬಾ. ಕುಳಿತುಕೊ. ನಿನ್ನ ಮುಖದ ಬೆವರನ್ನೊರಸಿಕೊ. ಈಗ, ಸಾವಧಾನತೆಯಿಂದ ಕೇಳು ; ನಾಳೆ ಬೆಳಗಾಗುತ್ತಲೇ ನೆರವೇರಬೇಕಾದ ಒಡ್ಡೋಲಗವು ನೆರೆಯಲಾರದೆಹೋದರೆ, ನಿನಗೀ ವಿಪತ್ತಿನಿಂದ ವಿಮೋಚನವಾಗುವುದಿಲ್ಲವೆ ?

ಬೊಮ್ಮರಸ :—ಅಹುದು, ಅಹುದು.

ವಿಕ್ರಮರಾಯ :—ಅದನ್ನು ನಿಲ್ಲಿಸಲಾರೆವೆ ?

ಬೊಮ್ಮರಸ :—(ತವಕದಿಂದ,) ಅರಮನೆಗೆ ಬೆಂಕಿಯನ್ನಿಟ್ಟು ಹೊತ್ತಿಸಿ—ಬೇಯಿಸಿಬಿಡೋಣ !

ವಿಕ್ರಮರಾಯ :—(ಮುಗುಳ್ನಗೆಯಿಂದ,) ಆಗಳೂ ನೀನು ಮಹಾಸನ್ನಿಧಾನವನ್ನು ಸಭೆಯಲ್ಲಿ ಓಲಯ್ಸಲೇಬೇಕಾಗುವುದು ; ಎಂದರೆ, ಒಡ್ಡೋಲಗವು ನಡೆಯುವುದು.

ಬೊಮ್ಮರಸ :—ಎಲ್ಲಿ ? ಹೇಗೆ ?

ವಿಕ್ರಮರಾಯ :—ಎಲ್ಲಿಯೋ‥‥‥ಒಂದು ಗುಡಿಲಲ್ಲಿ.

ಬೊಮ್ಮರಸ :—(ನಿರಾಶನಾಗಿ,) ಹೇಗೆ ?

ವಿಕ್ರಮರಾಯ :—ಓಲಗಗುಡಲು ತಾವೇ ನಿಶ್ಚಯಿಸಿ, ನೇಮಿಸಿ, ಸಾಧಿಸಿಯೇಬಿಡಬೇಕೆಂಬ ಆರ್ಪ—ಅವರು ನೀನಿಡುವ ಬೆಂಕಿಯಿಂದ ಮೆಯ್ದಪ್ಪಿಸಿಕೊಂಡರೆ ?

ಬೊಮ್ಮರಸ :—(ಯೋಚಿಸುತಿದ್ದು,) ಅಹುದು, ಅವರು ಓಲಗವೀಯಲಾಗದು. ಅಷ್ಟೇ ! (ವಿಕಾರವಾಗಿ ಗಹಗಹಿಸಿ,) ನಾಳಿನ ದಿವಸಕ್ಕೆ ಮಹಾಸ್ವಾಮಿಯವರು ಇಂದಿನ ಆಯಾಸದಿಂದಲೇ ಏಳಲಾರದಷ್ಟು ಅಸ್ವಸ್ಥರಾಗುವರು.

ವಿಕ್ರಮರಾಯ :—ನಿನ್ನಾ ಮದ್ದಿನ ಗುಣವು ತೀರಿದ ಬಳಿಕ, ಅವರು ಎಚ್ಚರುಗೊಂಡೇಳುವರಷ್ಟೆ ; ಆಗಳಾದರೂ, ಈ ವಿಚಾರಣೆಯು ತಪ್ಪುವಂತಿಲ್ಲ.

ಬೊಮ್ಮರಸ :—(ಬೆದರಿ, ದುಮ್ಮಾನದಿಂದಿದ್ದು, ಕ್ಷೀಣಕಂಪಿತಸ್ವರದಿಂದ,) ಇಂದಿನ ಆಯಾಸದಿಂದ ಅವರಿಗೆ ಮನೋವೈಕಲ್ಯವು, ಆಜೀವನವೂ—ಹುಚ್ಚು ಬಂದಡಸಿದರೊ ?

ವಿಕ್ರಮರಾಯ :—ಅವರ ಆಪ್ತರು ಮಿತ್ರರು ಬಾಂಧವರು ಕಿಸುರ್ವೇರಿನ ನಿನ್ನನ್ನು ಸುಮ್ಮನೆ ಬಿಡುವರೇನು ?

ಬೊಮ್ಮರಸ :—(ಕಳೆಗೆಟ್ಟು,)……ಮುಂ··ಮುಂದಣದು—ಎಂತಹ ಮಹಾಪಾತಕ !

ವಿಕ್ರಮರಾಯ :—ಅಹುದು, ಪಂಡಿತ. ಒಂದು ಸುಳ್ಳನ್ನು ದುಷ್ಕೃತ್ಯವನ್ನು ಅಪರಾಧವನ್ನು ಮುಚ್ಚಿ ಗೆಲ್ಲುವುದಕ್ಕೆ, ಸಮರ್ಥಿಸಿ ಸಾಧಿಸಿ ಜೀರ್ಣಿಸಿಕೊಂಡು ಬದುಕುವುದಕ್ಕೆ, ಅಂತಹುವು—ಇನ್ನೂ ಉತ್ಕಟವಾದುವು—ಹತ್ತು··ನೂರು··ಸಾವಿರದ ಗಣನೆಗಳಲ್ಲಿ ಹುಟ್ಟಿ ಒದವಬೇಕು.

ಬೊಮ್ಮರಸ :—(ಧಿಗ್ಗನೆದ್ದು, ದ್ರುತಗತಿಯಿಂದ ಹೊರಟುಹೋಗುವನು.)

ವಿಕ್ರಮರಾಯ :—(ಸ್ವಲ್ಪಹೊತ್ತಿಗೆ,) ಅಳಗರಾಜ !

(ಅಳಗರಾಜಯ್ಯನ ಪ್ರವೇಶ.)

ಅಳಗರಾಜಯ್ಯ :—(ವಿಕ್ರಮರಾಯನಿಗೆ ನಮಿಸಿ ನಿಲ್ಲುವನು.)

ವಿಕ್ರಮರಾಯ :—ಅಳಗರಾಜ, ಬೊಮ್ಮರಸ ಪಂಡಿತನು ಅರಮನೆಯೊಳಕ್ಕೆ—ಹೊಸತಿಲನ್ನು ದಾಂಟಿದ ಆ ಕ್ಷಣವೇ ನಾವದನ್ನು ತಿಳಿಯಬೇಕು.

ಅಳಗರಾಜಯ್ಯ :—ಅಪ್ಪಣೆ. (ವಂದಿಸಿ, ಹೊರಡುವನು.)

ಪ್ರವೇಶ ೪.

[ಸ್ಥಾನ ;—ಶ್ರೀರಂಗಪಟ್ಟಣ, ಅರಮನೆಯೊಳಗೆ ನಾಟ್ಯಶಾಲೆ.]

(ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿಯು ಮಹಾರಾಜನ ಸಜ್ಜೆಯಲ್ಲಿ ಅವನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು, ಕುಳ್ಳಿರುವಳು. ಮಹಾರಾಣಿಯರು—

ವೇಂಕಟಾಜಮ್ಮಣ್ಣಿ ನಂಜಮ್ಮಣ್ಣಿಯರು—ಅವನ ಪಾದದೆಡೆಯಲ್ಲಿ ಕುಳಿತು, ಆಲವಟ್ಟಿಗಳಿಂದ ಅವನಿಗೆ ಮೆಲ್ಲನೆ ಬೀಸುತ್ತಿರುವರು. ಚೆಂದವ್ವೆಯೂ ರುದ್ರವ್ವೆಯೂ ಮನಗದಡಿ, ಮ್ಲಾನವದನೆಯರಾಗಿ, ದೂರದಲ್ಲಿ ನಿಂತಿರುವರು.)

ಮಹಾಮಾತೃಶ್ರೀ:—(ಈಷತ್ಕಾಲದ ತರುವಾಯ, ಶಿರವೆತ್ತಿ, ಅಕ್ಷಮಸ್ವರದಿಂದ,) ಏನಾ ಪಂಡಿತನು ಬರುವುದೇ ಇಲ್ಲವೇನು?—ಎಲೆ, ಚೆಂದವ್ವೆ, ನೀನು ಅವನ ಮನೆಗಾದರೂ ಹೋಗಿ, ವಿಚಾರಿಸಿಕೊಂಡು ಬೇಗನೆ ಬಾ, ಹೋಗು.

ಚೆಂದವ್ವೆ :—(ಹೋಗುವಳು.)

(ಅನತಿಕಾಲದಲ್ಲಿಯೇ ಚೆಂದವ್ವೆಯ ಬೊಮ್ಮರಸಪಂಡಿತನ ಪ್ರವೇಶ.)

ಮಹಾಮಾತೃಶ್ರೀ :—(ತಲೆಯೆತ್ತಿ,) ಪುಟ್ಟಸ್ವಾಮಿ—ಯವರಿಗೆ· ·ಮಹಾರಾಜರಿಗೆ ಅಸ್ವಸ್ಥತೆಯೆಂದು ಈ ರುದ್ರವ್ವೆಯು ನಿಮಗೆ ತಿಳಿಸಿ ಎಷ್ಟುಹೊತ್ತಾಯ್ತು ?

ಬೊಮ್ಮರಸ :—(ಕಿರುದನಿಯಿಂದ,) ಆಗಳೇ—

ಮಹಾಮಾತೃಶ್ರೀ :—ಮೊಗಗೊಟ್ಟು ಮಾತನಾಡಿ, ಪಂಡಿತರೆ!

ಬೊಮ್ಮರಸ :—(ಅಧೋವದನನಾಗಿ,) ಅರಮನೆಯ ಇದಿರಿಗೆ ಕರಾಟದ ನೆನೆಪುಂಟಾಗಿ, ಹಿಂದಿರುಗಿ ಹೋಗಬೇಕಾಯ್ತು.

ಮಹಾಮಾತೃಶ್ರೀ :—ಇರಬಹುದು. ನಿಮ್ಮ ಈ ಅಕ್ಷಮ್ಯವಾದ ಕಾಲವಿಳಂಬದ ವಿಷಯವನ್ನು ಮಹಾರಾಜರೇ ಎದ್ದುಬಳಿಕ ವಿಚಾರಿಸಿಕೊಳ್ಳುವರು. ಈಗ ಮಹಾಸ್ವಾಮಿಯವರಿಗೇನಾಗಿದೆ? ನೋಡಿ.

ಬೊಮ್ಮರಸ :—(ಮುಂದುವರಿದು, ಕ್ರಮಪ್ರಕಾರ ನಾಡಿ ಗಂಡಸ್ಥಲ ಕಯ್ಕಾಲ್ಗಳು ಮುಂತಾದುವನ್ನು ಮುಟ್ಟಿ ಹಿಡಿದು ಪರಿಕಿಸುತಿದ್ದು, ಹೃದಯದ ಮೇಲಣ ಬಟ್ಟೆಗಳನ್ನು ಬಿಚ್ಚಿ ಸರಿಯಿಸಿ, ಅಲ್ಲಿ ಕಿವಿಗೊಟ್ಟಾಲಯ್ಸಿ, ತಲೆಯನ್ನಲ್ಲಾಡಿಸುತ್ತ ಎದ್ದು, ಚೆಂದವ್ವೆಯನ್ನು ಕುರಿತು,) ಬೇಗನೆ ಸ್ವಲ್ಪ ಹಾಲನ್ನು ತೆಗೆದುಕೊಂಡು ಬಾ.

ಚೆಂದವ್ವೆ :—(ಚೆಚ್ಚರದಿಂದ ಹೋಗುವಳು)

ಮಹಾಮಾತೃಶ್ರೀ :—(ತಲ್ಲಳದಿಂದ,) ಪುಟ್ಟಸ್ವಾಮಿಗೇನಾಗಿದೆ, ಪಂಡಿತರೆ ?

ಬೊಮ್ಮರಸ :—(ದಡದಡನೆ,) ಆ ಹೃದ್ರೋಗ ! ನಾನು ಆದಿಯಿಂದಲೂ ಹೇಳುತ್ತಿದ್ದುದು ! ಉತ್ಕಟಾವಸ್ಥೆಗೇರಿದೆ !—ಲಕ್ಷಣಗಳು ಮಂಗಳಕರವಾಗಿಲ್ಲ !

ಮಹಾಮಾತೃಶ್ರೀ :—(ಭಯಚಕಿತೆಯಾಗಿ,) ಆಯ್ಯೋ !

(ಚೆಂದವ್ವೆಯು ಓಡಿ ಬರುವಳು.)

ಬೊಮ್ಮರಸ :—(ತನ್ನ ಧೋತ್ರದೊಳಗಿಂದೊಂದು ಸಣ್ಣಭರಣಿಯನ್ನು ತೆಗೆದು, ಅದರೊಳಗಣ ಚೂರ್ಣವನ್ನೆಲ್ಲಾ—ಸ್ವಲ್ಪವೂ ಉಳಿಯದಂತೆ ಚೆಂದವ್ವೆಯ ಕಯ್ಯ ಹಾಲ ಬಟ್ಟಲೊಳಕ್ಕೆ ಹಾಕಿ, ಆ ಬಟ್ಟಲನ್ನೆಳೆದುಕೊಂಡು, ರಭಸದಿಂದ ಹೋಗಿ, ಅದನ್ನು ಮಹಾರಾಜನ ಬಾಯ ಸಮೀಪದಲ್ಲಿ ಹಿಡಿಯುವನು.)

ಮಹಾಮಾತೃಶ್ರೀ :—ನಿಮ್ಮ ಕಯ್ಯೇಕೆ ಹೀಗೆ ನಡುಗುತ್ತಿದೆ, ಪಂಡಿತರೆ ? ನಿಮಗೆ ಚಳಿ ಬಂದಿರಬೇಕು. ಇಲ್ಲಿ ಕೊಡಿ. (ಆ ಕ್ಷೀರಪಾತ್ರವನ್ನು ಬೊಮ್ಮರಸಪಂಡಿತನ ಹಸ್ತಗಳಿಂದೀಯಿಸಿಕೊಂಡು, ಅದರೊಳಗಣದನ್ನು ಬೆರಲಿಂದ ಕಲಕುತ್ತಿರುವಳು.)

ಮಹಾರಾಜ :—(ಅಲುಗಿ, ಅಲ್ಲಾಡಿ, ನೀಳವಾಗಿ ಉಸಿರ್ಗರೆವನು.)

ಮಹಾಮಾತೃಶ್ರೀ:—(ಮಹಾರಾಜನ ಕಿವಿಗೆ ಬಗ್ಗಿ,) ಪುಟ್ಟಸ್ವಾಮಿ, ಬಾಯ್ತೆರೆ ; ಔಷಧ.

ಮಹಾರಾಜ :—(ಹಾಗೆಯೇ ಮೆಯ್ಮುರುಚಿ ಹೊರಳುತ್ತ,) ಊಂ.

ಮಹಾಮಾತೃಶ್ರೀ ·—ಔಷಧ, ಕಂದ.

ಬೊಮ್ಮರಸ :—(ಮೆಯ್ನಡುಗುತ್ತ, ತನ್ನ ಹಿಂದಕ್ಕೆ ತಿರುಗಿ, ಮುಖವನ್ನು ಮುಚ್ಚಿಕೊಂಡು, ನಿಲ್ಲುವನು.)

ಮಹಾರಾಜ :—(ಬಾಯ್ತೆರೆಯುವನು.)

ಮಹಾಮಾತೃಶ್ರೀ :—(ಅದನ್ನು ಮಹಾರಾಜನಿಗೆ ಈಂಟಿಸುವಳು.)

ಮಹಾರಾಜ :—(ಪರನಿಮಿಷದಲ್ಲಿ ಪವಡಿಸಿದ್ದಂತೆಯೇ ತಲೆಕಾಲ್ಗಳ ಮೇಲೆದ್ದು, ತೋಳ್ಗಳನ್ನು ವಿಕಾರವಾಗಿ ಬೀಸಿ, 'ಅಮ್ಮಯ್ಯಾ !' ಎಂದು ಕೂಗುತ್ತ ಬಿದ್ದು, ನಿಶ್ಚೇಷ್ಟನಾಗುವನು.)

ಮಹಾಮಾತೃಶ್ರೀ.—ಅಯ್ಯೋ ! ಅಯ್ಯೋ ! ಇದೇನು ?

ಮಹಾರಾಣಿಯರು :—(ದಿಗ್ಭ್ರಾಂತೆಯರಾಗಿ, ಮಹಾರಾಜನನ್ನು ಹಿಡಿದುಕೊಳ್ವರು.)

ಚೆಂದವ್ವೆ
ರುದ್ರವ್ವೆ } :—(ಭಯವಿಹ್ವಲೆಯರಾಗಿ, ಸಮೀಪವರ್ತಿನಿಯರಾಗುವರು.)

ಮಹಾಮಾತೃಶ್ರೀ :—ಪಂಡಿತರೇ ! ಪಂಡಿತರೇ ! ನೋಡಿ, ಬನ್ನಿ; ಇದೇನೋ ಆಯ್ತು !

ಬೊಮ್ಮರಸ :—(ಮತ್ತೆ ಹಿಂದಿರುಗಿ, ಮೆಲ್ಲಗೆ ಮುಂದಕ್ಕೆ ಬಾಗಿ, ಮಹಾರಾಜನ ಮುಖವನ್ನು ಹೊಳೆಹೊಳೆವ ದಿಟ್ಟಗಳಿಂದ ನಡೆನೋಡುತ್ತಿದ್ದು, ಕಟ್ಟಕಡೆಗೆ ಪಾತಾಳಸ್ವರದಿಂದ,) ಪುಟ್ಟಸ್ವಾಮಿಯು—ಮಹಾರಾಜರು—ಸ್ವರ್ಗಸ್ಥರಾದರು !

ಮಹಾರಾಣಿಯವರು :—ಅಯ್ಯೋ ! ಅಯ್ಯೋ ! (ಮೂರ್ಛಿತೆಯರಾಗಿ ಬೀಳುವರು.)

ಚೆಂದವ್ವೆ
ರುದ್ರವ್ವೆ } :—(ತಮ್ಮ ಸೆರಗುಗಳಿಂದ ಮುಖಗಳನ್ನು ಮುಚ್ಚಿಕೊಂಡು, ಬಿಕ್ಕಿಬಿಕ್ಕಿ ಅಳುತ್ತಿದ್ದು ಕಣ್ಣೊರಸಿಕೊಂಡು, ರೋದಿಸುತ್ತಲೇ ಹೋಗಿ, ಮಹಾರಾಣಿಯರನ್ನು ನೇರ್ಪಡಿಸುತ್ತಿರುವರು.)

ಮಹಾಮಾತೃಶ್ರೀ :—(ಮಹಾರಾಜನ ಮಸ್ತಕವನ್ನೆತ್ತಿ ಮೆಲ್ಲಗೆ ಕೆಳಗಿರಿಸಿ, ಎದ್ದು, ನಟ್ಟಾಲಿಗಳಿಂದ ತನ್ನ ಪುತ್ರನ ದೇಹದತ್ತ ಅಭೀಕ್ಷಿಸುತಿರುವಳು.)

(ಸಪರಿವಾರ ವಿಕ್ರಮರಾಯನ ಪ್ರವೇಶ.)

ವಿಕ್ರಮರಾಯ :—(ಅಳುತ್ತಿರುವ ಅವ್ವೆಯರತ್ತ, ಮಹಾಮಾತೃಶ್ರೀಯನ್ನು, ನಿಶ್ಚೇತನೆಯರಾಗಿರುವ ಮಹಾರಾಣಿಯರತ್ತ, ಮಹಾರಾಜನ ಶರೀರವನ್ನು ಚಟುಲಕಟಾಕ್ಷದಿಂದ ನೋಡಿ, ಕಡೆಗೆ ಬೊಮ್ಮರಸಪಂಡಿತನನ್ನು ತನ್ನ ತೀಕ್ಷ್ಣದೃಷ್ಟಿಗೆ ಸಿಕ್ಕಿಸಿಕೊಂಡು,) ನಮ್ಮನ್ನಾಳುವ ಮಹಾಸ್ವಾಮಿಯವರಿಗೆ ಬಹಳ ದೇಹಾಲಸ್ಯವಾಗಿರುವುದೆಂದು ತಿಳಿಯಿತು; ಈಗ ಹೇಗಿದೆ, ಪಂಡಿತ ?

ಬೊಮ್ಮರಸ :—(**ಅವಾಙ್ಮುಖನಾಗಿ, ನೀರವ.**)

ಮಹಾಮಾತ್ಯಶ್ರೀ :— (**ನೊಗವೆತ್ತಿ, ಸುತ್ತನಿಟ್ಟಿಸಿ, ಬೊಮ್ಮರಸಪಂಡಿತನತ್ತ ಬಿರುಗಣ್ಣಿಟ್ಟು, ಉತ್ಕಟಕಂಠದಿಂದ,**) ಮಹಾಸ್ವಾಮಿಯವರು ಸ್ವರ್ಗಸ್ಥರಾದರು.

ವಿಕ್ರಮರಾಯ :—ಹಾ ! (**ದೀರ್ಘವಾಗಿ ಸುಯ್ದು,**) ದೈವಶಾಸನ !...... ಹುಂ. (**ಮಹಾರಾಜದೇಹದ ಸಾರ್ಕೆಗೆಯ್ದು, ಬದ್ಧಾಂಜಲಿಪುಟನಾಗಿ ಬಾಗಿ, ಮಂಡಿಗಳನ್ನೂರಿ ಕುಳಿತು, ಆ ಶಿಖಾಸರ ಪಟ್ಟದುಂಗುರ ಎರೆವೆಟ್ಟಿನ ಕತ್ತಿ ಇವನ್ನು ಎಚ್ಚರದಿಂದ ಬಿಡಿಸಿ ತೆಗೆದುಕೊಂಡು, ಎದ್ದು ಹೊರಟು, ಬೊಮ್ಮರಸಪಂಡಿತನನ್ನುದ್ದೇಶಿಸಿ,**) ಮಹಾಸ್ವಾಮಿಯವರ ಈ ಆಕಸ್ಮಿಕವಾದ ಅಕಾಲಮರಣದಿಂದೊದವಿರುವ ರಾಜಕಾರ್ಯಗಳ ವ್ಯವಸ್ಥೆಗೋಸ್ಕರವಾಗಿ ನೆರೆಯುವ ಮಂತ್ರಾಲೋಚನಸಭೆಯಲ್ಲಿ ನೀನಿರಬೇಕಾಗಿದೆ, ಪಂಡಿತ ; ನಡೆ !

ಬೊಮ್ಮರಸ :—(**ಹೊರಡುವನು.**)

ಮಹಾಮಾತ್ಯಶ್ರೀ :—ಇರಿ, ಪಂಡಿತರೆ !—(**ಮಹಾರಾಜನ ಶರೀರದತ್ತ ಕಯ್ನಾಡಿ.**) ಆ ನಿರ್ಭಾಗ್ಯನು ಇನ್ನೂ ಸತ್ತಿಲ್ಲವೆಂದು ಈ ನನ್ನ ತಾಯಹೊಟ್ಟೆಯೊಳಗೊಂದು ಪ್ರತ್ಯಾಶೆಯುಂಟಾಗಿರುವುದು ; ಅವನಿಗೇನಾದರೂ ಚೇತನವುಂಟಾದರೆ, ಆಗಳಿಲ್ಲಿ ಪಂಡಿತರಿಲ್ಲದಿದ್ದರೆ ಹೇಗೆ ? ಆದುದರಿಂದ, ಪಂಡಿತರು ಈಗಳೇ ಹೋಗಲಾಗದು.

ವಿಕ್ರಮರಾಯ :—(**ಹುಬ್ಬುಗಂಟಿಕ್ಕಿ, ಸಪರಿವಾರನಾಗಿ ಹೋಗುವನು.**)

ಮಹಾಮಾತ್ಯಶ್ರೀ :—(**ಸ್ವಲ್ಪಹೊತ್ತು ಕಳಿಯಲು, ಸಜ್ಜೆಯ ತಲೆಯೆಡೆಗೆ ಹೋಗಿ ನಿಂತು,**) ಇಲ್ಲಿಬನ್ನಿ, ಪಂಡಿತರೆ.

ಬೊಮ್ಮರಸ :—(**ಸಮೀಪಕ್ಕೇಳ್ತರುವನು.**)

ಮಹಾಮಾತ್ಯಶ್ರೀ :—ಆ ನಿಲವುಗನ್ನಡಿಯಲ್ಲಿ ನೋಡಿ.

ಬೊಮ್ಮರಸ :—(**ಕೊರಲೆತ್ತುವನು.**)

ಮಹಾಮಾತೃಶ್ರೀ :—ನಿಮ್ಮ ಮುಖಕ್ಕೂ **(ಬೆರಲ್ತೋರುತ್ತ,)** ಈ ಶವದ ಮೋರೆಯ ಛಾಯೆಗೂ ಭೇದವೇನಿದೆ ?

ಬೊಮ್ಮರಸ :—ಅಯ್ಯೋ ! **(ಹಿಂಜರಿಯುವನು.)**

ಮಹಾಮಾತೃಶ್ರೀ :—............ನನಗಿದ್ದಂತೆ ನಿಮಗೂ ಒಬ್ಬನೇ ಮಗನಲ್ಲವೆ, ಪಂಡಿತರೆ ?

ಬೊಮ್ಮರಸ :—**(ಗದ್ಗದಿಕೆಯಿಂದ,)** ಏಕೆ ?

ಮಹಾಮಾತೃಶ್ರೀ :—ಇಲ್ಲಿಬನ್ನಿ, ಪಂಡಿತರೆ.

ಬೊಮ್ಮರಸ :—ಏತಕ್ಕೆ ?

ಮಹಾಮಾತೃಶ್ರೀ :—ಮುಂದಕ್ಕೆ ಬರುವಿರೇ ?—ಇಲ್ಲವೇ ?

ಬೊಮ್ಮರಸ :—**(ಭಯಾರ್ತನಾಗಿ, ಎಡಬಲಹಿಂದುಮುಂದುಗಳನ್ನಾರಯ್ವನು.)**

ಮಹಾಮಾತೃಶ್ರೀ :—ಚೆಂದವ್ವೆ ! ರುದ್ರವ್ವೆ ! ಅವರನ್ನು ಬಿಟ್ಟು ಏಳಿ ; ಹೋಗಿ, ಆ ಬಾಗಿಲಸಮೀಪದಲ್ಲಿ ನಿಲ್ಲಿರಿ.

ಚೆಂದವ್ವೆ, ರುದ್ರವ್ವೆ :—**(ಕಣ್ಗಳನ್ನೊರಸಿಕೊಳ್ಳುತ್ತ ಹೋಗಿ, ಕದದ ಎರಡೂಕಡೆಗಳಲ್ಲಿ ನೆಲೆಗೊಳ್ವರು.)**

ಮಹಾಮಾತೃಶ್ರೀ :—ಚೆಂದವ್ವೆ, ಈ ಪಂಡಿತರು ನನ್ನ ಸಮ್ಮತಿಯಿಲ್ಲದೆ ಹೊರಗೆ ಹೋಗುವುದಕ್ಕೆ ಕಾಲ್ದೆಗೆದರಾದರೆ, ಒಡನೆಯೇ ನಿನ್ನ ಮಡಿಲಲ್ಲಿರುವ ಕಿಗ್ಗಠಾರಿಯಿಂದ ಇವರನ್ನು ಇರಿದು ಕೊಂದು ಬಿಡು.

ಚೆಂದವ್ವೆ :—ಅಪ್ಪಣೆ. **(ತನ್ನ ಸೋಗಿಲೊಳಗೆ ಕಯ್ಯಿಟ್ಟುಕೊಳ್ಳುವಳು.)**

ಮಹಾಮಾತೃಶ್ರೀ :—ಈಗ, ಪಂಡಿತರೆ, ಅರ್ಥವಾಯ್ತೆ ?

ಬೊಮ್ಮರಸ :—**(ಉನ್ಮತ್ತನಂತೆ ಸುತ್ತ ಕಣ್ಗೆಯ್ದು,)** ಏನು ?

ಮಹಾಮಾತೃಶ್ರೀ :—ಬನ್ನಿ ಇಲ್ಲಿ. ಅತ್ತ—ಅಲ್ಲಿ ಕುಳಿತುಕೊಳ್ಳಿ...... ಕುಳಿತುಕೊಳ್ಳಿ !......ಆ ಶವದ ಕಾಲ್ಗಳನ್ನು ಮುಟ್ಟಿ ಹಿಡಿದು ಕೊಳ್ಳಿರಿ. ಇಷ್ಟವಿಲ್ಲವೇನು ?......ಚೆಂದವ್ವೆ !

ಚೆಂದವ್ವೆ :—ಏನು ?

ಮಹಾಮಾತೃಶ್ರೀ :—ಏನೂ ಇಲ್ಲ, ಅಲ್ಲಿಯೇ ಇರು.—ಸರಿ, ಪಂಡಿತರೆ; ಈಗ ಹೇಳಿರಿ: ಈ ಇಮ್ಮಡಿರಾಜಒಡೆಯರ ಹೆಣದ ಸಾಕ್ಷಿಯಾಗಿ, ನಿಮ್ಮ ಒಬ್ಬನೇ ಪುತ್ರನ ಸಾಕ್ಷಿಯಾಗಿ, ಅರುಹಂತನ ಸಾಕ್ಷಿಯಾಗಿ, ನೀವು ಇಂದೀಗ ಪುಟ್ಟಸ್ವಾಮಿಗೆ ಔಷಧವೆಂದು ವಿಷದ ಚೂರ್ಣವನ್ನು ಕೊಟ್ಟುದು ಉಂಟೇ ? ಇಲ್ಲವೆ ?

ಬೊಮ್ಮರಸ :—(ಸಿಡಿದೇಳುವನು.)

ಮಹಾಮಾತೃಶ್ರೀ :—(ಕರ್ಕಶವಾಗಿ ನಕ್ಕು,) ಚೆಂದವ್ವೆ, ಪಂಡಿತರು ಮುದುಕರಾದರೂ—ಜೋಕೆ !......ಇನ್ನು, ಪಂಡಿತರೆ, ದಶದಿಕ್ಕುಗಳನ್ನು ನೋಡುವುದರಿಂದ ಆವ ಪ್ರಯೋಜನವೂ ಇಲ್ಲ. ನೀವು ಹಾಗೆ ಪ್ರತಿಜ್ಞೆಮಾಡದಿದ್ದರೆ, ಇಲ್ಲಿಂದ ಪಾರಾಗಿ ಉಳಿಯಲಾರಿರಿ.

ಬೊಮ್ಮರಸ :—(ಸಂದೇಹಿಸುತ್ತಿದ್ದು, ಕಡೆಗೆ ಧೊಪ್ಪನೆ ಕುಕ್ಕುರಿಸಿಕೊಂಡು, ಮಹಾರಾಜನ ತಣ್ಣಡಿಗಳನ್ನೆಟ್ಟಿಹಿಡಿದು, ಕಣ್ಮುಗಿದುಕೊಂಡು, ಕ್ಷೀಣಗದ್ಗದ ಸ್ವರದಿಂದ,) ಈ ಮೃತನಾದ ಮಹಾರಾಜನ ಪಾದದಾಣೆಯಿಂದ, ನನ್ನ......ನನ್ನ.......ಮಗುವಿನ ಸಾಕ್ಷಿಯಾಗಿ, ನಾನು ಇಂದೀಗ ಔಷಧ ಎಂದು ಪುಟ್ಟಸ್ವಾಮಿಗೆ.........ವಿಷಚೂರ್ಣವನ್ನು......ಕೊಟ್ಟುದು— —ಉಂಟು.

ಚೆಂದವ್ವೆ
ರುದ್ರವ್ವೆ } :—(ಸನ್ತ್ರಸ್ತೆಯರಾಗಿ,) ಶಿವಶಿವಾ ! ಅಯ್ಯೋ !

ಮಹಾಮಾತೃಶ್ರೀ :—(ವಿದ್ಯುಲ್ಲತೆಯ ರಭಸದಿಂದವರತ್ತ ತಿರುಗಿ, ಕೆರಳ್ದ ಸಿಂಹಿಯಂತೆ,) ಸದ್ದು !.........ಆಯ್ತು ; ಈಯಿದು ವಿಕ್ರಮರಾಯರಿಗೆ ತಿಳಿದಿದೆಯೋ ?

ಬೊಮ್ಮರಸ :—ಅವರೇ ನನಗಿದನ್ನು ಸೂಚಿಸಿ ಹೇಳಿ ಕೊಟ್ಟವರು.

ಪ್ರವೇಶ ೫.

[ಸ್ಥಾನ;—ತೆರಕಣಾಂಬಿ, ಶ್ರೀರಣಧೀರಕಂಠೀರವನರಸರಾಜಒಡೆಯನ ಗರುಡಿ.]

(ರಣಧೀರನು ಹಲವುಮಂದಿ ಮಲ್ಲರೊಡನೆ ಸಾಧಕಮಾಡುತ್ತಿರುವನು.)

ಬಸವಮಲ್ಲಯ್ಯ :—(ಈಷತ್ಕಾಲದ ಬಳಿಕ, ಬಳಲಿ ಎದ್ದು ನಿಂತು, ಆಳ್ಳೆಹೊಯ್ಯುತ್ತ, ಮತ್ತಿನವರು ಶ್ರಮಮಾಡುವುದನ್ನು ನೋಡುತಿದ್ದು,) ಸಾಕ್ಷಾತ್ ಭೀಮಸೇನನೇ ಬಂದರೂ, ದಿನದಿನವೂ ಹೀಗಾದರೆ, ರಕ್ತವನ್ನು ಕಾರುತ್ತ ಸತ್ತೊರಗುವುದೆ !

ಇತರರೆಲ್ಲ :—(ಏಳುವರು.)

ಸಕ್ಕ :—ನೀನೇ ಆ ಭೀಮನಷ್ಟೆ, ಬಸವಮಲ್ಲ !—ರಣಧೀರನೇತಕ್ಕಿನ್ನು ?

ಬಸವಮಲ್ಲಯ್ಯ :—(ಕೋಪದಿಂದ,) ಸಕ್ಕ !—ಮೊನ್ನೆ ಠಾಯೆಯಲ್ಲಿ ಕತ್ತರಗೊಟ್ಟುರುಳಿಸಿದುದನ್ನು ಮರೆತುಬಿಟ್ಟೆಯೋ ?

ಸಕ್ಕ :—(ನಕ್ಕು,) ಇಲ್ಲ. ಅದಕ್ಕೆ ಪ್ರತಿಯಾಗಿ ನಾಳಿನ ರಾತ್ರಿಗೆ ಡೊಕ್ಕರದ ಪಟ್ಟಿನಿಂದ ನಾವಿಬ್ಬರೂ ಇಲ್ಲಿ ಕಾಳೆಗಮಾಡಬೇಕೆಂಬ ರಣಧೀರನ ನಿಬಂಧನೆಯನ್ನು ನೀನು ನೆನೆದುಕೊಳ್ಳುತ್ತಿರು.

ಬಸವಮಲ್ಲಯ್ಯ :—ರಣಧೀರ, ನಾಳಿನವರೆಗೆ ಈ ನನ್ನ ವಜ್ರಮುಷ್ಟಿಗಳ ತೀಕ್ಷ್ಣೆಯನ್ನು ಅಡಗಿಸಿಟ್ಟು ಸಯಿಸಲಾರೆನು ; ಆ ಹೋರಟೆಯು ಈಗಳೇ ಆಗಬಾರದೆ ?

ರಣಧೀರ :—(ನಸುಬೆವರ್ದ ತನ್ನ ಎದೆಹಣೆಗಳಿಗೆ ಅಲ್ಲಿಯ ಮಟ್ಟಿಯನ್ನೆತ್ತಿ ಒತ್ತುತ್ತ, ಸಕ್ಕನತ್ತ ತಿರುಗಿ,) ನೀನೂ ಈಗಳೇ ಸಜ್ಜಾಗಿರುವೆಯೇನು ?

ಸಕ್ಕ :—ಈ ಹುಲುಗಾಳೆಗಕ್ಕಾಗಿ ನಾನು ಸಿದ್ಧನಾಗಿರಬೇಕೆ, ರಣಧೀರ ? ಇದು ಎಂದಾವಾಗಳಾದರೂ ನನಗೆ ಸಮ್ಮತವೇ.

ನಿರೀಶ :—ಪರಿಪೂರ್ಣವಾಗಿ ಕಳಿತು, ಕಳಚಿಬೀಳುತ್ತಿರುವ ತನಿವಣ್ಣುಗಳನ್ನು ಒಡನೆಯೇ ಸವಿಯದಿದ್ದರೆ, ಅವು ಹುಳಿಯೇರುವುವು.

ಬಸವಮಲ್ಲಯ್ಯ :—(ಕಿನಿಸಿ,) ನಿನ್ನನ್ನು ಮಾತನಾಡಿಸಿದವರಾರೆಲೆ, ನಗದ ನಿರೀಶ ?

ನಿರೀಶ :—ಈ ನಿಸ್ಸಾರವಾದ ಕಲಿಯುಗದಲ್ಲಿ ಈ ಇಬ್ಬರು ಭೀಮಂದಿರು ಪಟ್ಟುಹಿಡಿದು ಪ್ರತ್ಯಕ್ಷವಾಗಿ ಹೆಣಗುವುದನ್ನು ನೋಡುವ ಪುಣ್ಯವು ಎಲ್ಲಿ ಸಡಿಲಿ ತಪ್ಪಿಸಿಕೊಂಡೋಡಿಹೋಗುವುದೋ, ಎಂದು ನನಗೆ ಹೆದರಿಕೆ.

ಎಲ್ಲರೂ :—(ನಗುವರು.)

ಬಸವಮಲ್ಲಯ್ಯ :—ನಗದ ನಿರೀಶನೆಂದು ನಿನಗೆ ಹೆಸರಿಟ್ಟವರು ಶುದ್ಧ ಮೂಢರು ; ನಮ್ಮನ್ನೆಲ್ಲ ಹೀಗೆ ನಗಸಿನಗಿಸಿ ನೋಯಿಸುವ ನಿನಗೆ ಆ ಬಿರುದು ಸಲ್ಲದು.

ನಿರೀಶ :—ಇತರರಿಂದ ನಗೆಯನ್ನು ಹಿಂಡುವದೂ ಅಷ್ಟು ಸುಲಭವಲ್ಲ, ಗಿಳಿಯೆ; ಹೆರವರನ್ನು ನಗಿಸಬೇಕಾದ ನಿರ್ಭಾಗ್ಯನು ಎಷ್ಟುಮಟ್ಟಿನ ಕಷ್ಟಗಳನ್ನು ಹಿಂಸೆಗಳನ್ನು ಜಿತೇಂದ್ರಿಯತ್ವವನ್ನು ಸಂಪಾದಿಸಿ ಪ್ರಯೋಗಿಸಿ ಬಳಲಬೇಕೆಂಬುದನ್ನು ನೀನರಿಯೆ. ಇನ್ನು, ರಣಧೀರ, ಈ ಭೀಮಸೇನರ ಬಾಹುಯುದ್ಧಕ್ಕೆ ಅಪ್ಪಣೆಯೆ ?

ರಣಧೀರ :—ಆಗಬಹುದು.

ಸಕ್ಕ
ಬಸವಮಲ್ಲಯ್ಯ } :—(ಒಡನೆಯೇ ಮಟ್ಟಿಗೆ ನೆಗೆದು, ತೊಡೆಗಳನ್ನು ಚಪ್ಪರಿಸಿ, ತೋಳ್ಸೊಯ್ದು, ದಂಡೆಯಿಕ್ಕಿ, ಹಾರಿಯೆದ್ದು, ಪರಸ್ಪರ ಕಯ್ಗೊಟ್ಟಳೆದಾಡಿ, ಬಿನ್ನಣದಿಂದ ಮೆಯ್ಯೊಡ್ಡಿ ನಿಂತು, ಸಂಚರಿಸಿ ಪೊಣರ್ಕೆಗಾರಂಭಿಸುವರು.)

(ಹೊರಗೆ):—(ಬಾಗಿಲನ್ನು ತಟ್ಟಿದ ಶಬ್ದ.)

ನಿರೀಶ :—(ಎದ್ದುಹೋಗಿ, ಕದವನ್ನು ತೆರೆಯುವನು.)

(ತುಂಗರಾಯನ ಪ್ರವೇಶ.)

ನಿರೀಶ :—(ಆಗನ್ತುಕನನ್ನು ಪಡಿಯೆಡೆಯಲ್ಲಿ ತಡೆದು,) ಆರು ನೀನು ?

ತುಂಗರಾಯ :—ಶ್ರೀಮಂತವಿಕ್ರಮರಾಯರ ಪರಿವಾರದವನು ; ಶ್ರೀರಂಗಪಟ್ಟಣದಿಂದ ಬಂದಿರುವ ಅವಸರದ ವೇಗಾಯಿಲ.

ನಿರೀಶ :—(ಹಿಂದಿರುಗಿ ಬರುತ್ತ,) ಹೋ ! ಶ್ರೀರಂಗಪಟ್ಟಣದಿಂದ ಅವಸರದ ಓಲೆಕಾರ !—ಆರಲ್ಲಿ ? ಆ ಹೋರಾಟವನ್ನೀಗ ಸಾಕುಮಾಡಿರಿ.

ಹಲವುಮಂದಿ ಜಟ್ಟಿಗರು :—(ಮಟ್ಟಿಯ ಕಳನೊಳಕ್ಕೆ ನುಗ್ಗಿ, ಕಾದುತ್ತಿರುವ ಇಬ್ಬರನ್ನೂ ಹಿಡಿದು ಹಿಂದಗಲ್ಚಿ, ಬೇರೆಬೇರೆ ಕರೆದುತರುವರು.)

ನಿರೀಶ :—ಹೀಗೆ ಬಾ, ವೇಗಾಯ್ಲ ಮಹಾಶಯ. ನಿನ್ನ ಓಲೆಯು ಆರಿಗೆ ?

ತುಂಗರಾಯ :—(ಮುಂಬರಿಯುತ್ತ,) ಶ್ರೀರಣಧೀರಕಂಠೀರವನರಸರಾಜ ಒಡೆಯ ಮಹಾಸ್ವಾಮಿಯವರಿಗೆ.

ಜಟ್ಟಿಗರೆಲ್ಲ :—(ಆಶ್ಚರ್ಯದಿಂದ,) ಮಹಾಸ್ವಾಮಿಯವರು !

ರಣಧೀರ :—ಅದನ್ನು ತೆಗೆದುಕೊಂಡು ಓದು, ನಿರೀಶ.

ತುಂಗರಾಯ :—(ರಣಧೀರನಿಗೆ ಮಹಾರಾಜನಿಗೆಂತಂತು ಮಣಿದು ವಂದಿಸಿ, ಅವನ ಮುಮ್ಮೊಗದಲ್ಲಿ ಮಂಡಿಸಿ, ಎರಡೂ ಕಯ್ಗಳಿಂದ ಓಲೆಯನ್ನೊಪ್ಪಿಸುವನು.)

ರಣಧೀರ :—(ಅದನ್ನೆತ್ತಿ ನಿರೀಶನ ಕಯ್ಗೀವನು.)

ನಿರೀಶ :—(ಮುದ್ರೆಯೊಡೆದು, ಓದುವನು:)

ನಮ್ಮ ಕಂಠೀರವನರಸರಾಜನಿಗೆ—ಆದಾಗಿ :

ಶ್ರೀಮನ್ಮಹಿಶೂರರತ್ನಸಿಂಹಾಸನಾಧೀಶ್ವರ ಶ್ರೀಇಮ್ಮಡಿರಾಜ ಒಡೆಯರು ಸ್ವರ್ಗಸ್ಥರಾದರು; ಆದುದರಿಂದ ನಿನ್ನನ್ನು ಪಟ್ಟಕ್ಕೆ ಆಯ್ದುದಾಯ್ತು. ಈ ಸೂಚನೆಯನ್ನು ಕಂಡೊಡನೆಯೇ ನೀನು ಸಕುಟುಂಬನಾಗಿ ಮಹಿಶೂರಿಗೆ ಹೊರಟುಬರಬೇಕು. ವಿಶೇಷ ವಿಷಯಗಳನ್ನು ಮುಖತಃ ತಿಳಿಯುವೆ.

ಇತಿ

ದಳವಾಯಿ ವಿಕ್ರಮರಾಯ.

ರಣಧೀರ :—(ಗಂಭೀರನಾದದಿಂದ,) ಪುನಃ ಓದು !

ನಿರೀಶ :—(ಸಾವಧಾನವಾಗಿ ಮತ್ತೆ ವಾಚಿಸುವನು.)

ರಣಧೀರ :—(ಅವಾಙ್ಮುಖನಾಗಿದ್ದು, ಎದ್ದು,) ನಿನ್ನ ಹೆಸರೇನು ?

ತುಂಗರಾಯ :—ತುಂಗರಾಯ.

ರಣಧೀರ :—ತುಂಗರಾಯ, ಸ್ವರ್ಗಸ್ಥರಾದ ನಮ್ಮ ತಮ್ಮಾಜಿಯವರು— ಅವರಿಗೇನಾಗಿದ್ದಿತು ?

ತುಂಗರಾಯ :—ನನಗೆ ತಿಳಿಯದು, ಮಹಾಸ್ವಾಮಿ.

ರಣಧೀರ :—ನಿನಗೆ ತಿಳಿಯದು !—ಅಕಸ್ಮಾತ್‌ಮರಣವೆ ? ಅವರು ಸ್ವರ್ಗಸ್ಥರಾದ ವಿಷಯವನ್ನು ನಿನಗೆ ಹೇಳಿದವರಾರು ?

ತುಂಗರಾಯ :—(ಯೋಚಿಸಿ,) ಶ್ರೀಮನ್ತವಿಕ್ರಮರಾಯರು, ಮಹಾಸ್ವಾಮಿ.

ರಣಧೀರ :—ನೀನು ಸತ್ಯವನ್ನು ಹೇಳುತ್ತಿಲ್ಲ.

ತುಂಗರಾಯ :—ಮಹಾಸ್ವಾಮಿ !

ರಣಧೀರ :—ನಡೆದುದನ್ನು ನುಡಿಯಲು ಯೋಚಿಸಿದೆಯೇಕೆ ?—ಶ್ರೀಮಂತವಿಕ್ರಮರಾಯರು ನಿನಗೀ ವಾರ್ತೆಯನ್ನು ವ್ಯಕ್ತಗೊಳಿಸಿದಾಗ, ಇದು ಪಟ್ಟಣಿಗರಿಗೆ ಪ್ರಚಾರವಾಗಿದ್ದಿತಷ್ಟೆ ?

ತುಂಗರಾಯ :—ಇಲ್ಲ, ಮಹಾಸ್ವಾಮಿ. ಶ್ರೀಮಂತರು ನನಗಿದನ್ನು ಸೂಚಿಸಿದಾಗ ಈ ವೃತ್ತಾನ್ತವು ಅರಮನೆಯವರಿಗೇ—ಅನೇಕರಿಗೆ ತಿಳಿದಿದ್ದಿರಲಾರದು ;·········

ರಣಧೀರ :—ಹೇಳು.

ತುಂಗರಾಯ :—ಏಕೆಂದರೆ, ಈ ವಿಷಯವು ಮೊತ್ತಮೊದಲು ಶ್ರೀಮಂತರಿಗೆ ತಿಳಿದು, ಆವೊಡನೆಯೇ ಅವರು ನನ್ನನ್ನಿಲ್ಲಿಗೆ ಅಟ್ಟಿರಬೇಕು.

ರಣಧೀರ :—ಮಹಾರಾಜರನ್ನು ನೀನು ನೋಡಿದ್ದುದಾವಾಗ ?

ತುಂಗರಾಯ :—(ಸ್ಮರಿಸಿಕೊಂಡು,) ಆರುದಿನಗಳ ಹಿಂದೆ.

ರಣಧೀರ :—ಎಲ್ಲಿ ?

ತುಂಗರಾಯ :—ವಿಜಯದಶಮಿಯ ಮೆರೆವಣಿಗೆಯ ಉತ್ಸವದ ಸಮಾರಂಭದಲ್ಲಿ ಆನೆಯಮೇಲೆ, ಮಹಾಸ್ವಾಮಿ.

ರಣಧೀರ :—ಆಗಳವರಿಗೇನಾದರೂ ದೇಹಾಯಾಸವಾಗಿದ್ದಂತೆ ತೋರುತ್ತಿದ್ದಿತೆ ?

ತುಂಗರಾಯ :—ನಾನು ನಿಶ್ಚಯವಾಗಿ ಹೇಳಲಾರೆನು, ಮಹಾಸ್ವಾಮಿ; ಆಗ ನಾನು ಹಿಂದಣ ಮಹಾರಾಜ—ಮಹಾಸ್ವಾಮಿಯವರನ್ನು ಸಂದರ್ಶಿಸಿದುದು ಬಹುದೂರದಿಂದ.

ರಣಧೀರ :—ಬಸವಮಲ್ಲಯ್ಯ, ಹೋಗಿ ಈ ಹರಿಕಾರನಿಗೆ ಬೀಡಾರವನ್ನು ತೋರಿ, ಇತರ ಅನುಕೂಲ್ಯಗಳನ್ನು ಅನುಗೊಳಿಸಿಕುಡು.

ಬಸವಮಲ್ಲಯ್ಯ :—ನಡೆಯಿರಿ, ತುಂಗರಾಯರೆ. (ಹೊರಟು, ಹಿಂದಿರುಗಿ,) ರಣಧೀರ,.........

ನಿರೀಶ :—ಮಹಾಸ್ವಾಮಿಯವರೆಂದು ಶ್ರುತಪಡಿಸು, ಬಸವಮಲ್ಲ.

ಬಸವಮಲ್ಲಯ್ಯ :—ನಮಗೂ !

ನಿರೀಶ :—ನಮಗೆಂದರೆ ? ನಮ್ಮಲ್ಲಿ ಆವನೇ ಆದರೂ, ಮಹೀಶೂರದೇಶವನ್ನು—ನಮ್ಮ ಮಾತೃಭೂಮಿಯನ್ನು ಆಳುವ ಶ್ರೀಮನ್ಮಹಾರಾಜರವರಿಗೆ ಪ್ರಥಮತಃ ಪ್ರಜೆಯು ; ಆತರುವಾಯೆ ಒಡನಾಡಿ, ಗೆಳೆಯ, ಬೇಕಾದ ಸಲ್ಗೆಯವನು. ತಿಳಿಯಿತೆ ?

ಸಕಲರೂ :—(ರಣಧೀರನಿಗೆ ನೀಡುಂಗಯ್ಯುಗಳಿಂದ ಬಾಗಿ ವಂದಿಸಿ,) ಮಹಾಸ್ವಾಮಿಯವರಿಗೆ ಜಯವಾಗಲಿ !

ರಣಧೀರ :—(ನಕ್ಕು,) ನಮಗಿನ್ನೂ ಪಟ್ಟಾಭಿಷೇಕವೇ ಆಗಿಲ್ಲವಲ್ಲ, ನಿರೀಶ.

ನಿರೀಶ :—ಆ ವಿಷಯವನ್ನು ಅನಂತರದಲ್ಲಿ ಬಿನ್ನಯ್ಸಿಕೊಳ್ವೆನು, ಮಹಾಸ್ವಾಮಿ. ಈಗ—(ತುಂಗರಾಯನನ್ನೂ ಬಸವಮಲ್ಲಯ್ಯನನ್ನೂ ನೋಡುವನು.)

ಬಸವಮಲ್ಲಯ್ಯ }
ತುಂಗರಾಯ } :—(ಹೋಗುವರು.)

ರಣಧೀರ :—(ಚಿಂತಾಕ್ರಾನ್ತನಾಗಿದ್ದು,) ನಿರೀಶ, ವಿಕ್ರಮರಾಯನ ಅರ್ಥವನ್ನು ನೀನು ಮನಗಂಡುದಾಯ್ತೆ ?

ನಿರೀಶ :—ಆಯ್ತು.

ರಣಧೀರ :—ರಾಜ್ಯವು ನೀನೂಹಿಸಿಕೊಂಡಿರುವಷ್ಟು ಸುಲಭಸಾಧ್ಯವಾಗಿರುವಂತೆ ತೋರುವುದಿಲ್ಲ.

ನಿರೀಶ :—ಕಟ್ಟಿದ ದಟ್ಟಿಚಲ್ಲಣದ ಉಟ್ಟ ಮಲ್ಲಪಳಿಯ ಈ ವೇಷದಿಂದ ಕೆಮ್ಮಣ್ಣುಮಟ್ಟಿಯಲ್ಲಿ ವೀರಾಸನದಲ್ಲಿ ಕುಳ್ಳಿರುತ್ತ, ಆ ಪಟ್ಟಿನ ಕದನವನ್ನು ಮಹಾಸ್ವಾಮಿಯವರು ಪರಾಂಬರಿಸುತಿದ್ದ ಸಮಯಕ್ಕೆ ಈ ವೃತ್ತಾಂತವು ತಿಳಿಯೆಬಂದುದರಿಂದ—ದುಷ್ಟನಿಗ್ರಹವು ವಿಶೇಷವಾಗಿ, ಮಹಾಸ್ವಾಮಿಯವರ ಆಳ್ಕೆಯಲ್ಲಿ ರಾಜ್ಯವು ನಿಷ್ಕಣ್ಟಕವಾಗುವುದೆಂದು ಸೂಚನೆ.

ರಣಧೀರ :—(ಮಂದಸ್ಮಿತವದನನಾಗಿ,) ರಾಜಧಾನಿಗೆ ಇಷ್ಟು ದೂರದಲ್ಲಿ ಹೀಗೆ ಇಷ್ಟುಬೇಗನೆ ಹೊಗಳುವ ಭಟ್ಟನೊಬ್ಬನು ಆವಿರ್ಭವಿಸಬಲ್ಲನೆಂಬುದು ನಮಗೆ ತಿಳಿದಿರಲಿಲ್ಲ.

ನಿರೀಶ :—ಮತ್ತೆ, ದುರಭಿಸಂಧಿಯ ಧೂರ್ತದಳವಾಯಿಯೊಬ್ಬನ ಸೊಕ್ಕನ್ನಿಳಿಹಿ, ಮಹೀಶೂರರತ್ನಸಿಂಹಾಸನವನ್ನು ಸತ್ತ್ವತಃ ಸ್ವತಂತ್ರ ಮಾಡಲು, ಮಹಾಸ್ವಾಮಿಯವರಂತಹ ಸಾಹಸಾಂಕನ—ಶಕ್ತಿಪ್ರಯೋಗದಲ್ಲಿ ಕುಶಲಯೋಗಿಯ—ಆವಶ್ಯಕತೆಯುಂಟಾಗಿರುವುದೆಂಬುದು.

ರಣಧೀರ :—ಅದು ಸ್ವಲ್ಪ ನಿಜ, ನಿರೀಶ; ಮಕ್ಕಳಾಗಿರುವ ಉತ್ತರಾಧಿಕಾರಿಗಳನ್ನು ಬಿಟ್ಟು ಸ್ವರ್ಗಸ್ಥರಾಗುವ ಪ್ರತಾಪಿರಾಜರ ರಾಜ್ಯಗಳು—ಅವಕ್ಕೆ ಅಡಸದ ಕಷ್ಟಕ್ಲೇಶಗಳಿಲ್ಲ.

ನಿರೀಶ :—ಹಾಗೆ ದುಃಖಕ್ಕೆ ಕೋಟಲೆಗಳಿಗೆ ಪಕ್ಕಾದ ಅಂತಹ ರಾಜ್ಯಗಳನ್ನು ಹಾಳಾಗದಂತೆ ಸಕಾಲದಲ್ಲಿ ಉದ್ಧರಿಸಿ ಸಲಹುವುದಕ್ಕೆ ನಿಪುಣರಾದ ಸತ್ತ್ವಯುಕ್ತಪ್ರತಿಭಾಶಾಲಿಗಳನ್ನು ಸರ್ವಕರ್ತ್ರಾರನು ಸೃಷ್ಟಿಸದೆಯೂ ಇಲ್ಲ, ಮಹಾಸ್ವಾಮಿ.

ರಣಧೀರ :—(ಬಗೆಯುತಿದ್ದು,) ನಿರೀಶ, ಆ ದಳವಾಯಿಯ ಲೇಖವನ್ನು ಪುನಶ್ಚ ಓದು.

ನಿರೀಶ :—(ನಿಲಿಸಿನಿಲ್ಲಿಸಿ, ಪರಿಸ್ಫುಟವಾಗಿ ಪಠಿಸುವನು.)

ರಣಧೀರ :—(ಬದ್ಧಭ್ರುಕುಟಿಯಾಗಿ,) ಬರೆದಿರುವುದು ವಂಶಕ್ಕೆ ಯಜಮಾನರಾಗಿರುವ ಅಪ್ಪಾಜಿಯವರಿಗಲ್ಲ ; ನನಗೆ !—ಏಕವಚನದಲ್ಲಿ !

ಮಲ್ಲಹನುಮ :—ವಿಕ್ರಮರಾಯರು ಮಹಾಸ್ವಾಮಿಯವರಿಗೆ ಅಣ್ಣಂದಿರಲ್ಲವೆ ?

ನಿರೀಶ :—ಭಂಗಾರದವರ ಮಗನು ಧರ್ಮಪತ್ನಿಯವರ ಮಕ್ಕಳಿಗೆ ಹೇಗೆಯೂ ಅಣ್ಣನಲ್ಲ. ಅಷ್ಟೇ ಅಲ್ಲದೆ, ಮಹೀಶೂರದೇಶದ ರತ್ನಸಿಂಹಾಸನಕ್ಕೇರುವ ಶ್ರೀಮನ್ನಾರಾಯಣಾಂಶರನ್ನು ಏಕವಚನದಲ್ಲಿ ಎಳೆದಾಡುವುದಕ್ಕಾರಿಗೂ ಅಧಿಕಾರವಿಲ್ಲ.

ರಣಧೀರ :—ನಮ್ಮನ್ನು ಪಟ್ಟಕ್ಕೆ 'ಆಯ್ದುದಾಯ್ತು' ಎಂಬುದೂ ಅರ್ಥವತ್ತಾಗಿದೆ, ನಿರೀಶ.

ನಿರೀಶ :—ಅಹುದು, ಮಹಾಸ್ವಾಮಿ ; ಈವರಿನವರಿಬ್ಬರಂತೆ ಮುಂದಣ ಮಹಾರಾಜರೂ ತನ್ನ ಕಯ್ಯಾಟದ ಬೆರ್ಚುಮಾತ್ರವಾಗಿರಬೇಕೆಂಬುದು ಅದರ ಭಾವ.

ರಣಧೀರ :—ವಿಕ್ರಮರಾಯನು ! ನನ್ನನ್ನು ! ಪಟ್ಟಕ್ಕೆ ! ಆಯ್ದುದಾಯ್ತು ! ಆಯ್ದನು !—ಆಯ್ದನೆ ?

ಸಕ್ಕ :—ಎಂಟೆದೆಯ ಕೆಚ್ಚಿನ ಖುಲ್ಲನವನು !

ನಿರೀಶ :—(ಜನಾಂತಿಕದಲ್ಲಿ,) ಸಕ್ಕ, ಇನ್ನಿಂದಿನಿಂದ ಮಹಾಸ್ವಾಮಿಯವರ ಸನ್ನಿಧಾನದಲ್ಲಿ ಅವರ ಅಪ್ಪಣೆಯಿಲ್ಲದೆ ಏನನ್ನೇ ಆದರೂ ಹೀಗೆ ಮಾತುಗುಟ್ಟಲಾಗದು.

ಸಕ್ಕ :—(ವ್ಯಗ್ರನಾಗುವನು.)

ರಣಧೀರ :—............ನಿರೀಶ, ಇದರೊಳಗೆಲ್ಲಾ ಏನೋ ಕೃತ್ರಿಮಸನ್ನಾಧನವಿರುವಂತಿದೆಯಲ್ಲವೆ ?

ನಿರೀಶ :—(ಪ್ರಕಾಶ,) ಮಹಾಸ್ವಾಮಿಯವರು ಶ್ರೀರಣಧೀರಕಣ್ಠೀರವ ನರಸರಾಜಒಡೆಯರೆಂಬುದನ್ನು ಮರೆಯದಿರಬೇಕು.

ರಣಧೀರ :—.........ಅದನ್ನಿತ್ತು ಕುಡು, ನಿರೀಶ; ಅಪ್ಪಾಜಿಯವರಿಗೀ ವಿವರಗಳನ್ನು ಒಕ್ಕಣಿಸಿ, ಅವರ ಮನೋಗತವನ್ನೂ ಆಶೀರ್ವಾದವನ್ನೂ ಆಶ್ರಯಿಸುವೆವು. (ಆವೋಲೆಯುನ್ನು ಕಯ್ಗೊಂಡು, ಹೊರಡುವನು.)

ಸಮಸ್ತರೂ :—(ನಮಸ್ಕರಿಸುವರು.)

ರಣಧೀರ :—(ನಿಷ್ಕ್ರಮಿಸುವನು.)

ನಿರೀಶ :—(ಹಿಂದಿರುಗಿ ನಿಂತು,) ಸಹಯೋಗಿಗಳೆ! ಇಂದುವರೆಗೆ ನಾವು ಆವನ ಸಹಪಾಠಿಗಳಾಗಿ ಒಡನಾಡಿಗಳಾಗಿ ನೇಹಿಗರೆನಿಸಿದ್ದೆವೋ, ಆತನು ಇನ್ನು ನಮಗೆ—ವಿಶೇಷತಃ ನಮಗೆ—ನಮ್ಮನ್ನಾಳುವ ಮಹಾರಾಜಮಹಾಸ್ವಾಮಿಯವರೆಂಬುದನ್ನು ನಮ್ಮಲ್ಲಿ ಆರೂ ಮರೆಯಕೂಡದು. ಇಷ್ಟುಕಾಲವೂ ಆವಾತನಿಂದ ಪರಿಪೋಷಿತರಾಗಿ, ಆರ ನಿಷ್ಕಪಟವಾದ ಪವಿತ್ರಮೈತ್ರಿಗೆ ಭಾಜನರಾಗಿ, ಆವ ದೀವಸಿಗನ ಆಟಪಾಟಕೂಟಗಳಲ್ಲಿ ಕಲೆತು, ಆ ನಿಶ್ಚಿಂತಸ್ಥಿತಿಯ ಉತ್ಸವದ ಆನನ್ದದ ಅನ್ತಸ್ಸತ್ತ್ವದಿಂದ ಜೀವಿಸಿದ್ದೆವೋ, ಆ ಕಂಠೀರವನು ಈ ತೆರಕಣಾಂಬಿಯ ಪಂಜರದಿಂದ ತಪ್ಪಿಸಿಕೊಂಡು, ತನ್ನ ಸ್ವಭಾವಪ್ರಪಂಚವಾದ ರಾಜ್ಯದಾಡಳಿತಗಳಿಗೆ ನುಗ್ಗಿ ಅರಸುಗೆಯ್ಯಲೊಪ್ಪಿ ಬದುಕಿಕೊಂಡನು; ಆದರೆ, ಮಿತ್ರರೇ, ಅಲ್ಲಿ...... ...ಅರಮನೆಯೊಳಗೂ ಆತನಿಗೆ ಕಷ್ಟಗಳು ಶತ್ರುತ್ವವು ಕಣ್ಟಕಗಳು ವಿಪತ್ತಿಗಳು ಹೊಂಚುತ್ತಿವೆ. ರಣಧೀರನಿಗೆ—ನಮ್ಮ ರಣಧೀರನಿಗೆ ಆವುದಪಾಯುವಾದರೂ ನಿಳ್ಕಿಮುಟ್ಟದಂತು ಆವಾಗಳೂ ಸಿದ್ಧತೆಯಿಂದ ಕಯ್ದುವೊಡ್ಡಿ ಕೊಂಕದಿರುವ ಧನ್ಯತೆಯು ಆತನ ಗರುಡಿಗೆ ಅಪಮಾನವನ್ನೊದವಿಸದ ನಮ್ಮೆಲ್ಲರ ಒಂದೇ ಕರ್ತವ್ಯ. ಬಸವಮಲ್ಲನನ್ನುಳಿದರೆ, ನಾವು ಇಪ್ಪತ್ತುನಾಲ್ಕು ಜನರಿರುವೆವು; ಈ ನಮ್ಮ ಸಂಘವು ನಮ್ಮ ರಣಧೀರನಿಗೆ..ಬಹಿರಾಡಂಬರಗಳ

ನ್ನೊಲ್ಲದ ವಿಶ್ವಾಸದ ಮೆಯ್ಗಾವಲರಾಗಿರೋಣ. ನಿಮ್ಮ ಅಭಿಪ್ರಾಯವೇನು ?

ಎಲ್ಲರೂ :—(ಏಕಕಂಠರಾಗಿ,) ನಮ್ಮಿನಿಬರಿಗೂ ಅದು ಒಪ್ಪುಗೆ.

ನಿರೀಶ:—ನಾವೆಲ್ಲ ಒಂದೇ ಭಾಷೆಯ ಕಟ್ಟಾಳ್ಗಳಾಗಿರುವದರಿಂದ ಶಪಥ ಮುಂತಾದುವು ಬೇಕಾಗಿಲ್ಲ. ಇನ್ನು, ನಮ್ಮಿ ದಳಕ್ಕೆ ದಳಪತಿಯೊಬ್ಬನು ಆವಶ್ಯಕ. ಅಂತಹ ಅಮಿತವಾದ ಅಧಿಕಾರಶಕ್ತಿಗಳನ್ನೊಬ್ಬನಿಗೊಪ್ಪಿಸಿ ನಾವು ಅವನಿಗೆ ಬಾಗುವುದಕ್ಕೆ ಮೊದಲು, ವಿಚಾರಿಸಿ—

ಮಲ್ಲರೆಲ್ಲ :—ನೀನೇ ನಮ್ಮ ದಳಪತಿ !

ನಿರೀಶ :—ಪೂರ್ವಾಪರಗಳನ್ನಾಲೋಚಿಸದೆ ಹೀಗೆ—

ಸರ್ವರೂ :—ನೀನೇ ! ನೀನೇ !

ನಿರೀಶ :—(ಅವನತೋತ್ತಮಾಂಗನಾಗಿ,) ಅಪ್ಪಣೆ ; ನಿಮ್ಮೆಲ್ಲರ ವಿಶ್ವಾಸಪ್ರೇಮಗಳನ್ನು ಶಿರಸಾವಹಿಸಿದೆನು. (ಅನತಿಕಾಲಾನಂತರ,) ನೀವೀ ದಳದ ವಿಷಯವನ್ನೊಂದು ತಿಂಗಳವರೆಗೆ ಆರಿಗೂ ಹೇಳಲಾಗದು. ಮಹಾಸ್ವಾಮಿಯವರು ಎಷ್ಟೇ ಬಲಾತ್ಕರಿಸಿ, ಏನೆಂದೇ ಹೇಳಬಹುದಾದರೂ, ನಮ್ಮ ದಳದವನಾವನೂ ಅವರೊಡನೆ ಮಹೀಶೂರಪುರಕ್ಕೆ ಹೊರಡದಿರಿ ; ಅವರು ತೆರಕಣಾಂಬಿಯಿಂದ ತಳರ್ದ ಅಯ್ದುಗಳಿಗೆಗಳ ಪರ್ಯಂತ ನಮ್ಮಲ್ಲಿ ಒಬ್ಬನೂ ಕೋಟೆಯ ಹೊರಗಣ್ಗೆ ಅಲ್ಲಾಡಬಾರದು. ಆ ಬಳಿಕ, ಒಬ್ಬೊಬ್ಬನಾಗಿ—ಇಬ್ಬಿಬ್ಬರಾಗಿ ಸಂಶಯಕ್ಕಾಸ್ಪದವಾಗದಂತೆ ಗುಟ್ಟಾಗಿ ಹೊರಟು, ಮೈಸೂರ ದಾರಿಯಲ್ಲಿ ಇಲ್ಲಿಂದೆರಡು ಹರದಾರಿಗಳು ತೀರಿದ ತರುವಾಯ ಬಲಕ್ಕಿರುವ ಮಾಂದೋಪಿನಲ್ಲಿ ಸೇರಿ ನೀವೆಲ್ಲರೂ ನಿಶ್ಶಬ್ದರಾಗಿರಬೇಕು. ಹೋಗಿ.

ಮಲ್ಲಹನುಮ :—ಅಲ್ಲಿಂದ ಮಹಿಶೂರಿಗೆ ಪಯಣವೇನು ?

ನಿರೀಶ :—ಆ ಮಾತು ಈಗಳೇಕೆ ?

ಮಲ್ಲಹನುಮ :—ಹಾಗಿದ್ದರೆ, ನಾವು ನಮ್ಮ ಬುತ್ತಿ ಬಟ್ಟೆ ಮುಂತಾದುವನ್ನ ಮರಿಸಿಕೊಂಡು, ಕತ್ತಿಕುದಿರೆಗಳನ್ನೊಡಗೊಂಡು, ಸನ್ನದ್ಧರಾಗಿರಬೇಕಾಗುವುದು.

ನಿರೀಶ :—(ಮಲ್ಲಹನುಮನ ಮುಯ್ಪಿನ ಮೇಗೆ ಕಯ್ಯಿಟ್ಟು.) ದಳಪತಿಯು ನಾನಲ್ಲವೆ, ಮಿತ್ರನೆ ?—ಆ ಗೊಡವೆಗಳು ನಿಮಗೇಕೆ ? ಹೋಗು.

ಎಲ್ಲರೂ :—(ಹೋಗುತಿರುವರು.)

ಸಕ್ಕ :—(ನಿರೀಶನ ನೆರೆಯಲ್ಲಿ ಎಡೆಯಾಡುತ್ತಿರುವನು.)

ನಿರೀಶ :—ಅದೇನು, ಸಕ್ಕ ?

ಸಕ್ಕ :—ಒಂದೆರಡು ಸಂದೇಹಗಳಿದ್ದರೆ, ಕೇಳಬಹುದೆ ?

ನಿರೀಶ :—ಕೇಳು.

ಸಕ್ಕ :—ರಣಧೀರನು—

ನಿರೀಶ :—ಮಹಾಸ್ವಾಮಿಯವರು—

ಸಕ್ಕ :—ಅಹುದು, ಮಹಾಸ್ವಾಮಿಯವರು—ಬಸವಮಲ್ಲನನ್ನು ಆಗಳೇ ಕಳಿಹಿಬಿಟ್ಟರೇಕೆ ? ಆತರುವಾಯಿನ ಇಲ್ಲಿಯ ಮಾತುಕತೆಗಳನ್ನವನು ಕಿವಿಗೇಳಬಾರದೆಂದೆ ?

ನಿರೀಶ :—ಸಕ್ಕ, ಅರ್ಥಮಾಡಿಕೊಳ್ಳುವರು ಆಡಬಾರದು.

ಸಕ್ಕ :—·········ರಾಜಧಾನಿಯು ಶ್ರೀರಂಗಪಟ್ಟಣವಾಗಿರುವಾಗ ವಿಕ್ರಮರಾಯರು ಬರೆದಿರುವುದೂ,······ಮಹಾಸ್ವಾಮಿಯವರು ಹೋಗುವುದೂ, ಮಹಿಶೂರಿಗೆ. ಅದೇನು ?

ನಿರೀಶ :—ಈಗ ರಾಜಧಾನಿಯು ಶ್ರೀರಂಗಪಟ್ಟಣವಾಗಿರುವುದಾದರೂ, ಮಹೀಶೂರದೇಶದ ಮಹಾರಾಜರಿಗೆ ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವಾಗುವುದು ಮಹೀಶೂರಪುರದಲ್ಲಿ.

ಪ್ರವೇಶ ೬.

[ಸ್ಥಾನ ;—ಶ್ರೀರಂಗಪಟ್ಟಣ, ಅರಮನೆ, ಅನ್ತಃಪುರ.]

(ರುದ್ರವ್ವೆಯು ಚವುರಿಯನ್ನು ಹಿಕ್ಕಿ ತಿದ್ದುತಿರುವಳು.)

(ಚೆಂದವ್ವೆಯು ಪ್ರವೇಶ.)

ಚೆಂದವ್ವೆ :—ಬುದ್ಧಿಯವರೆಲ್ಲಿ, ರುದ್ರವ್ವೆ ?

ರುದ್ರವ್ವೆ :—ಸಜ್ಜೆಯ ಕೋಣೆಯೊಳಗೆ.

ಚೆಂದವ್ವೆ :—ನಿದ್ದೆಯೇನು ?

ರುದ್ರವ್ವೆ :—ಅಲ್ಲ, ಚಿತ್ರಕ ಚಾಮಪ್ಪನೂ ಇದ್ದಾನೆ.

ಚೆಂದವ್ವೆ :—ಚಿತ್ರಕ ಚಾಮಪ್ಪನೆಂದೆಯ !

ರುದ್ರವ್ವೆ :—ಅಹುದು. ಬುದ್ಧಿಯವರ ತೂಗುಮಂಚದ ಕಾಲತ್ತ ವಿಕ್ರಮ—ವಿಕ್ರಮರಾಯರ ಚಿತ್ತಾರವನ್ನು ಚಿತ್ರಿಸಬೇಕೆಂದು ಕಟ್ಟು ಮಾಡಿರುವರು.

ಚೆಂದವ್ವೆ :—ಹಾ ! ಹಾ !

ರುದ್ರವ್ವೆ :—ನಾನು ಏತಕ್ಕೆಂದು ಕೇಳಿದುದಕ್ಕೆ ಬುದ್ಧಿಯವರು ಅವನಾ ಪಿಶಾಚಮುಖವನ್ನು ಮರೆಯದೆ ನಿರಂತರವೂ ಜ್ಞಾಪಿಸಿಕೊಳ್ಳುತ್ತಿರುವುದಕ್ಕೆ—ಎಂದು ಹೇಳಿದರು ; ನನಗೆ ತಿಳಿಯಲಿಲ್ಲ.

ಚೆಂದವ್ವೆ :—.........ಏನು ?

ರುದ್ರವ್ವೆ :—ನಮ್ಮ ಮಕ್ಕಳನ್ನು ಕೊಂದ ಮಹಾಪಾತಕನು ವಾಸವಾಗಿರುವ ಊರನ್ನೇ ತೊರೆದುಹೋಗಿ ಅವನನ್ನು ಮರೆತುಬಿಡದೆ, ಅವನ ಸುಟ್ಟಮುಖವನ್ನು ಆವಾಗಲೂ ನೋಡುತ್ತಿರುವುದೇಕೆ ?

ಚೆಂದವ್ವೆ :—(ಸುಯ್ದು,)......ಬುದ್ಧಿಯವರು ಅತ್ತರೇನು ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ಕಣ್ಣೊರಸಿಕೊಳ್ಳಲಿಲ್ಲವೆ ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ಒಮ್ಮೆಯಾದರೂ ನಿಟ್ಟುಸಿರ್ಗರೆದರೆ ?

ರುದ್ರವ್ವೆ :—ಇಲ್ಲ.

ಚೆಂದವ್ವೆ :—ದೇವಾಲಯಕ್ಕೆ ಹೋಗಿರಲಿಲ್ಲವೆ ?

ರುದ್ರವ್ವೆ :—ಇಲ್ಲ.—ಅಂದಿನಿಂದ ಪ್ರತಿದಿವಸವೂ ಹೀಗೇಕೆ ಮತ್ತೆಮತ್ತೆ ಕೇಳುತ್ತಿರುವೆ, ಚೆಂದವ್ವೆ ? ನಿನಗೆ ಬೇಸರೇ ಆಗುವುದಿಲ್ಲವೆ ?

ಚೆಂದವ್ವೆ :—.........ಬುದ್ಧಿಯವರ ಕಣ್ಣುಗಳಲ್ಲಿ ಒಂದೇ ಹನಿಯಾದರೂ ನೀರೂರಿದರೆ, ಅವರು ಉಳಿದುಕೊಳ್ವರು.

ರುದ್ರವ್ವೆ :—(ಆಶ್ಚರ್ಯದಿಂದ,) ಅದೇನು ?

ಚೆಂದವ್ವೆ :—ಏನೂ ಇಲ್ಲ, ಸುಮ್ಮನಿರು ; ಬುದ್ಧಿಯವರು ಬರುತ್ತಿದ್ದಾರೆ.

(ಮಹಾಮಾತೃಶ್ರೀಶಿವಮ್ಮಾಜಮ್ಮಣ್ಣಿಯ ಪ್ರವೇಶ.)

ಮಹಾಮಾತೃಶ್ರೀ :—ಏನೆ, ಚೆಂದವ್ವೆ ? ನೀನು ಹೋಗಿದ್ದ—ಅದು ಏನಾಯ್ತು ?

ಚೆಂದವ್ವೆ :—ಹಣ್ಣು.

ಮಹಾಮಾತೃಶ್ರೀ :—(ಸಂತೋಷದಿಂದ,) ಎಂದು ಬಂದರು ?

ಚೆಂದವ್ವೆ :—ನಿನ್ನಿನ ಅಪರಾಹ್ಣಸಮಯದಲ್ಲಿ.

ಮಹಾಮಾತೃಶ್ರೀ :—ಒಬ್ಬರೇಯೆ ?

ಚೆಂದವ್ವೆ :—ಸಕುಟುಂಬರಾಗಿ.

ಮಹಾಮಾತೃಶ್ರೀ :—ಭಾವಾಜಿಯವರೂ ಬಂದಿರುವರೆ ?

ಚೆಂದವ್ವೆ :—ಇಲ್ಲ.

ಮಹಾಮಾತೃಶ್ರೀ :—(ಚಿಂತಿಸಿ,) ಮೈಸೂರಿಗೆ ಬಂದೊಡನೆಯೇ ರಣಧೀರನು ಏನುಮಾಡಿದನು ?

ಚೆಂದವ್ವೆ :—ತಮಗೋಸ್ಕರವಾಗಿ ಏರ್ಪಟ್ಟಿದ್ದ ಬೀಡಾರದ ಬಾಗಿಲಲ್ಲಿ ಕುದುರೆಯಿಂದ ಇಳಿದರು.

ಮಹಾಮಾತೃಶ್ರೀ :—ಬೀಡಾರವೆಂದರೆ, ಅರಮನೆಯಲ್ಲವೇನೆ ?

ಚೆಂದವ್ವೆ :—ನನಗೆ ತಿಳಿಯದು ; ಈ ವಿವರಗಳನ್ನು ಕಂಡು ನನಗೆ ಹೇಳಿದವರು ಇನ್ನೇನನ್ನೂ ಅರಿಯರು.

ಮಹಾಮಾತೃಶ್ರೀ :—...ನಾಡಿದುರಾತ್ರಿಗೆ ನಾವು ಮೈಸೂರಿಗೆ ಹೊರಡುವೆವು.

ರುದ್ರವ್ವೆ :—(ಬೆಚ್ಚಿ,) ಮಹಿಶೂರಿಗೆ !

ಮಹಾಮಾತೃಶ್ರೀ :—ಚೆಂದವ್ವೆ, ಇದು ಗೋಪ್ಯವಾಗಿ ನಡೆಯಬೇಕು.

ಚೆಂದವ್ವೆ :—ಅಪ್ಪಣೆ.

ಪ್ರವೇಶ ೭.

[ಸ್ಥಾನ;—ಮಹೀಶೂರಪುರ, ಒಂದು ಬೀದಿ.]

(ಜನರು ಪಂಗಡಪಂಗಡವಾಗಿ ನಿಂತು, ಗುಜುಗುಜಿಸುತಿರುವರು.)

ಒಬ್ಬನು :—ಆಹಾ! ಸನ್ದೇಹವೇನದಕ್ಕೆ? ಇಪ್ಪತ್ತು ವರುಷಗಳ ಹಿಂದೆ—ನಮ್ಮ ರಾಜಒಡೆಯರು ಆಳುತ್ತಿದ್ದ ಆಗ—ಯಾವ ಗದ್ದೆಗೆ ನಾನು ಎರಡುವರೆ ಹಣವನ್ನು ಬೆಳೆಗೆಯ್ದರಿಗೆಯಾಗಿ ಕೊಡುತ್ತಿದ್ದೆನೋ, ಅದಕ್ಕೇ ನಾನು ಈಗ ಉಣ್ಡೆಯಾಗಿ ಎರಡು ದುರ್ಗೀ ವರಹಗಳನ್ನು ತೆರುತ್ತಿದ್ದೇನೆ; ಇದೂ ಕಾಲದ ಅದ್ಭುತಮಹಿಮೆಯೇ ಅಲ್ಲವೆ ?

ಎರಡನೆಯವನು :—ಅದು ನೊಂದವರ ನ್ಯಾಯವಾದ ಮಾತಯ್ಯ; ಆದರೆ,...

ಮೂರನೆಯವನು :—ಆಗ ನಮ್ಮ ಹೊಟ್ಟೆಬಟ್ಟೆಗಳನ್ನು ನೋಡಿ ಮರುಗುತ್ತಿದ್ದ ನಮ್ಮಪ್ಪ—ಮಹಾರಾಜರ ರಾಜ್ಯ; ಈಗ ಎಷ್ಟು ನುಂಗಿದರೂ ಅಜೀರ್ಣವಾಗಲಾರದ ದಳವಾಯಿಗಳ ವೃಕೋದರ ಸಾಮ್ರಾಜ್ಯ.

ಎರಡನೆಯವನು :—ನಾನು ಅದನ್ನಲ್ಲವಯ್ಯ, ಹೇಳಿದ್ದು ; ನಮ್ಮ ಮುಂದಣ ಮಹಾರಾಜರು ತಮ್ಮ ಪಟ್ಟಾಭಿಷೇಕಕ್ಕೆಂದು ಇಲ್ಲಿಗೆ ಬಂದರಲ್ಲಯ್ಯಾ, ಅವರ ಪುರಪ್ರವೇಶೋತ್ಸವದ ವೈಭವವನ್ನು.

ನಾಲ್ಕನೆಯವನು :—ಅದೇನು ?

(ನಿರೀಶ ಸಕ್ಕ ಮುಂತಾದ ನಾಲ್ಕಯ್ವರ ಪ್ರವೇಶ.)

ಆಗತರು :—(ಬಂದು, ಆ ಸಂಗಡದ ಹಿಂದೆ ನಿಂತು, ಕಿವಿಗುಡುವರು.)

ಎರಡನೆಯವನು :—ಈ ನಮ್ಮ ಮಹಾರಾಜರು ಬರುತಿದ್ದಾರೆಂಬುದನ್ನು ಕೇಳಿದೊಡನೆ ದಳವಾಯಿಯ ಸೈನ್ಯವು ಹೋಗಿ, ಇದಿರ್ಗೊಂಡು ಕರೆದುತಂದಿತು. ಹೀಗೆ ಪಟ್ಟಾಭಿಷೇಕಕ್ಕೆ ಬರುವ ಮಹಾರಾಜರನ್ನು ಸ್ವಾಗತಮಾಡುವುದಕ್ಕೆ ಲಕ್ಷಣವಾಗಿ ಕಳಶ ಕನ್ನಡಿ ಫಲ ಪುಷ್ಪ ದೇವತಾಪ್ರಸಾದ ಮುಂತಾದುವುಗಳಿಂದೊಪ್ಪುವ ಸುವಾಸಿನಿಯರೂ, ವೈದಿಕಮಣ್ಡಲಿಯೂ, ಪಂಚಮಹಾವಾದ್ಯಗಳೂ, ಬಿರುದುಗಳೂ, ದಾಳದಮಾಣಗಳೂ, ವೇಶ್ಯಾಸ್ತ್ರೀಯರೂ, ಪಟ್ಟದ ಆನೆಕುದುರೆಗಳೂ, ಸತ್ತಿಗೆಸೂರೆಪಾನಗಳೂ ಹೋಗಿ, ಆರತಿ ಅಕ್ಷತೆ ನಡೆಯುವುದು ಹಾಗಿರಲಿ ; ಸದ್ದಿಲ್ಲದೆ ಸರ್ವಾಯುಧ ಸಜ್ಜಿತವಾದ ದೊಡ್ಡ ಸೈನ್ಯವೊಂದು ಕಾಣಿಸಿಕೊಂಡು, ಅವರನ್ನೂ ಅವರ ಅನ್ತಃಪುರದ ಅಂದಳಗಳನ್ನೂ ಸುತ್ತುವರಿದು, ಬಂದಿಗಳನ್ನೆಂಬಂತೆ ಅರಮನೆಗೆ ನಡೆಯಿಸಿಕೊಂಡು ಹೋದರು ! ವಿಕ್ರಮರಾಯನ ಇಬ್ಬರಾಳುಗಳು ಮಹಾರಾಜರ ಕುದುರೆಯ ಎರಡು ಪಕ್ಕಗಳಲ್ಲಿಯೂ ಕಡಿವಾಣದ ಒಂದೊಂದು ಬಾರನ್ನು ಹಿಡಿದುಕೊಂಡು, ತಾವೇ ಚಕ್ರವರ್ತಿಗಳೆಂಬಂತೆ ಉಬ್ಬಿ ಮೆರೆಯುತ್ತಿದ್ದದ್ದನ್ನು ನಾನೇ ಈ ಕಣ್ಣಾರೆ ನೋಡಿದೆನಯ್ಯ ! ಆಗ ನನಗೆ—

ಸಕ್ಕ :—(ಕ್ರೋಧದಿಂದ ಹಲ್ಮೊರೆದು,) ಕುನ್ನಿಗಳು !

ಪೌರರೆಲ್ಲ :—(ಸಕ್ಕನತ್ತ ತಿರುಗಿ, ಕುತೂಹಲದಿಂದ ನೋಡುತಿರುವರು.)

ನಿರೀಶ :—(ಜನಾಂತಿಕದಲ್ಲಿ,) ಸಕ್ಕ !—ಮಾತನಾಡಬೇಡ, ಜೋಕೆ ! (ಪ್ರಕಾಶ,) ಏನು, ಸ್ವಾಮಿ, ಆಗ ನಿಮ್ಮ ಮಹಾರಾಜರು ಬೆದರಿಬೆಂಡಾಗಿ ಬೆಮರಿ ಬೆಳರಿ ಇಳಿದುಹೋದರಷ್ಟೆ ?

ಎರಡನೆಯವನು :—ಹಾಗೆಂದರೇನಯ್ಯ ? ಹುಚ್ಚರಂತೆ ಒದರಿಕೊಳ್ಳು ವಿರಿ !—ನೀವು ಯಾವ ಊರಿನವರಯ್ಯ ?

ನಿರೀಶ :—ನಮ್ಮ ಸ್ಥಳವು ತಿರುಮಕೂಡಲು-ನರಸೀಪುರ, ಸ್ವಾಮಿ.

ಮೂರನೆಯವನು :—ಅಲ್ಲಿಯ ಕಾವೇರೀಕಪಿಲಾಸಂಗಮದಲ್ಲಿ ನೀವು ಅನುದಿನವೂ ಸ್ನಾನವನ್ನು ಮಾಡಿಮಾಡಿ—ಮಿಾಯುವುದರಿಂದ ನಿಮ್ಮ ತಲೆಯೊಳಗಿದ್ದ ಬುದ್ಧಿಯನ್ನೆಲ್ಲಾ ಆ ಪ್ರವಾಹದಲ್ಲಿ ಕೊಚ್ಚಿಸಿಬಿಟ್ಟು ಬಂದಿರಬೇಕು.

ಮೊದಲನೆಯವನು :—ಪಾಪ ! ಹಳ್ಳಿಗಾಡಿನವರೆಂದೇ ತೋರುತ್ತಿದೆ.

ನಿರೀಶ :—ಹಾಗೆಂದುದರಿಂದ ಈ ಸುಸ್ವಾಗತದ ಉತ್ಸವವು ನಿಮ್ಮ ಮಹಾರಾಜರಿಗೆ ಹೇಗೆ ರುಚಿಸಿತೆಂಬುದನ್ನು ನೀವಾರಾದರೂ ಹೇಳಿದಂತಾಯ್ತೆ ?

ಒಬ್ಬಯುವಕಪೌರ :—ಈ ಧೂರ್ತನಿಗೆ ಒಳ್ಳೆಯದೊಂದೊದೆಯನ್ನು ಕೊಡಲೆ ?

ನಾಲ್ಕನೆಯವನು :—ಚಿಃ ! ಸುಮ್ಮನಿರು ; ಅವರು ಯಾರೋ, ಏನೋ ?

ಎರಡನೆಯವನು :—ರುಚಿಸುವುದೇನಿರಯ್ಯ ? ಅಸಡ್ಡೆಯ ಅಲಕ್ಷ್ಯದ ಉಪೇಕ್ಷೆಯ ಉದಾಸೀನಭಾವದ ತಿರಸ್ಕಾರದ ಕಿರುನಗೆಯು ಆಗ ಅವರ ಮುಖಮಣ್ಡಲದಲ್ಲಿ ತಾಂಡವವಾಡುತ್ತಿದ್ದಿತು.

ನಿರೀಶ :—ಹೇಗೆಯೇ ಆದರೂ ತಾನು ಸಿಂಹಾಸನದ ಮೇಲೆ ಸ್ಥಾಪನವಡೆದರೆ, ಇನ್ನು ತನ್ನ ಹೊಟ್ಟೆಯು ಅನವರತವೂ ತೀವಿತುಂಬಿ ಬೀಗಿ ತೇಗನ್ನೇರಿಸುವ ಆ ನೆಮ್ಮಿಗೆಯ ಪದವಿಯು ಇಷ್ಟು ನಿರಾಯಾಸವಾಗಿ ದೊರೆಕೊಂಡುದೆಂಬ ಆನನ್ದವು ಆ ಮುಗುಳ್ನಗೆಯ ಅರ್ಥವೋ ?

ಪಟ್ಟಣಿಗರೆಲ್ಲ :—(**ಕನಲ್ದು, ನೊರೆಯುವರು.**)

ಯುವಕಪೌರ :—ಏನೋಃ ? ನಮ್ಮ ಮಹಾರಾಜರನ್ನು ಹೇಡಿಯೆಂದು ತಿನಾಳಿಯೆಂದು ಬಯ್ಯುವೇಃ ! (**ಮುಷ್ಟಿಯನ್ನೆತ್ತುವನು.**)

ನಾಲ್ಕನೆಯವನು :—(ಯುವಕಪೌರನ ಕಯ್ಯನ್ನು ಹಿಡಿದೀಳೆದು, ತಡೆದು ನಿಲ್ಲಿಸಿ ಕೊಳ್ಳುವನು.)

ನಿರೀಶ :—(ಅಲ್ಲಾಡದೆ, ಪ್ರಶಾನ್ತನಾಗಿಯೇ,) ಅಂತಾದರೆ, ನಿಮ್ಮ ಮಹಾರಾಜರು ವೀರನೂ ಅಹುದೇನು ?

ಸಕ್ಕಮುಂತಾದವರು :—(ಚಮತ್ಕೃತರಾಗುವರು.)

ಅಯ್ದನೆಯವನು :—ನಮ್ಮ ಮಹಾರಾಜರನ್ನು ಜರೆದು ಜಂಕಿಸಿ ಅಣಕ ವಾಡಿ ನಗುತ್ತಿರುವ ಇವನ ಬಾಯಲ್ಲಿ—ದುಂಡುಮಲ್ಲಿಗೆಯ ಮೊಗ್ಗೆಗಳಂತಿರುವ ಮೂವತ್ತೆರಡು ಹಲ್ಲುಗಳನ್ನೂ ಆರೂ ಉದಿರಿಸಿ ಬಿಡರಲ್ಲ !

ಮೊದಲ ಆತನು :—ಏಳಿರೋ ! ಆಳಿಗೊಂದೊಂದು ಗುದ್ದನ್ನೇ ಕೊಟ್ಟು, ಈ ದುಷ್ಟಜನ್ತುವನ್ನು ತೀರಿಸಿಯೇಬಿಡೋಣ.

ಸಕ್ಕಮುಂತಾದವರು :—(ನಿರೀಶನ ರಕ್ಷಣಕ್ಕೆ ಅನುವಾಗಿನಿಲ್ಲುವರು.)

ನಾಲ್ಕನೆಯವನು :—(ಏಕ್ಕಟಿಯಲ್ಲಿ,) ಇನ್ನು ಬೀದಿಗಲಹಕ್ಕೆ ಪ್ರಾರಂಭ ವಾಯ್ತು ; ಇದೆಲ್ಲಿಯ ಪ್ರಾರಬ್ಧ, ನನಗೇನುಬೇಕು ? (ಹೋಗುವನು.)

ಯುವಕಪೌರ :—ಬನ್ನಿರೋ ! (ನಿರೀಶನತ್ತ ನುಗ್ಗುವನು.)

ಎರಡನೆಯವನು :—(ತನ್ನವರನ್ನೆಲ್ಲ ಇದಿರಿಸಿ ಅಡ್ಡಯಿಸಿ,) ಅಯ್ಯ, ತಡೆಯಿರಿ! ಹಳ್ಳಿಗಾಡವನೊಬ್ಬನು ಅರಿಯದೆ ಬಗುಳಿಕೊಂಡರೆ, ನಾವೆಲ್ಲಾ ಹೀಗೆ ಕಯ್ಮಾಡುವುದೇನಿರಯ್ಯ ? ದುಡುಕಬೇಡಿ.

ಸಕ್ಕ :—(ಕೆಳದರ್ು,) ನಾವು ಹಳ್ಳಿಗಾಡಿನವರಲ್ಲಕಣಾ ! ನಿನ್ನಂತಹ......

ನಿರೀಶ :—(ಜನಾನ್ತಿಕದಲ್ಲಿ,) ಶ್ ಶ್ ಶ್ !—ಸಕ್ಕ ! ಇಲ್ಲಿ ನೀನಿನ್ನೊಂದೇ ಮಾತನ್ನಾಡಿದರೂ, ನಮ್ಮ ಗರುಡಿಯ ಮೇಲಣ ಆಣೆಯಿದೆ !

ಸಕ್ಕ :—(ಅಧೋಮುಖನಾಗುವನು.)

ಎರಡನೆಯವನು :—ತಡೆ ; ನಮ್ಮ ಮಹಾರಾಜರ ಪೂರ್ವೋತ್ತರ—ನೀವೇನನ್ನು ಬಲ್ಲಿರಯ್ಯ ?

ನಿರೀಶ :—(ಪ್ರಕಾಶ,) ಅವರ ಅಣ್ಣನ ಶೌರ್ಯಪ್ರತಿಷ್ಠೆಗಳನ್ನೆಲ್ಲಾ ನೀವು ಇಂದೀವರಿಗೆ ಹೊಗಳಿ ಹಾಡಿದಿರಲ್ಲ !

ಎರಡನೆಯವನು :—ಕೇಳಯ್ಯ ; ನೀನು ಅದೇಸ್ವರದಲ್ಲಿ ಹೀಗೆಯೇ ಗಳಹುತಿದ್ದರೆ, ಇಲ್ಲಿಂದ ಸತ್ಯವಾಗಿ ಬದುಕಿಹೋಗಲಾರೆ.

ನಿರೀಶ :—ಎಂದರೆ, ನಿಮ್ಮ ಮಹಾರಾಜರು ಹಿಂದೆಂದೋ ಶೂರರಾಗಿದ್ದರೇನು ?

ಆರನೆಯವನು :—(ಆಶ್ಚರ್ಯದಿಂದ,) ಎಂತಹ ಜಡಮೂಢತೆ ! (ನಿರೀಶನನ್ನು ದ್ವೇಶಿಸಿ,) ಹಾಗಾದರೆ, ನಮ್ಮ ಮಹಾರಾಜರ ವಿಷಯವು ನಿನಗೆ ಏನೇನೂ ತಿಳಿಯದು ?

ನಿರೀಶ :—ಇಲ್ಲ. ಹೇಳಿ ; ಸ್ವಲ್ಪ ಕಲ್ತುಕೊಳ್ವೆನು.

ಆರನೆಯವನು :—ನಮ್ಮ ಮಹಾರಾಜರಿಗೆ ' ರಣಧೀರ ' ಎಂಬ ವ್ಯಕ್ತವಾದ ಬಿರುದಿದೆ !

ನಿರೀಶ :—ಬರಿಯಬಿರುದೆ ?

ಯುವಕಪೌರ :—(ಕುಪಿತನಾಗಿ,) ಹೇಳುವುದನ್ನು ಕೊನೆಯವರೆಗೆ ಕೇಳಿ, ಅನಂತರ ಮಾತನಾಡು.

ಮೂರನೆಯವನು :—ತಿರುಚನಾಪಳ್ಳಿಯ ಆ ಜಗಜಟ್ಟಿಯನ್ನು ಗೆದ್ದುಕೊಂದುಬಂದ ನಮ್ಮ ಮಹಾರಾಜರ ತೋಳಬಲ್ಮೆಯನ್ನು ಈ ಪ್ರಾಣಿಯ ನೆತ್ತಿಗೇರುವಂತೆ ತಿಳಿಯಹೇಳು, ಮಾವ.

ಆರನೆಯವನು :—ನಾನೂ ಅದನ್ನೇ ಹೇಳುತಿದ್ದೆನು ; ನೀವಾರೂ ಗಲಭೆ ಮಾಡಬೇಡಿ. (ನಿರೀಶನತ್ತ ತಿರುಗಿ,) ಕೇಳಪ್ಪ; ನಮ್ಮ ಮಹಾರಾಜರು ಇನ್ನೂ ಹುಡುಗರಾಗಿದ್ದಾಗ ತೆರಕಣಾಂಬಿಯಲ್ಲಿದ್ದರು.

ನಿರೀಶ :—ಇರಬಹುದು.

ಯುವಕಪೌರ :—(ನಕ್ಕು,) ತೆರಕಣಾಂಬಿಯೆಂದರೇನೆಂಬುದನ್ನು ವಿವರಿಸಿ ಹೇಳಬೇಕಂತೆ !

ಆರನೆಯವನು :—ಕಾಶಿ ರಾಮೇಶ್ವರ ಮುಂತಾದ ಪುಣ್ಯಸ್ಥಳಗಳಿಗೆ ಯಾತ್ರಾರ್ಥಿಯಾಗಿ ಹೋಗಿದ್ದ ಬ್ರಾಹ್ಮಣನೊಬ್ಬನು ಆ ತೆರಕಣಾಂಬಿಯೆಂಬ ಊರಿಗೆ ಬಂದನು. ಯಾತ್ರಿಕರು ಹೇಳುವ ಕತೆಗಳನ್ನು ಮೆಚ್ಚಿ ಕೇಳುವುದಕ್ಕೆ ತರುಣರಿಗೆ ಬಹಳ ಆಶೆಯಷ್ಟೆ; ಆಗ ಚಿಕ್ಕವರಾಗಿದ್ದ ನಮ್ಮ ಮಹಾರಾಜರು ಆ ಯಾತ್ರಿಕ ಬ್ರಾಹ್ಮಣನು ಹೇಳುತಿದ್ದ ಕಥೆಗಳನ್ನೆಲ್ಲ ಅತ್ಯಾದರದಿಂದ ಉತ್ಸಾಹದಿಂದ ಕೇಳುತಿದ್ದರು.

ಎರಡನೆಯವನು :—(ಜನಾನ್ತಿಕದಲ್ಲಿ, ನಿರೀಶನನ್ನು ತೋರುತ್ತ,) ನೋಡಿರಯ್ಯ, ಅವನ ಮುಖವು ಹೇಗೆ ಕಳೆಗೆಡುತ್ತಿದೆಯೆಂಬುದನ್ನು; ನಮ್ಮ ಮಹಾರಾಜರ ಪರಾಕ್ರಮವೆಂದರೆ, ಅಂತಹುದು !

ಪೌರರು :—ಅಹುದು, ಅಹುದು.

ಆರನೆಯವನು :—ಆ ಬ್ರಾಹ್ಮಣನ ಕಥೆಗಳಲ್ಲಿ ಒಂದು ನಮ್ಮ ಮಹಾರಾಜರ ಉದ್ದಾಮಶೂರಹೃದಯದಲ್ಲಿ ನಾಟಿಕೊಂಡಿತು.

ಏಳನೆಯವನು :—ಆ ತಿರುಚನಾಪಲ್ಲಿಯ ಜಟ್ಟಿಯ ವಿಷಯ !

ಮೊದಲನೆಯವನು :—ಅದೇಯೆ.

ಆರನೆಯವನು :—ತಿರುಚನಾಪಳ್ಳಿಯ ಪಾಳೆಯಗಾರನ ಆಸ್ಥಾನದಲ್ಲಿ ಇದ್ದ ಒಬ್ಬ ಜಟ್ಟಿಯನ್ನು ಕದನಮಾಡಿ ಗೆಲ್ಲುವವರು ಈ ಪ್ರಪಂಚದಲ್ಲಿ ಯಾರೂ ಇರಲಿಲ್ಲವೆಂದೂ; ಹಾಗೆಂದುಕೊಂಡು, ಆ ಜಟ್ಟಿಗನು ಕೊಬ್ಬಿ ಉಬ್ಬಿ, ಉಕ್ಕಿ ಸೊಕ್ಕಿ, ತನ್ನ ದಟ್ಟಿಚಲ್ಲಣಗಳನ್ನು ಆ ತಿರುಚನಾಪಳ್ಳಿಯ ಹೊರಗೋಣ್ಟೆಯ ನಾಲ್ಕು ಬಾಗಿಲುಗಳಿಗೂ ಮೇಲೆ ತೋರಣಗಳಂತೆ ಕಟ್ಟಿಸಿ, ಅದರ ಕೆಳಗೆ—ಎಂದರೆ, ತನ್ನ ಕಾಲ ಕೆಳಗೆ—ಎಲ್ಲ ಜನರೂ ನಡೆದಾಡಬೇಕೆಂದು ಆ ಪಾಳೆಯಗಾರನನ್ನೊಪ್ಪಿಸಿ,.........

ಎರಡನೆಯವನು :—(ಪ್ರಕಾಶ,) ಹಾಗಲ್ಲವಯ್ಯ ; ಅವನ ಆ ದಟ್ಟಿಚಲ್ಲಣಗಳನ್ನು ಕಟ್ಟಿಸಿದ್ದುದು ಮೂರೇ ಬಾಗಿಲುಗಳಿಗೆ; ಬ್ರಾಹ್ಮಣರೂ ಜಂಗಮರೂ ಮಾತ್ರವೇ ಸಂಚಾರಮಾಡಬೇಕಾಗಿದ್ದ ಒಂದು ದಿಡ್ಡಿಯಮೇಲೆ ಹಾಕಿಸಿರಲಿಲ್ಲವಂತೆ.

ಯುವಕಪೌರ :—ನಮ್ಮ ಅಜ್ಜನು ಹೇಳಿದ್ದರಲ್ಲಿ, ಆ ಜಟ್ಟಿಯು ತಿರುಚನಾಪಳ್ಳಿಯ ಕೋಟೆಯ ಮೈಸೂರತ್ತಣ ಶ್ರೀದ್ವಾರವೊಂದಕ್ಕೇ ತನ್ನ ಚಣಕವನ್ನು ಕಟ್ಟಿಸಿದ್ದನಂತೆ! (ಹಲ್ಮೊರೆಯುತ್ತ,) ಆ ಧೂರ್ತ!

ಆರನೆಯವನು :—ಈ ವೃತ್ತಾಂತವನ್ನು ಕೇಳಿದೊಡನೆ ಆಗ ಬಹಳ ಚಿಕ್ಕವರಾಗಿದ್ದ ಈ ಮಹಾರಾಜರಿಗೆ ಕೋಪದ ಈರ್ಷ್ಯೆಯಿಂದ— ಅವರ ರಕ್ತವೆಲ್ಲಾ ಕುತಕುತನೆ ಕುದಿಯತೊಡಗಿತು.

ನಿರೀಶ :—ಪಾಪ! ಅವರ ಆ ಜ್ವರಕ್ಕೆ ಔಷಧವು ಬೇಗನೆ ಲಭಿಸಿತಷ್ಟೆ?

ಯುವಕಪೌರ :—ನಿನ್ನ ತಲೆಬುರುಡೆಯು ನನ್ನ ಈ ಮುಷ್ಟಿಗಿಂತ ಗಟ್ಟಿಯಾಗಿರುವುದಷ್ಟೆ?

ಮೊದಲವನು :—ಆವಾಗಳೂ ಹೀಗೆಯೇ ಗಲಭೆ!......ತಿರುಮಕೂಡಲು-ನರಸೀಪುರದ ಮನುಷ್ಯವಿಶೇಷವೇ! ಇನ್ನೊಂದೇ ಮಾತನ್ನೂ ಆಡದೆ, ನಮ್ಮ ಮಹಾರಾಜರ ಆ ಸಾಮರ್ಥ್ಯವನ್ನು ಕಡೆಗೂ ಕೇಳದಿದ್ದರೆ, ನೀನುಳಿಯುವಂತಿಲ್ಲ.

ನಿರೀಶ :—ಆಗಬಹುದು.

ಆರನೆಯವನು :—ತರುವಾಯ ನಮ್ಮ ತರುಣಮಹಾರಾಜರು ಆ ಯಾತ್ರಿಕಬ್ರಾಹ್ಮಣನನ್ನೊಡಗೊಂಡು, ಅವರ ತಂದೆಗೂ ಹೇಳದೆ— ಗುಟ್ಟಾಗಿ—ತಿರುಚನಾಪಳ್ಳಿಗೆ ಹೋಗಿ, ಆವೂರ ಕೋಟೆಯ ಮಹಿಶೂರಿನತ್ತಣ ಬಾಗಿಲ ಮೇಲಿದ್ದ ಆ ಮಲ್ಲನ ದಟ್ಟಿಚಲ್ಲಣಗಳನ್ನು ತಮ್ಮ ಕೀಳಾಳ ಕಯ್ಯ ಕೋಲಿಂದ ತೆಗೆಯಿಸಿ ಬೀಸಾಡಿಸಿ, ಆ ದಿಡ್ಡಿಯಿಂದಲೇ ಒಳಗೆಹೋದರು. ಈ ಮೂದಲೆಯಿಂದ ಕುಪಿತ

ನಾದ ಆ ಜಟ್ಟಿಯು ಅಲ್ಲಿಯ ಪಾಳೆಯಗಾರನ ಆಜ್ಞೆಯಂತೆ … …ತಾವಾರೆಂಬುದನ್ನು ಹೇಳದ……ನಮ್ಮ ಮಹಾರಾಜರೊಡನೆ ಆ ಊರ ಮಲ್ಲಕಳದಲ್ಲಿ ಹೋರಿ ಹೊಯ್ದಾಡಿ ಹೆಣಗಿ ಸೋತು ಸತ್ತನು.

ಎರಡನೆಯವನು :—ಕೇಳಯ್ಯ, ಹೇಗೆಂಬುದನ್ನು ; ನಮ್ಮ ಮಹಾರಾಜರಿಗೆ "ವಿಜಯನಾರಸಿಂಹ" ಎಂಬ ಅದ್ಭುತವಾದದ್ದೊಂದು ಕತ್ತಿಯಿದೆ. ಅದನ್ನು ಉಗ್ರನರಸಿಂಹದೇವರು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ, ನಮ್ಮ ಮಹಾರಾಜರಿಗೆ ಕೊಟ್ಟುದು. ಥಳಥಳಿಸುತ್ತ ನಮ್ಮ ಮಹಾರಾಜರು ಬಯಸಿದ ಹಾಗೆ ಎಳೆಯ ಬಳ್ಳಿಯಂತೆ ಬಳ್ಕುವ ಆ ವಿಜಯನಾರಸಿಂಹನೆಂಬ ಕತ್ತಿಗೆ ಎರಡು ಅಲಗುಗಳಿರುವುವು. ಈಗ ಹೇಳಯ್ಯ ; ಎಂತಹ ಕಲ್ಲನ್ನಾದರೂ ಎರಡಾಗಿ ತುಣ್ಡಿಸಿಯೂ ಮುಕ್ಕಾಗದ ಅಂತಹ ತೀಕ್ಷ್ಣವಾದ ಎರಡು ಅಲಗುಗಳನ್ನುಳ್ಳ ಒಂದು ದೊಡ್ಡ ಕತ್ತಿಯನ್ನು ಹೆಂಗುಸರು ಒಡ್ಯಾಣವನ್ನು ತೊಟ್ಟು ಬಿಗಿಯುವಂತೆ ನಡುವಿನಲ್ಲಿ ಧರಿಸಿಕೊಳ್ಳುವ ಧೈರ್ಯವು ನಿನಗುಂಟೇನಯ್ಯ ?……ಇಲ್ಲವೆನ್ನು. ನಮ್ಮ ಮಹಾರಾಜರು ತಮ್ಮ ವಿಜಯನಾರಸಿಂಹನನ್ನು ಹಾಗೆ ನಡುವ ಪಟ್ಟಿಯಂತೆ ಕಟ್ಟಿಕೊಂಡಿರುವುದು ಅವರ ದಿನಚರ್ಯೆಯ ಒಂದಂಗವಾಗಿಹೋಗಿದೆ. ಆದಕ್ಕೆ—ಎಂದರೆ, ಆ ವಿಜಯನಾರಸಿಂಹನೆಂಬ ಕತ್ತಿಗೆ—ಕಾಂಚೀಪಟ್ಟಿಕೆಯ ಆಕಾರದಲ್ಲಿರುವ ಉಕ್ಕಿನ ಒರೆಯೇನೋ ಇದೆ ; ಆದರೆ, ನಮ್ಮ ರಣಧೀರಮಹಾರಾಜರು ಆ ಒರೆಯನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. ಅರ್ಥವಾಯ್ತೇನಯ್ಯ ? ನಮ್ಮ ಮಹಾರಾಜರ ಹೊರಗಣ ಸೌಮ್ಯವೇಷವನ್ನು ನೋಡಿ, ಅವರು ನಿರಾಯುಧರೆಂದೋ ನಿಸ್ಸಹಾಯಕರೆಂದೋ ಕಲ್ಪಿಸಿಕೊಂಡು, ನೀನವರನ್ನು ಕೆಣಕುವಷ್ಟೇನಾದರೂ ಹುಚ್ಚನಾದೆಯಾದರೆ, ರಪ್ಪೆಮುಚ್ಚಿತೆರೆಯುವುದರೊಳಗಾಗಿ ವಿಜಯನಾರಸಿಂಹನು

ಪ್ರತ್ಯಕ್ಷವಾಗಿ, ಬಳ್ಳಿಮಿಂಚಿನಂತೆ ಝುಳವುಗೊಂಡು, ತನ್ನ ಸುಳಿವಿನ ಗಾಳಿಯಿಂದ ನಿನ್ನ ಮೂಗನ್ನು ಕತ್ತರಿಸಿ, ಮೂರ್ಛೆಕೆಡಹಿಬಿಡುವುದು. (**ಜ್ಞಾಪಿಸಿಕೊಂಡು,**) ಹಾ !......ಆ ತಿರುಚನಾಪಳ್ಳಿಯ ಜಟ್ಟಿಯೊಡನೆ ಕಾಳೆಗಮಾಡುತ್ತಿದ್ದಾಗ, ತಮ್ಮ ಬಟ್ಟೆಯೊಳಗೆ ನಡುಪಟ್ಟಿಯಂತೆ ಮೊದಲೇ ತಕ್ಕಂತೆ ಕಟ್ಟಿ ಸಿದ್ಧಮಾಡಿರಿಸಿಕೊಂಡಿದ್ದ ವಿಜಯನಾರಸಿಂಹನಿಂದ—ತಮ್ಮ ಸಾಧಕಹಸ್ತಲಾಘವ ಚಮತ್ಕಾರದಿಂದ ಆ ದುಷ್ಟಜಟ್ಟಿಯ ಕೊರಲನ್ನರಿದುಬಿಟ್ಟರು. ಆಗ ನಡೆದದ್ದೊಂದು ಅದ್ಭುತವನ್ನು ಕೇಳಯ್ಯ ; ನಮ್ಮ ಮಹಾರಾಜರು ತಮ್ಮ ಬಿನ್ನಣದ ಕಯ್ಚಳಕದ ಕುಶಲತೆಯಿಂದ ಆ ಜಟ್ಟಿಗನ ಕತ್ತನ್ನು ಒಂದುಕಡೆಯಿಂದ ಮತ್ತೊಂದು ತುದಿಗೆ ಸಂಪೂರ್ಣವಾಗಿ ಕತ್ತರಿಸಿಬಿಟ್ಟಿದ್ದರೂ, ಆ ಜಟ್ಟಿಯ ಕೊರಲಿಂದ ಒಂದೇ ಹನಿಯ ರಕ್ತವೂ ಹೊರಡದೆ, ಅವನ ರುಣ್ಡವು ಕಳಚಿಕೊಂಡು ಕೆಳಕ್ಕೆ ಬೀಳದೆ ಅಲ್ಲಾಡದೆ ಅವನ ಕತ್ತಿನಮೇಲೆ ನಿಂತಿದ್ದಿತು; ಎಂದರೆ, ನಮ್ಮ ಮಹಾರಾಜರು ಸಾಧಿಸಿದ್ದ ಈ ಕಾರ್ಯಭಾಗವು ನೋಡುತ್ತಿದ್ದ ಜನರಾರಿಗೂ......ಆ ಪಾಳೆಯಗಾರನಿಗೂ ತಿಳಿಯಲೇ ಇಲ್ಲ. ನಮ್ಮ ಮಹಾರಾಜರ ಸಾಮರ್ಥ್ಯವೆಂದರೆ, ಅದು! ತಿಳಿಯಿತೇನಯ್ಯ ?......ಹೀಗಾದ ಬಳಿಕ, ಆ ಜಟ್ಟಿಯ ಹೆಣವು ಅಲ್ಲಾಡದೆ ಕಂಭದಹಾಗೆ ನಿಂತಿದ್ದದ್ದನ್ನೂ, ನಮ್ಮ ಮಹಾರಾಜರು ಆ ಮಲ್ಲರಂಗದ ನಡುವೆ ಅವಸರವಿಲ್ಲದವರಂತೆ ವಿಶ್ರಮಿಸಿಕೊಳ್ಳುತ್ತಿದ್ದ ಸಮಾಚಾರವನ್ನೂ ನೋಡಿ, ಆ ತಿರುಚನಾಪಳ್ಳಿಯ ಪಾಳೆಯಗಾರನು ಅದೇಕೆಂದು ಕೂಗಿ ಕೇಳಿದನು. ಆಗ ನಮ್ಮ ರಣಧೀರಮಹಾರಾಜರು ನಸುನಕ್ಕು ಒಂದು ಬೆತ್ತವನ್ನು ತರಿಸಿಕೊಂಡು, ಅದರಿಂದ ಆ ಜಟ್ಟಿಯ ಹೆಣದಮುಖದ ಮೇಲೆ ಹೀಗೆ ತಿವಿದರು. ಆಕ್ಷಣವೇ ಆ ಶವದ ರುಂಡವು ಕೆಳಕ್ಕೆ ಬಿದ್ದುರುಳಿ **ಕುಣಿದಾಡಿತು.**

ಮೂರನೆಯವನು :—ನಮ್ಮ ರಣಧೀರಮಹಾರಾಜರಿಗೆ ಅಂತಹ ಮೋಸದ ವಿದ್ಯೆಯು ಯಾವ ಕಣನಲ್ಲಿಯಾದರೂ ಬೇಕಾಗಿಲ್ಲ ; ಅವರು ಪಟ್ಟುಗಳನ್ನರಿತು ಹಿಡಿದು, ಧರ್ಮಕ್ಕೆ ಹಾನಿಯಾಗದಂತೆ ಕಾಳೆಗ ಮಾಡಿಯೇ ಆ ವೀರಮಲ್ಲನೆಂಬ ದಿಟ್ಟಜಟ್ಟಿಗನನ್ನು ಗೆದ್ದು ಕೊಂದರು.

ಆರನೆಯವನು :—ಹೇಗೇ ಆದರೂ, ನಮ್ಮ ಈ ಮಹಾರಾಜರು ಆ ಜಟ್ಟಿಯನ್ನು ಸಂಹಾರಮಾಡಿದರು. ಆಗ ತಿರುಚನಾಪಳ್ಳಿಯ ಪಾಳೆಯಗಾರನು ಗೆದ್ದವರು ನಮ್ಮ ಮಹಾರಾಜರೆಂಬುದನ್ನರಿಯದೆ, ಇಂತಹ ಅಮಾನುಷವಾದ ಭುಜಶಕ್ತಿಪರಾಕ್ರಮಗಳನ್ನುಳ್ಳ ಮಲ್ಲನಿಗೆ ಉಚಿತವಾಗಿ ಸನ್ಮಾನಮಾಡಿ ತನ್ನ ಆಸ್ಥಾನದಲ್ಲಿ ಇರಿಸಿಕೊಳ್ಳಬೇಕೆಂದಿದ್ದನು; ಆದರೆ, ನಮ್ಮ ಮಹಾರಾಜರು ಅದಕ್ಕೆ ಸಿಕ್ಕದೆ, ...‘ಮಹೀಶೂರದೇಶದಿಂದ ಯಾರೋ ಬಂದು ಇಂತಹ ಶಕ್ತಿಪರಾಕ್ರಮಗಳನ್ನಾಡಿ ತೋರಿದರು.’......ಎಂಬುದೊಂದು ಒಕ್ಕಣೆಯನ್ನು ಆ ಪಾಳೆಯಗಾರನ ಕಯ್ಗೆ ದೊರೆವಡುವಂತೆ ಬರೆದಿಟ್ಟುಬಿಟ್ಟು, ಹಿಂದಿರುಗಿ ಹೊರಟು, ಗುಟ್ಟಾಗಿ ಬಂದು ತೆರಕಣಾಂಬಿಯನ್ನು ಸೇರಿದರು.

ನಿರೀಶ :—.........ನಿಮ್ಮ ಮಹಾರಾಜರ ಪನ್ನತಿಕೆಯ ಮೆಯ್ವೆರ್ಚಿನ ಸಾಹಸಕೃತಿಗಳನ್ನೆಲ್ಲಾ ಬಿತ್ತರಿಸಿದಿರಾಯ್ತೊ ?

ಮೊದಲನೆಯವನು :—ನಿನಗೆ ಅಷ್ಟೇ ಸಾಕು.

ಯುವಕಪೌರ :—ಆದರೇನು ?

ನಿರೀಶ :—ನೀವು ಬಣ್ಣಿಸಿದವೆಲ್ಲ ಅಮಾನುಷವಾದುವೆಂದು ನೀವೇ ಒಪ್ಪಿಕೊಂಡಿರಷ್ಟೆ ?

ಮೂರನೆಯವನು :—ಆದರಿಂದಲೇ ನಮ್ಮ ಮಹಾರಾಜರು ಅಮಾನುಷಶಕ್ತಿಪ್ರತಾಪಗಳನ್ನುಳ್ಳ—ಶ್ರೀಕೃಷ್ಣನ ಅವತಾರ.

"ದೇವರು ಇದ್ದಾನೆ"

ಎಷ್ಟೋ ದಿವಸಗಳ ಕೆಳಗೆ ನೋಡಿದ ನೆಂಟರಿಷ್ಟರನ್ನೋ ಸ್ನೇಹಿತರನ್ನೋ ನೋಡಬೇಕಾದರೆ ನಮ್ಮದೇಶದಲ್ಲಿ ಎರಡು ಸ್ಥಳಗಳಿವೆ. ಮೊದಲನೆಯದು—ನವರಾತ್ರಿಯಲ್ಲಿ ಮೈಸೂರು ಅರಮನೆಯ ಹತ್ತಿರದ ಪ್ರದೇಶ; ಎರಡನೆಯದು—ಬೆಂಗಳೂರಿನ ಉಡುಪಿ ಹೋಟಲಿನ ಮುಂದಿರುವ ಚೌಕ; ಇದಕ್ಕೆ ಮೊದಲನೆಯ ಸ್ಥಳದಂತೆ ಇಂಥ ಕಾಲವೆಂಬ ನಿಯಮವಿಲ್ಲ; ಮುನ್ನೂರಅರವತ್ತು ಹಗಲೂ ಮುನ್ನೂರಅರವತ್ತು ರಾತ್ರಿಯೂ ಒಂದೇ. ಏನೋ ಕೆಲಸವನ್ನು ಇಟ್ಟುಕೊಂಡು ಆತುರದಲ್ಲಿ ಓಡಿಹೋಗುವುದನ್ನು ಬಿಟ್ಟು ಒಂದು ಕಾಲುಗಂಟೆಯ ಹೊತ್ತು ಅದೇ ಉದ್ದೇಶ್ಯದಿಂದ ಆ ಹೋಟಲಿನ ಮುಂದೆ ನಿಂತರೆ ಅಲ್ಲಿ ಕಣ್ಣಿಗೆ ಬೀಳದಿರುವವರು ಯಾರು? ನಾನು ನಮ್ಮ ವೆಂಕಟೇಶಯ್ಯನನ್ನು ಬಹಳದಿನದಮೇಲೆ ಅಕಸ್ಮಾತ್ ಕಂಡದ್ದು ಅಲ್ಲಿಯೇ. ಅವನೂ ನಾನೂ ಸಹಪಾಠಿಗಳು; ಆದರೆ ಕಾಲೇಜನ್ನು ಬಿಟ್ಟಮೇಲೆ ಒಬ್ಬರನ್ನೊಬ್ಬರು ನೋಡಿರಲಿಲ್ಲ. ಅವನು ಎಲ್ಲಿದ್ದನೋ ಅದೂ ನನಗೆ ಗೊತ್ತಿರಲಿಲ್ಲ. ಆದ್ದರಿಂದ ಅವನನ್ನು ನೋಡಲು ಸ್ವಲ್ಪ ಆಶ್ಚರ್ಯವೇ ಆಯಿತು. ಅದೇ ಶಿಸ್ತುಗಾರ ಪುಟ್ಟಸಾಮಿ; ಈಗ ಫೆಲ್ಟ್‌ಕ್ಯಾಪ್‌ಗೆ ಬದಲಾಗಿ ಪೂರ್ತಿ ಎರಡುಬೆಟ್ಟು ಅಗಲ ಕಲಾಪತ್ತು ಇರುವ ರುಮಾಲು; ಕಸಿಮಾಡಿದ ಮೀಸೆ; ಅದಕ್ಕೆ ತಕ್ಕಹಾಗೆ ಮಿಕ್ಕದ್ದೆಲ್ಲಾ; ಸಾಲದ್ದಕ್ಕೆ ಲಾಯರು;—ಕಕ್ಷಿಗಾರರ ಕಣ್ಣಿಗೆ ಮಣ್ಣುಹುಯ್ಯಬೇಕೋ ಬೇಡವೋ!

"ಓಹೋ! ಏನಯ್ಯಾ ವೆಂಕಟೇಶ, ಯಾವಾಗ ಬಂದೆ?"

"ಏನು ಶ್ರೀಪತಿ!"

ಪರಸ್ಪರ ಯೋಗಕ್ಷೇಮವು ಹೀಗೆ ಏಕಕಾಲದಲ್ಲಿ ಚಿಕ್ಕದಾಗಿ ಮುಗಿಯಿತು. ಆಮೇಲೆ,—ಆಮೇಲೆ ಗೊತ್ತೇಯಿದೆ ಹೋಟಲಿನ ಹತ್ತಿರ ಸ್ನೇಹಿತರು ಸಿಕ್ಕಿದರೆ! ಹೋಟಲಿನವನಿಗೆ ತೆರಬೇಕಾದ ದಂಡವನ್ನು ತೆತ್ತು ಹಾಲುಕುಡಿದ ಬೆಕ್ಕುಗಳಂತೆ ನಾಲಗೆಯಿಂದ ತುಟಿಗಳನ್ನು ಸವರಿಕೊಳ್ಳುತ್ತ ಹೊಸಜೀವ ಬಂದವರಂತೆ ಹೊರಟೆವು. ಏನೇನೋ ಹರಟೆ ಹರಟುತ್ತ ಲಾಲಬಾಗಿನಮೇಲೆ ಹೊರಟು ಮನೆಯಕಡೆಗೆ ಬಂದೆವು. ಬಸವನಗುಡಿಯ ಚೌಕದಹತ್ತಿರ ವೆಂಕಟೇಶನು ಒಬ್ಬ ಹುಡುಗನನ್ನು ನೋಡಿ "ಯಾಕೋ! ಉಪವಾಸ ಹೋಗುತೀಯೇನೋ ಸ್ಕೂಲಿಗೆ?" ಎಂದು ಕೇಳಿದನು.

"ಇಲ್ಲ, ನನಗೆ ಊಟವಾಯಿತು. ನೀವೂ ಬರುತಾರೇನೋ ತಾಳು ನೋಡೋಣ ಎಂದು ಇಷ್ಟುಹೊತ್ತಿನತನಕ ನೋಡಿದರು; ನೀವು ಬರಲಿಲ್ಲ. ಸ್ಕೂಲಿಗೆ ಹೊತ್ತಾಯಿತು ಅಂತ ಅಮ್ಮ ನನಗೆ ಅನ್ನ ಹಾಕಿಬಿಟ್ಟಳು"

"ನಿಮ್ಮ ತಾತನಿಗೂ ಊಟವಾಯಿತೇ ?"

"ಇಲ್ಲ, ನಿಮಗೋಸ್ಕರ ಕಾದುಕೊಂಡಿದ್ದಾರೆ."

"ಊಟವಾಗಿದ್ದರೆ ಹಣೆಗೆ ಯಾಕೆ ಏನೂ ಇಟ್ಟುಕೊಳ್ಳಲಿಲ್ಲ ?"

ಅದಕ್ಕೆ ಹುಡುಗನು ಯಾವ ಉತ್ತರವನ್ನೂ ಕೊಡಲಿಲ್ಲ ; ಅದೇನೂ ಅಷ್ಟು ಲಕ್ಷ್ಯಕೊಡತಕ್ಕ ವಿಷಯವಲ್ಲವೆಂಬಂತೆ ಒಂದುಸಾರಿ ಲೊಚಗುಟ್ಟಿ ತುಟಿತೋರಿಸಿ ತಲೆ ಅಲ್ಲಾಡಿಸಿ ಪುಸ್ತಕದ ಚೀಲವನ್ನು ಹೆಗಲಮೇಲೆ ಹಾಕಿಕೊಂಡು ಓಡಿ ಹೋದನು.

ಹುಡುಗನು ಒಳ್ಳೆಯ ಪಟುವಾಗಿಯೂ ಸುಂದರನಾಗಿಯೂ ಇದ್ದನು ; ನನಗೆ ಅವನ ಪರಿಚಯವಿಲ್ಲದಿದ್ದರೂ ಅವನು ಹೋದಕೂಡಲೆ "ಹೊರಟುಹೋದ ನಲ್ಲಾ !" ಎನ್ನಿಸಿತು. ಆದ್ದರಿಂದ

"ಆ ಹುಡುಗ ಯಾರಯ್ಯ ?" ಎಂದು ನನ್ನ ಸ್ನೇಹಿತನನ್ನು ಕೇಳಿದೆ.

"ವೆಂಕಟಸುಬ್ಬಯ್ಯನವರ ಮಗನೋ !"

"ಯಾವ ವೆಂಕಟಸುಬ್ಬಯ್ಯನವರು ?"

"ಮದರಾಸಿನಲ್ಲಿ ನಾನಿದ್ದಾಗ ನನ್ನ ಜೊತೆಯಲ್ಲಿ ಇದ್ದರಲ್ಲ, ಅವರು."

"ಅವರು ಯಾರೋ ಗೊತ್ತಿಲ್ಲ."

"ಸರಿಸರಿ, ನಿನಗೆ ಗೊತ್ತಿಲ್ಲ ; ನಾನು ಮೈಸೂರು ಬಿಟ್ಟು ಹೋದಮೇಲೆ ನಾವು ಪುನಃ ಒಬ್ಬರನ್ನೊಬ್ಬರು ನೋಡಿಯೇ ಇಲ್ಲ—ನಿಮ್ಮ ರಾಮಚಂದ್ರಯ್ಯನವ ರಿದ್ದಾರಲ್ಲ ಅವರ ಅಣ್ಣ ಒಬ್ಬರಿದ್ದರು."

"ಹೌದು ಹೌದು, ಅವರಣ್ಣ ಯಾರೋ ಉತ್ತರದೇಶದಲ್ಲಿ ಇದ್ದಾರೆಂದು ಹೇಳುತ್ತಿದ್ದರು."

"ಅವರು ಬೇರೆ ; ಅವರು ಎಲ್ಲರಿಗಿಂತಲೂ ಹಿರಿಯವರು ; ವೆಂಕಟಸುಬ್ಬ ಯ್ಯನವರು ನಡುಕಲವರು."

"ನೀನೂ ಅವರೂ ಬಿ.ಎಲ್. ಕ್ಲಾಸಿನಲ್ಲಿ ಒಟ್ಟಿಗೆ ಓದುತ್ತಿದ್ದಿರೇನು ?"

"ಇಲ್ಲ"

"ಮತ್ತೆ ! ನಿನಗೆ ಅವರ ಪರಿಚಯವಾದದ್ದು ಹ್ಯಾಗೆ ?"

" ಅಯ್ಯೋ ! ಅದು ಒಂದು ದೊಡ್ಡ ಕಥೆ. ಅವರು ಸತ್ತಮೇಲೆ ಅವರ ಪರಿಚಯವಾದದ್ದು."

" ಸತ್ತಮೇಲೆ ಪರಿಚಯವಾದದ್ದೆಂದರೇನೋ ? "

" ಹೌದು ; ಅದನ್ನು ಇನ್ನೊಂದುಸಲ ಹೇಳುತ್ತೇನೆ ; ಈಗ ಊಟಕ್ಕೆ ಹೋಗಬೇಕು ಹೊತ್ತಾಯಿತು, ಅವರೆಲ್ಲರೂ ಕಾದುಕೊಂಡಿದಾರಂತೆ."

" ಯಾಕೆ ? ನಮ್ಮ ಮನೆಗೇ ಬಂದುಬಿಡು ಹೋಗೋಣ. ಅವರ ಮೇಲೆ ಅಷ್ಟೊಂದು ಅಭಿಮಾನವೇನು ? "

" ಇಲ್ಲಪ್ಪ ; ನನಗೆ ಅವರ ಪರಿಚಯವಾದಂದಿನಿಂದ ನಾನು ಇನ್ನೆಲ್ಲಿಗೂ ಹೋಗುವದಿಲ್ಲ ; ಬೆಂಗಳೂರಿಗೆ ಬಂದಾಗೆಲ್ಲಾ ಅವರ ಮನೆಗೇ ಹೋಗುವುದು ; ಅಲ್ಲಿ ಇಲ್ಲಿ ಊಟಮಾಡಿದನೆಂದು ತಿಳಿದರೆ ಅವರು ನನ್ನನ್ನು ಸುಮ್ಮನೆ ಬಿಡುವದಿಲ್ಲ ! "

" ಊಟಮಾಡಿಕೊಂಡಾದರೂ ಮನೆಯಕಡೆ ಬರುತ್ತೀಯೋ ? "

" ಇನ್ನೇನು ಕೆಲಸ ? "

" ಮನೆಯಲ್ಲಿಯೋ ಇರಲೊ ? "

" ಹುಂ "

ಲಾಯರುಗಳನ್ನು ನೋಡಿದರೆ, ಹೊರಗಿನ ವೇಷದಿಂದ ಅವರ ನಿಜವಾದ ಕಷ್ಟಸುಖಗಳನ್ನು ಹೇಳುವಂತಿರುವುದಿಲ್ಲ. ವೆಂಕಟೇಶಯ್ಯನೂ ಆ ಗುಂಪಿಗೆ ಸೇರಿದವನೇ ; ಆದರೆ ಅವನಲ್ಲಿ ಬರಿಯ ಬಟ್ಟೆಬರೆಗಳ ಆಡಂಬರವಷ್ಟೇ ಗಮನಿಸತಕ್ಕದ್ದೆಂದು ಹೇಳುವ ಹಾಗಿಲ್ಲ; ಎಂದೂ ಮನಸ್ಸಿಗೆ ಯಾವುದನ್ನೂ ವಿಶೇಷವಾಗಿ ಹತ್ತಿಸಿಕೊಂಡು ಕೊರಗಿದವನಲ್ಲ ; ಯಾವಾಗ ನೋಡಲಿ, ಅವನು ನಗುತ್ತ ಇರದೆ ಮುಖ ಗಂಟು ಹಾಕಿಕೊಂಡಿದ್ದದ್ದನ್ನಂತೂ ಯಾರೂ ಅರಿದೇ ಅರಿಯರು ; ಅದೂ ಒಂದು ಪುಣ್ಯ.

ನನಗೆ ಊಟವೇನೋ ಆಯಿತು ; ಆದರೆ, ಸತ್ತಮೇಲೆ ಪರಿಚಯವಾಗುವುದೆಂದರೇನು—ಎಂಬ ಸಂಗತಿಯು ಬಹುವಾಗಿ ಬಾಧಿಸುತ್ತಿತ್ತು. ಪಿಶಾಚಿಯು ಕಾಣಿಸಿಕೊಂಡಿರಬಹುದೇ ? ಈಗ ಕೋನರ್‌ಡಾಯಲ್, ಆಲಿವರ್‌ಲಾಡ್ಜ್ ಇವರೆಲ್ಲಾ ಹೇಳುತ್ತಿರುವುದು ನಿಜವಿರಬಹುದೇ ?—ಎಂದು ಬಗೆಬಗೆಯಾಗಿ ಯೋಚಿಸುತ್ತ ನನ್ನ ಸ್ನೇಹಿತನಿಗಾಗಿ ಕಾಯುತ್ತಿದ್ದೆ. ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ನನ್ನ ಸ್ನೇಹಿತನು ನೇರಿಲೆಹಣ್ಣಿನ ಬಣ್ಣದ ಒಂದು ಅಂಗಿಯನ್ನು ತೊಟ್ಟು ಅದರ ಮೇಲೆ ಮಲ್ಲಿಗೆ ಹೂವಿನಂತೆ ಶುಭ್ರವೂ ಹಗುರವೂ ಆದ ಒಂದು ಕಲಾಪತ್ತಿನ

ವಲ್ಲಿಯನ್ನು—ಮೈಮೇಲೆ ಬಿದ್ದಿದೆಯೋ ಇಲ್ಲವೋ ಎಂಬಹಾಗೆ—ಹೊದ್ದು ಪೂನಾ ಜೋಡುಗಳನ್ನು ಮೆಟ್ಟಿ ತಾಂಬೂಲವನ್ನು ಮೆಲ್ಲುತ್ತ ಬಂದು ಕೈಲಿದ್ದ ಕೋಲಿನಿಂದ ಬಾಗಿಲನ್ನು ಕುಟ್ಟಿ 'ಶ್ರೀಪತಿ!' ಯೆಂದು ಕೂಗಿದನು. ಅವನನ್ನು ಬರಮಾಡಿ ಕೊಂಡು ಒಳಗೆ ಕರೆದು ಕೂರಿಸಿ 'ಸುಶೀಲಾ, ಟೀ ತಗೊಂಡುಬಾರೇ!' ಎಂದು ಕೂಗಿದೆ. ಟೀ ಬಂತು. ಅವನೇನೋ ಮಧ್ಯಾಹ್ನದ ನಿದ್ರೆಮಾಡಿ ಎದ್ದು ತೃಪ್ತಿಯಾಗಿ ತಿಂಡಿ ತಿಂದು ಟೀ ಕುಡಿದು ಎಲೆ ಅಡಿಕೆ ಹಾಕಿಕೊಂಡಿದ್ದನು. ಆದರೂ ಪುನಃ ತೆಗೆದುಕೊಳ್ಳುವುದಕ್ಕೆ ಹೆಚ್ಚು ಸಂಕೋಚವನ್ನೇನು ತೋರಿಸಲಿಲ್ಲ. ಆದಾದ ಕೂಡಲೆ ನಾನು ಕಥೆಯನ್ನು ಜ್ಞಾಪಿಸಿದೆ.

'ಯಾವ ಕಥೆ?'

ಅವನಿಗೆ ಆಗಲೆ ಬೆಳಗ್ಗೆ ಮಾತನಾಡಿದ ಸಂಗತಿಯೆಲ್ಲಾ ಮರೆತುಹೋಗಿತ್ತು; ಪುನಃ ಜ್ಞಾಪಿಸಿದೆ.

'ಅದೇ? ಅದು ಕಥೆಯೂ ಅಲ್ಲ ಏನೂ ಅಲ್ಲ; ನಡೆದ ಸಂಗತಿಯಯ್ಯಾ!'

'ಏನಾದರೂ ಆಗಲಿ, ಸತ್ತಮೇಲೆ ಪರಿಚಯವಾಯಿತು ಎಂದೆಯಲ್ಲ ಅದು ಹೇಗೆ ಹೇಳು.'

(೨)

(ವೆಂಕಟೇಶಯ್ಯನು ಹೇಳಿದ ಕಥೆ.)

"ನಾನು ಬಿ.ಎಲ್. ಪರೀಕ್ಷೆಗೆ ಓದುತ್ತಿದ್ದಾಗ ನನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡುಹೋಗಿ ಮದ್ರಾಸಿನಲ್ಲಿ ಸಂಸಾರಮಾಡುತ್ತಿದ್ದೆ. ಲಾ ಕಾಲೇಜಿಗೆ ಹತ್ತಿರವಾಗಿರಲೆಂದು ತಂಬೂಚೆಟ್ಟಿ ರಸ್ತೆಯಲ್ಲಿ ಮನೆ ಮಾಡಿದ್ದೆ; ನಾನಿದ್ದದ್ದು ಒಂದು ದೊಡ್ಡ ಮಹಡಿಯಮನೆ..."

"ನೀನು ಬಿಡಪ್ಪ! ಸಣ್ಣಕ್ಕಿ ಅನ್ನ ಬೆಣ್ಣೆಕಾಯಿಸಿದ ತುಪ್ಪ, ಕಲಾಪತ್ತಿನ ಪಂಚೆ ಮಹಡಿಮನೆ ಇವು ಇಲ್ಲದ್ದು ಯಾವಾಗ?"

ಒಂದುಸಾರಿ ಗಟ್ಟಿಯಾಗಿ ನಕ್ಕು,

"ಹಾಗಲ್ಲವೋ ಮಹಾರಾಯ! ಅಲ್ಲಿ ಮೇಲಿನ ಅಂತಸ್ತಿಗೆ ಹೋಗುತ್ತ ಹೋಗುತ್ತ ಬಾಡಿಗೆ ಕಮ್ಮಿ; ಅದಕ್ಕೋಸ್ಕರ ಅಲ್ಲಿದ್ದೆ. ದೊಡ್ಡ ವಠಾರದ ಮನೆ; ಆ ಮನೆಗಳಲ್ಲಿ ಎಷ್ಟು ಸಂಸಾರಗಳಿದ್ದುವೋ ದೇವರೇ ಬಲ್ಲ; ಮನೆಗಳನ್ನು ಕಟ್ಟಬೇಕಾದರೆ ಮದರಾಸು ಬೊಂಬಾಯಿಗಳ ಕಟ್ಟಡಗಳನ್ನು ನೋಡಿ ಕಟ್ಟಬೇಕು; ಎಷ್ಟು ಸಣ್ಣ ಜಾಗದಲ್ಲಿ ಎಷ್ಟು ಅನುಕೂಲವಿರುತ್ತದೆ ಬಲ್ಲೆಯಾ? ನಿಮ್ಮ ಈ

ಇಷ್ಟು ದೊಡ್ಡಮನೆಯಲ್ಲಿರುವ ಸಾಮಾನನ್ನೆಲ್ಲಾ—ಇದರ ನಾಲ್ಕರಲ್ಲಿ ಒಂದು ಪಾಲು ಇರಲಾರದು—ಅಷ್ಟು ಸಣ್ಣ ಮನೆಯಲ್ಲಿ ಇಟ್ಟುಕೊಳ್ಳಬಹುದು. ಅಲ್ಲಿ ಯಾವಯಾವ ಜಾತಿಯವರೋ ಇದ್ದರು. ಅವರಲ್ಲಿ ಕನ್ನಡ ಮಾತಾಡುವ ಮೈಸೂರಕಡೆಯವರೂ ಒಬ್ಬರು ಇದ್ದರು. ಆಗೊಂದು ಈಗೊಂದು ಕನ್ನಡ ಮಾತು ಕಿವಿಗೆ ಬೀಳುತ್ತಿತ್ತು. ಅಷ್ಟು ಹೊರತು ಅವರು ಯಾರೋ ನಾನು ನೋಡಿರಲಿಲ್ಲ-ವಿಚಾರಿಸಿಯೂ ಇರಲಿಲ್ಲ. ಒಬ್ಬರನ್ನೊಬ್ಬರು ನೋಡುವುದು ಹೇಗೆ? ಅದೇನು ಮೈಸೂರೇ?—ಅಪ್ಪ ಸಂಪಾದಿಸಿಟ್ಟ ಜಮೀನಿನಿಂದ ಬಂದ ಭತ್ತವನ್ನು ಸ್ವಂತಮನೆಯಲ್ಲಿ ತುಂಬಿಟ್ಟುಕೊಂಡು ಮೊಗರುಬದನೇಕಾಯಿನ ವಾಂಗಿಭಾತುಗಳನ್ನು ತಿಂದುಕೊಂಡು ಚಿಗರು ವಿಳ್ಳೇದೆಲೆಯನ್ನು ಮೆಯ್ಯುತ್ತಾ ಜಡಭರತರಂತೆ ಹರಟೆಹೊಡೆಯುತ್ತ ಕಾಲಕಳೆಯುವುದಕ್ಕೆ? ಬೆಳಕುಹರೆಯುವುದಕ್ಕೆ ಮುಂಚೆ ಸ್ನಾನಪಾನಗಳನ್ನು ಮುಗಿಸಿಕೊಳ್ಳದಿದ್ದರೆ ಆಮೇಲೆ ನೀರು ಸಿಕ್ಕೀತೇ ಅಲ್ಲಿ? ಒಂದು ದಿವಸವೇನಾದರೂ ನಾಟಕಕ್ಕೆ ಹೋಗಿದ್ದು ಎಚ್ಚರವಾಗುವುದು ಹೊತ್ತಾದರೆ ಅವತ್ತು ಸ್ನಾನಕ್ಕೆ ಸೊನ್ನೆಯೇ! ಇಷ್ಟು ಮಾಡಿಕೊಂಡು ಏಳುಗಂಟೆಯ ಒಳಗಾಗಿ ಟ್ರಿಪ್ಲಿಕೇನಿಗೆ ಹೋಗಿ ತಲಪಬೇಕಾಗಿತ್ತು...ನೀನು ಮದ್ರಾಸು ನೋಡಿದ್ದೀಯೋ ಇಲ್ಲವೋ? ನೀನೊಬ್ಬ ಮನೆಯ ಮುಸುಂಡಿ.''

"ಅಷ್ಟುಮಟ್ಟಿಗೆ ನೋಡಿದ್ದೇನೆ ಹೇಳಪ್ಪ! ನೀನು ಮಹಾದೇಶಾಂತರಗಳನ್ನು ತಿರುಗಿರುವುದಕ್ಕೆ ಮಿಕ್ಕವರನ್ನೆಲ್ಲಾ ಬೈಯುತೀಯೆ!''

"ಬೆಳಗಾಗಿ ಏಳುತ್ತಿದ್ದ ಹಾಗೇ ಟ್ರಿಪ್ಲಿಕೇನ್‌ಗೆ ಹೋಗಬೇಕಾಗಿತ್ತು. ಅಲ್ಲಿ ಏನೋ ಒಂದು ಕೆಲಸವನ್ನು ಗಂಟುಹಾಕಿಕೊಂಡು ನಾಲ್ಕು ಕಾಸು ಸಂಪಾದಿಸುತ್ತಿದ್ದೆ. ಹಾಗೇ ಸಾಯಂಕಾಲವೂ ಒಂದು ಕಡೆ ಕೆಲಸ; ಯಾವ ಯಾವ ರೀತಿ ಎಷ್ಟೆಷ್ಟು ಸಂಪಾದಿಸಿದರೂ ಸಾಲುತ್ತಿರಲಿಲ್ಲ. ಹೀಗೆ ನಾನು ಮನೆಗೆ ಸೇರುವುದೇ ಕಷ್ಟವಾಗಿತ್ತು; ಅವರ ಹಣೆಯುಬರಹವೂ ಅಷ್ಟೆ! ಇಂಥಾದ್ದರಲ್ಲಿ ನನಗೂ ಅವರಿಗೂ ಪರಿಚಯ ಹೇಗಾಗಬೇಕು? ಆದರೂ ನಮ್ಮವರೊಬ್ಬರಿದ್ದಾರೆಂದು ಯಾವಾಗಲೂ ಒಂದು ವಿಧವಾದ ಸುಖವೂ ಧೈರ್ಯವೂ ಇರುತ್ತಿತ್ತು. ನಮ್ಮವರು ತಮ್ಮವರು ಎಂಬ ನೆಂಟಿನ ಬೆಲೆಯನ್ನು ಅರಿಯಬೇಕಾದರೆ ಪರಸ್ಥಳಕ್ಕೆ ಹೋಗಬೇಕು ನೋಡು—ಅದರಲ್ಲಿಯೂ ಪರದೇಶಕ್ಕೆ ಹೋಗಬೇಕು; ಅಲ್ಲಿ ನಮ್ಮ ದೇಶದ ಜನರು ನಮ್ಮ ದೇಶದ ಉಡುಪು ನಮ್ಮ ದೇಶದ ಮಾತು ಯಾವುದೂ ಇರಬಾರದು! ಅಂಥ ಕಡೆಗೆ ಹೋದರೆ ನಾಲ್ಕು ದಿವಸಗಳಲ್ಲಿ ನಮ್ಮ ದೇಶದ ಭಿಕ್ಷುಕನನ್ನು ಕಂಡರೂ ಅವನಲ್ಲಿಯೂ ಏನೋ ಮಮತೆಯುಂಟಾಗುವುದು.

ಪರೀಕ್ಷೆಯ ಕಾಲ; ಆದುವರೆಗೂ ಸೋಮಾರಿತನದಲ್ಲಿಯೂ ಸಂಸಾರ ತಾಪತ್ರಯಗಳಲ್ಲಿಯೂ ಕಾಲಕಳೆದುಬಿಟ್ಟಿದ್ದು ಆಗ್ಗೆ ಎರಡು ಮೂರು ದಿವಸಗಳಿಂದ ರಾತ್ರಿ ಬಹುಹೊತ್ತಿನವರೆಗೂ ಓದುತ್ತಿದ್ದೆ. ಅದೆಂಥ ಓದು! ಹಗಲೆಲ್ಲಾ ದುಡಿದು ದುಡಿದು ಹಾಸಿಗೆ ಕಂಡೇನೇ ಎಂದು ಮನೆಗೆ ಬಂದು ಕೈಗೆ ಪುಸ್ತಕಹಿಡಿದುಕೊಂಡು ಕೂತರೆ ವ್ಯಾಸಂಗ ನಡೆಯುವುದು ಗೊತ್ತೇ ಇದೆ; ಸಾಲದ್ದಕ್ಕೆ ಓದುವ ಕೊಠಡಿ ಬೇರೆಯಾಗಿ ಇರಲಿಲ್ಲ; ಇದ್ದದ್ದು ಒಂದೇ ಕೊಠಡಿ; ಅದರಲ್ಲಿ ಹಾಸಿಗೆಯನ್ನು ಹಾಸಿಬಿಟ್ಟಿರುತ್ತಿತ್ತು. ತಿಂಡಿ, ಮಾತು, ಎಲೆಯಡಿಕೆ..."

"ಸರಿ ಮತ್ತೆ! ಎಷ್ಟುದುಡ್ಡು ಸಂಪಾದನೆಮಾಡಿದರೆ ತಾನೇ ಹೇಗೆ ಸಾಕಾಗುತ್ತೆ?"

"ಸಂಪಾದನೆ ಸಾಲದೆಂದು ಉಪವಾಸ ಒರಗುವುದಕ್ಕಾಗುತ್ತದೆಯೇ? ನನ್ನಿಂದಾಗುವದಿಲ್ಲ; ಮನೆಯಲ್ಲಿ ತಿಂಡಿ ಬೀಳದಿದ್ದ ದಿವಸ ಹೊರಗೆ ಎಲ್ಲಾದರೂ ಹೋಗಿ ತಿಂದುಬಿಡುವುದೇ!"

"ದುಡ್ಡಿಲ್ಲದಿದ್ದರೆ!"

"ದುಡ್ಡಿಲ್ಲದಿದ್ದರೆ, ಯಾರಾದರೂ ಕೊಡಿಸುತ್ತಾರೆ!"

"ಹಾಗಾದರೆ ಸರಿ! ಉಪವಾಸವೂ ಇಲ್ಲ ವನವಾಸವೂ ಇಲ್ಲ; ಮುಂದೆ?"

"ಏನು ಹೇಳುತ್ತಿದ್ದೆ? ಹುಂ, ಹಾಸಿಗೆಯ ಮೇಲೆ ಮಲಗಿಕೊಂಡು ಓದುವುದು; ವ್ರತವಿಲ್ಲ ಸುಖವಿಲ್ಲ; ಓದಿದ ಹಾಗಲ್ಲ, ನಿದ್ರೆಮಾಡಿದ ಹಾಗಲ್ಲ; ಎಷ್ಟು ಸಲ ತೂಕಡಿಸಿ ಪುಸ್ತಕ ಕೆಳಗೆ ಹಾಕುತ್ತಿದ್ದೆನೋ, ಎಷ್ಟುಸಲ ತೆಗೆದುಕೊಳ್ಳುತ್ತಿದ್ದೆನೋ! ಅಂತೂ ಇಂತೂ, ಓದೂ ಇಲ್ಲದೆ ನಿದ್ರೆಯೂ ಇಲ್ಲದೆ ಬಹಳ ಹೊತ್ತು ಕಳೆದು ದೇವರ ಮೇಲೆ ಭಾರಹಾಕಿ ಪುಸ್ತಕ ಮುಚ್ಚಿ ದೀಪ ಸಣ್ಣದುಮಾಡಿ ಮಲಗಿಬಿಡುತ್ತಿದ್ದೆ; ಒಂದು ದಿವಸ ಹೀಗೇ ಮಲಗಿದ್ದೆ. ನಿದ್ರೆ ಹತ್ತಿತ್ತೋ ಇಲ್ಲವೋ,— ಆಗ ಯಾರೋ ಕನಸಿನಲ್ಲಿ 'ರಾಯರೇ, ರಾಯರೇ' ಎಂದ ಹಾಗಾಯಿತು. ನನಗೆ ನಿದ್ರೆಯಲ್ಲಿಯೇ ನಗು; ನನ್ನನ್ನು ಆದುವರೆಗೆ ಯಾರೂ ರಾಯರೇ ಎಂದು ಕರೆದಿರಲಿಲ್ಲ. ಸ್ವಲ್ಪ ಎಚ್ಚರವಾದಹಾಗಾಯಿತು. ಪುನಃ "ರಾಯರೇ, ರಾಯರೇ!" ಎಂದ ಹಾಗಾಯಿತು; ಚೆನ್ನಾಗಿ ಎಚ್ಚರಮಾಡಿಕೊಂಡು ಕೇಳಿದೆ. ಮತ್ತೆ "ರಾಯರೇ ರಾಯರೇ" ಎಂದು ಮೆಲ್ಲಗೆ ಯಾರೋ ಬಾಗಲಿನ ಹೊರಗಿನಿಂದ ಕೂಗುತ್ತಿದ್ದಂತೆ ಕೇಳಿಸಿತು; ಇದು ಯಾರು ಅರ್ಧರಾತ್ರಿಯಲ್ಲಿ ಕೂಗುವರು— ಎಂದುಕೊಂಡು, ಪುನಃ ಸ್ವಲ್ಪ ಹೊತ್ತು ಹಾಗೇ ಹಾಸಿಗೆಯ ಮೇಲೆ ಕಿವಿಕೊಟ್ಟು

ಕೇಳುತ್ತ ಕುಳಿತುಕೊಂಡೆ ; ಪುನಃ ಅದೇ ಮಾತು ಕೇಳಿಸಿತು ; ನೋಡಿದರೆ ದೊಡ್ಡವರ ಧ್ವನಿಯಾಗಿ ತೋರಲಿಲ್ಲ; ಒಬ್ಬ ಹುಡುಗನೋ ಹುಡುಗಿಯೋ ಇರಬಹುದೆಂದು ತೋರಿತು. ಕೂಡಲೆ ಎದ್ದುಹೋಗಿ ಹೊರಬಾಗಿಲನ್ನು ತೆಗೆದುನೋಡಲು ಒಂದು ಲಾರ್ಟೀದೀಪವನ್ನು ಹಿಡಿದುಕೊಂಡು ಒಬ್ಬ ಹುಡುಗಿ ನಿಂತಿದ್ದಾಳೆ. ಸುಮಾರು ಏಳೆಂಟುವರ್ಷ ವಯಸ್ಸಿರಬಹುದು. ಮುಖವು ಸುಂದರವಾದ ಮುಖ; ಮುಖಕ್ಕೆಲ್ಲ ದೊಡ್ಡದೊಡ್ಡ ಎರಡು ಕಣ್ಣು ; ನಾನು ಬಂದಕೂಡಲೆ ಹುಡುಗಿ ಸ್ವಲ್ಪ ಹಿಂದಕ್ಕೆ ಸರಿದು ಆ ಕಣ್ಣುಗಳನ್ನು ಎತ್ತಿ ನನ್ನ ಮುಖವನ್ನು ನೋಡಿತು. ನನಗೆ ಆಶ್ಚರ್ಯವಾಯಿತು ! ಈ ಹುಡುಗಿ ಯಾರು ? ಎಲ್ಲಿಂದ ಬಂದಳು ? ದಾರಿತಪ್ಪಿ ಬಂದಿದ್ದಳೋ ಏನೋ ಎಂದುಕೊಂಡು ಮನಸ್ಸಿನಲ್ಲಿ ಬಹು ಕಳವಳವಾಯಿತು. ನಮ್ಮ ಶಾರದೆಯು ಜ್ಞಾಪಕಕ್ಕೆ ಬಂದು ಅವಳೆಲ್ಲಾದರೂ ಈ ಊರಿನಲ್ಲಿ ತಪ್ಪಿಸಿಕೊಂಡುಹೋದರೆ ಏನುಗತಿ ಎಂದು ಮೈ ಜುಮ್ಮೆಂದಿತು. ಒಡನೆಯೇ

"ನೀನೇ ಅಮ್ಮ, 'ರಾಯರೇ' ಎಂದು ಕೂಗಿದವಳು ?" ಎಂದು ಕೇಳಿದೆ.

"ಹುಂ"

"ಯಾರಮ್ಮ ನೀನು ? ಯಾರ ಮಗಳು ?"

ಹುಡುಗಿಯು ಅತ್ತಲಾಗಿ ಇತ್ತಲಾಗಿ ನೋಡಿತು. ಮಾತು ಹೊರಡಲಿಲ್ಲ.

"ಒಬ್ಬಳೆ ಬಂದಿದ್ದೀಯಾ ಅಮ್ಮ ?"

"ಇಲ್ಲ ಅಮ್ಮ ಬಂದಿದಾಳೆ"—ಎಂದು ಉತ್ತರದಿಕ್ಕಿನ ಕಡೆಗೆ ನೋಡಿತು. ಆ ಮನೆಯ ಮೂಲೆಯ ಹತ್ತಿರ ಆ ಹುಡುಗಿಯ ತಾಯಿ ಕತ್ತುಬಗ್ಗಿಸಿಕೊಂಡು ನಿಂತುಕೊಂಡಿದ್ದರು. ನನಗೆ ಏನೂ ತೋರದೆ ಸ್ವಲ್ಪಹೊತ್ತು ದಿಗ್ಭ್ರಮೆಯಾಯಿತು. ಆನಂತರ

"ಏನು ತಾಯಿ ?" ಎಂದು ಕೇಳಿದೆ.

"ಅಪ್ಪಾ, ಸ್ವಲ್ಪ ಮನೆಯತನಕ ಬನ್ನಿ ಅಪ್ಪ ! ಯಜಮಾನರು ಹ್ಯಾಗೆ ಹ್ಯಾಗೋ ಆಡುತ್ತಾರೆ; ಹೆದರಿಕೆಯಾಗುತ್ತೆ. ನೀನೇ ಎನ್ನುವವರು ದಿಕ್ಕಿಲ್ಲ; ಕನ್ನಡಮಾತು ಆಡಿದರೆ ತಿಳಿದುಕೊಳ್ಳೋರೂ ಮತ್ತೊಬ್ಬರಿಲ್ಲ."

ನನಗೆ ಗಾಬರಿಯಾಯಿತು. ಕೂಡಲೆ ಬದಲು ಮಾತನಾಡದೆ ಅವರ ಹಿಂದೆ ಹೋದೆ. ಮನೆಯಲ್ಲಿ ಎಲ್ಲವೂ ನಿಶ್ಯಬ್ದ. ಒಂದು ಹಾಸಿಗೆಯಮೇಲೆ ಒಂದು ಮಗುವು ಮಲಗಿ ನಿದ್ದೆಮಾಡುತ್ತಿದೆ; ಎನ್ನೆರಡು ಹಾಸಿಗೆಗಳು ಬರಿದಾಗಿವೆ; ಮೂರನೆಯದರಲ್ಲಿ ಒಬ್ಬ ಗಂಡಸು ಮಲಗಿದ್ದಾನೆ. ಮೈಮೇಲೆ ಜ್ಞಾನವಿಲ್ಲ. ಜ್ಞಾನಾಜ್ಞಾನದ

ಮಾತು ; ಬಾಯಿ ತೊದಲು. ಆಯಾಸ; ಹೊರಳಾಟ. ಹತ್ತಿರ ಕೂತುಕೊಂಡು ಕೈ ಹಿಡಿದು ನೋಡಿದೆ; ಮೈ ಕುದಿಯುತ್ತಿದೆ; ಕಣ್ಣು ಕೆಂಡದಹಾಗಿದೆ.

" ಜ್ವರ ಬಂದಿದೆಯಮ್ಮ ; ಎಷ್ಟುದಿವಸದಿಂದ ಹೀಗಿದೆ ? ಏನು ಔಷಧಿ ಕೊಟ್ಟಿರಿ ? "

" ಈಗಾಗಲೇ ನಾಲ್ಕೈ—ಎರಡು ಮೂರು ದಿನವಾಯಿತಪ್ಪ ; ಔಷಧಿ ಯಾರು ತಂದುಕೊಡೋರು ? ಕಸ್ತೂರಿಮಾತ್ರೆ ಇತ್ತು, ಅದನ್ನು ಒಂದೆರಡು ಹೊತ್ತು ಕೊಟ್ಟಿದ್ದೆ ಅಷ್ಟೆ."

" ಹೊಟ್ಟೆಗೆ ಏನಾದರೂ ಆಹಾರ ಕೊಟ್ಟಿದ್ದೀರಾ ?"

" ಇವತ್ತು ಬೆಳಿಗ್ಗೆ ಸ್ವಲ್ಪ ಗಂಜಿ ತಗೊಂಡಿದ್ದರು ; ಸಾಯಂಕಾಲದಿಂದ ಹೀಗಾಗಿಬಿಟ್ಟಿದೆ ; ಮಾತನಾಡಿಸಿದರೆ ಮಾತನಾಡುವುದಿಲ್ಲ ; ಏನೇನೋ ಮಾತನಾಡುತ್ತಾರೆ ; ನನಗೆ ಗಾಬರಿಯಾಗಿದೆ ; ಮಕ್ಕಳು ಹೆದರಿಕೊಂಡಿವೆ."

ನನಗೆ ಪರಸ್ಥಳದ ಕಷ್ಟಗಳೆಲ್ಲಾ ಒಟ್ಟಿಗೆ ಅನುಭವಕ್ಕೆ ಬಂದುವು ; ನಮ್ಮ ಜನರಲ್ಲಿ ತಮಿಳರ ಹಾಗೆ ಸಾಹಸವಿಲ್ಲ ಚಾಲುಕು ಇಲ್ಲ, ಎಲ್ಲೆಂದರೆ ಅಲ್ಲಿ ಹೋಗಿ ಅನ್ನ ಹುಟ್ಟಿಸಿಕೊಳ್ಳುವ ಛಾತಿ ಇಲ್ಲ, ಅಪ್ಪ ಹಾಕಿದ ಆಲದಮರ ಎಂದು ಮೈಸೂರಲ್ಲೋ ಬೆಂಗಳೂರಲ್ಲೋ ಅರೆಗಂಜಿ ಕುಡಿದುಕೊಂಡಾದರೂ ಪ್ರಾಣಬಿಡುತಾರೆ—ಎಂದು ನಮ್ಮವರು ಕೂಗಿದರೆ ಕೂಗಿಕೊಳ್ಳಲಿ, ಈ ಪರಸ್ಥಳದ ಜೀವನ ಸಾಕು, ಪರೀಕ್ಷೆ ಆಗದೆ ಹೋದರೆ ಪ್ರಪಂಚ ಮುಳುಗಿಹೋಗುವುದಿಲ್ಲ, ಊರಿಗೆ ಹೊರಟುಹೋಗಿಬಿಡೋಣ ಎನ್ನಿಸಿತು. ಅದು ಮುಂದಿನಮಾತು. ಈಗ ಇವರ ಗತಿಯೇನು ? " ಅಮ್ಮಾ ನೀವು ಹೆದರಬೇಡಿ ; ಈ ರಸ್ತೆಯಲ್ಲಿಯೇ ಒಬ್ಬ ಡಾಕ್ಟರು ಇದ್ದಾನೆ, ಅವನ ಮನೆಗೆ ಹೋಗಿ ಔಷಧಿ ತಂದುಕೊಡುತ್ತೇನೆ " ಎಂದು ಧೈರ್ಯ ಹೇಳಿ ಅದೇ ಲಾಟೀನ್ದೀಪವನ್ನು ತೆಗೆದುಕೊಂಡು ಮನೆಗೆ ಬಂದು ನಡೆದ ಸಂಗತಿಯನ್ನು ಸಂಕ್ಷೇಪವಾಗಿ ತಿಳಿಸಿ ಬಾಗಿಲು ಹಾಕಿಕೊಳ್ಳುವಂತೆ ಹೇಳಿ ಹೊರಟೆನು. ಆ ರಸ್ತೆಯಲ್ಲಿ ಸುಮಾರು ಹತ್ತುಮಾರಿನ ಆಚೆ ಒಬ್ಬ ಡಾಕ್ಟರು ಇದ್ದರು; ಆತನ ದೊಡ್ಡ ಬೋರ್ಡು ಅಲ್ಲಿ ತಿರುಗಾಡುವಾಗೆಲ್ಲಾ ಕಣ್ಣಿಗೆ ಬೀಳುತ್ತಿತ್ತು. ಅವನು ಎಂ. ಡಿ. ಮುಂದುಗಡೆ ಷಾಪು, ಹಿಂದುಗಡೆ ಮನೆ. ಆದರೆ ಅದೂ ಮಹಡಿಯಮೇಲೆ; ಸರ ರಾತ್ರಿಯ ಹೊತ್ತು; ಆದ್ದರಿಂದ ಆವನನ್ನು ಕೂಗಿ ಎಬ್ಬಿಸುವುದು ಸ್ವಲ್ಪ ಶ್ರಮವೇ ಆಯಿತು. ಆದರೆ ಆತನು ಹೊರಡುವುದೇನು ತಡವಾಗಲಿಲ್ಲ. ಡಾಕ್ಟರು ಯಾವಾಗಲೂ ಸಿದ್ಧರೆ ! ಒಂದು ಓವರ್‌ಕೋಟು ತಗಲುಹಾಕಿಕೊಂಡು ಕೈಯಲ್ಲಿ ಒಂದು

ಚೀಲವನ್ನು ಹಿಡಿದುಕೊಂಡು "ನಡಿಯರಿ" ಎಂದನು. ನಮ್ಮ ವಟಾರದ ಮೆಟ್ಟಲುಗಳನ್ನು ಹತ್ತಿಹತ್ತಿಯೇ ಕಾಲು ಬಿದ್ದುಹೋಗುತ್ತಿತ್ತು. ಆದರೆ ಈಗ ಅದೊಂದೂ ಗಮನಕ್ಕೆ ಬರುತ್ತಿರಲಿಲ್ಲ. ನೀನೇ ಎನ್ನುವವರು ಇಲ್ಲದೆ ದಿಕ್ಕುತೋಚದಂತಿದ್ದ ಆ ಹೆಣ್ಣುಹೆಂಗಸು, ಆ ಅರಿಯದ ಹುಡುಗಿ, ಸಂಸಾರದ ಕಷ್ಟಗಳಿಗೆಲ್ಲಾ ಒಬ್ಬನೇ ಎದೆಗೊಟ್ಟು ದುಡಿಯುತ್ತಿದ್ದು ಈಗ ಅಸಹಾಯನಾಗಿ ಪ್ರಜ್ಞೆ ಇಲ್ಲದೆ ಬಿದ್ದಿರುವ ಆತ—ಇವರ ಮುಖಗಳೇ ಮನಸ್ಸಿನಲ್ಲಿ ತುಂಬಿಕೊಂಡಿದ್ದುವು.

ಡಾಕ್ಟರು ಸ್ವಲ್ಪಹೊತ್ತು ರೋಗಿಯನ್ನು ಪರೀಕ್ಷಿಸಿದನು; ಅವನ ಮುಖಭಾವದಲ್ಲಿ ಶುಭಸೂಚನೆಯೇನೂ ತೋರಲಿಲ್ಲ; ಇನ್ನೂ ಪರೀಕ್ಷಿಸುತ್ತಿದ್ದ ಹಾಗೆಯೇ, "ಮೈಯಲ್ಲಿ ಎಲ್ಲಿಯಾದರೂ ಗಡ್ಡೆಯಾಗಿದೆಯೆ?" ಎಂದು ಕೇಳಿದನು. "ಇಲ್ಲ" ಎಂದು ಆಕೆ ಉತ್ತರಕೊಟ್ಟರು. ಡಾಕ್ಟರು ಸ್ವಲ್ಪ ಸಂದೇಹಗ್ರಸ್ತನಾದವನಂತೆ ಮುಖವನ್ನು ದೃಷ್ಟಿಸಿನೋಡಿ ಅನಂತರ ಸಂದಿಸಂದಿಗಳನ್ನೆಲ್ಲಾ ಮುಟ್ಟಿನೋಡಿ ತೊಡೆಯಲ್ಲಿ ಗಡ್ಡೆಯಾಗಿದೆ ಎಂದು ತೋರಿಸಿದನು. ಇನ್ನು ಮುಂದೆ ನೋಡುವುದು ಅನಾವಶ್ಯಕವೆಂದು ತೋರಿತು. ಆತನು ಎದ್ದುನಿಂತುಕೊಂಡು "ಇದು ಪ್ಲೇಗು; ಕೈಮೀರಿಹೋಗಿದೆ; ಆಗಲೇ ಶ್ವಾಸವು ಕಾಣಿಸಿಕೊಂಡಿದೆ" ಎಂದನು.

"ಹಾಗೆಂದರೆ ಹ್ಯಾಗೆ! ತಾವು ಹ್ಯಾಗಾದರೂ ಮಾಡಿ ಬದುಕಿಸಿಕೊಡಬೇಕು; ಇಲ್ಲದಿದ್ದರೆ ಹೆಂಗಸರು ಮಕ್ಕಳು ಅನಾಥರಾಗುತ್ತಾರೆ."

"ಏನು ಸ್ವಾಮಿ! ಓದಿದವರೆನ್ನಿಸಿಕೊಂಡವರು ನೀವೂ ಹೀಗೆ ಹೇಳುತ್ತೀರಿ; ಸಾಧ್ಯವಾದದ್ದಲ್ಲ, ಕೈಮೀರಿಹೋಗಿದೆ ಎಂದು ಹೇಳುತ್ತಿದ್ದೇನೆ!—ನನಗೆ ಕೊಡಬೇಕಾದ ಫೀಜನ್ನು ಕೊಡುತ್ತೀರಾ?"

ನಾನು ಸುಬ್ಬಮ್ಮನವರ ಮುಖನೋಡಿ ಇವರ ಫೀಜನ್ನು ಕೊಡಬೇಕೆಂದು ಹೇಳಿದೆ; ಆಕೆಗೆ ಇಂಗ್ಲಿಷ್ ಬಾರದೆ ಅವನು ಹೇಳಿದ್ದು ಪೂರ್ತಿಯಾಗಿ ಅರ್ಥವಾಗದಿದ್ದರೂ ಅಶುಭವನ್ನು ಊಹಿಸಿ ತಿಳಿದುಕೊಂಡು ಅಳುವುದು ಒಂದು ಉಳಿದಿತ್ತು; ಆ ಸಮಯದಲ್ಲಿ ದುಡ್ಡಿಗೆ ತಗಾದೆ ಬಂತು. ಯಜಮಾನನ ಟ್ರಂಕನ್ನು ತೆಗೆದು ನೋಡಲು ಏಳೆಂಟು ಬಿಡಿಗಾಸುಗಳೂ ಸ್ವಲ್ಪ ಚಿಲ್ಲರೆ ದುಡ್ಡೂ ಇದ್ದುವು. ಒಂದು ರೂಪಾಯಿ ಕೂಡ ಸಿಕ್ಕುವಂತಿರಲಿಲ್ಲ. ಇನ್ನು ಆಕೆಗೆ ಅಳು ತಡೆಯಲಾಗಲಿಲ್ಲ; ಬೀಗದಕೈಯನ್ನು ಕೆಳಗೆ ಹಾಕಿ ಗೊಳೋ ಎಂದು ಅಳುತ್ತ ಕುಳಿತಳು; ಮಲಗಿದ್ದ ಮಗುವು ಎದ್ದು ಅಳುತ್ತ ಕುಳಿತಿತು. ಇವರಿಬ್ಬರ ಅಳುವನ್ನು ನೋಡಿ ನನ್ನನ್ನು ಕರೆಯುವುದಕ್ಕೆ ಬಂದಿದ್ದ ಹುಡುಗಿಯೂ ಅಳುವುದಕ್ಕೆ ತೊಡಗಿದಳು."

ಇದನ್ನು ನೋಡಿ ಡಾಕ್ಟರು ನಾನು ಅವರಿಗೇನಾಗಬೇಕೆಂದು ಕೇಳಿದನು. ನನಗೇನೂ ಅವರ ಸಂಬಂಧವಿಲ್ಲವೆಂಬುದನ್ನೂ ಅಂದು ರಾತ್ರಿ ನಡೆದ ಸಂಗತಿಯನ್ನೂ ತಿಳಿಸಿದ ಮೇಲೆ ಆತನಿಗೆ ಸಂಬಳವೆಷ್ಟು ಬರುತ್ತಿತ್ತೆಂದು ಕೇಳಿದನು.

"ಐವತ್ತು ರೂಪಾಯಿ."

"ಐವತ್ತು ರೂಪಾಯಿನಲ್ಲಿ ಸಂಸಾರಮಾಡಿಕೊಂಡು ನೀವು ಡಾಕ್ಟರಿಗೆ ಏನು ಕೊಟ್ಟೀರಿ! ಚಿಂತೆಯಿಲ್ಲ, ನಾನು ಫೀಜು ತೆಗೆದುಕೊಳ್ಳುವ ಜನರು ಬೇರೆ ಇದ್ದಾರೆ." ಎಂದು ಹೇಳಿ ಹೊರಟುಹೋಗುತ್ತ ನನ್ನ ಕಡೆಗೆ ತಿರುಗಿ "ಇದು ಪ್ಲೇಗು ಎಂದು ತಿಳಿದರೆ ಶವವನ್ನು ಸಾಗಿಸುವುದು ಕಷ್ಟವಾಗುತ್ತದೆ; ಯಾರೂ ದಿಕ್ಕಿಲ್ಲ ಪಾಪ! ಹುಷಾರು! ಹುಡುಗರು ಮಕ್ಕಳಿದ್ದಾರೆ" ಎಂದು ಹೇಳಿ ಹೊರಟುಹೋದನು.

ಅಷ್ಟುಹೊತ್ತಿಗೆ ಬೆಳಕು ಹರಿಯುತ್ತ ಬಂತು. ಸೂರ್ಯ ಉದಯವಾಗುವುದಕ್ಕೆ ಸ್ವಲ್ಪ ಮುಂಚೆ ವಸ್ತುವು ಹೋಗಿಬಿಟ್ಟಿತು. ನಾನು ಅದುವರೆಗೂ ಅಲ್ಲಿಯೇ ಇದ್ದು ಸುಬ್ಬಮ್ಮನವರಿಗೆ ಗಲಾಟೆಮಾಡದಂತೆ ವಿವೇಕಹೇಳಿ ಪುನಃ ಡಾಕ್ಟರ ಹತ್ತಿರಕ್ಕೆ ಹೋದೆನು.

"ಸ್ವಾಮಿ, ನನಗೆ ಈ ಊರಿನ ನಡೆವಳಿಕೆ ಸರ್ಕಾರಿ ರೂಲ್ಸು ಒಂದೂ ಗೊತ್ತಿಲ್ಲ; ಆತನು ತೀರಿಹೋದ; ಮುಂದೆ ಶವಸಂಸ್ಕಾರ ಹೇಗೆ ನಡೆಯಬೇಕೋ ತಿಳಿಯದು; ಆಕೆಗೆ ಯಾರೂ ಹತ್ತಿರ ದಿಕ್ಕಿಲ್ಲ, ನನ್ನ ಮನೆಯಲ್ಲಿ ನಾನು ಒಬ್ಬೊಂಟಿಗ. ಹೆಲ್ತ್ಆಫೀಸಿನಿಂದ ಅಪ್ಪಣೆಯಾಗಬೇಕೋ ಏನೋ! ನನಗೆ ಏನೂ ತೋರುವುದಿಲ್ಲ. ತಾವೇ ಈ ಸಮಯದಲ್ಲಿ ಸಹಾಯಮಾಡಬೇಕು" ಎಂದು ಕೇಳಿಕೊಂಡೆನು. ನನ್ನ ದೈನ್ಯವನ್ನು ನೋಡಿ ಆತನಿಗೆ ಮನಸ್ಸು ಕರಗಿತು ಎಂದು ತೋರುತ್ತದೆ. ದೊಡ್ಡಪಟ್ಟಣಗಳಲ್ಲಿ ದೊಡ್ಡಮನಸ್ಸಿನವರು ದೊರಕುವದು ಅಪರೂಪ. ದೊರಕಿದರೆ ದೇವರಂಥವರೇ ಸಿಕ್ಕುತ್ತಾರೆ. ಆತನು 'ಈ ರೋಗಿಯು ನನ್ನ ಹತ್ತಿರ ಔಷಧಿ ತೆಗೆದುಕೊಳ್ಳುತ್ತಿದ್ದು ಪ್ರಬಲವಾದ ಹೊಟ್ಟೆಯ ನೋವಿನಿಂದ ಮೃತನಾದನು' ಎಂದು ಸರ್ಟಿಫಿಕೇಟನ್ನು ಬರೆದುಕೊಟ್ಟನು. ಅದಕ್ಕಾದರೂ ಆತನಿಗೆ ಫೀಜು ಕೊಡಬೇಕಾಗಿತ್ತು. ಆದರೆ ಎಲ್ಲಿ ತರುವುದು? ನಾನು ಯಾವಾಗಲೂ ಒಂದೇ! ದುಡ್ಡು ಬಂದ ಮಾರನೇ ದಿವಸವೇ ಪುರಂದರವಿಠಲ!"

"ನಿನ್ನ ರುಮಾಲು ಅಡವು ಇಡಬೇಕಾಗಿತ್ತು!"

"ನನ್ನ ರುಮಾಲಿನಮೇಲೆ ನಿನಗೆ ಒಳ್ಳೆಯ ಕಣ್ಣಾಯಿತಲ್ಲ! ಆಗ ಇನ್ನೂ ರುಮಾಲೆಲ್ಲಿತ್ತೊ? ಫೆಲ್ಟ್‌ಕ್ಯಾಪು."

"ನೀನು ಟೋಪಿ ಹಾಕಿಕೊಳ್ಳುತ್ತಿದ್ದಾಗತಾನೇ ಕಡಮೆ ಖರೀದಿಯ ಟೋಪಿಯನ್ನ ಯಾವಾಗ ಹಾಕಿಕೊಳ್ಳುತ್ತಿದ್ದೆ? ಅದಿರಲಿ—ಆಮೇಲೆ?"

"ಅದಕ್ಕೂ ಆತನು ಫೀಜುಕೊಡಬೇಡವೆಂದೇ ಬಾಯಿಬಿಟ್ಟು ಹೇಳಿದ; ಆಮೇಲೆ ಅದನ್ನು ತೆಗೆದುಕೊಂಡುಹೋಗಿ ಹೆಲ್ತಾಫೀಸಿನಲ್ಲಿ ತೋರಿಸಿ ಅಲ್ಲಿ ಕಾದು ತೆರಬೇಕಾದ ಋಣಗಳನ್ನು ತೆತ್ತು ಅವರ ಸರ್ಟಿಫಿಕೇಟನ್ನು ತಂದಾಯಿತು. ಅಷ್ಟು ಹೊತ್ತಿಗೆ ಆಗಲೇ ಹತ್ತುಗಂಟೆಯ ಸಮಯ; ಟ್ರ್ಯಾಂ ಗಾಡಿಗಳಲ್ಲಿ ಸ್ಕೂಲಿಗೆ ಹೋಗುವ ಹುಡುಗರೂ ಕಛೇರಿಗೆ ಹೋಗುವ ಜನರೂ ಗರುಡವಾಹನವಾಡಿ ಕೊಂಡು ಹೋಗುತ್ತಿದ್ದಾರೆ—ಟ್ರ್ಯಾಂ ಗಾಡಿಗಳ ಹೊರಗಿನ ಕಟ್ಟೆಯ ಮೇಲೂ ನಿಲ್ಲುವುದಕ್ಕೆ ಜಾಗವಿಲ್ಲ. ಅವರ ಸಂದಣಿಯಲ್ಲಿಯೇ ನಾನೂ ನುಸಿದುಕೊಂಡು ಬರುತ್ತಾ ಆ ಗಾಡಿಯಲ್ಲಿ ಚೀಫ್‌ಕೋರ್ಟು ಗುಮಾಸ್ತರೊಬ್ಬರನ್ನು ನೋಡಿದೆ. ಆತನಿಗೂ ನನಗೂ ಪರಿಚಯವೇನೂ ಇರಲಿಲ್ಲ; ಆತನನ್ನು ಹಿಂದೆ ಎಲ್ಲಿಯೋ ಮೈಸೂರು ದೇಶದಲ್ಲಿ ನೋಡಿದ ಜ್ಞಾಪಕ; ಆತನಿಗೂ ಅದೇ ಅನುಭವವಿರಬಹುದು; ಆದ್ದರಿಂದ ಕೋರ್ಟಿನಹತ್ತಿರ ಒಬ್ಬರನ್ನು ಒಬ್ಬರು ಕಂಡಾಗ ಒಬ್ಬರನ್ನೊಬ್ಬರು ದೃಷ್ಟಿಸಿ ನೋಡುತ್ತಿದ್ದೆವು. ಆತನನ್ನು ಕಂಡು ಮೊದಲು ಒಂದು ರಜದ ಚೀಟಿ ಯನ್ನು ಬರೆದುಕೊಟ್ಟು ಅಂದು ನಡೆದ ಸಂಗತಿಯನ್ನು ಸೂಕ್ಷ್ಮವಾಗಿ ತಿಳಿಸಿದೆ; ನನ್ನ ಮಾತನ್ನು ಕೇಳುತ್ತ ಕೇಳುತ್ತ ಆತನ ಮುಖವು ಇಳಿದುಹೋಗಿ ಕೊನೆಗೆ "ಇರಲಿ ನೀವು ಮನೆಗೆ ಹೋಗಿ; ಆಕೆಗೆ ಸಮಾಧಾನ ಹೇಳುತ್ತಿರಿ; ಹೆಂಗಸರು ಮಕ್ಕಳು ಹೆದರಿಕೊಂಡಾರು; ನಾನು ಏರ್ಪಾಡುಮಾಡಿಕೊಂಡು ಬರುತ್ತೇನೆ" ಎಂದು ಹೇಳಿ ನನ್ನನ್ನು ಕಳುಹಿಸಿದನು. ನಾನು ಎಂದೂ ಇಂಥ ಕಷ್ಟಕ್ಕೆ ಸಿಕ್ಕಿದವ ನಲ್ಲ; ಅಲ್ಲಿಯವರೆಗೂ ಒಬ್ಬರೂ ಸತ್ತದ್ದನ್ನೇ ಕಣ್ಣಾರ ಕಂಡಿರಲಿಲ್ಲ; ಸಾಲದ್ದಕ್ಕೆ ಸ್ಥಳಪರಿಚಯ ಸಾಲದು. ನನ್ನ ಮಕ್ಕಳು ಹೆದರಿಕೊಂಡು ಹೊರಕ್ಕೆ ತಲೆಹಾಕದೇ ಕುಳಿತಿದ್ದು 'ಇವತ್ತು ನೀನೆಲ್ಲಿಯೂ ಹೋಗಬೇಡ ಅಣ್ಣಾ!' ಎಂದು ಕೇಳಿಕೊಳ್ಳು ತ್ತಿದ್ದುವು. ಪಾಪ, ಅವಕ್ಕೆ ತಿಳಿಯಹೇಳುವುದು ಹೇಗೆ? ಧೈರ್ಯಹೇಳುವುದು ಹೇಗೆ?

ಸುಮಾರು ಹನ್ನೆರಡು ಗಂಟೆಯ ಹೊತ್ತಿಗೆ ನಮ್ಮ ಕೋರ್ಟಿನ ಸ್ನೇಹಿತರು ಇಬ್ಬರ ಕೈಯಲ್ಲಿ ಶವಸಂಸ್ಕಾರಕ್ಕೆ ಬೇಕಾದ ಸಾಮಾನುಗಳನ್ನು ತೆಗೆಸಿಕೊಂಡು ಬಂದರು. ದುಡ್ಡು ಒಂದು ಇಟ್ಟುಕೊಂಡಿದ್ದರೆ ಒಳ್ಳೆಯದಕ್ಕಾಗಲಿ ಕೆಟ್ಟದಕ್ಕಾಗಲಿ ದೊಡ್ಡ ಪಟ್ಟಣಗಳಲ್ಲಿ ಇರುವ ಅನುಕೂಲವು ಸಣ್ಣ ಹಳ್ಳಿಗಳಲ್ಲಿರುವುದಿಲ್ಲ. ಮೈಸೂ

ರಿನಲ್ಲಿ ಪ್ಲೇಗು ಹೆಚ್ಚಾಗಿದ್ದಾಗ 'ಕನಕಭಟ್ಟನ ಕಂಪೆನಿ' ಎಂದು ಇಂಥ ಕೆಲಸಗಳಿಗೆ ಒಂದು "ಕಂಪೆನಿಯು" ಏರ್ಪಾಡಾಗಿತ್ತು......

"ಆದೇನು ಜಾಯಿಂಟ್‌ಸ್ಟಾಕ್ ಕಂಪೆನಿಯೋ ಕೋ ಆಪರೇಟಿವ್ ಸೊಸೈಟಿಯೋ?"

"ನಿನ್ನ ಹುಡುಗಾಟ ಯಾವಾಗಲೂ ಒಂದೇ; ಹಾಸ್ಯಕ್ಕೆ ಹೊತ್ತೂ ವೇಳೆ ಯಾವುದೂ ಇಲ್ಲ ನಿನಗೆ!"

"ನೀನೇ ಅಲ್ಲವೋ ಕನಕಭಟ್ಟನ ಕಂಪೆನಿ ಎಂತ ಲೇವಡಿ ಮಾಡಿದವನು? ಆತ ನಿಜವಾಗಿಯೂ ಕಂಪೆನಿ ಇಟ್ಟಿದ್ದನೇ? ಪಾಪ ಆತನಿಂದ ಜನಕ್ಕೆ ಎಷ್ಟು ಉಪಕಾರವಾಯಿತು ಕಷ್ಟಕಾಲದಲ್ಲಿ!"

"ಅದು ಹೋಗಲಪ್ಪ—ಸರ್ವಾಪರಾಧಂ ಕ್ಷಮಸ್ವ! ಮದರಾಸಿನಲ್ಲಿಯೂ ಅಂಥ ಒಂದು ಕಂಪೆನಿಯಿತ್ತಂತೆ. ಯಾವಾಗ ಹೋದರೂ ಜನಗಳು ಸಿದ್ಧರಾಗಿರುತ್ತಿದ್ದರು. ನಮ್ಮ ಸ್ನೇಹಿತರು ಅಲ್ಲಿಗೆ ವರ್ತಮಾನವನ್ನು ಕೊಟ್ಟಕೂಡಲೆ ಇಬ್ಬರು ಮಾತ್ರ ಸಿಕ್ಕಿದರು; ಅವರು ಬರುತ್ತಾ ಪೇಟೆಯಲ್ಲಿ ಸಾಮಾನನ್ನು ತೆಗೆದುಕೊಂಡು ಬಂದರು. ಇನ್ನಿಬ್ಬರಿಗಾಗಿ ಎಲ್ಲೆಲ್ಲೋ ಹುಡುಕಿದ್ದಾಯಿತು; ಯಾರೂ ಸಿಕ್ಕಲಿಲ್ಲ; ಕೊನೆಗೆ ನಮ್ಮ ಸ್ನೇಹಿತರು (ಅವರ ಹೆಸರು ಇಂದಿಗೂ ನನಗೆ ಗೊತ್ತಿಲ್ಲ) ಬಹಳ ಹೊತ್ತು ಯೋಚಿಸಿ 'ಗಾಡಿಯಲ್ಲಿ ಹಾಕುವ ಯೋಚನೆ ಬೇಡಿ ಸಾರ್! ನೀವೂ ಸ್ವಲ್ಪ ದೊಡ್ಡಮನಸ್ಸುಮಾಡಿದರೆ ಬ್ರಾಹ್ಮಣನ ಶವವನ್ನ ಇತರರ ಕೈಲಿ ಮುಟ್ಟಿಸದ ಹಾಗೆ ಒಪ್ಪಮಾಡಿಬಿಡೋಣ!' ಎಂದರು. ನನಗೆ ಒಂದಕ್ಕಿಂತ ಒಂದು ವಿಚಿತ್ರವಾದ ಹೊಸ ಹೊಸ ಅನುಭವ. ಅಂಥ ಅಪರಿಚಿತಮನುಷ್ಯ ಅಷ್ಟು ಮುಂದಾಳಾಗಿ ಬಂದರೆ ನಾನು ಹಿಂಜರಿಯುವದಕ್ಕಾಗುತ್ತದೆಯೆ?

"ಈ ಇಬ್ಬರಲ್ಲಿ ಯಾರಿಗಾದರೂ ಮಂತ್ರಾಗ್ನಿಮಾಡಿಸುವದಕ್ಕೆ ಬರುತ್ತದೆಯೋ?" ಎಂದು ನಾನು ಕೇಳಿದೆ.

"ಇಲ್ಲ, ಅವರು ಬರಿಯ ವಾಹಕರು; ವಡ್ಡರ ಗಾಡಿಯನ್ನು ಎಳೆಯುವ ಎತ್ತುಗಳಹಾಗೆ."

"ಯಾರಾದರೂ ಪುರೋಹಿತರು ಸಿಕ್ಕಿದರೆ ಮಂತ್ರಾಗ್ನಿಯನ್ನು ಮಾಡಿಸಿಬಿಡೋಣ ಸ್ವಾಮಿ! ಅಲ್ಲಿಗೆ ನಮ್ಮ ಕೆಲಸ ಸಾಂಗವಾಗುತ್ತದೆ. ಮುಂದೆ ಅವರ ಜನರು ಬರುತ್ತಾರೆ; ಆಗ ಅವರ ಪಾಡು!"

ಆತನು ಅದಕ್ಕೆ ಒಪ್ಪಿ ಪುನಃ ಹೊರಟನು; ಬರುವುದಕ್ಕೆ ನಾಲ್ಕುಗಂಟೆಯಾಯಿತು. ಟ್ರಿಪ್ಲಿಕೇನ್‌ಗೆ ಹೋಗಿ ಅಲ್ಲಿ ಇಲ್ಲವೆನ್ನಿಸಿಕೊಂಡು ಮೈಲಾಪುರಕ್ಕೆ

ಹೋಗಿ ಅಲ್ಲಿ ಯಾರ ಮನೆಗೋ ಎಳ್ಳುಹಬ್ಬಕ್ಕೆ ಸಿಕ್ಕಿಕೊಂಡಿದ್ದ ಪುರೋಹಿತರನ್ನು ಎಳೆದುತರಬೇಕಾಯಿತು. ಅವರು ಬರಲೊಲ್ಲರು, ಈತ ಬಿಡಲೊಲ್ಲ. ಅಂತು ಆತ ಬಂದು ಮಂತ್ರಪೂರ್ವಕವಾಗಿ ಬೆಂಕಿಯನ್ನು ಹಾಕಿಸಿಬಿಟ್ಟ !

" ಅದನ್ನು ಮಾಡಿದವರು ಯಾರು ? "

" ನಾವೇ ! ಪರಸ್ಥಳದಲ್ಲಿ ಮತ್ತಾರನ್ನು ತರೋಣ ? ಇಷ್ಟೆಲ್ಲಾ ಮಾಡಿದವರು ಅಷ್ಟು ಮಾಡಬಾರದೇನು ? "

" ಹತ್ತಿರ ಯಾರಾದರೂ ನೆಂಟರಿಷ್ಟರಿದ್ದರೆ ಟೆಲೆಗ್ರಾಂ ಕೊಟ್ಟು ಕರೆಸಬೇಕಾಗಿತ್ತು ! "

" ಟೆಲಗ್ರಾಂ ಏನೋ ಬೆಳಗ್ಗೆಯೇ ಕೊಟ್ಟುಬಿಟ್ಟಿದ್ದೆ ; ಆದರೆ ಹತ್ತಿರ ಯಾರೂ ಇರಲಿಲ್ಲ ; ಅವರೆಲ್ಲ ಮೂರನೇ ದಿನ ಬಂದರು ; ಕಷ್ಟಕಾಲಕ್ಕೆ ಯಾರೂ ಇಲ್ಲ ಶ್ರೀಪತಿ ! ಇಲ್ಲಿ ನೋಡುತ್ತಿದ್ದೇನಲ್ಲಾ, ಅವರ ಬಳಗವೋ ಇರುವೆ ಗೂಡಿನ ಹಾಗಿದೆ. ಕಷ್ಟಕಾಲಕ್ಕೆ ಮಾತ್ರ ಅಣ್ಣನೂ ಇಲ್ಲ ತಮ್ಮನೂ ಇಲ್ಲ; ತಾಯಿಯೂ ಇಲ್ಲ ತಂದೆಯೂ ಇಲ್ಲ ; ಅದಕ್ಕೂ ಋಣಾನುಬಂಧ ಬೇಕು ! ಅಂತು ಅವತ್ತು ಅದನ್ನೆಲ್ಲಾ ನೋಡಿ " ದೇವರು ಇದ್ದಾನೆ " ಎನ್ನಿಸಿಬಿಟ್ಟಿತು ! "

" ಅದು ಸರಿ, ಡಾಕ್ಟರಿಗೆ ಕೊಡುವುದಕ್ಕೇ ದುಡ್ಡಿಲ್ಲವೆಂದೆಯಲ್ಲ, ಇದೆಲ್ಲಾ ಹ್ಯಾಗೆ ನಡೆಯಿತು ? "

" ಹೌದು ಹೌದು ನೋಡಿದೆಯಾ ! ಮುಖ್ಯವಾದದ್ದನ್ನೇ ಮರೆತೆ ; ನಮ್ಮ ಕೋರ್ಟಿನ ಸ್ನೇಹಿತರು ಮನೆಗೆ ಹೋಗಿಬರುತ್ತ, ನಲವತ್ತು ರೂಪಾಯಿಗಳನ್ನು ಸೊಂಟಕ್ಕೆ ಸಿಕ್ಕಿಸಿಕೊಂಡುಬಂದು ನನ್ನ ಕೈಲಿ ಹಾಕಿದರು. ನಿಮ್ಮ ಹತ್ತಿರ ದುಡ್ಡು ಇದೆಯೇ ಇಲ್ಲವೇ ಎಂದು ಕೂಡ ಕೇಳಲಿಲ್ಲ. ನನಗೆ ಆಶ್ಚರ್ಯವಾಯಿತು ; ಆತನೇನು ಪೂರ್ವಜನ್ಮದಲ್ಲಿ ಅಣ್ಣನೋ ತಮ್ಮನೋ ಆಗಿದ್ದನೆಂದು ತೋರುತ್ತದೆ ! "

"ಭಲೆ !...ಆಮೇಲೆ ನೀನು ಮದರಾಸಿನಲ್ಲಿ ಎಷ್ಟು ದಿವಸವಿದ್ದೆ ? "

" ಆಗ ಪರೀಕ್ಷೆಯಕಾಲವೆಂತ ಹೇಳುತೇನೆ ! ಎಷ್ಟು ದಿವಸವಾದರೂ ಯಾಕೆ ಇರಬೇಕಾಗಿತ್ತು ? ಬೆಳಗೆದ್ದರೆ ಪರೀಕ್ಷೆ; ಆದ್ದರಿಂದ ಬಿಟ್ಟು ಎಲ್ಲಿಗೂ ಹೋಗುವದಕ್ಕೂ ಆಗಲಿಲ್ಲ. ಆಮೇಲೆ ನಮ್ಮ ಮನೆಯಲ್ಲಿಯೂ ಇಲಿಗಳು ಬೀಳುವುದಕ್ಕೆ ಆರಂಭವಾದವು ; ನಿಂತನಿಂತ ಹಾಗೆ ಹೆಂಗಸರು ಮಕ್ಕಳನ್ನು ಊರಿಗೆ ಕಳುಹಿಸುವುದಕ್ಕಾಗಲಿಲ್ಲ ; ಮನೆಯನ್ನು ಬಿಟ್ಟುಹೋಗುವದಕ್ಕೆ ಅವಕಾಶವಿಲ್ಲ ; ಈ ಮನಸ್ಸಿನ ಕಳವಳದಲ್ಲಿ ಓದೂ ಸಾಗಲಿಲ್ಲ ; ಏನೋ ಆದದ್ದು ಆಗಲಿ ಎಂದು ದೇವರ

ಮೇಲೆ ಭಾರಹಾಕಿ ಮೊಂಡಾಟಮಾಡಿಕೊಂಡು ಅಲ್ಲಿಯೇ ಇದ್ದುಬಿಟ್ಟೆ; ಪರೀಕ್ಷೆಗೆ ಹೋಗಲೇ ಬೇಡವೇ ಎಂದು ಯೋಚನೆಮಾಡಿಮಾಡಿ ಕೊನೆಗೆ ಹೋಗಿ ಕುಳಿತೆ; ಪ್ಯಾಸೇನೋ ಆಯಿತು! ನನ್ನ ಪರೀಕ್ಷೆ ಮುಗಿಯುವದರೊಳಗಾಗಿ ಅಲ್ಲಿ ಖಾಯಿಲೆ ಇಲ್ಲಿ ಖಾಯಿಲೆ ಎಂದು ಖಾಯಿಲೆಯು ಹರಡಿಕೊಂಡು ಸಾವುಗಳು ಹೆಚ್ಚಿಹೋಗಿದ್ದವು; ನಾವು ಮಾತ್ರ ಒಂದು ತಲೆನೋವು ಮೂಗುನೋವೆನ್ನದೆ ಪಾರಾದೆವು; ದೇವರು ಅಂದಿಗೆ ಕೈಹಿಡಿದು ಕಾಪಾಡಿದ! ಪರೀಕ್ಷೆ ಮುಗಿದ ಮಾರನೇದಿನವೇ ಊರಿಗೆ ಹೊರಟುಬಿಟ್ಟೆವು.''

ಕಥೆಯನ್ನು ಕೇಳಿದಾಗ "ದೇವರು ಇರುವುದಕ್ಕೂ ಇದೆಲ್ಲಕ್ಕೂ ಏನು ಸಂಬಂಧ'' ಎಂಬ ತರ್ಕವು ನನಗೆ ತೋರಲಿಲ್ಲ. ಸಂಬಂಧವಿದ್ದರೆ ಇರಲಿ ಇಲ್ಲದಿದ್ದರೆ ಹೋಗಲಿ, ಇಂಗ್ಲಿಷ್ ಓದಿದವರ ಬಾಯಲ್ಲಿ ಅಷ್ಟು ಹೊರಡುವುದೂ ಹೆಚ್ಚೇ; ಅಷ್ಟುಮಟ್ಟಿಗೆ ಹೃದಯದಲ್ಲಿ ಅನುಭವವಾದರೆ ಅದು ದೇವರನ್ನು ನೋಡಿದ್ದಕ್ಕಿಂತ ಹೆಚ್ಚೂನೂವೆ!

ಪ್ರಾಯಶಃ ಅದನ್ನೂ ಆಗಲೇ ಪ್ರಶ್ನೆಮಾಡಿ ವೆಂಕಟೇಶಯ್ಯನನ್ನು ಕೆಣಕಿ ಸ್ವಲ್ಪ ರೇಗಿಸುತ್ತಿದ್ದೆ; ಆದರೆ ಅಷ್ಟುಹೊತ್ತಿಗೆ ಬೀದಿಯಲ್ಲಿ 'ಚಪ್ಪರದ ದ್ರಾಕ್ಷೀ ಹಣ್ಣೋ!' ಎಂದು ಒಬ್ಬ ಹಣ್ಣಿನವನು ಕೂಗುತ್ತಬಂದನು. ನನ್ನ ತಂಗಿ ಲಲಿತೆ ಎಲ್ಲಿಯೋ ಆಡುತ್ತಿದ್ದವಳು ಅದನ್ನು ಕೇಳಿ ಓಡಿಬಂದು 'ಅಣ್ಣಯ್ಯ, ಚಪ್ಪರದ್ರಾಕ್ಷೀ ಹಣ್ಣು ಬಂದಿದೆ ಕೊಡಿಸು ಅಣ್ಣಯ್ಯ' ಎಂದು ಹಟಮಾಡಿಕೊಂಡು ಹಾಂ ಎಂದು ಹೂಂ ಎಂದು ಅತ್ತು ಕರೆದು ಹೆಗಲಿನಮೇಲೆ ಗುದ್ದಿ ಬೆನ್ನಮೇಲೆ ಹೊಡೆದು ತೊಡೆಯಮೇಲೆ ಬಿದ್ದು ಚಾಪೆಯಮೇಲೆ ಹೊರಳಾಡಿ ರಗಳೆಯೋರಗಳೆ ಮಾಡಿಬಿಟ್ಟಳು; ವಿಧಿಯಿಲ್ಲದೆ ಎದ್ದುಬಿಡಬೇಕಾಯಿತು.

ಕಾವ್ಯಾವಲೋಕನ

ರಂಗಭೂಮಿ:—ಕನ್ನಡ ಮಾಸಪತ್ರಿಕೆ; ಬಸವನಗುಡಿ, ಬೆಂಗಳೂರು; ವಾರ್ಷಿಕಚಂದಾ ರೂ. ೩-೪-೦.

ಇದು ನಾಟ್ಯಕಲಾವಿಚಾರವಾಗಿ ಮ|| ದ. ಕೃ. ಭರದ್ವಾಜರವರ ಸಂಪಾದಕತ್ವದಲ್ಲಿ ಹೊರಟಿರುವ ಸಚಿತ್ರಮಾಸಪತ್ರಿಕೆ. ಈ ತೆರನಾದ ಪತ್ರಿಕೆಗಳಲ್ಲಿ ಇದೇ ಮೊದಲನೆಯದು. ಇದರಲ್ಲಿ ಕರ್ಣಾಟಕ ಪ್ರಾಂತಗಳ ನಾಟ್ಯರಂಗದ ಇತಿಹಾಸವೂ, ನಾಟ್ಯಕಲಾವಿಷಯಕವಾದ ವಿವಿಧ ಲೇಖನಗಳೂ, ಮ|| ರಾ|| ಎಂ. ವೆಂಕಟೇಶಯ್ಯಂಗಾರ್ಯರ "ತಾಳಿಕೋಟೆ" ಯೆಂಬ ನಾಟಕವೂ ಅಚ್ಚಾಗಿ ಬರುತ್ತಿವೆ.

ಕವಿತೆ, ಕಾದಂಬರಿ, ರಂಗಭೂಮಿ, ನಾಟಕ ಇತ್ಯಾದಿಗಳಿಗಾಗಿಯೆ ಪ್ರತ್ಯೇಕ ಪ್ರತ್ಯೇಕವಾಗಿ ಪತ್ರಿಕೆಗಳನ್ನು ಹೊರಡಿಸುವ ಕೃತಯುಗಕಾಲವು ಇನ್ನೂ ನಮ್ಮಲ್ಲಿ ಬಂದಿಲ್ಲ. ಅವಕ್ಕೆ ಕ್ರಮವಾಗಿ ತಕ್ಕ ಆಹಾರವನ್ನು ಒದಗಿಸುವುದು ಕಷ್ಟ. ಒದಗಿಸಲು ಬಲ್ಲವರೂ ಬಲು ಸ್ವಲ್ಪಮಂದಿ; ಅವರಲ್ಲಿಯೂ ರಂಗಭೂಮಿಯ ವಿಚಾರಗಳನ್ನೂ ಕಷ್ಟನಿಷ್ಠುರಗಳನ್ನೂ ತಿಳಿದಿರುವವರು ಹತ್ತರಲ್ಲಿ ಒಂದುಪಾಲೂ ಇಲ್ಲವೆಂದು ಹೇಳಬೇಕು. ಪತ್ರಿಕೆಯೆಂದಮೇಲೆ ನಾನಾವಿಧವಾದ ಜನರು ಲೇಖನಗಳನ್ನು ಕಳುಹಿಸುತ್ತಿರುತ್ತಾರೆ. ಅವುಗಳ ಯೋಗ್ಯತೆಯು ಒಂದೇ ಸಮನಾಗಿರುವುದಿಲ್ಲ. ಆದರೆ ಯಾವುದನ್ನು ಹಾಕಬೇಕು, ಯಾವುದನ್ನು ಕೂಡದು ಎಂಬುದನ್ನು ಸಂಪಾದಕರು ವಿಮರ್ಶೆಮಾಡಿ, ತಿರುಳಿರುವ, ತರ್ಕವಿರುವ, ನೀರಸ ಪುನರಾವರ್ತನಗಳಿಲ್ಲದ ಉತ್ತಮ ಬರಹಗಳನ್ನು ಹಾಕುತ್ತ ಬರಬೇಕು. ಹೀಗೆ ಜಳ್ಳನ್ನು ತೂರುತ್ತ ಹೋದರೆ ಉಳಿಯುವುದು ಬಹುಸ್ವಲ್ಪ.

ನಮ್ಮ ದೇಶದಲ್ಲಿ ಜನರ ವಿದ್ಯಾಬುದ್ಧಿ ಸಂಸ್ಕಾರಗಳು ನಾನಾರೂಪಗಳಲ್ಲಿ ಆಗಬೇಕಾಗಿವೆ. ಹುಡುಗರಿಗೆ, ಪಾಠಶಾಲೆಗಳೂ ಉಪನ್ಯಾಸಗೃಹಗಳೂ ವಾಚನಮಂದಿರಗಳೂ ಯಾವ ವಿಧದಲ್ಲಿ ವಿದ್ಯಾರ್ಜನೆಗೂ ಜ್ಞಾನಸಂಗ್ರಹಕ್ಕೂ ಮನಸ್ಸಿನ ಪರಿಪಾಕಕ್ಕೂ ಸಹಾಯಮಾಡುವುವೊ ಹಾಗೆಯೇ ರಂಗಭೂಮಿಯು ಸಾಮಾನ್ಯ

ಜನರೆಲ್ಲರಿಗೂ, ನಾಟಕ ಪ್ರದರ್ಶನದಿಂದ ಮನೋರಂಜನೆ ಮಾಡಿ ತತ್ತ್ವವನ್ನು ಬೋಧಿಸಿ, ಅವರ ಭಾವಸಂಸ್ಕಾರಕ್ಕೆ ಸಹಕಾರಿಯಾಗುತ್ತದೆ. ಹೀಗಿರುವಲ್ಲಿ ಅದರ ಕಾರ್ಯವು ಮಹತ್ತರವಾದುದೂ ಬಹು ಜವಾಬ್ದಾರಿಯದೂ ಆಗಿರುತ್ತದೆ. ಆದುದರಿಂದ ಎಷ್ಟು ಉತ್ತಮ ಧ್ಯೇಯಗಳನ್ನಿಟ್ಟುಕೊಂಡು ರಂಗಭೂಮಿಯ ಅಧಿಕಾರಿಗಳು ನಾಟಕಗಳನ್ನಾಡಿದರೆ ಅವರ ಕಾರ್ಯವು,—ದೇಶದ ಸಾರ್ವಜನಿಕ ವಿದ್ಯಾ ಪ್ರಚಾರಕ ಕಾರ್ಯವು—ಅಷ್ಟು ಚೆನ್ನಾಗಿ ಮುಂದುವರಿದಂತಾಗುವುದು. ನಾಟಕದಲ್ಲಿ ಪ್ರಜಾರಂಜನೆ ಮುಖ್ಯವೆ? ಧರ್ಮಬೋಧೆ ಮುಖ್ಯವೆ? ಉತ್ತಮ ದೃಶ್ಯ ಪ್ರದರ್ಶನವು ಮುಖ್ಯವೆ? ಪ್ರಜಾರಂಜನೆಯಾದರೆ ಎಂಥವರ ರಂಜನೆ? ಅದನ್ನು ಹೇಗೆ ಮಾಡುವುದು? ಅವರ ಅಂತಸ್ತಿಗೆ ನಟವರ್ಗದವರೂ ನಾಟಕ ಕರ್ತೃಗಳೂ ಇಳಿದು ರಂಜಿಸುವುದೆ? ಅಥವ ಕೀಳು ದರ್ಜೆಯಲ್ಲಿರುವವರನ್ನು ಉತ್ತಮ ನಾಟಕ ಪ್ರದರ್ಶನಗಳಿಂದ ಸಂಸ್ಕೃತಿಗೊಳಿಸಿ ಅವರಿಗೂ ಉಚ್ಚಾದರ್ಶಗಳನ್ನು ತೋರಿಸಿ, ಮೇಲಾದ ಸಂಸ್ಕಾರಗಳನ್ನು ಅವರಿಗೆ ಕೊಡುವುದೆ? ರಂಗಭೂಮಿಯು ಸತ್ಯಪ್ರಪಂಚದ ದರ್ಪಣ ಮಾತ್ರವೇ? ಅದರ ಮೂಲಕ ಸಾಮಾಜಿಕ, ರಾಜಕೀಯ ಪ್ರಚಾರಕ ಕಾರ್ಯಗಳನ್ನು ಮಾಡುವುದು ಸರಿಯೆ? ಅಲ್ಲಿನ ಪ್ರಹಸನ ವಿಡಂಬನ ಕಾರ್ಯಗಳು ಎಂಥವಾಗಿರಬೇಕು? ಎಂಬ ವಿಷಯಗಳನ್ನು ಕುರಿತೂ; ರಂಗಭೂಮಿಯ ಒಳಗಣ ವ್ಯವಸ್ಥೆ, ನಟವರ್ಗದವರ ಯೋಗ್ಯತೆ, ಅವರ ಅಭಿನಯಗಳ ಕೌಶಲ, ಅನುರೂಪತೆ ಸಾಮಂಜಸ್ಯಗಳು, ವೇಷಭೂಷಾನುಗುಣ್ಯಗಳು, ರಂಗದಲ್ಲಿ ಅವರ ಚರ್ಯೆಗಳು, ಗಾನ, ಅವುಗಳ ಔಚಿತ್ಯ ಇತ್ಯಾದಿಗಳನ್ನು ಕುರಿತೂ; ಕರ್ಣಾಟಕದ ಬೇರೆ ಬೇರೆ ಪ್ರಾಂತಗಳ ವಿದ್ವದ್ರಸಿಕರು ತಮ್ಮ ತಮ್ಮ ಪ್ರದೇಶಗಳಲ್ಲಾದ ನಾಟಕಗಳನ್ನು ಉದಾಹರಣೆಗಾಗಿ ತೆಗೆದುಕೊಂಡು ವಿಮರ್ಶೆಮಾಡಿ ಆಗಾಗ್ಗೆ ಜನಕ್ಕೆ ತಿಳಿಸುತ್ತಾ ಬಂದರೆ, ಈ ಕಾರ್ಯವು ಸ್ವಲ್ಪಮಟ್ಟಿಗೆ ಸಾಧಿತವಾಗುವುದು. ನಾಟಕರಂಗವು ಮನುಷ್ಯಸೃಷ್ಟವಾದ, ಮಣ್ಣು ಬಣ್ಣ ಮರ ಬಟ್ಟೆ ಇವುಗಳಿಂದ ಮಾಡಲ್ಪಟ್ಟು ದೀಪಲಾಂದರಗಳಿಂದ ದೀಪ್ತವಾಗಿಬೆಳಗುವ, ಕೃತಕಪ್ರಪಂಚ; ಅದು ಅಲ್ಪ ಪ್ರಾದೇಶಿಕ ಅವಕಾಶದಲ್ಲಿ ಈ ಪ್ರಪಂಚದ ಸಮಸ್ತ ವ್ಯಾಪಾರಗಳನ್ನೂ ಅಡಕವಾಗಿ ಪ್ರತಿಪಾದಿಸಿ, ಪ್ರತಿಬಿಂಬಿಸಿ ತೋರಿಸಬಲ್ಲುದು; ನಮ್ಮದು ವಸ್ತುಪ್ರಪಂಚವಾದರೆ, ಅದು —ನಮ್ಮಲ್ಲಿ ಉತ್ತಮರಾದವರಿಂದ ಸೃಷ್ಟವಾದ—ಕಲಾಪ್ರಪಂಚ; ಅಲ್ಲಿನ ಸೌಂದರ್ಯಪ್ರದರ್ಶನಗಳು ನಮ್ಮಲ್ಲಿ ಸತ್ಯಭ್ರಮೆಯನ್ನು ಉಂಟುಮಾಡಿ, ಚಿತ್ತಾಕರ್ಷಣೆ ಮಾಡಿ, ಪಾತ್ರಗಳ ಸುಖದುಃಖ ಪ್ರವಾಹಗಳಲ್ಲಿ ನಮ್ಮ ಮನಸ್ಸನ್ನು ಸೆಳೆದುಕೊಂಡುಹೋಗಿ, ಆವೇಶ ಗಾಂಭೀರ್ಯಗಳಿಂದ ಮೇಲೆತ್ತಿ, ಭಯ ಕರುಣೆ ನಯ ನಗು

ಇವುಗಳಲ್ಲದ್ದಿ ತೊಳೆದು ಅಂತಃಕರಣಗಳನ್ನು ನಿರ್ಮಲಗೊಳಿಸುವಂತಾದರೇ ರಂಗಭೂಮಿಯವರ ಮತ್ತು ನಟರ ಶ್ರಮವು ಸಫಲವಾಗುವುದು. ಉತ್ತಮವಾದ ನಾಟಕಗಳ ಶ್ರೇಷ್ಠಪ್ರದರ್ಶನದಿಂದಲೂ, ಶ್ರೇಷ್ಠಪ್ರದರ್ಶನದಿಂದ ನಾಟಕಾಭಿರುಚಿಯನ್ನು ಹುಟ್ಟಿಸುವುದರಿಂದಲೂ ಉತ್ತಮ ನಾಟಕರಚನೆಗೆ ಉತ್ತೇಜನವನ್ನು ಕೊಡತಕ್ಕ ಭಾರವು ಹೀಗೆ ಒಂದಲ್ಲ ಇನ್ನೊಂದು ವಿಧದಲ್ಲಿ ರಂಗಭೂಮಿಯ ತಲೆಯಮೇಲೆ ಬಿದ್ದಿದೆ. ಈ ಎಲ್ಲ ವಿಧವಾದ ಜವಾಬ್ದಾರಿಗಳನ್ನೂ ವಹಿಸಿ ಸಮರ್ಪಕವಾಗಿ ಕೆಲಸ ಮಾಡಲು ಸಹಾಯವಾಗುವಂತೆ ನಾಟಕಶಾಲಾಧಿಕಾರಿಗಳಿಗೂ ನಟರಿಗೂ ಸದುಪದೇಶಗಳನ್ನು ಆಗಾಗ್ಗೆ ಉಚಿತರೀತಿಗಳಿಂದ ಕೊಡುವುದಕ್ಕೂ, ನಾಟಕದಲ್ಲಿ ನಾವು ಲಕ್ಷಿಸಿ ಸಂತೋಷಿಸಿ ಕಲಿತುಕೊಳ್ಳಬೇಕಾದುದೇನು ಎಂಬುದನ್ನು ಪ್ರೇಕ್ಷಕವರ್ಗದವರಾದ ನಮಗೆ ತೋರಿಸಿಕೊಡುವುದಕ್ಕೂ ಈ ಮಾಸಪತ್ರಿಕೆಯು ಹೊರಟಿದೆ, ಎಂದು ಭಾವಿಸುತ್ತೇವೆ. ಈಗ ಮಾಡುತ್ತಿರುವ ಕಾರ್ಯವನ್ನು ಇನ್ನೂ ಚೆನ್ನಾಗಿ ಮಾಡಬೇಕೆಂಬ ಆಶೆಯು ಅಧಿಕವಾಗಿದೆ. ಆದರೆ ಅದು ಒಬ್ಬರಿಂದ ಆಗತಕ್ಕ ಕೆಲಸವಲ್ಲ; ಅದಕ್ಕೆ ಧನ ಜನ ಲೇಖನಸಹಾಯಗಳು ಬಹುವಾಗಿ ದೊರೆಯಬೇಕು. ಕನ್ನಡಿಗರು ಈ ವಿಷಯವನ್ನು ಮನಸ್ಸಿನಲ್ಲಿಟ್ಟು ಈ ಪತ್ರಿಕೆಗೆ ಸ್ವಾಗತಕೊಟ್ಟು ಆದರ ಆಯುರಾರೋಗ್ಯಭಾಗ್ಯಗಳನ್ನು ಕಾಪಾಡಿಕೊಂಡು ಬರುವರೆಂದು ನಂಬಿದ್ದೇವೆ.

ವಿ. ಸೀ.

ಸರ್ವಜ್ಞವಚನಗಳು (ಟೀಕಾಸಹಿತ)—ಮ॥ ಚನ್ನಪ್ಪಾ ಉತ್ತಂಗಿಯವರಿಂದ ಪರಿಷ್ಕರಿಸಲ್ಪಟ್ಟದ್ದು; ಬೆಲೆ ೨—೧೨—೦.

ಕನ್ನಡಭಾಷೆಯಲ್ಲಿ ಕನ್ನಡಿಗರಿಗೆ ಹೆಚ್ಚುಹೆಚ್ಚು ಅಭಿಮಾನವು ತಲೆದೋರುತ್ತಿರುವುದೆಂದು ಈ ಪುಸ್ತಕದ ಆಧಾರದಿಂದ ಹೇಳಬಹುದು. ಜನರಲ್ಲಿ ಸಾಹಿತ್ಯಾಭಿಮಾನವನ್ನುಂಟುಮಾಡುವುದಕ್ಕೆ ನೂತನ ಗ್ರಂಥಗಳನ್ನು ನೂತನ ರೀತಿಯಲ್ಲಿ ರಚಿಸುವುದು ಒಂದು ಸಾಧನ; ಹಿಂದಿನ ಗ್ರಂಥಗಳನ್ನು ನೂತನ ರೀತಿಯಲ್ಲಿ ಪರಿಷ್ಕರಿಸಿ ಪ್ರಕಟಿಸುವುದು ಮತ್ತೊಂದು ಸಾಧನ. ಹೀಗೆ ಪ್ರಕಟಪಡಿಸುವುದಕ್ಕೆ ತೆಗೆದುಕೊಳ್ಳಬೇಕಾದ ಗ್ರಂಥಗಳು ನಮ್ಮಲ್ಲಿ ಬೇಕಾದಷ್ಟಿದ್ದರೂ ಪಂಡಿತಪಾಮರರಂಜಕವಾದ ಜನಸಾಮಾನ್ಯದಲ್ಲಿ ವಾಚನಾಭಿರುಚಿಯನ್ನು ಹೆಚ್ಚಿಸುವ ಸರ್ವಜ್ಞವಚನದಂತಹ ಗ್ರಂಥಗಳನ್ನು ಮೊದಲು ಕನ್ನಡಿಗರ ಮುಂದಿಡುವುದು ಒಳ್ಳೆಯದು.

ಚನ್ನಪ್ಪಾ ಉತ್ತಂಗಿಯವರು ಈ ಕಾರ್ಯಕ್ಕಾಗಿ ಎಷ್ಟು ಶ್ರಮ ವಹಿಸಿರುವರೆಂಬುದನ್ನು ಬರಿಯ ಬಾಯಿಮಾತಿನಲ್ಲಿ ಹೇಳಲಾಗುವುದಿಲ್ಲ. ಅವರ ಶ್ರಮವನ್ನು

ಯಾರಾದರೂ ಸರಿಯಾಗಿ ಬೆಲೆ ಕಟ್ಟಬೇಕಾದರೆ ಈ ಪುಸ್ತಕವನ್ನು ತೆಗೆದುಕೊಂಡು ಆಮೂಲಾಗ್ರವಾಗಿ ಓದಬೇಕು. ಆಗ ಅವರು ಆಶ್ಚರ್ಯದಿಂದ ಸ್ತಬ್ಧರಾಗುವುದರಲ್ಲಿ ಸಂದೇಹವಿಲ್ಲ. ಪಾಶ್ಚಾತ್ಯರಲ್ಲಿ ಕವಿಯ ಕೃತಿಗಳನ್ನು ಈ ರೀತಿ ಪ್ರಕಟಗೊಳಿಸುವುದು ಸರ್ವಸಾಮಾನ್ಯವಾಗಿದೆ. ನಮ್ಮಲ್ಲಿಯೂ ಇಂಥ ವಿಚಾರಶೀಲತೆ ಕಾರ್ಯತತ್ಪರತೆಗಳು ಇರುವುವೆಂದು ತಿಳಿಯಲು ಯಾರಿಗೆ ತಾನೇ ಸಂತೋಷವಾಗದು ?

ಇನ್ನೊಂದು ವಿಚಾರ. ಚನ್ನಪ್ಪಾ ಉತ್ತಂಗಿಯವರು ವೀರಶೈವರೇನೂ ಅಲ್ಲ. ಸರ್ವಜ್ಞನು ಕ್ರಿಶ್ಚಿಯನ್ ಜಾತಿಗೆ ಸೇರಿದವನಲ್ಲ. ಇರುವ ಸಂಬಂಧವೆಲ್ಲ ಉತ್ತಂಗಿಯವರು ಕನ್ನಡಿಗರು, ಸರ್ವಜ್ಞನೂ ಕನ್ನಡಿಗನು. ಸರ್ವಜ್ಞನ ವಿಚಾರದಲ್ಲಿ ವೀರಶೈವರು ಪೂಜ್ಯಬುದ್ಧಿಯನ್ನಿಡುವುದು ಸಹಜ. ಆದರೆ ಉತ್ತಂಗಿಯವರು ಕಾರ್ಯತಃ ಸರ್ವಜ್ಞನಿಗೆ ತೋರಿಸಿರುವ ಗೌರವವು ವೀರಶೈವರಿಂದಲೂ ಆತನಿಗೆ ದೊರೆತಿಲ್ಲವೆಂದು ಹೇಳಬೇಕು. ಸಾಹಿತ್ಯಾನುಭವದಲ್ಲಿ ಮತಾಂತರಗಳೆಂಬ ದ್ವೇಷಾಸೂಯೆಗಳಿಲ್ಲದೆ ಎಲ್ಲರೂ ಭಾಗಿಗಳಾಗಬೇಕೆಂಬುದನ್ನು ಉತ್ತಂಗಿಯವರು ತೋರಿಸಿ ಕೊಟ್ಟಿದ್ದಾರೆ. ಕಾವ್ಯವನ್ನು ಕನ್ನಡ ಕವಿಯು ಬರೆದನೆಂಬುದು ಕನ್ನಡಿಗರಿಗೆ ಮುಖ್ಯವಲ್ಲದೆ, ಅವನು ಯಾವ ಜಾತಿಗೆ ಸೇರಿದವನೆಂಬುದು ಮುಖ್ಯವಲ್ಲ. ಸಾಹಿತ್ಯ ಪ್ರಪಂಚದಲ್ಲಿ ಕಾವ್ಯದೃಷ್ಟಿಯಿಂದ ಕವಿಗೆ ಗೌರವವನ್ನು ಕೊಡಬೇಕಲ್ಲದೆ ಮತಾನುಸರಣೆಯಿಂದಲ್ಲ. ಒಂದುವೇಳೆ ಕವಿಗೆ ತಕ್ಕಷ್ಟು ಯೋಗ್ಯತೆಯಿಲ್ಲದಿದ್ದರೆ ಉಂಟೆಂದು ಕೇವಲ ಮತಾಭಿಮಾನದಿಂದಲೇ ಕೂಗಿಹೇಳಲೂಬಾರದು.

ಸರ್ವಜ್ಞನ ವಚನಗಳೆಂದು ಹೆಸರುಗೊಂಡಿರುವುದರಲ್ಲಿ ೧೯೨೮ನ್ನು ಉತ್ತಂಗಿಯವರು ಶೇಖರಿಸಿದ್ದಾರೆ. ಇವುಗಳಲ್ಲಿ ಸರ್ವಜ್ಞನ ವಚನಗಳೇ ಎಷ್ಟು ? ಈಚೆಗೆ ಸೇರಿರುವ ವಚನಗಳೆಷ್ಟು ? ಎಂಬುದನ್ನು ತಿಳಿಯಹೇಳುವುದು ಕಷ್ಟ. 'ಸರ್ವಜ್ಞ' ಎಂದು ಮುಗಿಯುವ ತ್ರಿಪದಿಗಳನ್ನೆಲ್ಲ ಒಟ್ಟುಗೂಡಿಸಿ ತಮಗೆ ತೋರಿದಮಟ್ಟಿಗೆ ಸರ್ವಜ್ಞಕೃತವಾದುವುಗಳೆಂದು ಅನೇಕವನ್ನು ವಿಂಗಡಿಸಿ ವಾಚಕರ ಅನುಕೂಲಕ್ಕಾಗಿ ಅವುಗಳ ಮೇಲೆ * ಚಿಹ್ನೆಯನ್ನು ಹಾಕಿರುತ್ತಾರೆ.

ಸರ್ವಜ್ಞನ ವಿಚಾರವನ್ನು ತಿಳಿಸುವುದಕ್ಕಾಗಿ ಪ್ರಚಾರದಲ್ಲಿರುವ ಕಥೆ ವಿಷಯ ಅಭಿಪ್ರಾಯ ವಿಮರ್ಶೆ ಇವುಗಳನ್ನು ಸಂಗ್ರಹಮಾಡಿ ವಿಸ್ತಾರವಾದ ಒಂದು ಪ್ರಸ್ತಾವನೆಯನ್ನೂ ವಚನಗಳ ಅರ್ಥವನ್ನು ಗ್ರಹಿಸುವುದಕ್ಕಾಗಿ ಒಂದು ಟಿಪ್ಪಣಿಯನ್ನೂ ಉತ್ತಂಗಿಯವರು ಕೊಟ್ಟಿರುವರು. ಈ ಪ್ರಸ್ತಾವನೆಯನ್ನೂ ಟಿಪ್ಪಣಿಯನ್ನೂ ನೋಡಿದರೆ ಇವರು ಪಟ್ಟಿರುವ ಕಷ್ಟವು ತಿಳಿಯುತ್ತದೆ. ಕನ್ನಡಿಗರು ಉತ್ತಂಗಿಯವರಿಗೆ ಚಿರಋಣಿಗಳಾಗಿರುವರೆಂದು ಸ್ಪಷ್ಟವಾಗಿ ನಾವುಹೇಳಬೇಕೇ ?

ವೀರಶೈವ ಪುರಾಣಕರ್ತೃಗಳಿಗಿಂತಲೂ ವಚನಕರ್ತೃಗಳು ವಿಚಾರಕರ್ತರೂ ಮನೋವೈಶಾಲ್ಯವುಳ್ಳವರೂ ಆಗಿದ್ದರೆಂಬುದು ಸಹಜವಷ್ಟೆ. ಈ ವಚನಕರ್ತೃಗಳು ಖಂಡಿತವಾದಿಗಳಾಗಿ ಬಹಿರಾಚಾರಡಂಭಗಳನ್ನು ಬೈಲಿಗೆಳೆದು ವೀರಶೈವ ಮತದಲ್ಲಿದ್ದ ಕಳೆಗಳನ್ನು ಕಿತ್ತೆಸೆದರೂ, ಇವರ ಮನೋವೈಶಾಲ್ಯಕ್ಕೂ ಸರ್ವಜ್ಞನ ಮನೋವೈಶಾಲ್ಯಕ್ಕೂ ಬಹಳ ವ್ಯತ್ಯಾಸವಿದೆ. ಬಸವೇಶ್ವರನಂಥವನಲ್ಲಿ ಕೂಡ ವಿಶ್ವಪ್ರೇಮವೆಂಬುದು ನೆಲಸಿರಲಿಲ್ಲ. ಆತನ ಅಭಿಮಾನ ಮಮತೆಗಳು ಯಾವುವು ಇದ್ದರೂ ಅವು ಕೇವಲ ವೀರಶೈವ ಮಂಡಲಿಗೆ ಮಾತ್ರ. ಭವಿಯ ವಿಚಾರದಲ್ಲಿ ಈ ವಚನಕಾರರೆಲ್ಲ ಬಹುಕ್ರೂರವಾದ ಮಾತುಗಳನ್ನೇ ಆಡಿದ್ದಾರೆ. ಜೈನ ಮತವನ್ನು ಪ್ರಶಂಸೆಮಾಡುವುದು ಈ ವಚನಕಾರರ ಹೃದಯದೊಳಗೆಂದೂ ಹೊಕ್ಕಿರಲಿಲ್ಲ. ಸರ್ವಜ್ಞನು ವಿಶ್ವಪ್ರೇಮಿ. ಇತರ ವಚನಕಾರರು ಧಾರ್ಮಿಕರೀತಿಯಲ್ಲಾಗಲಿ ವ್ಯಾವಹಾರಿಕ ರೀತಿಯಲ್ಲಾಗಲಿ ವಿಶ್ವಪ್ರೇಮಿಗಳಲ್ಲ.

ಸರ್ವಜ್ಞನ ಬೋಧನರೀತಿಯೂ ಭಿನ್ನವಾದುದು. ಸಾಮಾನ್ಯವಾಗಿ ವಚನಕಾರರು ಎಲ್ಲೆಲ್ಲಿ ಹುಬ್ಬುಗಂಟಿಕ್ಕಿಕೊಂಡು ಕ್ರೂರವಾಗಿಯೋ ಖಂಡಿತವಾಗಿಯೋ ವಿಡಂಬನಮಾಡಿಯೋ ಬರೆದಿರುವರೋ ಅಲ್ಲೆಲ್ಲ ಸರ್ವಜ್ಞನು ಹಾಸ್ಯರಸವನ್ನು ಸೂಸಿ ಜನರನ್ನು ಆಕರ್ಷಿಸಿಬಿಟ್ಟಿದ್ದಾನೆ. ಸರ್ವಜ್ಞನು ಸರ್ವಜನ ಪ್ರಿಯನಾಗಿರುವುದು ಈ ಮರ್ಮದಿಂದ. ಅವನಲ್ಲಿ ಆಧಿಕಾರಿಕಸ್ವರವಿಲ್ಲ ಮಿತ್ರನ ನಲ್ನುಡಿಯಿದೆ; ಧೊರೆಯ ದರ್ಪವಿಲ್ಲ ವಸಂತಕನ ಹಾಸ್ಯವಿದೆ; ಬೋಧನೆಯ ಕಾಠಿಣ್ಯವಿಲ್ಲ ಪ್ರೇಮದ ಆಕರ್ಷಣವಿದೆ.

ಈ ಪ್ರಸ್ತಾವನೆಯ ಕಾರ್ಯವು ಸರ್ವಜ್ಞನ ನಿಜಸ್ವರೂಪವನ್ನು ಗ್ರಹಿಸಿದ್ದರೆ ಇನ್ನೂ ಸುಲಭವಾಗುತ್ತಿತ್ತು; ವಚನ ಸಾಹಿತ್ಯವನ್ನು ವಿಮರ್ಶೆಮಾಡಿದ್ದರೆ ಮತ್ತಷ್ಟು ಖಚಿತವಾಗುತ್ತಿತ್ತು; ಎಂದು ನಮಗೆ ತೋರುತ್ತದೆ. ಬಸವೇಶ್ವರಾದಿಗಳ ವಚನಗಳಲ್ಲಿರುವ ಸ್ವಾಭಿವ್ಯಕ್ತಿಯೂ ಅಂತರಾತ್ಮನ ಹೋರಾಟವೂ ಸರ್ವಜ್ಞನ ತ್ರಿಪದಿಗಳಲ್ಲಿ ಇಲ್ಲದಿರುವುದರಿಂದ ನಿರ್ಲಿಪ್ತನಾದ ಸರ್ವಜ್ಞನನ್ನು ಆತನ ಪದ್ಯಗಳಿಂದ ಚಿತ್ರಿಸಲು ಯತ್ನಿಸಿದರೆ, ಅದು ಸರಿಹೋಗಲಾರದೆಂದು ನಮಗೆ ಹೆದರಿಕೆ. ಇದಕ್ಕೆ ಪ್ರಸ್ತಾವನೆಯಿಂದ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡುವೆವು.

ಲೌಕಿಕ ಪದ್ಯಗಳೆಂಬ ೩ನೆಯ ಭಾಗದಲ್ಲಿ 'ಸ್ತ್ರೀಮಹತ್ವದ' ಕೆಳಗೆ ೧೫೨೭ನೆಯ ಪದ್ಯವು ಈ ರೀತಿಯಿರುತ್ತದೆ.

ಊರಿದಾಚೇಳಿನಿಂದೇರಿದಾಬೇನೆಯುಲಿ |
ಮೂರುಜಗವೆಲ್ಲ ಹೊರಳುತಿಹುದಾನೋವ |
ಮಾರಿದವರಿಲ್ಲ ಸರ್ವಜ್ಞ.

ಈ ಪದ್ಯದ ವಿಚಾರವಾಗಿ ಪ್ರಸ್ತಾವನೆಯ ೭೬ನೆಯ ಪುಟದಲ್ಲಿ ಬರೆದಿರುವುದು ಕೇವಲ ಕಲ್ಪನೆಯೆಂದು ನಮಗೆ ತೋರುತ್ತದೆ. ಇದರಂತೆಯೇ ಸರ್ವಜ್ಞನ ಪದ್ಯಗಳಲ್ಲೆಲ್ಲ ಸರ್ವಜ್ಞಮೂರ್ತಿಯನ್ನು ನೋಡಹೋಗಿ ಒಂದು ಅಸಾಧಾರಣ ಮೂರ್ತಿಯನ್ನು ಪ್ರಸ್ತಾವನೆಯ ೪೩-೪೪ನೆಯ ಪುಟಗಳಲ್ಲಿ ಚಿತ್ರಿಸಿಬಿಟ್ಟಿರುವರು. 'ಚಿಂತಿಸಿ ದೇಹ ಬಡವಕ್ಕು,' 'ಮಂಡೆ ಬೋಳಾದವರ ಕಂಡು ನಂಬಲಿಬೇಡ' 'ಹಿರಿಯರಿಗೆ ಗಡ್ಡಲೇಸೆಂದ' 'ವಿೂಸೆಯಿಲ್ಲದ ಮೋರೆ ಹೇಸಿ ಕಾಣಯ್ಯ' ಇವೇ ಮುಂತಾದ ಬಿಡಿನುಡಿಗಳನ್ನು ಆಯಾ ಸಂದರ್ಭಗಳಿಂದ ಬಹಿಷ್ಕರಿಸಿ ಸರ್ವಜ್ಞನಿಗೆ ವಿೂಸೆಯಿತ್ತು, ಗಡ್ಡವಿತ್ತು—ಎಂದು ಮುಂತಾಗಿ ಕಲ್ಪನೆಮಾಡುವುದಕ್ಕೆ ತಕ್ಕಷ್ಟು ಆಧಾರವಿಲ್ಲೆಂದು ನಮಗೆ ತೋರುತ್ತದೆ.

ಪ್ರಸ್ತಾವನೆಯ ೨೪ನೆಯ ಪುಟದಲ್ಲಿ ಸರ್ವಜ್ಞನ ಜನ್ಮವಿಚಾರ ಮತ್ತು ಅದಕ್ಕೆ ಸಂಬಂಧಿಸಿದ ಪದ್ಯಗಳ ಪ್ರಸ್ತಾಪಮಾಡುತ್ತ "ಇದಲ್ಲದೆ ಸರ್ವಜ್ಞನು ಪ್ರಸಿದ್ಧಿಗೆ ಬಂದು ಪೂರ್ವದ ಕುಲಾಚಾರಗಳನ್ನು ಖಂಡಿಸಿದಂತೆ, ಜನರು ಇವನ ಮೂಲವನ್ನು ಕುರಿತು ಕೆಣಕಲು ಅವನು ಹೇಗಾದರೂ ತನ್ನ ವೃತ್ತಾಂತವನ್ನು ಹೇಳಬೇಕಾಯಿತೆಂಬುದು 'ಹೇಳಲರಿಯೆನು ನಾನು ಹೇಳೆನಲು ಹೇಳಿದೆನು' ಎಂಬ ಪದ್ಯದಿಂದ ವಿಶದವಾಗುತ್ತದೆ" ಎಂಬುದಾಗಿ ಬರೆದಿರುತ್ತಾರೆ. ಈ ಪದ್ಯವಾದರೋ

ಹೇಳಲರಿಯೆನು ನಾನು ಹೇಳೆನಲು ಹೇಳಿದೆನು |
ಬಾಳಲೋಚನನ ಶರಣರ ಆಳಾಗಿ
ಹೇಳಿದೆನು ನೋಡ ಸರ್ವಜ್ಞ.

ಎಂದಿರುವುದು. ಇದರ ಕೆಳಗೆ

ಎನ್ನ ಮನಸಿಗೆ ನೆನಹ ಪನ್ನಗಧರ ಕೊಟ್ಟ |
ಬಿನ್ನಣದಿಂದ ಸ್ತುತಿಗೈದು ಪೊಗಳುವೆ |
ಚನ್ನಮಾರುತಿಯ ಸರ್ವಜ್ಞ.

ಎಂಬ ಪದ್ಯವಿರುವುದು. ಈ ಎರಡು ಪದ್ಯಗಳ ಅರ್ಥವೂ ಹೆಚ್ಚುಕಡಿಮೆ ಒಂದೇ ಆಗಿರುವುದೆಂದು ನಮಗೆ ತೋರುತ್ತದೆ. 'ಹೇಳುವುದಕ್ಕೆ ನಾನೇನು ತಿಳಿದವನು? ಅಂತರಂಗದಲ್ಲಿ ಈಶ್ವರಪ್ರೇರಣೆಯಾಗಿ, ಅವನೇ ನುಡಿಸುವನು' ಎಂಬ ಅಭಿಪ್ರಾಯವು ಸಮಂಜಸವಲ್ಲದೆ ಸರ್ವಜ್ಞನ ಜನ್ಮವೃತ್ತಾಂತಕ್ಕೂ ಇದಕ್ಕೂ ಸಂಬಂಧವಿರಲಾರದು. ಸಾಮಾನ್ಯವಾಗಿ ಕವಿಗಳು ಈ ರೀತಿ ಹೇಳಿಕೊಳ್ಳುವ ಸಂಪ್ರದಾಯವುಂಟು.

ಹಿಂದಿನ ಪದ್ಯದಲ್ಲಿ ಬಂದಿರುವ "ಶರಣರ ಆಳಾಗಿ" ಎಂಬ ಪದಗಳನ್ನು ಪ್ರಸ್ತಾವನೆಯ ೯೨ನೆಯ ಪುಟದಲ್ಲಿ ತೆಗೆದುಕೊಂಡು ಒಂದುಬಗೆಯ ಟೀಕೆಯನ್ನು ಮಾಡಿದ್ದಾರೆ.

ಸರ್ವಜ್ಞನ ತ್ರಿಪದಿಪದ್ಯಗಳಿಂದ ಆತನನ್ನು ಚಿತ್ರಿಸುವುದೇ ಆದರೆ ಇನ್ನೂ ಬೇರೆಬೇರೆ ರೀತಿಯಾಗಿ ಆತನು ಹೊರಪಡುವನೆಂದು ನಾವು ಧೈರ್ಯವಾಗಿ ಹೇಳುವೆವು. ಸರ್ವಜ್ಞನು ಯಾವನೋ ಒಬ್ಬ ರಾಜನಲ್ಲಿ ಆಸ್ಥಾನ ಕವಿಯಾಗಿದ್ದನೆಂದೂ (೬೮೭-೮೯) ಮದುವೆಮಾಡಿಕೊಂಡಿದ್ದು ೫ ಜನ ಮಕ್ಕಳನ್ನು ಪಡೆದಿದ್ದನೆಂದೂ (೧೫೫೭-೮-೯-೬೧) ಒಳ್ಳೆಯ ಭೋಗಿಯೂ ವಿಲಾಸಗಾರನೂ ಆಗಿದ್ದನೆಂದೂ ಏರ್ಪಡುವುದರಲ್ಲಿ ಸಂದೇಹವಿಲ್ಲ. ಇನ್ನು ಕೆಲವು ಪದ್ಯಗಳನ್ನು ನೋಡಿದರೆ ಸರ್ವಜ್ಞನು ಜಾರಶಿಖಾಮಣಿಯಾಗಿದ್ದನೆಂದೂ, (೧೫೨೨,-೧೬೨೮-೯-೩೦-೩೨) ಜಾರರಿಗೆ ಆಗುವ ಭಂಗಗಳನ್ನು ಪಡೆದಿದ್ದನೆಂದೂ ಸ್ಥಿರಪಡುತ್ತದೆ. ಆದುದರಿಂದ ಸರ್ವಜ್ಞನ ಪದ್ಯಗಳನ್ನು ನೋಡಿ ಮನಬಂದಂತೆ ಕಲ್ಪಿಸುವುದು ಸರಿಯಲ್ಲವೆಂದು ನಾವು ತಿಳಿಯುತ್ತೇವೆ. ಷೇಕ್ಸ್‌ಪಿಯರ್ ಕಾಳಿದಾಸ ಇವರ ಗ್ರಂಥಗಳಿಂದ ಆಂತರಿಕ ಪ್ರಮಾಣಗಳನ್ನು ತೆಗೆದು ಅವರ ಜೀವನ ಚರಿತ್ರೆಗಳನ್ನು ಬರೆಯುತ್ತೇವೆಂದು ಪ್ರಯತ್ನಪಡುವುದುಂಟು. ಇವುಗಳಿಂದ ಆಯಾ ಕವಿಗಳಿಗೆ ಬಾಧಕವೇ ಹೊರತು ನಿಶ್ಚಯಾಂಶಗಳು ಮಾತ್ರ ತಿಳಿದುಬರುವುದಿಲ್ಲ. ಸರ್ವಜ್ಞನ ವಿಚಾರಕ್ಕೂ ಹೀಗೆಯೇ ಸರಿ.

ಟಿಪ್ಪಣಿಯಲ್ಲಿ ಕಂಡುಬರುವ ನ್ಯೂನತೆಗಳಿಗೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡುವೆವು.—

ಕೊರಡು ಸುರತರುವಾಯ್ತು ಬರಡು ನೆರೆಹಯಿನಾಯ್ತು |
ಮರುಳುತಂಡಗಳು ಪ್ರಣವನುಚ್ಚರಿಸುವ |
ಗುರುವಾಜ್ಞೆಗಂಜಿ! ಸರ್ವಜ್ಞ.

ಎಂಬ ೪೮ ನೆಯ ಪದ್ಯಕ್ಕೆ "ಕೊರಡು = ಕಟ್ಟಿಗೆಯ ತುಂಡು (ದೇಹ) ಬರಡು = ಗೊಡ್ಡಾವು (ಮನಸ್ಸು) ಮರುಳುತಂಡಗಳು = ಹುಚ್ಚರ ಗುಂಪುಗಳು (ಮಾನವರು) ಪ್ರಣವ = ಪಂಚಾಕ್ಷರೀಮಂತ್ರ-ಟೀ|| ಗುರುವು ಕೀಳವಸ್ತುವನ್ನು ಉತ್ತಮ ವಸ್ತುವಾಗಿ ಮಾಡಲು ಶಕ್ತನಿರುವುದರಿಂದ ಎಲ್ಲರೂ ಆತನಿಗೆ ನಯ ಭಯ ತೋರಿಸತಕ್ಕದ್ದು" ಎಂದು ಬರೆಯುವ ಬದಲು ಬಂಕಿ ದೇವನ ಚರಿತ್ರೆ*ಇತ್ಯಾದಿಗಳನ್ನು ತಿಳಿಸಿದ್ದರೆ ಸಮಯೋಚಿತವಾಗುತ್ತಿತ್ತೆಂದು ನಮಗೆ ಕಾಣುತ್ತದೆ.

* ಬಸವಪುರಾಣ ೯ ನೆಯ ಸಂಧಿ; ಪದ್ಯಗಳು ೨೩ ರಿಂದ ೨೭ ಪೂರ್ತಿ.

'ಹಾರಿದಾಬಲದಿಂದ ಬೇರು ಕಿತ್ತಿತು ಗಿರಿಯ' ಎಂಬ ೮೮ನೆಯ ಪದ್ಯದ ಭಾಗಕ್ಕೆ 'ಸಂಜೀವನಗಿಡವನ್ನು ತರಲಿಕ್ಕೆ ಹೋದ ವಾಯುಪುತ್ರನು **ಮೇರು ಪರ್ವತವನ್ನೇ** ಕಿತ್ತುಕೊಂಡುಬಂದಂತೆ...'' ಎಂಬುದಾಗಿ ಟಿಪ್ಪಣಿ ಬರೆದಿರುವುದು ಸರಿಯಾಗಿ ಕಾಣುವುದಿಲ್ಲ.

ಒಟ್ಟಿನಲ್ಲಿ ಈ ಪುಸ್ತಕವನ್ನು ನಾವು ಮೆಚ್ಚುವುದಾದರೂ ಪ್ರಕ್ಷಿಪ್ತವಾಗಿರಬಹುದಾದ ಪದ್ಯಗಳನ್ನು ಕಿತ್ತುಹಾಕಿ ತಪ್ಪುಗಳಿಲ್ಲದಂತೆ ಶೋಧಿಸಿ ಸರ್ವಜ್ಞನ ವಿಚಾರವನ್ನು ಸರಿಯಾಗಿ ಬರೆಯುವುದಕ್ಕೂ, ಟಿಪ್ಪಣಿಗಳನ್ನು ನ್ಯೂನತೆಗಳಿಲ್ಲದಂತೆ ಬರೆಯುವುದಕ್ಕೂ ಅವಕಾಶವಿನ್ನೂ ಇರುವುದೆಂದು ಅಭಿಪ್ರಾಯಪಡುತ್ತೇವೆ. ಎರಡನೆಯ ಮುದ್ರಣವನ್ನು ಉತ್ತಂಗಿಯವರು ಹೊರಡಿಸುವಾಗ ಈ ವಿಷಯಗಳಿಗೆ ಗಮನಕೊಡುವರೆಂದು ನಾವು ನಂಬಿದ್ದೇವೆ.

ಎಂ. ಆರ್. ಶ್ರೀ.

ಸುವಾಸಿನಿ :—ಮಾಸಪತ್ರಿಕೆ, ಮಂಗಳೂರು; ವಾರ್ಷಿಕಚಂದಾ, ರೂ. ೩-೪-೦.

ಇದು '' ವಿದ್ಯಾವರ್ಧನ ತತ್ವಶಾಸ್ತ್ರ ಕಲಾಕೌಶಲ್ಯ ಇತ್ಯಾದಿ ವಿಷಯಗಳನ್ನು'' ವರ್ಣಿಸುವ ಮಾಸಪತ್ರಿಕೆ. ಇದು ಮ|| ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಈಗ್ಗೆ ಇಪ್ಪತ್ತೈದು ವರ್ಷಗಳಕೆಳಗೆ ಹೊರಟಿತು. 'ಹಿತಬೋಧಿನಿ' ಯನ್ನು ಬಿಟ್ಟರೆ ಈ ತೆರದ ಒಳ್ಳೆಯ ಕನ್ನಡ ಮಾಸಪತ್ರಿಕೆಗಳೇ ಪ್ರಾಯಶಃ ಇಲ್ಲದಿದ್ದ ಆ ಕಾಲದಲ್ಲಿ ಅಲ್ಪಾಯುವಾಗಿ ಎರಡೇ ವರ್ಷ ನಡೆದರೂ ಬಹು ಜನಾದರಣೀಯವಾಗಿದ್ದ ಈ ಪತ್ರಿಕೆ ಈಗ ಪುನಃ ಹೊರಟಿದೆ. ಮ|| ಗಳಾದ ಎಂ. ಎನ್. ಶ್ರೀನಿವಾಸರಾಯರು ಪಂಜೆ ಮಂಗೇಶರಾಯರು ಉಳ್ಳಾಲ ಮಂಗೇಶರಾಯರು ನಂದಳಿಕೆ ಲಕ್ಷ್ಮೀನಾರಣಪ್ಪನವರು ಮುಂತಾದವರು ಇದರಲ್ಲಿ ಬರೆದಿದ್ದ ಕವನಗಳೂ ಕಥೆಗಳೂ ಪ್ರಬಂಧಗಳೂ ಇಂದಿಗೂ ಅನೇಕರ ಸ್ಮರಣೆಯಲ್ಲಿವೆ. ಜನಸಾಮಾನ್ಯರನ್ನೂ ಹೆಂಗಸರು ಮಕ್ಕಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ವಿಶೇಷವಾಗಿ ಅವರಿಗೆ ರಂಜಕವಾಗುವಂತೆಯೂ ಅರ್ಥವಾಗುವಂತೆಯೂ ಬರೆದ ಲೇಖನಗಳನ್ನು ಪ್ರಕಟಿಸುವ ಉದ್ದೇಶ್ಯದಿಂದ ಈ ಪತ್ರಿಕೆಯನ್ನು ಪುನರುಜ್ಜೀವನಗೊಳಿಸಿದಂತೆ ಕಾಣುತ್ತದೆ. ಇದು ಹಿಂದಿನಂತೆ ಅಲ್ಪಾಯುವಾಗದೆ ಈ ಜನ್ಮದಲ್ಲಿ ದೀರ್ಘಾಯುವಾಗಿದ್ದು ಅದೇ ಗುಣಗಣಗಳಿಂದ ಸರ್ವಜನೋಪಯುಕ್ತವಾಗಲೆಂದು ಕೋರುತ್ತೇವೆ.

ಭಾಷಾಶೈಲಿಯು ಸರಳವಾಗಿದೆ; ಕಾಗದ ಮುದ್ರಣ ಮುಂತಾದವುಗಳು ಚೆನ್ನಾಗಿವೆ.

ಎ. ಆರ್. ಕೃ.

ವ ಸ್ತು ಕೋ ೀ ಶ

ಈ ಸಾರಿ ಪ್ರಬುದ್ಧ ಕರ್ಣಾಟಕದ ಕಿರೀಟವನ್ನು ಮತ್ತೊಂದು ರತ್ನದಿಂದ ಅಲಂಕರಿಸಿ ಕಳುಹಿಸಿಕೊಟ್ಟಿದ್ದೇವೆ. ಈ ರತ್ನವು ನವರತ್ನಗಳಲ್ಲಿ ಸೇರಿದ ರತ್ನವಲ್ಲ; ಬೆಲೆಕಟ್ಟಬಹುದಾದದ್ದಲ್ಲ. ವಜ್ರ ಕೆಂಪುಗಳಿಗೆ ಬೆಲೆಕಟ್ಟಬಹುದು; ಮಂದಮಾರುತನಿಗೂ ಬೆಳದಿಂಗಳಿಗೂ ಬೆಲೆಕಟ್ಟುವುದು ಹೇಗೆ? ಹಾಗೇ ಕಾವ್ಯಸೌಂದರ್ಯಕ್ಕೂ ಕಲಾಸೌಂದರ್ಯಕ್ಕೂ ಬೆಲೆಯನ್ನು ನಿರ್ಧರಿಸುವುದಕ್ಕಾದೀತೇ? ಅಕ್ಷರಲಕ್ಷವನ್ನು ಕೊಟ್ಟ ಪ್ರಭುವೂ ತನ್ನ ಐಶ್ವರ್ಯದ ಅಥವಾ ಔದಾರ್ಯದ ಎಲ್ಲೆಕಟ್ಟನ್ನು ತೋರಿಸಿದಂತಾಯಿತೇ ಹೊರತು ಶಿಲ್ಪಸೌಂದರ್ಯಕ್ಕೆ ಬೆಲೆಕಟ್ಟುವ ಬುದ್ಧಿವಂತಿಕೆಯನ್ನೇನು ತೋರಿಸಿದಂತಾಗಲಿಲ್ಲ. ಈಸಾರಿ ನಾವು ಪ್ರಕಟಿಸಿರುವ ಅಭಿನವ ಕರ್ಣಾಟಕ ಕಲಾ ನಿರ್ಮಾಣವನ್ನು ಕನ್ನಡಿಗರು ಇಂತಹದೊಂದು ಅಮೂಲ್ಯವಾದ ರತ್ನವಾಗಿ ಪರಿಗ್ರಹಿಸುವರೆಂದು ನಂಬಿದ್ದೇವೆ. ಮ|| ವೆಂಕಟಪ್ಪನವರ ಮತ್ತು ಅವರ ಶಿಕ್ಷಣ ಶಿಲ್ಪಾದಿಗಳ ಪರಿಚಯವನ್ನು ಚಿತ್ರಗಳ ಹತ್ತಿರವೇ ಗದ್ಯಪದ್ಯಗಳಿಂದ ಮಾಡಿಕೊಟ್ಟಿರುತ್ತೇವೆ. ಮ|| ವೆಂಕಟಪ್ಪನವರು ಮೈಸೂರಿನವರು; ಅಚ್ಚ ಕನ್ನಡಿಗರು. ಆದ್ದರಿಂದಲೋ ಏನೋ ಅವರ ಕೃತಿಕೌಶಲದಲ್ಲಿ ಭಾರತೀಯ ಇತರ ಭಾಗಗಳಲ್ಲಿ ಪ್ರಸಿದ್ಧರಾಗಿರುವ ಚಿತ್ರಿಗರ ಕೃತಿಗಳಿಗಿಂತಲೂ ನಮಗೆ ಹೆಚ್ಚು ಆದರ, ಹೆಚ್ಚು ಪಕ್ಷಪಾತ, ಹೆಚ್ಚು ಮೋಹ. ಇದರ ತತ್ವವನ್ನು ಪಾಠಕರು, ಕನ್ನಡಿಗರಲ್ಲದ ಪಾಠಕರು, ಬೇಕಾದರೆ ನಿಷ್ಪಕ್ಷಪಾತವಾಗಿ ನಿರ್ಣಯಮಾಡಿಕೊಳ್ಳಲಿ!

ಪ್ರಬುದ್ಧಕರ್ಣಾಟಕದ ಕಿರೀಟಕ್ಕೆ ಒಂದು ಹೊಸರತ್ನ

ಹಿಂದಿನ ಸಂಚಿಕೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಪ್ರಾಸಾದದ ಹೊಸಲಿನ ಮೇಲೆ ನಿಲ್ಲಿಸಿದ್ದ ಕನ್ನಡವನ್ನು ಒಳಕ್ಕೆ ಕರೆತಂದು ಅದಕ್ಕೆ ಸರಿಯಾದ ಸ್ಥಾನವನ್ನು ಕೊಟ್ಟು ಗೌರವಿಸಬೇಕೆಂದು ಗೋಳಾಡಿದ್ದೆವಷ್ಟೆ. ಈಚೆಗೆ ನಡೆದ ಸೆನೆಟ್ ಸಭೆಯಲ್ಲಿ ಅದನ್ನು ಒಳಗೆ ಕರೆದುಕೊಂಡು ಕೂರಿಸಬೇಕೆಂದು ತೀರ್ಮಾನವಾಯಿತು. ಅದಕ್ಕೆ ಸಿಂಹಾಸನ ದೊರೆ

ಕನ್ನಡದ ಪುಣ್ಯ

ಯದಿದ್ದರೂ ಕೂರ್ಚಾಸನವಾದರೂ ದೊರೆಯಿತು. ಆ ತೀರ್ಮಾನದ ಪ್ರಕಾರ ಇಂಟರ್‌ಮೀಡಿಯಟ್ ಪರೀಕ್ಷೆಗೆ ಕನ್ನಡಭಾಷಾಸಾಹಿತ್ಯಗಳ ವ್ಯಾಸಂಗವು ಆವಶ್ಯಕವೆಂದೂ, ಬಿ.ಎ. ಮುಂತಾದ ಮಿಕ್ಕ ಎಲ್ಲಾ ಮೇಲ್ತರಗತಿಯ ಪರೀಕ್ಷೆಗಳಿಗೂ ಕನ್ನಡ ಪಠ್ಯಪುಸ್ತಕಗಳ ವ್ಯಾಸಂಗದ ಮೇಲೆ ಉಪನ್ಯಾಸ ಲೇಖನಗಳು ಇರತಕ್ಕದ್ದೆಂದೂ ನಿಶ್ಚಿತವಾಯಿತು. ಆರ್ಯದ್ರಾವಿಡ ಸಂಸ್ಕೃತಿಗಳಿಗಿಂತ ಪೂರ್ತಿಯಾಗಿ ಬೇರೆಯಾದ ಸಂಸ್ಕೃತಿಯುಳ್ಳ ಮಹಮ್ಮದೀಯ ಪ್ರಜೆಗಳ ಅನುಕೂಲ್ಯಕ್ಕಾಗಿ ಉರ್ದುವು ಇರಬಹುದೆಂದೂ ಒಪ್ಪಲಾಯಿತು. ಹೊಸಲಿನ ಮೇಲೆ ನಿಲ್ಲಿಸಿದ್ದನ್ನು ಹೊರಕ್ಕೆ ತಳ್ಳಿ ಉಪವಾಸ ಕೆಡವಿ ಕ್ರಮವಾಗಿ ನಿರ್ನಾಮ ಮಾಡುವ ಹೆದರಿಕೆ ಇಲ್ಲದೆ ಇಷ್ಟರಮಟ್ಟಿಗೆ ಆಯಿತಲ್ಲಾ ಎಂಬುದಿಷ್ಟೇ ಸಂತೋಷ. "ಜೀವನ್ ಭದ್ರಾಣಿ ಪಶ್ಯತಿ!"

ಗದಾಯುದ್ಧನಾಟಕ.

ಕಳೆದ ತಿಂಗಳು ೨೩ನೆಯ ತಾರೀಖಿನದಿವಸ ರಾತ್ರಿ ಮೈಸೂರಿನಲ್ಲಿ ವಿಶ್ವವಿದ್ಯಾಲಯಸಂಘದವರು ಗದಾಯುದ್ಧನಾಟಕವನ್ನು ಪ್ರದರ್ಶಿಸಿದರು. ಆ ಸಂಘದ ಅಧ್ಯಕ್ಷರೂ ಮಹಾರಾಜಾ ಕಾಲೇಜಿನ ಇಂಗ್ಲಿಷ್ ಅಧ್ಯಾಪಕರೂ ಆದ ಮ|| ರಾ|| ಬಿ. ಎಂ. ಶ್ರೀಕಂಠಯ್ಯ, ಎಂ. ಎ., ಬಿ. ಎಲ್. ರವರು ರನ್ನನ ಚಂಪೂಕಾವ್ಯವಾದ ಗದಾಯುದ್ಧವನ್ನು ಹೀಗೆ ನಾಟಕವಾಗಿ ತಿರುಗಿಸಿ ಅದನ್ನು ಅಭಿನಯಿಸಲು ನಟರಿಗೆ ತಕ್ಕ ಶಿಕ್ಷಣವನ್ನು ಕೊಟ್ಟಿದ್ದರು. ಈ ತೆರನಾದ ಪ್ರದರ್ಶನಗಳಲ್ಲಿ ಇದೇ ಮೊದಲನೆಯದು. ಪಾತ್ರಗಳು ಹಳಗನ್ನಡ ಗದ್ಯಪದ್ಯ ಶೈಲಿಗಳಲ್ಲಿಯೇ ಸಂಭಾಷಣೆ ಮಾಡಿದರು. ಕಂದಗಳು ಹೆಚ್ಚು ಸಂಗೀತದ ಎಳೆತಕ್ಕೆ ಗುರಿಯಾಗದೆ ಪಾತ್ರಗಳ ಪರಿಸ್ಥಿತಿ, ಸ್ವಭಾವ, ಕಥಾಸನ್ನಿವೇಶ ಇವುಗಳಿಗೆ ಸ್ವಲ್ಪವೂ ಕುಂದುತಾರದಂತೆ ಹೇಳಲ್ಪಟ್ಟುವು. ದುರ್ಯೋಧನ ಭೀಮ ಇವರ ಪಾತ್ರಗಳನ್ನು ವಹಿಸಿದ್ದ ನಟರಂತೂ ಅತ್ಯುತ್ತಮ ರೀತಿಯಲ್ಲಿ, ಅತಿ ಗಂಭೀರವಾಗಿ, ತಮ್ಮ ಪಾತ್ರಗಳನ್ನು ಅಭಿನಯಿಸಿದರು. ಪಾತ್ರಗಳ ಹೃದಯದಲ್ಲಿ ತೀವ್ರವಾದ ಭಾವ ಉಂಟಾದಾಗ ಮಾತ್ರ ಸ್ವಲ್ಪ ರಾಗರೂಪವಾಗಿ ಕಂದ ವೃತ್ತಾದಿಗಳು ಹೇಳಲ್ಪಟ್ಟವೇ ವಿನಾ, ನಾಟಕದಲ್ಲಿ—ಸಂಗೀತವು ಹಾಗಿರಲಿ—ಇತರ ವಿಧವಾದ ತಾಳಮೇಳಗಳು ಕೂಡ ಇರಲಿಲ್ಲ. ಈ ವಿಧವಾದ ಉಪಾಂಗಗಳ ಸಹಾಯವೊಂದೂ ಇಲ್ಲದೆ ಹಳಗನ್ನಡದಲ್ಲಿ ಇಷ್ಟು ಹೃದ್ಯವಾಗಿ ನಾಟಕವಾಡಿದುದು ಆಶ್ಚರ್ಯಕರವಾದುದೇ ಸರಿ. ಹಾಡುಗಾರಿಕೆ ಇಲ್ಲದಿದ್ದರೆ ನಾಟಕವಾಗುವುದಿಲ್ಲವೆಂದು ತಿಳಿದುಕೊಂಡಿರುವವರು ಈ ನಾಟಕವನ್ನು ನೋಡಿದ್ದರೆ, ತಮ್ಮ ಅಭಿಪ್ರಾಯವನ್ನು ಬದಲಾಯಿಸುತ್ತಿದ್ದರೆಂದು ನಾವು ಧಾರಾಳವಾಗಿ ಹೇಳಬಹುದು.

ನಾಟಕವು ಉಪಕ್ರಮವಾಗುವುದಕ್ಕೆ ಮೊದಲು ಮ|| ರಾ|| ಶ್ರೀಕಂಠಯ್ಯನವರು ಉಪೋದ್ಘಾತರೂಪವಾಗಿ ರನ್ನನ ಪ್ರಸ್ತಾಪವನ್ನು ಸೂಕ್ಷ್ಮವಾಗಿ ತಿಳಿಸಿ ಅನಂತರ ರನ್ನನ ಚಂಪೂಗ್ರಂಥವು ನಾಟಕರೂಪದಿಂದ ಆಗ ಪ್ರದರ್ಶಿಸಲ್ಪಡುವುದೆಂದೂ ಪಾತ್ರಗಳು ಮೂಲದಲ್ಲಿರುವ ಗದ್ಯಪದ್ಯ ಭಾಗಗಳನ್ನೇ ಸಂಭಾಷಣೆಗೆ ಅನುರೂಪವಾಗಿ ಹೊಂದಿಸಿಕೊಂಡು ಮಾತನಾಡುವರೆಂದೂ, ರನ್ನನ ಕಥೆಗೆ ಪಂಪನ ಭಾರತವು ಆಧಾರವಾದುದೆಂದೂ, ರನ್ನ ಪಂಪರ ಸಂಬಂಧವು ಷೇಕ್ಸ್‌ಪಿಯರ್ ಪ್ಲೂಟಾರ್ಕ್‌ರವರ ಸಂಬಂಧದಂತೆಂದೂ, ಆಗ ಅಭಿನಯಿಸಲು ಯತ್ನಿಸಿದ ದೃಶ್ಯವು ನೂತನ ರೀತಿಯ ಪ್ರಯತ್ನವೆಂದೂ, ಷೇಕ್ಸ್‌ಪಿಯರ್ ನಾಟಕದ ಜೊತೆಗೆ ಇದನ್ನು ಆಡಿದರೂ ಆ ನಾಟಕಕ್ಕೆ ಎಲ್ಲವಿಧಗಳಲ್ಲಿಯೂ ಇದು ಸಮತೂಗಬಲ್ಲುದೆಂದೂ, ದುರ್ಯೋಧನನು ದುರಂತನಾಯಕನೆಂದೂ (Tragic hero) ಹೇಳಿದರು. ಈ ನಾಟಕವು ಅನೇಕ ವಿಧಗಳಲ್ಲಿ ಮಾರ್ಗದರ್ಶಿಯಾಗಿದೆ. ವಸ್ತುವು ಘನವಾದುದಾಗಿದ್ದು, ರಚನೆಯು ರಸವತ್ತಾಗಿದ್ದು, ಅಭಿನಯವು ಶ್ರೇಷ್ಠವಾದುದಾದರೆ, ಮಿಕ್ಕ ಯಾವ ನಾಟಕಾಂಗದಲ್ಲಿ ಯಾವ ಕೊರತೆಯಿದ್ದರೂ ಪ್ರದರ್ಶನದ ಚೆಂದಕ್ಕೆ ಲೋಪ ಬಾರದೆಂಬ ತತ್ತ್ವವನ್ನು ಈ ಸಭೆಯವರು ತೋರಿಸಿಕೊಟ್ಟಿರುವರು. ಕನ್ನಡಿಗರ ಪರವಾಗಿ ಈ ಸಭೆಯವರಿಗೂ ಮ|| ರಾ|| ಶ್ರೀಕಂಠಯ್ಯನವರಿಗೂ ನಮ್ಮ ಕೃತಜ್ಞತೆಯನ್ನೂ ಅಭಿನಂದನವನ್ನೂ ಸಮರ್ಪಿಸುತ್ತೇವೆ.

ವಿ. ಸೀ.

ನಳೋದಯಕಾವ್ಯದ ಕರ್ತೃವು ಯಾರು?

ಕಾಳಿದಾಸನ ಸ್ನೇಹಿತರು ಅವನು ಯಮಕ ಕಾವ್ಯವನ್ನು ಬರೆಯಲಾರನೆಂದು ಅವನನ್ನು ರೇಗಿಸಿದರೆಂದೂ, ಆಗ ಅಂಥ ಕಾವ್ಯಗಳನ್ನೂ ಬರೆಯಲು ತನಗೆ ಶಕ್ತಿಯಿರುವುದೆಂದು ತೋರಿಸುವುದಕ್ಕಾಗಿ ಕಾಳಿದಾಸನು ನಳೋದಯಕಾವ್ಯವನ್ನು ಬರೆದನೆಂದೂ ಹೇಳುತ್ತಿದ್ದದ್ದು ರೂಢಿಯಾಗಿತ್ತಷ್ಟೆ. ನಳೋದಯದ ವ್ಯಾಖ್ಯಾಕಾರನಾದ ರಾಮಷರ್ಷಿಯ (ಕ್ರಿ.ಶ. ೧೬೦೦) ಮಾತನ್ನು ಅನುಸರಿಸಿ ಆ ಕಾವ್ಯಕ್ಕೆ ಕರ್ತೃವು ರವಿದೇವನೆಂದು ಪೀಟರ್‌ಸರ್ ಮುಂತಾದ ವಿದ್ವಾಂಸರು ಹೇಳಿದ್ದಾರೆ. ಇಂಗ್ಲೆಂಡಿನ ರಾ. ಏ. ಸೊ. ಪತ್ರಿಕೆಯಲ್ಲಿ (ಏಪ್ರಿಲ್ ೧೯೨೫) ಮ|| ಎ. ಎಸ್. ರಾಮನಾಥಯ್ಯರ್ ಬಿ. ಎ. ಯವರು ಈ ಅಂಶವನ್ನು ವಿಚಾರಮಾಡಿ ತೀರ್ಮಾನಿಸಿರುವುದೇನೆಂದರೆ:—ಯುಧಿಷ್ಠಿರವಿಜಯ, ತ್ರಿಪುರದಹನ, ಸೌರಿಕಥೋದಯ, ನಳೋದಯ ಎಂಬ ಯಮಕ ಕಾವ್ಯಗಳನ್ನು ಕೇರಳದೇಶೀಯನಾದ ವಾಸುದೇವನೆಂಬ ಕವಿಯು ರಚಿಸಿದನು. ಈತನು ರವಿ ಎಂಬಾತನ ಮಗ; ಸುಮಾರು ಒಂಬತ್ತನೆಯ ಶತಮಾನದ

ಆದಿಭಾಗದಲ್ಲಿ ಚೇರರಾಜರಾದ ಕುಲಶೇಖರ ಮತ್ತು ಅವನ ಅನಂತರ ಆಳಿದ ರಾಮ ಎಂಬವರ ಆಸ್ಥಾನದಲ್ಲಿದ್ದನು.

ಇಂಗ್ಲೆಂಡಿನ ರಾ. ಏ. ಸೊ. ಪತ್ರಿಕೆಯಲ್ಲಿ (ಏಪ್ರಿಲ್ ೧೯೨೫) ಡಾಕ್ಟರ್ ಜಾರ್ಲ್ ಸಾರ್ಪೆಂಟಿಯರ್ ಎಂಬವರು ಸಂಸ್ಕೃತ ನಾಟಕಗಳಲ್ಲಿ ಬರುವ "ಶಕಾರ" ನೆಂಬ ಪಾತ್ರದಮೇಲೆ ಒಂದು ಲೇಖನವನ್ನು ಬರೆದಿರುತ್ತಾರೆ. ಅದರ ಸಾರಾಂಶ ವನ್ನು ಇಲ್ಲಿ ಕೊಟ್ಟಿರುತ್ತೇವೆ:—

ಶಕಾರ

ಶಕಾರನು ಆಡುವ ಭಾಷೆಯನ್ನು ಭಾರತೀಯ ಲಾಕ್ಷಣಿಕರು ಒಂದು ವಿಧ ವಾದ ಮಾಗಧಿಯೆಂದು ಹೇಳುತ್ತಾರೆ. ಆದರೆ ಇದನ್ನು ಇರಾನಿಯನ್ (ಪಾರ್ಶಿ) ಭಾಷೆಯೆಂದು ಹೇಳಬಹುದು. ಈ ಹೆಸರು ಹುಟ್ಟಿದ್ದು ಹೇಗೆ? ನಾಟಕಗಳನ್ನೂ ಲಕ್ಷಣಗ್ರಂಥಗಳನ್ನೂ ಬಿಟ್ಟರೆ ಇದು ಹೊರಗೆ ಎಲ್ಲಿಯೂ ಕಂಡುಬರುವುದಿಲ್ಲ. -ಆರ ಎಂಬ ಪ್ರತ್ಯಯವು ಸೇರಿ ಆಗಿರುವ ಸಂಸ್ಕೃತ ಶಬ್ದಗಳು ಏಷ್ಟೋ ಇವೆ. ಉದಾ:—ಗೌಧಾರ, ಮೌಂಡಾರ, ಜಾಂಡಾರ, ಪಾಂಡಾರ, ಜಾಡಾರ*; ಮಂದಾರ, ಮಾರ್ಜಾರ, ಕರ್ಮಾರ† (=ಕಮ್ಮಾರ) ಶೇವಾರ†(ಖಜಾನೆ). "ಉದೀಚರು" (ಔತ್ತರೇಯರು) ಆರ(ಕ್) ಪ್ರತ್ಯಯವನ್ನು ಉಪಯೋಗಿಸುತ್ತಾರೆಂದು ಪಾಣಿನಿಯಿಂದ ಉಕ್ತವಾಗಿದೆಯಷ್ಟೆ; ಇದನ್ನು ನೋಡಿ ದರೆ ಆರಾಂತವಾದ ಶಬ್ದಗಳು ಉತ್ತರಭಾಷೆಯಲ್ಲಿ ರೂಢಿಯಾಗಿದ್ದುವೆಂದು ಹೇಳ ಬಹುದು. ಈ ಉತ್ತರ ಪ್ರದೇಶವು ಇಂಡಿಯಾಕ್ಕೂ ಪರ್ಶಿಯಾಕ್ಕೂ ಮಧ್ಯೆ ಇದ್ದ ಪ್ರಾಂತ ಪ್ರದೇಶವೆಂದು ತೋರುತ್ತದೆ. ಆ ಪ್ರಾಂತದ ಭಾಷೆಯಲ್ಲಿ ಆರಾಂತವಾದ ಕೆಲವು ಶಬ್ದಗಳು ಕಂಡುಬರುತ್ತವೆ:—ತುಖಾರ, ಗಾಂಧಾರ, ಅಭಿಸಾರ (ಒಂದು ಜನರ ಹೆಸರು). ಇಂಥ ಶಬ್ದಗಳು ಪ್ರಾಚೀನ ಮತ್ತು ಆಧುನಿಕ ಪಾರ್ಶಿಭಾಷೆಯಲ್ಲಿ ಕಂಡುಬರುತ್ತವೆ:—ಕತಾರ, ಯತಾರ (ಸಂ. ಕತರ, ಯತರ) ಇತ್ಯಾದಿ. ಹಯ ವಾರ ಎಂಬ ಶಕನಾಮಧೇಯವೂ ಹೀಗೆಯೇ -ಆರ ಪ್ರತ್ಯಯವು ಸೇರಿ ಆದದ್ದೆಂದು ತೋರುತ್ತದೆ. ಇದನ್ನೆಲ್ಲಾ ನೋಡಿದರೆ 'ಶಕಾರ' ಎಂಬುದು ಇರಾನ್ (ಪಾರ್ಶಿ) ಭಾಷೆಯಲ್ಲಿ ಶಕ ಶಬ್ದಕ್ಕೆ -ಆರ ಪ್ರತ್ಯಯವು ಸೇರಿ ಆದದ್ದೆಂದು ಧಾರಾಳವಾಗಿ ಹೇಳಬಹುದು.

ಶಕರಾಜರು ಮಾಳವ ಗುಜರಾತು ಕಾಥೆವಾಡ ಮುಂತಾದ ಪ್ರದೇಶದಲ್ಲಿ ಕ್ರಿ.ಶ. ಮೊದಲನೆಯ ಶತಮಾನದ ಉತ್ತರಾರ್ಧದಿಂದ ಸು. ೪೦೦ ರ ವರೆಗೆ ಆಳಿ

---

* ಮಹಾಭಾಷ್ಯ ಸಿದ್ಧಾಂತಕೌಮುದಿಗಳನ್ನು ನೋಡಿ.

† ಈ ಶಬ್ದಗಳು ವೇದದಲ್ಲಿ ಬರುತ್ತವೆ.

ದರು. " ಶಕಾರ " ಪಾತ್ರವು ಇವರನ್ನು ಅಲ್ಲಗಳೆಯುತ್ತದೆಂದು ತೋರುತ್ತದೆ. ಭಾರತೀಯ ರೂಪಕಗಳಲ್ಲಿ ಶಕಾರನಷ್ಟು ನೀಚವೂ ಹಾಸ್ಯಾಸ್ಪದವೂ ಆದ ಮತ್ತೊಂದು ಪಾತ್ರವಿಲ್ಲ. ಅವನು ಅಯೋಗ್ಯ, ಸುಳ್ಳ, ನಿರಂಕುಶಪ್ರವರ್ತಕ ; ಈ ವಿಚಿತ್ರ ಪಾತ್ರವನ್ನು ಮೊದಲು ಸೃಷ್ಟಿಸಿದ ಕವಿಯು ತನ್ನ ಕೋಪತಾಪವನ್ನೆಲ್ಲಾ ಅವನ ಮೇಲೆ ತೋರಿಸಿದಂತೆ ಕಾಣುತ್ತದೆ. ಮೃಚ್ಛಕಟಿಕನಾಟಕದಲ್ಲಿ ಬೌದ್ಧ ಧರ್ಮಕ್ಕೆ ಗೌರವವನ್ನೇನೋ ಕೊಟ್ಟಿಲ್ಲ ; ಆದರೆ ಹಿಂದೂರಾಜರು ಸರ್ವಮತಾನುಯಾಯಿಗಳಿಗೂ ತೋರಿಸುತ್ತಿದ್ದ ಕರುಣವೆಲ್ಲಿ, ಈ ಶಕಾರನು ಬೌದ್ಧ ಸಂನ್ಯಾಸಿಗಳನ್ನು ಕಂಡರೆ ಅವರ ಮೂಗುಗಳನ್ನು ತೂತುಗುಟ್ಟಿಸುವುದು, ಕೊಲ್ಲುತ್ತೇನೆಂದು ಹೆದರಿಸುವುದು ಮುಂತಾದ ಕ್ರೌರ್ಯವೆಲ್ಲಿ? ಶಕರಾಜರು ಹಿಂದೂಗಳನ್ನು ಹೇಗೆ ಕಾಣುತ್ತಿದ್ದರೋ ಗೊತ್ತಿಲ್ಲ, ಬೌದ್ಧರಿಗೆ ಮಾತ್ರ ಅವರು ಶತ್ರುಗಳಾಗಿರಲಿಲ್ಲ. ಆದರೆ ಶಕಾರನ ನೈಚ್ಯವನ್ನು ತೋರಿಸಲು ಹೊರಟ ಕವಿಯು ಸತ್ಯಕ್ಕೆ ಕಟ್ಟುಬೀಳಬೇಕೆಂಬ ನಿರ್ಬಂಧವೇನೂ ಇಲ್ಲ.

ಭರತನೂ, ಧನಂಜಯನೂ ಶಕಾರನನ್ನು ಮ್ಲೇಚ್ಛ ಆಭೀರ ಮುಂತಾದ ಕೀಳು ಜಾತಿಗೆ ಸೇರಿಸಿರುತ್ತಾರೆ. ಶಕಾರನೂ ಬಾಣನ ಹರ್ಷಚರಿತೆಯಲ್ಲಿ ಬರುವ ಶಕರಾಜನೂ ಕಾಮುಕರು. ಅವರ ಈ ಗುಣಕ್ಕೆ ಸತ್ಯವಾದ ಚರಿತ್ರಾಂಶವು ಎಷ್ಟು ಮಟ್ಟಿಗೆ ಆಧಾರವಾಗಿದೆಯೋ ಗೊತ್ತಿಲ್ಲ ; ಅಂತು ಇದು ಶಕರಾಜರನ್ನು ಅವರ ಹಿಂದೂ ಪ್ರಜೆಗಳು ಎಷ್ಟು ನೀಚರೆಂದು ಭಾವಿಸಿ ಹಾಸ್ಯಮಾಡುತ್ತಿದ್ದರೆಂಬುದಕ್ಕೆ ಒಂದು ನಿದರ್ಶನವಾಗಿದೆ.

ಶಕಾರನು ಸರ್ವಗುಣ ಪರಿಪೂರ್ಣನಾಗಿ ಕಂಡುಬರುವುದು ಮೃಚ್ಛಕಟಿಕದಲ್ಲಿ. ಈ ರೂಪಕವು ಶಕರಾಜರಿಗೂ " ವಿಕ್ರಮಾದಿತ್ಯ " ನಿಗೂ ರಾಜಧಾನಿಯಾಗಿದ್ದ ಉಜ್ಜಯಿನಿಯಲ್ಲಿ ಆಡಲ್ಪಟ್ಟಿತು. ಆದ್ದರಿಂದ ಉಜ್ಜಯಿನಿಯಲ್ಲಿ—ಪ್ರಾಯಶಃ ಶಕರಾಜರು ಆಳುತ್ತಿದ್ದಾಗ—ಸಂಸ್ಕೃತ ಮಹಾಕಾವ್ಯ (ಮತ್ತು ನಾನಾ ಭಾಷೆಗಳನ್ನು ಪ್ರಯೋಗಿಸುವ ರೂಪಕ) ಗಳು ಬೆಳೆದುವೆಂದು ತೋರುತ್ತದೆ. ಉಜ್ಜಯಿನಿಯ ಸುತ್ತಮುತ್ತ ಸಿಥಿಯನ್ ರಾಜರೂ ಅವರ ಸಂಬಳಗಾರರೂ ಇದ್ದರು. ಇಂಥ ಕಡೆಯಲ್ಲಿ ಶಕಾರ ಪಾತ್ರವು ಹುಟ್ಟಿರಬಹುದು ; ಪ್ರತಿಭಾಶಾಲಿಯೂ ಕಲ್ಪಕನೂ ಆದ ಕವಿಗೆ ಅಲ್ಲಿ ಶಕಾರಸೃಷ್ಟಿಗೆ ಬೇಕಾದಷ್ಟು ಸಾಮಗ್ರಿ ಸಿಕ್ಕಿರಬಹುದು.

ಉಜ್ಜಯಿನಿಯಲ್ಲಿ ಶಕರಾಜರು ಇನ್ನೂ ಪ್ರಬಲರಾಗಿ ಆಳುತ್ತಿದ್ದಾಗ ಹಿಂದೂ ಕವಿಯು ಧೈರ್ಯಮಾಡಿ " ಶಕಾರ " ನನ್ನು ಸೃಷ್ಟಿಸಿದ್ದು ಹೇಗೆ? ಇದರಿಂದಲೇ,

ಶಕಾರನು ಬರುವಂಥ ವಾಕ್ಯಗಳೂ ಗ್ರಂಥಗಳೂ ಶಕರಾಜವಂಶವು ಕ್ಷೀಣಗತಿಗೆ ಬಂದಮೇಲೆ ಎಂದರೆ ಕ್ರಿ.ಶ. ೪೦೦ರಿಂದ ಈಚಿನವೆಂದು ಹೇಳಬೇಕು. ಶಾಕುಂತಲ ದಲ್ಲಿ "ಶ್ಯಾಲ" ನು ಬರುವುದನ್ನು ನೋಡಿದರೂ ಕಾಳಿದಾಸನು ಕ್ರಿ.ಶ. ಐದನೆಯ ಶತಮಾನದ ಉತ್ತರಾರ್ಧದವನೆಂದು ಹೇಳಬೇಕು.

ಶಕಾರನು "ದರಿದ್ರ ಚಾರುದತ್ತ" ದಲ್ಲಿಯೂ ಭರತನ ನಾಟ್ಯಶಾಸ್ತ್ರದಲ್ಲಿ ಯೂ ಉಲ್ಲಿಖಿತನಾಗಿದ್ದಾನೆ. ಇವುಗಳ ಕಾಲವು ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಚಾರುದತ್ತವು ಕ್ರಿ.ಶ. ೪೦೦ ಕ್ಕಿಂತ ಈಚಿನದೆಂದೂ ಅದನ್ನು ಅವಲಂಬಿಸಿಕೊಂಡು ಹುಟ್ಟಿದ ಮೃಚ್ಛಕಟಿಕವು ಅದಕ್ಕಿಂತ ಇನ್ನೂ ಈಚಿನದೆಂದೂ ತೋರುತ್ತದೆ. ನಾಟ್ಯ ಶಾಸ್ತ್ರದಲ್ಲಿ ಶಕಾರನು ಬರುವ ವಾಕ್ಯಗಳೂ ಈ ಕಾಲಕ್ಕಿಂತ (೪೦೦) ಈಚಿನವೇ ಆಗಿರಬಹುದು. ಇಷ್ಟರಿಂದಲೇ ನಾನಾ ಜನರು ನಾನಾಕಾಲದಲ್ಲಿ ಬರೆದು ಸೇರಿಸಿ ದ್ದಾಗಿ ತೋರುವ ಈ ನಾಟ್ಯಶಾಸ್ತ್ರಗ್ರಂಥಕ್ಕೆಲ್ಲಾ ಒಟ್ಟಿಗೆ ಒಂದು ಕಾಲವನ್ನು ನಿರ್ಣಯಿಸುವುದು ಅಸಾಧ್ಯ.



ಮ॥ ಚ. ವಾಸುದೇವಯ್ಯನವರು



ಹಿರಿದು

ರಾಗ—ಕಾಂಭೋಜ.

ಹಿರಿದ ನೋಡಿದೊಡೆ ಅರಿಯುವ ದೃಷ್ಟಿಶಕ್ತಿಯನು
ಹರಿ ಎನಗೆ ನೀಡು ನಿನ್ನನು ಅರಿವರೆ ||ಪಲ್ಲವಿ||

ಆಗಸದ ದುರ್ಗಮದ ಮೇರೆಯನು ಮೀರಿರುವ
ಸಾಗರವ ಅದು ನೆಲವ ಸೋಂಕುವೆಡೆ ನೋಡೆ |
ಸಾಗರವಿದೇನು ನಮ್ಮೂರ ಕೆರೆ ಸ್ವಲ್ಪ ಹಿರಿ
ದಾಗೆ ಇದರಂತೆ ಆಗದೆ ಎನಿಪುದು ||೧||

ಊರ ಕೆರೆಯಿಂದ ಈ ಸಾಗರದ ಹೆಸರಿನದು
ಬೇರೆಯಾಗಿಹುದು ಆರಯಿಸಿ ನೋಡೆ |
ನೀರು ನೆಲವನು ಹಿಡಿದ ತೀರದೆಡೆಯಿಂದಲ್ಲ
ದೂರದಾಂತರ್ಯದಾ ಭರದಿನಲ್ತೇ ||೨||

ಪಿರಿಯರೆಂದೆನಿಸುವರು ದಿನದಿನದಿ ನಡೆಯುತಿಹ
ತೆರನ ನೋಡುತ ಇವರು ಹಿರಿಯರೆಂತು |
ಇರುವರೆಮ್ಮಂತೆಯೇ ಇವರೆನುತೆ ತಿಳಿದು ಮನ
ಅರಿಯದಿಹುದಯ್ಯ ಆ ಪಿರಿಯತನವ ||೩||

ಆರಯಿಸೆ ಹಿರಿದು ಹಿರಿದೆನಿಸುವುದು ದಿನದಿನವು
ತೋರುವಾ ಸಾಮಾನ್ಯ ಚರಿಯೊಳಲ್ಲ |
ದೂರದಾಂತರ್ಯದಾ ಆಳವರಿಯದ ಬಾಳ
ಭಾರದಿಂದಲ್ತೆ ಇದ ಮನದೆ ನೆನೆದು ||೪||

ಶ್ರೀನಿವಾಸ.

ಹಿಂದೂಜನರು ಮತ್ತು ಸಂಸ್ಕೃತ.*

ಯಾವುದಾದರೂ ಒಂದು ಭಾಷೆಯನ್ನೂ ಅದರ ಸಾಹಿತ್ಯವನ್ನೂ ವ್ಯಾಸಂಗ ಮಾಡುವುದು ಏಕೆ?—ಅವುಗಳಲ್ಲಿರುವ ಭಾವಗಳಿಗೋಸ್ಕರವಲ್ಲವೆ? ಆ ಭಾವಗಳಿಂದಾಗುವ ಉಪಯೋಗವೇನು? ಮೊದಲನೆಯದು—ಜ್ಞಾನಾರ್ಜನೆಮಾಡಿ ಬುದ್ಧಿಯ ಮೂಲಕ ಆಂತರಿಕವಾದ ತೃಪ್ತಿ ಆನಂದಗಳನ್ನು ಅನುಭವಿಸುವುದು. ಎರಡನೆಯದು—ಪಾರಲೌಕಿಕ ವಿಚಾರವನ್ನು ಮಾಡಿ ಆಂತರಿಕ ಸುಖಶಾಂತಿಗಳನ್ನು ಪಡೆಯುವುದು. ಮೂರನೆಯದು—ದೇಹಕ್ಕೆ ಬೇಕಾದ ಶಕ್ತಿ ಭುಕ್ತಿಗಳನ್ನು ಸಂಪಾದಿಸುವುದಕ್ಕೆ ಆವಶ್ಯಕವಾದ ಸಾಮರ್ಥ್ಯವನ್ನು ಪಡೆಯುವುದು. ನಾಲ್ಕನೆಯದು—ಜನಾಂಗವು ನಶಿಸದ ಹಾಗೆ ಅದನ್ನು ಸಂರಕ್ಷಣೆ ಮಾಡಿಕೊಂಡು ಬರುವುದು. ಪ್ರತ್ಯೇಕ ವ್ಯಕ್ತಿಗಳು ಎಷ್ಟು ಪೋಷಣೆ ಮಾಡಿಕೊಂಡರೂ ಚಿರಜೀವಿಗಳಾಗಿರಲಾರರೆಂಬುದು ಸ್ಪಷ್ಟವಾಗಿದೆಯಷ್ಟೆ. ಪ್ರತಿಯೊಬ್ಬನೂ ಒಂದೊಂದು ದಿನ ಸಾಯಲೇಬೇಕು. ಆದರೆ ಅಲ್ಲೊಬ್ಬರು ಇಲ್ಲೊಬ್ಬರು ಸಾಯುತ್ತಿದ್ದರೂ ಸಮಷ್ಟಿಯಾದ ಜನಾಂಗವು ಮಾತ್ರ ಹಳೆಯ ಎಲೆಗಳು ಉದುರಿ ಹೊಸ ಎಲೆಗಳು ಚಿಗುರುತ್ತಿರುವ ಮರದಂತೆ ನಿಲ್ಲಬಹುದು. ಹೀಗೆ, ಒಂದು ವ್ಯಕ್ತಿಯು ಹೋದರೆ ಸಮುದಾಯವು ಸಾಯುವುದಿಲ್ಲ. ಸಮುದಾಯವೇ ಹೋದರೆ ವ್ಯಕ್ತಿಯಿರುವುದೆಲ್ಲಿ? ಆದ್ದರಿಂದ ನಮ್ಮ ಜ್ಞಾನವೂ ಭಾವವೂ ಸಮುದಾಯ ಸಂರಕ್ಷಣೆಗೆ ಅನುಕೂಲವಾದಂಥವುಗಳಾಗಿರಬೇಕೆಂಬುದು ಬಹು ಮುಖ್ಯವಾದ ವಿಷಯ. ಸಂಸ್ಕೃತವನ್ನು ಈ ದೃಷ್ಟಿಯಿಂದ ಪರಿಶೀಲಿಸಿ ನೋಡೋಣ. ಸಂಸ್ಕೃತಗ್ರಂಥಗಳಿಂದ ದೇವರು, ಜೀವ, ಪರಲೋಕ ಮುಂತಾದ ಆಧ್ಯಾತ್ಮಿಕ ಸಂಗತಿಗಳ ವಿಚಾರವಾಗಿ ಬಹು ಘನವಾದ ಭಾವಗಳು ತಿಳಿದುಬರುತ್ತವೆ. ಮನಸ್ಸನ್ನು ಸಂತೋಷಪಡಿಸುವ ವಿಚಾರವನ್ನು ತೆಗೆದುಕೊಂಡರೆ, ಸಂಸ್ಕೃತವು ಆಧುನಿಕವಿಜ್ಞಾನತತ್ತ್ವಗಳನ್ನು ತಿಳಿಸಲಾರದಿದ್ದರೂ ಕಲಾಪ್ರಪಂಚದಲ್ಲಿ ನಮ್ಮನ್ನು ಬಹುವಾಗಿ ತೃಪ್ತಿಪಡಿಸಬಲ್ಲುದು. ಇಂಗ್ಲಿಷಿನ ಸಹಾಯವಿಲ್ಲದೆ ಕೇವಲ ಸಂಸ್ಕೃತವೊಂದನ್ನೇ ಅವಲಂಬಿಸಿದರೆ ಅದರಿಂದ ನೆಮ್ಮದಿಯಾಗಿ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಾಯವಾಗುವುದಿಲ್ಲ.............ಇನ್ನು ಉಳಿದದ್ದು ಜನಸಮುದಾಯ ಸಂರಕ್ಷಣೆ. ಈ ವಿಷಯವನ್ನು ಕುರಿತು ಇಲ್ಲಿ ಸ್ವಲ್ಪ ದೀರ್ಘವಾಗಿ ವಿಚಾರಮಾಡೋಣ.........

---

* ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಪಾರಿತೋಷಕಪ್ರದಾನಸಭೆಯಲ್ಲಿ ಮಾಡಿದ ಉಪನ್ಯಾಸದ ಕೆಲವು ಭಾಗಗಳು.

ಸಂಸ್ಕೃತಭಾಷೆಯಲ್ಲಿ ಅಡಗಿರತಕ್ಕ ಧಾರ್ಮಿಕವಿಷಯಗಳನ್ನು ನಂಬಿ ಅವುಗಳನ್ನು ಅನುಸರಿಸತಕ್ಕವರು ಹಿಂದೂಗಳು. ಮೊದಲು, ಇಂಥವರ ಯೋಗಕ್ಷೇಮವೇನೆಂದು ಸ್ವಲ್ಪ ವಿಚಾರಮಾಡೋಣ. ಕಳೆದ ಐವತ್ತುವರ್ಷಗಳನ್ನು ತೆಗೆದುಕೊಂಡರೆ, ಇಂಡಿಯಾದೇಶದಲ್ಲಿ ಕ್ರೈಸ್ತರು ೧೦೦ ಜನವಿದ್ದಕಡೆ ೨೫೮ ಜನವಾಗಿದ್ದಾರೆ; ಮುಸಲ್ಮಾನರು ೧೦೦ ಜನವಿದ್ದಕಡೆ ೧೩೮ ಆಗಿದ್ದಾರೆ; ಆದರೆ ಹಿಂದೂಜನರು ಮಾತ್ರ ೧೦೦ ಇದ್ದಕಡೆ ೧೧೫ ಮಾತ್ರ ಆಗಿದ್ದಾರೆ. ಈ ಹಿಂದೂಗಳಿಗೆ ದಾರಿಯನ್ನು ತೋರಿಸುತ್ತಿರುವ ಬ್ರಾಹ್ಮಣರೋ ಎಂದರೆ, ಹೆಚ್ಚುವುದಂತೂ ಹೋಗಲಿ, ಇದ್ದಷ್ಟೂ ಇಲ್ಲ; ನೂರು ಜನರಿದ್ದಕಡೆ ೯೪ಕ್ಕೆ ಇಳಿದುಹೋಗಿದ್ದಾರೆ.

ಒಟ್ಟು ಜನಸಂಖ್ಯೆಯನ್ನು ತೆಗೆದುಕೊಂಡರೆ, ಇತರ ಪಂಗಡದವರು ನೂರರಂತೆ ಹೆಚ್ಚುತ್ತಿರುವಾಗ ಹಿಂದೂಗಳು ಸರಾಸರಿಗೆ ಶೇಕಡ ಹತ್ತರಂತೆಯೂ ಬ್ರಾಹ್ಮಣರು ಶೇಕಡ ೩.೨ ರಂತೆಯೂ ಕಡಿಮೆಯಾಗಿದ್ದಾರೆ. ಹೀಗೆ ಸಂಸ್ಕೃತಭಾಷಾ ಸಾಹಿತ್ಯಗಳಿಗೆ ಮುಖ್ಯಾವಲಂಬನವಾಗಿರುವ ಬ್ರಾಹ್ಮಣರ ಸಂಖ್ಯೆಯು ವರ್ಷವರ್ಷಕ್ಕೆ ಕಡಿಮೆಯಾಗುತ್ತ ಬಂದು ಈ ಐವತ್ತು ವರ್ಷಗಳಿಂದೀಚೆಗೆ ಸುಮಾರು ಹತ್ತುಲಕ್ಷ ಕಡಿಮೆಯಾಗಿಹೋಗಿದೆ. ಈ ರೀತಿ ಕ್ಷಯಿಸುತ್ತಿರುವುದು ಬ್ರಾಹ್ಮಣಜನ ಮಾತ್ರವೇ ಅಲ್ಲ, ಹಿಂದೂಜನಸಮುದಾಯವೇ ಕ್ರಮಕ್ರಮವಾಗಿ ನಷ್ಟವಾಗುತ್ತ ಬರುತ್ತಿದೆ. ....ಈಗ ಐವತ್ತು ಅರವತ್ತು ವರ್ಷಗಳ ಕೆಳಗೆ ಇಂಡಿಯಾದೇಶದ ಒಂದಾನೊಂದು ಸಂಸ್ಥಾನದಲ್ಲಿ ಶೇಕಡ ಅರವತ್ತಕ್ಕಿಂತಲೂ ಹೆಚ್ಚಾಗಿ ಹಿಂದೂಜನರಿದ್ದರು. ಅಲ್ಲಿ ಈಗ ಅವರು ೪೫ಕ್ಕೆ ಇಳಿದುಹೋಗಿದ್ದಾರೆ. ಇನ್ನೊಂದು ನೂರು ವರ್ಷ ಎನ್ನುವುದರೊಳಗೆ ಅಲ್ಲಿ ಅವರು ಗಣನೆಗೆ ಬಾರದಷ್ಟು ಸ್ವಲ್ಪವಾಗಬಹುದು; ಅಥವಾ ಹೆಸರಿಗೆ ಒಬ್ಬನೂ ಇಲ್ಲದಂತೆ ಹೋದರೂ ಹೋಗಬಹುದು. ಗಾಂಧಾರದೇಶವೂ (ಎಂದರೆ ಈಗಿನ ಆಫ್ಘಾನಿಸ್ಥಾನವೂ) ಜಾವಾದ್ವೀಪವೂ ಒಂದಾನೊಂದು ಕಾಲದಲ್ಲಿ ಪೂರ್ತಿಯಾಗಿ ಹಿಂದೂಪ್ರಾಂತಗಳಾಗಿದ್ದುವು. ಈಗ ಅಲ್ಲಿ ಸ್ಥಳೀಕನಾದ ಹಿಂದೂವನ್ನು ಹುಡುಕಿದರೂ ಸಿಕ್ಕುವುದಿಲ್ಲ. ಶ್ರಾದ್ಧಾದಿಗಳನ್ನು ಮಾಡುವುದಕ್ಕೆ ಪ್ರತಿಯೊಬ್ಬನೂ ಪುತ್ರನನ್ನು ಪಡೆಯಲೇಬೇಕೆಂದು ಎಷ್ಟೋ ದೂರದರ್ಶಿಗಳಾದ ಋಷಿಗಳು ನಮ್ಮ ಮತಕ್ಕೆ ಒಂದು ವಿಶೇಷ ಧರ್ಮವಾಗಿ ವಿಧಿಸಿದ್ದರೂ ನಮ್ಮ ಸ್ಥಿತಿಯು ಹೀಗಾಗಿದೆ. ಕಾಲಗತಿಗಳು ಬದಲಾಯಿಸಿದ ಮಾತ್ರಕ್ಕೇ ನಾವು ಬಾಳಲಾರದವರಾಗಿದ್ದೇವೆಂಬುದು ಕೇವಲ ಶೋಚನೀಯವಲ್ಲವೇ? ಅಲ್ಲಿ ಒಬ್ಬ ಹಿಂದುವೂ ಇಲ್ಲಿ ಒಬ್ಬ ಹಿಂದುವೂ ಅಭಿವೃದ್ಧಿಸ್ಥಿತಿಯಲ್ಲಿದ್ದಾನೆಯೆಂದುಕೊಂಡು ಹಿಂದೂ ಜನಸಮುದಾಯವೇ ಅಭಿವೃದ್ಧಿಸ್ಥಿತಿಯಲ್ಲಿದೆ ಎಂದು ತಿಳಿದುಕೊಳ್ಳುವುದು ಬರಿಯ ಭ್ರಾಂತಿ! ಜನಾಂಗವೇ

ನಿರ್ನಾಮವಾಗಿಬಿಟ್ಟರೆ, ಆ ಒಬ್ಬಿಬ್ಬರನ್ನು ತಾನೇ ಮುಂದೆ ಎಲ್ಲಿ ತರಬೇಕು? ಅವರ ಮಕ್ಕಳನ್ನೆಲ್ಲಿ ತರಬೇಕು?...........

ಭಾಷೆ, ಜ್ಞಾನ, ಪ್ರಾಣ.

ವೇದ ಪುರಾಣಾದಿ ಇತಿಹಾಸಗಳನ್ನೂ ಶಿಲ್ಪಸಾಹಿತ್ಯಗಳನ್ನೂ ನೋಡಿದರೆ ಪೂರ್ವದಲ್ಲಿ, ಹಿಂದೂಜನರು ನೂರಾರು ವರ್ಷ ಒಂದೇ ಸಮನಾಗಿ ಅಭಿವೃದ್ಧಿ ಹೊಂದುತ್ತ ಬಂದರೆಂದು ತಿಳಿಯುತ್ತದೆ. ಆಗ ಅವರ ಬೆಳೆವಣಿಗೆಯು ನಾನಾ ಮುಖದಲ್ಲಿಯೂ ಸ್ಪಷ್ಟವಾಗಿ ಕಂಡುಬರುತ್ತಿತ್ತು. ಅವರು ತಮಗೆ ದುರ್ದಶೆ ಪ್ರಾಪ್ತವಾದಾಗ ಅದನ್ನು ಈ ಸಂಸ್ಕೃತಜ್ಞಾನ ಬಲದಿಂದಲೇ ಎದುರಿಸಿ, ಎಷ್ಟೋ ಸಾಮರ್ಥ್ಯದಿಂದ ಕಾದಿ ಜಯಶೀಲರಾದರು. ಇದು ಆದದ್ದು ಹೇಗೆ?

ಈ ವಿಚಾರದಲ್ಲಿ ಎರಡು ವಿಷಯಗಳನ್ನು ಜ್ಞಾಪಕದಲ್ಲಿಟ್ಟಿರಬೇಕು. ಅವು ಯಾವುವೆಂದರೆ:—ಭಾಷೆ ಮತ್ತು ತದನುಸಾರವಾದ ಭಾವ ಅಥವಾ ಜ್ಞಾನ. ಮೊದಲು ಭಾಷೆಯನ್ನು ತೆಗೆದುಕೊಳ್ಳೋಣ. ಈಗ ನಮಗೆ ಪರಿಚಿತವಾಗಿರುವ ಸಂಸ್ಕೃತವನ್ನು ಸರ್ವಸಾಮಾನ್ಯವಾಗಿ ಜನರು ಮಾತನಾಡುತ್ತಿದ್ದದ್ದು ಸಾವಿರಾರು ವರ್ಷಗಳ ಕೆಳಗೇ ನಿಂತುಹೋಗಿ, ಅದು ಕೇವಲ ವಿದ್ವಾಂಸರ ವ್ಯವಹಾರದಲ್ಲಿ ಮಾತ್ರ ಉಳಿದಂತೆ ತೋರುತ್ತದೆ. ಆದ್ದರಿಂದ ಸಂಸ್ಕೃತವು ಎಲ್ಲೆಲ್ಲಿ ಉಪಯೋಗದಲ್ಲಿತ್ತೋ ಅಲ್ಲೆಲ್ಲಾ ಅದರ ಜೊತೆಗೆ ವ್ಯವಹಾರಕ್ಕೋಸ್ಕರ ಮತ್ತೊಂದು 'ಭಾಷೆ' ಇರುತ್ತಿತ್ತು. ಈ ಎರಡನೆಯ ಭಾಷೆಯು ಒಂದುಕಡೆ ಪಾಳಿಯೋ, ಮಾಗಧಿಯೋ, ಬಂಗಾಳಿಯೋ ಆಗಿರಬಹುದು; ಮತ್ತೊಂದುಕಡೆ ಪಾರ್ಶಿಯೋ ತಮಿಳೋ ತೆಲುಗೋ ಕನ್ನಡವೋ ಆಗಿರಬಹುದು. ಇವತ್ತು ಇಂಗ್ಲಿಷ್ ಆದರೆ ನಾಳೆ ಫ್ರೆಂಚೋ ಉರ್ದುವೋ ಆಗಬಹುದು. ಅಂತು ಸಂಸ್ಕೃತವು ಹೋದ ಕಡೆಯಲ್ಲೆಲ್ಲಾ ಲೌಕಿಕ ವ್ಯವಹಾರಗಳಿಗೋಸ್ಕರ ಬೇರೊಂದು ಭಾಷೆಯನ್ನು ಉಪಯೋಗಿಸಿಕೊಂಡ ಹಾಗೆ ಕಾಣುತ್ತದೆ. ಈ ಭಾಷೆಗಳು ಬದಲಾಯಿಸುತ್ತಿದ್ದರೂ ಸಂಸ್ಕೃತವು ಮಾತ್ರ ತಾನು ಹೋದಕಡೆಯಲ್ಲೆಲ್ಲಾ ಸಾಮಾನ್ಯಧರ್ಮವಾಗಿಯೂ ಸ್ಥಾಯಿಯಾಗಿಯೂ ನಿಂತು ಮಿಕ್ಕ ಭಾಷೆಗಳಿಗೆ ತನ್ನ "ಸಂಸ್ಕೃತಿ"ಯನ್ನು ಕೊಟ್ಟು ಅವುಗಳನ್ನು ಬೆಳೆಯುವ ಹಾಗೆ ಮಾಡಿ ನಾನಾ ವಿಧಗಳಲ್ಲಿ ರೂಪುಗೊಳಿಸಿದಂತೆ ತೋರುತ್ತದೆ. ಹೀಗೆ ಇವೆರಡೂ ಪರಸ್ಪರ ಸಹಾಯಕಗಳಾಗಿ ಪರಿಣಮಿಸಿದುವು. ಸಂಸ್ಕೃತದ ಬೆಂಬಲವಿಲ್ಲದೆ ಇಂಡಿಯಾದೇಶದ ಯಾವ ಭಾಷೆಯೂ ತನ್ನಷ್ಟಕ್ಕೆ ತಾನೇ ಪೂರ್ತಿಯಾದ ಬೆಳೆವಣಿಗೆಯನ್ನು ಹೊಂದಿ ಜನಸಾಮಾನ್ಯದಲ್ಲಿ ಉದಾತ್ತಭಾವಗಳನ್ನು ಪ್ರಸರಿಸಲು ಸಮರ್ಥವಾಗಿಲ್ಲ. ಬಂಗಾಳಿಯು ಈಚೆಗೆ ಬಹಳ ಅಭಿವೃದ್ಧಿಗೆ ಬಂದಿದೆಯಷ್ಟೆ; ಇದಕ್ಕೆ

ಐವತ್ತುವರ್ಷ ಒಂದೇ ಸಮನಾಗಿ ಕಲ್ಕತ್ತ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತವನ್ನು ನಿರ್ಬಂಧದಿಂದ ವ್ಯಾಸಂಗಮಾಡಬೇಕಾಗಿದ್ದದ್ದು ಬಹುಮಟ್ಟಿಗೆ ಕಾರಣವಾಗಿದೆ. ಬಂಗಾಳಿಗೆ ಪುನರ್ಜೀವವನ್ನು ಕೊಟ್ಟದ್ದು ಸಂಸ್ಕೃತ ; ಕನ್ನಡವೂ ಬಂಗಾಳಿಯಂತೆ ಮುಂದುವರಿಯದೇ ಇರುವುದಕ್ಕೆ, ಈಚೆಗೆ ಕನ್ನಡ ಸಂಸ್ಕೃತಗಳು ಒಂದರ ಮುಖವನ್ನು ಮತ್ತೊಂದು ನೋಡದಂತಾಗಿರುವುದೇ ಕಾರಣ. ಸಂಸ್ಕೃತವು ಪ್ರಸರಿಸಿರುವ ಕಡೆಗಳಲ್ಲೆಲ್ಲಾ ಅದು ದೇಶಭಾಷೆಗಳನ್ನು ಅನುಗ್ರಹಿಸಿ ಪುಷ್ಟವಾಗಿ ಮಾಡಿದೆಯೇ ಹೊರತು ಯಾವುದನ್ನೂ ಕೊಂದಿರುವುದಿಲ್ಲ. ಮತ್ತೊಂದು ಸಂಗತಿ ಏನೆಂದರೆ, ಇಂಡಿಯಾದೇಶದ ಯಾವಯಾವ ಪ್ರದೇಶಗಳಲ್ಲಿ ಜನಸಾಮಾನ್ಯರು ಸಂಸ್ಕೃತವನ್ನು ಓದಿರುತ್ತಾರೋ ಅಲ್ಲೆಲ್ಲಾ ಹಿಂದೂಜಾತಿ ಭೇದಗಳಿದ್ದರೂ ಆಯಾ ಪಂಗಡಗಳಿಗೆ ಪರಸ್ಪರ ವೈಷಮ್ಯವು ಬಹಳ ಕಡಿಮೆಯಾಗಿದೆ. ಉಚ್ಚಭಾವಗಳು ಎಲ್ಲರಿಗೂ ಒಂದೇ ಆದ್ದರಿಂದ ಅವರು ತಮ್ಮೊಳಗಣ ಪರಸ್ಪರ ಭೇದವನ್ನು ಬಹುಮಟ್ಟಿಗೆ ಮರೆಯಲು ಅವಕಾಶವಾಗಿದೆ. ಹೀಗೆ ಸಂಸ್ಕೃತವು ಒಂದುವಿಧದಲ್ಲಿ ಪರಸ್ಪರ ಅನ್ಯೋನ್ಯತೆಗೆ ಸಹಕಾರಿಯಾಗಿದೆ.

ಈಗ, ಭರತಖಂಡದ ಐಕಮತ್ಯಸಂಪಾದನೆಯು ನಮ್ಮ ದೇಶದಲ್ಲಿ ಎಲ್ಲರ ಮನಸ್ಸನ್ನೂ ವೇಧಿಸುತ್ತಿರುವ ಮುಖ್ಯವಿಚಾರಗಳಲ್ಲಿ ಒಂದು. ಹಿಂದೂ ಸಮಾಜದಲ್ಲಿರುವ ಐಕಮತ್ಯಾಭಾವವೆಂಬ ಈ ದೊಡ್ಡ ನ್ಯೂನತೆಯು ಈಗತಾನೇ ನಮ್ಮ ಮನಸ್ಸಿಗೆ ಗೋಚರವಾಗಿದೆಯೆಂದು ಕೆಲವರು ಹೇಳುತ್ತಾರೆ. ಆದರೆ ವಸ್ತುತಃ, ಸಾವಿರಾರುವರ್ಷಗಳಹಿಂದೆಯೇ ಸಂಸ್ಕೃತವು ಈ ಏಕೀಕರಣ ಕಾರ್ಯವನ್ನು ಆರಂಭಿಸಿ ಅಂದಿನಿಂದಲೂ ನಡೆಸಿಕೊಂಡೇ ಬರುತ್ತಿದೆ. ಅದು ಹೇಗೆಂದರೆ :—ಹಿಂದೆ ಹೇಳಿದಂತೆ ಸಂಸ್ಕೃತದ ಬೆಂಬಲದಿಂದ ನೂರಾರು ದೇಶಭಾಷೆಗಳು ಪುಷ್ಟವಾಗಿವೆ. ಇಂಡಿಯಾ ದೇಶದಲ್ಲಿರತಕ್ಕ ಇಪ್ಪತ್ತೆಂಟುಕೋಟಿ ಹಿಂದೂ ಜನರಲ್ಲಿ, ಇಪ್ಪತ್ತಾರುಕೋಟಿಯಷ್ಟು ಪ್ರಜೆಗಳು ಸಂಸ್ಕೃತದಿಂದ ಉತ್ಪನ್ನವಾದ ಅಥವಾ ಸಂಸ್ಕೃತದಿಂದ ಉಪಕೃತವಾದ ಭಾಷೆಯನ್ನು ಆಡುತ್ತಿದ್ದಾರೆ. ಇದು ಏಕೀಕರಣಕಾರ್ಯವಲ್ಲವೇ ? ಈಗ ಈ ಅಂಶದಲ್ಲಿ ಫಲಪ್ರಾಪ್ತಿಯು ಬೇಗ ಆಗಬೇಕೆಂದಿದ್ದರೆ ಸಂಸ್ಕೃತವು ನಮಗೆ ಸಾವಿರಾರು ವರ್ಷಗಳಿಂದ ಕಲ್ಪಿಸಿಕೊಟ್ಟಿರುವ ಆನುಕೂಲ್ಯಗಳನ್ನೆಲ್ಲಾ ಒಗೆದುಬಿಟ್ಟರೆ ನಾವು ವಿವೇಕಿಗಳಾಗುವೆವೇ ? ಹೀಗಿದ್ದರೂ, ಸಂಸ್ಕೃತದಿಂದ ಅಭಿವೃದ್ಧಿಗೆ ಬಂದಿರುವ ದೇಶಭಾಷೆಗಳೇ '' ಸಂಸ್ಕೃತವನ್ನು ತಳ್ಳಿ ! ದೇಶವನ್ನು ಹೋಳುಹೋಳುಮಾಡಿ ಒಬ್ಬರ ಗುರುತು ಮತ್ತೊಬ್ಬರಿಗೆ ಹತ್ತದಂತೆ, ಆದಷ್ಟು ಜಾಗ್ರತೆಯಾಗಿ ಆದಷ್ಟು ಎತ್ತರವಾದ ದೇಶಭಾಷೆಗಳೆಂಬ ಗೋಡೆಗಳನ್ನು ಹಾಕಿಬಿಡೋಣ '' ಎಂದು ಕೂಗಿ

ಕೊಳ್ಳುತ್ತಿವೆ. ಪ್ರಾಯಶಃ ಇನ್ನುಮೇಲೆ, "ಕೂಡಿದ್ದರೆ ಕೆಡುತ್ತೇವೆ, ಬೇರೆಬೇರೆಯಾಗಿದ್ದರೆ ಬದುಕುತ್ತೇವೆ" ಎಂಬುದು ನಮಗೆ ಮೂಲಮಂತ್ರವಾಗುತ್ತದೆಯೆಂದು ತೋರುತ್ತದೆ. ಹಿಂದೆ ಪಾರ್ಶಿ ಮಾತನ್ನು ಆಡುತ್ತಿದ್ದ ಪಾರ್ಶಿಜನರು ಆ ಭಾಷೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಸಾಂಸ್ಕೃತಿಕ ಭಾಷೆಯಾದ ಗುಜರಾತಿಯನ್ನು ಮಾತೃಭಾಷೆಯಾಗಿ ಹಿಡಿದದ್ದರಿಂದ ಅವರು ನಮ್ಮವರಾದರು. ಇಂಥ ಕಾರ್ಯಗಳಿಂದ, ಹಿಂದೆ ಹೇಳಿದಂತೆ, ಜನರಲ್ಲಿ ಐಕಮತ್ಯವುಂಟಾಗಿ ಸಮಾಜಕ್ಕೆ ದಾರ್ಢ್ಯವು ಬಂದು, ಸಮುದಾಯಸಂರಕ್ಷಣೆಯಾಗುತ್ತದೆ. ಅವರವರ ಮಾತೃಭಾಷೆಯು ಅವರವರಿಗೆ ಮಹೋಪಯುಕ್ತವಾಗಿದ್ದು ತಮ್ಮಲ್ಲಿ ಒಕ್ಕಟ್ಟಿಗೆ ಕಾರಣವಾಗುತ್ತದೆಂಬುದೇನೋ ನಿಜ. ಆದರೆ ಹಿಂದೂಜನ ಜೀವನವನ್ನು ಒಟ್ಟಿಗೆ ತೆಗೆದುಕೊಂಡರೆ ಸಂಸ್ಕೃತವೂ ಮಾತೃಭಾಷೆಯಷ್ಟೇ ಮುಖ್ಯವಾಗಿದ್ದು ಅದೂ ಒಂದುವಿಧದಲ್ಲಿ ಐಕಮತ್ಯಕ್ಕೆ ಸಾಧಕವಾಗಿದೆಯೆಂಬುದೂ ನಿಜ. ಸಂಸ್ಕೃತಕ್ಕೂ ಕನ್ನಡಕ್ಕೂ ಸಹವಾಸವು ತಪ್ಪಿದರೆ ಅದು ದುರ್ದೈವವೇ ಸರಿ; ಹಾಗಲ್ಲದೆ ಅನ್ಯೋನ್ಯವಾಗಿ ಹೋಗುತ್ತಿದ್ದರೆ ಅದು ಶ್ರೇಯಸ್ಕರವೆಂಬುದರಲ್ಲಿ ಸಂದೇಹವಿಲ್ಲ.

ಈಗ ಸಂಸ್ಕೃತಭಾಷಾ ವಿಚಾರವನ್ನು ಬಿಟ್ಟು ಸಾಂಸ್ಕೃತಿಕಭಾವ ಅಥವಾ ಜ್ಞಾನವನ್ನು ತೆಗೆದುಕೊಂಡು, ಅದು ಹಿಂದೆ ತಲೆತಲಾಂತರದವರೆಗೂ ಸಜೀವವಾಗಿದ್ದು ಬೆಳೆದುಕೊಂಡು ಬಂದದ್ದು ಹೇಗೆ ಎಂಬುದನ್ನು ಯೋಚಿಸೋಣ :—

ಯಾವುದಾದರೂ ಒಂದು ಭಾಷೆಯಾಗಲಿ ಸಾಹಿತ್ಯವಾಗಲಿ ಬದುಕಿರುವುದರ ಲಕ್ಷಣಗಳೇನು? ಒಂದು ಗಿಡ ಅಥವಾ ಪ್ರಾಣಿಯು ಬೆಳೆಯುತ್ತಲೋ ಅಥವಾ ಹೆಚ್ಚುತ್ತಲೋ ಇದ್ದರೆ ಅದು 'ಬದುಕಿದೆ' ಎಂದು ಹೇಳುತ್ತೇವೆ. ಬೆಳೆಯುವುದಕ್ಕೆ ಬೇಕಾದ ಆಹಾರಪದಾರ್ಥಗಳನ್ನು ತೆಗೆದುಕೊಳ್ಳುತ್ತಿದ್ದು ಅವುಗಳನ್ನು ಜೀರ್ಣಿಸಿಕೊಳ್ಳುತ್ತಿದ್ದರೆ ಅದೂ ಜೀವವಿರುವುದರ ಚಿಹ್ನೆ. ಈ ಕಾರ್ಯಗಳು ನಿಂತುಹೋದರೆ, ಆಗ ಮೃತಿಲಕ್ಷಣಗಳಿವೆಯೆಂದು ಹೇಳುತ್ತೇವೆ. ಆಹಾರಸಾಮಗ್ರಿಯೆಂದರೆ ಹೊರಗಿರುವ ಅನುಕೂಲವಾದ ಪದಾರ್ಥವಿಶೇಷ; ಜೀರ್ಣಿಸಿಕೊಳ್ಳುವುದೆಂದರೆ ಇಂಥ ಹೊರಗಿನ ಪದಾರ್ಥಗಳನ್ನು ಸ್ವದೇಹಸಾಮಗ್ರಿಯಾಗಿ ತಿರುಗಿಸಿಕೊಳ್ಳುವಿಕೆ. ಹಾಗೆಯೇ ಒಂದು ಭಾಷೆಯೋ ಸಾಹಿತ್ಯವೋ ವಿದ್ಯೆಯೋ ಬೆಳೆಯುತ್ತಿರುವವರೆಗೆ—ಎಂದರೆ, ತನ್ನಲ್ಲಿರುವ ಭಾವಗಳಲ್ಲದೆ ಬೇರೆ ಹೊಸ ಭಾವಗಳನ್ನು ತೆಗೆದುಕೊಳ್ಳುತ್ತಿದ್ದು ಅವುಗಳನ್ನು ಅರಗಿಸಿಕೊಂಡು ಭಾವಾಂತರಗಳನ್ನು ತೋರ್ಪಡಿಸುತ್ತಿರುವವರೆಗೆ—'ಬದುಕಿರುತ್ತದೆ' ಎಂದು ಹೇಳಬಹುದು. ಈ ವಿಧವಾದ ಬೆಳವಣಿಗೆಯು—ಜೀವಚಿಹ್ನೆಯು—ಪ್ರಾಚೀನ ಸಂಸ್ಕೃತಜ್ಞಾನಕ್ಕೆ ಒಂದು ವಿಶೇಷ ಲಕ್ಷಣ.

ಅದು ಬಾಹ್ಯಜಗತ್ತಿನಿಂದಲೂ, ತಮ್ಮ ಪ್ರತಿಪಕ್ಷದವರ ಭಾವಗಳಿಂದಲೂ ಆಹಾರ ಸಾಮಗ್ರಿಯನ್ನು ತೆಗೆದುಕೊಳ್ಳುತ್ತಿತ್ತು. ಕಪಿಲರೇ ಆಗಲಿ ಗೌತಮರೇ ಆಗಲಿ, ಶಂಕರಾಚಾರ್ಯರೇ ಆಗಲಿ ರಾಮಾನುಜಾಚಾರ್ಯರೇ ಆಗಲಿ, ಹೊಸ ಭಾವಗಳು ಇಲ್ಲದೆ ಹೋಗಿದ್ದು ಮತಾಂತರ ವಿಷಯಗಳನ್ನು ಚರ್ಚಿಸದೆ ಇದ್ದಿದ್ದರೆ ಅವರು ಬರೆದಿರುವ ಉದ್ಗ್ರಂಥಗಳನ್ನು ಬರೆಯುವುದಕ್ಕೆ ಅವರಿಗೆ ಅವಲಂಬನವಿಷಯವೇ ಇರುತ್ತಿರಲಿಲ್ಲ. ಅವರು ತಮ್ಮ ಮೇಲೆ ಎದುರುವಾದಿಸಿದವರನ್ನು ಖಂಡಿಸುವುದಕ್ಕೆ ಅನೇಕ ವೇಳೆ ಪ್ರಾಚೀನಾಭಿಪ್ರಾಯಗಳನ್ನು ತ್ಯಜಿಸಿ ನವೀನಾಭಿಪ್ರಾಯಗಳನ್ನು ಅವಲಂಬಿಸಬೇಕಾಯಿತು. ಪ್ರಾಚೀನಕಾಲದ ಹಿಂದೂಜನರು ಸ್ವದೇಶದಲ್ಲಿ ತಮ್ಮ ಬುದ್ಧಿಗೆ ವಿಷಯಸಾಮಗ್ರಿ ಸಿಕ್ಕದಿದ್ದರೆ ಪರದೇಶದಿಂದ ಜ್ಞಾನಸಂಗ್ರಹ ಮಾಡುವುದಕ್ಕೆ ಹಿಂದೆಗೆಯುತ್ತಿರಲಿಲ್ಲ. ವರಾಹಮಿಹಿರಾಚಾರ್ಯರು ಇದಕ್ಕೆ ಒಂದು ಉದಾಹರಣೆ; ಅವರು ಗ್ರೀಕರ ಮತ್ತು ರೋಮನರ ಭಾವಗಳನ್ನು ತೆಗೆದುಕೊಂಡಿದ್ದಾರೆ. ಶ್ರೀಮದ್ ಮಧ್ವಾಚಾರ್ಯರು ಅರಬ್ಬಿಯವರ ದರ್ಶನಗಳನ್ನೂ ಸಹ ತಿಳಿದುಕೊಂಡಿದ್ದರೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಮಹಾಭಾರತ ಮುಂತಾದ ಗ್ರಂಥಗಳಿಂದ ತಿಳಿದುಬರುವಂತೆ, ಹಿಂದೂಜನರು ದೇಶಾಂತರಗಳಲ್ಲಿ ಬಹುದೂರ ಸಂಚಾರ ಮಾಡಿ ಹೊಸ ವಿಷಯಗಳನ್ನು ಸಂಗ್ರಹಮಾಡಿದರು. ಹೀಗೆ ಸಂತತವಾಗಿ ವಿಷಯಸಂಪಾದನೆ ಇದ್ದದ್ದರಿಂದ ಸಂತತವಾಗಿ ಬುದ್ಧಿಯೂ ಕೆಲಸಮಾಡಬೇಕಾಗಿ ಬಂತು; ಆದರಿಂದ ನಮ್ಮ ಪ್ರಾಚೀನ ಸಂಸ್ಕೃತವಿದ್ಯೆಯಲ್ಲಿ ಬೆಳೆವಣಿಗೆಯ ಚಿಹ್ನೆಗಳೂ ಜೀವಕಳೆಯೂ ತುಂಬಿದ್ದುವು. ಆದರಂತೆಯೇ ಈಗಿನಕಾಲದಲ್ಲಿ ಈ ಸಂಸ್ಕೃತವಿದ್ಯೆಯು ಯಾವ ಯಾವ ರೀತಿಯಲ್ಲಿ ತನ್ನ ಸಜೀವತೆಯ ಲಕ್ಷಣಗಳನ್ನು ತೋರ್ಪಡಿಸಿದೆ? ಅದು ಬೆಳೆಯುತ್ತಿದ್ದರೆ ಅದರ ಅಂಕುರಗಳಾವುವು? ಆಹಾರಸಾಮಗ್ರಿಯನ್ನು ತೆಗೆದುಕೊಂಡು ಅರಗಿಸಿಕೊಳ್ಳುತ್ತಿದ್ದರೆ ಆಧುನಿಕಪ್ರಪಂಚದಿಂದ ಅದು ತೆಗೆದುಕೊಂಡಿರುವ ಭಾವಗಳು ಯಾವುವು? ಎಲ್ಲೆಲ್ಲಿ ನೋಡಿದರೂ, ಕಾಲಿಫ್ ಓಮರನ ಹೇಳಿಕೆಯಂಥ ನೀರಸವಾದ ತರ್ಕದಿಂದ 'ಇರುವುದರಲ್ಲಿಯೇ ಎಲ್ಲಾ ಇದೆ' ಎಂದು ಸಮರ್ಥಿಸುವುದೇ ಕಂಡುಬರುತ್ತಿದೆ. "ಹೊಸದಾಗಿ ಹೇಳುವುದು ಏನೂ ಇಲ್ಲ, ಹೇಳಬೇಕಾದದ್ದೆಲ್ಲವೂ ಹೇಳಿಯಾಗಿ ಹೋಗಿದೆ" ಎಂಬ ಭಾವವೇ ಹೆಚ್ಚಾಗಿದೆ. ಆದರೆ ಭಾರತೀಯರು ಯಾವ ಯಾವ ಶಾಸ್ತ್ರಗಳಲ್ಲಿ ಇತರರಿಗಿಂತಲೂ ಗಟ್ಟಿಗರೆನಿಸಿಕೊಂಡಿದ್ದರೋ ಆ ಶಾಸ್ತ್ರಗಳನ್ನೇ ತೆಗೆದುಕೊಂಡರೂ, ಅವುಗಳಲ್ಲಿಯೂ ಹೊಸವಿಚಾರಕ್ಕೆ ನಿಜವಾಗಿ ಅವಕಾಶವಿಲ್ಲವೇ? ಸಂಸ್ಕೃತವೊಂದನ್ನೇ ವ್ಯಾಸಂಗಮಾಡಿದವರಿಗೆ ಅಂಥ ವಿಚಾರದ ಆವಶ್ಯಕತೆಯಿಲ್ಲವೆಂದು ತೋರಿದರೂ ಇತರ ಭಾಷಾಗ್ರಂಥಗಳನ್ನು ವ್ಯಾಸಂಗ

ಮಾಡಿದ ಆಧುನಿಕರಿಗೆ ಸಾಂಸ್ಕೃತಿಕರ ಭಾವಗಳಲ್ಲಿ ನಾನಾ ವಿಧವಾದ ಸಂದೇಹಗಳು ಹುಟ್ಟಿ ಅವುಗಳ ನಿವಾರಣೆಗಾಗಿ ವಿಚಾರವು ಆವಶ್ಯಕವೆನ್ನಿಸುತ್ತದೆ......

ಹಿಂದೂ ಜನರು ಪ್ರಾಚೀನಕಾಲದಲ್ಲಿ ಎಷ್ಟೋ ಇತಿಹಾಸಗ್ರಂಥಗಳನ್ನು ಬರೆದರು; ಆದರೆ ನಮ್ಮವರು ಈಗ ಸುಮಾರು ೫೦೦ ವರ್ಷಗಳಿಂದ ಅಂಥ ಒಂದು ಗ್ರಂಥವನ್ನೂ ಬರೆದಿರುವಹಾಗೆ ತೋರುವುದಿಲ್ಲ. ಈಚೀಚೆಗೆ ಬರೆದ ಭಾಷಾಂತರಗಳೇನೋ ಇವೆ; ಅವಿರಲಿ. ಅವಲ್ಲದೆ ಮೇಲೆಹೇಳಿದ ಕಾಲದಲ್ಲಿ ನಡೆದ ಸಂಗತಿಗಳನ್ನು ಚರಿತ್ರರೂಪವಾಗಿ ತಿಳಿಸತಕ್ಕ ಗ್ರಂಥಗಳೆಷ್ಟಿವೆ? ಇಲ್ಲವೇ ಇಲ್ಲವೆಂದು ಹೇಳಿದರೂ ಹೇಳಬಹುದು; ಆದ್ದರಿಂದಲೇ ನಡೆದ ಸಂಗತಿಗಳನ್ನೂ ಅವುಗಳ ಕಾಲವನ್ನೂ ಯಥಾವತ್ತಾಗಿ ನಿರೂಪಿಸುವ ಶಕ್ತಿಯೇ ನಮ್ಮಲ್ಲಿ ನಷ್ಟವಾಗಿಬಿಟ್ಟಿದೆಯೆಂದೂ ಕಥಾಪ್ರಪಂಚದಲ್ಲಿಯೇ ನಮಗೆ ಆಶೆಯೆಂದೂ ಕೆಲವರು ಹೇಳುತ್ತಾರೆ. ವಸ್ತುತಃ, 'ಮಿಕ್ಕ ಜನಾಂಗದವರು ಸೌಭಾಗ್ಯವನ್ನು ಪಡೆದದ್ದು ಯಾವಕ್ರಮಗಳಿಂದ? ನಮ್ಮಲ್ಲಿರುವ ಯಾವ ಲೋಪಗಳಿಂದ ನಾವು ಹೀಗಾಗಿದ್ದೇವೆ' ಎಂಬುದನ್ನು ನಾವು ವಿಚಾರಮಾಡಿದ್ದೇವೆಯೇ? ನಮ್ಮ ಪ್ರಾಚೀನ ಸಾಹಿತ್ಯವನ್ನು ನೋಡಿದರೆ, ಅದರಲ್ಲಿ ಅರ್ಥಶಾಸ್ತ್ರದಮೇಲೂ ರಾಜ್ಯಶಾಸ್ತ್ರದಮೇಲೂ ದೊಡ್ಡದೊಡ್ಡ ಗ್ರಂಥಗಳು ಕಂಡುಬರುತ್ತವೆ. ಆದರೆ, "ಹಿಂದೂಜನರಲ್ಲಿ ಪ್ರತಿಯೊಬ್ಬನೂ ಅವನವನಮಟ್ಟಿಗೆ ಅವನವನ ಧರ್ಮವನ್ನು ಅನುಸರಿಸಿಕೊಂಡು ಹೋಗುವುದನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆ; ಆದರೆ ಹತ್ತುಜನರಲ್ಲಿ ಇರುವಾಗ ಸಮುದಾಯಕ್ಕೋಸ್ಕರ ನಡೆದುಕೊಳ್ಳಬೇಕಾದ ತನ್ನ ಪೌರ, ಸಾಮಾಜಿಕ ಮತ್ತು ದೇಶೀಯ ನಡೆವಳಿಕೆ ಹೇಗಿರಬೇಕು ಎಂಬುದನ್ನೇ ಅವರು ಅರಿಯರು. ಅಷ್ಟೇಕೆ, National, Social, ಅಥವಾ Civic ಎಂಬ ಮಾತುಗಳಿಂದ ಆಧುನಿಕರಿಗೆ ಎಷ್ಟು ಅರ್ಥವಾಗುತ್ತದೆಯೋ ಅಷ್ಟು ಭಾವವನ್ನೆಲ್ಲಾ ಕೊಡುವ ಒಂದೊಂದು ಶಬ್ದವು ಸಂಸ್ಕೃತಭಾಷೆಯಲ್ಲಿಯೇ ಇಲ್ಲ." ಎಂದು ದೊಡ್ಡ ವಿದ್ವಾಂಸರು ಹೇಳಿದ್ದಾರೆ. ಇದು ನಿಜವೇ?

ಮತ್ತೊಂದು ಸಂಗತಿ......... ಅಭಿವೃದ್ಧಿಶೀಲರಾಗಿದ್ದ ನಮ್ಮ ಪೂರ್ವಿಕರು ತಮ್ಮ ಸುತ್ತುಮುತ್ತಿನ ಸ್ಥಿತಿಗತಿಗಳನ್ನು ಚೆನ್ನಾಗಿ ಗ್ರಹಿಸಿ ಆಯಾ ಕಾಲಕ್ಕೆ ತಕ್ಕಂತೆ ಒಂದರಮೇಲೊಂದು ಧರ್ಮಶಾಸ್ತ್ರವನ್ನು ರಚಿಸಿಟ್ಟರು. ಇಂಥ ಅನುಕೂಲ್ಯವನ್ನು ಪ್ರಾಚೀನಕಾಲದ ಇತರ ಜನಾಂಗಗಳಲ್ಲಿ ಯಾರೂ ಮಾಡಿಲ್ಲ. ಮುಂದೆ ಹೊಸಹೊಸ ಸನ್ನಿವೇಶಗಳು ಒದಗಿದಾಗ ತಮ್ಮ ಮಕ್ಕಳು ಅವುಗಳನ್ನು ಅನುಕೂಲವಾಗುವಂತೆ ಹೊಂದಿಸಿಕೊಳ್ಳಲಿ ಎಂದು ಕಾಲದೇಶವರ್ತಮಾನಗಳನ್ನು ಅನುಸರಿಸಿ ಸ್ಮೃತಿಗಳು ವ್ಯತ್ಯಾಸವಾಗಲೇಬೇಕೆಂದು ಅವರು ಬಾಯಿಬಿಟ್ಟು ಹೇಳಿದ್ದಾರೆ. ಹಾಗೆ

ಮಾಡದಿದ್ದರೆ, ಜನಾಂಗವೇ ನಷ್ಟವಾದೀತೆಂದು ಅವರು ತಿಳಿದಿದ್ದರು. ಹೀಗಿರಲು, ಈಗಿನಕಾಲಕ್ಕೆ ಅನುಕೂಲವಾದ ಧರ್ಮಶಾಸ್ತ್ರ ಒಂದನ್ನಾದರೂ ರಚಿಸುವ ಯೋಚನೆಯನ್ನು ನಾವು ಮಾಡಿದ್ದೇವೆಯೇ? ಹಿಂದಿನ ಸ್ಮೃತಿಗಳಿಗೇ ಎಲ್ಲರೂ ತಮ್ಮ ತಮ್ಮ ಮನಸ್ಸಿಗೆ ಬಂದಂತೆ ತಾವು ಅರ್ಥಮಾಡುತ್ತ, ಒಬ್ಬರನ್ನೊಬ್ಬರು ಖಂಡಿಸುತ್ತ, ಈಗಿನ ಸ್ಥಿತಿಗತಿಗಳಿಂದ ಉಂಟಾಗಿರುವ ಕಷ್ಟಗಳನ್ನು ನೋಡಿ ಸ್ತಂಭೀಭೂತರಾಗಿ, ಲಕ್ಷ್ಯವನ್ನೇ ಅರಿಯದೆ, 'ಯಾವಕಡೆಗೆ ಹೋದರೆ ಆಕಡೆಯೇ ಆಯಿತು' ಎಂದು ಕಾಲವನ್ನು ತಳ್ಳುತ್ತಿದ್ದೇವೆ.

ಸಂಸ್ಕೃತಜ್ಞಾನವು ಇಂಥ ಸಂದರ್ಭಗಳಲ್ಲಿ ಸಮಾಧಾನ ಹೇಳಲಾರದೆ, ಹಿಂದೂಜನರು ಆ ಸಮಾಧಾನಗಳಿಗಾಗಿ ಅನ್ಯತ್ರ ಹುಡುಕಿಕೊಂಡು ಹೋಗಬೇಕಾಗಿದ್ದರೆ ಸಂಸ್ಕೃತವನ್ನು ನಾವು ಬಿಡಬಾರದೆಂಬ ಅಭಿಮಾನವು ನಮಗೆ ಹೇಗೆ ಬರಬೇಕು?

ಈಗ, ನಾವು ಪ್ರತಿನಿತ್ಯವೂ ಇತರ ಭಾಷೆಗಳಿಂದ ಶಬ್ದಗಳನ್ನು ತೆಗೆದುಕೊಳ್ಳಲೇಬೇಕಾಗಿ ಬಂದಿದೆ. ಹಾಗೆ ತೆಗೆದುಕೊಳ್ಳದೆ ಇದ್ದರೆ ನಿತ್ಯಗಟ್ಟಲೆಯ ಸಂಸಾರ ವ್ಯವಹಾರಗಳೇ ನಡೆಯುವಂತಿಲ್ಲ. ಹೀಗಿರಲು ನಮ್ಮ ಸಂಸ್ಕೃತಜ್ಞಾನವೂ ಆಚರಣೆಗಳೂ ಹೊಸಹೊಸ ಭಾವಗಳೆಂಬ ಆಹಾರವಿಲ್ಲದೆ ಬದುಕಿ ಬೆಳೆಯಬಹುದೆಂದು ಹೇಳುವುದಕ್ಕಾದೀತೇ?

ಹೀಗೆಂದರೆ, ಪ್ರತಿಯೊಬ್ಬರೂ ಇಂಗ್ಲಿಷ್ ಭಾಷೆಯನ್ನೋ ಜರ್ಮನ್ ಭಾಷೆಯನ್ನೋ ಓದಬೇಕೆಂಬುದು ನನ್ನ ಆಶಯವಲ್ಲ. ಪ್ರತಿಯೊಬ್ಬರೂ ಆಧುನಿಕಪ್ರಪಂಚದ ವಿಚಾರಗಳನ್ನು ಪರಿಚಯಮಾಡಿಕೊಳ್ಳುತ್ತಿರಬೇಕು. ಈ ನನ್ನ ಸೂಚನೆಯಲ್ಲಿ ಹೊಸದಾಗಲಿ ವಿಚಿತ್ರವಾದದ್ದಾಗಲಿ ಯಾವುದೂ ಇಲ್ಲ. ಸಂಸ್ಕೃತವು ಹೊಸಭಾವಗಳೆಂಬ ಆಹಾರವನ್ನು ತೆಗೆದುಕೊಂಡು ಬೆಳೆಯುತ್ತ ಸಜೀವವಾಗಿರುವಂತೆ ಮಾಡುವುದರಲ್ಲಿ ನಾವೂ ನಮ್ಮ ಋಷಿಗಳನ್ನೂ ಪೂರ್ವಿಕರನ್ನೂ ಅನುಸರಿಸಬೇಕೆಂಬುದಿಷ್ಟೇ ನನ್ನ ಪ್ರಾರ್ಥನೆ.

ಸಂಸ್ಕೃತಜ್ಞಾನವು, ಅದರಲ್ಲಿಯೂ ವಿಶೇಷವಾಗಿ ಸಂಸ್ಕೃತಭಾಷೆಯ ಮೂಲಕ ತಿಳಿದುಬರುವ ಜ್ಞಾನವು ಅಪಾರಶಕ್ತಿಗರ್ಭಿತವಾಗಿದೆ. ಈ ಶಕ್ತಿಯೇ ಮಹಾಪ್ರಬಲವಾದ ಧಾರ್ಮಿಕಸತ್ತ್ವವಾಗುತ್ತದೆ; ಈ ಶಕ್ತಿಯೇ ಜನಾಂಗದ ಏಕೀಕರಣ ಸಂರಕ್ಷಣಕಾರ್ಯಗಳಲ್ಲಿ ಸಹಾಯವಾಗುವ ಸಾಮಾಜಿಕ ಸಾಮರ್ಥ್ಯವಾಗುತ್ತದೆ; ಇವೆಲ್ಲಕ್ಕಿಂತಲೂ ಮುಖ್ಯವಾಗಿ ಅದು ಕೆಲವು ಅಮೋಘವಾದ, ಎಲ್ಲೆಲ್ಲಿಯೂ ದೊರಕದಂಥ, ಆಧ್ಯಾತ್ಮಿಕ ತತ್ತ್ವಗಳನ್ನು ಪ್ರಪಂಚದ ಆದ್ಯಂತಕ್ಕೂ ಬೋಧಿಸತಕ್ಕದ್ದಾಗಿದೆ. ಆದರೆ, ಸಂಸ್ಕೃತವು ಸಜೀವವಾಗಿರುವಂತೆ ನಾವೆಲ್ಲರೂ ಪ್ರಯತ್ನಮಾಡಿದ ಹೊರತು ಗೂಢವಾಗಿರುವ ಈ ಶಕ್ತಿಯು ಹೊರಹೊಮ್ಮಲಾರದು..........

ಕರ್ಣಾಟಕ ಚಿತ್ರಕಲೆಯ "ತಾತ್ತ್ವಿಕಸಂಪ್ರದಾಯ"

ಮತ್ತು

ಮೈಸೂರಿನ ಮ॥ ಚಿತ್ರಗಾರ ಕೇಶವಯ್ಯನವರು.

ಈಗಿನ ಕಲಾಪ್ರಪಂಚದಲ್ಲಿ ತಾತ್ತ್ವಿಕಸಂಪ್ರದಾಯ ಮತ್ತು ಆದರ್ಶಸಂಪ್ರದಾಯ ಎಂದು ಎರಡು ಸಂಪ್ರದಾಯಗಳಿರುವುವೆಂದೂ, ಅವುಗಳಲ್ಲಿ ಮೊದಲನೆಯದು ಪಾಶ್ಚಾತ್ಯಪದ್ಧತಿಯ ಫಲವೆಂದೂ ಎರಡನೆಯದು ಇದಕ್ಕೆ ಪ್ರತಿಪಕ್ಷವಾಗಿ ಆರಂಭವಾದದ್ದೆಂದೂ ಹಿಂದಿನ ಸಂಚಿಕೆಯಲ್ಲಿ ತಿಳಿಸಿ ಮ|| ಕೆ. ವೆಂಕಟಪ್ಪನವರ ಕಲಾನಿರ್ಮಾಣದಿಂದ ಇವೆರಡು ಸಂಪ್ರದಾಯಗಳಿಗೂ ಉದಾಹರಣೆಗಳನ್ನೂ ಕೊಟ್ಟೆವು.

ಈ ಸಂಚಿಕೆಯಲ್ಲಿ ತಾತ್ವಿಕಸಂಪ್ರದಾಯದಲ್ಲಿ ಸುಪ್ರಸಿದ್ಧ ಚಿತ್ರಗಾರರಾದ ಮೈಸೂರಿನ ಮ|| ಕೆ. ಕೇಶವಯ್ಯನವರ ಎರಡು ಚಿತ್ರಗಳನ್ನು ಕೊಟ್ಟಿದೆ. ಮ|| ಕೇಶವಯ್ಯನವರು ಮೈಸೂರು ರಾಜರ ಆಸ್ಥಾನದಲ್ಲಿ ವಂಶಪಾರಂಪರ್ಯವಾಗಿ ಚಿತ್ರಗಾರ ಕೆಲಸದಲ್ಲಿದ್ದ ಮನೆತನದೊಳಗೆ ಹುಟ್ಟಿ, ಪಾಶ್ಚಾತ್ಯ ಕಲೆಯನ್ನು ಅಭ್ಯಾಸಮಾಡಿದರು. ದಾಕ್ಷಿಣಾತ್ಯ ಕುಶಲಕಲೆಗಳ ಚರಿತ್ರೆಯನ್ನು ನೋಡಿದರೆ ಅದರಲ್ಲಿ ಮೈಸೂರಿನ ಭಾಗವೇನು ಕಡಿಮೆಯಾಗಿಲ್ಲ. "ಮೈಸೂರು ಸಂಪ್ರಧಾಯ" ವೆನ್ನಬಹುದಾದ ಬೇರೆ ಒಂದು ಸಂಪ್ರದಾಯವೇ ಸ್ಥಾಪಿತವಾಗಿ ಅದು ಶ್ರೀ ಮುಮ್ಮಡಿ ಕೃಷ್ಣರಾಜವೊಡೆಯರವರ ಆಳಿಕೆಯಲ್ಲಿ, ಎಂದರೆ ಸುಮಾರು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ, ಅತ್ಯಂತ ಊರ್ಜಿತಸ್ಥಿತಿಗೆ ಬಂತು. ಶ್ರೀಮನ್ಮಹಾರಾಜರವರು ತಮಗೆ ಇಷ್ಟವಾದ ಯಾವುದಾದರೂ ಒಂದು ವಿಷಯವನ್ನು ಆರಿಸಿಕೊಟ್ಟು, ಚಿತ್ರಗಾರರೆಲ್ಲರೂ ಅದೊಂದನ್ನೇ ಚಿತ್ರಿಸಿ ಸ್ಪರ್ಧೆಯಿಂದ ತಮ್ಮ ತಮ್ಮ ಸಾಮರ್ಥ್ಯವನ್ನು ತೋರಿಸಲು ಅದನ್ನು ನೋಡಿ ಬಹುವಾಗಿ ಸಂತೋಷಪಡುವರು. ಮಹಾಸ್ವಾಮಿಯವರೇ ಇದರಲ್ಲಿ ಸ್ವಂತವಾಗಿ ಆಸಕ್ತಿವಹಿಸುತ್ತಿದ್ದದ್ದರಿಂದ ಆ ಚಿತ್ರಗಾರರ ಪ್ರಾಶಸ್ತ್ಯವೂ ಯಶಸ್ಸೂ ವಿಶೇಷವಾಗಿದ್ದುವು. ಹೀಗೆ ಮಹಾರಾಜರವರ ಅನುಗ್ರಹಕ್ಕೆ ಪಾತ್ರರಾದ ನಾಲ್ಕಾರು ಜನರಲ್ಲಿ ಚಿತ್ರಗಾರ ತಿಪ್ಪಣ್ಣನವರೆಂಬವರೊಬ್ಬರಿದ್ದರು. ಅವರು ರಾಜಾಸ್ಥಾನದಲ್ಲಿದ್ದು ಚಿತ್ರಕಲಾಕೌಶಲಕ್ಕಾಗಿ ನಾನಾವಿಧವಾದ ಸನ್ಮಾನಗಳನ್ನು ಪಡೆದರು. ಮ|| ಕೇಶವಯ್ಯನವರು ಈ ತಿಪ್ಪಣ್ಣನವರ ಮೊಮ್ಮಕ್ಕಳು. ಇವರು ಪ್ರಾಚ್ಯ ಮತ್ತು ಪಾಶ್ಚಾತ್ಯ ಈ ಎರಡು ಚಿತ್ರ ಪದ್ಧತಿಗಳಲ್ಲಿಯೂ ಶಿಕ್ಷಣವನ್ನು ಪಡೆದವರು. ಇವರು ಬಹು ಚಿಕ್ಕವಯಸ್ಸಿನಲ್ಲಿಯೇ ಚಿತ್ರ ವಿದ್ಯಾಭ್ಯಾಸವನ್ನು ಆರಂಭಿಸಿ ಸರ್ಕಾರಿಯಾಗಿ ನಡೆಯುವ ಪರೀಕ್ಷೆಗಳಲ್ಲಿ ಉತ್ತಮತರವಾಗಿ ತೇರ್ಗಡೆಹೊಂದಿ ಪ್ರಸಿದ್ಧಿಗೆ ಬಂದರು. ಉದಾರವಾದ ರಾಜಾಶ್ರಯದ ಸಹಾಯದಿಂದ ಅವರು ತಮ್ಮ ವಿದ್ಯೆಯನ್ನು ಅಭಿವೃದ್ಧಿಪಡಿಸಿಕೊಂಡು ಈಗ ಕನ್ನಡದೇಶದ ಭಾವಚಿತ್ರ ಲೇಖಕರಲ್ಲಿ ಶ್ರೇಷ್ಠರಾದವ

ರೆಂದು ಹೆಸರುಪಡೆದಿದ್ದಾರೆ. ಮ|| ಕೇಶವಯ್ಯನವರು ಇದುವರೆಗೆ ಸಾವಿರಾರು ಭಾವಚಿತ್ರಗಳನ್ನು ಚಿತ್ರಿಸಿದ್ದಾರೆ; ಅವು ಭರತಖಂಡದ ನಾನಾ ಶ್ರೀಮಂತರ ಪ್ರಾಸಾದಗಳನ್ನು ಅಲಂಕರಿಸುತ್ತಿವೆ. ಭಾವಚಿತ್ರಗಳನ್ನು ಯಾರಾದರೂ ಒಬ್ಬರು ಗೊತ್ತಾಗಿ ಹೇಳಿ ಮಾಡಿಸಿದ ಹೊರತು ಬರೆಯುವುದಿಲ್ಲ; ಅವು ಬರೆದು ಸಿದ್ಧವಾದಮೇಲೆ ಚಿತ್ರಕಾರರ ಹತ್ತಿರ ಒಂದು ಅರೆಗಳಿಗೆ ಇರುವುದಿಲ್ಲ. ಅವುಗಳನ್ನು ಅವುಗಳ ಮಾಲಿಕರು ತೆಗೆದುಕೊಂಡುಹೋಗಿಬಿಡುವರು. ಹೀಗಾಗಿ, ಇಲ್ಲಿ ಪ್ರದರ್ಶಿಸುವುದಕ್ಕೆ ಮ|| ಕೇಶವಯ್ಯನವರ ಈಚಿನ ಚಿತ್ರಗಳೊಂದೂ ದೊರೆಯುವಹಾಗಿಲ್ಲ. ಅಲ್ಲದೆ ಅವರು ಈಚೀಚೆಗೆ ಬರೆದ ಚಿತ್ರಗಳೆಲ್ಲಾ ಬಣ್ಣದವು; ಬಣ್ಣದ ಚಿತ್ರಗಳನ್ನು ಅಚ್ಚುಮಾಡಿಸಿ ಹಾಕುವುದಕ್ಕೆ ನಮ್ಮಲ್ಲಿ ಅನುಕೂಲವಿಲ್ಲ. ಆದ್ದರಿಂದ ಅವರು ಮೊದವೊದಲು ಕಪ್ಪುಬಣ್ಣದಲ್ಲಿಯೇ ಬರೆದ ಎರಡು ಚಿತ್ರಗಳನ್ನು ಅವರ ಹಳೆಯಕಡತದಿಂದ ತೆಗೆದು ಈ ಲೇಖನಕ್ಕೆ ಸೇರಿಸಿದ್ದೇವೆ. ಸದ್ಯದಲ್ಲಿಯೇ ಅವರ ಚಿತ್ರಗಳಲ್ಲೊಂದನ್ನು ವರ್ಣಗಳೊಡನೆ ಅಚ್ಚುಮಾಡಿಸಿ ಪಾಠಕರಿಗೆ ಒಪ್ಪಿಸಬೇಕೆಂಬ ಉದ್ದೇಶವಿದೆ.

ಇಲ್ಲಿ ಕೊಟ್ಟಿರುವ ಎರಡು ಚಿತ್ರಗಳ ಪೈಕಿ, ಒಂದು ಒಬ್ಬ ಮಹಾರಾಷ್ಟ್ರದೇಶದ ಮುದುಕಿಯದು; ಇದನ್ನು ನೋಡಿದರೆ 'ಇದರಲ್ಲೇನಿದೆ?' ಎನ್ನಿಸುತ್ತದೆ. ಆದರೂ ಇದರಲ್ಲಿ ತುಂಬ ಕಲಾಕೌಶಲ್ಯವಿದೆ. ಮುಪ್ಪಿನಿಂದ ದೇಹದಲ್ಲಿ ಆಗುವ ಬದಲಾವಣೆಗಳನ್ನೆಲ್ಲಾ ಈ ಚಿತ್ರವು ಬಹುಚೆನ್ನಾಗಿ ಚಿತ್ರಿಸಿದೆ. ಇದಕ್ಕೆ ಭರತಖಂಡದ ನಾನಾ ಪ್ರಾಂತಗಳ ಪ್ರದರ್ಶನಗಳಲ್ಲಿ ಬಹುಮಾನಗಳು ಬಂದಿವೆ. ಇನ್ನೊಂದು ದಕ್ಷಿಣದೇಶದಲ್ಲೆಲ್ಲಾ ಶ್ರೇಷ್ಠರಾದ ಸಂಗೀತ ವಿದ್ವಾಂಸರೆಂದೂ ಭಕ್ತಶಿರೋಮಣಿಗಳೆಂದೂ ಪ್ರಸಿದ್ಧರಾದ ತಿರುವಳ್ಳೂರಿನ ತ್ಯಾಗರಾಜರದು. ಇವರು ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದರು. ಅವರ ಕಲ್ಪನಶಕ್ತಿಯೂ ಪ್ರತಿಭೆಯೂ ಅಮೋಘವಾದವು. ಈಗ ಅವರ ಕೀರ್ತನೆಗಳು ನಮ್ಮ ದೇಶದಲ್ಲಿ ಎಲ್ಲೆಲ್ಲೂ ಪ್ರಸಿದ್ಧವಾಗಿವೆ. ಅವು ಇಲ್ಲದೆ ಯಾವ ಸಂಗೀತಕಛೇರಿಯೂ ಕಳೆಗಟ್ಟುವುದಿಲ್ಲ.

ತ್ಯಾಗರಾಜರು ತೆಳ್ಳಗೆ ಉದ್ದವಾಗಿದ್ದರೆಂದೂ ಎಣ್ಣೆಗೆಂಪಿನ ಬಣ್ಣವೆಂದೂ ಬಹು ಆಚಾರವಂತರಾದ ಭಕ್ತರೆಂದೂ ವರ್ಣಿಸಲ್ಪಟ್ಟಿದ್ದಾರೆ. ಗಾನರಸವೂ ಭಕ್ತಿರಸವೂ ಅವರ ಜೀವನದಲ್ಲಿ ಸೇರಿ ಒಂದಾಗಿಹೋಗಿದ್ದುವು; ಅವರ ಕೀರ್ತನೆಗಳೆಲ್ಲವೂ ಏಕಾದಶಿಯದಿವಸ ರಚಿತವಾದುವೆಂದು ಹೇಳುತ್ತಾರೆ. ಇಲ್ಲಿ ನಾವು ಕೊಟ್ಟಿರುವ ಚಿತ್ರವು, ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ಅರಮನೆಗೆ ಒಂದು ದೊಡ್ಡ ಬಣ್ಣದ ತೈಲಚಿತ್ರವನ್ನು ಬರೆದುಕೊಡುವ ಉದ್ದೇಶದಿಂದ ಅದಕ್ಕೆ ಪೂರ್ವಭಾವಿಯಾಗಿ ಒಂದು ಹಿಂದಿನಕಾಲದ ಚಿತ್ರವನ್ನು ಅನುಸರಿಸಿ ಗುರುತುಮಾಡಿದ್ದಾಗಿದೆ.

———



ಒಬ್ಬ ಮುದುಕಿಯ ಭಾವಚಿತ್ರ

(ಮ|| ಕೆ. ಕೇಶವಯ್ಯನವರು ಬರೆದದ್ದು.)



ತ್ಯಾಗರಾಜರು

ಒಂದು ಹಳೆಯ ಚಿತ್ರವನ್ನನುಸರಿಸಿ ಮ|| ಕೆ. ಕೇಶವಯ್ಯನವರು ಬರೆದದ್ದು.

ಮುದ್ದಣ್ಣ

ನಡುವಗಲ ನೇಸರಿನ ದಳ್ಳಿಸುವ ಕಾಯ್ಪಿನಿಂ
ಕಡುನೊಂದು ನೀರಡಸಿ ಬಾಯಾರಿ ನಿಟ್ಟುಸಿರ
ನಡಿಗಡಿಗೆ ಬಿಡುಬಿಡುತ ಬಸವಳಿದು ಬಲಗುಂದಿ ಕಾಲ್ಗೆಟ್ಟು ಪೋಪೆಡೆಯೊಳು ||
ಸಿಡುಮರನನೊಂದನಾನೆದುರಿನೊಳ್ ಕಾಣುತ್ತೆ
ಕಡುಸಂತಸಂದಾಳ್ದು ಮೆಲ್ನಡೆಯೊಳದರ ನೆಳ
ಲಡಿಯ ನುಣ್ಮಳಲೊಟ್ಟಿಲಂ ಪೊರ್ದಿ ದಣಿವಾರಿಸಲ್ಕೆಂದು ಕುಳಿತೆಸಲ್ಲಿ ||೧||

ಕುಳಿತಿರಲ್ ನಾನಿಂತು ನರುದಂಬುಲಂಮೆಲ್ದು
ಬಳಿಯೊಳಿಪ್ಪೆಳೆವೆಣ್ಣ ಸುಯ್ಯೆಲರನನುಕರಿಸಿ
ಯೆಳೆಗಾಳಿ ತನಿಗಂಪುವೆರಸು ಪರಿದಾಡಲಾನದರಡಿಯನರಿಯಲೆಳ್ದು ||
ಅಳಿವಿಂಡು ಮೊರೆಯುತ್ತ ಪೋಪುದಂ ಕಂಡು ಬೆಂ
ಬಳಿವಿಡಿದು ನಾಲ್ವೆಜ್ಜೆ ಮುಂಬರಿಯಲೊಡನೆ ಕ
ಣ್ಣಳತೆಯೊಳ್ ಬಂದುದೊಂದುಪವನಂ ತವಕದಿಂ ನೋಡಲದನೊಳಸಾರ್ದೆನು ||೨||

ಬೆರಗಾದೆನಳ್ಕಿದೆಂ ಮಿಡುಕಿದೆಂ ಮಮ್ಮಲಂ
ಮರುಗಿದೆಂ ಸುರಿಸಿದೆಂ ಕಂಬನಿಯನಾತೋಂಟ
ದಿರವನೀಕ್ಷಿಸುತೆ ಹಾ ದೈವ! ಹಾ ದೈವ! ಹಾ ದೈವ ! ಎಂದೊದರಿಯುಳುತ್ತೆ ||
ಮುರುಟಿಹುದು ಪೂಬಳ್ಳಿ, ಸುರುಟಿಹುದು ಪಣ್ಮರಂ
ಬರಿದಿಹುದು ನೀರ್ಗೊಳಂ, ಜರಿದಿಹುದು ಬಳ್ಳಿವನೆ,
ಹರಹರಾ ! ಪಣ್ಣಿಲ್ಲ, ಕಾಯಿಲ್ಲ, ಪೂವಿಲ್ಲ, ನನೆಯಿಲ್ಲ, ತಳಿರಿಲ್ಲಲಾ ! ||೩||

ಇರಲಿಂತು ತೋಂಟದೊಳ್ ತೆಂಕಣದ ನೆಲದುದಿಯೊ
ಳರೆವಿರಿದ ಪೂಗಳಿಂದೊಡಲಿಚನ ಪುಣ್ಬುಗಳ
ಪಿರಿದಾದ ಮನೆಯಂತೆ ಕಣ್ಗೆಡ್ಡಮಾಗೆ ಮಾಮರನೊಂದು ಬೆಳೆದುದದರ ||
ಅರಳುಗಳ ಪೊಸಗಂಪಿಗವ್ವಳಿಸಿ ಗಾವರಿಪ
ದುರುದುಂಬಿದುಂಬಿಗಳ ನುಣ್ಚರಮನಾಲಿಸಲ್
ಪಿರಿದಾಯುಸಂ ಜಾರಿ ಮನದಳಲ್ ಮರೆಯಾಗಿ ನಲವಾಂತು ನಿಂತೆಸಲ್ಲಿ ||೪||

ನಿರುಕಿಸುತೆ ನಿಂತಿರಲ್ ಪಾಳ್ನೆಲದೊಳಲರಿಡಿದು
ನೆರೆಮೆರೆವಲಂಪಿನಿಂ ಪೊರೆದು ಕಂಗೊಳಿಪ ಮಾ
ಮರದಿರವಿದೆಂತೆಂದು ಬಗೆಯೊಳಚ್ಚರಿಗವಿಯೆ ಚೆಂದಳಿರ್ದೊಂಗಲಲ್ಲಿ ||
ಕಿರುಮೆಯ್ಯ ಕೆಂಗಣ್ಣಲರ್ವಕ್ಕಿಯೊಂದು ಮೈ
ಮರೆದು ಕಡುದುಗುಡದಿಂ ಶ್ರೀರಾಮ ! ಎಂದುಲಿಯ
ಲರಚಣದೊಳಾತೋಂಟದೆಡೆಯೆಡೆಯ ಗಿಡುಬಳ್ಳಿ ತಳಿರಿಡಿದು ಕಡುಯೆಸೆದುದು ||೫||

ಎಳೆಗಾಳಿ ತೀಡಿದುದು ನಲ್ಪೊಗರ ಕಿರಿವುಲ್ಲು
ಬೆಳೆದುದಲ್ಲಲ್ಲಿ ಬಗೆಬಗೆಯ ಬಣ್ಣದಿಂ ಕಳ
ಕಳಿಪ ಪೊಸಗಂಪುಗುವ ಪೂಗಳಿಂದೆಳೆವಳ್ಳಿಗಳ್ ಸೊಗಯಿಸಿದುವು ||
ತಿಳಿನೀರಿನಿಂ ಕೊಳಂ ತೀವಿದತ್ತೆಳಅಂಚೆ
ಗಳ ಹಿಂಡು ಓಲಾಡಿ ನಲಿದತ್ತು ಕೋಗಿಲೆಗೆ
ಕಳರುತಿಯೆ ಆರು ನೀಂ ಪೇಳೆನಲ್, " ಮುದ್ದಣ್ಣ, ಮುದ್ದಣ್ಣ" ಯೆಂದುಲಿದುದು ||

ರಾ. ಸು. ಸಾಲಿ, ಬಿ.ಎ.

೫. ನಾಗಚಂದ್ರ

ಇವನು ರಾಮಚಂದ್ರಚರಿತಪುರಾಣ, (ಪಂಪರಾಮಾಯಣ) ಮತ್ತು ಮಲ್ಲಿನಾಥಪುರಾಣಗಳೆಂಬ ಕಾವ್ಯಗಳ ಕರ್ತೃ. ಇವನು ತನ್ನ ಕೃತಿಗಳಲ್ಲಿ ತನ್ನ ದೇಶ, ಕಾಲ, ಕುಲ ಮೊದಲಾದವುಗಳನ್ನು ಕುರಿತು ಏನನ್ನೂ ಹೇಳಿಲ್ಲ. ತಾನು ಬಾಲಚಂದ್ರನೆಂಬ ಜೈನಗುರುವಿನ ಶಿಷ್ಯನೆಂದು ಮಾತ್ರ ಪ್ರತಿ ಆಶ್ವಾಸದ ಅಂತ್ಯದಲ್ಲಿಯೂ ಸೂಚಿಸಿರುವುದಲ್ಲದೆ ರಾಮಚಂದ್ರಚರಿತಪುರಾಣದ ಮೊದಲನೆಯ ಆಶ್ವಾಸದಲ್ಲಿ ಗ್ರಂಥಾವತಾರದಲ್ಲಿ ಜೈನಗುರುಗಳನ್ನು ಸ್ತುತಿಸುವಾಗ ಕೊನೆಯಲ್ಲಿ ಬಾಲಚಂದ್ರ, ಮೇಘಚಂದ್ರ-ತ್ರೈವಿದ್ಯ, ಶುಭಕೀರ್ತಿ, ವಾಸುಪೂಜ್ಯ, ಗತಪ್ರತ್ಯಾಗತದಿಂ ರಾಘವಪಾಂಡವೀಯಮಂ ಪೇಳ್ದ ಶ್ರುತಕೀರ್ತಿ, ಮತ್ತು ವೀರಣಂದಿ ಎಂಬ ಜೈನ ಗುರುಗಳನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ಇದರಿಂದಲೂ, ಈ ಸ್ತೋತ್ರಪದ್ಯಗಳಲ್ಲಿ ಕೆಲವು ಶ್ರವಣಬೆಳ್ಗೊಳದ ಶಾಸನಗಳಲ್ಲಿ ಉದ್ಧೃತಗಳಾಗಿರುವುದರಿಂದಲೂ, ಮತ್ತು ಇತರ ಆಧಾರಗಳ ಬಲದಿಂದಲೂ ಕೂಡ ಈ ಕವಿಯು ಆವ ಕಾಲದಲ್ಲಿ ಜೀವಿಸುತ್ತಿದ್ದನೆಂಬುದನ್ನು ನಿರ್ಣಯಿಸಬೇಕಾಗಿದೆ.

ಈ ವಿಧದಲ್ಲಿ ಕವಿಯು ಕ್ರಿ. ಶ. ೧೧೪೦ ಅಥವಾ ೧೧೪೫ರಲ್ಲಿ ಜೀವಿಸುತ್ತಿದ್ದನೆಂದು ಮ|| ರೈಸ್‌ರವರೂ, ಮ|| ಪಾಠಕರೂ ನಿರ್ಣಯಿಸಿರುವರು. ಇದನ್ನು ಕವಿಚರಿತಕಾರರು ಒಪ್ಪುವುದಿಲ್ಲ. ಅವರು ಮೇಲ್ಕಂಡ ಪಂಡಿತರ ಅಭಿಪ್ರಾಯಗಳನ್ನು ಹೀಗೆಂದು ಅನುವದಿಸಿ ಖಂಡಿಸಿರುವರು :—

"ಮ|| ರೈಸ್—ನಾಗಚಂದ್ರನ ಗುರುವಾದ ಬಾಲಚಂದ್ರನು ಸುಜನೋತ್ತಂಸನ ಸಮಕಾಲದವನೆಂದೂ ಪ್ರಾಭೃತತ್ರಯ ವ್ಯಾಖ್ಯಾಕಾರನೆಂದೂ ಸುಮಾರು ೧೧೪೦ರಲ್ಲಿ ಇದ್ದನೆಂದೂ ಹೇಳುತ್ತಾರೆ. (ಶಬ್ದಾನುಶಾಸನ, ಉಪೋದ್ಘಾತ ೩೩); ಅಲ್ಲದೆ ಮ|| ಪಾಠಕರು 'ಮೇಘಚಂದ್ರನು ಪೂಜ್ಯಪಾದಕೃತವಾದ ಸಮಾಧಿಶತಕಕ್ಕೆ—'ವಿತತಯಶೋನಿಧಿಪಂಪನ ಸುತಂಗೆ ತಿಳಿವಂತು ಪೊಚ್ಚ ಪೊಸಕನ್ನಡದಿಂ'—ಒಂದು ವ್ಯಾಖ್ಯಾನವನ್ನು ೧೧೪೮ರಲ್ಲಿ ಬರೆದಿದ್ದಾನೆ' ಎಂದು ಹೇಳುವ (ಇಂಡಿಯನ್ ಆಂಟಿಕ್ವೆರಿ, ಸಂಪುಟ ೧೨. ಪುಟ ೨೦) ಆಧಾರದಿಂದ ನಾಗಚಂದ್ರನು ಸುಮಾರು ೧೧೪೫ರಲ್ಲಿ ಇದ್ದಿರಬಹುದೆಂದೂ ಹೇಳುತ್ತಾರೆ. ಆದರೆ ಬಾಲಚಂದ್ರ* ಎಂಬ ಹೆಸರುಳ್ಳ ಇಬ್ಬರು

---

*ಇದು ವಾಸ್ತವವೇ ಹೌದು. ಆದರೆ ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರಿಂದ ಪ್ರಕಾಶಿಸಲ್ಪಟ್ಟಿರುವ "ಶ್ರವಣಬೆಳ್ಗೊಳದ ಶಾಸನ"ಗಳ ಎರಡನೆಯ ಮುದ್ರಣದ ಅಂತ್ಯದಲ್ಲಿ ಜೋಡಿಸಿರುವ ನಾಮಾನುಕ್ರಮಣಿ (index) ಯಲ್ಲಿ ಈ ಮೇಲೆ ಹೇಳಿರುವ ಅಧ್ಯಾತ್ಮಿ—ಬಾಲಚಂದ್ರನೂ, ವಕ್ರಗಚ್ಛದ ಬಾಲಚಂದ್ರನೂ, ಇನ್ನೂ ಒಬ್ಬಿಬ್ಬರು ಬಾಲಚಂದ್ರರೂ ಏಕೀಕರಿಸಲ್ಪಟ್ಟು ಒಬ್ಬನೇ ಮನುಷ್ಯನೆಂದು ಭಾವಿಸಲ್ಪಟ್ಟಿರುವರು.

ಜೈನಗುರುಗಳು ಇದ್ದಂತೆ ಶಾಸನಗಳಿಂದ ತಿಳಿಯಬರುತ್ತದೆ. ಸುಜನೋತ್ತಂಸನ ಸಮಕಾಲದವನೂ ಪ್ರಾಭೃತಕತ್ರಯವ್ಯಾಖ್ಯಾಕಾರನೂ ಆದ ಬಾಲಚಂದ್ರನಿಗೆ ಅಧ್ಯಾತ್ಮಿಬಾಲಚಂದ್ರ (ಇವನ ಚರಿತವನ್ನು ನೋಡಿ) ಎಂದು ಹೆಸರು. ಈತನು ೧೧೭೭ರಲ್ಲಿ* ಗತಿಸಿದ ನಯಕೀರ್ತಿಯ ಶಿಷ್ಯನೆಂದೂ (ಶ್ರ. ಬೆ. ಶಾ. ೪೨), ೧೧೮೨ರಲ್ಲಿ† ಬದುಕಿದ್ದನೆಂದೂ (ಶ್ರ. ಬೆ. ಶಾ. ೧೨೪), ಪುಸ್ತಕಗಚ್ಛದವನೆಂದೂ (ಶ್ರ. ಬೆ. ಶಾ. ೧೦೫), ತಿಳಿಯುತ್ತದೆ. ಇವನು ಬೇರೆ ನಾಗಚಂದ್ರನ ಗುರುವಾಗಿರಲಾರನು. ಮತ್ತೊಬ್ಬ ಬಾಲಚಂದ್ರಮುನಿ ೧೧೧೫ರಲ್ಲಿ ಗತಿಸಿದ ಮೇಘಚಂದ್ರನ ಸಧರ್ಮನೆಂದೂ (ಶ್ರ. ಬೆ. ಶಾ. ೫೫) ವಕ್ರಗಚ್ಛಕ್ಕೆ ಸೇರಿದವನೆಂದೂ ತಿಳಿಯುತ್ತದೆ. ಹಿಂದೆ ಹೇಳಿದ ನಯಕೀರ್ತಿಯ ತಂದೆಯಾದ ಗುಣಚಂದ್ರನೂ ಈ ಮೇಘಚಂದ್ರನ ಸಧರ್ಮನೆಂದು ಶ್ರ. ಬೆ. ೪೨ನೆಯ ಶಾಸನದಿಂದ ತಿಳಿಯುತ್ತದೆ. ಇದರಿಂದ ವಕ್ರಗಚ್ಛದ ಬಾಲಚಂದ್ರನೂ ಮೇಘಚಂದ್ರನೂ ನಯಕೀರ್ತಿಯ ತಂದೆಯಾದ ಗುಣಚಂದ್ರನೂ ಸಮಕಾಲದವರೆಂದು ವ್ಯಕ್ತವಾಗುತ್ತದೆ. ಆದುದರಿಂದ ನಯಕೀರ್ತಿಯ ಶಿಷ್ಯನಾದ ಪುಸ್ತಕಗಚ್ಛದ ಅಧ್ಯಾತ್ಮಿಬಾಲಚಂದ್ರನಿಗೂ ನಯಕೀರ್ತಿಯ ತಂದೆಯ ಸಧರ್ಮನಾದ ವಕ್ರಗಚ್ಛದ ಬಾಲಚಂದ್ರನಿಗೂ ಆವ ಸಂಬಂಧವೂ ಇಲ್ಲ. ಈ ವಕ್ರಗಚ್ಛದ ಬಾಲಚಂದ್ರನೇ ನಾಗಚಂದ್ರನ ಗುರು. ಈತನ ವಿಷಯವಾಗಿ ಸುಮಾರು ೧೧೧೫ರಲ್ಲಿ ಬರೆದ ಶ್ರ. ಬೆ. ೫೫ನೆಯ ಶಾಸನದಲ್ಲಿ—

> ಸಿದ್ಧಾಂತಾದ್ಯಖಿಲಾಗಮಾರ್ಥನಿಪುಣವ್ಯಾಖ್ಯಾನಸಂಶುದ್ಧಿಯಿಂ
> ಶುದ್ಧಾಧ್ಯಾತ್ಮಕತತ್ತ್ವನಿರ್ಣಯವಚೋವಿನ್ಯಾಸದಿಂ ಪ್ರೌಢಿಸಂ |
> ಬದ್ಧವ್ಯಾಕರಣಾರ್ಥಶಾಸ್ತ್ರಭರತಾಲಂಕಾರಸಾಹಿತ್ಯದಿಂ
> ರಾದ್ಧಾಂತೋತ್ತಮಬಾಲಚಂದ್ರಮುನಿಯಂತಾರ್ ಖ್ಯಾತರೀಲೋಕದೊಳ್ ||

ಎಂಬ ಪದ್ಯವಿದೆ. ಈತನೂ ಕನ್ನಡಕವಿಯಾಗಿದ್ದಿರಬಹುದು. ನಾಗಚಂದ್ರನು ಸ್ತುತಿಸುವ ಮೇಘಚಂದ್ರನೇ ಬೇರೆ, ಸಮಾಧಿಶತಕವ್ಯಾಖ್ಯಾಕಾರನಾದ ಮೇಘಚಂದ್ರನೇ ಬೇರೆ. ಮೊದಲನೆಯವನು ೧೧೧೫ರಲ್ಲಿ ಗತಿಸಿದುದಾಗಿ ಹೇಳುವ ಶ್ರ. ಬೆ. ೪೭ನೆಯ ಶಾಸನದಲ್ಲಿಯೇ ಅವನ ಸ್ತುತಿರೂಪವಾದ "ಮುನಿನಾಥಂ ಧಶಧರ್ಮಧಾರಿ" ಎಂಬ ಪದ್ಯವು ಇದೆ. ಎರಡನೆಯವನು ಸಮಾಧಿಶತಕವ್ಯಾಖ್ಯೆಯನ್ನು ೧೧೪೮ರಲ್ಲಿ ಬರೆದುದಾಗಿ ತಿಳಿಯಬರುವುದರಿಂದ ಈತನಿಗೂ ೧೧೧೫ರಲ್ಲಿ ಗತಿಸಿದವನಿಗೂ ಏನೇನೂ ಸಂಬಂಧವಿಲ್ಲ. ಈತನು ಶ್ರ. ಬೆ. ೪೨ನೆಯ ಶಾಸನದಲ್ಲಿ ನಯಕೀರ್ತಿಯ ಶಿಷ್ಯನೆಂದು ಹೇಳಿರುವ ಮೇಘಚಂದ್ರನಾಗಿರಬಹುದು. "ವಿತತಯಶೋನಿಧಿಪಂಪನ" ಎಂಬುದು ನಾಗಚಂದ್ರನಿಗೆಯೇ ಅನ್ವಯಿಸುವ ಪಕ್ಷದಲ್ಲಿ ಅವನ ಕಾಲವಾದಮೇಲೆ ಅವನ ಮಗನಿಗಾಗಿ ಎರಡನೆಯ ಮೇಘಚಂದ್ರನು ಸಮಾಧಿಶತಕವ್ಯಾಖ್ಯಾನವನ್ನು ಬರೆದಿರಬಹುದು.

ನಾಗಚಂದ್ರನು ಸ್ತುತಿಸುವ ವೀರಣಂದಿಸೈದ್ಧಾಂತಿಕನು ಸಮಾಧಿಶತಕವ್ಯಾಖ್ಯಾಕಾರನಾದ ಮೇಘಚಂದ್ರನ ಮಗನೆಂದು ಮೆ|| ಪಾಠಕರು ಅಭಿಪ್ರಾಯಪಡುತ್ತಾರೆ. (ಇಂಡಿಯನ್ ಆಂಟಿಕ್ವೆರಿ ಸಂಪುಟ ೧೪, ಪುಟ ೧೪.) ಆದರೆ ಈತನು ಮೊದಲನೆಯ ಮೇಘಚಂದ್ರನ ಮಗನೆಂಬುದು ಶ್ರ. ಬೆ. ೫೦ನೆಯ ಶಾಸನದಿಂದ ವ್ಯಕ್ತವಾಗುತ್ತದೆ. ನಾಗಚಂದ್ರನು ಸ್ತುತಿಸುವ ಶುಭಕೀರ್ತಿ, ನಾಗಚಂದ್ರನ ಗುರುವಾದ ಬಾಲಚಂದ್ರನ ಮಗನೆಂದು ಅದೇ ಶಾಸನದಿಂದಲೇ ತಿಳಿಯುತ್ತದೆ. ಈ ಕಾರ

* ಎರಡನೆಯ ಮುದ್ರಣದಲ್ಲಿ ಇದನ್ನು ೧೧೭೬ ಎಂದು ಕವಿಚರಿತಕಾರರು ತಿದ್ದಿರುವರು.

† ಇದನ್ನು ಎರಡನೆಯ ಮುದ್ರಣದಲ್ಲಿ ೧೧೮೧ ಎಂದು ಕವಿಚರಿತಕಾರರು ತಿದ್ದಿರುವರು.

ಜಿಗಳಿಂದ ಕವಿ ತನ್ನ ಗ್ರಂಥಗಳಲ್ಲಿ ಸ್ತುತಿಸುವ ಮೊದಲನೆಯ ಮೇಘಚಂದ್ರನೂ ಅವನ ಮಗ ವೀರ ಣಂದಿಸಿದ್ಧಾಂತಿಯೂ ತನ್ನ ಗುರು ಬಾಲಚಂದ್ರನೂ ಇವನ ಮಗ ಶುಭಕೀರ್ತಿಯೂ ಕವಿಯ ಸಮ ಕಾಲದವರೆಂದು ಹೇಳಬಹುದು. ಶ್ರುತಕೀರ್ತಿಯೂ ಸಮಕಾಲದವನಾಗಿರಬಹುದು." (ಕವಿಚರಿತೆ, I, ೮೨—೮೪.)

ಎಂದರೆ ಪಂಪರಾಮಾಯಣದಲ್ಲಿ ನಾಗಚಂದ್ರನಿಂದ ಸ್ತುತಿಸಲ್ಪಟ್ಟಿರುವ ಮೇಘಚಂದ್ರನೂ, ಶ್ರ. ಬೆ. ೪೭ ನೆಯ ಶಿಲಾಲೇಖನದಲ್ಲಿ ಲೋಕಾಂತರವನ್ನೈ ದಿದನೆಂದು ಹೇಳಲ್ಪಟ್ಟಿರುವ ಮೇಘಚಂದ್ರನೂ ಒಬ್ಬನೇ ಎಂದೂ ಈ ಮೇಘಚಂ ದ್ರನು ವಕ್ರಗಚ್ಛದ ಬಾಲಚಂದ್ರನ ಮತ್ತು ನಯಕೀರ್ತಿಯ ತಂದೆಯಾದ ಗುಣ ಚಂದ್ರನ ಸಧರ್ಮನಾಗಿದ್ದನೆಂದೂ ಕವಿಚರಿತಕಾರರ ಅಭಿಪ್ರಾಯ.

ಇದು ತಪ್ಪು. ಶ್ರ. ಬೆ. ೪೭ ನೆಯ ಶಿಲಾಲೇಖನದಲ್ಲಿ ಕೀರ್ತಿತನಾಗಿ ಕ್ರಿ. ಶ. ೧೧೧೫ ರಲ್ಲಿ (ಡಿಸೆಂಬರ್ ೨ ನೇ ತಾರೀಖು ಬೃಹಸ್ಪತಿವಾರದ ದಿವಸ) ಪರಲೋಕ ವನ್ನೈದಿದ ಮೇಘಚಂದ್ರನು ವಕ್ರಗಚ್ಛದವನಲ್ಲ ; ಇವನು ಪುಸ್ತಕಗಚ್ಛದವನೆಂದು ಆ ಶಿಲಾಲೇಖನದಲ್ಲಿರುವ " ಶ್ರೀ ಮೂಲಸಂಘಕೃತ ಪುಸ್ತಕಗಚ್ಛ ದೇಶೀಯೋದ್ಯ ದ್ಗಣಾಧಿಪ ಸುತಾರ್ಕಿಕ ಚಕ್ರವರ್ತೀ | ಸೈದ್ಧಾಂತಿಕೇಶ್ವರ ಶಿಖಾಮಣಿ ಮೇಘ ಚಂದ್ರಸ್ತ್ರೈವಿದ್ಯದೇವ ಇತಿ ಯಂ ವಿಬುಧಾಸ್ಸ್ತುವಂತಿ||" (ಪಂಕ್ತಿ ೧೦೨-೧೦೬) ಎಂಬ ಪದಗಳಿಂದಲೂ " ಶ್ರೀ ಮೂಲಸಂಘದ ದೇಸಿಗಗಣದ ಪುಸ್ತಕಗಚ್ಛದ ಶ್ರೀ ಮೇಘಚಂದ್ರತ್ರೈವಿದ್ಯದೇವರ್" (ಪಂಕ್ತಿ ೧೪೩-೧೪೪) ಎಂಬ ಪದಗ ಳಿಂದಲೂ ಕೂಡ ಸ್ಪಷ್ಟವಾಗುತ್ತದೆ. ಇವನ ಗುರುವು ಅಭಯನಂದಿಯ ಶಿಷ್ಯ ನಾದ ಸಕಳಚಂದ್ರನೆಂದೂ, ಇವನ ಶಿಷ್ಯನು ಹೊಯ್ಸಲ ವಿಷ್ಣುವರ್ಧನ ಬಿಟ್ಟಿದೇ ವನ ಸೇನಾನಾಯಕನಾದ ಗಂಗರಾಜನಿಗೆ ಗುರುವಾದ ಪ್ರಭಾಚಂದ್ರನೆಂದೂ ಕೂಡ ಇದೇ ಶಿಲಾಲೇಖನದಿಂದಲೇ ಸ್ಪಷ್ಟವಾಗುತ್ತದೆ.

ಶ್ರ. ಬೆ. ೫೫ ನೆಯ ಶಿಲಾಲೇಖನದಲ್ಲಿ ಕೀರ್ತಿತನಾಗಿರುವ ಬಾಲಚಂದ್ರನ ಸಧರ್ಮನಾದ ಮೇಘಚಂದ್ರನು ಮೇಲೆ ಹೇಳಲ್ಪಟ್ಟ ಮೇಘಚಂದ್ರನಿಂದ ಭಿನ್ನನು. ಇವನು ವಕ್ರಗಚ್ಛದವನೆಂದು ಈ ಶಿಲಾಲೇಖನದ ೧೩೪ ನೆಯ ಪಂಕ್ತಿ ಮೊದಲು ಗೊಂಡು ಹೇಳಲ್ಪಟ್ಟಿರುವ ಗುರ್ವಾವಳಿಯ ಉಪಕ್ರಮದಲ್ಲಿರುವ " ಮೂಲಸಂಘದ ದೇಶೀಯಗಣದ ವಕ್ರಗಚ್ಛದ ಕೊಂಡಕುಂದಾನ್ವಯದ ಪರಿಯಳಿಯ ವಡ್ಡದೇವರ ಬಳಿಯ ದೇವೇಂದ್ರಸಿದ್ಧಾಂತದೇವರು, ಮೇಘಚಂದ್ರಪಂಡಿತದೇವರು, ಬಾಲಚಂದ್ರ ಸಿದ್ಧಾಂತದೇವರು ..." ಇತ್ಯಾದಿ ಪದಗಳಿಂದ ದ್ಯೋತಿತವಾಗುವುದು. ಇವನು ಮಹೇಂದ್ರಚಂದ್ರಪಂಡಿತ, ಶುಭಕೀರ್ತಿಪಂಡಿತ, ಜಿನಚಂದ್ರ, ಗುಣಚಂದ್ರ-ಮಲ

ಧಾರಿ, ದೇವೇಂದ್ರಸಿದ್ಧಾಂತದೇವ ಇವರುಗಳ ಸಧರ್ಮನಾದ ಮಾಘನಂದಿ-ಸಿದ್ಧಾಂತದೇವನ ಶಿಷ್ಯನು ; ತ್ರಿರತ್ನನಂದಿಭಟ್ಟಾರಕ, ಕಲ್ಯಾಣಕೀರ್ತಿಭಟ್ಟಾರಕ ಮತ್ತು (ಪೂರ್ವೋಕ್ತ) ಬಾಲಚಂದ್ರಸಿದ್ಧಾಂತದೇವರ ಸಧರ್ಮನು. ಈ ಶಿಲಾಲೇಖನವು ಸುಮಾರು ಕ್ರಿ. ಶ. ೧೧೮೦*ರಲ್ಲಿ ಹುಟ್ಟಿರಬಹುದಾದಕಾರಣ ಈ ಮೇಘಚಂದ್ರನು ಆ ಕಾಲದಲ್ಲಿ ಜೀವಿಸುತ್ತಿದ್ದನೆಂದು ನಾವು ಹೇಳಬಹುದು.

---

* ಈ ಶಾಸನವು ಕ್ರಿ. ಶ. ಸುಮಾರು ೧೧೦೦ ರಲ್ಲಿ ಹುಟ್ಟಿತೆಂದು ಮ|| ಆರ್. ನರಸಿಂಹಾಚಾರ್ಯರು ತಾವು ಪ್ರಕಾಶಮಾಡಿದ "ಶ್ರವಣಬೆಳ್ಗೊಳದ ಶಾಸನ" ಗಳ ಎರಡನೆಯ ಮುದ್ರಣದಲ್ಲಿ (ಉಪೋದ್ಘಾತ, ಪುಟ ೭೯ ; ಆಂಗ್ಲ ಅನುವಾದ, ಪುಟ ೩೩) ಹೇಳಿರುವರು. ಇದು ತಪ್ಪೆಂದು ನಾವು ಮುಂದೆ ಹೇಳುವುದರಿಂದ ಸ್ಪಷ್ಟವಾಗುವುದು.

ಈ ಶಾಸನದಲ್ಲಿರುವ 'ವಡ್ಡದೇವರ ಬಳಿಯು' ಎಂಬ ಪದಗಳಲ್ಲಿ ವಡ್ಡದೇವನೆಂಬ ಜೈನ ಗುರುವಿನ ಹೆಸರು ಕೀರ್ತಿಸಲ್ಪಟ್ಟಿರುವುದೆಂದು ಮ|| ನರಸಿಂಹಾಚಾರ್ಯರು (ಉಕ್ತ ಉಪೋದ್ಘಾತದ ೮೦ ನೇ ಪುಟದಲ್ಲಿ) ಹೇಳಿರುವ ಅಭಿಪ್ರಾಯವೂ ತಪ್ಪೆಂದು ತೋರುವುದು. 'ಬಳಿ' ಅಥವಾ 'ವಳಿ' ಎಂಬ ಪದವು ಒಂದು ಗಚ್ಛದ ಅವಾಂತರ ಭೇದವನ್ನು ಎಂದರೆ, ಗಚ್ಛಕ್ಕಿಂತ ಸಣ್ಣದಾದ ಒಂದು ಸಮುದಾಯವನ್ನು ನಿರ್ದೇಶಿಸುವುದು. ಮೂಲಸಂಘದ ದೇಶೀಯಗಣದ ಪುಸ್ತಕಗಚ್ಛದ ಜೈನಗುರುಗಳೂ, ಜಿನಾಲಯಗಳೂ ಅನೇಕ ಕಡೆಗಳಲ್ಲಿ ಹರಡಿಕೊಂಡಿದ್ದುದರಿಂದ ಮೈಸೂರುದೇಶದ ಶಾಸನಗಳಲ್ಲಿ ಈ ಪುಸ್ತಕಗಚ್ಛಕ್ಕೆ ಸೇರಿದ ಎರಡು 'ಬಳಿ' ಗಳು ಕೀರ್ತಿತಗಳಾಗಿರುವುವು. ಇವುಗಳಲ್ಲಿ ಒಂದು ಹನಸೋಗೆಯ 'ಬಳಿ' ಯು. (ಚಾಮರಾಜನಗರದ ೧೫೩ ನೆಯ ಶಾಸನ ಹುಣಸೂರ ೧೪ ನೆಯ ಶಾಸನ ಇತ್ಯಾದಿ ಶಾಸನಗಳಲ್ಲಿ ಈ ಬಳಿಯ ಹೆಸರು ಹೇಳಲ್ಪಟ್ಟಿರುವುದು.) ಈ ಬಳಿಯ ಜೈನಗುರುಗಳು ಹನಸೋಗೆಯಲ್ಲಿ ಒಂದು ಪೀಠವನ್ನು ಮಾಡಿಕೊಂಡು ಅಲ್ಲಿನ ಮುಖ್ಯ ಬಸದಿಯಲ್ಲಿ ಪೂಜೆಮಾಡುತ್ತ ತಮಗೆ ಸೇರಿದ ಇತರ ಬಸ್ತಿಗಳಿಗೆ ತಮ್ಮ ಶಿಷ್ಯರನ್ನು ಕಳುಹಿಸಿ ತದ್ದ್ವಾರಾ ಆ ಬಸದಿಗಳನ್ನೂ ಅದಕ್ಕೆ ಸೇರಿದ ಭೂಮಿ ಮೊದಲಾದುದನ್ನೂ ನೋಡಿಕೊಳ್ಳುತ್ತಾ ಇದ್ದರು. ಹೀಗೆ ಇತರರ ಮೇಲೆ ವಿಚಾರಣೆಮಾಡಿಕೊಂಡಿರುತ್ತಿದ್ದುದರಿಂದ ಈ ಬಳಿಗೆ ಮುಖ್ಯಸ್ಥಾನವಾದ ಹನಸೋಗೆಯಲ್ಲಿದ್ದ ಗುರುಗಳಿಗೆ "ಮಹಾಮಂಡಲಾಚಾರ್ಯ" ಎಂಬ ಬಿರುದಿತ್ತು. (ಮೇಲೆ ಹೇಳಿದ ಚಾಮರಾಜನಗರದ ೧೫೩ ನೆಯ ಶಾಸನವನ್ನು ನೋಡಿ).

ಈ ಬಳಿಗೆ ಸೇರಿದ ಜೈನಗುರುಗಳ ಪರಂಪರೆಯು ಯಡತೊರೆ ೨೮ ನೆಯ ಶಾಸನದಲ್ಲಿಯೂ ಶ್ರವಣಬೆಳ್ಗೊಳದ ೪೩ ನೆಯ ಶಾಸನದಲ್ಲಿಯೂ ಕೊಡಲ್ಪಟ್ಟಿರುವುದು.

ಎರಡನೆಯದು 'ಇಂಗಳೇಶ್ವರದ ಬಳಿ.' ಈ ಬಳಿಯ ಗುರುಗಳು ಇಂಗಳೇಶ್ವರದಲ್ಲಿರುವ ಚಂದ್ರಪ್ರಭ ಜಿನಾಲಯದಲ್ಲಿ ಪೂಜೆಮಾಡುತ್ತಾ ಅದಕ್ಕೆ ಸೇರಿದ ನಾನಾಸ್ಥಳಗಳಲ್ಲಿದ್ದ ಇತರ ಬಸದಿಗಳನ್ನೂ ಭೂಮಿ ಮೊದಲಾದುದನ್ನೂ ತಮ್ಮ ಶಿಷ್ಯರ ಮೂಲಕ ನೋಡಿಕೊಳ್ಳುತ್ತ ಮೇಲ್ವಿಚಾರಣೆಯನ್ನು ತಾವು ಮಾಡುತ್ತಿದ್ದರು. ಈ ಗುರುಗಳ ಪರಂಪರೆಯು ಶ್ರವಣಬೆಳ್ಗೊಳದ ೪೦ ನೆಯ ಶಾಸನದಲ್ಲಿ ಕೊಡಲ್ಪಟ್ಟಿರುವುದು ; ಇವರೂ 'ಮಹಾಮಂಡಲಾಚಾರ್ಯ'ರಾಗಿದ್ದರು.

ಶ್ರ. ಬೆ. ೪೨ನೆಯ ಶಿಲಾಲೇಖನದಲ್ಲಿ ಕೀರ್ತಿತನಾಗಿರುವ ಮೇಘಚಂದ್ರನು ಮೇಲೆ ಹೇಳಿದ ಮೇಘಚಂದ್ರರಿಬ್ಬರಿಂದಲೂ ಭಿನ್ನನು. ಇವನೂ ಮತ್ತು ಆ ಶಿಲಾಲೇಖನದಲ್ಲಿ ಕೀರ್ತಿತರಾದ ಇತರ ಜೈನಗುರುಗಳೂ ಪುಸ್ತಕಗಚ್ಛದವರೆಂದು ಈ ಶಿಲಾಲೇಖನದ ೬೫ನೆಯ ಪಂಕ್ತಿಯಲ್ಲಿನ "ದೇಶೀಯಗಣಗಜೇಂದ್ರಸಾಂದ್ರಮದಧಾರಾವಭಾಸರುಂ ವಿತರಣವಿಳಾಸರುಂ ಪುಸ್ತಕಗಚ್ಛಸ್ವಚ್ಛಸರಸೀಸರೋಜರುಂ" ಎಂಬ ಪದಗಳಿಂದ ದ್ಯೋತಿತವಾಗುವುದು. ಇವನ ಗುರುವು ಮಲಧಾರಿದೇವನ ಶಿಷ್ಯನಾದ ಶ್ರೀಧರದೇವನಿಗೆ ಶಿಷ್ಯನಾದ ಮಾಘನಂದಿಯು. ಈ ಮಾಘನಂದಿಗೆ ಈ ಮೇಘಚಂದ್ರನಲ್ಲದೆ ಮೇಲೆ ಹೇಳಲ್ಪಟ್ಟ ನಯಕೀರ್ತಿಯ ತಂದೆ (ಎಂದರೆ ಗುರು) ಆದ ಗುಣಚಂದ್ರನೂ, ಚಂದ್ರಕೀರ್ತಿಯೂ, ಉದಯಚಂದ್ರನೂ ಶಿಷ್ಯರಾಗಿದ್ದರು. ಈ ಶಿಲಾಲೇಖನದಲ್ಲಿ ನಯಕೀರ್ತಿಯು ಕ್ರಿ. ಶ. ೧೧೭೬ರಲ್ಲಿ ಸ್ವರ್ಗಗತನಾದನೆಂದು ಹೇಳಿರುವುದರಿಂದ ಅವನ ಗುರುವಾದ ಗುಣಚಂದ್ರನೂ ಈ ಗುರುವಿನ

ಈ ಇಂಗಳೇಶ್ವರದ ಬಳಿಯ ಗುರುಗಳಲ್ಲಿ ಒಬ್ಬನಾದ ಮಾಘನಂದಿಯು (ಇವನು ಶ್ರ. ಬೆ. ೪೦ ನೆಯ ಶಾಸನದಲ್ಲಿ ಕೀರ್ತಿತನಾದ ಕುಲಚಂದ್ರನ ಶಿಷ್ಯನು) ತನ್ನ ಶಿಷ್ಯನಾದ ಮಹಾಸಾಮಂತ ನಿಂಬದೇವನಿಂದ ಕೊಲ್ಲಾಪುರದಲ್ಲಿ ಕಟ್ಟಿಸಲ್ಪಟ್ಟ ರೂಪನಾರಾಯಣ ಬಸದಿಗೆ ಅಧಿಷ್ಠಾಯಕನಾಗಿ ಅಲ್ಲಿ ಒಂದು ತೀರ್ಥವನ್ನು ಎಂದರೆ, ಪೀಠವನ್ನು ಸ್ಥಾಪಿಸಿದನು. ಇವನ ಗುಡ್ಡರಲ್ಲನೇಕರು ಬಸದಿಗಳನ್ನು ಕಟ್ಟಿಸಿ ಅವುಗಳನ್ನು ಈ ರೂಪನಾರಾಯಣಬಸದಿಗೆ ನಿಬದ್ಧವನ್ನಾಗಿ (ಎಂದರೆ ಅಧೀನವನ್ನಾಗಿ) ಮಾಡಿ, ಈ ಬಸದಿಗಳ ಮತ್ತು ತತ್ಸಂಬದ್ಧವಾದ ಭೂಮಿ ಇತ್ಯಾದಿಗಳ ಮೇಲ್ವಿಚಾರಣೆಯು ಈ ಮಾಘನಂದಿಗೂ ತದನಂತರ ಗುರುಪಟ್ಟಕ್ಕೆ ಬಂದ ಅವನ ಶಿಷ್ಯಪ್ರಶಿಷ್ಯಾದಿಗಳಿಗೂ ಇದ್ದುದರಿಂದ ಇವರೂ 'ಮಹಾಮಂಡಲಾಚಾರ್ಯ'ರಾಗಿದ್ದರು. (ಶ್ರ. ಬೆ. ೩೯ ನೆಯ ಶಾಸನವನ್ನು ನೋಡಿ; ಅಲ್ಲಿ ಈ ಮಾಘನಂದಿಯ ಪ್ರಶಿಷ್ಯನಾದ ದೇವಕೀರ್ತಿಪಂಡಿತನು ಮಹಾಮಂಡಲಾಚಾರ್ಯನೆಂದು ಸ್ತುತನಾಗಿರುವನು). ಇಂಗಳೇಶ್ವರದ ಬಳಿಯ ಗುರುಗಳು ಬೇರೆ ಜನರಾದುದರಿಂದ ಈ ಗುರುಗಳು 'ಮೂಲಸಂಘದ ದೇಶಿಯಗಣದ ಪುಸ್ತಕಗಚ್ಛದ ಇಂಗಳೇಶ್ವರದಬಳಿಯ ಕೊಲ್ಲಾಪುರದ ಸಾವಂತನ ಬಸದಿಯ ಪ್ರತಿಬದ್ಧ ಮಾಘನಂದಿ, ಶುಭಚಂದ್ರ, ದೇವಕೀರ್ತಿ....' ಎಂದು ವ್ಯವಹರಿಸಲ್ಪಟ್ಟಿರುವರು. (ಮೇಲೆ ೯ ನೇ ಪುಟವನ್ನು ನೋಡಿ.)

ಹೀಗೆ ಜೈನಗುರುಗಳ 'ಬಳಿ'ಗಳೂ, ಬಳಿಗಳೊಳಗಿನ ಅವಾಂತರ ಸಮುದಾಯಗಳೂ ಯಾವುದೋ ಒಂದು ಊರಿನ ಅಥವಾ ಊರಿನಲ್ಲಿರುವ ಒಂದು ಬಸದಿಯ ಹೆಸರಿನಿಂದ ಕರೆಯಲ್ಪಟ್ಟಿರುವುವೆಂದು ಮೇಲೆ ಹೇಳಿದ ನಿದರ್ಶನಗಳಿಂದ ವ್ಯಕ್ತವಾಗುವುದಷ್ಟೆ. ಪ್ರಕೃತ ಶ್ರ. ಬೆ. ೫೫ನೆಯ ಶಾಸನದಲ್ಲಿ ಹೇಳಿರುವ ಮೂಲಸಂಘದ ದೇಶಿಯಗಣದ ವಕ್ರಗಚ್ಛದ ಕೊಂಡಕುಂದಾನ್ವಯದ ಪರಿಯಳಿಯ ವಡ್ಡದೇವರ 'ಬಳಿ'ಯೂ ಕೂಡ ಹೀಗೆಯೇ ಒಂದು ಊರಿನ ಅಥವಾ ಊರಿನಲ್ಲಿರುವ ಒಂದು ಬಸದಿಯ ಹೆಸರಿನಿಂದ ನಿರ್ದಿಷ್ಟವಾಗಿರುವುದೆಂದೇ ನಮಗೆ ತೋರುವುದು. ಎಂದರೆ, ಪರಿಯಳಿಯೆಂಬುದು ಪ್ರಾಯಶಃ ಒಂದು ಊರಿನ ಹೆಸರೆಂದೂ, ವಡ್ಡದೇವರೆಂಬುದು ಆ ಊರಿನ ಒಂದು ಬಸದಿಯ ಜಿನದೇವರ ಹೆಸರೆಂದೂ ನಮಗೆ ತೋರುವುದು.

ಸಧರ್ಮನಾದ ಮೇಘಚಂದ್ರನೂ* ಸುಮಾರು ೧೧೪೬ರ ವರೆಗೆ ಜೀವಿಸುತ್ತಿದ್ದಿರಬಹುದು.

ಕವಿಚರಿತಕಾರರು ಈ ಮೂರು ಶಿಲಾಲೇಖನಗಳಲ್ಲಿ ಕೀರ್ತಿತರಾಗಿರುವ ಮೂರುಮಂದಿ ಮೇಘಚಂದ್ರರನ್ನೂ ಏಕೀಕರಿಸಿ ಒಬ್ಬ ಮನುಷ್ಯನನ್ನಾಗಿ ಮಾಡಿ† ಅವನೇ ನಾಗಚಂದ್ರನಿಂದ ಪಂಪರಾಮಾಯಣದಲ್ಲಿ ಕೀರ್ತಿತನಾದ ಮೇಘಚಂದ್ರನೆಂದು ಹೇಳಿರುವರು.

ಹೀಗೆಯೇ ' ನಾಗಚಂದ್ರನು ಸ್ತುತಿಸುವ ಶುಭಕೀರ್ತಿಯು ನಾಗಚಂದ್ರನ ಗುರುವಾದ ಬಾಲಚಂದ್ರನ ಮಗನೆಂದು ಶ್ರ. ಬೆ. 50ನೆಯ ಶಾಸನದಿಂದ ತಿಳಿಯುತ್ತದೆ ' ಎಂದು ಕವಿಚರಿತಕಾರರು ಮೇಲೆ ಹೇಳಿರುವ ಅಭಿಪ್ರಾಯವೂ ತಪ್ಪು. ಈ ಶಿಲಾಲೇಖನದಲ್ಲಿ ಮೇಲೆ ಹೇಳಿದ ಪುಸ್ತಕಗಚ್ಛದ ಸಕಳಚಂದ್ರನ ಶಿಷ್ಯನಾದ ಮೇಘಚಂದ್ರನನ್ನು ಹೊಗಳಿದನಂತರ,

---

* ಈ ೪೨ನೆಯ ಶಿಲಾಲೇಖನದಲ್ಲಿ ಗುಣಚಂದ್ರನ ಸಧರ್ಮನಾದ ಮೇಘಚಂದ್ರನಲ್ಲದೆ ಇನ್ನೊಬ್ಬ ಮೇಘಚಂದ್ರನೂ ಕೀರ್ತಿತನಾಗಿರುವನು. ಇವನು ಗುಣಚಂದ್ರನ ಶಿಷ್ಯನಾದ ನಯಕೀರ್ತಿಯ ಶಿಷ್ಯನು. ಅಣ್ಣೀತಟಾಕದ (ಅಣ್ಣೀಗೆರೆಯ) ಮಲಧಾರಿ, ಶ್ರೀಧರದೇವ, ದಾಮನಂದಿ, ಭಾನುಕೀರ್ತಿ, (ಅಧ್ಯಾತ್ಮಿ-) ಬಾಲಚಂದ್ರ ಇತ್ಯಾದಿಗಳ ಸಧರ್ಮನು. ಕ್ರಿ. ಶ. ೧೧೪೮ರಲ್ಲಿ ಸಮಾಧಿಶತಕವ್ಯಾಖ್ಯಾನವನ್ನುಬರೆದ ಮೇಘಚಂದ್ರನು ಇವನೇ ಆಗಿರಬಹುದೆಂದು ಕವಿಚರಿತಕಾರರು ಮೇಲೆ ಹೇಳಿರುವರು. ಈ ಅಭಿಪ್ರಾಯವು ಸಾಧುವೆಂದು ನಮಗೆ ತೋರುವುದಿಲ್ಲ. ಈ ಮೇಘಚಂದ್ರನ ಗುರುವಾದ ನಯಕೀರ್ತಿಯು ೧೧೭೬ರ ವರೆಗೆ ಜೀವಿಸಿದ್ದನೆಂದೂ, ಅವನ ಸಧರ್ಮನಾದ ಅಧ್ಯಾತ್ಮಿ-ಬಾಲಚಂದ್ರನು ಕ್ರಿ. ಶ. ೧೨೩೧ನೇ ವರ್ಷದ ಅಂತ್ಯದಲ್ಲಿ ಜೀವಿಸಿದ್ದನೆಂದೂ ಶ್ರ. ಬೆ. ೪೨ನೆಯ ಮತ್ತು ೮೧ನೆಯ ಶಾಸನಗಳಿಂದ ತಿಳಿದುಬರುವುದು. ಈ ಬಾಲಚಂದ್ರನು ಈ ಮೇಘಚಂದ್ರನ ಹಿರಿಯಸಧರ್ಮನೆಂದು ಈ ೪೨ನೇ ಶಾಸನದಲ್ಲಿನ ಶಿಷ್ಯಕ್ರಮದಿಂದ ತಿಳಿದುಬರುವುದರಿಂದ ಈ ಮೇಘಚಂದ್ರನೂ ಸುಮಾರು ಕ್ರಿ. ಶ. ೧೨೩೧ ರ ವರೆಗೆ ಜೀವಿಸುತ್ತಿದ್ದನೆಂದು ನಾವು ಊಹಿಸಬಹುದು. ಇಂಥವನು ಕ್ರಿ. ಶ. ೧೧೪೮ರಲ್ಲಿ ಒಂದು ಗ್ರಂಥವನ್ನು ಬರೆದನೆಂಬುದು ಪ್ರಾಯಶಃ ಅಸಂಭವವೆಂದೇ ಹೇಳಬೇಕು.

† ಕವಿಚರಿತಕಾರರಾದ ಮ|| ಆರ್. ನರಸಿಂಹಾಚಾರ್ಯರಿಂದ ಪ್ರಕಾಶಿತವಾದ “ ಶ್ರವಣಬೆಳ್ಗೊಳದ ಶಾಸನ ” ಗಳ ಎರಡನೆಯ ಮುದ್ರಣದ ಅಂತ್ಯದಲ್ಲಿರುವ ನಾಮಾನುಕ್ರಮಣಿ (index) ಯಲ್ಲಿಯೂ ಕೂಡ ಹೀಗೆಯೇ ಮೇಲೆ ಹೇಳಿದ ಸಕಲಚಂದ್ರನ ಶಿಷ್ಯನಾದ ಮೇಘಚಂದ್ರನೂ, ವಕ್ರಗಚ್ಛದ ಮಾಘನಂದಿಯ ಶಿಷ್ಯನಾದ ಮೇಘಚಂದ್ರನೂ ಏಕೀಕರಿಸಲ್ಪಟ್ಟು ಒಬ್ಬನೇ ಮನುಷ್ಯನೆಂದು ಭಾವಿಸಲ್ಪಟ್ಟಿರುವರು. ಆದರೆ ಮೇಲೆ ಹೇಳಿದ ಪುಸ್ತಕಗಚ್ಛದ ಮಾಘನಂದಿಯ ಶಿಷ್ಯನಾದ ಮೇಘಚಂದ್ರನೂ, ನಯಕೀರ್ತಿಯ ಶಿಷ್ಯನಾದ ಮೇಘಚಂದ್ರನೂ ಬೇರೆ ಮನುಷ್ಯರಾಗಿದ್ದರೆಂದು ಇಲ್ಲಿ ಸೂಚಿಸಲ್ಪಟ್ಟಿರುವುದು.

"ತತ್ಸಧರ್ಮರು ||

ಶ್ರೀಬಾಳಚಂದ್ರಮುನಿರಾಜಪವಿತ್ರಪುತ್ರಃ
ಪ್ರೋದ್ಧೃಪ್ತವಾದಿಜನಮಾನಲತಾಲವಿತ್ರಃ |
ಜೀಯಾದಯಂ ಜಿತಮನೋಜಭುಜಪ್ರತಾಪಃ
ಸ್ಯಾದ್ವಾದಕೀರ್ತಿಸುಭಗಃ ಶುಭಕೀರ್ತಿದೇವಃ ||

ಎಂದು ಒಬ್ಬ ಶುಭಕೀರ್ತಿದೇವನ ಸ್ತುತಿಯಿರುವುದು. ನಾಗಚಂದ್ರನ ಗುರುವು ವಕ್ರಗಚ್ಛದ ಬಾಲಚಂದ್ರನೆಂದೂ ಮೇಘಚಂದ್ರನು ಈ ಬಾಲಚಂದ್ರನ ಸಧರ್ಮನೆಂದೂ ಕವಿಚರಿತಕಾರರು ಮೇಲೆ ಹೇಳಿರುವರಷ್ಟೆ. ಆದುದರಿಂದ ಮೇಘಚಂದ್ರನು ವಕ್ರಗಚ್ಛದ ಬಾಲಚಂದ್ರನಿಗೂ ಅವನ ಮಗ ಶುಭಕೀರ್ತಿಗೂ, ಎಂದರೆ ತಂದೆ ಮಕ್ಕಳಿಬ್ಬರಿಗೂ ಸಧರ್ಮನೆಂದು ಕವಿಚರಿತಕಾರರು ಹೇಳಿದ ಹಾಗಾಯಿತು. ಇದು ಪ್ರಾಯಃ ಅಸಂಭಾವ್ಯವೆಂದೇ ಹೇಳಬೇಕಾಗಿರುವುದು. ಅಲ್ಲದೆ, ಕವಿಚರಿತಕಾರರಿಂದ ಹೇಳಲ್ಪಟ್ಟಿರುವ ವಕ್ರಗಚ್ಛದ ಬಾಲಚಂದ್ರನು ಕ್ರಿ. ಶ. ೧೧೭೬-೧೧೯೬ರಲ್ಲಿ ಜೀವಿಸಿದ್ದುದರಿಂದ (ಇದು ಉತ್ತರಕ್ಷಣದಲ್ಲಿಯೇ ವ್ಯಕ್ತಮಾಡಲ್ಪಡುವುದು) ಈ ಬಾಲಚಂದ್ರನಾಗಲಿ ಇವನ ಮಗನಾಗಲಿ ಕ್ರಿ. ಶ. ೧೧೧೫ರಲ್ಲಿ ಲೋಕಾಂತರವನ್ನೈದಿದ ಮೇಘಚಂದ್ರನ ಸಧರ್ಮರಾಗಿದ್ದರೆಂಬುದು ಸುತರಾಂ ಅಸಂಭವವಾಗಿರುವುದು. ಸಾಲದುದಕ್ಕೆ 'ಶ್ರೀಬಾಲಚಂದ್ರಗುರುರಾಜ ಪವಿತ್ರಪುತ್ರಃ' ಎಂದು ಮೇಲಿನ ಶ್ಲೋಕದಲ್ಲಿರುವ 'ಪುತ್ರ' ಎಂಬ ಪದಕ್ಕೆ ಮಗ ಎಂದು ಅರ್ಥಮಾಡುವುದೇ ಅನುಚಿತ. ಶ್ರವಣ ಬೆಳ್ಗೊಳದ ಶಾಸನಗಳಲ್ಲಿಯೂ ಮತ್ತು ಜೈನಗುರ್ವಾವಳಿಗಳನ್ನು ಕೀರ್ತಿಸುವ ಇತರ ವಾಕ್ಯಗಳಲ್ಲಿಯೂ 'ಪುತ್ರ' 'ಸುತ' 'ತನೂಭವ' ಇತ್ಯಾದಿಪದಗಳು 'ಶಿಷ್ಯ'* ಎಂಬ ಅರ್ಥದಲ್ಲಿಯೇ ವಿಶೇಷವಾಗಿ ಪ್ರಯೋಗಿಸಲ್ಪಡುವುವು. ಆದುದರಿಂದ ಇಲ್ಲಿಯೂ 'ಶ್ರೀ ಬಾಲಚಂದ್ರಗುರುರಾಜ ಪವಿತ್ರಪುತ್ರಃ' ಎಂಬುದಕ್ಕೆ 'ಶ್ರೀ ಬಾಲಚಂದ್ರನ ಶಿಷ್ಯನು' ಎಂದು ಅರ್ಥಮಾಡುವುದೇ ಉಚಿತ. ಈ ಬಾಲಚಂದ್ರನು ಪ್ರಾಯಶಃ ಮೇಘಚಂದ್ರನ ಗುರುವಾದ ಸಕಲಚಂದ್ರನ ಸಧರ್ಮರಲ್ಲಿ (ಈ ಸಧರ್ಮರ ಹೆಸರುಗಳು ಶಾಸನದಲ್ಲಿ ಹೇಳಲ್ಪಟ್ಟಿಲ್ಲ) ಒಬ್ಬನಾದುದರಿಂದ ಅವನ ಶಿಷ್ಯನಾದ ಶುಭಕೀರ್ತಿಯು ಮೇಘಚಂದ್ರನ ಸಧರ್ಮನೆಂದು ಇಲ್ಲಿ ಹೇಳಲ್ಪಟ್ಟಿರುವಂತೆ ತೋರುವುದು. (ಶ್ರ. ಬೆ. ೫೫ ನೆಯ ಶಾಸನವನ್ನು ನೋಡಿ.)

---

* ಹೀಗೆಯೇ 'ಅಗ್ರಜ, ಅನುಜ' ಎಂಬ ಪದಗಳೂ ಕೂಡ 'ಹಿರಿಯ ಸಧರ್ಮ' 'ಕಿರಿಯ ಸಧರ್ಮ' ಎಂಬ ಅರ್ಥಗಳಲ್ಲಿಯೇ ಈ ಗುರ್ವಾವಳಿಗಳಲ್ಲಿ ಉಪಯೋಗಿಸಲ್ಪಟ್ಟಿರುವುವೇ ಹೊರತು ಅಣ್ಣ, ತಮ್ಮ ಎಂಬ ಮುಖ್ಯಾರ್ಥಗಳಲ್ಲಿ ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟಿಲ್ಲ.

ಹೀಗೆಯೇ ಮೇಲೆ ಹೇಳಿದ ಶ್ರ. ಬೆ. ೫೫ ನೆಯ ಶಾಸನದಲ್ಲಿ ಹೊಗಳಲ್ಪಟ್ಟಿರುವ ' ವಕ್ರಗಚ್ಛದ ಬಾಲಚಂದ್ರನೇ ನಾಗಚಂದ್ರನ ಗುರು ' ಎಂಬ ಕವಿಚರಿತಕಾರರ ಅಭಿಪ್ರಾಯವೂ ತಪ್ಪೆಂದೂ ಈ ಬಾಲಚಂದ್ರನು ಕ್ರಿ. ಶ. ೧೧೭೬ರಲ್ಲಿ ಜೀವಿಸುತ್ತಿದ್ದನೆಂದೂ, ಇವನು ನಾಗಚಂದ್ರನ ಗುರುವಾಗಿರಲಾರನೆಂದೂ ಮ|| ಶಾಮಶಾಸ್ತ್ರಿಗಳಿಂದ ಬರೆಯಲ್ಪಟ್ಟ ೧೯೨೩ ನೆಯ ವರ್ಷದ ' ಆರ್ಕೆಯಲಾಜಿಕಲ್ ಡಿಪಾರ್ಟ್‌ಮೆಂಟ್ ರಿಪೋರ್ಟಿನ ೩೬-೩೯ ನೆಯ ಪುಟಗಳಲ್ಲಿ ಮುದ್ರಿತವಾಗಿರುವ ಕಲಸಾಪುರದ ಶಿಲಾಶಾಸನದಿಂದ ವ್ಯಕ್ತವಾಗುವುದು. ಈ ಶಾಸನವು ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಶಕವರ್ಷ ೧೦೯೮ನೆಯ ದುರ್ಮುಖಿ ಸಂವತ್ಸರದಲ್ಲಿ ಹುಟ್ಟಿದ್ದು. ಆ ಸಂವತ್ಸರದ ಉತ್ತರಾಯಣ ಸಂಕ್ರಮಣದಂದು ವೀರಬಲ್ಲಾಳದೇವನು ಅಮರದಾನವ ಮಾಡುವಲ್ಲಿ ಶ್ರೀಮನ್ಮಹಾವಡ್ಡವ್ಯವಹಾರಿ ಕವಡಮಯ್ಯನ ಮಗ ದೇವಿಸೆಟ್ಟಿಯು ಬಿನ್ನಪಮಾಡಿಕೊಂಡು ತಾನು ಮಾಡಿಸಿದ ವೀರಬಲ್ಲಾಳ ಜಿನಾಲಯವೆಂಬ ಶಾಂತಿನಾಥದೇವರ ಬಸದಿಯ ಖಂಡಸ್ಫುಟಿತ ಜೀರ್ಣೋದ್ಧಾರಾದಿಗಳಿಗಾಗಿ ತನ್ನ ಗುರುವಾದ ಮಹಾಮಂಡಲಾಚಾರ್ಯ ಬಾಲಚಂದ್ರ ಸಿದ್ಧಾಂತದೇವರಿಗೆ ಒಂದು ದತ್ತಿಯನ್ನು (ವೀರಬಲ್ಲಾಳದೇವನಿಂದ ?) ಕೊಡಿಸಿದನೆಂದು ಈ ಶಾಸನದಲ್ಲಿ ಹೇಳಿರುವುದು.*

ಈ ಬಾಲಚಂದ್ರನು ಮೂಲಸಂಘದ ದೇಶಿ [ಯ] ಗಣದವನೆಂದೂ...ಗಚ್ಛದವನೆಂದೂ (ಇಲ್ಲಿ ' ಗಚ್ಛ ' ಎಂಬ ಪದದ ಹಿಂದಿನ ಅಕ್ಷರಗಳು ಲುಪ್ತಗಳಾಗಿರುವವು) ಇಲ್ಲಿ ಹೇಳಲ್ಪಟ್ಟು ಇವನ ಗುರುಗಳ ಆನುಪೂರ್ವಿಯು ಈ ರೀತಿಯಾಗಿ ಹೇಳಲ್ಪಟ್ಟಿರುವುದು. (ಪಂಕ್ತಿ ೩೮ ಆದಿ) ದೇವೇಂದ್ರ-ಸೈದ್ಧಾಂತಿಕ ; ತಚ್ಛಿಷ್ಯ ' ಚತುರ್ಮುಖಾಖ್ಯೆಯಂ ಆಳ್ದ ' ವೃಷಭನಂದಿಮುನಿ ; ಅವನ ಶಿಷ್ಯರು ಗೋಪನಂದಿಪಂಡಿತ, ಜಿನಚಂದ್ರ, [ಮಾಘನಂದಿ-ಸೈದ್ಧಾಂತಿಕದೇವ]ರು ; ಈ ಮಾಘನಂದಿಯ ಶಿಷ್ಯರು ರತ್ನನಂದಿಮುನಿ, ಬಾಲಚಂದ್ರಮುನಿಗಳು. ಈ ಗುರುಪರಂಪರೆ

* ಈ ಶಾಸನವನ್ನು ಮುದ್ರಿಸಿದನಂತರ ಇದರ ಅಡಿಯಲ್ಲಿ ಮ|| ಶಾಮಶಾಸ್ತ್ರಿಗಳು ೩೯ನೆಯ ಪುಟದಲ್ಲಿ ನೋಟ್ (ವಿವರಣ) ಎಂದು ಕೆಲವು ವಾಕ್ಯಗಳನ್ನು ಬರೆದಿರುವರು. ಈ ಶಾಸನದಲ್ಲಿ ಸ್ತುತನಾದ ದೇವಿಸೆಟ್ಟಿಯು ಕವಡಮಯ್ಯನ ವಂಶದಲ್ಲಿ ಹುಟ್ಟಿದವನೆಂದೂ (a descendant of the family of Kavadamayya), ಈ ದೇವಿಸೆಟ್ಟಿಯು ತನ್ನ ಗುರುವಾದ ಮೂಲಸಂಘದ ಕೊಂಡಕುಂದಾನ್ವಯದ....ಗಣದ ದೇಶಿಗಚ್ಛದ ಬಾಲಚಂದ್ರಮುನಿಯ ಬಿನ್ನಪಕ್ಕನುಸಾರವಾಗಿ (!) ವೀರಬಲ್ಲಾಳ ಜಿನಾಲಯವನ್ನು ಕಟ್ಟಿಸಿದನೆಂದೂ ಇಲ್ಲಿ ಅವರು ಹೇಳಿರುವರು ! ದೇಶಿಯಗಣವೆಂದು ಒಂದು ಗಣದ ಹೆಸರನ್ನು ನಾವು ಕೇಳಿರುವೆವೇ ಹೊರತು ದೇಶಿಯಗಚ್ಛವೆಂಬ ಒಂದು ಗಚ್ಛವುಂಟೆಂದು ಈ ವರೆಗೆ ನಾವು ಕೇಳಿಲ್ಲ.

ಯನ್ನು ಮೇಲೆ ಹೇಳಿದ ಶ್ರವಣಬೆಳ್ಗೊಳದ ೫೫ನೆಯ ಶಾಸನದಲ್ಲಿ ಹೇಳಿರುವ ಮೂಲಸಂಘದ ದೇಶಿಯಗಣದ ವಕ್ರಗಚ್ಛದ ಗುರ್ವಾವಳಿಯೊಡನೆ (ಮೇಲೆ ೩೫ನೇ ಪುಟವನ್ನು ನೋಡಿ) ಹೋಲಿಸಿ ನೋಡಿದರೆ ಈ ಎರಡು ಶಾಸನಗಳಲ್ಲಿ ಪ್ರೋಕ್ತವಾಗಿರುವ ಗುರುಪರಂಪರೆಯು ಒಂದೇ ಎಂಬ ವಿಷಯವು ಸ್ಪಷ್ಟವಾಗಿ ಕಾಣಿಸಿಕೊಳ್ಳುವುದು.† ಸಾಲದುದಕ್ಕೆ ಆ ಶ್ರ. ಬೆ. ಶಾಸನದಲ್ಲಿ ಹೇಳಿರುವ 'ಸಿದ್ಧಾಂತಾದ್ಯಖಿಲಾಗಮಾರ್ಥ ನಿಪುಣ ವ್ಯಾಖ್ಯಾನಸಂಶುದ್ಧಿಯಿಂ' ಎಂದು ಮೊದಲಾದ ಬಾಲಚಂದ್ರ ಮುನಿಯನ್ನು ಹೊಗಳುವ ಪದ್ಯವೂ, ಅದರ ಹಿಂದೆ ಇರುವ 'ಶ್ರೀ ಮೂಲಸಂಘ ಕಮಲಾಕರರಾಜಹಂಸಃ' ಎಂದು ಮೊದಲಾಗುವ ಬಾಲಚಂದ್ರಸ್ತೋತ್ರರೂಪವಾದ ಶ್ಲೋಕವೂ ಕೂಡ ಈ ಕಲಸಾಪುರದ ಶಾಸನದಲ್ಲಿ (ಪಂಕ್ತಿ ೪೨ ಆದಿ) ಹೇಳಲ್ಪಟ್ಟಿರುವವು. ಆದುದರಿಂದ ಈ ಕಲಸಾಪುರದ ಶಾಸನದಲ್ಲಿ ಸ್ತುತನಾಗಿರುವ ಬಾಲಚಂದ್ರನು 'ಈ ವಕ್ರಗಚ್ಛದ ಬಾಲಚಂದ್ರನೇ ನಾಗಚಂದ್ರನ ಗುರು' ಎಂದು ಕವಿಚರಿತಕಾರರು ಹೇಳಿರುವ ಶ್ರ. ಬೆ. ೫೫ನೇ ಶಾಸನದಲ್ಲಿ ಕೀರ್ತಿತನಾಗಿರುವ ಬಾಲಚಂದ್ರನೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಈ ಬಾಲಚಂದ್ರನು ಮೇಲೆ ಹೇಳಿದ ಕಲಸಾಪುರದ ಶಾಸನದಲ್ಲಲ್ಲದೆ ಬೇಲೂರು ೧೨೯ನೆಯ ಶಾಸನದಲ್ಲಿಯೂ ಕೀರ್ತಿತನಾಗಿರುವನು. ಈ ಶಾಸನದ ಉಪಕ್ರಮದಲ್ಲಿಯೂ ಮೇಲೆ ಹೇಳಿದ 'ಶ್ರೀ ಮೂಲಸಂಘ ಕಮಲಾಕರ ರಾಜಹಂಸಃ' ಎಂದು ಮೊದಲಾಗುವ ಬಾಲಚಂದ್ರ ಸ್ತುತಿರೂಪವಾದ ಶ್ಲೋಕವಿರುವುದು. ತದನಂತರ ಶ್ರೀಮನ್ಮಹಾವಡ್ಡವ್ಯವಹಾರಿ ಕವಡಮಯ್ಯನ ದೇವಿಸೆಟ್ಟಿ ಮಾಡಿಸಿದ ಶಾಂತಿನಾಥದೇವರ ಬಸದಿಯ ಪರಿಸೂತ್ರದೊಳಗೆ ತಾವು ಮಾಡಿಸಿದ ಮಲ್ಲಿನಾಥ ದೇವರ ಅರ್ಚನಾದಿಗಳಿಗಾಗಿ ಅಪ್ಪಯ್ಯ, ಗೋಪಯ್ಯ, ಮಾಚಯ್ಯ ಎಂಬ ಮೂರು ಸಹೋದರರು ಶ್ರೀಮತ್ಪ್ರತಾಪಚಕ್ರವರ್ತಿ ವೀರಬಲ್ಲಾಳನ ಆಳಿಕೆಯಲ್ಲಿ 'ನಳ

† ಆದರೆ ಈ ಕಲಸಾಪುರದ ಶಾಸನದಲ್ಲಿ ವೃಷಭನಂದಿಮುನಿಯ ಶಿಷ್ಯರಲ್ಲಿ ಎರಡು ಮೂರು ಜನರ ಹೆಸರನ್ನು ಮಾತ್ರ ಹೇಳಿ, ಮಾಘನಂದಿಯ ಶಿಷ್ಯರಲ್ಲಿ ಇಬ್ಬರ ಹೆಸರನ್ನು ಮಾತ್ರ ಹೇಳಿರುವುದು. ಶ್ರ. ಬೆ. ೫೫ನೆಯ ಶಾಸನದಲ್ಲಾದರೆ ವೃಷಭನಂದಿಮುನಿಯ ಶಿಷ್ಯರಲ್ಲಿ ಏಳುಜನರ ಹೆಸರನ್ನು ಹೇಳಿ, ಇವರಲ್ಲಿ ಇಬ್ಬರ ಶಿಷ್ಯರು ಹೇಳಲ್ಪಟ್ಟಿರುವರು. ಮಾಘನಂದಿಯ ಶಿಷ್ಯರಲ್ಲಿ ನಾಲ್ಕು ಜನರ ಹೆಸರುಗಳು ಇಲ್ಲಿ ಹೇಳಲ್ಪಟ್ಟಿರುವುವು; ಮತ್ತು ಈ ಕಲಸಾಪುರದ ಶಾಸನದಲ್ಲಿ 'ರತ್ನನಂದಿ' ಎಂದು ಹೇಳಲ್ಪಟ್ಟಿರುವ ಮಾಘನಂದಿಶಿಷ್ಯನು ಶ್ರ. ಬೆ. ಶಾಸನದಲ್ಲಿ 'ತ್ರಿರತ್ನನಂದಿ' ಎಂದು ಹೇಳಲ್ಪಟ್ಟಿರುವನು. ಈ ಕಲಸಾಪುರದ ಶಾಸನವು ಕ್ರಿ. ಶ. ೧೧೭೬ರಲ್ಲಿ ಹುಟ್ಟಿದ್ದು. ಇದರಲ್ಲಿನ ಗುರುಪರಂಪರೆಯನ್ನೇ ಹೇಳುವ ಶ್ರ. ಬೆ. ೫೫ನೆಯ ಶಾಸನವು ಸುಮಾರು ಅದೇ ಕಾಲದಲ್ಲಿ ಎಂದರೆ ಕ್ರಿ. ಶ. ೧೧೮೦ರಲ್ಲಿ ಹುಟ್ಟಿರಬಹುದು.

ಸಂವತ್ಸರದ ಕಾರ್ತಿಕಶುದ್ಧ ಪಾಡಿವ ಬೃಹವಾರದಂದು' ಎಂದರೆ ಕ್ರಿ.ಶ. ೧೧೯೬ನೆಯ ಅಕ್ಟೋಬರ್ ೨೪ನೇ ಬೃಹಸ್ಪತಿವಾರದಂದು ಮಹಾಮಂಡಲಾಚಾರ್ಯರಾದ ಮಾಂಡವಿಯ ಬಾಲಚಂದ್ರದೇವರ ಶಿಷ್ಯ ರಾಮಚಂದ್ರಮುನಿಯಿಂದ ಬಮತಿಗಟ್ಟ ವೆಂಬ ಗ್ರಾಮವನ್ನು ಕ್ರಯಕ್ಕೆ ಪಡೆದರೆಂದು ಈ ಶಾಸನದಲ್ಲಿ ಹೇಳಿರುವುದು. ಇಲ್ಲಿ ಹೇಳಲ್ಪಟ್ಟಿರುವ ಕವಡಮಯ್ಯ ದೇವಿಸೆಟ್ಟಿಯರೂ ದೇವಿಸೆಟ್ಟಿಕಾರಿತ ಶಾಂತಿನಾಥ ದೇವರ ಬಸದಿಯೂ, ಮಹಾಮಂಡಲಾಚಾರ್ಯ ಬಾಲಚಂದ್ರನೂ ಮೇಲಿನ ಕಲಸಾಪುರದ ಶಾಸನದಲ್ಲಿ ಹೇಳಲ್ಪಟ್ಟಿರುವರೇಯೆ ಎಂಬುದು ಸುಸ್ಪಷ್ಟವಾಗಿರುವುದು.

ಕವಿಚರಿತಕಾರರಿಂದ ಹೇಳಲ್ಪಟ್ಟಿರುವ ಈ ವಕ್ರಗಚ್ಛದ ಬಾಲಚಂದ್ರನು ಶಕವರ್ಷ ೧೦೯೮ನೆಯ ದುರ್ಮುಖಿ ಸಂವತ್ಸರದ ಉತ್ತರಾಯಣ ಸಂಕ್ರಾಂತಿಯಂದು ಎಂದರೆ ಕ್ರಿ. ಶ. ೧೧೭೬ನೇ ವರ್ಷದ ಅಂತ್ಯದಲ್ಲಿ ಜೀವಿಸಿದ್ದನೆಂದು ಮೇಲೆ ಹೇಳಿದ ಕಲಸಾಪುರದ ಶಾಸನದಿಂದ ವ್ಯಕ್ತವಾಗುವುದಷ್ಟೆ. ಬೇಲೂರು ೧೨೪ನೆಯ ಶಾಸನದಲ್ಲಿ ಇವನು ಮಾಂಡವಿಯಲ್ಲಿ ಮಹಾಮಂಡಲಾಚಾರ್ಯನಾಗಿದ್ದನೆಂದು ಹೇಳಿರುವುದರಿಂದ ಆ ಶಾಸನವು ಹುಟ್ಟಿದ ಕಾಲದಲ್ಲಿ ಎಂದರೆ ಕ್ರಿ. ಶ. ೧೧೯೬ನೆಯ ಅಕ್ಟೋಬರ್ ತಿಂಗಳಿನಲ್ಲಿಯೂ ಇವನು ಜೀವಿಸಿದ್ದನೆಂದು ತೋರುವುದು. ಎಂದರೆ ಈ ವಕ್ರಗಚ್ಛದ ಬಾಲಚಂದ್ರನು ಕವಿಚರಿತಕಾರರಿಂದ ಮೇಲೆ ಪ್ರಸ್ತುತನಾಗಿರುವ ಅಧ್ಯಾತ್ಮಿ-ಬಾಲಚಂದ್ರನ ಸಮಕಾಲೀನನು.† ಈ ಅಧ್ಯಾತ್ಮಿ-ಬಾಲಚಂದ್ರನ ವಿಷಯದಲ್ಲಿ 'ಇವನು ೧೧೮೨ರಲ್ಲಿ ಬದುಕಿದ್ದನೆಂದು ತಿಳಿಯುತ್ತದೆ. ಇವನು ಬೇರೆ ನಾಗಚಂದ್ರನ ಗುರುವಾಗಿರಲಾರನು' ಎಂದು ಕವಿಚರಿತಕಾರರು ಹೇಳಿರುವ (ಮೇಲೆ ೩೪ನೆಯ ಪುಟವನ್ನು ನೋಡಿ) ವಾಕ್ಯದಿಂದಲೇ ಕ್ರಿ. ಶ. ೧೧೭೬-೧೧೯೬ರಲ್ಲಿ ಬದುಕಿದ್ದ ಈ ವಕ್ರಗಚ್ಛದ ಬಾಲಚಂದ್ರನೂ ನಾಗಚಂದ್ರನ ಗುರುವಾಗಿರಲಾರನೆಂದೂ ಹೇಳಲ್ಪಟ್ಟಂತಾಯಿತು.

ಕವಿಚರಿತಕಾರರು ಮೆ|| ರೈಸ್ ಮತ್ತು ಮೆ|| ಪಾಠಕರ ಅಭಿಪ್ರಾಯಗಳನ್ನು ಮೇಲೆ ಹೇಳಿದಂತೆ ಖಂಡಿಸಿ ನಾಗಚಂದ್ರನು ಕ್ರಿ. ಶ. ಸುಮಾರು ೧೧೦೫

† ಅಧ್ಯಾತ್ಮಿ-ಬಾಲಚಂದ್ರನ ನಿಯೋಗದಿಂದ ಸುಜನೋತ್ತಂಸ ಅಥವಾ ಬೊಪ್ಪಣಪಂಡಿತನು 'ಪೇಳಿದ' ಗುಮ್ಮಟಸ್ತುತಿಯು ಶ್ರ. ಬೆ. ೮೫ನೆಯ ಶಾಸನದಲ್ಲಿ ಒಳಪಟ್ಟಿದೆ. ಈ ಶಾಸನವನ್ನು ಕವಡಮಯ್ಯನ ದೇವಣನು ಎಂದರೆ ಮೇಲೆ ಹೇಳಲ್ಪಟ್ಟ ವಕ್ರಗಚ್ಛದ ಬಾಲಚಂದ್ರನ ಗುಡ್ಡನಾದ ಶ್ರೀಮನ್ಮಹಾವಡ್ಡವ್ಯವಹಾರಿ ಕವಡಮಯ್ಯನ ಮಗನಾದ ದೇವಿಸೆಟ್ಟಿಯು ಈ ಅಧ್ಯಾತ್ಮಿ-ಬಾಲಚಂದ್ರನ ನಿಯೋಗದಿಂದ ಕಡಯಿಸಿದನೆಂದು ಈ ಶಾಸನದ ಕೊನೇ ಪದ್ಯದಲ್ಲಿ ಹೇಳಿದೆ. ಇದರಿಂದಲೂ ಕೂಡ ಈ ಇಬ್ಬರು ಬಾಲಚಂದ್ರಮುನಿಗಳು ಸಮಕಾಲೀನರಾಗಿದ್ದರೆಂಬ ಅಂಶವು ವ್ಯಕ್ತವಾಗುವುದು.

(೧೧೦೦) ರಲ್ಲಿ ಇದ್ದನೆಂದು ನಿರ್ಣಯಿಸಿರುವರು. ಈ ನಿರ್ಣಯಕ್ಕೆ ಆಧಾರಭೂತವಾದ ಕಾರಣಗಳು ಹೀಗೆಂದು ಅವರಿಂದ ಕೊಡಲ್ಪಟ್ಟಿರುವುವು :—

"(1) ಎರಡನೆಯ ನಾಗವರ್ಮನು (ಸು. 1145) ಭಾಷಾಭೂಷಣದಲ್ಲಿ 'ದ್ವಿತೀಯಾರ್ಥೇ ಚತುರ್ಥೀ' ಎಂಬ ಸೂತ್ರದ (ಸೂತ್ರ 93) ಕೆಳಗೆ—"ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ" ಎಂಬ ಪದ್ಯಭಾಗವನ್ನು ಪಂಪರಾಮಾಯಣದಿಂದ (ಆಶ್ವಾಸ 7, ಪದ್ಯ 98) ತೆಗೆದು ಉದಾಹರಿಸಿದ್ದಾನೆ. ಇದರಿಂದ ನಾಗಚಂದ್ರನು ನಾಗವರ್ಮನ ಕಾಲಕ್ಕೆ ಹಿಂದೆಯೇ ಪ್ರಸಿದ್ಧನಾಗಿದ್ದಿರಬೇಕೆಂದು ವ್ಯಕ್ತವಾಗುತ್ತದೆ. ಒಂದು ತಲೆಯಾದರೂ ಹಿಂದೆ ಇದ್ದಿರಬೇಕೆಂಬುದರಲ್ಲಿ ಸಂಶಯವಿಲ್ಲ. (2) ದುರ್ಗಸಿಂಹನು (ಸು. 1145) ಪೂರ್ವಕವಿಗಳ ಗೋಷ್ಠಿಯಲ್ಲಿ ಸೇರಿಸಿ ಸ್ತುತಿಸಿರುವ ಕರ್ಣಪಾರ್ಯನು ತನ್ನ ನೇಮಿನಾಥಪುರಾಣದಲ್ಲಿಯು—

ಅದ್ಯತನನಾಗಿಯುಂ ನೆಗ | ಳ್ದಾದ್ಯರ ದೊರೆಯೆನಿಸಿ ಮೆಱೆದು ಸಾಹಿತ್ಯಕಳಾ |
ಹೃದ್ಯತೆಯಿನೆಂದನಾನಿರ | ವದ್ಯಗುಣ ಸಂದ ನಾಗಚಂದ್ರಕವೀಂದ್ರಂ ||

ಎಂಬ ಪದ್ಯದಲ್ಲಿ ನಾಗಚಂದ್ರನನ್ನು ಹೊಗಳಿದ್ದಾನೆ. 'ಅದ್ಯತನನಾಗಿಯುಂ' ಎಂಬುದರಿಂದ ಕರ್ಣಪಾರ್ಯನಿಗೆ ಸುಮಾರು ಒಂದುತಲೆ ಹಿಂದೆ ಇದ್ದಿರಬಹುದು ಎಂದು ತೋರುತ್ತದೆ. (3) ಮೇಘಚಂದ್ರನನ್ನು ಸ್ತುತಿಸುವ 'ಮುನಿನಾಥಂ ದಶಧರ್ಮಧಾರಿ' ಎಂಬ ಪಂಪರಾಮಾಯಣ ಪದ್ಯವು (ಆಶ್ವಾಸ 1 ಪದ್ಯ 30) ಆ ಮೇಘಚಂದ್ರನು 1115 ರಲ್ಲಿ ಗತಿಸಿದುದಾಗಿ ತಿಳಿಸುವ ಸುಮಾರು ಅದೇ ವರ್ಷದಲ್ಲಿ ಬರೆದ ಶ್ರವಣಬೆಳ್ಗೊಳದ 47ನೆಯ ಶಾಸನದಲ್ಲಿ ದೊರೆಯುತ್ತದೆ. ಇದರಿಂದ ಪಂಪರಾಮಾಯಣವು ಈ ಶಾಸನ ಹುಟ್ಟಿದ 1115 ಕ್ಕೆ ಹಿಂದೆ ಇದ್ದುದು ವ್ಯಕ್ತವಾಗುತ್ತದೆ. (4) ಮದರಾಸ್ ಪ್ರಾಚ್ಯಕೋಶಾಲಯದಲ್ಲಿ ನಮಗೆ ದೊರೆತ ತ್ರಿಭುವನಮಲ್ಲನ ಆಳಿಕೆಯಲ್ಲಿ ಶಕ 1027 ಎಂದರೆ 1105 ರಲ್ಲಿ ಬರೆದ ಒಂದು ಶಾಸನದಲ್ಲಿ ಒಬ್ಬ ಹಂಪಕವಿಯ ದೊರೆಯುತ್ತದೆ. ಈ ಕವಿ ನಾಗಚಂದ್ರನೇ ಆಗಿರಬಹುದು.

ಈ ಕಾರಣಗಳಿಂದ ನಾಗಚಂದ್ರನು ಸುಮಾರು 1105ರಲ್ಲಿ† ಇದ್ದಿರಬೇಕೆಂದು ಊಹಿಸುತ್ತೇವೆ.

ಕಂತಿ ಎಂಬ ಪ್ರಖ್ಯಾತಳಾದ ಒಬ್ಬ ಕಬ್ಬಿಗಿತಿ ದ್ವಾರಸಮುದ್ರದ ಬಲ್ಲಾಳರಾಯನ ಸಭೆಯಲ್ಲಿ ಪಂಡಿತೆಯಾಗಿದ್ದಂತೆ ತಿಳಿಯುತ್ತದೆ. ಕಂತಿಹಂಪನ ಸಮಸ್ಯೆಗಳೆಂದು ವಾಡಿಕೆಯಾಗಿ ಕರೆಯಲ್ಪಡುವ ಕೆಲವು ಪದ್ಯಗಳಿಂದ ಈ ಕಂತಿಗೂ ನಾಗಚಂದ್ರನಿಗೂ ಸಂವಾದಗಳು ನಡೆದಂತೆ ತಿಳಿಯಬರುತ್ತದೆ. ಇದೇ ವಿಷಯವಾಗಿ ದೇವಚಂದ್ರನೂ ಹೀಗೆ ಬರೆದಿದ್ದಾನೆ :—'ದೋರರಾಯಂ ಆಸ್ಥಾನದ ಕನ್ನಡಸಂಸ್ಕೃತಮಹಾಕವಿಗಧಿಪಂ ಪಂಪಕವಿಯುಂ ಕಳುಹಲ್ ಆತಂ ಬಂದು ವಿದ್ಯೆಯಿಂ ಸಾವಿರಪ್ರಶ್ನೆಯಂ ಕೇಳಲ್ ಆಕೆ (ಕಂತಿ) ಉತ್ತರಮಂ ಕುಡಲ್ ಆಕೆಯಂ ರಾಜಸಭೆಗೆಯ್ದಿಸಿ ವಿದ್ವತ್ಸಮೂಹದೊಳಧಿಕಕವೀಶ್ವರಿಯಾಗಿರ್ದಳ್.' ಈ ಹೇಳಿಕೆ ನಿಜವಾಗಿದ್ದ ಪಕ್ಷದಲ್ಲಿ* ನಾಗಚಂದ್ರನು 1104ರಿಂದ 1141ರ ವರೆಗೆ ಆಳಿದ ಬಲ್ಲಾಳ ವಿಷ್ಣುವರ್ಧನರಾಜನ ಆಸ್ಥಾನಪಂಡಿತನಾಗಿದ್ದಿರಬೇಕು.* (ಕವಿಚರಿತೆ I, ಪುಟ ೮೧—೮೨)

† '1105' ಎಂಬುದಕ್ಕೆ ಬದಲು ಎರಡನೇ ಮುದ್ರಣದಲ್ಲಿ '1100' ಎಂದು ಇದೆ.

* ಎರಡನೆಯ ಮುದ್ರಣದಲ್ಲಿ ಈ ವಾಕ್ಯದ ಬದಲು 'ನಾಗಚಂದ್ರನು 1100 ರಿಂದ 1106 ವರೆಗೆ ಆಳಿದ ಹೊಯ್ಸಳರಾಜನಾದ 1 ನೆಯ ಬಲ್ಲಾಳನ ಆಸ್ಥಾನಪಂಡಿತನಾಗಿದ್ದಿರಬೇಕು' ಎಂದು ಇದೆ.

ಕಂತಿಯೆಂಬ ಕಬ್ಬಿಗಿತಿಯ ವಿಷಯವಾದ ವಿಚಾರವನ್ನು ಮುಂದೆಮಾಡುವೆವು.

ದುರ್ಗಸಿಂಹನು ಕ್ರಿ.ಶ. ೧೦೨೪ ರಿಂದ ೧೦೪೨ರ ಒಳಗೆ ತನ್ನ ಪಂಚತಂತ್ರವನ್ನು ಬರೆದನೆಂದು ಮೇಲೆ ವ್ಯಕ್ತಮಾಡಲ್ಪಟ್ಟಿರುವುದರಿಂದ ಆ ಗ್ರಂಥದಲ್ಲಿ ಸ್ತುತಿಸಲ್ಪಟ್ಟ ನಾಗಚಂದ್ರನೂ ಕೂಡ ೧೦೪೨ರ ಹಿಂದೆಯೇ ಇದ್ದನೆಂಬುದು ಸ್ಪಷ್ಟವಾಗುವುದಷ್ಟೆ. ಹೀಗೆಯೇ ಕಾವ್ಯಾವಲೋಕನ ಕರ್ಣಾಟಕಭಾಷಾಭೂಷಣಗಳ ಕರ್ತೃವಾದ ನಾಗವರ್ಮನು ಛಂದೋಂಬುಧಿಯ ಕರ್ತೃವಾದ ನಾಗವರ್ಮನಿಂದ ಅಭಿನ್ನನೆಂದೂ, ಕ್ರಿ.ಶ. ೧೧ನೆಯ ಶತಮಾನದ ಸುಮಾರು ಮಧ್ಯಭಾಗದಲ್ಲಿ ಇದ್ದನೆಂದೂ ನಾವು ಮುಂದೆ ವ್ಯಕ್ತಪಡಿಸುವೆವು. ಇದರಿಂದಲೂ ಕೂಡ ನಾಗಚಂದ್ರನು ೧೦೪೨ ಕ್ಕಿಂತ ಹಿಂದೆ ಇದ್ದನೆಂಬುದು ಸ್ಪಷ್ಟವಾಗುವುದು. ಆದುದರಿಂದ ಅವನು ಕ್ರಿ.ಶ. ೧೧ ನೆಯ ಶತಮಾನದ ಆದಿಭಾಗದಲ್ಲಿಯೋ ೧೦ ನೆಯ ಶತಮಾನದ ಅಂತ್ಯಭಾಗದಲ್ಲಿಯೋ* ಜೀವಿಸಿರಬೇಕು. ಅವನು '೧೧೦೪ ರಿಂದ ೧೧೪೧ ವರೆಗೆ ಆಳಿದ ಬಲ್ಲಾಳವಿಷ್ಣುವರ್ಧನರಾಜನ ಆಸ್ಥಾನಪಂಡಿತನಾಗಿದ್ದಿರಬೇಕು'† ಎಂಬ ಕವಿಚರಿತಕಾರರ ಅಭಿಪ್ರಾಯವಂತೂ ಸರ್ವಥಾ ತಪ್ಪು.

* * * *

* ಆದಿಪಂಪನು ಕ್ರಿ.ಶ. ೯೪೧ರಲ್ಲಿ ಎಂದರೆ ಕ್ರಿ.ಶ. ೧೦ನೆಯ ಶತಮಾನದ ಪ್ರಥಮಾರ್ಧದಲ್ಲಿ ಜೀವಿಸುತ್ತಿದ್ದುದರಿಂದ ಅಭಿನವಪಂಪನಾದ ನಾಗಚಂದ್ರನು ಆ ಶತಮಾನದ ಪ್ರಥಮಾರ್ಧದಲ್ಲಿ ಜೀವಿಸಿರಲಾರನೆಂಬುದು ಸ್ವತಃ ವ್ಯಕ್ತವಾಗಿರುವುದು.

† ಎರಡನೇ ಮುದ್ರಣದಲ್ಲಿ ಈ ವಾಕ್ಯದ ಬದಲು 'ನಾಗಚಂದ್ರನು ೧೧೦೦ರಿಂದ ೧೧೦೬ ವರೆಗೆ ಆಳಿದ ಹೊಯ್ಸಳರಾಜನಾದ ೧ನೆಯ ಬಲ್ಲಾಳನ ಆಸ್ಥಾನಪಂಡಿತನಾಗಿದ್ದಿರಬೇಕು' ಎಂದು ಇದೆ. ಈ ಅಭಿಪ್ರಾಯವೂ ಕೂಡ ತಪ್ಪೆಂಬುದನ್ನು ನಾವು ಕಂಠತಃ ಹೇಳಬೇಕಾಗಿಲ್ಲ.

ಎರಡನೇ ಮುದ್ರಣದ ೪೪೯ ನೆಯ ಪುಟದಲ್ಲಿ ಕವಿಚರಿತಕಾರರು 'ನಾಗಚಂದ್ರನು ಬಿಜಾಪುರದ ಮ್ಯೂಜಿಯಮಿನಲ್ಲಿ ಇಟ್ಟಿರುವ ಒಂದು ಶಾಸನವನ್ನೂ ಬರೆದಿರಬಹುದೋ ಎಂಬ ಸಂದೇಹಕ್ಕೆ ಅವಕಾಶವಿರುವಂತೆ ತೋರುತ್ತದೆ. ಈ ಶಾಸನದ ಕೆಲವು ಪದ್ಯಗಳಿಗೂ ನಾಗಚಂದ್ರನ ಗ್ರಂಥಗಳ ಪದ್ಯಗಳಿಗೂ ಬಹಳವಟ್ಟಿಗೆ ಹೋಲಿಕೆಗಳು ಕಾಣುತ್ತವೆ' ಎಂದು ಹೇಳಿ ನಿದರ್ಶನಕ್ಕಾಗಿ ಕೆಲವು ಉದಾಹರಣಗಳನ್ನು ಕೊಟ್ಟಿದ್ದಾರೆ. ಕವಿಚರಿತಕಾರರು ಹೇಳುವಂತೆ ಬಹಳವಟ್ಟಿಗೆ ಹೋಲಿಕೆಗಳು ಇರುವುವೋ ಇಲ್ಲವೋ ಎಂಬ ವಿಷಯವನ್ನು ಇಲ್ಲಿ ನಾವು ವಿಚಾರಮಾಡಬೇಕಾದ ಆವಶ್ಯಕತೆ ಇಲ್ಲ. ಈ ವಿಷಯವನ್ನು ವಾಚಕರೇ ಪರಿಶೀಲಿಸಿ ನೋಡಿಕೊಳ್ಳಬಹುದು. ಪ್ರಕೃತ, ಶಾಸನವು ಚಾಳುಕ್ಯಚಕ್ರವರ್ತಿಯಾದ ತ್ರಿಭುವನಮಲ್ಲ ವಿಕ್ರಮಾದಿತ್ಯನ (ಕ್ರಿ. ಶ. ೧೦೭೬— ೧೧೨೬) ಆಳಿಕೆಯಲ್ಲಿ ಹುಟ್ಟಿತೆಂದು ಕವಿಚರಿತಕಾರರು ಹೇಳುವುದರಿಂದ ಅದು ಪ್ರಾಯಶಃ ನಾಗಚಂದ್ರನಿಂದ ಬರೆಯಲ್ಪಟ್ಟುದಲ್ಲವೆಂದು ನಾವು ಹೇಳಬಹುದು. ಅಲ್ಲದೆ ಇವನು 'ಮಲ್ಲಿಜಿನೇಂದ್ರಗೇಹಮುಂ ವಿಜಯಪುರಕ್ಕಲಂಕರಣಮಾಗಿರೆ ಮಾಡಿಸಿ' ಎಂದು ಹೇಳಿರುವ ವಿಜಯಪುರವು ಬಿಜಾಪುರವೇ ಎಂಬ ವಿಷಯದಲ್ಲಿ ಕೂಡ ನಮಗೆ ಪ್ರಬಲವಾದ ಸಂದೇಹವಿರುವುದು.

ಹೀಗೆ ಶ್ರವಣಬೆಳ್ಗೊಳದ ೪೭ನೆಯ ಶಿಲಾಲೇಖನದಲ್ಲಿ 'ಮುನಿನಾಥಂ ದಶಧರ್ಮಧಾರಿ...' ಎಂಬ ಪಂಪರಾಮಾಯಣ ಪದ್ಯದಿಂದ ಸ್ತುತಿಸಲ್ಪಟ್ಟು ಕ್ರಿ. ಶ. ೧೧೧೫ರಲ್ಲಿ ಸ್ವರ್ಗಗತನಾದನೆಂದು ಹೇಳಲ್ಪಟ್ಟಿರುವ ಮೇಘಚಂದ್ರನು ಪಂಪರಾಮಾಯಣದಲ್ಲಿ ನಾಗಚಂದ್ರನಿಂದ ಸ್ತುತಿಸಲ್ಪಟ್ಟ ಮೇಘಚಂದ್ರನೇಯೆ ಎಂಬ ಕವಿಚರಿತಕಾರರ ಅಭಿಪ್ರಾಯವು ತಪ್ಪಾಗಿರುವ ಪಕ್ಷದಲ್ಲಿ, ಈ ಶಿಲಾಲೇಖನದಲ್ಲಿ ಸ್ತುತನಾಗಿರುವ ಮೇಘಚಂದ್ರನು ಯಾರು ? 'ಮುನಿನಾಥಂ ದಶಧರ್ಮಧಾರಿ...' ಎಂಬ ಪಂಪರಾಮಾಯಣ ಪದ್ಯದಿಂದ ಇವನು ಏತಕ್ಕೆ ಶಿಲಾಲೇಖನದಲ್ಲಿ ಸ್ತುತಿಸಲ್ಪಟ್ಟಿರುವನು ? ಎಂಬ ಪ್ರಶ್ನೆಗಳು ತತ್ಕ್ಷಣದಲ್ಲಿಯೇ ಅಂಕುರಿಸುವುವಷ್ಟೆ. ಇವುಗಳಿಗೆ ಸಮಾಧಾನವನ್ನು ಈ ರೀತಿಯಾಗಿ ಹೇಳಬೇಕಾಗಿರುವುದು :—ಹಿಂದೆ ಹೇಳಿದುದರಿಂದ ನಾಗಚಂದ್ರನು ಕ್ರಿ. ಶ. ೧೦೪೨ ರಿಂದ ಹಿಂದಿನವನೆಂದೂ ಕ್ರಿ. ಶ. ೧೧ನೆಯ ಶತಮಾನದ ಆದಿಭಾಗದಲ್ಲಿಯೋ ೧೦ನೆಯ ಶತಮಾನದ ಅಂತ್ಯಭಾಗಲ್ಲಿಯೋ ಇದ್ದನೆಂದೂ ಸ್ಪಷ್ಟವಾಗುವುದು. ಹೀಗೆ ಪಂಪರಾಮಾಯಣವು ಕ್ರಿ. ಶ. ೧೦೪೨ ಕ್ಕಿಂತ ಹಿಂದೆಯೇ ವಿರಚಿತವಾಗಿ ಬಹಳಕಡೆ ಪ್ರಸಿದ್ಧವಾಗಿದ್ದುದರಿಂದ ಈಚೆಗೆ ಬರೆಯಲ್ಪಟ್ಟ ಶ್ರವಣಬೆಳ್ಗೊಳದ ಶಿಲಾಲೇಖನಗಳ ಕರ್ತೃಗಳು ಮೇಘಚಂದ್ರ, ವೀರಣಂದಿ, ಶ್ರುತಕೀರ್ತಿ ಮತ್ತು ಬಾಲಚಂದ್ರನೆಂದು ಹೆಸರುಳ್ಳ ಜೈನಗುರುಗಳನ್ನು ಹೊಗಳಬೇಕಾದ ಸಮಯ ಬಂದಾಗ, ಈ ಹೆಸರಿನ ಗುರುಗಳನ್ನು ಸ್ತುತಿಸುವ ಪಂಪರಾಮಾಯಣದ ಪದ್ಯಗಳನ್ನು ಉದ್ಧರಿಸಿ ಶಿಲಾಲೇಖನಗಳಲ್ಲಿ ಸೇರಿಸಿಬಿಟ್ಟಿರಬೇಕು. ಇದು ಶ್ರ. ಬೆ. ೪೦ನೆಯ ಶಿಲಾಲೇಖನದಿಂದ ಸ್ಪಷ್ಟವಾಗುವುದು. ಈ ಶಿಲಾಲೇಖನದಲ್ಲಿ 'ಆವೊಂದಾದಿ ಕಥಾತ್ರಯಪ್ರವಣದೊಳ್ ವಿದ್ವಜ್ಜನಂ ಮೆಚ್ಚೆ...' ಎಂಬ ಶ್ರುತಿಕೀರ್ತಿ-ತ್ರೈವಿದ್ಯನನ್ನು ಸ್ತುತಿಸುವ ಪಂಪರಾಮಾಯಣದ ಎರಡುಪದ್ಯಗಳು ಗಂಡವಿಮುಕ್ತಸಿದ್ಧಾಂತಿದೇವನ ಸಧರ್ಮನಾದ ಒಬ್ಬ ಶ್ರುತಕೀರ್ತಿಯನ್ನು ಸ್ತೋತ್ರಮಾಡುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುವು. ಪಂಪರಾಮಾಯಣದಲ್ಲಿ ಹೊಗಳಲ್ಪಟ್ಟಿರುವ ಶ್ರುತಕೀರ್ತಿಯ ಹಿಂದೆ ಬಾಲಚಂದ್ರ, ಮೇಘಚಂದ್ರ-ತ್ರೈವಿದ್ಯ, ಶುಭಕೀರ್ತಿ, ವಾಸುಪೂಜ್ಯರೂ, ಶ್ರುತಕೀರ್ತಿಯನಂತರ ವೀರಣಂದಿಯೂ ಸ್ತುತಿಸಲ್ಪಟ್ಟಿರುವರು. ಆದುದರಿಂದ ಈ ಪಂಪರಾಮಾಯಣಪ್ರೋಕ್ತನಾದ ಶ್ರುತಕೀರ್ತಿಯು ಬಾಲಚಂದ್ರನ ಅಥವಾ ಮೇಘಚಂದ್ರತ್ರೈವಿದ್ಯನ ಶಿಷ್ಯನೋ ಅಥವಾ ಸಧರ್ಮನೋ ಆಗಿರಬೇಕಷ್ಟೆ.* ಈ ಶ್ರುತಕೀರ್ತಿ ಬೇರೆ

* ಬಾಲಚಂದ್ರನು ನಾಗಚಂದ್ರನ ಗುರುವಾದುದರಿಂದ, ಅವನೇ ಮೊದಲಾಗಿ ಕೀರ್ತಿಸಲ್ಪಟ್ಟಿರುವ ಆರು ಜೈನಗುರುಗಳು ಗುರುಶಿಷ್ಯರಾಗಿರಬೇಕೇ ಹೊರತು ಗುರುಶಿಷ್ಯಪ್ರಶಿಷ್ಯರಾಗಿ ಇರಲಾರರು. ಎಂದರೆ ಇಲ್ಲಿ ಕೀರ್ತಿತರಾದ ಜೈನಗುರುಗಳು ಎರಡುತಲೆಗಳವರೇ ಅಲ್ಲದೆ ಮೂರುತಲೆಯವರಲ್ಲ.

ಶ್ರ. ಬೆ. ೪೦ನೆಯ ಶಿಲಾಲೇಖನದಲ್ಲಿ ಕೀರ್ತಿತನಾಗಿಲ್ಲ; ಇಲ್ಲಿ ಕೀರ್ತಿತನಾದ ಶ್ರುತಕೀರ್ತಿಯು ಮಾಘನಂದಿಮುನಿಯ ಶಿಷ್ಯನಾದ ಗಂಡವಿಮುಕ್ತಸಿದ್ಧಾಂತದೇವ ಮತ್ತು ಕನಕನಂದಿಮುನಿಗಳ ಸಧರ್ಮನು. ಇವರ ಗುರುವಾದ ಮಾಘನಂದಿಮುನಿಯೇ ಈ ಶ್ರುತಕೀರ್ತಿಗೂ ಗುರುವಾಗಿದ್ದನೆಂದು ತೇರ್ದಾಳದ ಒಂದು ಶಿಲಾಲೇಖನದಿಂದ (ಇಂಡಿಯನ್ ಆಂಟಿಕ್ವೆರಿ, ಸಂಪುಟ ೧೪) ತಿಳಿದುಬರುತ್ತದೆ.

ಈ ಶಿಲಾಲೇಖನವು ಮ|| ಪಾಠಕರಿಂದ ಮೇಲ್ಕಂಡ ಪತ್ರಿಕೆಯಲ್ಲಿ (ಪುಟ ೧೪ ಆದಿ) ಪ್ರಕಾಶಮಾಡಲ್ಪಟ್ಟಿರುವುದು. ಇಲ್ಲಿ ಚಾಳುಕ್ಯಚಕ್ರವರ್ತಿ ವಿಕ್ರಮಾದಿತ್ಯ-ತ್ರಿಭುವನಮಲ್ಲನ ಮಂಡಲಿಕನಾದ ಗೊಂಕದೇವರಸನು ತನಗೂ ಸಾಮಂತ ನಿಂಬರಸ ಕಾಮದೇವರಿಗೂ ಗುರುವೂ, ಮಂಡಲಾಚಾರ್ಯನೂ, ಕುಳಚಂದ್ರಪಂಡಿತ ಶಿಷ್ಯನೂ ಆದ ಕೊಲ್ಲಾಪುರದ ಮಾಘನಂದಿ-ಸೈದ್ಧಾಂತಿಕನಿಗೆ ಶಕವರ್ಷ ೧೦೪೫ನೆಯ ಶೋಭಕೃತ್ ಸಂವತ್ಸರದ ವೈಶಾಖ ಪುಣ್ಣಮಿ ಬೃಹಸ್ಪತಿವಾರದ ದಿವಸ ಎಂದರೆ ಕ್ರಿ. ಶ. ೧೧೨೩ನೆಯ ಏಪ್ರಿಲ್ ೧೨ನೆಯ ಬೃಹಸ್ಪತಿವಾರದ ದಿವಸ ಒಂದು ದತ್ತಿಯನ್ನು ಕೊಟ್ಟಂತೆ ಹೇಳಿ, ಈ ಮಾಘನಂದಿ ಸೈದ್ಧಾಂತಿಕನ ಶಿಷ್ಯರಾದ ಕನಕನಂದಿ, ಶ್ರುತಕೀರ್ತಿ-ತ್ರೈವಿದ್ಯ, ಚಂದ್ರಕೀರ್ತಿ, ಪ್ರಭಾಚಂದ್ರ, ವರ್ಧಮಾನ ಮುನಿಗಳನ್ನು ಹೊಗಳಿರುವದು. ಇಲ್ಲಿ ಸ್ತುತನಾಗಿರುವ ಮಾಘನಂದಿಯು ಶ್ರ. ಬೆ. ೪೦ನೇ ಶಿಲಾಲೇಖನದಲ್ಲಿ ಕುಳಚಂದ್ರಶಿಷ್ಯನೆಂದೂ "ಕೊಲ್ಲಾಪುರೇ ತೀರ್ಥಕೃತ್" ಎಂದೂ ಸ್ತುತನಾದ ಮಾಘನಂದಿಯೇಯೆ. ಈ ಶಿಲಾಲೇಖನದಲ್ಲಿ ಪ್ರೋಕ್ತರಾದ ಸಾಮಂತ-ನಿಂಬರಸಕಾಮದೇವರೂ ಕನಕನಂದಿಮುನಿಯೂ ಕೂಡ ತೇರ್ದಾಳದ ಶಿಲಾಲೇಖನದಲ್ಲಿ ಸ್ತುತರಾದ ನಿಂಬದೇವ, ಕಾಮದೇವ, ಕನಕನಂದಿಗಳೇ ಆಗಿರುವರು. ಹೀಗೆಯೇ ಮೇಲಿನ ಶ್ರ. ಬೆ. ಶಿಲಾಲೇಖನದಲ್ಲಿ 'ಆವೊಂದಾದಿಕಥಾತ್ರಯಪ್ರವಣದೊಳ್...' ಎಂದು ಮೊದಲಾದ ಪಂಪರಾಮಾಯಣಗ್ರಂಥಸ್ಥವಾದ ಎರಡುಪದ್ಯಗಳಿಂದ ಸ್ತುತಿಸಲ್ಪಟ್ಟಿರುವ ಶ್ರುತಕೀರ್ತಿ-ತ್ರೈವಿದ್ಯನು ತೇರ್ದಾಳದ ಶಿಲಾಲೇಖನದಲ್ಲಿ—

> **ಶ್ರುತಕೀರ್ತಿತ್ರೈವಿದ್ಯ | ವ್ರತಿಪರ್ಷಟ್ತರ್ಕಕರ್ಕಶರ್ ಪರವಾದಿ ||**
> **ಪ್ರತಿಭಾಪ್ರದೀಪಪವನರ್ | ಜಿತದೋಷರ್ನೆಗಳ್ದರಖಿಲಭುವನಾಂತರದೊಳ್ ||**

ಎಂದು ಸ್ತುತನಾದ ಶ್ರುತಕೀರ್ತಿ-ತ್ರೈವಿದ್ಯನೇ ಆಗಿರುವನು. ಈ ಶಿಲಾಲೇಖನದಲ್ಲಿ ಶ್ರುತಕೀರ್ತಿ-ತ್ರೈವಿದ್ಯನನ್ನು ಹೀಗೆ ಒಂದು ಪದ್ಯದಿಂದ ಹೊಗಳಿದ್ದಾಗ್ಯೂ ಅವನು ರಾಘವಪಾಂಡವೀಯವೆಂಬ ಗತಪ್ರತ್ಯಾಗತಕಾವ್ಯದ ಕರ್ತೃವೆಂದು ಹೇಳಿಲ್ಲ. ಅಲ್ಲದೆ ಶ್ರುತಕೀರ್ತಿತ್ರೈವಿದ್ಯನ ಗುರುವಾದ ಮಾಘನಂದಿಸೈದ್ಧಾಂತಿಕನು

ಕ್ರಿ. ಶ. ೧೧೬೩ ರಲ್ಲಿ ಜೀವಿಸಿದ್ದನೆಂದು ಈ ಶಿಲಾಲೇಖನದಿಂದ ತಿಳಿದುಬರುವುದರಿಂದ ಈ ಶ್ರುತಕೀರ್ತಿತ್ರೈವಿದ್ಯನು ಕ್ರಿ. ಶ. ೧೧೩೩ ರಲ್ಲಿ ಜೀವಿಸಿದ್ದನೆಂದೂ ನಾವು ಹೇಳಬಹುದು.

ಹೀಗೆ ಮಾಘನಂದಿಸೈದ್ಧಾಂತಿಕನ ಶಿಷ್ಯನೂ, ಗಂಡವಿಮುಕ್ತಸಿದ್ಧಾಂತದೇವ, ಕನಕನಂದಿ, ಚಂದ್ರಕೀರ್ತಿ, ಪ್ರಭಾಚಂದ್ರ ಮತ್ತು ವರ್ಧಮಾನಮುನಿಗಳ ಸಧರ್ಮನೂ ಆಗಿ ಸುಮಾರು ಕ್ರಿ. ಶ. ೧೧೩೩ರಲ್ಲಿ ಜೀವಿಸುತ್ತಿದ್ದ ಈ ಶ್ರುತಕೀರ್ತಿತ್ರೈವಿದ್ಯನ ಸಂಬಂಧದಲ್ಲಿ 'ಆವೊಂದಾದಿ ಕಥಾತ್ರಯಪ್ರವಣದೊಳ್...' ಎಂದು ಮೊದಲಾದ ಎರಡುಪದ್ಯಗಳು ಶ್ರ. ಬೆ. ೪೦ನೆಯ ಶಿಲಾಲೇಖನದಲ್ಲಿ ಹೇಳಲ್ಪಟ್ಟು ಈ ಶ್ರುತಕೀರ್ತಿಯು ರಾಘವಪಾಂಡವೀಯವೆಂಬ ಗತಪ್ರತ್ಯಾಗತಕಾವ್ಯವನ್ನು ಮಾಡಿದನೆಂದು ಹೇಳಲ್ಪಟ್ಟಿರುವುದು. ಕ್ರಿ. ಶ. ೧೦೪೬ ಕ್ಕಿಂತ ಹಿಂದೆ ಹುಟ್ಟಿದ ಪಂಪರಾಮಾಯಣದಲ್ಲಿಯೂ ಕೂಡ ಬಾಲಚಂದ್ರ ಅಥವಾ ಮೇಘಚಂದ್ರನ ಶಿಷ್ಯನೋ ಅಥವಾ ಸಧರ್ಮನೋ ಆದ ಒಬ್ಬ ಶ್ರುತಕೀರ್ತಿಯು ರಾಘವಪಾಂಡವೀಯವೆಂಬ ಗತಪ್ರತ್ಯಾಗತ ಕಾವ್ಯವನ್ನು ಮಾಡಿದನೆಂದು ಹೇಳಲ್ಪಟ್ಟಿರುವುದು.

ಶ್ರುತಕೀರ್ತಿಯೆಂಬ ಜೈನಕವಿವಿರಚಿತವಾದ ರಾಘವಪಾಂಡವೀಯವೆಂಬ ಗತಪ್ರತ್ಯಾಗತ ಕಾವ್ಯವು ಒಂದು ಇರಬಹುದೇ ಹೊರತು ಅಂತಹ ಎರಡು ಕಾವ್ಯಗಳು ಇರಲಾರವಷ್ಟೆ. ಆದುದರಿಂದ ಈ ಕಾವ್ಯದ ಕರ್ತೃವು ಪಂಪರಾಮಾಯಣದಲ್ಲಿ ಸ್ತುತಿಸಲ್ಪಟ್ಟಿರುವ ಶ್ರುತಕೀರ್ತಿಯೇ ಆಗಿರಬೇಕೆಂದೂ, ಈ ಶ್ರುತಕೀರ್ತಿಯನ್ನು ಸ್ತುತಿಸುವ ಪದ್ಯಗಳು ಶ್ರ.ಬೆ. ೪೦ನೆಯ ಶಿಲಾಲೇಖನದ ಕರ್ತೃವಿನಿಂದ ಪಂಪರಾಮಾಯಣದಿಂದ ಉದ್ಧರಿಸಲ್ಪಟ್ಟು ಗಂಡವಿಮುಕ್ತಸಿದ್ಧಾಂತದೇವನೇ ಮೊದಲಾದವರ ಸಧರ್ಮನಾಗಿ ಸುಮಾರು ೧೦೦ ವರ್ಷಗಳನಂತರ ಜೀವಿಸುತ್ತಿದ್ದ ಶ್ರುತಕೀರ್ತಿಯ ಸಂಬಂಧದಲ್ಲಿ ಉಪಯೋಗಿಸಲ್ಪಟ್ಟಿರುವವೆಂದೂ ಸ್ಪಷ್ಟವಾಗುವುದು. 'ಮುನಿನಾಥಂ ದಶಧರ್ಮಧಾರಿ...' ಎಂದು ಮೇಘಚಂದ್ರನನ್ನು ಸ್ತುತಿಸುವ ಪದ್ಯಗಳೂ, 'ಗಣಧರರಂ ಶ್ರುತಧರರೊಳ್...' ಎಂದು ವೀರಣಂದಿಯನ್ನು ಸ್ತುತಿಸುವ ಪದ್ಯಗಳೂ, 'ಪ್ರಚುರಕಲಾನ್ವಿತ...' ಎಂದು ಬಾಲಚಂದ್ರನನ್ನು ಸ್ತುತಿಸುವ ಪದ್ಯವೂ ಕೂಡ ಹೀಗೆಯೇ ಪಂಪರಾಮಾಯಣಕ್ಕಿಂತ ಈಚೆ ಜೀವಿಸುತ್ತಿದ್ದ ಆಯಾ ಹೆಸರಿನ ಗುರುಗಳನ್ನು ಸ್ತುತಿಸುವುದಕ್ಕಾಗಿ ಶ್ರ. ಬೆ. ಶಿಲಾಲೇಖನದ ಕರ್ತೃಗಳಿಂದ ಉಪಯೋಗಿಸಲ್ಪಟ್ಟಿರುವುವು.*

---

* ಹೀಗೆಯೇ ಶ್ರ.ಬೆ. ೪೭ನೇ ಮತ್ತು ೫೦ನೇ ಶಿಲಾಲೇಖನಗಳಲ್ಲಿ 'ಮುನಿನಾಥಂ ದಶಧರ್ಮಧಾರಿ....' ಎಂದು ಮೇಘಚಂದ್ರನನ್ನು ಸ್ತುತಿಸುವ ಪದ್ಯದ ಹಿಂದೆ ಇರುವ 'ಶಿಷ್ಯಸ್ತಸ್ಯ ದೃಢ

ಮೇಲ್ಕಂಡ ತೇರ್ದಾಳದ ಶಿಲಾಲೇಖನವನ್ನು ಮ|| ಪಾಠಕರು ಪ್ರಕಾಶ ಪಡಿಸಿದ ಸಮಯದಲ್ಲಿ ಮೇಲ್ಕಂಡ ಶ್ರವಣಬೆಳ್ಗೊಳದ ಶಿಲಾಲೇಖನವು ಮುದ್ರಿತವಾಗಿರಲಿಲ್ಲ. ಆದಾಗ್ಯೂ 'ಶ್ರುತಕೀರ್ತಿ ತ್ರೈವಿದ್ಯ' ಎಂಬ ನಾಮೈಕ್ಯದ ಆಧಾರವೊಂದರ ಬಲದಿಂದಲೇ ಮ|| ಪಾಠಕರು ಈ ತೇರ್ದಾಳದ ಶಿಲಾಲೇಖನದಲ್ಲಿ ಕೀರ್ತಿತನಾದ ಶ್ರುತಕೀರ್ತಿಯೇ ಪಂಪರಾಮಾಯಣದಲ್ಲಿ ಕೀರ್ತಿತನಾದ ಶ್ರುತಕೀರ್ತಿಯೆಂದೂ, ಅವನೇ ರಾಘವಪಾಂಡವೀಯಕಾವ್ಯದಕರ್ತೃವೆಂದೂ, ಅವನು ಆ ಶಿಲಾಲೇಖನದ ಕಾಲದಲ್ಲಿ ಎಂದರೆ, ಕ್ರಿ. ಶ. ೧೧೨೩ ರಲ್ಲಿ ಜೀವಿಸುತ್ತಿದ್ದನೆಂದೂ ಹೇಳಿಬಿಟ್ಟರು.* ಹೀಗೆಯೇ ಪಂಪರಾಮಾಯಣದಲ್ಲಿ ಸ್ತುತನಾದ ಮೇಘಚಂದ್ರನ

ವ್ರತಃ ಶಮನಿಧಿಃ....' ಇತ್ಯಾದಿ ಸಂಸ್ಕೃತಶ್ಲೋಕಗಳಲ್ಲಿ ಕೆಲವೂ ಕೂಡ ಬೇರೆ ಮೇಘಚಂದ್ರನ (ರ)ನ್ನು ಸ್ತುತಿಸುವ ಗ್ರಂಥಗಳಿಂದ ಉದ್ಧೃತವಾಗಿದ್ದರೂ ಇರಬಹುದು.

* ಇಷ್ಟುಮಾತ್ರವೇ ಅಲ್ಲ. ಈ ಶ್ರುತಕೀರ್ತಿಕೃತವಾದ ರಾಘವಪಾಂಡವೀಯವು ಈಗ ಉಪಲಭ್ಯಮಾನವಾದ ಧನಂಜಯಕೃತವಾದ ರಾಘವಪಾಂಡವೀಯವೆಂಬ ಸಂಸ್ಕೃತಗ್ರಂಥವೇ ಎಂದೂ, ತತ್ಕರ್ತೃವಾದ ಶ್ರುತಕೀರ್ತಿಯು ತನ್ನ ಕರ್ತೃತ್ವವನ್ನು ಗೋಪನಮಾಡುವುದಕ್ಕಾಗಿ ಧನಂಜಯ ಎಂಬ ಹೆಸರಿನಿಂದ ಆ ಕಾವ್ಯವನ್ನು ಬರೆದನೆಂದೂ, ಈ ರಹಸ್ಯವು ಪಂಪರಾಮಾಯಣದ ಕರ್ತೃವಾದ ನಾಗಚಂದ್ರನಿಗೆ ತಿಳಿದಿದ್ದುದರಿಂದ ಅವನು ಆ ಗ್ರಂಥದಲ್ಲಿ ಶ್ರುತಕೀರ್ತಿಯೇ ರಾಘವಪಾಂಡವೀಯದ ಕರ್ತೃವೆಂದು ಸ್ಪಷ್ಟವಾಗಿ ಹೇಳಿಬಿಟ್ಟನೆಂದೂ, ಮ|| ಪಾಠಕರು ಮೇಲ್ಕಂಡ ಪತ್ರಿಕೆಯಲ್ಲಿಯೂ (ಪುಟ ೧೪) ಮತ್ತು ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ್ ಆಫ್ ದಿ ರಾಯಲ್ ಏಷ್ಯಾಟಿಕ್ ಸೊಸೈಟಿ ಎಂಬ ಪತ್ರಿಕೆಯ ೨೧ನೆಯ ಸಂಪುಟದಲ್ಲಿಯೂ (ಪುಟ ೧ ಆದಿ) ಬರೆದಿರುವರು. ಇದನ್ನು ಡಾಕ್ಟರ್ ವಿಂಟರ್ನಿಟ್ಸ್‌ರವರೂ ಒಪ್ಪಿಕೊಂಡು, Geschichte der indischen Litteratur (ಭರತವರ್ಷೀಯ ವಾಙ್ಮಯದ ಇತಿವೃತ್ತ) ಎಂಬ ತಮ್ಮ ಗ್ರಂಥದ ೩ನೆಯ ಸಂಪುಟದ ೭೫ನೆಯ ಪುಟದಲ್ಲಿ 'ರಾಘವಪಾಂಡವೀಯ ಅಥವಾ ದ್ವಿಸಂಧಾನ ಕಾವ್ಯವನ್ನು ಶ್ರುತಕೀರ್ತಿಯೆಂಬ ನಾಮಾಂತರವುಳ್ಳ ಧನಂಜಯನೆಂಬ ದಿಗಂಬರಜೈನನು ಕ್ರಿ. ಶ. ೧೧೨೩—೧೧೪೦ ರಲ್ಲಿ ಬರೆದನು' ಎಂದು ಹೇಳಿರುವರು.

ಇದೆಲ್ಲವೂ ತಪ್ಪು. ಶ್ರುತಕೀರ್ತಿಯು ರಾಘವಪಾಂಡವೀಯವೆಂಬ ಕಾವ್ಯವನ್ನು ಬರೆದನೆಂದು ಮ|| ಪಾಠಕರು ಹೇಳುವುದಕ್ಕೆ ಪಂಪರಾಮಾಯಣದಲ್ಲಿನ 'ಶ್ರುತಕೀರ್ತಿ ತ್ರೈವಿದ್ಯ | ವ್ರತಿ ರಾಘವಪಾಂಡವೀಯಮುಂ ವಿಬುಧಚಮತ್ || ಕೃತಿಯೆನಿಸಿ ಗತಪ್ರತ್ಯಾ | ಗತದಿಂ ಪೇಳ್ದಮಳಕೀರ್ತಿಯಂ ಪ್ರಕಟಿಸಿದಂ ||' ಎಂಬ ಪದ್ಯವೊಂದಲ್ಲದೆ ಬೇರೆ ಯಾವ ಆಧಾರವೂ ಇಲ್ಲ. ಈ ಗ್ರಂಥವು ಒಂದು 'ಗತಪ್ರತ್ಯಾಗತ' ಕಾವ್ಯವೆಂದು ಇದೇ ಪದ್ಯದಲ್ಲಿಯೇ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಧನಂಜಯಕೃತವಾದ ರಾಘವಪಾಂಡವೀಯ ಅಥವಾ ದ್ವಿಸಂಧಾನಕಾವ್ಯವಾದರೋ (ಇದು ಕಾವ್ಯಮಾಲಾಗ್ರಂಥಾವಳಿಯಲ್ಲಿ ೪೯ ನೆಯದಾಗಿರುವದು ; ಕ್ರಿ.ಶ. ೧೮೯೫ನೆಯ ವರ್ಷದಲ್ಲಿ ಮುದ್ರಿತವಾಯಿತು) ಗತಪ್ರತ್ಯಾಗತಕಾವ್ಯವಲ್ಲವೆಂಬುದು ಆ ಕಾವ್ಯವನ್ನು ನೋಡುವವರೆಲ್ಲರಿಗೂ ಸ್ಪಷ್ಟವಾಗುವುದು. ಅಲ್ಲದೆ, ಈ ಕಾವ್ಯವನ್ನು ತಾನು ಬರೆದನೆಂಬ ವಿಷಯವನ್ನು ಮರೆಮಾಚು

ಸಮಾಧಿಶತಕವ್ಯಾಖ್ಯೆಯನ್ನು ಕ್ರಿ.ಶ. ೧೧೪೮ ರಲ್ಲಿ ಬರೆದ ಮೇಘಚಂದ್ರನೆಂದೂ, ಆ ಗ್ರಂಥದಲ್ಲಿ ಸ್ತುತನಾದ ಬಾಲಚಂದ್ರನು ಸುಜನೋತ್ತಂಸನ ಸಮಕಾಲೀನನಾದ ಬಾಲಚಂದ್ರನೆಂದೂ ಅವರ ಅಭಿಪ್ರಾಯ. ಎಂದರೆ ನಾಗಚಂದ್ರನಿಂದ ಪಂಪರಾಮಾಯಣದಲ್ಲಿ ಪರಿವಿಡಿಯಿಂದ ಸ್ತುತರಾಗಿರುವ ಬಾಲಚಂದ್ರ, ಮೇಘಚಂದ್ರ, ಶುಭಕೀರ್ತಿ, ವಾಸುಪೂಜ್ಯ, ಶ್ರುತಕೀರ್ತಿ, ವೀರಣಂದಿಗಳೆಂಬ ಜೈನಗುರುಗಳಿಗೆ ಪರಸ್ಪರ ಯಾವಸಂಬಂಧವೂ ಇಲ್ಲವೆಂದು ಅವರು ಭಾವಿಸಿರುವಂತೆ ತೋರುತ್ತದೆ.

ಇದೇವಿಧವಾದ ಅಭಿಪ್ರಾಯವೇ ಕವಿಚರಿತಕಾರರಿಗೂ ಇರುವುದೆಂದು ನಾವು ಮೇಲೆ ನೋಡಿದಂತೆ ಅವರು ಮೂರುನಾಲ್ಕುಮಂದಿ ಮೇಘಚಂದ್ರನಾಮಕರಾದ ಗುರುಗಳನ್ನು ಏಕೀಕರಿಸಿ ಒಬ್ಬಮನುಷ್ಯನನ್ನಾಗಿ ಮಾಡಿರುವುದರಿಂದಲೂ, ಕವಿಚರಿತೆಯಲ್ಲಿ ಇತರ ಕವಿಗಳ ಜೀವನಕಾಲವಿಚಾರದಲ್ಲಿರುವ ಬೇರೆ ವಾಕ್ಯಗಳಿಂದಲೂ ಕೂಡ ಸ್ಪಷ್ಟವಾಗುತ್ತದೆ.

ಈ ವಿಧವಾದ ಅಭಿಪ್ರಾಯವು ಸಾಧುವಾಗಿರುವಂತೆ ನಮಗೆ ಕಾಣುವುದಿಲ್ಲ. ಶ್ರವಣಬೆಳ್ಗೊಳದ ೫೫, ೪೭, ೫೦, ೪೦ ಮೊದಲಾದ ಶಿಲಾಲೇಖನಗಳಲ್ಲಿ ಕೀರ್ತಿತರಾದ ಗುರುಗಳು ಒಂದೇ ಗುರುಪರಂಪರೆಗೆ ಹೇಗೆ ಸೇರಿರುವರೋ ಹಾಗೆಯೇ ಜೈನಕವಿರಚಿತವಾದ ಕನ್ನಡಗ್ರಂಥಗಳ ಪ್ರಾರಂಭದಲ್ಲಿ ಕೀರ್ತಿತರಾದ ಜೈನಗುರುಗಳೂ ಪ್ರಾಯಶಃ* ಒಂದೇ ಪರಂಪರೆಗೆ ಸೇರಿರುವರೆಂದು ನಮಗೆ ತೋರುವುದು.

ವುದಕ್ಕಾಗಿ ಶ್ರುತಕೀರ್ತಿತ್ರೈವಿದ್ಯನು ಧನಂಜಯು ಎಂಬ ಹೆಸರಿನಿಂದ ಇದನ್ನು ಬರೆದನೆಂದೂ, ಈ ರಹಸ್ಯವು ಪಂಪರಾಮಾಯಣದ ಕರ್ತೃವಾದ ನಾಗಚಂದ್ರನಿಗೆ ತಿಳಿದಿತ್ತೆಂದೂ, ಅವನು ಅದನ್ನು ಪ್ರಕಾಶಪಡಿಸಿದನೆಂದೂ ಇದೇ ಮೊದಲಾದ ವಿಷಯಗಳನ್ನು ಬರೆಯುವುದಕ್ಕೆ ಮ|| ಪಾಠಕರಿಗೆ ಯಾವ ಆಧಾರವೂ ಇಲ್ಲದುದರಿಂದ ಅವರು ಇದನ್ನೆಲ್ಲಾ ಸ್ವಯಂ ಊಹಿಸಿರುವರೆಂದೇ ನಮಗೆ ತೋರುವುದು. ಅದು ಹೇಗಾದರೂ ಇರಲಿ. ಧನಂಜಯಕೃತವಾದ ರಾಘವಪಾಂಡವೀಯವಂತೂ ನಾಗಚಂದ್ರನು ಹೇಳಿರುವಂತೆ ಶ್ರುತಕೀರ್ತಿತ್ರೈವಿದ್ಯನಿಂದ ಬರೆಯಲ್ಪಟ್ಟ ಗತಪ್ರತ್ಯಾಗತಕಾವ್ಯವಲ್ಲವೆಂಬುದು ಸ್ಪಷ್ಟ. ಆ ಕಾವ್ಯದ ಕರ್ತೃವು ದಿಗಂಬರಜೈನನೆಂದೂ, ಅವನು ಕ್ರಿ. ಶ. ೧೧೨೩-೧೧೪೦ ರಲ್ಲಿ ಜೀವಿಸುತ್ತಿದ್ದನೆಂದೂ, ಹೇಳುವದಕ್ಕೂ ಕೂಡ ಯಾವ ಆಧಾರವೂ ಇಲ್ಲವೆಂಬುದು ಕೂಡ ಸ್ಪಷ್ಟವಾಗಿರುವದು.

* ಎಂದರೆ ಬೇರೆ ಪರಂಪರೆಗೆ ಸೇರಿದ ಗುರುಗಳು ಕೆಲವು ಕವಿಗಳಿಂದ ಕೀರ್ತಿತರಾಗಿಲ್ಲವೆಂದು ನಮ್ಮ ಅರ್ಥವಲ್ಲ. ಜನ್ನನು ತನ್ನ ಅನಂತನಾಥಪುರಾಣದ ಪ್ರಾರಂಭದಲ್ಲಿ ತನ್ನ ಗುರುವಿನ ಗುರುಪರಂಪರೆಯನ್ನು ಕೀರ್ತಿಸಿರುವುದಲ್ಲದೆ, ತನ್ನ ಹೆಂಡತಿ ಲಕುಮಾದೇವಿಯ ಗುರುವಾದ ಬಾಲಚಂದ್ರನ ಗುರುಪರಂಪರೆಯಲ್ಲಿ ಕೆಲವರನ್ನೂ ಕೂಡ ಹೊಗಳಿರುವನು (ಕವಿಚರಿತೆ I. ೨೬೬) ಆದರೆ ಈ ಎರಡುಪರಂಪರೆಯ ಗುರುಗಳನ್ನು ಒಂದುಮಾಡಿ ಸೇರಿಸಿಲ್ಲ. ಗ್ರಂಥವನ್ನು ಓದುವವರೆಲ್ಲರಿಗೂ ಎರಡು ಪರಂಪರೆಯ ಗುರುಗಳು ಸ್ತುತರಾಗಿರುವರೆಂಬುದು ಸ್ಪಷ್ಟವಾಗಿ ಕಾಣುವುದು.

ಎಂದರೆ ಕನ್ನಡಗ್ರಂಥಗಳ ಪ್ರಾರಂಭದಲ್ಲಿ ಕವಿಯು ತನ್ನ ಮನಸ್ಸಿಗೆ ತೋರಿದಂತೆ ಬೇರೆಬೇರೆ ಪರಂಪರೆಗಳಿಗೆ ಸೇರಿರುವ ಗುರುಗಳನ್ನು ಒಂದುಕಡೆ ಸೇರಿಸಿ ಸ್ತುತಿಸಿಲ್ಲ ವೆಂದೂ, ಅಲ್ಲಿ ಕೀರ್ತಿತರಾಗಿರುವ ಜೈನಗುರುಗಳು ಪ್ರಾಯಃ ಒಂದೇ ಗುರುಪರಂ ಪರೆಗೆ ಸೇರಿದವರೆಂದೂ ನಮ್ಮ ಅಭಿಪ್ರಾಯ. ಇದನ್ನು ನಿದರ್ಶಿಸುವುದಕ್ಕಾಗಿ ಅಗ್ಗ ಳನ ಚಂದ್ರಪ್ರಭಪುರಾಣದ ಪ್ರಾರಂಭದಲ್ಲಿ ಕೀರ್ತಿಸಲ್ಪಟ್ಟಿರುವ ಗುರುಗಳ ಹೆಸ ರುಗಳನ್ನು ಇಲ್ಲಿ ನಾವು ಉದಾಹರಿಸುವೆವು. ಇಲ್ಲಿ ಕ್ರಮವಾಗಿ (ಕವಿಚರಿತೆ I. ೨೨೫ ನ್ನು ನೋಡಿ) ಕೊಂಡಕುಂದ, ಭೂತಬಲಿ, ಪುಷ್ಪದಂತ, ವೀರಸೇನ, ಜಿನಸೇನ, ಅಕಳಂಕ, ಗೃಧ್ರಪಿಂಛ, ಅರ್ಹದ್ಬಲಿ, ಸಿಂಹನಂದಿ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಕುಂದಕುಂದಾನ್ವಯಕುಲಚಂದ್ರ, ಮಾಘಣಂದಿ, ಕನಕನಂದಿ, ಶ್ರುತಕೀರ್ತಿ, ಮುನಿಚಂದ್ರ, ನಯಕೀರ್ತಿ, ಉದಯಚಂದ್ರ, ವೀರಣಂದಿ, ಮಾಘ ಣಂದಿ, ವರ್ಧಮಾನ, ದೇವಚಂದ್ರ, ದಾಮನಂದಿ, ನೇಮಿಚಂದ್ರ, ಶ್ರುತಕೀರ್ತಿ ಯೆಂಬ ಗುರುಗಳು ಸ್ತುತಿಸಲ್ಪಟ್ಟಿರುವರು. ಇಲ್ಲಿ ಸ್ತುತನಾಗಿರುವ ಕುಂದಕುಂದಾ ನ್ವಯದ ಕುಲಚಂದ್ರನೂ, ಮಾಘಣಂದಿ, ಕನಕನಂದಿ, ಶ್ರುತಕೀರ್ತಿಗಳೂ ನಾವು ಮೇಲೆಹೇಳಿದ ತೇರ್ದಾಳದ ಶಿಲಾಲೇಖನದಲ್ಲಿಯೂ ಶ್ರ. ಬೆ. ೪೦ನೆಯ ಶಿಲಾಲೇಖ ನದಲ್ಲಿಯೂ ಸ್ತುತಿಸಲ್ಪಟ್ಟಿರುವ ಆ ಹೆಸರಿನ ಗುರುಗಳೇ ಆಗಿರುವರು. ಎಂದರೆ, ಅಗ್ಗಳನು ದೇಶೀಯಗಣದ ಪುಸ್ತಕಗಚ್ಛದ ಕೊಂಡಕುಂದಾನ್ವಯದ ಇಂಗಳೇ ಶ್ವರದ ಬಳಿಯ ಜೈನಗುರುಗಳ ಪರಂಪರೆಯನ್ನು ಸ್ತುತಿಸಿರುವನು. ಇದೇ ಗುರು ಪರಂಪರೆಯೇ ಶಾಂತೀಶ್ವರಪುರಾಣದಲ್ಲಿ ಕಮಲಭವನಿಂದಲೂ ಕೂಡ ಸ್ತುತವಾಗಿರು ವುದು. ಆದರೆ ಈ ಕಮಲಭವನು ಅಗ್ಗಳನಿಗಿಂತ ಸುಮಾರು ೪೦ ವರ್ಷ ಈಚೆಯ ವನಾದುದರಿಂದ ಅಗ್ಗಳನಿಂದ ಕೊನೆಯಲ್ಲಿ ಸ್ತುತನಾದ ಶ್ರುತಕೀರ್ತಿಗುರುವಿನಿಂದೀ ಚೆಗೆ ಇದೇ ಪರಂಪರೆಗೆ ಸೇರಿದ ಇನ್ನೂ ಕೆಲವು ಗುರುಗಳನ್ನು ಸ್ತುತಿಸಿರುವನು.

ಈ ಲಕುಮಾದೇವಿಯ ಗುರುವಾದ ಬಾಲಚಂದ್ರನ ಗುರುಪರಂಪರೆಯಲ್ಲಿ ಜನ್ನನಿಂದ ಹೊಗ ಳಲ್ಪಟ್ಟಿರುವ ಬಾಲಚಂದ್ರನ ಗುರುವಿನ ಗುರುವಾದ ಸಕಲಚಂದ್ರನೂ, ಅವನ ಗುರು ಕುಲಭೂಷ ಣನೂ, ಅವನ ಗುರು ಮುನಿಚಂದ್ರನೂ ಸೊರಬದ ೧೪೦ ನೆಯ ಶಾಸನದಲ್ಲಿಯೂ, ಈ ಮುನಿ ಚಂದ್ರನು ಶಿವಮೊಗ್ಗಾ ಜಿಲ್ಲೆಯ ಇನ್ನೂ ಇತರ ಶಾಸನಗಳಲ್ಲಿಯೂ ಸ್ತುತರಾಗಿರುವರು. ಇವರು ಮೂಲಸಂಘದ ಕ್ರಾಣೂರ್ (ಕಾಣೂರ್) ಗಣದ ತಿಂತ್ರಿಣೀಗಚ್ಛಕ್ಕೆ ಸೇರಿದವರೆಂದು ಈ ಶಾಸನಗ ಳಿಂದ ತಿಳಿಯುವುದು. ಬಾಲಚಂದ್ರನ ಗುರುವಿನಗುರುವಾದ ಸಕಲಚಂದ್ರನು (ಕ್ರಿ.ಶ. ೧೧೯೮ನೆಯ ಜನವರಿ ೨೨ನೇ ತಾರೀಖಿನಲ್ಲಿ) ಒಂದು ದಾನವನ್ನು ಸ್ವೀಕರಿಸಿದನೆಂದು ಮೇಲೆಹೇಳಿದ ಸೊರಬದ ೧೪೦ನೇ ಶಾಸನದಲ್ಲಿ ಹೇಳಲ್ಪಟ್ಟಿರುವುದು.

ಹೀಗೆ ಜೈನಕವಿಗಳು ತಮ್ಮ ಕನ್ನಡಗ್ರಂಥಗಳ ಆದಿಯಲ್ಲಿ ಸ್ತೋತ್ರ ಮಾಡುವ ಜೈನಗುರುಗಳು ಪ್ರಾಯಃ ಒಂದೇ ಗುರುಪರಂಪರೆಗೆ ಸೇರಿದವರಾದುದ ರಿಂದ ಹೀಗೆ ಕೀರ್ತಿಸಲ್ಪಟ್ಟ ಗುರುಗಳಲ್ಲಿ ಪ್ರತಿಯೊಬ್ಬನೂ ತನ್ನಹಿಂದೆ ಕೀರ್ತಿಸಲ್ಪ ಟ್ಟವನ ಶಿಷ್ಯನೋ* ಅಥವಾ ಸಧರ್ಮನೋ ಆಗಿರಬೇಕು. ಆದುದರಿಂದ ಒಂದು ಪರಂಪರೆಯಲ್ಲಿ ಸ್ತುತನಾದ ಜೈನಗುರುವಿನ ಹೆಸರು ಇನ್ನೊಂದುಕಡೆಯಲ್ಲಿ ಒಂದು ಪರಂಪರೆಯ ಮಧ್ಯದಲ್ಲಿ ಬಂದರೆ ಪ್ರಕೃತ ಜೈನಗುರುವಿನ ಹೆಸರಿನ ಹಿಂದೆಮುಂದೆ ಇರುವ ಹೆಸರುಗಳನ್ನು (ಎಂದರೆ ಈ ಹೆಸರಿನ ಗುರುವಿನಗುರು, ಶಿಷ್ಯ, ಸಧರ್ಮರ ಹೆಸರುಗಳನ್ನು) ನಾವು ಪರೀಕ್ಷಿಸಿ, ಅವುಗಳಲ್ಲಿ ಐಕ್ಯಬಂದಾಗ ಮಾತ್ರ ಪ್ರಕೃತ ಹೆಸರಿನಿಂದ ನಿರ್ದಿಷ್ಟರಾದ ಮನುಷ್ಯರು ಅಭಿನ್ನರೆಂದು ಹೇಳುವುದು ಯುಕ್ತವೇ ಹೊರತು ಹಿಂದೆಮುಂದೆ ಬರುವ ಹೆಸರುಗಳಲ್ಲಿ ಭೇದಗಳಿದ್ದಾಗ ಪ್ರಕೃತಹೆಸರಿನಿಂದ ನಿರ್ದಿಷ್ಟರಾದ ಮನುಷ್ಯರು ಅಭಿನ್ನರೆಂದು ಹೇಳುವುದು ಅಯುಕ್ತವಾಗಿರುವುದು.

ಎಂದರೆ, ಮೇಲೆಕಂಡ ತೇರ್ದಾಳದ ಶಿಲಾಲೇಖನದಲ್ಲಿ ಕೀರ್ತಿತನಾದ ಶ್ರುತ ಕೀರ್ತಿ-ತ್ರೈವಿದ್ಯನೂ, ಶ್ರ. ಬೆ. ೪೦ನೆಯ ಶಿಲಾಲೇಖನದಲ್ಲಿ ಕೀರ್ತಿತನಾದ ಶ್ರುತ ಕೀರ್ತಿ-ತ್ರೈವಿದ್ಯನೂ ಅಭಿನ್ನರೆಂದು ನಾವು ಹೇಳುವುದು ಯುಕ್ತವು. ಏಕೆಂದರೆ ಈ ಎರಡು ಶಿಲಾಲೇಖನಗಳಲ್ಲಿಯೂ ಕೂಡ ಈ ಶ್ರುತಕೀರ್ತಿ-ತ್ರೈವಿದ್ಯನ ಗುರುವು ಕುಲಚಂದ್ರಶಿಷ್ಯನಾದ ಮಾಘನಂದಿಯೆಂದೂ, ಇವನ ಸಧರ್ಮನು ಕನಕನಂದಿ ಯೆಂದೂ ಹೇಳಲ್ಪಟ್ಟಿರುವುದು. ಹೀಗೆಯೇ ಅಗ್ಗಳನಿಂದ ಗ್ರಂಥಾದಿಯಲ್ಲಿ ಸ್ತುತ ರಾದ ಜೈನಗುರುಗಳಲ್ಲಿ ಕನಕನಂದಿಯನಂತರ ಸ್ತುತನಾಗಿರುವ ಶ್ರುತಕೀರ್ತಿಯೂ ಇವನೇಯೆಂದು ಹೇಳುವುದೂ ಕೂಡ ಯುಕ್ತವಾಗಿರುವುದು. ಪಂಪರಾಮಾಯ ಣದ ಆದಿಯಲ್ಲಿ ಕೀರ್ತಿತವಾದ ಬಾಲಚಂದ್ರ, ಮೇಘಚಂದ್ರ, ಶುಭಕೀರ್ತಿ, ವಾಸು ಪೂಜ್ಯ, ಶ್ರುತಕೀರ್ತಿ, ವೀರಣಂದಿಯೆಂಬ ಜೈನಗುರುಪರಂಪರೆಯಲ್ಲಿ ಹೇಳಲ್ಪಟ್ಟಿ ರುವ ಶ್ರುತಕೀರ್ತಿಯು ಮೇಲಿನ ತೇರ್ದಾಳದ ಮತ್ತು ಶ್ರ. ಬೆ. ೪೦ನೆಯ ಶಿಲಾಲೇ ಖನಗಳಲ್ಲಿ ಸ್ತುತನಾಗಿರುವ ಶ್ರುತಕೀರ್ತಿಯೇ ಎಂದು (ಮ|| ಪಾಠಕರು ಹೇಳಿರು ವಂತೆ) ಹೇಳುವುದು ಅಯುಕ್ತವು. ಈ ಎರಡುಕಡೆಗಳಲ್ಲಿಯೂ 'ಶ್ರುತಕೀರ್ತಿ' ಎಂಬ ಹೆಸರಿನ ಹಿಂದೆಯೂ ಮುಂದೆಯೂ ಕೀರ್ತಿತವಾದ ಹೆಸರುಗಳು ಒಂದೇ ಯಾಗಿಲ್ಲದೆ ಬೇರೆಬೇರೆಯಾಗಿದ್ದು, ಈ ಎರಡುಕಡೆಗಳಲ್ಲಿ ಉಪಯುಕ್ತವಾಗಿರುವ ಶ್ರುತಕೀರ್ತಿ ಎಂಬ ಹೆಸರು ಬೇರೆಬೇರೆ ಮನುಷ್ಯರನ್ನು ನಿರ್ದೇಶಿಸುವುದೆಂದು ಸೂಚಿ

---

* ಶಿಷ್ಯನೆಂದರೆ ಸಾಕ್ಷಾತ್ತಾಗಿಯೇ ಆಗಲಿ ಅಥವಾ ಪರಂಪರಾಸಂಬಂಧದಿಂದಾಗಲೀ ಶಿಷ್ಯ ನೆಂದು (ಎಂದರೆ, ಶಿಷ್ಯ, ಶಿಷ್ಯನಶಿಷ್ಯ, ಶಿಷ್ಯನಪ್ರಶಿಷ್ಯ, ಪ್ರಶಿಷ್ಯನಪ್ರಶಿಷ್ಯ, ಇತ್ಯಾದಿ) ಅರ್ಥವು.

ಸುವುವು. ಹೀಗೆಯೇ ಪಂಪರಾಮಾಯಣದ ಆದಿಯಲ್ಲಿ ಕೀರ್ತಿತವಾದ ಜೈನಗುರು ಪರಂಪರೆಯಲ್ಲಿರುವ ಮೇಘಚಂದ್ರನೂ, ಶ್ರ. ಬೆ. ೪೭, ೫೫ ಮತ್ತು ೪೨ನೆಯ ಶಿಲಾಲೇಖನಗಳಲ್ಲಿ ಕೊಡಲ್ಪಟ್ಟಿರುವ ಜೈನಗುರುಪರಂಪರೆಗಳಲ್ಲಿ ಕೀರ್ತಿತರಾದ ಮೇಘಚಂದ್ರರೂ ಅಭಿನ್ನರೆಂದು (ಕವಿಚರಿತಕಾರರು ಹೇಳಿರುವಂತೆ) ಹೇಳುವುದು ಅಯುಕ್ತವೆಂದೂ, ವಸ್ತುತಃ ಈ ನಾಲ್ಕು ಗುರ್ವಾವಳಿಗಳಲ್ಲಿ ಕೀರ್ತಿತರಾದ ನಾಲ್ಕುಮಂದಿ ಮೇಘಚಂದ್ರರೂ ಬೇರೆಬೇರೆ ಮನುಷ್ಯರಾಗಿದ್ದರೆಂದೂ ಮೇಲೆಯೇ ಹೇಳಲ್ಪಟ್ಟಿರುವುದು.

* * * *

ಪಂಪರಾಮಾಯಣಕರ್ತೃವಾದ ಈ ನಾಗಚಂದ್ರನಿಂದ ವಿರಚಿತವಾದು ದೆಂದು ಪ್ರತೀತಿಯಿರುವ 'ಜಿನಮುನಿತನಯ' ಎಂಬ ಒಂದು ಗ್ರಂಥವು ಮುದ್ರಿತ ವಾಗಿ ಈಗ ಪ್ರಚಾರದಲ್ಲಿರುವುದು. ಇದು ನಾಗಚಂದ್ರನಿಂದ ರಚಿತವಾದುದೆಂಬು ದನ್ನು ಕವಿಚರಿತಕಾರರು ಒಪ್ಪುವುದಿಲ್ಲ. ಈ ವಿಷಯದಲ್ಲಿ ಅವರು

"'ಜಿನಮುನಿತನಯ' 'ಜಿನಾಕ್ಷರಮಾಲೆ' ಮೊದಲಾದ ಇತರ ಗ್ರಂಥಗಳನ್ನೂ ಕೂಡ ಈತನು ರಚಿಸಿದ್ದಾನೆಂದು ದೇವಚಂದ್ರನು ರಾಜಾವಳೀಕಥೆಯಲ್ಲಿ ಹೇಳುತ್ತಾನೆ. ಈಗ ಅಚ್ಚಾಗಿ ರುವ ಜಿನಮುನಿತನಯ ಎಂಬ ಗ್ರಂಥವು ಈ ಕವಿಯಿಂದ ರಚಿತವಾದುದೆಂಬ ಪ್ರತೀತಿಯಿದೆ. ಆದರೆ ಈ ಗ್ರಂಥದ ರಚನೆಯನ್ನು ನೋಡಿದರೆ ಇದಕ್ಕೂ ನಾಗಚಂದ್ರನ ಗ್ರಂಥಗಳಿಗೂ ಆವ ವಿಧ ವಾದ ಹೋಲಿಕೆಯೂ ಇರುವಂತೆ ತೋರುವುದಿಲ್ಲ. ಆಧುನಿಕನಾದ ಆವನೋ ಒಬ್ಬ ಸಾಧಾರಣ ಕವಿಯಿಂದ ಈ ಗ್ರಂಥವು ರಚಿತವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ನಮಗೆ ಸಿಕ್ಕಿದ ಈ ಗ್ರಂಥದ ಓಲೆಯಪ್ರತಿಯಲ್ಲಿ—

ಕೇಳುವಭವ್ಯರಪುಣ್ಯಂ | ಪೇಳುವಕವಿನೂತನಾಗಚಂದ್ರನಭಾಗ್ಯಂ ||
ಪಾಲಿಪಜಿನೇಂದ್ರಧರ್ಮಣವ | ನೇಳಿಸದಿರುವೋಕ್ಷಗಾಮಿಜಿನಮುನಿತನಯಾ ||

ಎಂಬ ಪದ್ಯವು ಇದೆ. "ಕವಿನೂತನಾಗಚಂದ್ರ" ಎಂಬುದರಿಂದ 'ಜಿನಮುನಿತನಯ' ವನ್ನು ಬರೆ ದವನು 'ಅಭಿನವನಾಗಚಂದ್ರ' ಎಂದು ಹೆಸರಿಟ್ಟುಕೊಂಡಿದ್ದ ಹಾಗೆ ತೋರುತ್ತದೆ. 'ಕವಿನೂತ ನಾಗಚಂದ್ರ' ಎಂಬುದನ್ನು 'ಕವಿವಿನುತನಾಗಚಂದ್ರ' ಎಂದು ಅಚ್ಚುಹಾಕಿರುವುದರಿಂದ ಈ ಗ್ರಂಥವು ನಾಗಚಂದ್ರಕೃತವೆಂಬ ಭ್ರಮೆಗೆ ಅವಕಾಶವುಂಟಾದಂತೆ ಕಾಣುತ್ತದೆ. ಜಿನಾಕ್ಷರಮಾಲೆ ಎಂಬ ಒಂದು ಗ್ರಂಥವು ಪೊನ್ನನಿಂದ ರಚಿತವಾಗಿದೆ ಎಂದು ಹಿಂದೆಯೇ ತಿಳಿಸಿದ್ದೇವೆ. ನಾಗಚಂ ದ್ರನೂ ಒಂದು ಜಿನಾಕ್ಷರಮಾಲೆಯನ್ನು ರಚಿಸಿದ್ದಾನೆಯೋ ಅಥವಾ ದೇವಚಂದ್ರನೇ ಭ್ರಮಿಸಿ ದ್ದಾನೆಯೋ ತಿಳಿಯದು"

ಎಂದು ಕವಿಚರಿತೆ I. ೮೦-೮೧ರಲ್ಲಿ ಹೇಳಿ, ಕವಿಚರಿತೆಯ ೨ನೇ ಸಂಪುಟದ ೪೨೦ನೆಯ ಪುಟದಲ್ಲಿಯೂ ಕೂಡ

" ನೂತನಾಗಚಂದ್ರ—ಸು. 1650—ಈತನು ಜಿನಮುನಿತನಯ ಎಂಬ ಗ್ರಂಥವನ್ನು ಬರೆದಿದ್ದಾನೆ. ಇವನು ಜೈನಕವಿ. ರಾಮಚಂದ್ರಚರಿತಪುರಾಣ, ಮಲ್ಲಿನಾಥಪುರಾಣ ಇವುಗಳನ್ನು ಬರೆದ ಪ್ರಸಿದ್ಧನಾದ ನಾಗಚಂದ್ರನಿಗೆ ತಾನು ಎರಡನೆಯವನು ಎಂಬ ಭಾವದಿಂದ "ನೂತನಾಗಚಂದ್ರ" ಅಥವಾ "ಅಭಿನವನಾಗಚಂದ್ರ" ಎಂದು ಹೆಸರಿಟ್ಟುಕೊಂಡಂತೆ ಕಾಣುತ್ತದೆ. ಅಚ್ಚಾಗಿರುವ ಒಂದು ಪುಸ್ತಕದಲ್ಲಿ ಕವಿನೂತನಾಗಚಂದ್ರ ಎಂಬುದನ್ನು ಕವಿವಿನುತನಾಗಚಂದ್ರ ಎಂದು ತಿದ್ದಿದ್ದಾರೆ. ಇದರಿಂದ ಪ್ರಸಿದ್ಧನಾದ ನಾಗಚಂದ್ರನೇ ಈ ಗ್ರಂಥವನ್ನು ಬರೆದಿರಬಹುದು ಎಂಬ ಭ್ರಮೆಗೆ ಅವಕಾಶವಾಯಿತು. ನಾಗಚಂದ್ರನ ಶೈಲಿಗೂ ಇವನ ಶೈಲಿಗೂ ಸಂಬಂಧವೇ ಇಲ್ಲ. ಇವನು ಆಧುನಿಕ ಕವಿ. ಸುಮಾರು 1650ರಲ್ಲಿ ಇದ್ದಿರಬಹುದು."

ಎಂದು ಬರೆದಿರುವರು.

ಇಲ್ಲಿ 'ಕವಿನೂತನಾಗಚಂದ್ರ' ಎಂಬ ಪದಾಂತರ್ಗತವಾದ 'ನೂತ' ಎಂಬ ಪದವು ನೂತ್ನ, ನೂತನ, ಎಂಬಪದಗಳ ಸಜಾತೀಯವೆಂದೂ ಈ ಪದಗಳಂತೆ 'ಅಭಿನವ' ಎಂಬ ಅರ್ಥವನ್ನು ಬೋಧಿಸುವುದೆಂದೂ ಕವಿಚರಿತಕಾರರು ಭಾವಿಸಿರುವಂತೆ ತೋರುವುದು. ಈ ಭಾವನೆಯು ತಪ್ಪು. ನೂತ ಎಂಬ ಪದವು ಸ್ತುತ್ಯರ್ಥಕವಾದ ನೂ* ಎಂಬ ಧಾತುವಿನಿಂದ (ತುದಾದಿ ೧೧೬ ಣೂಸ್ತವನೇ) ನಿಷ್ಪನ್ನವಾಗಿದ್ದು 'ಸ್ತುತ' ಎಂಬ ಪದಕ್ಕೆ ಸಮಾನಾರ್ಥಕವಾಗಿರುವುದು. ಈ ನೂ ಧಾತುವು ವೇದಮಂತ್ರಗಳಲ್ಲಿ† ವಿಶೇಷವಾಗಿ ಉಪಯೋಗಿಸಲ್ಪಟ್ಟಿದ್ದು ಕಾವ್ಯಪುರಾಣಾದಿಗಳಲ್ಲಿಯೂ ಕೂಡ ಸ್ವಲ್ಪಮಟ್ಟಿಗೆ ಪ್ರಯುಕ್ತವಾಗಿರುವುದು.‡ 'ನೂತ' ಎಂಬ ಪದವಂತೂ ಸಂಸ್ಕೃತಕವಿಗಳಿಗಿಂತಲೂ ಕನ್ನಡಕವಿಗಳಲ್ಲೇ ವಿಶೇಷವಾಗಿ ಬಳಕೆಯಲ್ಲಿರುವುದು; ಉದಾಹರಣೆ: ದುರ್ಗಸಿಂಹನ ಪಂಚತಂತ್ರ, ಪದ್ಯ ೩೪ (ಇದನ್ನು ನಾವು ಮೇಲೆ ೧೯ನೆಯ ಪುಟದಲ್ಲಿ ಅನುವದಿಸಿರುವೆವು):—" ಸಕಳೋರ್ವೀಶ್ವರದಂಡನಾಯಕವಿನೂತಾಂಘ್ರಿದ್ವಯಂ;" ಇದೇ ಪಂಚತಂತ್ರದ ೯ನೆಯ

---

* ಸ್ತುತ್ಯರ್ಥಕವಾದ ನು ಎಂಬ ಬೇರೆ ಧಾತುವೂ ಒಂದು ಉಂಟು. ಇದು ಹ್ರಸ್ವ ಉಕಾರಾಂತಧಾತು, (ಅದಾದಿ ೨೫ ಣುಸ್ತುತೌ); ನೂ ಧಾತುವು ದೀರ್ಘ ಊಕಾರಾಂತಧಾತು; ಇದು ತುದಾದಿಗಣಕ್ಕೆ ಸೇರಿದ್ದು. ಆರ್ಧಧಾತುಕಲಕಾರಗಳಲ್ಲಿ ಈ ಎರಡು ಧಾತುಗಳ ರೂಪಗಳಿಗೆ ಭೇದ ಕಾಣುವುದಿಲ್ಲ.

† ಉದಾಹರಣೆಗಳನ್ನು ವೆಸ್ಟರ್‌ಗಾರ್ಡ್‌ರವರ 'ರ್‍ಯಾಡಿಕೆಸ್ ಲಿಂಗ್ವೆ ಸಂಸ್ಕೃತೆ' ಎಂಬ ಗ್ರಂಥದಲ್ಲಿ (Westergaard: Radices Linguae Sanskritae) ನೋಡಿ.

‡ ಭಾಗವತ ೧-೮-೪೪ : ಪೃಥಯೇತ್ಥಂ ಕಲಪದೈಃ ಪರಿಣೂತಾಖಿಲೋದಯಃ |
ಮಂದಂ ಜಹಾಸ ವೈಕುಂಠೋ ಮೋಹಯನ್ನಿವ ಮಾಯಯಾ ||

ಸಿದ್ಧಾಂತಕೌಮುದೀ (ತಿಙಂತತುದಾದಿಪ್ರಕರಣ): ಪರಿಣೂತಗುಣೋದಯಃ.

ಪುಟದಲ್ಲಿ ೧, ೨ ನೆಯ ಪಂಕ್ತಿಗಳು:—"ಮನ್ವಾದಿಪುರಾಣಮುನಿಗಣಪ್ರಣೂತ ಶ್ರುತಿವಿಹಿತಶುದಮಾರ್ಗನುಂ ಪ್ರಣೂತಾತ್ಮೀಯಬಂಧುವರ್ಗನುಂ"; ಶ್ರ. ಬೆ. ೪೧ ನೆಯ ಶಾಸನ, ೧೮ ನೆಯ ಪಂಕ್ತಿ:—"ನಿಖಿಳಮುನಿವಿನೂತೋರಾಗಕೋಪಾದಿಘಾತಃ"; ೫೧ ನೆಯ ಶಾಸನ, ೪ ನೇ ಪಂಕ್ತಿ:—"ಸಕಳಜನವಿನೂತಂ ಚಾರುಬೋಧತ್ರಿನೇತ್ರಂ"; ಚಿಕ್ಕನಾಯಕನಹಳ್ಳಿ ೨೧ ನೇ ಶಾಸನ, ೧೪ ನೆಯ ಪಂಕ್ತಿ:—"ದೇವಶ್ರೀನರಸಿಂಹಭೂಪ ವಿಜಯಶ್ರೀಶಪ್ರಣೂತೋಭವ"; ತುಮಕೂರ ೯ನೆಯ ಶಾಸನ, ೨೦ನೇ ಪಂಕ್ತಿ:—"ಸುಭಟನಧಿಕವಿನೂತಂ ತಾಂನೆಗರ್ದನೆಳೆಗೆ ಗಡ್ಡದಗಂಗ."

ಹೀಗಿರುವಾಗ ಕವಿಚರಿತಕಾರರು ಇದನ್ನೆಲ್ಲಾ ಅರಿಯದವರಂತೆ ಕವಿನೂತ ನಾಗಚಂದ್ರ ಎಂಬ ಸಮಸ್ತಪದವನ್ನು ಕವಿ, ನೂತನಾಗಚಂದ್ರ ಎಂದು ವಿಭಾಗಿಸಿ 'ಜಿನಮುನಿತನಯ' ವನ್ನು ಬರೆದ ಕವಿಗೆ ನೂತನಾಗಚಂದ್ರ ಎಂದು ನಾಮಕರಣ ಮಾಡಿ, ಆ ಕವಿಯು 'ರಾಮಚಂದ್ರಚರಿತಪುರಾಣ, ಮಲ್ಲಿನಾಥಪುರಾಣ ಇವುಗಳನ್ನು ಬರೆದ ಪ್ರಸಿದ್ಧನಾದ ನಾಗಚಂದ್ರನಿಗೆ ತಾನು ಎರಡನೆಯವನು ಎಂಬ ಭಾವದಿಂದ "ನೂತನಾಗಚಂದ್ರ" ಅಥವಾ "ಅಭಿನವನಾಗಚಂದ್ರ" ಎಂದು ಹೆಸರಿಟ್ಟುಕೊಂಡಂತೆ ಕಾಣುತ್ತದೆ' ಎಂದು ಹೇಳಿರುವುದನ್ನು ನೋಡಿದರೆ ನಮಗೆ ಅತ್ಯಾಶ್ಚರ್ಯವಾಗುವುದು.

'ಕವಿನೂತನಾಗಚಂದ್ರ' ಎಂದರೆ ಕವಿಸ್ತುತನಾದ ನಾಗಚಂದ್ರನೆಂದು* ಅರ್ಥವು. 'ಕವಿವಿನುತನಾಗಚಂದ್ರ' ಎಂದರೂ ಇದೇ ಅರ್ಥವಾದ್ದರಿಂದ, ಮುದ್ರಿತ ಗ್ರಂಥದಲ್ಲಿರುವ ಈ ಪಾಠವು ಪ್ರಾಯಶಃ ಒಂದು ಪಾಠಾಂತರವೇ ಇರಬಹುದು. ಆದುದರಿಂದ ಗ್ರಂಥವನ್ನು ಅಚ್ಚುಹಾಕಿದ ಪಂಡಿತರು 'ಕವಿನೂತ' ಎಂಬುದನ್ನು 'ಕವಿವಿನುತ' ಎಂದು ತಿದ್ದಿದ್ದಾರೆಂಬ ಕವಿಚರಿತಕಾರರ ಅಭಿಪ್ರಾಯವೇ ಸರಿಯೆಂದು ಹೇಳುವುದಕ್ಕಾಗುವುದಿಲ್ಲ.

ಅದು ಹೇಗಾದರೂ ಆಗಲಿ. ಜಿನಮುನಿತನಯ ಎಂಬ ಗ್ರಂಥವನ್ನು ನಾಗಚಂದ್ರನೆಂಬವನು ಬರೆದನೆಂಬುದು ಸ್ಪಷ್ಟ. ಈ ಜಿನಮುನಿತನಯ ಎಂಬ ಗ್ರಂಥದ ಶೈಲಿಗೂ ನಾಗಚಂದ್ರನು ಬರೆದಿರುವ ರಾಮಚಂದ್ರಚರಿತಪುರಾಣ ಮಲ್ಲಿನಾಥಪುರಾಣಗಳ ಶೈಲಿಗೂ ಯಾವ ವಿಧವಾದ ಹೋಲಿಕೆಯೂ ಇಲ್ಲವೆಂದು ಕವಿಚರಿತ

---

* ಕನ್ನಡಕವಿಗಳು ತಮ್ಮ ಕೃತಿಗಳಲ್ಲಿ ತಮ್ಮನ್ನೇ ಹೊಗಳಿಕೊಳ್ಳುವ ವಾಡಿಕೆಯುಂಟಷ್ಟೆ. ಇದಕ್ಕನುಸಾರವಾಗಿ ಕವಿಯು ಇಲ್ಲಿ ತಾನು 'ಕವಿವಿನುತ' ಎಂದರೆ ವಿಬುಧಸ್ತುತನಾಗಿದ್ದನೆಂದು ಹೇಳಿಕೊಂಡಿದ್ದಾನೆ.

ಕಾರರು ಹೇಳಿ 'ಜಿನಮುನಿತನಯ' ವನ್ನು ಬರೆದ ನಾಗಚಂದ್ರನು ಮೇಲ್ಕಂಡ ಗ್ರಂಥಗಳ ಕರ್ತೃವಾದ ನಾಗಚಂದ್ರನಿಂದ ಭಿನ್ನನೆಂದೂ ಅವನು ಯಾವನೋ ಒಬ್ಬ ಸಾಧಾರಣಕವಿಯೆಂದೂ ಸುಮಾರು ೧೬೫೦ ರಲ್ಲಿ ಇದ್ದಿರಬಹುದು ಎಂದೂ ಹೇಳಿರುವರು.

ಮೇಲ್ಕಂಡ ಈ ಎರಡು ಗ್ರಂಥಗಳ ಶೈಲಿಗೂ 'ಜಿನಮುನಿತನಯ' ದ ಶೈಲಿಗೂ ಹೋಲಿಕೆಯೇನೂ ಇಲ್ಲವೆಂಬುದನ್ನು ಬೇಕಾದರೆ ನಾವೂ ಒಪ್ಪಿಕೊಳ್ಳೋಣ. ಆದರೆ ಅಷ್ಟುಮಾತ್ರದಿಂದ ಈ 'ಜಿನಮುನಿತನಯ' ದ ಕರ್ತೃವು ಮೇಲ್ಕಂಡ ಎರಡು ಗ್ರಂಥಗಳ ಕರ್ತೃವಿನಿಂದ ಭಿನ್ನನೆಂದು ನಾವು ಹೇಳುವುದಕ್ಕಾಗುವುದಿಲ್ಲ. ಜಿನಮುನಿತನಯ, ಜಿನಾಕ್ಷರಮಾಲೆ ಮೊದಲಾದ ಈ ವಿಧ ಗ್ರಂಥಗಳಲ್ಲಿ ಕವಿಗೆ ಕವಿತಾಶಕ್ತಿಯನ್ನು ಪ್ರಕಟಿಸುವದಕ್ಕೆ ಏನು ಅವಕಾಶ ದೊರಿಯುವುದು ? ಇಂತಹ ಗ್ರಂಥದಲ್ಲಿ ಅವಕಾಶ ದೊರೆಯದಿದ್ದುದರಿಂದ ಕವಿಯು ತನ್ನ ಶಕ್ತಿಯನ್ನು ಪ್ರಕಟಿಸದಿದ್ದಮಾತ್ರಕ್ಕೆ ಆ ಕವಿಗೆ ಕವಿತಾಶಕ್ತಿಯೇ ಇಲ್ಲವೆಂದೂ, ಕವಿತಾಶಕ್ತಿಯನ್ನು ಪ್ರಕಟಿಸುವುದಕ್ಕೆ ಅವಕಾಶ ದೊರೆತು, ಹಾಗೆ ತನ್ನ ಕವಿತಾಶಕ್ತಿಯನ್ನು ಪ್ರಕಟಿಸಿರುವ ಇತರ ದೊಡ್ಡ ಗ್ರಂಥಗಳನ್ನು ಇವನು ಬರೆದಿರಲಾರನೆಂದೂ, ಹೇಳುವುದು ನ್ಯಾಯವೇ ? ಶಾಂತಿಪುರಾಣದ ಕರ್ತೃವಾದ ಪೊನ್ನನು ಜಿನಾಕ್ಷರಮಾಲೆಯೆಂಬ ಒಂದು ಗ್ರಂಥವನ್ನು ಬರೆದಿರುವನೆಂಬುದನ್ನು ಕವಿಚರಿತಕಾರರೂ ಒಪ್ಪಿ, ೩೮, ೩೯ನೆಯ ಪುಟಗಳಲ್ಲಿ ಈ ಗ್ರಂಥದಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆದಿರುವರು. ಈ ಜಿನಾಕ್ಷರಮಾಲೆಯ ಶೈಲಿಗೂ ಶಾಂತಿಪುರಾಣದ ಶೈಲಿಗೂ ಅಂತಹ ಹೋಲಿಕೆಯೇನೂ ಕಾಣುವುದಿಲ್ಲವಾದ್ದರಿಂದ ಕವಿಚರಿತಕಾರರ ಯುಕ್ತಿವಾದವನ್ನವಲಂಬಿಸಿ, ಈ ಜಿನಾಕ್ಷರಮಾಲೆಯನ್ನು ಬರೆದ ಪೊನ್ನನು ಶಾಂತಿನಾಥಪುರಾಣವನ್ನು ಬರೆದಿರಲಾರನೆಂದೂ, ಆ ಗ್ರಂಥವನ್ನು ಬರೆದಿರುವ ಪ್ರಸಿದ್ಧನಾದ ಪೊನ್ನನಿಂದ ಭಿನ್ನನಾದ ಯಾವನೋ ಒಬ್ಬ ಸಾಧಾರಣಕವಿಯಾಗಿರಬೇಕೆಂದೂ ವಾದಿಸುವದಕ್ಕಾಗುವುದಿಲ್ಲವೇ ?

ಇದನ್ನೆಲ್ಲಾ ಪರ್ಯಾಲೋಚಿಸಿದಲ್ಲಿ ಕವಿಚರಿತಕಾರರ ಯುಕ್ತಿವಾದವು ಅಷ್ಟೇನೂ ಪ್ರಯೋಜನಕಾರಿ ಅಲ್ಲವೆಂದೂ, ರಾಮಚಂದ್ರಚರಿತಪುರಾಣದ ಕರ್ತೃವಾದ ನಾಗಚಂದ್ರನೇ ಈ ಜಿನಮುನಿತನಯವನ್ನು ಬರೆದನೆಂದು ಈಗ ಹರಡಿಕೊಂಡಿರುವ ಪ್ರತೀತಿಯು * ವಾಸ್ತವವಾಗಿ ತಪ್ಪೆಂಬುದನ್ನು ಸ್ಪಷ್ಟವಾಗಿ ಸ್ಥಾಪಿಸುವ

* ಪಂಪರಾಮಾಯಣದ ಕರ್ತೃವಾದ ನಾಗಚಂದ್ರನು ಜಿನಮುನಿತನಯ, ಜಿನಾಕ್ಷರಮಾಲೆ ಮೊದಲಾದ ಇತರ ಗ್ರಂಥಗಳನ್ನು ರಚಿಸಿದ್ದಾನೆಂದು ದೇವಚಂದ್ರನು ರಾಜಾವಳೀ ಕಥೆಯಲ್ಲಿ ಹೇಳಿ

ದಕ್ಕೆ ಸಾಕಾದಷ್ಟು ಆಧಾರಗಳು ದೊರೆಯುವವರೆಗೂ ಈ ನಾಗಚಂದ್ರನೇ ಜಿನಮುನಿತನಯುವನ್ನು ಬರೆದನೆಂದು ತಿಳಿದುಕೊಂಡಿರುವುದೇ ಸದ್ಯಸ್ಥಿತಿಯಲ್ಲಿ ಉತ್ತಮ ಪಕ್ಷವೆಂದೂ, ನಮಗೆ ತೋರುವುದು.

ರುವನು. ಈ ದೇವಚಂದ್ರನ ಮಾತುಗಳಲ್ಲಿ ನಮಗೆ ಸ್ವಲ್ಪವಾದರೂ ನಂಬಿಕೆ ಇದ್ದಿದ್ದರೆ ಈಗ ಮುದ್ರಿತವಾಗಿರುವ ಜಿನಮುನಿತನಯವು ಈ ನಾಗಚಂದ್ರನಿಂದಲೇ ಬರಿಯಲ್ಪಟ್ಟಿತೆಂದು ನಿಸ್ಸಂದೇಹವಾಗಿ ಹೇಳಿಬಿಡುತ್ತಿದ್ದೆವು. ಆದರೆ ಇವನು ಸುತರಾಂ ಅವಿಶ್ವಾಸ್ಯನಾಗಿರುವುದರಿಂದ ಇವನ ಮಾತಿಗೆ ಯಾವ ಬೆಲೆಯನ್ನೂ ಕೊಡುವುದಕ್ಕಾಗುವುದಿಲ್ಲ.

ನಿರೀಶ :—ನನಗೇನೋ ಸ್ವಲ್ಪ ಸಂದೇಹ; ಏಕೆಂದರೆ,.........

ಯುವಕಪೌರ :—(ಕಂಗನೆ ಕೆರಳ್ದು,) ಏನೋ! ನಮ್ಮ ವೀರಮಹಾರಾಜರನ್ನು ಬಯ್ಯುವುದೂ ಅಲ್ಲದೆ, ನಾವೀಗ ಇಲ್ಲಿ ಮಾತನಾಡಿದವರನ್ನಿನಿಬರನ್ನೂ ಸುಳ್ಳರೆಂದು ಕಿರುಕುಳರೆಂದು ಕೂಗುವೇ?—ಜೋಕೆ!

ಪಟ್ಟಣಿಗರೆಲ್ಲ :—(ಕ್ರುದ್ಧರಾಗಿರುವರು.)

ನಿರೀಶ :—(ಸಮಸ್ತರನ್ನೂ ಪರಿಕಿಸುತಿದ್ದು,) ಮಹನೀಯರೆ, ನಿಮ್ಮಂತಹ ಸದ್ಗೃಹಸ್ಥರ ಮಾತುಗಳನ್ನು ಕಟ್ಟುಕವೆಂದು ಕೀಳ್ಪಡಿಸಲು ನನಗಿಷ್ಟವಿಲ್ಲ; ನಿಮ್ಮ ಮಹಾರಾಜರು ನೀವು ಕೀರ್ತಿಸಿದಂತಹವರೇ ಆಗಿರುವುದಾದರೆ, ನೀವು ಬಹಳ ಪುಣ್ಯವಂತರು.

ಪೌರರು :—(ಕಳಿಯೇರುವರು.)

ಯುವಕಪೌರ :—(ಪ್ರಸನ್ನನಾಗಿ,) ಹಾಗೆ ಮಾತನಾಡು.—ಈಗಳೀಗ ನೀನೊಂದು ಮನುಷ್ಯನಾದೆ.

ನಿರೀಶ :—ಅಯ್ಯಾ, ಶ್ರೀಮನ್ಮಹೀಶೂರಮಹಾರಾಜ ಶ್ರೀ ರಣಧೀರಕಂಠೀರವನರಸರಾಜಒಡೆಯರ ಪ್ರಜೆಗಳಾಗಿರುವ ಸೌಭಾಗ್ಯರೆ!—ಅಷ್ಟುಹೊತ್ತಿನಿಂದ ನಿಮ್ಮ ಮಹಾರಾಜರನ್ನು ನಾನು ಅವಹೇಳನ ಮಾಡುತಿದ್ದ ನನ್ನ ಮಹಾಪರಾಧವನ್ನು ನೀವೆಲ್ಲರೂ ಕೃಪೆಮಾಡಿ ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಳ್ವೆನು. (ಕಯ್ಮುಗಿದು ನಮಿಸುವನು.)

ಅಯ್ದನೆಯವನು :—ಭಾಪು!

ಮೊದಲನೆಯವನು :—ಒಳ್ಳೆಯ ಹುಡುಗ.

ಎರಡನೆಯವನು :—ಪಾಪ!

ಆರನೆಯವನು :—ಹೆದರಿಬಿಟ್ಟನು, ಅಹುದು.

ಮೂರನೆಯವನು :—(ಜನಾಂತಿಕದಲ್ಲಿ,) ಇಲ್ಲ, ಮಾವ; ಅವನ ಮುಖವನ್ನು ನೋಡು; ಹೆದರಿದವರ ಮುಖದಲ್ಲಿ ಆ ಗಾಂಭೀರ್ಯವೂ ಆ ತೇಜಸ್ಸೂ ಇರುವುವೆ?

ಯುವಕಪೌರ :—(ಸನ್ತೋಷದಿಂದ,) ಅಯ್ಯಾ, ನರಸೀಪುರದ ಮಿತ್ರನೆ! ನಿನ್ನ ಆ ಮಹಾಪರಾಧಕ್ಕೆ ಪ್ರಾಯಶ್ಚಿತ್ತವಾಗಿ ನಿನ್ನೆರಡು ಕೆನ್ನೆಗಳಿಗೂ ನೀನೇ ಬೆಚ್ಚಗೆ ಹೊಡೆದುಕೊ, ನೋಡೋಣ!

ನಿರೀಶ :—(ತನ್ನೆರಡು ಕೆನ್ನೆಗಳಿಗೂ ಹೊಡೆದುಕೊಂಡು,) ಪುಣ್ಯಶಾಲಿಗಳಿರಾ! ನಿಮ್ಮ ರಣಧೀರಮಹಾರಾಜರು ನೀವು ಸೂಚಿಸಿದಂತೆ ಅಂತಹ ಶೂರಪರಾಕ್ರಮಿ ಸೋಲವೆಡೆಗಿಡಿಸದ ಸಾಹಸಿಯೇ ಆಗಿರುವುದುಂಟಾದರೆ, ಅಜ್ಞಾತಕುಲಗೋತ್ರನಾದ ದಳವಾಯಿಯೊಬ್ಬನು ಅವರನ್ನು ಇಷ್ಟು ಸುಲಭವಾಗಿ ಹಿಡಿದು, ಕಯ್ಸೆರೆಯ ಬಂದಿಯನ್ನೆಂಬಂತೆ ಅರಮನೆಯೊಳಗೆ ಕೂಡಿಸಿ, ಕಾವಲಿಡುವುದು ಸಾಧ್ಯವಾಗುತ್ತಿದ್ದಿತೆ?—ಎಂದು ನನಗೆ ಸಂಶಯವುಂಟಾಗಿದ್ದಿತು.

ಪೌರರೆಲ್ಲ :—ಹಾ!

ಎರಡನೆಯವನು :—ಅರಮನೆಯ ಒಳಗೆ ಅಲ್ಲವಯ್ಯಾ; ಅಲ್ಲಿಯ ಹೊರಗಣ ಅಂಗಣದಲ್ಲಿ.

ಯುವಕಪೌರ :—ಆ ದಳವಾಯಿ! ರಾಕ್ಷಸವಿಕ್ರಮರಾಯ!

ಅಯ್ದನೆಯವನು :—ನಮ್ಮ ಮಹಾರಾಜರನ್ನು ಪಟ್ಟಾಭಿಷೇಕಕ್ಕೆಂದು ಈ ಮಹೀಸುರಪುರಕ್ಕೆ ಕರೆಯಿಸಿ, ಅವರಿಲ್ಲಿಗೆ ಬಂದೊಡನೆ ತಾನು—ಇಲ್ಲಿಯೇ ಇದ್ದೂ ಅವರ್ಗೆ ಕಯ್ಗಾಣ್ಕೆಯನ್ನೊಪ್ಪಿಸದೆಯೇ—ಅವಸರದ ರಾಜಕಾರ್ಯಕ್ಕೆಂದು ಕನ್ನಂಬಾಡಿಯತ್ತ ಹೊರಟು ಹೋದನು. ಅದರರ್ಥವು ನಿಮಗೆಲ್ಲ ತಿಳಿದುದೇನು?

ಪಟ್ಟಣಿಗರು :—ಧೂರ್ತ! ಧೃಷ್ಟದಳವಾಯಿ!

ಅಯ್ದನೆಯವನು :—ಹೀಗೆಯೇ ತನ್ನ ದುರಧಿಕಾರವು ಬಳೆದಂತೆ ಪಟ್ಟಕ್ಕೇರುವ ಮಹಾರಾಜರ ವಿಷಯದಲ್ಲಿ ಅಲಕ್ಷ್ಯ ಉಪೇಕ್ಷೆ ಕೃತ್ರಿಮ ವಂಚನೆ ದ್ರೋಹ ಇವನ್ನು ಕಯ್ಕೊಡಿಸಿಕೊಳ್ಳುತಿದ್ದು, ಕಟ್ಟಕಡೆಗೆ, ಸಮಯವಳವಟ್ಟು ಬಂದಾಗ, ಮಹೀಸುರದೇಶದ

ರತ್ನಸಿಂಹಾಸನವನ್ನು ಈ—ದಳವಾಯಿ ವಿಕ್ರಮರಾಯನು ಏರಿ, ನಮ್ಮ ಮಹಾರಾಜನಾಗಬೇಕೆಂದಾಲೋಚಿಸಿ ಹೊಂಚುತಿದ್ದಾನೆ.

ಪೌರರು :—ಅಯ್ಯೋ! ಅವನು ನೆಗೆದುಬೀಳ!
ಆ ಚಣ್ಡಾಲನು ಸತ್ತು ಹಾಳಾಗಲಿ!
ಅವನು ಉರಿದು ಬಿದ್ದುಹೋಗಲಿ!
ಅಯ್ಯೋ! ಅವನು ನಾಶವಾಗ!

ಅಯ್ದನೆಯವನು :—ಆದರೆ, ಹಾಗಾಗಬೇಕಾದರೆ, ಈ ದಳವಾಯಿಯು ......ಈ ಗಾಂಧರ್ವಪುತ್ರನು.......ಈ ವಿಕ್ರಮರಾಯನು ರಕ್ತ ಸಮುದ್ರಗಳನ್ನೀಸಿ, ಮನುಷ್ಯರ ಅಸ್ಥಿಪಂಜರಗಳ ಸೇತುವೆಯ ಮೇಲೆ ನಡೆದು, ಮಾಡಬಾರದ ಕೊಲೆಗಳನ್ನು ಮಾಡಿ, ತನ್ನಿಂದ ಹತಾಹತರಾದವರು ನರಲುವ ಗೋಳಿಟ್ಟಳುವ ಧ್ವನಿಗಳೇ ಮನ್ತ್ರಗಳೂ ಶುಭವಾದ್ಯಗಳೂ ಆಗಿ ಘೂರ್ಣಿಸುತ್ತಿರಲು—ಅಂತವರ ದುಕ್ಕದ ಕಣ್ಣೀರ ಧಾರೆಗಳಿಂದ ತಾನು ಪಟ್ಟಾಭಿಷೇಕ ಮಾಡಿಕೊಳ್ಳಬೇಕಾಗುವುದು!

ಪೌರರು :—(ವಿವರ್ಣರಾಗಿ,) ದೆವ್ವ! ಪಿಶಾಚ!

ನಿರೀಶ :—ಆಗಳ್ಗೆ ನಿಮ್ಮ ವಿಕ್ರಮರಾಯನಿಗೆ—

ಯುವಕಪೌರ :—(ಕ್ರೋಧೋದ್ವೇಗದಿಂದ,) ನಮ್ಮ ವಿಕ್ರಮರಾಯನಲ್ಲ! ನರಕದ ವಿಕ್ರಮರಾಯ!

ನಿರೀಶ :—ಆಗಳ್ಗೆ ಹಾಗೆ ಶ್ರೀರತ್ನಸಿಂಹಾಸನಾರೋಹಣಮಾಡಿ ಮಹೀಶೂರದೇಶಕ್ಕೆ ಮಹಾರಾಜನಾಗಲು ಅಳವಡುವ ವಿಕ್ರಮರಾಯನಿಗೆ ನೆರವಾಗಿ, ಈ ಸ್ವಾಮಿದ್ರೋಹಿಯ ಬಲ್ಪಿನ ಸ್ವಾರ್ಥಪರತ್ವಕ್ಕೆ ಬಲಿಯಾಗುವ ಜನರ ಜಂಗುಳಿಯು ಪ್ರಜಾವಳಿಯು ಸೈನ್ಯವು ಮಹಾಪಾತಕರ ಸನ್ತೆಯಾಗಿ.......ತಮ್ಮನ್ನು ಸೃಷ್ಟಿಸಿದ ಬ್ರಹ್ಮನಿಗೆ, ರಕ್ಷಿಸುವ ಶ್ರೀಮನ್ಮಹಾವಿಷ್ಣುವಿಗೆ, ತಾವು ಪ್ರವೇಶಿಸಬೇ

ಕಾದ ಮೃತ್ಯುಮುಖಕ್ಕೂ ಒಂದಪಮಾನವನ್ನೊದವಿಸುವಂತಹವರಲ್ಲವೇನು ?

ಪಟ್ಟಣಿಗರು :—ಅಹುದು ! ಅಹುದು ! ಅಹುದು !

ಅಯ್ದನೆಯವನು :—ಇಂದೀಗ ಕವಡನ್ನರಿಯದೆ ಬಂದ ನಮ್ಮ ಶೂರ ಮಹಾರಾಜರನ್ನು ಹೀಗೆ ಅರಮನೆಯ ಹೊರವಳಯದಲ್ಲಿ—ಪ್ರತ್ಯಕ್ಷವಾಗಿ ಸೆರೆಗೊಂಡು, ತನ್ನ ಸೊಕ್ಕಿನ ಅಧಿಕಾರದ ಉದ್ಧತಿಯ ಪರಾಕಾಷ್ಠತೆಯನ್ನು ಪ್ರಕಟಿಸುವುದಕ್ಕೋಸ್ಕರವಾಗಿ ಕನ್ನಂಬಾಡಿಗೆ ಹೊರಟುನಡೆದ ಆ ದ್ರೋಹಿದಳವಾಯಿಗೆ ನಾವು ಅನುವರ್ತಿಗಳಾಗಿ ಮೆಯ್ಯಾರದ ಮಾನವಿಲ್ಲದ ಕುರುಡ ಕೀಟಗಳಾಗಿದ್ದೇವೆ.

ಪೌರರು :—ಇಲ್ಲ ! ಇಲ್ಲ ! ಇಲ್ಲ !

ಯುವಕಪೌರ :—(ಮಾವುಸಗಿ, ರೋಷಗದ್ಗದಕಂಠದಿಂದ,) ಹೇಗೆ ?

ಅಯ್ದನೆಯವನು :—ನಮ್ಮ ರಣಧೀರಮಹಾರಾಜರನ್ನು ಬಿಡಿಸಿಕೊಳ್ಳದೆ, ಆ ಧೂರ್ತಪಾಮರದಳವಾಯಿಯು ಅವರನ್ನು ತನ್ನ ಕಾಲಕೆಳಗೆ ಸಿಕ್ಕಿಸಿಕೊಂಡು ಹೊಸೆದಾಡುತ್ತಿದ್ದರೂ, ಕುರಿಗಳಂತೆ ಸುಮ್ಮನಿರುವ ನಾವು ನರಕದ ಹನ್ದಿಗಳಲ್ಲದೆ—ಬೇರೇನು ?

ಪಟ್ಟಣಿಗರು :—ಅಯ್ಯೋ !

ಯುವಕಪೌರ :—ಹೋ ! ನಮ್ಮ ಮಹಾರಾಜರನ್ನೀಗಳೇ ನಾವು ಬಿಡಿಸಿಕೊಳ್ಳಬೇಕು !

ನಿರೀಶ :—ಒಂದು ದೇಶದ ಪ್ರಜಾಲೋಕದ ಐಶ್ವರ್ಯವು ಮಾನವು ಗೌರವವು ಧರ್ಮವು ಶಕ್ತಿಯು ಸತ್ತ್ವವು ಕಲಿತನವು ಸ್ವತಂತ್ರತೆಯು ಅದರ ರಾಜನಲ್ಲಿ ಮೆಯ್ಗೊಂಡಿರುವುವು ; ಆ ರಾಜನಿಗಡಸಿದ ಭಂಗವು ದುಃಖವು ಸಂಕಟವು ಅಪಮಾನವು ಆ ಪ್ರಜಾವಳಿಗಾದಂತೆ. ಅಹುದು ; ಇಂದು ಆ ವಿಕ್ರಮರಾಯನು ಕಾವಲೊಳಿರಿಸಿ ಲೆಕ್ಕಿಸ

ದಿರುವುದು ಶ್ರೀರಣಧೀರಕಣ್ಠೀರವನರಸರಾಜಒಡೆಯರನ್ನಲ್ಲ ; ಮಹೀಶೂರದೇಶದ ಪ್ರಜೆಗಳನ್ನು !

ಪೌರರು :—ಹೋ ! ನಡೆಯಿರಿ ! ನಮ್ಮ ಮಹಾರಾಜರನ್ನು ಬಿಡಿಸಿಕೊಳ್ಳೋಣ !

ಬನ್ನಿ, ವಿಕ್ರಮರಾಯನ ಮನೆಗೆ ಬೆಂಕಿಯನ್ನಿಡುವ !

ಹೋ ! ಅವನ ಸೈನ್ಯದವರನ್ನೂ ತತ್ತರದರಿದೇ ತೀರಿಸೋಣ !

ಹೊರಡಿರಿ, ಕನ್ನಂಬಾಡಿಗೇ ಹೋಗೋಣ.

ಅಲ್ಲಿ ಆ ದ್ರೋಹಿಯನ್ನು ಸೀಳಿ, ಅವನ ಹೆಣವನ್ನು ಕಾವೇರಿಗೆ ಬಿಸಾಡಿ ಬರುವಣ !

ಕಾವೇರಿಗೆ ಬೇಡ !

ಇರಿ !

ಕಡಿ !

ಹೊಯ್ !

ಕೊಲ್ಲು !

ಹೋ !

ಯುವಕಪೌರ :—(ಕಯ್ಗೆತ್ತಿ,) ನಮ್ಮ ಮಹಾರಾಜರಿಗೆ ಜಯವಾಗಲಿ ! ದ್ರೋಹಿ ವಿಕ್ರಮರಾಯನು ನಾಶವಡೆಯಲಿ ! ಅಹೋ ! ಜಯಜಯರಣಧೀರ !

ಪೌರರು :—ಮಹಿಶೂರಿಗೆ ಗೆಲ್ಲವಾಗಲಿ !

ದ್ರೋಹಿ ವಿಕ್ರಮರಾಯನು ನಿರ್ಮೂಲವಾಗಲಿ !

ಜಯಮಹಾರಾಜ !

ಮೈಸೂರ್ಗೆ—ರಣಧೀರನಿಗೆ ಜಯವೊಸೆಯಲಿ ! (ಕೋಲಾಹಲಿಸುತ್ತಿರುವರು.)

(ಚೆನ್ನರಂಗರ ಪ್ರವೇಶ.)

ಯುವಕಪೌರ :—ದ್ರೋಹಿ ವಿಕ್ರಮರಾಯನ ಪರಿವಾರದವರು ! ಅವರ ಕುಡುತೆಯನ್ನು ನೋಡು ! ಅವರನ್ನು ಹಿಡಿದು ಪುಟವೇರಿಸೋಣ !

(ಚೆನ್ನರಂಗರತ್ತ ನುಗ್ಗುವನು.)

ನಿರೀಶ :—(ಯುವಕಪೌರನನ್ನು ತಡೆದು ನಿಲ್ಲಿಸಿ, ಗಂಭೀರಭಾವದಿಂದ,) ನೀವು ಹೀಗೆ ವ್ಯರ್ಥವಾಗಿ ಬಲಪ್ರಯೋಗಕ್ಕೆ ಆತುರಿಸಲಾಗದು. ನಿಮ್ಮ ಮಹಾರಾಜರನ್ನು ಆ ಕಾರಾಗೃಹದಿಂದ ಬಿಡಿಸಿಕೊಳ್ಳುವ ಆಶೆಯು ನಿಮಗೆ ನಿಶ್ಚಯವಾಗಿಯೂ ಇದ್ದರೆ,.........

ಪಟ್ಟಣಿಗರು :—ಇದೆ ! ಇದೆ !

ಚೆನ್ನ
ರಂಗ } :—(ಹೋಗುವರು.)

ನಿರೀಶ :—......ಹೀಗಾಡದಿರಿ. ನಿಮ್ಮ ಮುಂದಾಳುಗಳು ಆದ್ಯಂತವಾಗಿ ವಿಚಾರಿಸಿ ಆಳೋಚಿಸಿ ನಿರ್ಣಯಿಸಿದಂತೆ ನೀವೆಲ್ಲರೂ ತಪ್ಪದೆ ಆಚರಿಸಬೇಕು.

ಅಯ್ದನೆಯವನು :—(ನಿರೀಶನನ್ನೇ ನೋಡುತಿದ್ದು,) ನಮ್ಮಲ್ಲಿ ಅಂತಹ ಮೊದಲಿಗರಾರೂ ಈಗ ಇಲ್ಲ, ಸ್ವಾಮಿ ; ನೀವೇ ನಮಗೆ ದಿಕ್‌ಪ್ರದರ್ಶಕರಾಗಿ.........

ಪೌರರು :—ಅಹುದು, ನೀವೇ ನಮ್ಮ ಹೆಗ್ಗಡೆ !

ನಿರೀಶ :—(ಹಿಮ್ಮೆಟ್ಟಿ,) ಶ್ರೀಚಾಮುಂಡೇಶ್ವರೀರಥೋತ್ಸವದ ಜಾತ್ರೆಗೆಂದು ಇತ್ತ ಬಂದಿದ್ದ ನನಗೆ......ನಿಮ್ಮಾ ದಳವಾಯಿಪ್ರಜೆಗಳ ಯುದ್ಧದ ಕೋಟಲೆಯೇಕೆ? ಈ ರಾಜಕೀಯವಾದ ಜಂಜಡ—ತೊಡಕುಗಳು ನನಗೆ ಬೇಕಾಗಿಲ್ಲ. (ಹೊರಡುವನು.)

ಪೌರರು :—(ನಿರೀಶನ ಸುತ್ತ ಬಳಸಿಕೊಂಡು ನಿಂತು,) ಇಲ್ಲ! ಅದಾಗುವುದಿಲ್ಲ ! ನೀವೇ ನಮ್ಮ ಮುಖ್ಯಸ್ಥ ! ಈಗಳೇನು ಮಾಡಬೇಕು ? ಹೇಳಿ !

ನಿರೀಶ :—ಈಗ ಹೀಗೆ ಒಡಂಬಡುವಿರಿ ; ಆಬಳಿಕ—

ಪಟ್ಟಣಿಗರೆಲ್ಲ :—ಇಲ್ಲ ! ಇಲ್ಲ ! ನಾವೆಲ್ಲಾ ನೀವು ಹೇಳಿದಹಾಗೆ ನಡೆದು ಕೊಳ್ಳುವೆವು !

ನಿರೀಶ :—ಆದರೂ,............

ಪೌರರು :—ದೇವರಾಣೆ !

ನಮ್ಮಯ್ಯನಾಣೆ !

ನನ್ನ ಮಾತೃಪಾದಸಾಕ್ಷಿಯಾಗಿ !

ನಮ್ಮ ಗುರುಪಾದಸಾಕ್ಷಿಯಾಗಿ !

ನಮ್ಮ ರಣಧೀರಮಹಾರಾಜರ ಪಾದದಾಣೆ !

ರಾಕ್ಷಸ—ವಿಕ್ರಮರಾಯನ ಆತ್ಮಸಾಕ್ಷಿಯಾಗಿ !

ನನ್ನಾಣೆಗೂ !

ನನ್ನ ಮಕ್ಕಳಾಣೆ !—

ನಿರೀಶ :—(**ಹುಬ್ಬುಗಂಟಿಕ್ಕಿ, ನಿಷೇಧದ ಕಯ್ಯನ್ನೆತ್ತಿ,**) ಈಗ ಈಕ್ಷಣವೇ ನೀವಿ ನಿಬರೂ ಮೈಸೂರ ಇತರ ಸುಭಟಪೌರರೊಡಗೂಡಿ, ಕೆರೆಯ ಮುಂದಣ ತಪ್ಪಲ ಪಸಲೆಯಲ್ಲಿ ನೆರೆಯಬೇಕು. ಅಲ್ಲಿ ನಮ್ಮ ಸ್ಥಿತಿ ಗತಿಗಳನ್ನೆಲ್ಲ ಸಮಾಳೋಚಿಸಿ, ನಮ್ಮ—ನಮ್ಮ ಶ್ರೀರಣಧೀರ ಮಹಾರಾಜರಿಗೆ......ಎಂದರೆ, ಈ ಮಹೀಶೂರದೇಶದ ಪ್ರಜೆಗಳಿಗೆ......ಸ್ವಾತಂತ್ರ್ಯವನ್ನು ಪುನಃ ಪಡೆದುಕೊಳ್ಳುವದಕ್ಕೆ ತಕ್ಕ ಸಾಧನಸನ್ನಾಹಗಳನ್ನು ಉಪಾಯಗಳನ್ನು ನಿಶ್ಚಯಮಾಡಿಕೊಂಡು, ಆದರಂತೆ ಉಜ್ಜುಗಿಸಿ ನಮ್ಮಕುರಿತ ಫಲವನ್ನು ಸಾಧಿಸೋಣ; ಹಾಗಾಗದೆ, ನಮ್ಮ ಪುಣ್ಯಪ್ರಯತ್ನಗಳೆಲ್ಲಾ ಬಯಲಾಗುವುದೇ ಸಿದ್ಧಿಯಾದರೆ, ನಮ್ಮ ಏಕಾಗ್ರತೆಯ ಉದ್ದಾಮತ್ವದಿಂದ ನಮ್ಮೆದೆಯ ಬಿಸುನೆತ್ತರನ್ನು ಬಸಿದು, ಆ ಗಭೀರಪ್ರವಾಹದೊಳಗೆ ನಮ್ಮ ರಣಧೀರಮಹಾರಾಜರ ಸೆರೆವನೆಯ ನಾಲ್ಕೂ ಗೋಡೆಗಳನ್ನು ಮುಳುಕಿಸಿ ಕೆಡಹಿ ಕೊಚ್ಚಿಸಿ ಕೃತಾರ್ಥರಾಗೋಣ ! ನಡೆಯಿರಿ !

ಯುವಕಪೌರ :—(ಮುಂದಕ್ಕೆ ಹಾರಿ, ನಿರೀಶನನ್ನು ಗಾಢಾಲಿಂಗನಮಾಡಿಕೊಳ್ಳುವನು.)

ಪೌರರು :—ನಮ್ಮ ಮಹಾರಾಜರಿಗೆ ಜಯವಾಗಲಿ!
ಮಹಿಶೂರಿಗೆ ಜಯಜಯ!
ಹೋ! ದಳವಾಯಿ ವಿಕ್ರಮರಾಯನು ಹಾಳೇರಿಹೋಗಲಿ!
ಜಯಜಯತು ರಣಧೀರ!
ಮೈಸೂರಿಗೆ ಮಂಗಳವಾಗಲಿ!

ಪ್ರವೇಶ ೮.

[ಸ್ಥಾನ ;—ಕನ್ನಂಬಾಡಿ, ಗೋಪಾಲಕೃಷ್ಣಸ್ವಾಮಿಯ ದೇವಸ್ಥಾನದ ಹೆಬ್ಬಾಗಿಲು.]

(ಆ ಗ್ರಾಮದ ಗೌಡ ಕರಣಿಕ ಪುರೋಹಿತ ಮುಂತಾದವರೂ ಊರುಗರೂ ಫಲಪುಷ್ಪಾದಿಗಳೊಡನೆ ಸಿದ್ಧರಾಗಿ ನಿಂತಿರುವರು.)

(ಹೊರಗೆ):—(ರಾಜವಾದ್ಯಗಳು ಭೋರ್ಗರೆಯುವುವು.)

(ಮಹಾರಾಜವೈಭವದಿಂದ ಸಪರಿವಾರ ವಿಕ್ರಮರಾಯನ ಪ್ರವೇಶ.)

ತಕ್ಕವರು :—(ವಿಕ್ರಮರಾಯನಿಗೆ ಕಯ್ಮುಗಿದು ಬಾಗುವರು.)

ಪುರೋಹಿತ :—(ಅವನಿಗೆ ಆಶೀರ್ವದಿಸಿ, ಫಲಪುಷ್ಪಾದಿಗಳನ್ನು ಸಮರ್ಪಿಸುವನು.)

ವಿಕ್ರಮರಾಯ :—ಗೌಡನಾವನು? ನೀನೊ?

ಗೌಡ :—(ಮುಂದೆಯ್ದಿವಂದು, ವಂದಿಸಿ,) ಅಹುದು, ಶ್ರೀಮಂತರ ಸೇವಕನು ನಾನು.

ವಿಕ್ರಮರಾಯ :—ಈವೂರ ಹಿಂದಣ ವರುಷದ ಕರದ ಉಳಿಕೆ—ಇನ್ನೂರ ಎಪ್ಪತ್ತೊಂಭತ್ತು ವರಹ ಆರು ಹಣಗಳು ಇನ್ನೂ ಬಂದಿಲ್ಲವೇಕೆ?

ಗೌಡ :—ಇನ್ನೆಣ್ಟುದಿನಗಳೊಳಗಾಗಿ ಅಷ್ಟನ್ನೂ ಅರಮನೆಯ ಭಣ್ಡಾರಕ್ಕೆ ಸಲ್ಲಿಸಿ, ಶ್ರೀಮನ್ತರಿಗೆ ಬಿನ್ನವಿಸುವೆನು.

ವಿಕ್ರಮರಾಯ :—ಒಳ್ಳೆಯದು. ಇಲ್ಲಿಯ ಕೆರೆಯೇಕೆ ನೀರು ನಿಲ್ಲದಷ್ಟು ಕೆಟ್ಟು—ಹಾಗಿದೆ?

ಗೌಡ :—ಒಕ್ಕಲರು ಬಿಟ್ಟಿಕೆಲಸಕ್ಕೆ ಸಿಕ್ಕದೆ ತಪ್ಪಿಸಿಕೊಳ್ಳುತ್ತಿದ್ದಾರೆ ; ಶ್ರಿಮಂತರು ದಯೆಗೆಯ್ದು, ಅರಮನೆಯಿಂದ ಸಾಕಾಗುವಷ್ಟು ಹಣವನ್ನು ಕೊಡಿಸಿದರೆ,......

ವಿಕ್ರಮರಾಯ :—(ಹುಬ್ಬುಗಂಟಿಕ್ಕಿ,) ಒಡೆದು ಶಿಥಿಲವಾಗಿರುವ ಚಿಕ್ಕದೊಂದು ಕೆರೆಯನ್ನು ಪುನಃ ಕಟ್ಟಿಸಿ ನೇರ್ಪಡಿಸಿಕೊಳ್ಳದೆ, ಮುಂದಣ ಹಿಂಗಾರಿಗೆ ಬೆಳೆಯಾಗಲಿಲ್ಲವೆಂದೂ, ಅದರಿಂದ ರಾಜಾರ್ಥವನ್ನು ಕುಡಲಾರೆವೆಂದೂ ಈ ಗ್ರಾಮಸ್ಥರು ಗೋಣಗಿದರೆ, ಅದು ಪ್ರಯೋಜನಕಾರಿಯಲ್ಲ.

ಗೌಡ :—ಅಪ್ಪಣೆ ; ಆದರೆ, ಸಿದ್ಧಾಯವನ್ನು ಅರಮನೆಗೆ ತೆಗೆದುಕೊಳ್ಳುವ ಸುಗ್ಗಿಯ ಸಮಯಕ್ಕೆ—ಶ್ರೀಮಂತರು ಅರಮನೆಯ ಪೌಜಿನ ಚಿಕ್ಕದಳವೊಂದನ್ನಿಲ್ಲಿಗೆ ಕಳುಹಿಸಿಕೊಟ್ಟರೆ, ನನ್ನ ಆ ಉದ್ಯೋಗವು ಸುಲಲಿತವಾಗಿ ನೆರವೇರುವುದು.

ವಿಕ್ರಮರಾಯ :—ನಮಗದು ಅರ್ಥವಾಗುವುದಿಲ್ಲ. ಖಣ್ಡಣೆಯಾಗಿರುವಂತೆ ರಾಜಾಯದ ಹಣವನ್ನೆಲ್ಲಾ ನೀನೇ ಸಕಾಲದಲ್ಲಿ ಸಲ್ಲಿಸದಿದ್ದರೆ, ಅರಮನೆಯವರು ನಿನ್ನ ಸರ್ವಸ್ವವನ್ನೂ ತೆಗೆದುಕೊಳ್ವರು.

ಗೌಡ :—ಆಗಬಹುದು ; ಕುರಿಯು ತೊಣ್ಣುಮೇದ ದವಸವನ್ನು ಕುರುಬನಿಂದ ಹೊಡೆದು ಕಾರಿಸಿದಂತೆ !

ವಿಕ್ರಮರಾಯ :—ಮಿತಿಮೀರಿ ಗಳಿಸಿಕೊಂಡಿರುವ ಧನದ ಬಲದಿಂದ ಗೌಡಂದಿರು ಕೊಬ್ಬಿ ಸೊಕ್ಕಿರುವಿರಿ; ಶ್ರೀಮನ್ಮಹಾರಾಜರು ನಿಮ್ಮ ವಿಷಯವನ್ನು ಬೇಗನೆಯೇ ವಿಚಾರಿಸಿ, ನಿಮಗೆ ಬುದ್ಧಿಗಲಿಸುವರು.

ಗೌಡ :—ಶ್ರೀಮನ್ತರಿಗೆ ಯಾವುದೂ ಅಸದಳವಲ್ಲ.

ವಿಕ್ರಮರಾಯ :—ನಾವು ಹೇಳಿದುದು ಶ್ರೀಮನ್ಮಹಾರಾಜರೆಂದು ! ಈಗಳಾದರೂ ಕಿವಿಗೊಟ್ಟೆಯಷ್ಟೆ ?

ಗೌಡ :—ಕೇಳಿಸಿತು, ಮಹಾಸ್ವಾಮಿ !

ವಿಕ್ರಮರಾಯನ ಪರಿವಾರದವರು :—(ನಗುವರು.)

ವಿಕ್ರಮರಾಯ :—(ಅಸಮಾಧಾನದಿಂದ ಸುತ್ತ ಅಭೀಕ್ಷಿಸುವನು.)

ಸಮಸ್ತರೂ :—(ಗಂಭೀರಮುದ್ರೆಯನ್ನು ತಾಳುವರು.)

(ತುಂಗರಾಯನ ಪ್ರವೇಶ.)

ವಿಕ್ರಮರಾಯ :—ಏನದು, ತುಂಗ ?

ತುಂಗರಾಯ :—(ವಿಕ್ರಮರಾಯನಿಗೆ ವಂದಿಸಿ,) ನಾನು ಬರುತ್ತಿರುವುದು ಅಲ್ಲಿಂದ.

ವಿಕ್ರಮರಾಯ :—(ಕೈಯ್ಸಾಸುವನು.)

ಇತರರೆಲ್ಲ :—(ದೂರಕ್ಕೆ ಹೋಗಿ ನಿಲ್ಲುವರು.)

ತುಂಗರಾಯ :—ಶ್ರೀಮನ್ಮಹಾರಾಜರು ಸುರಕ್ಷಿತರಾಗಿರುವರು.

ವಿಕ್ರಮರಾಯ :—ಹುಂ.

ತುಂಗರಾಯ :—ಅವರಿಗೆ ಬಹಳ ಅಸಮಾಧಾನವಾಗಿರುವಂತಿದೆ.

ವಿಕ್ರಮರಾಯ :—ಹೇಳು.

ತುಂಗರಾಯ :—ಶ್ರೀಮನ್ತರು ಏರ್ಪಡಿಸಿಕೊಟ್ಟಿರುವ ಬೀಡಾರ ಊಳಿಗದವರು ಕಾವಲರು ಮುಂತಾದ ವಿಷಯಗಳಲ್ಲಿ.

ವಿಕ್ರಮರಾಯ :—ಹಾಗೆಂದನೇನು ?

ತುಂಗರಾಯ :—ಇಲ್ಲ ; ಆದರೆ, ಅವರ ಅಸಮಾಧಾನವು ಅತೃಪ್ತಿಯು ಅವರ ನಡೆವಳಿಯಲ್ಲಿ—ಪ್ರತಿಯೊಂದು ಅಂಗಚಲನದಲ್ಲಿಯೂ ಸ್ಪಷ್ಟವಾಗುತ್ತಿರುವುವು.

ವಿಕ್ರಮರಾಯ :—ಹುಂ.

ತುಂಗರಾಯ :—ಅವರು ತಮ್ಮ ಸ್ವಾತಂತ್ರ್ಯವನ್ನು ರಾಜ್ಯಾಧಿಪತ್ಯವನ್ನು ಸಾಧಿಸಿಕೊಳ್ಳುವುದಕ್ಕೋಸ್ಕರವಾಗಿ ಪ್ರಯತ್ನಿಸಬಹುದೆಂದು ತೋರುವುದು.

ವಿಕ್ರಮರಾಯ :—(ಬದ್ಧಭ್ರೂಕುಟಿಯಾಗಿ,) ನಾವು—ದಳವಾಯಿ ವಿಕ್ರಮರಾಯನು—ನಾವು ತನಗೆ ಇನ್ನೂ ಪಟ್ಟಾಭಿಷೇಕವನ್ನು ನೆರವೇರಿಸಿಲ್ಲವೆಂಬುದು ಅವನಿಗೆ ಜ್ಞಾಪಕವಿರುವುದಷ್ಟೆ ?

ತುಂಗರಾಯ :—ಇರಬೇಕು.

ವಿಕ್ರಮರಾಯ :—ಇನ್ನೇನದು ?

ತುಂಗರಾಯ :—ಮಹಿಶೂರಿನ ಪೌರರು—'ನಮ್ಮ ರಣಧೀರಮಹಾರಾಜರಿಗೆ ಜಯವುಂಟಾಗಲಿ!'......'ದ್ರೋಹಿವಿಕ್ರಮರಾಯನು ಹಾಳುಹೋಗಲಿ!'.........'ಮೈಸೂರಿಗೆ ಗೆಲವಾಗಲಿ!' ಎಂದು ಕೂಗುತ್ತರುಚುತ್ತ ಸಂಭ್ರಮಿಸುತ್ತಿದ್ದಾರೆ.

ವಿಕ್ರಮರಾಯ :—ಬರಿಯ ಹುಯ್ಯಲೆ ?

ತುಂಗರಾಯ :—ತೆಂಕಣ ವೈಹಾಳಿಯ ಮಾಳದಲ್ಲಿ ಪೌರರೆಲ್ಲ ಸಭೆಗೂಡಿ ವಿಶ್ವಪ್ರಯತ್ನಗಳಿಂದ ತಮ್ಮ ಮಹಾರಾಜರನ್ನು ಸೆರೆಯಿಂದ ಬಿಡಿಸಿಕೊಳ್ಳಬೇಕೆಂದೂ, ದಳವಾಯಿ ವಿಕ್ರಮರಾಯನನ್ನು ಸಜೀವವಾಗಿ ಹಿಡಿದು ಮಹೀಶೂರದೇಶದ ಸ್ವಾತಂತ್ರ್ಯಕ್ಕೆ ಬಲಿಗುಡಬೇಕೆಂದೂ ನಿರ್ಣಯಿಸಿಕೊಂಡರು.

ವಿಕ್ರಮರಾಯ :—ಮುಂದಾಳಾರವನು ?

ತುಂಗರಾಯ :—ತಿರುಮಕೂಡಲು-ನರಸೀಪುರದವನಂತೆ.

ವಿಕ್ರಮರಾಯ :—ಹೆಸರು ?

ತುಂಗರಾಯ :—ಆರಿಗೂ ತಿಳಿದಿಲ್ಲ.

ವಿಕ್ರಮರಾಯ :—ಆಗ ನಮ್ಮ ಸೈನ್ಯವದೇನಾಗಿದ್ದಿತು ?

ತುಂಗರಾಯ :—ಆ ನೆರವಿಗರ ಸಂತೆಯನ್ನು ಚೆದರಿಸಲು ಸೈನ್ಯವು ಪ್ರಯತ್ನಿಸಿದುದು ಸಾರ್ಥಕವಾಗಲಿಲ್ಲ.

ವಿಕ್ರಮರಾಯ :—ಆ ದ್ರೋಹಿಗಳನ್ನು ತರಿದಿರಿದೊಟ್ಟದೆ ಬಿಟ್ಟಿರೇಕೆ ?

ತುಂಗರಾಯ :—ಆಗಳೇ ಶ್ರೀಮಂತರ ಅಪ್ಪಣೆಯನ್ನರಿಯದುದರಿಂದ.

ವಿಕ್ರಮರಾಯ :—ನೀನೀಗ ಹೀಗೆಯೇ ಹಿಂದಿರುಗಿಹೋಗಿ, ನಾವು ಸಂಜೆಯೊಳಗಾಗಿ ಅಲ್ಲಿಗೆ ಬರುವೆವೆಂದು ಡಂಗುರಬಡಿಯಿಸಿ, ವ್ಯಕ್ತವಾಗಿ ಪ್ರಕಟಿಸು. ತ್ರಿಣಯನೇಶ್ವರದೇವಸ್ಥಾನದಲ್ಲಿ ಇಂದು

ಪ್ರದೋಷದ ಸೇವೆಯು ತೀರಿದೊಡನೆ ನಾವು ನರಸರಾಜನನ್ನು ನೋಡುವುದಾಗಲಿ.

ತುಂಗರಾಯ :—ಅಪ್ಪಣೆ. (ಹೋಗುವನು.)

ಪ್ರವೇಶ ೯.

[ಸ್ಥಾನ ;—ಮೈಸೂರ ಅರಮನೆ, ಹೊರಗಣ ಅಂಗಳ]

(ಶ್ರೀರಣಧೀರಕಂಠೀರವನರಸರಾಜಒಡೆಯ—ಸುಖಾಸನದಲ್ಲಿ ಒರಗಿ, ಕಣ್ಮುಗಿದು, ಚಿನ್ತಾಪರವಶನಾಗಿರುವನು.)

ಚೆನ್ನ } :—(ಬಾಗಿಲೆಡೆಯಲ್ಲಿ ನಿಂತು ಗುಸಗುಸನೆ ಕಿವಿಗಚ್ಚಿ ಮಾತನಾಡಿಕೊಳು
ರಂಗ } ತ್ತಿದ್ದು, ಮೆಲ್ಲಗೆ ಪಡಿಯನ್ನು ತೆರೆಯುವರು.)

ರಂಗ :—(ಹೋಗುವನು.)

ಚೆನ್ನ :—(ಕದವನ್ನು ರಂಯ್ಯನೆ ನೂಂಕಿ, ಅಗುಳಿಯನ್ನು ಬಲವಾಗಿ ಹಾಕಿ ಬಿಟ್ಟು, ಬಳಿಕ ಸುತ್ತ ನೋಡಿ, ಹಠಾತ್ತಾಗಿ ಅತ್ಯುಚ್ಚಕಣ್ಠದಿಂದ ಹಾಡಲು ಮೊದಲಿಟ್ಟನು.)

(ಚೌಪದಿ)

ಸಕುನಗಾರರೆ, ಜೋಯಿಸರೆ, ಸುಮ್ಮಗಿಹುದು ; |
ಉಳಿಗನೇ, ಉಸಿಕನಿರು ; ಗಣ್ಟೆ, ಬಿನ್ನನಿರು ; ||
ತವಕಿಗನ ಬಲಹೆಗಲುಕಣ್ಣುಹುಬ್ಬುಗಳೆ, |
ಕುಣಿಕುಣಿದು ಹಾರದಿರಿ ; ನಿಮ್ಮೆಸಗು ಬೇಡ ||
ಆರ ಹಂಗಿಗುಮೆರಗದುಚ್ಚುಕದ ಪದೆಪಿಂ |
ದೊಸಗೆ ನಮ್ಮೊಡೆಯಬಂಚದ ಗಣ್ಡಗಲಿಯ ||
ದಕ್ಕುಗೊಳ್ವುದು ನನ್ನಿ—ದೇವದುನ್ದುಭಿಯೆ, |
ಮೊಳಗದಿರು ಮೊಳಗದಿರು ; ನಿನ್ನೆಸಗು ಬೇಡ ||

ರಣಧೀರ :—(ಕಣ್ದೆರೆದು, ಅಪ್ರತಿಭನಾದ ಚೆನ್ನನನ್ನೀಕ್ಷಿಸುತಿದ್ದು,) ನಮಗೆ ಹಗಲಿರುಳೂ ಹೀಗೆ ನಿದ್ರೆಗೂ ಅವಕಾಶವನ್ನೀಯದಿರಬೇಕೆಂಬುದು ನಿಮ್ಮ ಶ್ರೀಮನ್ತರ ಕಠಿನಾಜ್ಞೆಯೇನು ?

ಚೆನ್ನ :—(ಕಳವಳಗೊಂಡು,) ಅಲ್ಲವು, ಬುದ್ಧಿ ; ನಾವು ಹೀಗೆ ಮಾಡಿಕೊಳ್ಳದೇಯಿದ್ದರೆ, ನಮಗೆ ಉಳಿವಿಲ್ಲ. ಮಾಸ್ವಾಮಿ.

ರಣಧೀರ :—ಹಾಗೆಂದರೇನು ?

(ಆರೋ ಒದೆದಂತೆ ಕವಾಟವು ಅಲ್ಲಾಡುವುದು.)

ಚೆನ್ನ :—(ಮಾತಿಲ್ಲದೆ ಕದವನ್ನು ತೆರೆಯುವನು.)

(ರಂಗನ ಪ್ರವೇಶ.)

ರಂಗ :—ಮಾಸ್ವಾಮಿಯವರನ್ನ ಕಾಣಬೇಕೆನ್ನುತ ಮೂವರು ಹೆಣ್ಮಕ್ಕಳು ಹೊರಗೆ ನಿಂದಿದ್ದಾರೆ, ಮಾಸ್ವಾಮಿ.

ರಣಧೀರ :—ಹೆಂಗುಸರೆ ?

ರಂಗ :—ಹೌದು, ಮಾಸ್ವಾಮಿ.

ರಣಧೀರ :—ಎಲ್ಲಿಯವರು ?

ರಂಗ :—ಅದೊಂದನ್ನೂ ಹೇಳಲೊಲ್ಲರು, ಮಾಸ್ವಾಮಿ; ಮೊಕದಮೇಗೆ ಮುಸುಕೆಳೆದು ಮುಚ್ಚಿಕೊಂಡಿದ್ದಾರೆ.

ರಣಧೀರ :—ಅವರನ್ನು ಕರೆದುಕೊಂಡುಬಾ.

ರಂಗ :—ಅಪ್ಪಣೆ, ಮಾಸ್ವಾಮಿ.

ರಂಗ, ಚೆನ್ನ } :—(ಒಬ್ಬರ ಮುಖವನ್ನೊಬ್ಬರು ನಿಟ್ಟಿಸಿ, ತಮ್ಮ ಕೊನ್ತಗಳನ್ನೆಡಗಯ್ಯಲ್ಲಿಯೂ, ಒರೆಗಳಿಂದ ಹಿರಿದೆತ್ತಿದ ಕತ್ತಿಗಳನ್ನು ಬಲಗಯ್ಯಲ್ಲಿಯೂ, ಹಿಡಿದುಕೊಳ್ಳುವರು.)

ರಂಗ :—(ಅಲ್ಲಿಯೆಲ್ಲೆಡೆಗಳಲ್ಲಿಯೂ ಕಣ್ಣೋಡಲಿಸಿ, ತೃಪ್ತಿಯ ತಲೆದೂಕದಿಂದ ಚೆನ್ನನನ್ನೆಚ್ಚರಿಸಿ, ಹೋಗುವನು.)

ರಣಧೀರ :—ಯುದ್ಧಕ್ಕೆಂಬಂತೆ ಅನುವಾಗಿ ನಿಂತಿರುವೆ ; ಇದರರ್ಥವೇನು ?

ಚೆನ್ನ :—ಬುದ್ಧಿಯವರು ಅದನ್ನ ಕೇಳಬಾರದು.

(ಅವಕುಣ್ಠಿತೆಯರಾದ ಮೂವರ—ರಂಗನ ಪ್ರವೇಶ.)

ರಣಧೀರ :—.........ಆರು ನೀವು ?

ಹೆಂಗುಸರು :—(ತಮ್ಮ ಮುಖಾವರಣಗಳನ್ನೆಳೆದು ಕಳೆಯುವರು.)

ರಣಧೀರ :—(ಕಟ್ಟೆಚ್ಚರಿಯಿಂದೇಳುತ್ತ,) ಚಿಕ್ಕಮ್ಮಯ್ಯ !

ಮಹಾಮಾತೃಶ್ರೀ ತಿಮ್ಮಾಜಮ್ಮಣ್ಣಿ :—ಅಹುದು, ಕಂದ, ನಿರ್ಭಾಗ್ಯೆಯಾದ ನಾನು.

ರಣಧೀರ :—(ಆಕೆಗೆ ನಮಸ್ಕರಿಸುವನು.)

ಮಹಾಮಾತೃಶ್ರೀ :—(ರಣಧೀರನ ನಿರಿಗುರುಳಮೇಲೆ ಕಯ್ಯಿರಿಸಿ,) ರಣಧೀರ, ನೀನಾದರೂ ನಿನ್ನ ದಳವಾಯಿಯ ವಿಷಚೂರ್ಣಕ್ಕೆ ಸಿಲ್ಕದೆ ಮಹೀಶೂರ ಉದ್ದಾಮಯದುವಂಶದ ಅಭಿಮಾನ ಗೌರವ ಸ್ವತಂತ್ರಸ್ಥಿತಿ ಮರ್ಯಾದೆ ತೇಜಸ್ವಿತೆ ಶಕ್ತಿಗಳನ್ನು ಕೊರತೆಯಿಲ್ಲದಂತೆ ರಕ್ಷಿಸಿ, ಚಿರಾಯುರಾರೋಗ್ಯೈಶ್ವರ್ಯಗಳಿಂದ ಯಶಸ್ವಿಯಾಗೆಂದು ಆಶೀರ್ವದಿಸುವೆನು.

ಣಧೀರ :—(ನೆಗೆದೆದ್ದು ನಿಂತು, ವಿವರ್ಣನೂ ವಿಸ್ಫಾರಿತನೇತ್ರನೂ ಆಗಿ,) ವಿಷಚೂರ್ಣವೆ!

ಮಹಾಮಾತೃಶ್ರೀ :—(ಕರ್ಕಶವಾಗಿ ನಕ್ಕು, ಬಿರುದನಿಯಿಂದ,) ಅಹುದು, ಕಂದ; ನೋಡು; ಇದೇ ಕಯ್ಯಾರೆ ನಾನೇ—ವಿಕ್ರಮರಾಯನು ಕಳಿಹಿದ ವಿಷವನ್ನು ನನ್ನ ಪುಟ್ಟಸ್ವಾಮಿಗೆ ಕುಡಿಯಿಸಿದೆನು.

ರಣಧೀರ :—ಅಯ್ಯೋ! (ಅವಾಙ್ಮುಖನಾಗುವನು.)

ಚಂದವ್ವೆ, ರುದ್ರವ್ವೆ :—(ಬಿಕ್ಕಿಬಿಕ್ಕಿ ಅಳುತ್ತಿರುವರು.)

ಮಹಾಮಾತೃಶ್ರೀ :—(ಆಕೆಗಳತ್ತ ತಿರುಗಿ,) ಛಿಃ! ಇದೆಷ್ಟು ಗಲಬೆ, ಚಂದವ್ವೆ?—ನೀವು ನನಗೆ ತಕ್ಕ ಅವ್ವೆಯರಾಗುವುದೆಂದಿಗೆ?

ರಣಧೀರ :—(ಬಾಗಿಲಪಡಿಯನ್ನಾತುರತೆಯಿಂದ ಮುಚ್ಚುತ್ತಿರುವ ಚೆನ್ನರಂಗರನ್ನು ಕಂಡು, ವಿಜಯನಾರಸಿಂಹನನ್ನು ಬಿಚ್ಚಿ ನಡುವಿನ ಪಟ್ಟಿಯ ಒರೆಯೊಳಗಿಂದ ಬರಸೆಳೆದುಕೊಂಡು, ಝಳಪಿಸುತ್ತ, ಅವರೆಡೆಗೆ ಹಾಯುತ್ತ,) ನಿಲ್ಲಿರಿ! ಇದರರ್ಥವೇನು? ಸ್ತ್ರೀಜನರು ಒಳವಂದತರುವಾಯ, ಒರೆಗಳೆದ ಖಡ್ಗಗಳು—ಅವನ್ನನುಮಾಡಿಕೊಂಡು ಹೀಗೆ ಬಾಗಿಲನ್ನು ಬನ್ಧಿಸುತ್ತಿರುವಿರೇಕೆ?

ಚೆನ್ನ } :—(ಮೊರ್ನುಡಿಯಿಲ್ಲದೆ ತಾಳಿನ್ನೇರಿಸಿ ಬಲವಾಗಿ ಬಿಟ್ಟುತ್ತಿರುವರು.)
ರಂಗ }

ರಣಧೀರ :—ಒಡನೆಯೇ ಉತ್ತರವೀಯದಿದ್ದರೆ, ಸಂಹೃತರಾಗುವಿರಿ !

(ವಿಜಯನಾರಸಿಂಹನನ್ನೆತ್ತುವನು.)

ಚೆನ್ನ } :—(ತಮ್ಮ ಕತ್ತಿ ಕೊಂತ ಹರಿಗೆ ಬಿಲ್ಲು ಬತ್ತಳಿಕೆಗಳನ್ನೆಲ್ಲ ರಣಧೀರನ ಪಾದ
ರಂಗ } ಪ್ರದೇಶದಲ್ಲಿರಿಸಿ, ಸಾಷ್ಟಾಂಗವಾಗಿ ಅಡ್ಡ ಬೀಳುವರು.)

ರಣಧೀರ :—(ಸನ್ದೇಹದಿಂದ,) ಇಂತಿದೇಕೆ ?

ಚೆನ್ನ } :—(ಎದ್ದು, ಕಯ್ಮುಗಿದುಕೊಂಡು ವಿನಯನಮಿತರಾಗಿ ನಿಲ್ವರು.)
ರಂಗ }

ಚೆನ್ನ :—ಬುದ್ಧಿಯವರು ನಮ್ಮನ್ನ ಕೋಪಮಾಡಬಾರದು. ನಾಮಿಬ್ಬರೂ ಅಣ್ಣತಮ್ಮದಿರು, ಮಾಸ್ವಾಮಿ. ನನ್ನ ಹೆಸರು ಚೆನ್ನ; ಅವನ ಹೆಸರು ರಂಗ, ಬುದ್ಧಿ.

ರಣಧೀರ :—ಆದರೇನು ?

ಚೆನ್ನ :—ನಮ್ಮಜ್ಜ ಬೆಟ್ಟದ ಚಾಮರಾಜೊಡೆಯರ—ಎಂದರೆ, ನಿಮ್ಮಯ್ಯನವರ—ಕಯ್ಯಾಳಿಗದ ಜೀತಗಾರನಾಗಿದ್ದನುಂಟು, ಬುದ್ಧಿ, ಆನಾಟಿ; ಆನಾಟಿಯ ಮಗ ನಮ್ಮಯ್ಯ, ಜುಂಜ······ಮಾರಾಜರು ರಾಜೊಡೆಯರ ಸೆಜ್ಜೆಯಲಿ ಕಾವಲಿರುತಿದ್ದ, ಮಾಸ್ವಾಮಿ.

ಮಹಾಮಾತ್ಯಶ್ರೀ :—(ತಲೆಯೆತ್ತಿ,) ನೀವು ಜುಂಜನ ಮಕ್ಕಳೆ ?

ಚೆನ್ನ } :—ಹೌದು, ಬುದ್ಧಿ.
ರಂಗ }

ಚೆನ್ನ :—ನಾಮಿಬ್ಬರುವೆ ಚಾಮರಾಜೊಡೆಯರನ್ನ ಆಡಿಸಿ, ಸಾಕಿದವರು, ಬುದ್ಧಿ.

ರಣಧೀರ :—ಅದರಿಂದೇನಾಗಬೇಕು ?

ರಂಗ :—ಮಾಸ್ವಾಮಿಯವರು ದಳವಾಯಿಗಳ್ಗೆ ಹಗೆತನದ ಒಂದೇಮಾತನ್ನ ಆಡಿದರೂ, ನಾವು ನಿಮ್ಮನ್ನ—ಮಾಸ್ವಾಮಿಯವರನ್ನ···

(ಗಡಗಡನೆ ನಡುಗುತ್ತ ಅಧೋಮುಖನಾಗುವನು.)

ರಣಧೀರ :—(ತನ್ನನ್ನೇ ನಡೆದಿಟ್ಟಿಸುತ್ತಿರುವ ಮಹಾಮಾತ್ಯಶ್ರೀಯನ್ನು ನೋಡುತ್ತಿದ್ದು,) ಈಗಳೇನನ್ನು ಮಾಡಬೇಕೆನ್ನುವಿರಿ ?

ಚೆನ್ನ :—ಬುದ್ದಿಯವರು ನಮ್ಮನ್ನ ಸೂಲಕ್ಕೆ ಗಿಡ್ಡಂಗಿಗೆ ಹಾಕಿಸಲಿಕ್ಕಿಲ್ಲವು ಎನ್ನತ ಹೇಳಿದರೆ, ನಾವು...ನಾವು—ಆ ದಳವಾಯಿಯನ್ನ ಹೊಡೆದುಹಾಕಿ ತೀರಿಸಿಬಿಡುತ್ತೇವೆ.

ರಣಧೀರ :—ಈ ಸಾಹಸದ ಮಾತುಗಳು ನಮ್ಮನ್ನು ಸಿಕ್ಕಿಸಿಕೊಳ್ಳುವದಕ್ಕೋಸ್ಕರವಾಗಿ ಒಡ್ಡಿರುವ ಬಲೆಯಲ್ಲವಷ್ಟೆ ?

ಚೆನ್ನ } :—(ವಜ್ರನಿರ್ಘಾತರಂತಾಗಿ,) ಬುದ್ದಿ ! ಬುದ್ದಿ !
ರಂಗ } ಮಾಸ್ವಾಮಿ ! ಮಾಸ್ವಾಮಿ !

ಮಹಾಮಾತ್ಯಶ್ರೀ :—ಅಲ್ಲ, ರಣಧೀರ ; ಚುಂಚನನ್ನೂ ಅವನ ಮಕ್ಕಳನ್ನೂ ನಾವು ಮೊದಲಿಂದ ಬಲ್ಲೆವು—ಅವರ ರಾಜಭಕ್ತಿವಿಶ್ವಾಸಗಳು ಪರಿಶುದ್ಧವಾದುವು.

ರಣಧೀರ :—ನೀವು.........ಈ ಪ್ರಯತ್ನವನ್ನು ಕಯ್ಕೊಳ್ಳದಿರಿ.

ಚೆನ್ನ :—ಈ ಊರಿನವರೆಲ್ಲಾ ಬುದ್ದಿಯವರನ್ನ ಇಲ್ಲಿಂದ ಬಿಡಿಸಿಕೊಳ್ಳಬೇಕು—ಎನ್ನುತ ಗಾವಳಿಮಾಡುತ್ತ ಇದ್ದಾರೆ, ಮಾಸ್ವಾಮಿ.

ಮಹಾಮಾತ್ಯಶ್ರೀ :—ಎಂದರೆ, ಇದು ಸೆರೆಯೇನು ?

ರಣಧೀರ :—ಅಹುದು.

ಮಹಾಮಾತ್ಯಶ್ರೀ :—(ಚೆನ್ನರಂಗರತ್ತ ತಿರುಗಿ, ಎದ್ದು,) ನೀವು ನಿಮ್ಮ ಕೆಲಸವನ್ನು ಕೊನೆಮುಟ್ಟ ನೆರವೇರಿಸಿದರೆ, ನಿಮಗೆ ಒಂದುಲಕ್ಷ ಒಂದು ಲಕ್ಷ ವರಹಗಳನ್ನು ಸಲ್ಲಿಸುವೆವು.

ರಂಗ :—ನಾವು ದುಡ್ಡಿಗೆ ಇಂಥ ಕೆಲಸವನ್ನ ಮಾಡಲಿಕ್ಕಿಲ್ಲಾ, ಮಾಸ್ವಾಮಿ ; ನಾವು ತಲೆತಲಾಂತರದಿಂದ ಮಾರಾಜರ ಅರಮನೆ ಉಪ್ಪನ್ನ ತಿಂದದಕ್ಕೆ ಮಾಡುತ್ತೇವೆ.

(ಕದವು ಅಲ್ಲಾಡತೊಡಗುವುದು.)

ಚೆನ್ನ :—(ಅತ್ತನೋಡಿ,) ಬುದ್ದಿ ! (ಮಹಾಮಾತೃಶ್ರೀಚೆಂದವ್ವೆರುದ್ರವ್ವೆಯರನ್ನು ತೋರಿ,) ಇವರಿಲ್ಲಿಯೆಲ್ಲಿಯಾದರೂ ಅವಿತಿರಬೇಕು.

ರಣಧೀರ :—ಆರದು ?

ಚೆನ್ನ :—ತುಂಗಪ್ಪನವರು ! (ಹೆಂಗುಸರನ್ನು ನಿರ್ದೇಶಿಸುತ್ತ,) ಇವರಾ ದೊಡ್ಡ ಕನ್ನಡಿಯ ಹಿಂದೆ ಅಡಗಿಕೊಂಡಿರಬೇಕು.

ಸ್ತ್ರೀಯರು :—(ಆ ಕನ್ನಡಿಯ ಹಿಂದಣ್ಗೆ ಹೋಗಿ ಅದೃಶ್ಯೆಯರಾಗುವರು.)

ಚೆನ್ನ :—ನಮ್ಮ ಆ ಕಯ್ಮೆಗೆ ಬುದ್ದಿಯವರ ಅಪ್ಪಣೆ—

(ಬಾಗಿಲು ರಭಸದಿಂದ ಅಲುಗಾಡುವುದು.)

ರಣಧೀರ :—ನಾವು ಸಂಭಾಷಿಸಿದರೆ, ಬಾಗಿಲ ಹೊರಗಿರುವ—ಅವರಿಗೆ ಕೇಳಿಸುವುದಿಲ್ಲವೇನು ?

ರಂಗ :—(ತಳ್ಳಂಕದಿಂದ,) ಇಲ್ಲವು, ಮಾಸ್ವಾಮಿ ! ನಾಮಿಲ್ಲಿ ಏಸು ಕೂಗಿಟ್ಟರೂ, ಕದದ ಅತ್ತಲಾಗೆ ಕೇಳಿಸುವುದಿಲ್ಲವು, ಮಾಸ್ವಾಮಿ ; ನಾವು ಪರೀಕ್ಸೆಮಾಡಿದ್ದೇವೆ.

ಚೆನ್ನ :—ಅದಕೆ ಬುದ್ದಿಯವರ ಒಪ್ಪ............

ರಣಧೀರ :—(ವಿಜಯನಾರಸಿಂಹನನ್ನೊರೆಯೊಳಗೆ ನೂಕಿ, ಸುಖಾಸನಕ್ಕೆ ನಡೆದು, ಆದರೊಳೊರಗಿ,) ಬಾಗಿಲನ್ನು ತೆರೆಯಿರಿ. (ಕಣ್ಮುಚ್ಚಿಕೊಳ್ಳುವನು.)

ಚೆನ್ನ, ರಂಗ :—(ಬೇಗಬೇಗನೆ ಪಡಿದೆರೆಯುವರು.)

(ಹೊರಗಾವಲ ಯೋಧರೊಡನೆ ತುಂಗರಾಯನ ಪ್ರವೇಶ.)

ತುಂಗರಾಯ :—(ಸುತ್ತ ಕಣ್ಣಾಡಿಸಿ, ಸಂಶಯದಿಂದ,) ಇಷ್ಟುಹೊತ್ತಿನವರೆಗೆ ಬಾಗಿಲನ್ನೇಕೆ ತೆರೆಯಲಿಲ್ಲ ? ಒಳಗೇನುಮಾಡುತಿದ್ದಿರಿ ?

ಚೆನ್ನ :—ಅವರು ಹಾಂಗೆ ನಿದ್ದೆಮಾಡುತ್ತ ಗೊರಕೆಹೊಯ್ಯುತ್ತ ಇದ್ದರು ; ಈ ಕೋಣೆಯಲಿ ಏನನ್ನಾದರೂ ಮುಚ್ಚಿಮಡಗಿದ್ದಾರು—ಎನ್ನುತ ಹುಡುಕಿನೋಡಿದೆವು ; ಉದಕದ ಅಲಸಂದೆಗೂವೆ ಒಂದು ಕಾಸಿಲ್ಲ ! ಏನು ಮಾರಾಜರೋ ! ನಮ್ಮನ್ನೊಂದು ಬೋಳಗುಡ್ಡವ ಕಾವಲಿರು ಎನ್ನುತ ಕಳಿಸಲಿಕ್ಕಿಲ್ಲವಾ, ಇಲ್ಲಿಗಿಂತ ?

ಚೆನ್ನ
ರಂಗ } :—(ತಮ್ಮ ಕಯ್ದುಗಳನ್ನೆತ್ತಿಕೊಳ್ಳುವರು.)

ತುಂಗರಾಯ :—(ನಂಬುಗೆಗೊಳ್ಳದೆ,) ನೀವು ಹೊರಗೆಹೋಗಿರಿ.

ಚೆನ್ನ
ರಂಗ } :—(ಹೋಗುವರು.)

ರಣಧೀರ :—(ಕಣ್ತೆಗೆದು,) ಏನು ಗಲಭೆಯಿದು ?

ತುಂಗರಾಯ :—(ಬಾಗಿ ವಂದಿಸಿ,) ಮಹಾಸ್ವಾಮಿಯವರು ಇಂದು ಪ್ರದೋಷಕಾಲಕ್ಕೆ ತ್ರಿಣಯನೇಶ್ವರಸ್ವಾಮಿಯನ್ನು ಸಂದರ್ಶಿಸಬೇಕೆಂದು ಅಪ್ಪಣೆಯಾಯ್ತಂತೆ.

ರಣಧೀರ :—(ಎದ್ದು ಹೊರಟು,) ಬಲವನ್ತದ ಮಾಘಸ್ನಾನವಾದರೂ, ಇದರಿಂದ ಮುಕ್ತಿಯು ದೊರೆಕೊಳ್ವುದಾದರೆ, ನಮಗೆ ಒಪ್ಪುಗೆ.

ಪ್ರವೇಶ ೧೦.

[ಸ್ಥಾನ ;—ಮಹೀಶೂರಪುರ, ತ್ರಿಣಯನೇಶ್ವರದೇವಾಗಾರದಲ್ಲಿ ವಿಮಾನದ ಹಿಂದಣ ಕಯ್ಸಾಲೆ.]

(ಶ್ರೀರಣಧೀರಕಣ್ಠೀರವನರಸರಾಜಒಡೆಯ—ವಕ್ಷಸ್ಥಲದಮೇಲೆ ಕಯ್ಗಟ್ಟಿಕೊಂಡು ಶತಪಥ ತಿರುಗುತ್ತಿರುವನು.)

(ಸ್ವಲ್ಪಹೊತ್ತಿನ ಬಳಿಕ, ಸರ್ವಾಯುಧಸಜ್ಜಿತನಾದ ತುಂಗರಾಯನೊಡನೆ ವಿಕ್ರಮರಾಯನ ಪ್ರವೇಶ.)

ವಿಕ್ರಮರಾಯ :—(ರಣಧೀರನಿದಿರಿಗೆ ಹೋಗಿ ನಿಂತು, ಆವನ ಮುಡುಹಿನ ಮೇಲೆ ಕಯ್ಯಿಟ್ಟು, ಸಾದರನಾಗಿ,) ಆರೋಗ್ಯವೆ, ನರಸ, ಕುಶಲವೆ ?

ರಣಧೀರ :—(ಕಯ್ಬಿಚ್ಚಿ, ನೆಟ್ಟನೆನಿಂತು,) ಹೀಗೆಯೇ ; ಶ್ರೀನೃಸಿಂಹನ ಅನುಗ್ರಹ.

ವಿಕ್ರಮರಾಯ :—ಬಾ, ಕುಳಿತುಕೊ. (ಅಲ್ಲಿ ಅನುವಾಗಿರುವ ರತ್ನಗಂಬಳಿಯ ಮೇಲೆ ಕೌಳುಡೆಯನ್ನೊರಗಿ ಕುಳಿತು, ತನ್ನ ಕೆಲದ ಬೀರೊಂದನ್ನು ರಣಧೀರನಿಗೆ ಸರಿಯಿಸುವನು.)

ರಣಧೀರ:—(ಸೂಚಿತವಾದಂತೆ ಕುಳ್ಳಿರುವನು.)

ವಿಕ್ರಮರಾಯ :—ಊರಲ್ಲಿ ಎಲ್ಲರೂ ಕ್ಷೇಮಿಗಳಷ್ಟೆ ?

ರಣಧೀರ :—ನಮ್ಮ ಸೌಭಾಗ್ಯ.

ವಿಕ್ರಮರಾಯ :—ನರಸ, ಇಂದಣ ಮಹಾರಾಜರ ಅಕಾಲಮರಣದ ತೀವ್ರಶೋಕದಿಂದ ನೊಂದು ದಿಗ್ಭ್ರಾಂತರಾಗಿರುವೆವಾದರೂ, ಈಗಳೇ ನಿರ್ವಾಹವಿಲ್ಲದೆ ನಿನ್ನ ಪಟ್ಟಾಭಿಷೇಕದ ವಿಷಯವನ್ನೆತ್ತಿ ನಿರ್ಧರಿಸಿಕೊಳ್ಳಬೇಕಾಗಿದೆ.

ರಣಧೀರ :—(ಮೆಲ್ಲಗೆ,) ನನ್ನ ಅವಸ್ಥೆಯೂ ಹಾಗೆಯೇ ಆಗಿರುವುದು.

ವಿಕ್ರಮರಾಯ :—ಈ ರಾಜ್ಯಾಭಿಷೇಕವು ನಿನಗೆ ಸಮ್ಮತವೆ, ನರಸ ?

ರಣಧೀರ :—ನನ್ನನ್ನೀ ಮಹೀಶೂರರಾಜಪಟ್ಟಕ್ಕೆ ಆಯ್ದುಕೊಂಡುದ ಕ್ಕೋಸ್ಕರವಾಗಿ ನಾನು ನಿಮಗೆ ಆಜೀವನವೂ ಕೃತಜ್ಞನಾಗಿರುವೆನು.

ವಿಕ್ರಮರಾಯ:—ಮಹಿಶೂರರತ್ನಸಿಂಹಾಸನವ್ಯವಸ್ಥೆಯು ಇಂದು ಅಷ್ಟು ಸುಲಭವಾದುದಲ್ಲ.

ರಣಧೀರ :—ಶ್ರೀನೃಸಿಂಹನ ಪ್ರಸಾದದಿಂದ, ನಮ್ಮ ಹೆಸರ ಹಿರಿಯರ ಸುಕೃತದಿಂದ, ಆಸ್ತಿಕರ ಆಶೀರ್ವಾದದಿಂದ, ನಮ್ಮ ಮಹೀಶೂರ ರಾಜ್ಯಕ್ಕೆ ಬಂದಡಸಬಹುದಾದ ಕಣ್ಟಕಗಳನ್ನೆಲ್ಲ ಇರಿದೊಡೆದು ಸುಟ್ಟು ಕೊಂದು, ಹಿಂದಣ ಎರೆವೆಟ್ಟಿನ ಆ ಸಮೃದ್ಧತೆಯು ಪ್ರತಾಪಪ್ರಭಾವತೆಗಳು ಒದವಿ ಮಾಸದಂತೆ ಮುದ್ರಿಸಿರಿಸಲು ಪ್ರಯತ್ನಿಸಿ—ಸಾಧಿಸುವೆನು.

ವಿಕ್ರಮರಾಯ :—ರಾಜ್ಯದ ಸುತ್ತುಮುತ್ತಣ ನರಿಗಳು ಪ್ರಬಲವಾಗ ತೊಡಗಿ, ಊಳ್ದು ನಮ್ಮನ್ನು ಕೆಣಕುತ್ತಿವೆ.

ರಣಧೀರ :—ಮಹೀಶೂರಮಹಾರಾಜರೇರಿರುವುದು ಸಿಂಹಾಸನವೆಂಬುದನ್ನು ಆ ಅವರಿಗೆ ಸಾಕ್ಷಾತ್ಕರಿಸಿಕುಡುವೆನು.

ವಿಕ್ರಮರಾಯ :—ಹಾಗೆಂದರೆ, ಯುದ್ಧಗಳು ಆವಶ್ಯಕವಾದುವು.

ರಣಧೀರ :—ಯುದ್ಧಗಳಿಗಾಗಲಿ, ಸ್ವತಃ ತನ್ನ ವೈಯಕ್ತಿಕ ಕ್ಷೇಮಕ್ಕೋಸ್ಕರವಾಗಿಯಾಗಲಿ, ಬಿರಿತು ನಡುಗುವ ಹೇಡಿಯು ಮಹೀಶೂರರಾಜಪಟ್ಟ—ಅದನ್ನು ಕನಸಿನಲ್ಲಿಯೂ ನೆನೆಯಲಾಗದು.

ವಿಕ್ರಮರಾಯ :—(ಮುಗುಳ್ನಗೆಗೊಂಡು,) ಭಾಪು! ನರಸ!—ಅಹುದು. ಮೆಯ್ವಡೆದು ಮೊಗದೋರುತ್ತಿರುವ ಯುದ್ಧಗಳನಿತಕ್ಕೂ ಬೇಕಾದಷ್ಟು ಶಸ್ತ್ರಾಸ್ತ್ರಗಳನ್ನು ತುಪಾಕಗಳನ್ನು ಫಿರಂಗಿಗಳನ್ನು ಮದ್ದುಗುಂಡುಗಳನ್ನು ಬಾಣಗಳನ್ನು ರಣವಾದ್ಯಗಳನ್ನು ಆನೆಕುದುರೆಗಳನ್ನು ಗುಡಿಗೂಡಾರಗಳನ್ನು ಆಹಾರಪದಾರ್ಥಗಳನ್ನು ಬಟ್ಟೆಹಣ ಮುಂತಾದುವನ್ನು ತರಿಸಿ, ಅನುಗೊಳಿಸಿಟ್ಟಿರುವೆವು. ಸೈನ್ಯದವರ ಸಾಧಕಚಾತುರ್ಯ ಯುದ್ಧಕೌಶಲ್ಯ ಯೋಗ್ಯತೆಗಳಿಗೆ ತಕ್ಕ ಅಧಿಕಾರಿಗಳನ್ನು ನಿಯಮಿಸಿ ನೇರ್ಪಡಿಸಿಕೊಂಡು, ಹಗೆಗಳನ್ನು ಗೆದ್ದು ಬಾಯ್ಕೇಳಿಸಿ ಅಡಗಿಸುವುದು.........ನಿನ್ನ ಕರ್ತವ್ಯ.

ರಣಧೀರ :—(ತೀಕ್ಷ್ಣದೃಷ್ಟಿಯಿಂದ ನೋಡಿ,) ಆಗಬಹುದು.

ವಿಕ್ರಮರಾಯ :—ಇನ್ನು ನಿನಗೆ ವಿನೋದಕಾಲಕ್ಷೇಪಕ್ಕೋಸ್ಕರವಾಗಿ ಪಟ್ಟಣದಲ್ಲಿ—ಅರಮನೆಗೆ ಸಮೀಪವಾಗಿಯೇ—ಮಹಾರಾಜಯೋಗ್ಯವಾದುದೊಂದು ಗರುಡಿಯ ಮನೆಯನ್ನು ಕಟ್ಟಿಸಿ, ಅಲ್ಲಿಗೆ ತಗುವ ಸಾಧನಸಾಮಗ್ರಿಯಗಳನ್ನು ಕುಂದಿಲ್ಲದಂತೆ ಸಜ್ಜುಗೊಳಿಸುತ್ತಿರುವೆವು. ಮತ್ತೆ, ಈ ಪ್ರಾಂತ್ಯದಲ್ಲಿಯೂ ಸುತ್ತಣ ನಾಡುಗಳಲ್ಲಿಯೂ ಅರಿಕೆಗೊಂಡಿರುವ ಜಟ್ಟಿಗರನ್ನೆಲ್ಲಾ......ಎಷ್ಟೇ ವೆಚ್ಚವಾದರೂ......ನಿನಗೆ ಕರೆಯಿಸಿಕುಡುವ ಸನ್ನಾಹಕ್ಕೊಪ್ಪಿದ್ದೇವೆ.

ರಣಧೀರ :—ಹಾಗೆ ಸಿದ್ಧವಾದ ಗರುಡಿಯಿಂದ ಮಹೀಶೂರರತ್ನಸಿಂಹಾಸನಾಧೀಶ್ವರರಿಗೂ, ಆ ಮೂಲಕವಾಗಿ ಮೈಸೂರ ದೇಶಕ್ಕೂ

ಮನೋವಾಕ್ಕರ್ಮಗಳಲ್ಲಿ ದ್ರೋಹವನ್ನೆಣಿಸಿ ನೆರವೇರಿಸಿದ ಆ— ದುರಾತ್ಮರವರನ್ನು ನಿಗ್ರಹಿಸಲು ಸಮರ್ಥರಾದ ಮಲ್ಲವೀರರು ಹೊರಟು ಕೃತಕೃತ್ಯರಾಗಲಿ!

ವಿಕ್ರಮರಾಯ :—(ನಕ್ಕು,) ತಥಾಸ್ತು. ನಿನ್ನ ವೀರವಿಹಾರಕಾಲಗಳ್ಗನುಕೂಲಿಸುವಂತೆ ಕಾರ್ಕೋಡಿಹಳ್ಳದ ಘಟ್ಟದ ಕೆಳಗೂ, ಹೆಗ್ಗಡೆದೇವನ ಕೋಟೆಯ ಕಾಡಿನೊಳಗೆಯೂ, ಬಿಳಿಗಿರಿರಂಗನ ಬೆಟ್ಟದ ಮೇಲೆಯೂ, ಹೀಗೆ ಮೂರು ಬೇಡರ ಪಾಳೆಯಗಳನ್ನೇರ್ಪಡಿಸಿ ಸಾಂಗವಾಗಿ ಕಟ್ಟಿಸುತ್ತಿರುವೆವು.

ರಣಧೀರ :—(ಮನ್ದಹಾಸದಿಂದ,) ನಿಮ್ಮ ಈ ದಯಾಮಯವಾದ ದೂರಾಲೋಚನಗಳ ಸಮಗ್ರತೆಯು ನನ್ನ ಮನಕ್ಕೂ ನಾಲಗೆಗೂ ಪರವಶತೆಯನ್ನುಂಟುಮಾಡುತ್ತಿರುವುದು ; ಅವುದನ್ನು ಹೇಗೆ ವ್ಯಕ್ತಗೊಳಿಸಬೇಕೆಂಬುದನ್ನು ನಿರ್ಣಯಿಸಲಾರದವನಾಗಿರುವೆನು.

ವಿಕ್ರಮರಾಯ :—ನಿನ್ನ ಇಷ್ಟಾನುಸಾರವಾಗಿ ಆಟವೋ, ಬೇಟೆಯೋ, ಗರುಡಿಯೋ, ಯುದ್ಧವೋ—ಅವುಗಳನ್ನು ಕಯ್ಗೂಡಿಸಿಕೊಳ್ಳುತಿರುವುದಕ್ಕೆ ನಮ್ಮ ಆಕ್ಷೇಪಣವೇನೂ ಇಲ್ಲ.

ರಣಧೀರ :—(ತಲೆವಾಗಿದ್ದು,) ಆಗಬಹುದು.

ವಿಕ್ರಮರಾಯ :—ನಾಳಿನ ಸಂಜೆಗೆ ನಿನ್ನನ್ನಿಲ್ಲಿ ಕಾಣಬೇಕಾಗಿದೆ, ನರಸ!

ರಣಧೀರ :—(ಎದ್ದು,) ಅವಶ್ಯವಾಗಿ ಬರುವೆನು. (ಹೊರಟುಹೋಗುವನು.)

ವಿಕ್ರಮರಾಯ :—ತುಂಗ, ಹೋಗಿ, ಅಲ್ಲಿಯ ಕಾವಲ್ಗೆ ನಮ್ಮ ಮೂಲಬಲದಿಂದಿನ್ನೊಂದು ದಳವನ್ನಾಯ್ದುಯ್ದು ಒಡ್ಡಿ ಹುರಿಮಾಡಿ, ಎಚ್ಚರಿಂದಿದ್ದು, ನಾಳೆ ಬೆಳಗಾದೊಡನೆ ಬಂದು ನಮ್ಮನ್ನು ನೋಡು.

ತುಂಗರಾಯ :—ಅಪ್ಪಣೆ. (ಹೋಗುವನು.)

ವಿಕ್ರಮರಾಯ :—(ನಕ್ಕು,) ನಮ್ಮ ತೊಡೆಯ ಮೇಲೆ ತೊದಲುತ್ತ ಬಳೆದ ಈ ಪಿಳ್ಳೆಗೆ ನಮ್ಮೊಡನೆ ವ್ಯಂಗ್ಯಜಿಜ್ಞಾಸೆ! ಶ್ಲೇಷೆಯ ವಾಕ್ಯಾ

ರ್ಥ ! ಹುಂ.........(ಹುಬ್ಬುಗಂಟಿಕ್ಕಿ,) ತಂದೆಯಂತಲ್ಲದ ಮಗ ನಹುದು ; ಆದರೆ, ದೈವಶಾಸನ ! .... ಬಿತ್ತರಿಗೆಗೆ ಮುಂದಣ ಉತ್ತರಾಧಿಕಾರಿ ? ಈ ಮನೆತನದಲ್ಲಿ—ರಾಜಒಡೆಯನ ಮಲತಮ್ಮನಾ ಮುಪ್ಪಿನ ದೇವರಾಜನ ಮಕ್ಕಳು ; ಹಿರಿಯವನಿ ಗಿನ್ನೂ ಹತ್ತುವರುಷಗಳ ವಯಸ್ಸು.........ನೋಡೋಣ.

ಪ್ರವೇಶ ೧೧.

[ಸ್ಥಾನ;—ಮೈಸೂರು, ವಿಕ್ರಮರಾಯನ ಸೌಧದ ಮುಂದಣ ಆರಾಮ, ಪಕ್ಷದ್ವಾರದೆಡೆ.]

(ದೀವಟಿಗನೊಡನೆ ವಿಕ್ರಮರಾಯನ ಪ್ರವೇಶ.)

ದೀವಟಿಗ :—(ತಟ್ಟನೆ ನಿಂತು,) ಹೋ ! ಯಾರಲ್ಲಿ ?

ವಿಕ್ರಮರಾಯ :—(ನಿಂತು,) ಏನದು ?

ದೀವಟಿಗ :—ಸೌಧದಿಂದ ಯಾರೋ ಬರುತ್ತಿದ್ದಾರೆ.—ಯಾರಲ್ಲಿ ? ಹೋಯ್ !

(ಆಳಗರಾಜಯ್ಯನ ಪ್ರವೇಶ.)

ವಿಕ್ರಮರಾಯ :—ಇದೇನು, ಆಳಗರಾಜ ?

ಆಳಗರಾಜಯ್ಯ :—(ನಮಿಸಿ,) ಶ್ರೀಮನ್ತರನ್ನು ಅರಸುತ್ತಿದ್ದೆನು.

ವಿಕ್ರಮರಾಯ :—ನಟ್ಟಿರುಳು ಕಳಿದ ಈ ಅಸಮಯದ ಕಗ್ಗತ್ತಲೆಯಲ್ಲಿ ?

ಆಳಗರಾಜಯ್ಯ :—ಅಹುದು, ತುಂಗರಾಯನು ನನ್ನನ್ನಟ್ಟಿದನು.

ವಿಕ್ರಮರಾಯ :—ಹೇಳು.

ಆಳಗರಾಜಯ್ಯ :—ಶ್ರೀಮನ್ಮಹಾರಾಜರನ್ನು ದೇಗುಲದಿಂದ ಅವರ ಬೀಡಾರಕ್ಕೆ ಕರೆದುಯ್ಯುತ್ತಿದ್ದಾಗ ಜನರು ಸನ್ದಣಿಗೊಂಡು ಅವರಿಗೆ ಅಡ್ಡಬೀಳುತ್ತ, ಅವರನ್ನು ಬೇಗನೆಯೇ ಆ ಕಾರಾಗೃಹದಿಂದ ಬಿಡಿಸಿ ಅವರಿಗೆ ಪಟ್ಟಾಭಿಷೇಕವನ್ನೊಪ್ಪಿಸುವುದಾಗಿಯೂ, ಶ್ರೀಮಂತರನ್ನು ಅವರ ರಾಯತನದ ಹಾವುಗೆಯ ಮಂಗಳಕ್ಕೆ ಸೀಳ್ದಿಡುವುದಾಗಿಯೂ ಕೂಗಿ ಕಳಕಳಮಾಡಿದರು.

ವಿಕ್ರಮರಾಯ :—ಅದಕ್ಕೆ ಇವನ ಉತ್ತರವೇನು ?

ಆಳಗರಾಜಯ್ಯ :—ಏನೂ ಇಲ್ಲ.—ಸುಮ್ಮನೆ ಮುಗುಳ್ನಗೆನಕ್ಕರು.

ವಿಕ್ರಮರಾಯ :—ಆ ಮುಗುಳ್ನಗೆಯು ಸರ್ಪಚುಂಬನದಂತೆ ವಿಷ—ವಿಪತ್ಸಿದ್ಧವಾದುದೆಂಬುದು ತುಂಗಣಿಗೆ ಅರ್ಥವಾಗಲಿಲ್ಲವೇನು ?

ಆಳಗರಾಜಯ್ಯ :—ಆ ನಿಮಿಷವೇ ತುಂಗರಾಯನು ಪುರರಕ್ಷಕರ ದಳವನ್ನು ಕಳಿಹಿ, ಆ ಸಮ್ಮರ್ದವನ್ನು ಒಗ್ಗೊಡೆಯಿಸಿ ಚೆದರಿಸಬೇಕೆಂದೂ, ಹಾಗೆ ಬಗ್ಗದವರನ್ನು ನಿರ್ದಾಕ್ಷಿಣ್ಯವಾಗಿ ಹೊಯ್ದೋಡಿಸಬೇಕೆಂದೂ, ಅದಕ್ಕೂ ಮೀರಿದವರನ್ನು ನಿಶ್ಶಂಕೆಯಿಂದಿರಿದು ಕೊಂದುಬಿಡಬಹುದೆಂದೂ, ಸ್ಪಷ್ಟವಾಗಿ ಸಾರಿಸಿ ಶಾಸಿಸಿದನಲ್ಲದೆ —ಆ ನರಸೀಪುರಧ ತುಂಟನನ್ನು ತೋರಿ ಅಥವಾ ಹಿಡಿದುಕೊಟ್ಟವರಿಗೆ ಅಯ್ದುಸಾಸಿರ ವರಹಗಳ ಸಮ್ಮಾನವು ಲಭಿಸುವುದೆಂದೂ ಪ್ರಕಟಿಸಿದನು.

ವಿಕ್ರಮರಾಯ :—ಹುಂ.

ಆಳಗರಾಜಯ್ಯ :—ಅಷ್ಟರೊಳಗಾಗಿ ಜನರು ಅಲ್ಲಲ್ಲಿಯೇ ಅಡಗಿಕೊಂಡು ಅಗೋಚರರಾದರು; ಆ ದಳದವರು ಏನನ್ನೂ ಮಾಡಲಾರದೆ, ತಟಸ್ಥರಾಗಿ, ಅರಮನೆಯ ಮುಂದೆ ಬೀಡುಗೊಂಡಿದ್ದಾರೆ.

ವಿಕ್ರಮರಾಯ :—ಪಂಜುಗಳೇನಾದುವು ?

ಆಳಗರಾಜಯ್ಯ :—ಪಂಜುಗಳನ್ನು ತರುವುದಕ್ಕೆ ನಮ್ಮವರು ಹಳೆಯ ಉಗ್ರಾಣಕ್ಕೆ ಆಗಳೇ ಹೋದರು.

ವಿಕ್ರಮರಾಯ :—ಆ ನರಸೀಪುರದವನನ್ನು ಹಿಡಿದಿರಾ ?

ಆಳಗರಾಜಯ್ಯ :—ಇಲ್ಲ ; ಸದ್ಯಃ ಅವನೆಲ್ಲಿಯೋ ಮೆಯ್ಗರೆದಿರುವಂತಿದೆ.

ವಿಕ್ರಮರಾಯ :—ನಮ್ಮಾಳ್ಗಳು ಅರಸಹೊರಟಾಗಳೇ ನಮ್ಮ ವಿಪಕ್ಷದವರಿಗೆ ಅದೃಶ್ಯಾಂಜನವು ಸಿದ್ಧಿಸುವುದು.—ಮತ್ತದೇನು? ಹೇಳಿ, ತೊಲಗು.

ಆಳಗರಾಜಯ್ಯ :—ಮಹಾರಾಜರಿರುವ ಕೋಣೆಯ ಬಾಗಿಲಲ್ಲಿ ಕಾವಲಿರುತ್ತಿದ್ದ ಚೆನ್ನರಂಗರಿಬ್ಬರೂ ಒಳಗೆ ಸೇರಿ, ಆ ಕದವನ್ನು ಮುಚ್ಚಿ ಭದ್ರಪಡಿಸಿ, ಮಹಾರಾಜರೊಡನೆ ಏನನ್ನೋ ಮನ್ತ್ರಣಮಾಡುತ್ತಿದ್ದುದನ್ನು ತುಂಗರಾಯನು ಕಂಡುಹಿಡಿದನು. ಅವರ ವಿಷಯದಲ್ಲಿ ಅವನಿಗೆ ತೀವ್ರಸಂಶಯವುಂಟಾಗಿದೆ.

ವಿಕ್ರಮರಾಯ :—ಚೆನ್ನರಂಗರಿಬ್ಬರನ್ನೂ ಒಡನೆಯೇ ಹಿಡಿದು, ಅರಮನೆಯ ಗುಪ್ತಗೃಹದಲ್ಲಿ ಚಿತ್ರಹಿಂಸೆಗೊಳಗಾಗಿಸಿ, ಆ ಗುಟ್ಟನ್ನೊಳಗನ್ನು ಹೊರವಡಿಸಬೇಕು. ಅಲ್ಲಿ ಅವರು ತೀರಿಹೋಗಲಿ.

ಆಳಗರಾಜಯ್ಯ :—ಅಪ್ಪಣೆ.

ವಿಕ್ರಮರಾಯ :—ಚೆನ್ನರಂಗರೂ ಆ ನರಸೀಪುರದವನಂತಾಗದಿರಲಿ! ಜೋಕೆ!

ಆಳಗರಾಜಯ್ಯ :—ಅಪ್ಪಣೆ. (ವಂದಿಸಿ, ಹೋಗುವನು.)

ವಿಕ್ರಮರಾಯ :—(ಅನತಿಕಾಲ ಸ್ತಬ್ಧನಾಗಿ ಚಿಂತಾನ್ತರ್ಗತನಾಗಿದ್ದು, ಮೊಗವೆತ್ತಿ, ದೀವಟಿಗನತ್ತ ತಲೆದೂಗಿ, ಹೊರಡುವನು.)

(ಅಲ್ಲಿ ಅವಿತಿದ್ದವರಿಬ್ಬರು ಹವ್ವನೆ ಮುಂದಕ್ಕೆ ಹಾರಿಬರುವರು.)

ಚೆನ್ನ :—(ದೀವಟಿಗನ ಪಂಜುಗಯ್ಯ ಮಣಿಕಟ್ಟಿನ ಮೇಲೆ—ಆ ಪಂಜು ಕೆಳಕ್ಕೆ ಬಿದ್ದುಹೋಗುವಂತೆ ರಭಸದಿಂದ ಹೊಡೆಯುವನು.)

ದೀವಟಿಗ :—(ತನ್ನ ಕಯ್ಯನ್ನು ಕೊಡಹುತ್ತ, 'ಅಯ್ಯಪ್ಪಾ! ಅಯ್ಯೋ!' ಎಂದು ಚೀರುತ್ತಿರುವನು.)

ರಂಗ :—(ಅದೇ ನಿಮೇಷದಲ್ಲಿ ವಿಕ್ರಮರಾಯನನ್ನಾಕ್ರಮಿಸಿ ತಬ್ಬಿಹಿಡಿದು ಕೆಳಕ್ಕೆ ನೂಕಿ ಕೆಡಹಲು ಪ್ರಯತ್ನಿಸುತಿದ್ದು, ಆರದೆ, ತಾನೇ ವಿಕ್ರಮರಾಯನ ಪಟ್ಟಿನ ಕಟ್ಟೊದೆಗೆ ಗುರಿಯಾಗಿ ಸಿಲ್ಕಿ, 'ಹೋಯೋ!' ಎಂದು ಕೂಗಿಡುತ್ತ, ದಣ್ಣಾಕಾರವಾಗಿ ಬೀಳುವನು.)

ವಿಕ್ರಮರಾಯ :—(ರಂಗನ ಎದೆಯ ಮೇಗಣ್ಗೆ ನೆಗೆದೇರಿಕುಳಿತು, ತನ್ನೆರಡೂ ಕಯ್ಗಳಿಂದವನ ಕೊರಲನ್ನು ಕಿವಿಚುತ್ತ, ತಾರಕಣ್ಠದಿಂದ—'ಹೋ! ಆಳಗರಾಜ! ಆಳಗರಾಜ! ತುಂಗ! ನಂಜ! ದೇವ! ಬನ್ನಿ! ಬೇಗಬನ್ನಿ! ಕೊಲೆ

ಪಾತಕರು ! ನಮ್ಮನ್ನಾಕ್ರಮಿಸಿರುವರು! ಹೋ! ಬನ್ನಿ! ಆಳಗರಾಜ ! ದೇವ! ಆಳಗರಾಜಾ !'—ಎಂದು ಪುನಃಪುನಃ ಕೂಗುತ್ತಿರುವನು.)

ದೀವಟಿಗ :—(ಭಯಾತಿರೇಕದಿಂದ ಮರವಟ್ಟಿದ್ದು, ಹಿಂದಿರುಗಿ ಓಡತೊಡಗುವನು.)

ಚೆನ್ನ :—(ಆ ದೀವಟಿಗನತ್ತ ಹಾರಿ, ಅವನ ಜುಟ್ಟನ್ನು ಹಿಡಿದೆಳೆದು ನಿಲ್ಲಿಸಿಕೊಂಡು, ತನ್ನ ಬಲಗಯ್ಯಲ್ಲಿ ಹೊಳೆಹೊಳೆಯುತಿರುವ ಖಡ್ಗವನ್ನು ಮೇಲಕ್ಕೆ ನೆಗಹುವನು.)

(ಪಂಜು ನಂದಿಹೋಗುವುದು............ಗಾಢಾಂಧಕಾರ..........ಒಂದು ದೇಹವು ಕೆಳಗುರುಳ್ದ ಶಬ್ದ............ದಡದಡನೆ ನಡೆದಾಡಿದ ಹಜ್ಜೆಗಳ ಸೊಪ್ಪಳು............ಚೆನ್ನನ ಕಂಠವು ತವಕದಿಂದ, " ರಂಗ ! ಓ ರಂಗ ! ನೀನ್ ಕೆಳಗೊ ? ನೀನ್ ಮೇಗೋ ?—ನೀನ್ ಕೆಳಗೊ ಮೇಗೊ, ರಂಗಾ ?" ಎಂದು ಕೂಗಿ ಕೇಳುತ್ತಿರುವ ಮಾತು ;............ಉಸಿರಿಲ್ಲದ ಅತ್ಯಂತ ಕ್ಷೀಣಸ್ವರದಿಂದ, 'ಕೆಳಗೆ ! ಕೆಳಗೆ !' ಎಂದ ಉತ್ತರ ; ಒಡನೆಯೇ ಸೌಳೆಂದು ಖಡ್ಗವನ್ನು ಬೀಸಿದ, ತೆಂಗಿನಕಾಯಂತಹುದು ಭೂಮಿಗೆ ಬಿದ್ದುರುಳಿದ, ಸದ್ದುಗಳು............ಆ ಬಳಿಕ ಸಾನ್ದ್ರನಿಶ್ಶಬ್ದತೆ.)

ಪ್ರವೇಶ ೧೨.

[ಸ್ಥಾನ ;—ಮಹೀಶೂರಪುರ, ಅರಮನೆ, ಹೊರಗಣ ಅಂಗಳ, ಶ್ರೀರಣಧೀರಕಂಠೀರವ ನರಸರಾಜಒಡೆಯ ಇರುವ ಓವರಿ.]

(ರಣಧೀರನು ನಿಲವುಗನ್ನಡಿಯೆಡೆಯಲ್ಲಿ ನಿಂತಿರುವನು.)

(ತುಂಗರಾಯನ ಪ್ರವೇಶ.)

ತುಂಗರಾಯ :—(ವಿನಯವಿನಮಿತನಾಗಿ,) ಆಳುವ ಮಹಾಸ್ವಾಮಿಯವರು ಆರೋಗಣೆಗೂ ಸೆಜ್ಜೆಗೂ ಬಿಜಯಮಾಡಿಸಿ,.............

ರಣಧೀರ :—(ಹಿಂದಿರುಗಿ ಸುಖಾಸನದತ್ತ ನಡೆದು,) ಆಳುವ ಮಹಾಸ್ವಾಮಿಯವರು ಆರೋಗಣೆಯನ್ನೂ ಸಜ್ಜೆಯನ್ನೂ ಇಂದು ಇಲ್ಲಿಯೇ ಒಪ್ಪಿಸಿಕೊಳ್ಳುವರು ; ಆ ಊಳಿಗದವರನ್ನು ಕರೆಯಿಸು.

ತುಂಗರಾಯ :—ನಾಳೆ ಹೊತ್ತು ಮೂಡುವುದರೊಳಗಾಗಿ ಇಲ್ಲಿಗೆ ಸುಣ್ಣವನ್ನು ಬಳಿಯಿಸಿ, ಕಸದೂಳಿಲ್ಲಣಗಳಿಲ್ಲದಂತೆ ಪರಿಷ್ಕಾರಮಾಡಿಸಿ, ಪಟ್ಟಣದಿಂದ ಈವರಿಗೆ ಬಂದಿಳಿದಿರುವ ಸುಖಾಸನಗಳು, ಚಿತ್ರಪಟ

ಗಳು, ಕಾಲ್ಮಣೆಗಳು, ಬಾಗಿಲ ಗವಾಕ್ಷದ ತೆರೆಗಳು, ಚಿತ್ರಯವನಿಕೆಗಳು, ದೀಪಸ್ತಂಭಗಳು, ತೂಗುಂಜೊಡರ್ಗಳು, ರತ್ನಗಂಬಳಿಯ ಹಾಸುಗೆಗಳು, ಲಾಮಂಚದ ಬೀಸಣಿಗೆಗಳು, ಕಡವೆಯ ಕೊಂಬುಗಳ ಹುಲಿಯ ಮುಖಗಳ ಅಲಂಕಾರಗಳು ಮುಂತಾದ ಮಹಾರಾಜಯೋಗ್ಯವಾದ ಉಪಸ್ಕರಗಳನ್ನಿಲ್ಲಿಗೆ ಸಮನ್ವಯಿಸಿ, ಶೋಭಿಸುವಂತೆ ಅಣಿಮಾಡಬೇಕೆಂದು ಅಪ್ಪಣೆಯಾಗಿದೆ.

ರಣಧೀರ :—ಶ್ರೀಮನ್ತರ ಕೃಪೆ.

ತುಂಗರಾಯ :—ಮಹಾಸ್ವಾಮಿಯವರ ಅನ್ತಃಪುರದವರು—ಆರೋಗಣೆಗೋಸ್ಕರವಾಗಿ.........ಪ್ರತೀಕ್ಷಿಸುತ್ತಿದ್ದಾರೆ.

ರಣಧೀರ :—(ಸುಖಾಸನಾಸೀನನಾಗಿ,) ನಾವು ಸೂಚಿಸಿದಂತೆ ಆ ಊಳಿಗದವರನ್ನು ಕಳಿಹು.

ತುಂಗರಾಯ :—ಮಹಾಸ್ವಾಮಿ !

ರಣಧೀರ :—ನೀನು ಹೊರಡಬಹುದು.

ತುಂಗರಾಯ :—ಇಂದೀಗಳೇ ಇಲ್ಲಿಯ ಕಸವನ್ನು ತೆಗೆಯಿಸಬೇಕು !

ರಣಧೀರ :—(ಎದ್ದು ನಿಂತು, ಕೋಪಾರುಣನೇತ್ರನಾಗಿ,) ನಾವಿಲ್ಲಿರುವಾಗಳೇ ?

(ಹೊರಗೆ):—(ಯುದ್ಧಲಕ್ಷಣದ ಶಬ್ದಗಳಾಗುವುವು.)

(ಉತ್ತರನಿಮಿಷದಲ್ಲಿಯೇ ರಕ್ತಾಕ್ತವಾದ ಬಿಚ್ಚುಕತ್ತಿಗಳನ್ನಾಂತ ತನ್ನ ದಳದ ಹಲವರೊಡನೆ ನಿರೀಶನ ಪ್ರವೇಶ.)

ತುಂಗರಾಯ :—(ವಿವರ್ಣನಾಗುವನು.)

ಬಂದವರೆಲ್ಲ :—(ನೀರವವಾಗಿ ರಣಧೀರನಿಗೆ ಕತ್ತಿಯನ್ನೊಳಕೊಂಡು ಮುಗಿದ ನೀಡುಂಗಯ್ಗಳಿಂದ ಮಣಿದು ವಂದಿಸುವರು.)

ನಿರೀಶ :—(ಅಸಮಾಧಾನದಿಂದ ತುಂಗರಾಯನನ್ನಭೀಕ್ಷಿಸುತ್ತಿದ್ದು, ರಣಧೀರನತ್ತತಿರುಗುವನು.)

ರಣಧೀರ :—ಅಹುದು, ನಿರೀಶ ; ಈ ಕೋಣೆಯ ಇಲ್ಲಣಕಸಗಳನ್ನು ನಮ್ಮ ತಲೆಯ ಮೇಲಾದರೂ ಗುಡಿಸಬೇಕೆಂಬುದು ಶ್ರೀಮಂತರ ಕಟ್ಟಾಯದ ಆಜ್ಞೆ.

ನಿರೀಶ :—ಇರಬಹುದು, ಮಹಾಸ್ವಾಮಿ. (ತನ್ನವರಿಬ್ಬರಿಗೆ ಇಂಗಿತಮಾಡುವನು.)

ಆಯಿಬ್ಬರು :—(ಹೋಗಿ, ತುಂಗರಾಯನ ಇಕ್ಕೆಲಗಳಲ್ಲಿ ನಿಂತು, ಅವನ ಕೈಯ್ಗಳನ್ನು ಬಂದಿಗೊಳ್ವರು.)

ರಣಧೀರ :—(ಸಮಸ್ತರನ್ನೂ ನೋಡಿ, ನಕ್ಕು,) ನಮ್ಮನ್ನು ಮೀರಿ, ನಮ್ಮೊಡನೆ ಇಲ್ಲಿಗೆ ಬಾರೆನೆಂದು ಚಂಡಿಸಿ, ಛಲದಿಂದ ತೆರಕಣಾಂಬಿ— ಅಲ್ಲಿಯೇ ಅಡಗಿಕೊಂಡುದು ಇದಕ್ಕೋಸ್ಕರವಾಗಿ! ನಿಮ್ಮ ಲಕ್ಷ್ಯಾರ್ಥವು ಇದೇ ಎಂಬುದನ್ನಾಗಳೇ ಅರಿಯದಾದೆವು...... ದುಷ್ಟಮಿತ್ರರೆ, ನಿಮಗೆ ಇನ್ನದೆಂತಹ ಶಾಸ್ತಿಯು ತಕ್ಕುದೊ!

ಅಂಗರಕ್ಷಕರೆಲ್ಲ :—(ಮೌನವಾಗಿ ಬಾಗಿ ಪುನಃ ವಂದಿಸುವರು.)

ರಣಧೀರ :—(ನಿರೀಶನತ್ತ ತಿರುಗಿ,) ನಮ್ಮ ಸ್ಥಿತಿಗತಿಗಳ ವಿವರವೇನು?

ನಿರೀಶ :—ತನುಮನೋಧನಸರ್ವಸ್ವಗಳನ್ನೂ ಒಪ್ಪಿಸಿ, ಮಹಾಸ್ವಾಮಿಯವರಿಗೋಸ್ಕರವಾಗಿ ಕಾದಲು ಸಿದ್ಧರಾಗಿರುವ ಈ ಮಹೀಶೂರ ಪುರಜನರ ಸೈನ್ಯ; ನಮ್ಮೆಲ್ಲರ ಕರ್ತವ್ಯವನ್ನು ಕಯ್ಕೊಂಡು ನಡೆಯಿಸಿ, ತಿಳಿದು ಸಲ್ಗೆಗೇರುತ್ತಿರುವ ವಿಜಯಲಕ್ಷ್ಮಿಯನ್ನು ಕ್ಷೇಮಲಕ್ಷ್ಮಿಯನ್ನು ರಾಜ್ಯಲಕ್ಷ್ಮಿಯನ್ನು ಮಹಾಸ್ವಾಮಿಯವರು— ಶತ್ರುಶಿಬಿರವು ದುರ್ಗವಾಗದ ಮುನ್ನ—ವರಯಿಸುವುದು.

ರಣಧೀರ :—ಪೌರರ ಬಲವೆಷ್ಟು?

ನಿರೀಶ :—ಆರುಸಾಯಿರದ ನಾಲ್ಕುನೂರು.

ರಣಧೀರ :—ಆಯುಧಗಳು?

ನಿರೀಶ :—ಸರ್ವಾಯುಧಸಜ್ಜಿತವಾದ ಪದಾತಸೈನ್ಯ.

ರಣಧೀರ :—ಶಿಕ್ಷಣ?

ನಿರೀಶ :—ಒಬ್ಬನೂ ಹೇಡಿಯಲ್ಲ, ದ್ರೋಹಚಿನ್ತಕನಲ್ಲ.

ರಣಧೀರ :—ಕಟಕೋಪಾಧ್ಯಾಯನಾರು?

ನಿರೀಶ :—ಮಹಾಸ್ವಾಮಿ!

ರಣಧೀರ :—(**ದರಹಸಿತಮುಖನಾಗಿ,**) ಆ—ನರಸೀಪುರದ ತುಂಟ! ಒಳ್ಳಿತು. ಒಂದುಸಾಸಿರ ಸೇನೆಯು ಒಳಕೋಟೆಯ ಕೊತ್ತಲಗಳಲ್ಲಿರುವ ನಾಲ್ಕು ಫಿರಂಗಿಗಳನ್ನು ಮದ್ದುಗುಣ್ಡುಗಳನ್ನೆಲ್ಲ ಸಾಧಿಸಿ, ಸಾಕಾದಷ್ಟುಮಂದಿ ಗೋಲಂದಾಜರಳವಟ್ಟರೆ, ಅವರು ಅಲ್ಲಿ ಸಿದ್ಧರಾಗಿ, ನಮ್ಮಾಜ್ಞೆಯನ್ನು ನಿರೀಕ್ಷಿಸುತ್ತಿರಲಿ. ಆ ಫಿರಂಗಿಗಳು ನಮ್ಮವರ ಸ್ವಾಧೀನವಾದೊಡನೆಯೇ ಅವುಗಳ ಬಾಯ್ಗಳನ್ನು ಹಿಂದಿರುಗಿಸಿ, ಎಂದರೆ ಊರೊಳಗಣ್ಗೆ ತಿರುಗಿಸಿರಿಸಿ, ಆ ಬಳಿಕ ಗುಂಡನ್ನಿಕ್ಕದೆ ಮದ್ದನ್ನುಮಾತ್ರ ತುಂಬಿ, ಒಂದೊಂದುಬಾರಿ ಹಾರಿಸಿ, ನಮಗೆ ತಿಳಿಹಬೇಕು. ಆ ಕೊತ್ತಲಗಳಲ್ಲಿರಬೇಕಾದ ಸೈನಿಕರು ಊರೊಳಗಣ ಶತ್ರುಗಳ ಅಂಬುಗುಂಡುಗಳ ಅಪಾಯಕ್ಕೆ ಗುರಿಯಾಗದಂತೆ—ಈಗಳಿನ ಅವಸರಕ್ಕೆ ಲಭಿಸುವ ತಕ್ಕ ಸಾಧನಗಳಿಂದ ತಮ್ಮಸುತ್ತ ಅಭೇದ್ಯವಾದ ಪ್ರಾಕಾರಗಳನ್ನು ಕಟ್ಟಿಕೊಳ್ಳುವುದು ಆವಶ್ಯಕ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (**ತನ್ನ ದಳದವನೊಬ್ಬನಿಗೆ ಬೆರಲೆತ್ತಿ ಸನ್ನೆ ಮಾಡುವನು.**)

ನಿರ್ದಿಷ್ಟವೀರ :—(**ರಣಧೀರನಿಗೆ ವನ್ದಿಸಿ, ಹೋಗುವನು.**)

ರಣಧೀರ :—ಎರಡುಸಾವಿರವು ದಳವಾಯಿವಿಕ್ರಮರಾಯನ ಸೌಧವನ್ನು ಮುತ್ತಿ, ಆರೂ ಒಳವುಗದಂತೆ, ಅಲ್ಲಿಂದ ತಪ್ಪಿಸಿಕೊಳ್ಳದಂತೆ —ಅದೇನು, ನಿರೀಶ ?

ನಿರೀಶ :—ಒಂದುಸಾಸಿರದ ಆರುನೂರು ಸೈನ್ಯದೊಡನೆ ಸಕ್ಕನು ವಿಕ್ರಮರಾಯರ ವಾಸಗೃಹವನ್ನು ನಿಶ್ಶಬ್ದವಾಗಿ ಬಳಸಿಕೊಂಡು, ಮಹಾಸ್ವಾಮಿಯವರ ಆಣತಿಗೋಸ್ಕರವಾಗಿ ಪ್ರತೀಕ್ಷಿಸುತ್ತಿರುವನು.

ರಣಧೀರ :—(**ತಲೆವಾಗಿದ್ದು, ಮೃದುಮಧುರಕಂಪಿತಸ್ವರದಿಂದ,**) ನಿನ್ನ ದಿವ್ಯ ಮೈತ್ರಿ—ನಿರೀಶ !

ನಿರೀಶ :—(**ಅವಾಙ್ಮುಖನಾಗಿರುವನು.**)

ರಣಧೀರ :—(ಈಷತ್ಕಾಲದ ತರುವಾಯ, ದೃಢಕಣ್ಠದಿಂದ,) ಹುಂ.—ಆ ಒಂದುಸಾಯಿರದ ಆರುನೂರವರು ನೀನು ಹೇಳಿದ ಒಟ್ಟಿನ ಲೆಕ್ಕಕ್ಕೆ ಸೇರಿದವರೆ ?

ನಿರೀಶ :—ಅಲ್ಲ.

ರಣಧೀರ :—ಇನ್ನು.........ಎರಡುಸಹಸ್ರಜನರು ವಿಕ್ರಮರಾಯನ ಬಲದವರಿಳಿದುಕೊಂಡಿರುವ ಸೇನಾಗಾರಕ್ಕೆ ಮುತ್ತಿಗೆಯಿಟ್ಟು, ಮೊತ್ತಮೊದಲು ಅವರ ಮದ್ದಿನ ಆಯುಧದ ಉಗ್ರಾಣಸಾಲೆಗಳನ್ನು ನಮ್ಮ ವಶಮಾಡಿಕೊಂಡು, ಹಾಗೆ ನಿಸ್ಸಹಾಯರಾದ ಅವರ್ಗೆ ಸುಮ್ಮನೆ ಕಾವಲಿರಬೇಕು. ತಾವಾಗಿ ಕಯ್ಮಾರದವರು —ಅವರಮೇಲೆ ಕಯ್ಮಾಡದಿರಿ. (ಗಂಭೀರನಾದದಿಂದ,) ವ್ಯರ್ಥವಾಗಿ ಒಂದೇ ಪ್ರಾಣವೂ ನಷ್ಟವಾಗಲಾಗದು ! ವಿಜಯೋತ್ಸವದ ಸಂಭ್ರಮದಿಂದ ಮತಿಗೆಟ್ಟು, ಈ ಕಡುಗಟ್ಟಳೆಯನ್ನು ಮರೆತು ಉಪೇಕ್ಷಿಸಿ ಪ್ರವರ್ತಿಸುವವರಿಗೆ ಆಕ್ಷಣವೇ ಅಲ್ಲಿಯೇ ಪ್ರಾಣಾಂತ ದಣ್ಡಣೆಯಾಗಲಿ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ಮಲ್ಲಹನುಮನಿಗೆ ಕಯ್ನಾಡಿ ಬೆಸಸುವನು.)

ಮಲ್ಲಹನುಮ :—(ರಣಧೀರನಿಗೆ ನಮಸ್ಕರಿಸಿ, ಹೋಗುವನು.)

ರಣಧೀರ :—ಅಯ್ನೂರುಜನರು ಈ ಮೈಸೂರ ಪುರದ ಗೌಡ ಕರಣಿಕ ತಳಾರ ಕಳ್ಳಬಂಟ ಮುಂತಾದವರನ್ನೂ, ಪುರರಕ್ಷಕರ ದಳವನ್ನೂ, ಕೋಟೆಯ ಬಾಗಿಲ್ಗಳ ಕಾವಲ ಸೈನಿಕರ ಒಡ್ಡುಗಳನ್ನೂ ಹಿಡಿದು ದೊಡ್ಡಗಿಡ್ಡಂಗಿಗೆ ಕೂಡಿ, ಅವರ ಸ್ಥಾನಗಳಲ್ಲಿ ತಕ್ಕವರು ಆಯಾವೂಳಿಗಗಳನ್ನು ಬಲ್ಲಂತೆ ನೆರವೇರಿಸುತ್ತಿರಲಿ.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ತನ್ನ ದಳದ ಮತ್ತೊಬ್ಬನಿಗೆ ಸಂಜ್ಞೆ ಮಾಡುವನು)

ನಿರ್ದಿಷ್ಟವೀರ :—(ರಣಧೀರನಿಗೆ ನಮಿಸಿ, ಹೋಗುವನು.)

ರಣಧೀರ :—ಅರಮನೆಯನ್ನು ಸುತ್ತಿಕೊಂಡಿರುವ ಶತ್ರುಸೇನೆಯೆಷ್ಟಿರ ಬಹುದು ?

ನಿರೀಶ :—ಮುಂದಣ ಪ್ರಾಂಗಣದಲ್ಲಿ ಪಾಳೆಯಗೊಂಡಿದ್ದ ಚಿಕ್ಕ ದಳ ವೊಂದು ನಮ್ಮನ್ನಿದಿರಿಸಿದುದು ; ಒಬ್ಬನೂ ಉಳಿಯಲಿಲ್ಲ.

ರಣಧೀರ :—ಅಹುದು, ನಿರೀಶ; ಸಮಯವಂತಹುದು.—ಅರಮನೆಯ ಕಾವಲ್ಗೆ ಅಯ್ವೂರ್ವರು ಸಾಕು ; ನೆಲವಾಳಿಗೆಯ ಗುಟ್ಟಿನೋವರಿ ಗಳಿಂದ ಮೇಗಣ ಕಳಶದವರೆಗೆ ಅರಸಿನೋಡಿ, ಅಲ್ಲಲ್ಲಿ ಮರೆಗರೆದು ಹೊಂಚುತ್ತಿರುವ ಪ್ರತಿಪಕ್ಷದ ಬೇಹುಕಾರರನ್ನಾರಯ್ದು ಗಿಡ್ಡಂಗಿ ಯೊಳಗೆ ನೂಕಿರಬೇಕು.

ನಿರೀಶ :—ಅಪ್ಪಣೆ, ಮಹಾಸ್ವಾಮಿ. (ತನ್ನ ದಳದ ಇತರನೊಬ್ಬನಿಗೆ ನಿರೂಪಿ ಸುವನು.)

ನಿರ್ದಿಷ್ಟವೀರ —(ರಣಧೀರನಿಗೆ ವಂದಿಸಿ, ಹೋಗುವನು.)

ರಣಧೀರ :—ಇನ್ನುಳಿದಿರುವುದರಲ್ಲಿ ಕಯ್ಕೋವಿಬಿಲ್ಲುಗಳ ಪ್ರಯೋಗಗಳಲ್ಲಿ ಬಲ್ಲ ಕುಶಲರಾದ ಒಂದು ಸಾಹಸ್ರಜನರನ್ನುಳ್ಳ ಅತ್ಯುತ್ತಮವಾದ ಭಾಗವನ್ನು ಸಾಕಾದಷ್ಟು ಮದ್ದುಗುಂಡುಅಂಬುಗಳೊಡನೆ ಊರ ಹೊರಗೆ ಬೀಡಿಕೆಗೊಂಡು, ಎಚ್ಚರದಿಂದ ಸನ್ನದ್ಧವಾಗಿರ ಬೇಕೆಂದು ಕಳಿಹು, ನಿರೀಶ.—ಈಗ ನಾವು ಮಿಕ್ಕಿರುವ ಸೇನೆ ಯನ್ನೊಡಗೊಂಡು ಸಕ್ಕನ ಸಹಾಯಕ್ಕೆ ಹೋಗೋಣ.

(ರಕ್ತಸಿಕ್ತಗಾತ್ರರಾದ ಚೆನ್ನರಂಗರ ಸಕ್ಕನ ಪ್ರವೇಶ.)

ಸಕ್ಕ :—(ರಣಧೀರನಿಗೆ ಪ್ರಣಾಮುಮಾಡಿ,) ಈಯಿಬ್ಬರ ಕಯ್ಮೆಯು ಎದೆ ಯನ್ನು ನಡುಗಿಸುವಂತಹದು.

ನಿರೀಶ :—(ಚೆನ್ನನತ್ತ ತಿರುಗಿ,) ಏನದು ?

ಚೆನ್ನ :—(ರಕ್ತದಿಂದ ತೋದ ಬಟ್ಟೆಯಲ್ಲಿ ಸುತ್ತಲ್ಪಟ್ಟ ಸೆಂಡಿನಾಕಾರದ ವಸ್ತು ವನ್ನು ತನ್ನ ಕವುಂಕುಳಿಂದ ತೆಗೆದು, ಮುಂದೆಯ್ದಿ, ಅದನ್ನು ರಣಧೀರನ ಕಾಲೆಡೆಯಲ್ಲಿಡುವನು.)

ಚೆನ್ನ } :—(ಸಾಷ್ಟಾಂಗವಾಗಿ ಅಡ್ಡ ಬೀಳುವರು.)
ರಂಗ

ನಿರೀಶ :—(ತೀಕ್ಷ್ಣದೃಷ್ಟಿಯಿಂದ ನೋಡಿ,) ಮಾತನಾಡು, ಅಂತದೇನು ?

ಸಕ್ಕ :—ದಳವಾಯಿವಿಕ್ರಮರಾಯರ ತಲೆ !

ರಣಧೀರ :—(ಹಿಮ್ಮೆಟ್ಟಿನಿಂತು, ಅದನ್ನವಲೋಕಿಸುತ್ತಿರುವನು.)

ತುಂಗರಾಯ :—(ಬರಸಿಡಿಲೆರಗಿದವನಂತಾಗಿ, ಸ್ತಂಭಿತನಾಗಿದ್ದು, ಮೆಯ್ಯೊಗ್ಗಡಹಿ, ತನ್ನ ಕಾವಲನೊಬ್ಬನನ್ನೊರೆಗೊಂಡುನಿಂತು, ನಡುಗುತ್ತಿರುವನು.)

ರಣಧೀರ :—(ಕಡೆಗೆ ಮೊಗವೆತ್ತಿ, ಚೆನ್ನನನ್ನುದ್ದೇಶಿಸಿ,) ಎಲಾ ಪಾಪಿ !— ಇಂತಹ ಅಕಾರ್ಯವನ್ನೇಕೆಮಾಡಿದೆ ?

ಚೆನ್ನ :—(ನಕ್ಕು,) ಕಡೆಗೂ ಬುದ್ದಿಯವರು ಒಪ್ಪಲೇ ಇಲ್ಲ, ಹೌದು, ಮಾಸ್ವಾಮಿ!······ನಾನ್ ಪಾಪಿ, ಬುದ್ದಿ; ಆದರೆ, (ಆಭಿನ್ನಮಸ್ತಕದತ್ತ ತೋಳ್ನೀಡಿ,) ಆ ಅಣ್ಣಾನಿಗಿಂತ ಆ ಬೂತನಿಗಿಂತ ನಾನಾ, ಮಾಸ್ವಾಮಿ ? ಅವನನ್ನ ಈ ಪಟ್ಟಿಗೆ ಸಿಕ್ಕಿಸಿಕೊಳ್ಳದೆ ಬಿಟ್ಟಿದ್ದರೆ, ನಮ್ಮಿಬ್ಬರನ್ನುವೆ ಅರಮನೆಕೆಳಗೆ ನೆಲಮಾಳಿಗೆಯ ಒಳಗೆ ಕಯ್ಕಾಲ್ತರಿದು ಬೆಂಕಿಯಲಿ ಬೇಯಿಸಿ ಹೊಯ್ದುಕೊಯ್ದು ಚಿವುಟಿ ಜುಜ್ಜಿ ಸೀಳಿ ಹಿಂಸೆಮಾಡಬೇಕು ಎನ್ನುತ ಕಟ್ಟುಮಾಡುತ ಇದ್ದನವ, ಬುದ್ದಿ ! ಮಾಸ್ವಾಮಿಯುವರು ನಮ್ಮಿಬ್ಬರನ್ನುವೆ—ನನ್ನನ್ನ ರಂಗನನ್ನ—ಗಿಡ್ಡಂಗಿಗೆ ಹಾಕಿಸಿ, ಸೂಲಕ್ಕೆತ್ತಿಸಿ, ಇನ್ನೇನನ್ನ ಬೇಕಾದರೂ ಮಾಡಿಸಿ, ಬುದ್ದಿ; ನಾಮಿಬ್ಬರುವೆ ಹೋದರೂ, ನಮ್ಮ ದೊರೆಗಳ ಕುಳದವರು ಇನ್ನು ಸೊಕವಾಗಿ ಬೆದರಿಕೆಯಿಲ್ಲದೆ ಬದುಕಿಕೊಳ್ಳುತ್ತಾರೆ.

(ಹೊರಗೆ) :—(ಪ್ರಚಣ್ಡಕೋಲಾಹಲವೇಳುವುದು.)

ರಣಧೀರ :—(ನಿರೀಶನ ಮುಖವನ್ನು ನೋಡುವನು.)

ನಿರೀಶ :—(ಪಂದಲೆಯತ್ತ ನಿರ್ದೇಶಿಸಿ,) ಈ ವೃತ್ತಾಂತದರಿವು ನಿಳ್ಕಿದ ಪ್ರಜಾಲೋಕವು ಸನ್ತೋಷಿಸುತ್ತಿರುವುದು, ಮಹಾಸ್ವಾಮಿ. (ತನ್ನ ದಳದ ಬೇರೊಬ್ಬನಿಗೆ ಸಂಕೇತದಿಂದ ಆಜ್ಞಾಪಿಸುವನು.)

ನಿರ್ದಿಷ್ಟವೀರ :—(ರಣಧೀರನಿಗೆ ಮೊಳ್ಗಿ, ಹೋಗುವನು.)

(ಹೊರಗೆ):—(ಸ್ವಲ್ಪಹೊತ್ತಿನೊಳಗಾಗಿ ನೀರವವಾಗುವುದು.)

ರಣಧೀರ :—ಹೀಗೆ ಸುಪ್ರಜಾವಳಿಯ ಗೌರವಕ್ಕೆ ಭಕ್ತಿಗೆ ವಿಶ್ವಾಸಕ್ಕೆ ಸರಲಸ್ನೇಹಕ್ಕೆ ಸನ್ತೋಷಕ್ಕೆ—ಮಹಾಸಮ್ಮತಕ್ಕೆ ಪಾತ್ರವಾಗಿರುವ ಈ ಮಹೀಶೂರಯಾದವಪ್ರಭುವಂಶದ ಪರಮಸುಕೃತದ ಸಂಭಾವನವಿದಹುದು.

ನಿರೀಶ :—ಅದು ಮಹಾಸ್ವಾಮಿಯವರ ಉತ್ಸಾಹವರ್ಧನದಿಂದ ಧನ್ಯವಾಗುವುದು, ಮಹಾಸ್ವಾಮಿ.

ರಣಧೀರ :—(ತಳಿವಾಗಿದ್ದು,) ಈ—ಇದು ಹೇಗಾಯ್ತು ?

ಚೆನ್ನ :—ದಳವಾಯಿಗಳು ಪಂಜು ನಂದಿಹೋಗುತ್ತಲೇ, ರಂಗನನ್ನ ಕೆಳಕ್ಕೆ ಕೆಡಹಿಕೊಂಡು, ಅವನೆದೆಮೇಗೆ ಮಂಡಿಯೂರಿ ಕುಳ್ಳಿರುತ್ತ, ಅವನ ಕತ್ತನ್ನ ಎರಡೂ ಕಯ್ಯಿಂದ ಹೀಗೆ ಕಿವುಚುತ್ತ—'ಓ ದಾಸ! ಓ ತುಂಗ! ಓ ಸಿಂಗ!' ಎನ್ನುತ ಒದರುತ್ತಿದ್ದರು, ಬುದ್ಧಿ; ಆಗ ನಾನ್—

ಎಲ್ಲರೂ :—(ವಿಸ್ಮಯಕೌತುಕಗಳಿಂದ ನಿಲವುಗನ್ನಡಿಯತ್ತ ನೋಡುತಿರುವರು.)

(ಮಹಾಮಾತೃಶ್ರೀ ಕಿಮ್ಮಾಜಮ್ಮಣ್ಣಿಯು ಚೆಂದವ್ವೆರುದ್ರವ್ವೆಯರ ಪ್ರವೇಶ.)

ಅನಿಬರೂ :—(ನೀರವರಾಗಿ ಬಾಗಿ ಮುಗಿದ ನೀಡುಂಗಯ್ಗಳಿಂದ ವಂದಿಸುವರು.)

ತುಂಗರಾಯ :—(ನಿಮಿರಿ ನಿಲ್ಲುವನು.)

ಮಹಾಮಾತೃಶ್ರೀ :—(ಚೆನ್ನನತ್ತ ತಿರುಗಿ, ಭಯಂಕರಕಂಠದಿಂದ,) ಅದು ನಿಜವೆ? ಆ ದ್ರೋಹಿರಾಕ್ಷಸನು ಸತ್ತನೆ? ಅದು ಅವನ ತಲೆಯೆ ?

(ದಡದಡನೆ ಮುಂಬರಿದು, ಆ ರುಂಡದತ್ತ ಕಯ್ನೀಡಿ ಬಗ್ಗುವಳು.)

ರಣಧೀರ :—(ಚೆಕ್ಕನೆ ಹಾರಿ, ಅವಳ ಕಯ್ಯನ್ನು ಹಿಡಿದು ತಡೆದೆಬ್ಬಿಸಿ, ಮೆಲ್ಲಗೆ ಹಿಮ್ಮೆಟ್ಟಿಸಿ,) ಚಿಕ್ಕಮ್ಮಯ್ಯ, ನಿಮ್ಮ ಪವಿತ್ರಹಸ್ತವು ಆ ಮಹಾಪಾತಕನವನ ತಲೆಯನ್ನೇಕೆ ಮುಟ್ಟಬೇಕು ?

ಮಹಾಮಾತೃಶ್ರೀ :—ಸತ್ತವನು ಅವನೇ ಅಲ್ಲದಿದ್ದರೆ ?

ರಣಧೀರ :—ಬನ್ನಿ, ಚಿಕ್ಕಮ್ಮಯ್ಯ ;—ಈ ಸುಖಾಸನದಲ್ಲಿ········ ಕುಳ್ಳಿರಿ. ಆವುದನ್ನೂ ಈಗಳೇ ಶಂಕೆಯುಳಿವಂತೆ ನೋಡೋಣ.

ಚೆನ್ನ :—(ಮುನ್ನಡೆದು, ಆ ತಲೆಯನ್ನೆತ್ತಿಕೊಂಡು, ಅದರ ಮೇಲ್ಮುಸುಕನ್ನು ಸುಲಿದು ಬಿಸುಟು, ದಳವಾಯಿವಿಕ್ರಮರಾಯನ ರುಣ್ಡದ ವಿಕಾರವದನವನ್ನೆತ್ತಿ ಎಲ್ಲರಿಗೂ—ಸುತ್ತ ತೋರುವನು.)

ತುಂಗರಾಯ :—(ರೋಷೋನ್ಮತ್ತನಾಗಿ ಅವುಡುಗಚ್ಚುತ್ತ ತನ್ನ ಕಾವಲರ ಕಯ್ಗಳಿಂದ ಝಾಡಿಸಿ ಕೊಡಹಿ ಬಿಡಿಸಿಕೊಂಡು, ಚೆನ್ನನತ್ತ ನೆಗೆದು ನುಗ್ಗುವನು.)

ನಿರೀಶ :—(ಹಾರಿ, ತುಂಗರಾಯನಿಗಡ್ಡವಂದು, ಅವನನ್ನು ತಬ್ಬಿಹಿಡಿದು ನಿಲ್ಲಿಸಿ, ಆ ಕಾವಲ ಮಲ್ಲರ ವಶಮಾಡಿ, ಹೊರಗಣ್ಣುಗ್ಯಂತೆ ಕಯ್ಸನ್ನೆ ಮಾಡುವನು.)

ಕಾವಲ ಮಲ್ಲರು :—(ತುಂಗರಾಯನನ್ನು ಹೊರಕ್ಕೆಳೆದುಕೊಂಡುಹೋಗುವರು.)

ಚೆನ್ನ :—ಬುದ್ಧಿ, ನಮ್ಮಿಬ್ಬರನ್ನ—

ನಿರೀಶ :—ನಿಮ್ಮಿಬ್ಬರ ವಿಷಯದಲ್ಲಿ ಮಹಾಸ್ವಾಮಿಯವರಿಗೆ ಬಹಳ ಅಸಮಾಧಾನವುಂಟಾಗಿದೆ. ಈ ಕೊಲೆಗೆ ತಕ್ಕ ದಂಡನವೇನೆಂಬುದು ನಿರ್ಣೀತವಾಗುವವರೆಗೆ—ನೀವು ಹೋಗಿ, ಕೈಲಾಸವಾಸಿಗಳಾದ ದಳವಾಯಿವಿಕ್ರಮರಾಯರ ರುಂಡಮುಂಡಗಳನ್ನು ಒಚ್ಚೇರಿಸಿ, ಈವೊಡನೆಯೇ ಹೊರಟು, ಕ್ರಮಪ್ರಕಾರವಾಗಿ ಶವಸಂಸ್ಕಾರ ಮಾಡಿ ಬರಬೇಕು······ಸಕ್ಕ, ನೀನಿವರಾ ಕಾರ್ಯಕ್ಕೆ ಆವಶ್ಯಕವಾದ ಸಾಧನಸೌಕರ್ಯಗಳನ್ನೊದವಿಸಿಕುಡುವುದಲ್ಲದೆ, ನಿನ್ನ ಹಲವುಮಂದಿ ಸೈನಿಕರೊಡನೆ ಇವರ ಮೇಲೆ ಕಾವಲಿದ್ದು, ಗತಶ್ರೀಮನ್ತ್ರರ ಶವಕ್ಕೆ ಆವವಿಧವಾದ ಅಪಮಾನವೂ ಉಂಟಾಗದಂತೆ ನೋಡಿಕೊಳ್ಳುತ್ತಿರಬೇಕು.

ಸಕ್ಕ :—ಅಪ್ಪಣೆ.

ಚೆನ್ನ :—(ತಾನು ಬಿಸಾಡಿದ್ದ ಆ ರಕ್ತಾಕ್ತವಾದ ಬಟ್ಟೆಯನ್ನೆತ್ತಿಕೊಂಡು, ಅದರೊಳಗೆ ವಿಕ್ರಮರಾಯನ ಶಿರವನ್ನು ಸುತ್ತಿಕೊಳ್ಳುತ್ತ, ರಂಗನೊಡನೆ ಹೋಗುವನು.)

ಮಹಾಮಾತೃಶ್ರೀ :—(ಸ್ತಂಭಿತೆಯಾಗಿದ್ದು, ಮೆಲ್ಲಗೆ ದೀರ್ಘನಿಶ್ವಾಸವನ್ನು ಬಿಡುವಳು.)

ರಣಧೀರ :—.............ಇದು ವೀರಮರಣವಲ್ಲ, ನಿರೀಶ.

ನಿರೀಶ :—ಮಹಾಸ್ವಾಮಿ, ಅದು ಪತಂಗದ ದುರದೃಷ್ಟ.

ಮಹಾಮಾತೃಶ್ರೀ :—(ಎಚ್ಚತ್ತು,) ವೀರಮರಣ !—ನನ್ನ ಕಂದನಿಗೆ, ಈ ದೆವ್ವನು ಸಾಧಿಸಿದ ವಿಷಚೂರ್ಣಪ್ರಯೋಗಕ್ಕೆ ಬಲಿಯಾದ ನನ್ನ ಪುಟ್ಟಸ್ವಾಮಿಗೆ ವೀರಮರಣವುಂಟಾಯ್ತೆ? ಅಯ್ಯೋ ! ಅಯ್ಯೋ ! (ಗಳಗಳನೆ ಅಳುವಳು.)

ರಣಧೀರ :—(ಮೆಲ್ಲನೆ,) ಚಿಕ್ಕಮ್ಮಯ್ಯ !

ಮಹಾಮಾತೃಶ್ರೀ :—ಅಯ್ಯೋ ! (ಮೂರ್ಛಿತೆಯಾಗುವಳು.)

ಚೆಂದವ್ವೆ, ರುದ್ರವ್ವೆ :—(ಬೇಗನೆ ಹೋಗಿ, ಮಹಾಮಾತೃಶ್ರೀಗೆ ಶೈತ್ಯೋಪಚಾರಮಾಡಲಾರಂಭಿಸುವರು.)

ರಣಧೀರ :—(ಖಿನ್ನನಾಗಿ, ಅವಾಙ್ಮುಖನಾಗಿದ್ದು,) ನಿರೀಶ, ನಮ್ಮ ಅನ್ತಃಪುರದವರು ಮಹಾಮಾತೃಶ್ರೀಯವರ ಪಾದಸೇವೆಗೆ ಈಗಳೇ ಇಲ್ಲಿಗೆ ಬರಬೇಕು.

ನಿರೀಶ :—ಅಹುದು, ಮಹಾಸ್ವಾಮಿ. ನಾವು ಮಲ್ಲಹನುಮನ ಬೆಂಬಲಕ್ಕೆ ಹೊರಡಬೇಕಾದ ಸಮಯವಾಯ್ತು.

ರಣಧೀರ :—(ವಿಜಯನಾರಸಿಂಹನನ್ನು ಬಿಚ್ಚಿ ಕಟಿಬನ್ಧದೊರೆಯಿಂದೆಳೆದುಕೊಳ್ಳುತ್ತ ನಿಷ್ಕ್ರಮಿಸುವನು.)

ಗಂಡುಸರೆಲ್ಲ :—(ರಣಧೀರನ ಹಿಂದೆ ನಡೆಯುವರು.)

ಮಹಾಮಾತೃಶ್ರೀ :—(ಕಿರಿದುಹೊತ್ತಿನಬಳಿಕ ತೆಪ್ಪತ್ತು, ಸುತ್ತ ನಿಟ್ಟಿಸುತಿದ್ದು, ಕ್ಷೀಣಸ್ವರದಿಂದ,) ರಣಧೀರನೆಲ್ಲಿ, ಚೆಂದವ್ವೆ ?

ಚೆಂದವ್ವೆ :—ಸೈನ್ಯದೊಡನೆ ಹೋಗಿದ್ದಾರೆ.

ಮಹಾಮಾತೃಶ್ರೀ :—(ನಿಟ್ಟುಸಿರ್ಗರೆದು,)......ನಾಳೆ ಬೆಳಗಾಗುತ್ತಲೇ ನಾನು ಶ್ರೀಕಾಶಿಗೆ ಹೊರಡುವೆನು.—ನೀವೂ ಬರುವಿರಷ್ಟೆ ?

ರುದ್ರವ್ವೆ :—ಬುದ್ಧಿಯವರು ಎಲ್ಲಿಗೆ ಹೋದರೂ, ಅಲ್ಲಿಗೆ ನಾವು ಬರುವೆವು.

ಚೆಂದವ್ವೆ :—ಆದರೆ, ಹೊಸಮಹಾರಾಜರು—

ಮಹಾಮಾತೃಶ್ರೀ:—(ಕಣ್ಣೀರನ್ನೊರಸಿಕೊಂಡು,) ಅಹುದು, ಚೆಂದವ್ವೆ; ದತ್ತ ಸ್ವೀಕಾರವೇನೂ ಆಗಬೇಕಾಗಿಲ್ಲ. ಆವಶ್ಯಕವಾದರೂ, ಆ ಶಾಸ್ತ್ರವು ನಾಳಿನ ದಿನವೇ ನಡೆದುತೀರಬೇಕು. ಆ ಬಳಿಕ ಶುಭಲಗ್ನವನ್ನು ನೋಡಿ, ಅವರು ಪಟ್ಟಾಭಿಷೇಕಮಾಡಿಕೊಳ್ಳಲಿ.

ಚೆಂದವ್ವೆ :—ಹಾಗಾಗುವುದೆ ?—ಅವರು ಒಪ್ಪುವರೆ ?

ಮಹಾಮಾತೃಶ್ರೀ :—(ಮೆಲ್ಲಗೆ,) ಇಲ್ಲ,.........ಅಹುದು. ನಾಳೆ ಶುದ್ಧ—ಬಿದಿಗೆ ; ಮಹಾದೇವನ ದಯೆಯಿಂದ ದಿವಸವು ಎರಡಕ್ಕೂ ಪ್ರಶಸ್ತವಾಗಿದ್ದರೆ !

(ಹೊರಗೆ) :—(ನಾಲ್ಕು ಫಿರಂಗಿಗಳು ಮೊಳಗುವುವು.)

ಹಳೆಯ ನೆನಹು.

ಹರಿವುದೆನ್ನ ಮನವು ಹಿಂದೆ ತಳೆದ ದಿನದ ಹಾದಿ ಹಿಡಿದು
ಪರಿಮಳಕ್ಕೆ ಹಾರುತಿರುವ ತುಂಬಿಯಂತೆ ಸುಳಿದು ಸುಳಿದು ||
ಬಳಲುತಿಹುದು ಬಾರದಿರುವ ಸಮಯವನ್ನು ಕಂಡು ಕಂಡು
ಗಳಿಯಿಪಶ್ರುಧಾರೆಯೆನ್ನ ಕದಪನಿಂದು ತೊಳೆಯುತಿಹುದು ||

ಇಂದು ಹರಯವೇರುತಿರಲು ಸಂತಸದಲಿ ನಲಿವ ಮಕ್ಕ
ಳೊಂದು ಮುಗುದತನವ ನೋಡಿ ಬಾಲ್ಯವೇಕೆ ಹೋಯಿತೆಂದು ||
ನೊಂದು ಬೇನೆಗೊಳ್ಳುವೆನ್ನ ಮನದ ದನಿಯ ಸಂಗಡಕ್ಕೆ
ಬಂದು ಹಳೆಯ ನೆನಹು ತನ್ನ ಹಾಡುಗಳನು ಹಾಡುತಿಹುದು ||

ಎಮ್ಮ ಮನೆಯ ಮುಂದೆ ಕಾಂಬ ಮಾವಿನಡಿಯ ನೆಳಲ ನೋಡೆ
ಜುಮ್ಮುದಟ್ಟುತಿಹುದು ದೇಹವಲ್ಲಿ ನಲಿದ ಮಕ್ಕಳೀಗ ||
ಎಲ್ಲಿರುವರೊ ತಿಳಿಯೆನಾವ ಮರದ ನೆಳಲನಾಶ್ರಯಿಪರೊ
ಬಲ್ಲನಾರು ? ಕಾಣಲಾರೆನಂದಿನೆನ್ನ ಸಂಗಡಿಗರ ||

ಅಂದಿನೊಂದು ಶೋಭೆಯಿಲ್ಲವಂದಿನೊಂದು ಚಂದವಿಲ್ಲ
ಅಂದಿನೊಂದು ಹರ್ಷವಿಲ್ಲವೆಮ್ಮ ಮಾವಿನಡಿಯೊಳೀಗ ||
ರೆಂಬೆಯೊಂದು ನೆಲಕೆ ಬಾಗಿ ಮೆಲ್ಲೆಲರ್ಗೆ ತೂಗಿ ತೂಗಿ
ಕಾಂಬುದಕಟ ಶೋಕದಿಂದ ಕೊರಗಿ ಕಂದಿದಂತೆ ||

ಎಳೆಯನೊಬ್ಬ ತಮ್ಮನಿದ್ದನವನೊಳೆನಗೆ ಪ್ರೇಮವಧಿಕ
ವೊಳೆಯೆ ಹಲ್ಲು ಸುರಿಯೆ ಜೊಲ್ಲು ಮುದ್ದುಮಾತಿನಿಂದಲೆನ್ನ ||
ಕರೆದು ಕರೆದು ಬೆನ್ನ ಬಿಡದೆ ಮಾವಿನಡಿಯ ನೆಳಲಿಗೆಂದು
ಬರುತ ಬರುತ ಬೀಳುತೇಳುತಿದ್ದನವನ ಮರೆವೆನೆಂತು ?

ಒಂದುದಿನದೊಳೆಂದಿನಂತೆ ಆಟವಾಡುತಿರಲು ನಾನು
" ಕಂದ ! ಎಮ್ಮನಿಂತು ನೀನು ಬಿಟ್ಟು ಹೋಗಲಹುದೆ ? " ಎಂದು ||
ತಂದೆ ಕೂಗಲದನು ಕೇಳಿ ಬೆದರಿ ಭಯದೊಳೋಡುತಿರಲು
ಅಂದು ಕಂಡೆನೆನ್ನ ತಮ್ಮ ಹಾಸಿಗೆಯಲಿ ಮಲಗಿದುದನು ||

ಒರಗಿದಾತನೇಳಲಿಲ್ಲ ಮಂಜು ಬೀಳ್ವ ಭರಕೆ ಬಳುಕಿ
ಧರೆಗೆ ಮುರಿದು ಕೆಡೆವ ಮುಗುಳಿನಂತೆ ತಮ್ಮ ಮಲಗಿರಲ್ಕೆ ||
ಸೆಳೆದು ಬಿಗಿದು ತೋಳ್ಗಳಿಂದ "ಮಗವೆ! ಒಬ್ಬನಾದೆಯಿನ್ನು
ನಲಿವುದೆನ್ನ ಕಣ್ಣ ಮುಂದೆ" ಎಂದು ಮಾತೆ ರೋದಿಸಿದಳು ||

ಅವನ ನಯನವಿಂದು ಗಗನತಲದಿ ಮಿರುಪ ತಾರೆಯಾಗಿ
ಭುವನಗಳನು ಬೆಳಗುತಿರಲುಬಹುದು ತೊದಲುನುಡಿಗಳೀಗ ||
ಗಿರಿಯ ದರಿಯ ವನದ ನಡುವೆ ಹುಟ್ಟಿ ಹರಿವ ತೊರೆಯ ದನಿಯ
ಸರಸದಲ್ಲಿ ಪಡಿನುಡಿಗಳ ಕೂಟದಲ್ಲಿ ಕೇಳಬಹುದು ||

ಅಲ್ಲಿ ತೆಂಗು ಕೌಂಗಿನಿಂದ ಹೊನ್ನೆ ಸುರಗಿ ಮರಗಳಿಂದ
ಮಲ್ಲಿಗೆಗಳ ಬನಗಳಿಂದ ಕೂಡಿದೆಮ್ಮ ತೋಟದೊಳಗೆ ||
ಮಲ್ಲಳಿಗಳ ಮಂಜುಘೋಷವೆಲ್ಲಿ ಕೇಳ್ವುದಲ್ಲಿ ಬೆಳೆದ
ಹುಲ್ಲು ತಮ್ಮನೊರಗಿದೆಡೆಗೆ ಕಾವಲಾಗಿ ಕಾಂಬುದೀಗ ||

ಅಣ್ಣ! ಮಾವಿನಡಿಗೆ ಬರುವ ತಮ್ಮನಿವನ ಕರೆಯೊ ಎಂದು
ಕಣ್ಣ ನೀರ ಮಿಡಿಯುತಿಹನೊ! ನಿಮ್ಮ ನಾನು ನೋಡುತಿರಲು ||
ಎನ್ನನೇಕೆ ಮರೆತಿರೆಂದು ತೊದಲುನುಡಿಯನಾಡುತಿಹನೊ!
ತನ್ನ ತಾನೆ ಹಿಡಿದು ಮೌನದಿಂದ ಮಾತನಾಡದಿಹನೊ! ||

ಆವನೊಂದು ಕೂಟದಿಂದ ಪ್ರೇಮವಾವುದೆಂದು ತಿಳಿದೆ
ಆವನೊಂದು ನೋಟದಿಂದ ನೋವನೆಲ್ಲವನ್ನು ಮರೆತೆ ||
ಆವನೆಳೆಯ ನಗೆಯೆ ಮನದ ತಮಕೆ ಜೊನ್ನವಾದುದವನ
ಸಾವವರೆಗೆ ಮರೆಯಲುಂಟೆ ಎನ್ನ ಬೆನ್ನೊಳುದಿಸಿದವನ ? ||

ಮಗನೆ! ಎಂದು ಹೇಳುವನಿತು ಹರಯವಾಗಲಿಲ್ಲವೆನಗೆ
ಮಗನೆ! ಎಂದೆ ಕರೆವೆ ನಿನ್ನ, ಲೋಕವೆಲ್ಲ ಕೇಳಿ ನಗುಗೆ! ||
ಜಗದಿ ನಮ್ಮ ವಂಶವಿರಲಿ! ಎಂದು ವಿಧಿಯು ನಿಯಮಿಸಿದರೆ
ಮಗನೆನಿಸುತೆ ಹುಟ್ಟು ತಮ್ಮ ನಿನ್ನ ಮರೆಯುದಣ್ಣನೆನಗೆ ||

ಊರ ಬಿಟ್ಟು ಬಿಜ್ಜೆಗಾಗಿ ದೇಶದೇಶದಲ್ಲಿ ತಿರುಗಿ
ತಾರುತಿರಲು ದೇಹ ಹುಟ್ಟುಮನೆಯ ನೋಡುವಳ್ತಿಯಿಂದ ||

ದಾರಿ ನಡೆದು ಮನೆಯ ಸೇರೆ ಮಾವಿನಡಿಯ ನೆಳಲ ಕಂಡು
ಭೋರೆನುತ್ತೆ ಮನದ ಶೋಕ ಹರಿಯುತಿದೆ ಪ್ರವಾಹಗೊಂಡು ||

ತಂದೆತಾಯ್ಗಳಣ್ಣ! ನಮ್ಮ ಬಂಧುಬಳಗವೆಲ್ಲ ನಿನ್ನ
ಎಂದೊ ಮರೆತು ಮನದೆ ನಿನಗೆ ಠಾವನೀಯದಿರಲುಬಹುದು ||
ಕಂದ! ಕಿನಿಸನಾನಬೇಡ! ಎನ್ನ ಬೆನ್ನ ಹಿಂದೆ ನಡೆದು
ಬಂದ ನಿನ್ನ ನೆನಹು ಬಗೆಯ ಗಣಿಗೆ ರತ್ನವಾಗಿರುವುದು ||

ಎರಡುದಿವಸದಿಂದ ನಿನ್ನ ಹಿರಿಯನಾಗಿ ಹುಟ್ಟಿದುದಕೆ
ಬರೆಹವನ್ನು ತಿಳಿದೆನೆಂಬ ಹೆಮ್ಮೆಯೆನ್ನೊಳಿರುವುದಕ್ಕೆ ||
ಎಳೆಯ! ಮೂರುದಿನಗಳಾಯುವೆನಗೆ ದೊರೆತ ಕಾರಣಕ್ಕೆ
ಹಳೆಯ ನೆನಹಿನೂರಿನೊಳಗೆ ನಿನ್ನನರಸುಗೈವೆ, ಸಾಕೆ? ||

ಮಲಗು, ಮಗನೆ ಮಲಗು, ಪ್ರಕೃತಿದೇವಿಯಿಟ್ಟ ತೊಟ್ಟಿಲೊಳಗೆ
ನೆಲದ ಮಾಟ ನಿನ್ನ ಮುಟ್ಟದಿರಲಿ ಒರಗು ನಿದ್ದೆಯೊಳಗೆ ||
ಮನವ ಬಿಗಿದು ಮೇಲೆ ಹಾರಿ ಬರುವ ಭಾವವಿಂದು ನಿನ್ನ
ನೆನೆದು ನೆನೆದು ಜೋಗುಳವನು ಹಾಡುತಿಹುದು ಮಲಗೊ, ತಮ್ಮ ||

ಶಂಕರಭಟ್ಟ ಕಡೆಂಗೋಡ್ಲು,
ಮಂಗಳೂರು.

ಕಾಮನಹಬ್ಬದ ಒಂದು ಕತೆ

(೧)

ಕಾಮನಹಬ್ಬದ ದಿನ ಬಂದರೆ ನನಗೆ ನಮ್ಮೂರ ಸಾವಿತ್ರಮ್ಮನವರ ಕತೆ ಜ್ಞಾಪಕಕ್ಕೆ ಬರುತ್ತದೆ. ಈ ಹಬ್ಬ ಎಂದರೆ ಹಿಂದೆ ನಮ್ಮೂರಲ್ಲಿ ಮಹಾವಿಜೃಂಭಣೆ. ಕಾಮನಹಬ್ಬದ ವಿಜೃಂಭಣೆ ಯಾವುದರಲ್ಲಿ ಎಂದು ಹೇಳಬೇಕಾದ್ದಿಲ್ಲ. ಎಂದರೆ ಮಲೆನಾಡಿನಲ್ಲಿ ಈ ಹಬ್ಬವನ್ನು ಏನೋ ಕೊಚ್ಚೆಕೊಚ್ಚೆಯಾಗಿ ಮಾಡುತ್ತಾರಂತೆ. ಆದರಂತೆ ಎಂದು ತಿಳಿಯಬಾರದು. ನಮ್ಮ ಕಡೆ ಅದೆಲ್ಲಾ ಇಲ್ಲ. ನಮ್ಮ ವಿಜೃಂಭಣೆ ಎಂದರೆ ಎಲ್ಲರ ಮನೆಯ ಮುಂದೆಯೂ ತಪ್ಪದೆ ಬಾಯಿಬಡಿದುಕೊಳ್ಳುವುದು, ಎಲ್ಲ ರಿಂದಲೂ ಸೌದೆ ವಸೂಲುಮಾಡಿಕೊಂಡು ಬರುವುದು, ಹಳೇಪರಕೆ, ಮೊರ, ಮಕ್ಕರಿ, ಚಾಪೆ, ಎಲ್ಲವನ್ನೂ ಸೇರಿಸಿ ಎರಡಾಳೆತ್ತರ ರಾಶಿ ಒಟ್ಟುವುದು, ರಾತ್ರಿ ಚೆನ್ನಾಗಿ ಬಾಯಿಬಡಿದುಕೊಂಡು ಅದಕ್ಕೆ ಬೆಂಕಿ ಹಚ್ಚುವುದು. ಈಚೆಗೆ ಇದೆಲ್ಲಾ ಸ್ವಲ್ಪ ಕಡಿ ಮೆಯಾಗಿದೆ. ಚೆನ್ನಾಗಿ ಗಂಟಲೆತ್ತಿ ಕೂಗಿ ರಪರಪರಪನೆ ಬಾಯಿಕೈಗೆ ಜಗಳಮಾಡು ವುದಕ್ಕೆ ಹಿಂದೆಗೆದರೆ ಕಾಮನಹಬ್ಬ ಮಾಡುವುದು ಹೇಗೆ? ಸೌದೆ ಬೆಲೆ ಏರಿಹೋ ಯಿತು ಎಂತ ಯಾರೂ ಸೌದೇ ಕೊಡದೇ ಬಿಟ್ಟರೆ ಕಾಮನನ್ನು ಸುಡುವುದು ಹೇಗೆ? ಹಿಂದೆ ನಮಗೆ ಇಂಥ ಸಂಕೋಚಕಾರ್ಪಣ್ಯಾಗಳು ಇರಲಿಲ್ಲ. ಸಾಲದ್ದಕ್ಕೆ ನಾವು ಹಬ್ಬಮಾಡುತ್ತಿದ್ದಾಗ ಸಾವಿತ್ರಮ್ಮನವರು ಅವರ ವ್ರತವನ್ನು ನಡೆಸುತ್ತ ಇದ್ದರು. ಆಗ್ಯೆ ಅದು ಒಂದು ವಿಶೇಷ. ಹಬ್ಬದ ಮಾರನೆಯದಿನ ನಾವು ಸಾವಿತ್ರಮ್ಮನವರ ಮೇಲೆ ಕಾಮನಬೂದಿ ಸುರಿಸಿ ಅವರ ಸುತ್ತ ಸುತ್ತಿ ಬಾಯಿಬಡಿದುಕೊಂಡು ಕೂಗಾ ಡುತ್ತಿದ್ದೆವು. ಚರಪುಹಂಚಿಕೊಂಡು ವಸಂತ ಹುಯಿದುಕೊಂಡು ಸ್ನಾನಕ್ಕೆ ಹೊರ ಡುವುದು ಆಮೇಲೆ. ನಾನು ಕೊನೆಯಸಲ ಕಾಮನಹಬ್ಬದ ಗಲಭೆಯಲ್ಲಿ ಸೇರಿದ್ದಾಗ ಸಾವಿತ್ರಮ್ಮನವರ ವ್ರತವೂ ಕೊನೆಯಾಯಿತು. ಅವರ ಆ ವ್ರತದ ವಿಚಾರವನ್ನೇ ನಾನು ಈಗ ನಿಮಗೆ ಹೇಳಬೇಕೆಂದಿರುವುದು.

ಕಾಮನಹಬ್ಬದ ವಿಷಯದಲ್ಲಿ ನಮ್ಮ ಕಡೆಯ ಜನಕ್ಕೆ ಒಂದು ಕುರುಡು ನಂಬಿಕೆ. ಬೂದಿಕಲೆಸುವ ದಿನ ವಿಧವೆಯರಾರಾದರೂ ಬಂದು ಮೇಲೆ ಬೂದಿ ಸುರಿಸಿ ಕೊಂಡು ಹುಡುಗರು ತನ್ನ ಸುತ್ತ ಬಾಯಿಬಡಿದುಕೊಳ್ಳುವುದಕ್ಕೆ ಸಮ್ಮತಿಸಿದರೆ ಅಂಥಾ ಆಕೆಗೆ ಮುಂದಿನ ಜನ್ಮದಲ್ಲಿ ಹೋದ ಗಂಡನೊಂದಿಗೆ ಸಂಸಾರಸುಖ ಲಭಿಸು ವುದಂತೆ; ಆ ಜನ್ಮದಲ್ಲಿ ಸುಮಂಗಲಿಯ ಸಾವಂತೆ. ಜನರಿಗೆ ಈ ನಂಬಿಕೆ ಇರುವು ದಾದರೂ ಯಾವ ವಿಧವೆಯೂ ಹೀಗೆ ಮಾಡಿಸಿಕೊಂಡದ್ದನ್ನು ನಾನು ನೋಡಿರಲಿಲ್ಲ.

ನನಗೆ ತಿಳಿದ ಹಾಗೆ ಈ ವ್ರತಕ್ಕೆ ಒಪ್ಪಿದವರು ಸಾವಿತ್ರಮ್ಮನವರು ಒಬ್ಬರೇ. ಅವರು ಈ ವ್ರತವನ್ನು ಆರಂಭಿಸಿದಾಗ ನಾನು ಸುಮಾರು ಐದುವರುಷದ ಹುಡುಗ. ಆ ಮೇಲೆ ಬೂದಿಕಲೆಸುವ ದಿನ ವರ್ಷವರ್ಷವೂ ಬಂದು ಅವರು ಈ ವ್ರತವನ್ನು ನಡೆಸುವರು. ಅವರು ವ್ರತಹಿಡಿದ ಮೊದಲುವರ್ಷ ಬೂದಿಹಾಕಿ ಎಂದಾಗ ಹುಡುಗರು ಒಂದುಮೊರ ಬೂದಿಯನ್ನು ಅವರ ಮೇಲೆ ಸುರಿದರಂತೆ. ಎಷ್ಟಾದರೂ ಹುಡುಗು ಹುಡುಗೇ. ಆಟದಮೇಲೆ ಕಣ್ಣಿರುವಂತೆ ಸರಿ ತಪ್ಪು ಎನ್ನುವುದರ ಮೇಲೆ ಇರುವುದಿಲ್ಲ. ಅಲ್ಲದೆ ಸಾವಿತ್ರಮ್ಮನವರು ಏಕೆ ಹಾಗೆ ಮಾಡಿಸಿಕೊಂಡರೆಂದು ಹುಡುಗರಿಗೆ ಆಗ ತಿಳಿಯದು. ಎರಡನೆಯ ವರ್ಷದವೇಳೆಗೆ ತಿಳಿದಿತ್ತು. ಅವರು ಅಷ್ಟು ಚೇಷ್ಟೆ ಮಾಡಲಿಲ್ಲ. ಮೇಲೆ ಒಂದು ಚಿಟಿಕೆ ಬೂದಿ ಹಾಕಿ ಒಂದುಸಲ ಬಾಯಿಬಡಿದುಕೊಂಡು ನಡೀರಿ ಎಂದರು. ಸಾವಿತ್ರಮ್ಮನವರು ಅದು ಸಾಲದು ಎಂದರಂತೆ. ಲಂಗಡಾ ಭೀಮನ ಅಣ್ಣ ಶ್ಯಾಮ "ಇದೇನಮ್ಮ ನಿಮಗೆ ಇಷ್ಟು ಆಶೆ. ನಾವೇನು ಸಂಗೀತಗಾರರೇ ಹಾಡುತೇವೆಯೇ. ಬಾಯಿಬಡುಕೊಳ್ಳುವುದನ್ನು ಕೇಳುವುದಕ್ಕೆ ಇಷ್ಟು ಆಶೆಯೆ? ನಡೀರಿ" ಎಂದ. ಸಾವಿತ್ರಮ್ಮನವರು "ಅಪ್ಪಾ ಒಳ್ಳೇ ಮಾತನಾಡು ಎಂದರೆ ಹ್ಯಾಗೆ ಎನ್ನಬೇಕು. ಕೆಟ್ಟದ್ದು ಮಾಡುವುದಕ್ಕೂ ಕಾರ್ಪಣ್ಯವೆ?" ಎಂದರಂತೆ. ಶ್ಯಾಮ "ಯಾವುದಕ್ಕೂ ಅಧಿಕಾರ ಬೇಡವೆ? ಪಕ್ಕಾ ಹೆಣ ಬಂದರೆ ಬೇಕಾದಷ್ಟು ಬಾಯಿಬಡಿದುಕೊಂಡೇವು. ಹೆಣಕ್ಕೆ ಮಾಡುವ ಮರ್ಯಾದೆ ಬದುಕಿದವರಿಗೆ ಎಷ್ಟು ಎಂತ ಮಾಡೋಕೆ ಆಗುತ್ತೆ" ಎಂದನು. ಸಾವಿತ್ರಮ್ಮನವರು "ಅಪ್ಪಾ ಸತ್ತಹೆಣಕ್ಕಿಂತ ಬದುಕಿದ ಹೆಣಕ್ಕೆ ಈ ಮರ್ಯಾದೆ ಹೆಚ್ಚಾಗಿ ಮಾಡಬೇಕು. ನಾನು ಬದುಕಿದ ಹೆಣ; ಜೀವಶವಾ ಅಪ್ಪಾ" ಎಂದರಂತೆ. ಹುಡುಗರು ಕೊನೆಗೆ ಮೂರು ಹಿಡಿ ಬೂದಿಹಾಕಿ ಮೂರುಸಾರಿ ಸುತ್ತಿ ಬಾಯಿಬಡಿದುಕೊಂಡರು. ಹೀಗೆ ಎರಡು ಮೂರು ವರುಷದಲ್ಲಿ ವ್ರತದ ಹೆಜ್ಜೆಹೆಜ್ಜೆಯೂ ಮಾಮೂಲಿನಿಂದ ನಿರ್ಧರವಾಯಿತು. ಸಾವಿತ್ರಮ್ಮನವರು ಬಂದು ಕುಳಿತ ಒಡನೆ ನಮ್ಮಲ್ಲಿ ಮೂವರು ಕೈಯಲ್ಲಿ ಒಂದೊಂದುಹಿಡಿ ಬೂದಿಯನ್ನು ಹಿಡಿದುಕೊಂಡುಬಂದು ಬಾಯಿಬಡಿದುಕೊಂಡು ಅವರಮೇಲೆ ಹಾಕಿ ಎಲ್ಲರೂ ಒಂದುಸಲ ಅವರ ಸುತ್ತ ಸುತ್ತುವುದು; ಇದಿಷ್ಟಕ್ಕೆ ಹೆಚ್ಚಾಗಿ ಒಂದಿಷ್ಟನ್ನೂ ಮಾಡುತ್ತಿರಲಿಲ್ಲ. ಹುಡುಗರಾದರೇನು ಹೆಣ್ಣುಹೆತ್ತ ಮಕ್ಕಳಲ್ಲವೆ? ಹೀಗೆ ಮಾಡಬೇಕಾದರೆ ಕೆಲವರ ಕಣ್ಣಿನಲ್ಲಿ ನೀರೂ ಬರುವುದು. ಎಲ್ಲ ಆದಮೇಲೆ ಸಾವಿತ್ರಮ್ಮನವರು ಹೋಗಿ ಕೆರೆಯಲ್ಲಿ ಸ್ನಾನಮಾಡಿ ಹಿಂದಕ್ಕೆ ಬರುವರು. ಇದು ಇನ್ನೆಲ್ಲಿಯೂ ನಡೆಯದೆ ಇದ್ದದ್ದರಿಂದ ನಮ್ಮೂರಿನ ಕಾಮನಹಬ್ಬಕ್ಕೆ ನಮ್ಮ ಕಡೆ ಆಗ್ಯೆ ಹೆಚ್ಚು ಗೌರವ ಉಂಟಾಗಿತ್ತು. ಸಾವಿತ್ರಮ್ಮನವರು ಈ ವ್ರತವನ್ನು ಏಕೆ

ಕೈಗೊಂಡರೆಂದು ತಿಳಿಯುವುದಕ್ಕೆ ಆದರ ಪೂರ್ವದ ಚರಿತ್ರೆಯು ನಿಮಗೆ ತಿಳಿಯ ಬೇಕು.

(೨)

ಸಾವಿತ್ರಮ್ಮ ಅವರ ತಂದೆತಾಯಿಗಳಿಗೆ ಒಬ್ಬಳೇ ಮಗಳಂತೆ. ಅವರು ಬಹಳ ಬಡವರಾಗಿದ್ದರು. ಮಗಳನ್ನು ನಮ್ಮೂರಿನಲ್ಲಿಯೇ ಸಂಬಂಧದಲ್ಲಿ ಒಬ್ಬರ ಮನೆಗೆ ಕೊಟ್ಟರು. ಸಾವಿತ್ರಮ್ಮನ ಮಾವ ನರಸಿಂಹಶಾಸ್ತ್ರಿಗಳು. ಗಂಡನ ಹೆಸರು ಶೀನೀ. ಮದುವೆ ಆದಾಗ ಹುಡುಗ ಹುಡುಗಿಯರಿಗೆ ಕೇವಲ ಚಿಕ್ಕವಯಸ್ಸು. ಸಾವಿತ್ರಮ್ಮನೂ ಶೀನಿಯೂ ಮಕ್ಕಳಂದಿನಿಂದ ಜತೆಯಾಗಿ ಇದ್ದವರು. ಶೀನಿಯ ಶಾಸ್ತ್ರೀಯವಾದ ಹೆಸರು ಶ್ರೀನಿವಾಸಶಾಸ್ತ್ರಿ. ಆದರೆ ಅವನನ್ನು ಊರೆಲ್ಲ ಶೀನೀ ಎಂದು ಕರೆಯುವುದು. ಸಾವಿತ್ರಮ್ಮನೂ ಶೀನೀ ಎಂದು ಕರೆಯುತ್ತಿದ್ದಳಂತೆ. ಮದುವೆಯಾದ ಮೇಲೂ ಅವಳು ಅವನನ್ನು ಶೀನೀ ಎಂದೇ ಕರೆಯುವಳು. ಅವನು ಅವಳನ್ನು ಸಾತೀ ಎಂದು ಕರೆಯುವನು. ಆಗ ಊರಿನವರಿಗೆಲ್ಲ ಇದು ಒಂದು ಪರಿಹಾಸ್ಯ. ಶೀನೀಗೆ ನಾಲ್ಕುಜನ ಅಣ್ಣಂದಿರು. ಅವರ ತಂದೆ ನರಸಿಂಹಶಾಸ್ತ್ರಿಗಳು ಆಗ್ಯೆ ತಕ್ಕ ಮಟ್ಟಿಗೆ ಮುದುಕರಾಗಿದ್ದರು. ಶೀನೀ ಹಳ್ಳಿಯಲ್ಲೇ ಬೆಳೆದ ಹುಡುಗ. ಓದುಬರಹ ಕಡಿಮೆ; ಮಾಡುವುದಕ್ಕೆ ಕೆಲಸವಿಲ್ಲ; ಬಾಲ್ಯದಲ್ಲಿ ಸ್ವಭಾವವಾಗಿಯೂ ಸ್ವಲ್ಪ ತುಂಟನಾಗಿದ್ದನು. ತುಂಟ ಎಂದರೆ ಮತ್ತೇನೂ ಇಲ್ಲ, ಯಾರ ಮನೆಯ ದಾಳಿಂಬೆ ಮರದಲ್ಲಿ ಹಣ್ಣುಬಿಟ್ಟರೂ ಅವರಿಗೆ ತಿಳಿದೋ ತಿಳಿಯದೆಯೋ ಮೊದಲಹಣ್ಣನ್ನು ಈತನು ಸಂಗ್ರಹಿಸುತ್ತಿದ್ದನು. ಊರಲ್ಲಿ ವರ್ಷವರ್ಷವೂ ಮೊದಲಮಾವಿನಹಣ್ಣು ತಿನ್ನುವವನು ಶೀನೀ. ಅವನು ದೊಡ್ಡಹುಡುಗನಾದಮೇಲೆ ಊರಿನಲ್ಲಿ ಮೊದಲು ಮಾವಿನಕಾಯಿ ಉಪ್ಪಿನಕಾಯಿ ಹಾಕುವುದು ನರಸಿಂಹಶಾಸ್ತ್ರಿಗಳ ಮನೆಯಲ್ಲಿ. ಅದು ಶೀನೀ ತಂದ ಕಾಯಿ. ನೆಲ್ಲೀಕಾಯಿ, ಅಮಟೇಕಾಯಿ, ಮಾಗಳದ ಬೇರು ಎಲ್ಲಾ ಅಷ್ಟೇ. ಶೀನೀ ಇಂಥ ಕೆಲಸಕ್ಕೆ ಹೊರಟಾಗ ಉಪ್ಪಿನಕಾಯಿ ಹಾಕುವ ದಿನ ಬಂತೆಂದು ಎಲ್ಲರಿಗೂ ಜ್ಞಾಪಕ. ಬೇಕಾದವರು ಅವನ ಜತೆಗೂ ಹೋಗುವರು. ಅವನು ಅವರಿಗೂ ಅಷ್ಟು ಕಾಯಿ ಸರಿಮಾಡಿ ಕೊಡುವನು. ದೇವಸ್ಥಾನದಲ್ಲಿ ಉತ್ಸವದ ದಿನಗಳಲ್ಲಿ ಗಂಟೆಬಾರಿಸುವುದು ಕೂಗಾಡುವುದು ಈ ಕೆಲಸ ಶೀನೀದು. ಅದಕ್ಕೆ ಇವನನ್ನು ಯಾರೂ ನೇಮಿಸಿರಲಿಲ್ಲ. ಅವನೇ ಅದನ್ನು ಕೈಗೊಂಡು ದಿನವೂ ಅರ್ಚಕನಿಂದ ಇದಕ್ಕಾಗಿ ಎರಡು ಕಾಯಿಹೋಳು ವಸೂಲುಮಾಡುವನು. ಊರಿನಲ್ಲಿ ಯಾವ ಜಗಳ ನಡೆದರೂ ಅದರಲ್ಲಿ ಶೀನೀ ಇರಲೇಬೇಕು. ಇಲ್ಲ ಜಗಳಬಿಡಿಸುತ್ತಿರಬೇಕು.. ಮದುವೆಯಾದ ಮೇಲೆ ಹುಡುಗುತನ ಬಿಡುವನೆಂದು ಮನೆಯವರು

ತಿಳಿದುಕೊಂಡಿದ್ದರು. ಆಗಲೂ ಅದು ಬಿಡಲಿಲ್ಲ. ಇಷ್ಟಬಂದಂತೆ ಬೆಳೆದು ಹುಡುಗ ಒಳ್ಳೆ ಪುಷ್ಟಿಯಾಗಿ ತುಂಬಿ ಗಟ್ಟಿಯಾಗಿದ್ದನು. ಒಂದುಸಲ ಇವನು ಜಗಳ ಬಿಡಿಸುವುದಕ್ಕೆ ಹೋಗಿ ಯಾರೋ ಕುಡುಗೋಲಿನಿಂದ ಹೊಡೆದು ಇವನ ಮುಖದಮೇಲೆ ಹುಬ್ಬುಗಳ ನಡುವೆ ಒಂದು ಗಾಯವಾಗಿತ್ತು. ಸಾವಿತ್ರಮ್ಮ ಶೀನೀಗೆ ಮದುವೆಯಾದ ಎರಡುವರ್ಷದ ಮೇಲೆ ಯಾವುದೋ ಒಂದು ರೀತಿಯ ಜ್ವರ ಬಂದು ಅವಳ ತಂದೆತಾಯಿ ಇಬ್ಬರೂ ತೀರಿಹೋದರು. ಸಾವಿತ್ರಮ್ಮ ಬಂದು ಮಾವನ ಮನೆಯಲ್ಲಿ ನಿಂತಳು. ತಂದೆಯ ಕಡೆಯಿಂದ ಅವಳಿಗಿದ್ದದ್ದು ಅವರಿದ್ದ ಒಂದು ಹಳೆಯಮನೆ ಮಾತ್ರ. ಹುಡುಗಿ ಮಾವನ ಮನೆಯಲ್ಲೇ ದೊಡ್ಡವಳಾದಳು. ಆಮೇಲೆ ಎರಡು ವರ್ಷವಾದರೂ ನಿಷೇಕಪ್ರಸ್ತ ನಡೆಯಲಿಲ್ಲ. ಮಾವನಮನೆಯವರು ಅಷ್ಟೇನೂ ಐಶ್ವರ್ಯವಂತರಲ್ಲ. ಒಂದು ಮದುವೆ ಒಂದು ಪ್ರಸ್ತ ಒಂದು ಚೌಲ ಒಂದು ಉಪನಯನ ಹೀಗೆ ನಾಲ್ಕಾರು ಸಂದರ್ಭ ಸೇರುವಂತೆ ಕಾಲನೋಡಿಕೊಂಡು ಇಂಥ ಪ್ರಸ್ತ ನಡೆಯಿಸಬೇಕು. ಇದರಿಂದ ಅದು ಸಾವಕಾಶವಾಯಿತು. ಹೀಗಿರುತ್ತಿರುವಲ್ಲಿ ಶಿವಗಂಗೆಯ ಸ್ವಾಮಿಗಳು ದೇಶಾಟನಕ್ಕಾಗಿ ಹೊರಟು ಹೊಳೆನರಸೀಪುರಕ್ಕೆ ದಯಮಾಡಿಸಿದರು. ನಮ್ಮೂರಿಂದ ಜನ ಸ್ವಾಮಿಗಳ ದರ್ಶನಕ್ಕೆಂದು ಹೊಳೇನರಸೀಪುರಕ್ಕೆ ಹೋದರು. ನರಸಿಂಹಶಾಸ್ತ್ರಿಗಳೂ ಅವರ ಸಂಸಾರವೂ ಒಂದುದಿನ ಹೋದರು. ಶೀನೀ ಹೋಗಿ ಅವರ ಗುಂಪಿನಲ್ಲಿ ಸೇರಿದ; ಸ್ವಾಮಿಗಳ ಶುಶ್ರೂಷೆ ಮಾಡಿದ; ಮೂರುದಿನದ ಮೇಲೆ ಗುರುಗಳು ಮುಂದಕ್ಕೆ ಹೊರಟಾಗ ಅವರೊಂದಿಗೆ ಹೊರಟ. ತಂದೆತಾಯಿಗಳು ಎಷ್ಟುದೂರ ಹೋಗುತ್ತೀಯಪ್ಪಾ ಎಂದು ಕೇಳಿದರು. ಎಳೆಂಟು ದಿನ ಸ್ವಾಮಿಗಳ ಜತೆಯಲ್ಲಿದ್ದು ಬರುತ್ತೇನೆ ಎಂದು ಶೀನೀ ಉತ್ತರಹೇಳಿದ. ಸಾತಮ್ಮನಿಗೆ ಗಂಡನೆಂದರೆ ಪಂಚಪ್ರಾಣ. ಅವಳಿಗೆ ತನ್ನದೆನ್ನುವುದು ಇನ್ನೂ ಯಾವುದೂ ಇಲ್ಲದೆ ಹೋಗಿತ್ತು. ಗಂಡನೊಬ್ಬನೇ ತನ್ನ ವಸ್ತು. ಮಾವ ಅತ್ತೆ ಎಲ್ಲ ಗಂಡನಿಂದ ನೆಂಟರು. ಹತ್ತುವರ್ಷದ ಹುಡುಗಿ ಮಾವನ ಮನೆಗೆ ಬಂದು ಐದುವರುಷ ಸದಾ ಅವನನ್ನೇ ನೋಡುತ್ತ ಅವನು ಮನೆಯಲ್ಲಿಲ್ಲದಾಗಲೆಲ್ಲ ಅವನನ್ನು ನೆನೆಯುವುದೇ ಅವಳಿಗೆ ವಾಡಿಕೆಯಾಗಿ ಹೋಗಿತ್ತು. ಹೊಳೆನರಸೀಪುರದಲ್ಲಿ ಅಂದು ಗಂಡನು ಗುರುಗಳೊಂದಿಗೆ ಹೋಗುತ್ತೇನೆಂದಾಗ ಅವಳ ಮನಸ್ಸಿಗೆ ಏನೋ ಭಯ ತಟ್ಟಿತು. ಆದರೆ ಅವರು ಆಗ ಇದ್ದ ಸ್ಥಿತಿಯಲ್ಲಿ ಅವಳು ಅವನನ್ನು ಯಾವ ಮಾತನ್ನೂ ಕೇಳುವಂತಿಲ್ಲ, ಅವನು ಏನನ್ನೂ ಹೇಳುವಂತಿಲ್ಲ. ಅವನು ಹಾಗೆ ಗುರುಗಳ ಜತೆಯಲ್ಲಿ ಹೋಗಲು ಸಾವಿತ್ರಮ್ಮ ಹೀಗೆ ಎಲ್ಲರೊಂದಿಗೆ ಊರಿಗೆ ಬಂದಳು.

ಗುರುಗಳೊಂದಿಗೆ ಹೋದ ಶೀನೀ ಹಿಂದಕ್ಕೆ ಬರಲಿಲ್ಲ. ಎಂಟುದಿನವಾಯಿತು. ಒಂದು ತಿಂಗಳಾಯಿತು. ನಾಲ್ಕು ತಿಂಗಳಾಯಿತು. ಅವನ ಸುಳಿವಿಲ್ಲ. ಆದರೆ ಮನೆಯಲ್ಲಿ ಯಾರೂ ವಿಶೇಷ ಯೋಚನೆಮಾಡಲಿಲ್ಲ. ಹುಡುಗ ಊರಲ್ಲಿದ್ದರೆ ಪೋಲಿತಿರುಗುತ್ತಿದ್ದ, ಗುರುಗಳೊಂದಿಗಿದ್ದಾನೆ, ಬರುತ್ತಾನೆ ಎಂದು ತಂದೆತಾಯಿಗಳು ಹೇಳಿಕೊಳ್ಳುತ್ತಿದ್ದರು. ಸಾವಿತ್ರಮ್ಮನಿಗಾದರೊ ಈ ಮಾತುಗಳಿಂದ ಸಮಾಧಾನ ಬರಲಿಲ್ಲ. ಒಂದೆರಡುಸಲ ತಾನು ಗಂಡಸಾಗಿದ್ದರೆ ಹೋಗಿ ಅವನನ್ನು ಹುಡುಕಿಕೊಂಡು ಬರಬಹುದಾಗಿತ್ತು ಎಂದುಕೊಂಡಳು. ಅದು ತನ್ನ ಕೈಯಲ್ಲಾಗುವ ಕೆಲಸವಲ್ಲ. ಕೈಯಲ್ಲಾದದ್ದು ಗೌರೀಪೂಜೆ. ಗಂಡ ಎಂದು ಬರುವನೋ ಎಂದು ನಿರೀಕ್ಷಿಸುತ್ತ ಅವಳು ದಿನವೂ ಪೂಜೆಮಾಡುವಳು. ಒಂದು ವರ್ಷ ಕಳೆದರೂ ಶೀನೀ ಹಿಂದಕ್ಕೆ ಬಾರದಿರಲು ಮನೆಯವರಿಗೂ ಸ್ವಲ್ಪ ಕಳವಳವುಂಟಾಯಿತು. ಹಿರಿಯಣ್ಣ ಅಲ್ಲಿ ಇಲ್ಲಿ ವಿಚಾರಿಸಿ ಸ್ವಾಮಿಗಳು ದೇಶಾಟನ ಮುಗಿಸಿಕೊಂಡು ಮಠಕ್ಕೆ ಬಂದರಂತೆ ಎಂದನು. ಹಾಗಾದರೆ ಇನ್ನು ಕೊಂಚದಿನಕ್ಕೆ ಶೀನೀ ಬರಬಹುದೆಂದು ನಿರೀಕ್ಷಿಸಿದ್ದಾಯಿತು; ಅವನು ಬರಲಿಲ್ಲ. ಹೋಗಿ ವಿಚಾರಿಸಿಕೊಂಡು ಬರೋಣ ಎಂದು ಹಿರಿಯಣ್ಣನಾದವನು ಹೋಗಿ ಬಂದನು. ಸ್ವಾಮಿಗಳ ಜೊತೆಯಲ್ಲಿ ಹಿಂದಿರುಗಿ ಬಂದವರು ಶೀನಿಯನ್ನು ಬಲ್ಲರು. ಸ್ವಾಮಿಗಳು ಕಾಶೀನಗರವನ್ನು ಸೇರಿ ಅಲ್ಲೇ ಇರುವವರೆಗೆ ಅವನು ಜತೆಯಲ್ಲಿಯೇ ಇದ್ದನಂತೆ. ಸ್ವಾಮಿಗಳು ಅಲ್ಲಿಂದ ಹಿಂದಿರುಗಲು ಅವನೂ ಅವನ ಜೊತೆಗೆ ಇನ್ನೊಬ್ಬನೂ ಬದರಿಕಾಶ್ರಮಕ್ಕೆ ಹೋಗಿ ಬರುತ್ತೇವೆಂದು ಹೊರಟರಂತೆ. ಎಲ್ಲರೂ—ಎಲ ಬದರಿಕಾಶ್ರಮವೆಲ್ಲಿ ? ನೀನೆಲ್ಲಿ ? ಎಂದರೆ ಕೇಳಲಿಲ್ಲ. ಹೀಗೆಂದು ಇವರಿಗೆ ಸಮಾಚಾರ ತಿಳಿಯಿತು. ಹಿರಿಯಣ್ಣ ಬಂದು ತಂದೆಗೆ ಹೇಳಿದನು.

ಎಲ್ಲರೂ ಹುಡುಗನ ಆಸೆಯನ್ನು ಬಿಟ್ಟರು. ಸಾವಿತ್ರಮ್ಮ ಚಿಂತೆಗೆ ಸಿಕ್ಕಿ ದಿನಗಳನ್ನು ಎಣಿಸತೊಡಗಿದಳು.

ನಾಲ್ಕು ವರ್ಷವಾಯಿತು. ಶೀನಿ ಹಿಂದಿರುಗಿ ಬರಲಿಲ್ಲ. ಇಷ್ಟರಲ್ಲಿ ಮನೆಯಲ್ಲಿ ಅತ್ತೆಗೂ ಇತರ ಸೊಸೆಯರಿಗೂ ಸರಿಹೋಗದೆ ಭಾಗವಾಗುವ ಮಾತು ಬಂತು. ಆಗ ಶೀನಿಗಾಗಿ ಒಂದು ಭಾಗ ಇಡುವುದೇ ಬಿಡುವುದೇ ಎಂದು ಸಮಸ್ಯೆಹುಟ್ಟಿತು. ಆಸ್ತಿ ಇದ್ದದ್ದು ಕೊಂಚ. ಹಂಚಿಕೊಳ್ಳುವವರು ಕಡಿಮೆಯಾದಷ್ಟೂ ಒಳ್ಳೆಯದು. ಅಣ್ಣತಮ್ಮಂದಿರು, ಏನಾದನೋ ಬದರಿಕಾಶ್ರಮಕ್ಕೆ ಹೋದರೆ ತಾನೇ ಇಷ್ಟುದಿನ ಬರದೆ ಇರುತ್ತಾರೆಯೆ ? ಕಳ್ಳರು, ಕಾಕರು, ರೋಗ, ರುಜಿನ, ಎಂದರು. ಸಾವಿತ್ರಮ್ಮನಿಗೆ ಹೊಟ್ಟೆಯಲ್ಲಿ ಬೆಂಕಿಹಾಕಿದ ಹಾಗಾಯಿತು. ಹೀಗೆಯೇ ಇರುತ್ತಿರುವಲ್ಲಿ

ಮನೆಯ ಯಜಮಾನ ತೀರಿಹೋಗಿ ಭಾಗಗಳಾಗಲೇಬೇಕಾಯಿತು. ಭಾವಮೈದ ಮೊದಲಾದವರು ಜಗಳಮಾಡಿ ಶೀನಿ ತೀರಿಹೋಗಿರಬೇಕೆಂದು ನಿಶ್ಚಯಿಸಿ ಪಂಚಾಯಿತರನ್ನು ಹೇಗೋ ಒಪ್ಪಿಸಿ ಸಾವಿತ್ರಮ್ಮನಿಗೆ ಮತ್ತು ತಮ್ಮ ತಾಯಿಗೆ ಜೀವನಾಂಶವೆಂದು ಏರ್ಪಾಡುಮಾಡಿ ತಾವು ಬೇರೆಬೇರೆಯಾದರು. ಸಾವಿತ್ರಮ್ಮ ಅತ್ತೆಯೊಂದಿಗೆ ತನಗೆ ತಂದೆ ತಾಯಿಗಳಿಂದ ಬಂದಿದ್ದ ಮನೆಯಲ್ಲಿ ನಿಂತಳು. ಆಗ್ಗೆ ಸಾವಿತ್ರಮ್ಮನಿಗೆ ಸುಮಾರು ಇಪ್ಪತ್ತೆರಡು ವರ್ಷ.

ಇದಾದ ಕೊಂಚ ದಿನದಮೇಲೆ ಮನೆಯ ಹಿರಿಯಣ್ಣ ಎಲ್ಲಿಗೋ ಹೋಗಿದ್ದವನು ಶೀನಿಯ ಜತೆಗೆ ಬದರಿಕಾಶ್ರಮಕ್ಕೆ ಹೋಗಿದ್ದಾತ ಹಿಂದಕ್ಕೆ ಬಂದನೆಂದೂ ಶೀನಿ ಕಲಿಕತ್ತೆಯ ಬಳಿ ತೀರಿಹೋದನೆಂದು ಹೇಳಿದನೆಂದೂ ತಾಯಿಗೆ ಹೇಳಿ ಕಳುಹಿಸಿದನು. ಯಾವುದನ್ನು ಹೆದರಿದ್ದೆನೋ ಅದು ಆಗಿಹೋಯಿತು ಎಂದು ಸಾವಿತ್ರಮ್ಮ ವಿಧವೆಯ ವೇಷವನ್ನು ಅಂಗೀಕರಿಸಿದಳು. ಅತ್ತೆ ಭಾವ ಊರಿನ ಜನ ಎಲ್ಲರೂ ಬೇಡ ಬೇಡ ಎಂದರು. ಗಂಡ ದೇಶಾಂತರ ಹೋದರೆ ಈ ವೇಷ ಯಾಕೆ ಎಂದರು. ಸಾವಿತ್ರಮ್ಮ ಕೇಳಲಿಲ್ಲ. ಏನಾಯಿತು ಎಂತ ತಿಳಿಯದೇ ಇದ್ದಾಗ ಎಲ್ಲಾದರೂ ಸುಖವಾಗಿರಲಿ ಎಂತ ನಾನು ಅರಿಸಿನ ಕುಂಕುಮ ಹಚ್ಚಿಕೊಳ್ಳುತ್ತಾ ಇದ್ದೆ. ನನಗೇನು ಆಸೆಯಿಲ್ಲವೇ? ನನಗೆ ಪ್ರಾಪ್ತಿಯಿಲ್ಲ. ಅವರು ಹೋದರು ಎಂದಮೇಲೆ ನಾನು ಹೋದಹಾಗೆಯೇ. ನನಗೇಕೆ ಸೊಗಸು ನಾನು ಕೂದಲಿಟ್ಟುಕೊಂಡು ಅವರು ನರಕದೊಳಗೆ ಯಾಕೆ ಇರಬೇಕು ಎಂದರು. ಈ ಜನ್ಮದಲ್ಲಿ ಸೇವೆಮಾಡುವುದಕ್ಕೆ ಸಿಕ್ಕದೇ ಹೋದ ಅವಕಾಶ ಮುಂದಿನ ಜನ್ಮಕ್ಕೆ ಸಿಕ್ಕಲಿ ದೇವರೇ ಎಂದು ತಮಗೆ ತಿಳಿದ ವ್ರತಗಳನ್ನೆಲ್ಲಾ ಮಾಡುವುದಕ್ಕೆ ಮೊದಲುಮಾಡಿದರು. ಕಾಮನಹಬ್ಬದ ಬೂದಿಯನ್ನು ಚೆಲ್ಲಿಸಿಕೊಂಡು ಹುಡುಗರಿಂದ ಅಶುಭಕಾರ್ಯವನ್ನು ನಡೆಯಿಸಿಕೊಂಡರು. ಅದೂ ಈ ವ್ರತಗಳಲ್ಲಿ ಒಂದು. ಏನಾದರೂ ಮಾಡು, ಈ ಒಂದು ಅವಲಕ್ಷಣದ ವ್ರತ ಬೇಡ ಎಂದು ಅತ್ತೆ ಬೇಡಿದರು. ಸಾವಿತ್ರಮ್ಮ ಕೇಳಲಿಲ್ಲ. ನನಗೆ ಅವಮಾನ, ನನ್ನನ್ನ ಕಂಡರೆ ನಗುತ್ತಾರೆ, ನಾನು, ನಾನು, ಎಂತ ಮಾಡದೆ ಬಿಟ್ಟರೆ ಪತಿಭಕ್ತಿ ಏನು ತೋರಿಸಿದ ಹಾಗಾಯಿತು? ಅವರು ಇದ್ದಿದ್ದರೆ ಹೊಡೆದರೆ ಬೇಡಾ ಎಂದಿತ್ತೆ? ಬೈದರೆ ಬೇಡಾ ಎಂದಿತ್ತೆ? ಅದಕ್ಕೆಲ್ಲಾ ಅವಮಾನ ಎನ್ನುತ್ತಿದ್ದೆವೆ? ಯಾರು ನಕ್ಕರೆ ನನಗೇನು ಎಂದು ಹೇಳಿದರು.

(೩)

ನಾನು ಈ ಹಬ್ಬದಲ್ಲಿ ಸೇರಿದ್ದ ಕಡೆಯ ಸಲ ಅದು ನಡೆದಷ್ಟು ಸೊಗಸಾಗಿ ನಮ್ಮೂರಲ್ಲಿ ಕೂಡ ಇನ್ಯಾವಾಗಲೂ ನಡೆದಂತೆ ನನಗೆ ಜ್ಞಾಪಕವಿಲ್ಲ. ನಾವೆಲ್ಲ

ಹುಡುಗರು ಒಟ್ಟಿಗೆ ಸೇರಿ ಮನೆಮನೆಗೂ ಹೋಗಿ ಮನೆಯ ಮುಂದೆ ಬಾಯಿ ಬಡಿದು ಕೊಂಡು ಸೌದೆಯ ಭಿಕ್ಷೆ ಕೇಳುವುದು ವಾಡಿಕೆ. ಈ ಹಬ್ಬದ ದಿನ ಮನೆಯ ಮುಂದೆ ಬಾಯಿಬಡಿದುಕೊಂಡರೆ ವರ್ಷವೂ ನಗುತ್ತ ಇರಬಹುದು ಎಂದು ನಮ್ಮ ಜನರಲ್ಲಿ ನಂಬಿಕೆ ಇದೆಯಷ್ಟೆ. ನನ್ನ ಜತೆಗೆ ಇದ್ದ ಒಂದೈದಾರು ಜನ ಈಗ ಅಲ್ಲಲ್ಲಿ ಬಹು ದೊಡ್ಡ ಮನುಷ್ಯರಾಗಿ ಗೌರವಸ್ಥರೆನಿಸಿಕೊಂಡಿರುವವರು ಕಾಮನ ಹಬ್ಬದ ಈ ಜಂಟಿ ಗೌರವದ ಹುದ್ದೆಯಲ್ಲಿದ್ದಾಗ ಬಹಳ ದಕ್ಷರೆನಿಸಿಕೊಂಡರು. ನಾನೂ ತಕ್ಕಮಟ್ಟಿಗೆ ಗದ್ದಲಕ್ಕೆ ಸಹಾಯಮಾಡುತ್ತಿದ್ದೆನು. ಅಶುಭದ ಶಬ್ದಮಾಡುವುದರಲ್ಲಿಯೂ ಒಂದು ಕೌಶಲವಿದೆ. ಅದಕ್ಕೂ ಒಂದು ಪರಿಶ್ರಮ ಬೇಕು. ನಮಗೆ ಹಿರಿಯರಾಗಿದ್ದವರಿಂದ ನಾವು ಆ ವಿದ್ಯವನ್ನು ಕಲಿತು ವರ್ಷಾಂತರ ಅಭ್ಯಾಸಮಾಡಿದ್ದುದರಿಂದ ನಾವೆಲ್ಲ ಸೇರಿ ಲಬೋಲಬೋ ಎಂದು ಕೂಗಿದಾಗ ಉಂಟಾದ ಶಬ್ದವು ಭೀಕರವಾಗಿದ್ದರೂ ಕೇಳುವುದಕ್ಕೆ ಅಸಹ್ಯವಾಗಿರುತ್ತಿರಲಿಲ್ಲ. ನಾವು ತಿಳಿದುಕೊಂಡಿದ್ದದ್ದಂತೂ ಹಾಗೆ. ಅಲ್ಲದೆ ಕಾಮನಹಬ್ಬದ ಸಂಭ್ರಮದಲ್ಲಿ ನಮ್ಮ ಭೀಮನಂತಹವರ ಕವಿತೆಯ ಒನಕೆ ಚಿಗುರಿ ಒಂದು ರೀತಿಯ ಪದ್ಯಉಂಟಾಗಿತ್ತು. 'ಬೋಲಬೋಲ ಬಸಪ್ಪ ನಿಮ್ಮಪ್ಪ ಸತ್ತರೆ ಲಬೋಲಬೋ' ಎನ್ನುವುದು ಅದರ ಮುಖ್ಯಭಾಗ. ಇದು ಈಚೆಗೆ ನಮ್ಮೂರಿಂದ ಬೇರೆ ಊರುಗಳಿಗೂ ಹರಡಿದೆ ಎನ್ನಿ. ನಾವೆಲ್ಲ ಸೇರಿ ಇದನ್ನು ಒಟ್ಟಿಗೆ ಕೂಗಿದಾಗ ಅದರ ಸೊಗಸನ್ನು ನೋಡಿ ನಮಗೇ ಆನಂದ. ಆ ವರ್ಷ ನಾನೂ ಇನ್ನು ಕೆಲವರೂ ಲೋವರ್‌ಸೆಕಂಡರೀ ಪರೀಕ್ಷೆಗೆ ಕಟ್ಟಿದ್ದೆವು. ಪ್ಯಾಸಾದಮೇಲೆ ಒಬ್ಬೊಬ್ಬರದು ಒಂದೊಂದುದಾರಿ. ಈ ಕಾಮನ ಹಬ್ಬ ನಮಗೆ ಕೊನೆಯ ಹಬ್ಬ ಎಂದು ಬಹಳ ಮೆಹನತ್ತು ಮಾಡಿದೆವು. ಅಲ್ಲದೆ ಸೌದೆಯ ಸಂಪಾದನೆಯಲ್ಲಿ ಆಸಲ ಅಡಚಣೆ ಸ್ವಲ್ಪ ಹೆಚ್ಚಾದದ್ದರಿಂದ ಮೆಹನತ್ತೂ ಹೆಚ್ಚಾಯಿತು. ಕಲ್ಲುಬಂಡೆಗಳು ಅಡ್ಡಬಂದಾಗ ಘೋಷವನ್ನು ಹೆಚ್ಚಿಸುವ ಪ್ರವಾಹದಂತೆ ನಮ್ಮ ಲಬೋಲಬೋ ಶಬ್ದವು ಉಬ್ಬಿ ಮೊರೆಯಿತು. ನಾರಾಯಣಶಾಸ್ತ್ರಿಗಳು ಮನೆಯ ಒಂದಂಕಣವನ್ನು ಕೀಳಿಸಿ ಹೊಸದಾಗಿ ಕಟ್ಟಬೇಕೆಂದು ಒಂದಷ್ಟು ತೊಲೆ ದೂಲ ತರಿಸಿ ಹಾಕಿಕೊಂಡಿದ್ದರು. ಸಾಮಾನ್ಯವಾಗಿ ಅವರು ಕೊಡುತ್ತಿದ್ದದ್ದು ಒಂದು ಕೊರಡು. ಆ ವರ್ಷ ಮನೆ ಕೀಳಿಸಿದ ಮಹಾರಾಯ ಕೊರಡಿನ ಜತೆಗೆ ಹಳೇ ಗಳ ಕೆಲವು ಕೊಡಿ ಎಂದು ನಾವು ಕೇಳಿದೆವು. ಅವರು ಕೊರಡನ್ನೂ ಕೊಡುವುದಿಲ್ಲ ಎಂದರು. ತಂಟೆಗೆ ಬಂದಿತು. ಎಷ್ಟು ಮಾತನಾಡಿದರೂ ಅವರು ನ್ಯಾಯಕ್ಕೆ ಒಪ್ಪಲಿಲ್ಲ. ಅಷ್ಟರಲ್ಲಿ ಲಂಗಡಾಭೀಮ— ಅವನೇ ನಮ್ಮ ಒನಕೇಚಿಗುರಿನ ಕವಿ—ನಾವು ಇತ್ತಲಾಗಿ ಮಾತನಾಡುತ್ತಿದ್ದರೆ ಅತ್ತಲಾಗಿ ಶಾಸ್ತ್ರಿಗಳ ಮನೆಯ ಹಿತ್ತಲ ಕಡೆಯಿಂದ ಒಳಕ್ಕೆ ಹೊಕ್ಕು ತಾನು

ಹೊರುವಷ್ಟು ಗಳ ಒಂದು ಸಣ್ಣ ಕಂಬ ಇಷ್ಟನ್ನು ಕಂಕುಳಲ್ಲಿರಿಕಿಕೊಂಡು ಕಾಮನ್ನ ಸುಡುವ ಕಡೆಗೆ ನಡೆದುಬಿಟ್ಟನು. ಮೊದಲು ನಾವು ಮೋಸಮಾಡಬೇಕೆಂದು ಉದ್ದೇಶಿಸದೇ ಇದ್ದರೂ ಮೋಸ ನಡೆದಮೇಲೆ ನಮ್ಮವರನ್ನು ಬಿಟ್ಟುಕೊಡುವುದೇ ಎಂದು ನಾವು ಕಂಡೂಕಾಣದಂತಿದ್ದು ಶಾಸ್ತ್ರಿಗಳೊಡನೆ ಇನ್ನೆರಡುಮಾತನಾಡಿ "ಒಳ್ಳೆಯದು ಶಾಸ್ತ್ರಿಗಳೇ ನಿಮಗೇಕೆ ಅಸಮಾಧಾನ ನೀವು ಮನೆಕಟ್ಟುವರು. ಆ ಸೌದೇತುಂಡು ತೊಲೆಯೋ ಜಂತೆಯೋ ಆಗಬಹುದು ಇಟ್ಟುಕೊಳ್ಳಿ'' ಎಂದು ಹೇಳಿ ಹೊರಟು ಹೋದೆವು. ನಮ್ಮ ಮಾತಿನ ವೈಖರಿಯಿಂದ ಶಾಸ್ತ್ರಿಗಳು ಸ್ವಲ್ಪ ಬೆರಗಾದರೆಂದು ಕಾಣುತ್ತದೆ. ಸಾಯಂಕಾಲ ಹಿತ್ತಲಕಡೆ ಹೋದಾಗ ಗಳ ಕಂಬ ಮಾಯವಾಗಿರುವುದನ್ನು ನೋಡಿದರು. ಖರದೂಷಣರಂತೆ ಭೋಯೆಂದು ಕಾಮನಸುಡುವ ಕಡೆಗೆ ನುಗ್ಗಿಬಂದರು. ನಮ್ಮ ಕಾವಲವರು ಕೂಗು ಹಾಕಲು ಕಾಷ್ಠಸಂಪಾದನೆಗೆ ಹೋಗಿದ್ದ ನಾವೆಲ್ಲ ಪರಕೆ ಒಬ್ಬರ ಕೈಯಲ್ಲಿ ಹಳೇಮೊರ ಒಬ್ಬರ ಕೈಯಲ್ಲಿ ಎರಡು ಬೆರಣಿ ಒಬ್ಬರ ಕೈಯಲ್ಲಿ ಹಿಡಿದುಕೊಂಡು ಓಡಿಬಂದೆವು. ದೊಡ್ಡ ವಾಗ್ಯುದ್ಧವಾಯಿತು. ಶಾಸ್ತ್ರಿಗಳು ನನ್ನ ಗಳ ಕಂಬ ಹೊತ್ತು ಸುಟ್ಟರೆ ನಿಮ್ಮ ಬುರುಡೆ ಒಡೆಯುತ್ತೇನೆ ಎಂದರು. ಲಂಗಡಭೀಮ ಮತ್ತೆ ಕವಿಯಾದ. ಬುರುಡೆ ಒಡೆಯುವುದು ಸುಳ್ಳು, ಬುರುಡೆ ಹೊಡೆಯುತ್ತೀರಿ ಎಂದ. ತಿರುಮಳ ಬುರುಡೆ ಒಡೆಯಬೇಡಿ-ಬುರುಡೆ ತೆಗೆಯಿರಿ ಒಂದು ಚಿಟಿಕೆ ನಸ್ಯಕೊಡಿ ಎಂದು ಹೇಳಿ ನಸ್ಯಹಾಕಿಕೊಳ್ಳುವಂತೆ ಶಿರ್ ಎಂದು ಉಸಿರೆಳೆದು ಶಾಸ್ತ್ರಿಗಳು ನಸ್ಯವನ್ನು ಸೇವಿಸಿದಾಗ ಆಗುತ್ತಿದ್ದ ಗದ್ದಲವನ್ನು ಅಣಕಿ ತೋರಿಸಿದನು. ಶಾಸ್ತ್ರಿಗಳು ಏನಾದರೂ ಬಿಡಲಿಲ್ಲ. ಕೊನೆಗೆ ಲಂಗಡಾಭೀಮ ಎಲಾ ನೀವು ಶಾಸ್ತ್ರಿಗಳನ್ನ ಇಲ್ಲೇ ಹಿಡಿದುಕೊಂಡಿರಿ ಇನ್ನೂ ಇರೋ ಗಳ ಕಂಬ ಎಲ್ಲಾ ತಂದುಬಿಡುತ್ತೇನೆ ಎಂತ ಶಾಸ್ತ್ರಿಗಳ ಮನೆಕಡೆ ಹೊರಟ. ಶಾಸ್ತ್ರಿಗಳಿಗೆ ಬುದ್ಧಿಬಂತು. ಈಗ ಹೋದದ್ದಲ್ಲದೆ ಇನ್ನು ಬೇರೆ ಹೋಗುವುದೇನೋ ಎಂದು ಅವರು ಭೀಮನನ್ನು ಬಹುವಿಧವಾಗಿ ಆಶೀರ್ವದಿಸುತ್ತ ಅವನ ಹಿಂದೆ ಹೊರಟರು. ಭೀಮನು ಆ ಪ್ರಯತ್ನ ಮಾಡಿದ್ದೂ ಶತ್ರುವನ್ನು ಬೇರೆ ಕಡೆ ತಿರುಗಿಸುವುದಕ್ಕಾಗಿಯೇ. ಇಂಥ ಪ್ರತ್ಯುತ್ಪನ್ನಮತಿಯಿಂದಲಲ್ಲವೇ ಶಿವಾಜಿ, ಪೃಥ್ವೀರಾಜ, ಸೀಜರ್ ಮುಂತಾದ ಸೇನಾನಾಯಕರು ಯುದ್ಧಗಳನ್ನು ಗೆದ್ದು ಚರಿತ್ರೆಯಲ್ಲಿ ಪ್ರಸಿದ್ಧರಾದದ್ದು. ಭೀಮನ ಅದೃಷ್ಟ ಕೆಟ್ಟದು. ಅವನು ಈ ಕಾಲದಲ್ಲಿ ಹುಟ್ಟಿ ಅವನ ಬುದ್ಧಿಯೆಲ್ಲಾ ಒಂದಿಷ್ಟು ಕಾಮನಕಟ್ಟಿಗೆ ಸಂಪಾದಿಸುವುದರಲ್ಲಿ ವೆಚ್ಚವಾಯಿತು. ಶಾಸ್ತ್ರಿಗಳು ಗಳಕ್ಕೆ ತಂಟೆಮಾಡಿದಂತೆ ಕಸದಹೆಂಗಸು ಬೋರಿ ಹಳೇಪರಕೆಗೆ ತಂಟೆಮಾಡಿದಳು. ಹೀಗೆಯೇ ಇನ್ನೂ ಬೇರೆ ಕೆಲವುಕಡೆಯೂ ತಂಟೆಯಾಯಿತು. ನಾವು ಅಲ್ಲಲ್ಲ

ಸಾಫ್ ಯುದ್ಧಮಾಡಿ ಕಪ್ಪ ತೆಗೆದುಕೊಂಡೇ ಬಂದೆವು. ಹಾಗೂ ಹೀಗೂ ರಾಶಿ ದೊಡ್ಡದಾಯಿತು.

ರಾತ್ರಿ ರಾಶಿಗೆ ಬೆಂಕಿ ಹಚ್ಚಿದ್ದನ್ನೂ ರಾಶಿ ಉರಿದದ್ದನ್ನೂ ಹೀಗೆಂದು ನಾನು ವರ್ಣಿಸಬೇಕಾದದ್ದಿಲ್ಲ. ಅದರ ಅಂದವನ್ನು ಹೇಳುವುದಕ್ಕೆ ನನಗೆ ಮಾತು ತಿಳಿಯದು. ನಾವು ಕಾಮನನ್ನು ಸುಡುತ್ತಿದ್ದದ್ದು ಊರಿನ ಪಕ್ಕದ ಒಂದು ಬೈಲಿನಲ್ಲಿ. ನಮ್ಮೂರಿಗೆ ಹೋಗಿಬರುವ ದಾರಿ ಬಾವಿ ತೋಟಕ್ಕೆ ಹೋಗುವ ದಾರಿ ಆ ಬಯಲಿನಲ್ಲಿ ಹಾಯ್ದುಹೋಗುವುದು. ಅಲ್ಲಿ ನಾಲ್ಕೈದು ಅಶ್ವತ್ಥಮರಗಳಿವೆ. ಒಂದು ಕಡೆ ಒಂದು ಆಂಜನೇಯ ದೇವಾಲಯ. ದೂರದಲ್ಲಿ ದಾರಿ ಹಾಯ್ದುಹೋಗುವ ಕೆರೆಯಕಟ್ಟೆ ಕಾಣಿಸುತ್ತದೆ. ಕಾಮನನ್ನು ಸುಡುವುದಕ್ಕೆ ಅದು ಪ್ರಶಸ್ತವಾದ ಜಾಗ. ಬೆಳದಿಂಗಳಲ್ಲಿ ಮಂಕಾಗಿದ್ದ ಮನೆ ಮರ ಎಲ್ಲದರ ಮೇಲೆ ಉರಿಯ ಬೆಳಕು ಬಿದ್ದಾಗ ನಮಗೆ ಇದೇನು ಭೂಲೋಕವೋ ಇನ್ನೆಲ್ಲಾದರೂ ಇದೇವೋ ಎನ್ನುವಂತೆ ತೋರುತ್ತಿತ್ತು. ನಾವು ಹಾಕಿದ್ದ ರಾಶಿಯೂ ದೊಡ್ಡದಾಗಿತ್ತು. ಯಜ್ಞೇಶ್ವರನು ಆ ರಾತ್ರಿ ಊರ ಕಸವನ್ನೆಲ್ಲಾ ಸುಟ್ಟುಬಿಟ್ಟನು. ಜ್ಞಾನದಿಂದ ನಿರ್ಮಲವಾದ ಮನಸ್ಸಿನಲ್ಲಿ ಮೋಹಜಾಲ ಉರಿಯುವಂತೆ ಊರ ಹಳೆಯಮೊರ ಪೊರಕೆ ಹಳೆಯಮುಕ್ಕರಿ ಹಳೆಯ ಕಸವೆಲ್ಲ ಆ ಬೆಳದಿಂಗಳ ರಾತ್ರಿಯಲ್ಲಿ ಉರಿದುಹೋಯಿತು. ಮಾರನೆಯ ದಿನ ಊರಲ್ಲೆಲ್ಲ ಹೊಸಮೊರ, ಹೊಸಪೊರಕೆ ಹೊಸಮುಕ್ಕರಿ. ಅಥವಾ ಹಳೆಯದು ಇದ್ದರೆ ತಿಳಿದೂತಿಳಿದು ಕಸವನ್ನು ಬಿಡಲಾರದೆ ಕಟ್ಟಿಕೊಂಡವರ ಮನೆಗಳಲ್ಲಿ. ಊರಿನ ಕಸವನ್ನು ಸುಡುವುದಕ್ಕೆ ಎಲ್ಲರೂ ಸೇರಿದಂತೆ ಅವರವರ ಮನಸ್ಸಿನ ಕಸವನ್ನು ಸುಡುವುದಕ್ಕೆ ಯತ್ನಮಾಡಿದಲ್ಲಿ ಊರಿನ ಬದುಕು ಅಂದು ಆ ರಾತ್ರಿಯಂತೆ ನಿರ್ಮಲವಾಗಿದ್ದಿರಬೇಕು. ಫಾಲ್ಗುಣದ ಪೂರ್ಣಚಂದ್ರನ ಸೊಗಸನ್ನು ಹೇಳಬಲ್ಲ ಕವಿ ಯಾರು ? ದೇವರ ಕೃಪೆಯಿಂದ ಇಂತ ಸೊಗಸನ್ನು ವರ್ಣನೆಯಿಂದ ಕೇಳಿ ತಿಳಿಯಬೇಕಾದದ್ದಿಲ್ಲ. ಮನಸ್ಸುಮಾಡಿದರೆ ಯಾರಾದರೂ ಅದನ್ನು ಅನುಭವಿಸಿ ಸುಖಪಡಬಹುದು. ಕಾಮನನ್ನು ಸುಡುವಾಗ ಊರಿನ ಜನವೆಲ್ಲ ಬಂದು ಸೇರಿತು. ನಾರಾಯಣಶಾಸ್ತ್ರಿಗಳು ಕೂಡ "ಹೋದ ಗಳ ಹೋಯಿತು–ನನ್ನ ಗಳ ಸುಡುವುದನ್ನು ಎಲ್ಲರೂ ನೋಡಿ ಸಂತೋಷಪಟ್ಟರೆ ನಾನ್ಯಾಕೆ ಬಿಡಬೇಕು" ಎಂದು ತಾವೂ ಬಂದು ನಿಂತು ಸೊಗಸನ್ನು ನೋಡಿದರು. ನಾವೆಲ್ಲ ಸೊಗಸು ಇದೆಂದು ತಿಳಿಯದೆ ಅದರಲ್ಲಿ ಮುಳುಗಿ ತೇಲಿ ನಿಜವಾದ ಆನಂದವನ್ನು ಅನುಭವಿಸಿದೆವು. ರಾತ್ರಿ ಹನ್ನೆರಡುಗಂಟೆ ಮುಗಿದ ಮೇಲೆ ನಮ್ಮನಮ್ಮ ಮನೆಗಳಿಗೆ ಹೋದೆವು.

ಮಾರನೆಯದಿನ ಬೂದಿ ಕಲೆಸುವುದು ಮತ್ತು ಸಾವಿತ್ರಮ್ಮನವರ ವ್ರತ. ನಾವೆಲ್ಲ ಕಾಮನನ್ನು ಸುಟ್ಟ ಜಾಗದಲ್ಲಿ ಸೇರಿದೆವು. ನಮ್ಮ ಕಿಟ್ಟು ಸಾವಿತ್ರಮ್ಮನವರನ್ನು ಕರೆಯುವುದಕ್ಕೆ ಹೋದ. ಅದಕ್ಕೆ ಮೊದಲೇ ಅವರು ಸ್ನಾನಮಾಡಿ ಸಿದ್ಧವಾಗಿದ್ದು ಹೇಳಿದೊಡನೆ ಬಂದರು. ಕುಳಿತುಕೊಳ್ಳುವುದಕ್ಕೆ ವಾಡಿಕೆಯಾದ ಜಾಗದಲ್ಲಿ ಕುಳಿತರು. ಆ ಸಲ ಸಾವಿತ್ರಮ್ಮನವರ ವ್ರತಕ್ಕೆ ಒಂಬತ್ತನೆಯ ವರ್ಷವೋ ಹತ್ತನೆಯ ವರ್ಷವೋ. ಸಾವಿತ್ರಮ್ಮನವರು ಬೂದಿಹಾಕಿಸಿಕೊಳ್ಳುವುದಕ್ಕೆ ಬಂದಾಗ ದಾರಿಯಲ್ಲಿ ಜನ ಬರುತ್ತಾಹೋಗುತ್ತಾ ಇದ್ದರು. ಎಂದಿನಂತೆ ಹೊತ್ತುಹೋಗದ ಹತ್ತುಜನ ಅಲ್ಲಿ ನಿಂತು ನೋಡುತ್ತಿದ್ದರು. ನಾವು ಮೂರುಜನ ಮಾಮೂಲಿನಂತೆ ಒಂದುಹಿಡಿ ಬೂದಿಯನ್ನು ತೆಗೆದುಕೊಂಡು ಅವರ ಬಳಿ ಬಂದೆವು. ಇನ್ನೇನು ಅವರ ಮೇಲೆ ಹಾಕಬೇಕು. ಆ ವೇಳೆಗೆ ಸಾವಿತ್ರಮ್ಮನವರು ಒಮ್ಮೆಗೆ ಜನದಕಡೆ ನೋಡಿದರು. ಒಂದು ಕ್ಷಣದಲ್ಲಿ ಎದ್ದುನಿಂತರು. ಗುಂಪಿನ ಕಡೆಗೆ ದುರದುರನೆ ನೋಡಿ ಶೀನೀ ಎಂದು ಕೂಗುಹಾಕಿ ಕೆಳಗೆ ಬಿದ್ದುಬಿಟ್ಟರು.

ನಮಗೆ ಹಿಂದುಮುಂದು ತೋರಲಿಲ್ಲ. ಬೂದಿಯನ್ನು ಹಿಡಿದಂತೆಯೇ ಸುಮ್ಮನೆ ನಿಂತಿದ್ದೆವು. ಗುಂಪಿನಿಂದ ಯಾವನೋ ಒಬ್ಬನು ಹತ್ತಿರಕ್ಕೆ ಭಂದನು. ಸಾವಿತ್ರಮ್ಮನವರ ಹತ್ತಿರಕ್ಕೆ ಬಂದು ಇದೇನುವೇಷ ಏನುಅವಸ್ಥೆ ಎಂದು ಸ್ವಲ್ಪ ನೀರು ತನ್ನೀ ಅಪ್ಪಾ ಎಂದನು. ಹುಡುಗರು ಇವನು ಯಾರು ಏನು ಎನ್ನದೆ ಅವನು ಹೇಳಿದಂತೆ ಮಾಡಿದರು. ನಾನು ಏನೂ ತೋರದೆ ಅವನ ಮುಖವನ್ನೇ ನೋಡುತ್ತಿದ್ದೆನು. ಅವನ ಅಂದವಾದ ಆ ಹಣೆಯಮೇಲೆ ಇದ್ದ ಒಂದು ಗಾಯದ ಗುರ್ತು ಹೊರತು ನನಗೆ ಇನ್ನೇನೂ ಕಾಣಲಿಲ್ಲ.

ಬಂದವನು ಶ್ರೀನಿವಾಸಶಾಸ್ತ್ರಿ ಅಥವಾ ಶೀನೀ. ನಾವು ಬೂದಿಯನ್ನು ಹಿಡಿದುಕೊಂಡು ಸಾವಿತ್ರಮ್ಮನವರ ಬಳಿ ಬಂದಾಗ್ಯೆ ಅವನು ದಾರಿಯಿಂದ ಬಂದು ಅಲ್ಲಿ ನಿಂತಿದ್ದ ಗುಂಪನ್ನು ಸೇರಿದನಂತೆ. ಇದೇನೋ ನಡೆಯುತ್ತಿದೆಯೆಂದು ನಿಂತು ಅಲ್ಲಿ ಒಬ್ಬನನ್ನು ಇದೇನೆಂದು ಕೇಳಿದನಂತೆ. ಆಗ ನಾವು ಅವನನ್ನು ನೋಡಲೂ ಇಲ್ಲ, ಏನು ನಡೆಯಿತೆಂಬುದನ್ನು ಕೇಳಲೂ ಇಲ್ಲ. ಅವನ ಮಾತಿಗೆ ಗುಂಪಿನಲ್ಲಿ ಯಾರೋ ಗಂಡ ದೇಶಾಂತರದಲ್ಲಿ ತೀರಿಹೋದ ಎಂತ ಈಕೆ ಕಾಮನಬೂದಿ ಚೆಲ್ಲಿಸಿಕೊಳ್ಳುತ್ತಿದಾಳೆ ಎಂದರಂತೆ. "ಇವರು ಯಾರು" "ನರಸಿಂಹಶಾಸ್ತ್ರಿಗಳ ಸೊಸೆ" "ಇವರ ಹೆಸರೇನು?" "ಸಾವಿತ್ರಮ್ಮ" "ಸಾವಿತ್ರಮ್ಮನೇ" ಎಂದು ಶ್ರೀನಿವಾಸಶಾಸ್ತ್ರಿ ಆಕೆಯ ಕಡೆ ನೋಡಿದನಂತೆ. ಈ ಮಾತು ನಡೆಯುತ್ತಿದ್ದಾಗಲೇ ಸಾವಿತ್ರಮ್ಮ

ನವರು ಎದ್ದುನಿಂತು ಗುಂಪಿನಕಡೆ ನೋಡಿ ಕೂಗಿಕೊಂಡು ಬಿದ್ದದ್ದು. ಶ್ರೀನಿವಾಸಶಾಸ್ತ್ರಿ ಹುಡುಗರು ತಂದ ನೀರಿನಿಂದ ಹೆಂಡತಿಗೆ ಶೈತ್ಯೋಪಚಾರವನ್ನು ಮಾಡಿದನು. ಇವನು ಸಾವಿತ್ರಮ್ಮನವರ ಗಂಡನೆಂದು ತಿಳಿದ ಒಂದುಕ್ಷಣ ನಾವು ಹಬ್ಬ ಅರ್ಧಕ್ಕೆ ನಿಂತುಹೋಯಿತಲ್ಲಾ ಎಂದು ಕ್ಷುಣ್ಣರಾದೆವು. ಉತ್ತರಕ್ಷಣದಲ್ಲಿ ಆ ಸಲದ ಹಬ್ಬ ಎಂದಿಗಿಂತ ಹೆಚ್ಚಾಗಿ ಸಾಂಗವಾಯಿತೆಂದು ಉತ್ಸಾಹದಿಂದ ಜಯ ಘೋಷವನ್ನು ಹಾಕಿದೆವು.

ಗಂಡಂದಿರು ಹೆಂಡತಿಯರ ವಿಷಯದಲ್ಲಿ ಬಹಳ ಪ್ರೀತಿ ತೋರಿಸುವರೆಂದು ಜನರಲ್ಲಿ ಒಂದು ಭಾವನೆ ಇದೆ. ಪ್ರಾಯಶಃ ಇದು ನಿಜವಾದದ್ದೇ ಆದರೆ ಅಂದು ಆ ಗಂಡನು ಆ ಹೆಂಡತಿಯಲ್ಲಿ ತೋರಿದ ಮಮತೆ ಕನಿಕರ ದಾಕ್ಷಿಣ್ಯ ಭ್ರಮೆ ಇದನ್ನೆಲ್ಲ ಒಳಗೊಂಡ ಆ ಪ್ರೇಮರಸಕ್ಕೆ ಸಮನಾದ ಪ್ರೇಮವನ್ನು ಬೇರೆ ಯಾವಾಗಲೂ ನಾನು ಕಣ್ಣಿನಲ್ಲಿ ನೋಡಿಲ್ಲ. ಸಂದರ್ಭವೂ ಅಂಥದೇ ಸರಿ.

(೪)

ಬಂದವನು ಶೀನಿ ಹೌದೇ ಅಲ್ಲವೇ ಎಂದು ಊರಿನಲ್ಲಿ ಒಬ್ಬಿಬ್ಬರು ಮಾತನ್ನೆತ್ತಿದರು. ಹೆತ್ತವಳೂ ಕೈಹಿಡಿದವಳೂ ಒಪ್ಪಿದಮೇಲೆ ಪಂಚಾಯಿತಿ ಏಕೆ ಎನ್ನಬಹುದು. ಆದರೆ ಆಸ್ತಿಯ ಹಂಚಿಕೆ ಮಾತು ಇದ್ದದ್ದರಿಂದ ಈ ಸಂದೇಹಕ್ಕೆ ಕಾರಣ ಉಂಟಾಯಿತು. ಶೀನೀ ಸಂದೇಹಪಟ್ಟವರ ವಿಷಯದಲ್ಲೆಲ್ಲಾ ಅವರ ಅಪ್ಪ ತಾತ ಮುತ್ತಾತನ ಕತೆ ಎಂತೆಂತ ಅವಮಾನಕರವಾದದ್ದನ್ನೋ ಹೇಳಿದನು. ಎಲ್ಲರೂ ಬಾಯಿಮುಚ್ಚಿಕೊಂಡರು. ಆಸ್ತಿ ಮತ್ತೆ ಹಂಚಿಕೆಯಾಯಿತು. ಶ್ರೀನಿವಾಸಶಾಸ್ತ್ರಿ ಊರಿನಲ್ಲಿ ಒಬ್ಬ ಸಂಸಾರಿಯಾಗಿ ನಿಂತನು. ಈಗ ಅವನಿಗೆ ಇಬ್ಬರು ಗಂಡುಮಕ್ಕಳಾಗಿದಾರೆ. ಈ ಸಲ ನಾನು ನಮ್ಮ ಊರಿಗೆ ಹೋಗಿದ್ದಾಗ ಶ್ರೀನಿವಾಸಶಾಸ್ತ್ರಿಯ ಪ್ರಯಾಣದ ಕತೆಯನ್ನೆಲ್ಲಾ ಕೇಳಿದೆನು. ಅವನ ಜತೆಯಲ್ಲಿದ್ದವನು ಅವನನ್ನು ಕಲಿಕತ್ತೆಯಲ್ಲಿ ಬಿಟ್ಟುಬಂದಾಗ ಶಾಸ್ತ್ರಿ ಕಲಿಕತ್ತೆಯ ಒಂದು ಛತ್ರದಲ್ಲಿ ಪ್ಲೇಗಿನಿಂದ ಸಾಯುವಂತೆ ಬಿದ್ದಿದ್ದನು. ಜತೆಯವನು ಅವನು ಸತ್ತನೆಂದೇ ಎಣಿಸಿಯೋ ಹೆದರಿಯೋ ಅವನನ್ನು ಮ್ಯುನಿಸಿಪಾಲಿಟಿಯವರಿಗೆ ಒಪ್ಪಿಸಿ ತಾನು ಊರಿಗೆ ಬಂದುಬಿಟ್ಟನಂತೆ. ಶಾಸ್ತ್ರಿ ಬಂದಮೇಲೆ ಅವನೂ ಅದನ್ನು ಒಪ್ಪಿಕೊಂಡನಂತೆ. ಶಾಸ್ತ್ರಿಯು ಕಾಯಿಲೆಯಿಂದ ಉಳಿದುಕೊಂಡು ಉತ್ತರದೇಶದಲ್ಲೆಲ್ಲಾ ಓಡಿಯಾಡಿ ಯೋಗಾಭ್ಯಾಸದ ಒಳಮರ್ಮವನ್ನು ತಿಳಿಯುವುದಕ್ಕಾಗಿ ಅಷ್ಟುವರ್ಷ ಯಾರ್ಯಾರನ್ನೋ ಸೇವಿಸಿದನಂತೆ. ಅವನು ಹೇಳಿದ್ದನ್ನೆಲ್ಲಾ ಬರೆಯುವುದಕ್ಕೆ ಇಲ್ಲಿ ಅವಕಾಶವಿಲ್ಲ. ಬರೆದರೆ

ಅದೇನೆ ಒಂದು ಕತೆಯಾಗುವುದು. ಹಾಗೆಯೇ ನಾನು ಸಾವಿತ್ರಮ್ಮನವರನ್ನೂ ಮಾತನಾಡಿಸಿದೆನು. ವಿಧವೆಯ ವೇಷದಲ್ಲಿ ಹೇಗೋ ಇದ್ದ ಅವರ ಆಕಾರವು ಈಗ ಮಂಗಳಗೌರಿಯ ಪ್ರತಿಬಿಂಬದಂತಾಗಿದೆ. ಧೃಢವ್ರತದಿಂದ ಅವರು ಯಾವ ಫಲವನ್ನು ಮುಂದಿನಜನ್ಮಕ್ಕೆಂದು ಬೇಡಿದರೋ ಅದನ್ನು ಈ ಜನ್ಮದಲ್ಲಿಯೇ ಪಡೆದರು. ಅವರಿಗೆ ನಮ್ಮೂರಿನಲ್ಲಿ ಈಗ ಮದುವೆ ಮುಂತಾದ ಸಂದರ್ಭದಲ್ಲಿ ಎಲ್ಲರಿಗಿಂತ ಮೊದಲು ಅರಿಶಿನ ಕುಂಕುಮ ಕೊಡುತ್ತಾರೆ. ಹೆಣ್ಣುಮಕ್ಕಳ ಕೈಯಲ್ಲಿ ಗೌರೀಹಬ್ಬದ ಬಾಗಿನಗಳನ್ನು ಕೊಡಿಸುವಾಗ ಮೊದಲು ಇವರ ಹತ್ತಿರ ಕರೆತಂದು ಕೊಡಿಸಿ "ಸಾವಿತ್ರಮ್ಮ, ನಿಮ್ಮ ವ್ರತ ದೃಢವಾದ ವ್ರತ, ನಿಮ್ಮ ಆಶೀರ್ವಾದ ಚೆನ್ನಾಗಿ ಫಲಿಸುತ್ತೆ, ಹುಡುಗಿಗೆ ಚೆನ್ನಾಗಿ ಹರೆಸಿ" ಎನ್ನುತ್ತಾರೆ.

ಕಾವ್ಯಾವಲೋಕನ

ಶ್ರೀ ಸಮರ್ಥ ರಾಮದಾಸಸ್ವಾಮಿಗಳ ಚರಿತ್ರವು—ಲೇಖಕರು ಮತ್ತು ಪ್ರಕಾಶಕರು, ರಾಮಚಂದ್ರ ತ್ರ್ಯಂಬಕ ಕರ್ಪೂರ, ಮ್ಯಾನೇಜರ, ಸದ್ಬೋಧಚಂದ್ರಿಕೆ, ಆನಂದವನ. ೧೯೨೬. ಡೆಮ್ಮಿ ಪುಟಗಳು ೧೬೦. ಬೆಲೆ ರೂ. ೧—೨—೦.

ಯಾವುದಾದರೂ ಒಂದು ದೇಶದಲ್ಲಿ ಹುಟ್ಟಿ ಬಾಳಿದ ಮಹಾಪುರುಷರ ಜೀವನ ಚರಿತ್ರೆಗಳನ್ನು ಒಟ್ಟುಗೂಡಿಸಿದರೆ ಅದು ಆ ದೇಶದ ಚರಿತ್ರೆಯಾಗುತ್ತದೆ ಎಂದು ಹೇಳುವುದುಂಟು. ಈ ಹೇಳಿಕೆಯನ್ನು ಪೂರ್ತಿಯಾಗಿ ಒಪ್ಪಲಾಗುವುದಿಲ್ಲವಾದರೂ ಇದರಲ್ಲಿ ಬಹುಮಟ್ಟಿನ ನಿಜಾಂಶವಿದೆಯೆಂದು ಒಪ್ಪಿಕೊಳ್ಳಬೇಕು. "ರಾಜಾ ರಾಷ್ಟ್ರಸ್ಯ ಕಾರಣಂ" ಎಂಬುದಕ್ಕೆ ಇದೇ ಅರ್ಥ. ಈ ಹೇಳಿಕೆಯನ್ನು ಅಂಗೀಕರಿಸಿಕೊಂಡರೇ ರಾಜರ ಆಳಿಕೆಗಳನ್ನು ಹಿಡಿದು ಬರೆದಿರುವ ಚರಿತ್ರೆಗಳ ಲೇಖನ ಕ್ರಮವನ್ನು ಒಪ್ಪಬಹುದು. ಯಾವುದಾದರೊಂದು ಕಾವ್ಯದ ಪ್ರತಿಯೊಂದು ಪ್ರಧಾನ ಘಟನೆಯೂ ಅದರ ನಾಯಕನಿಗೆ ಸಾಕ್ಷಾತ್ತಾಗಿಯೋ ಪರಂಪರೆಯಿಂದಲೋ ಸಂಬಂಧಿಸಿಯೇ ಇರುವಂತೆ, ಯಾವುದಾದರೊಂದು ಚರಿತ್ರಭಾಗದ ಘಟನೆಗಳೂ ಆ ಕಾಲದ ರಾಜನಿಗೆ—ಅಥವಾ ಮಂತ್ರಿ ಮುಂತಾದ ಕೆಲವು ಪ್ರಧಾನಪುರುಷರಿಗೆ—ಸಂಬಂಧಿಸಿಯೇ ಇರುತ್ತವೆ. ಆದ್ದರಿಂದಲೇ ಒಬ್ಬ ಅರಸನ ಕಾಲದಲ್ಲಿ, ಕುಡಿದ ನೀರು ಅಲ್ಲಾಡದಂತಿದ್ದ ರಾಜ್ಯವು ಮತ್ತೊಬ್ಬ ವಿಪರೀತಗುಣದ ಅರಸನ ಕೈಗೆ ಬಂದ ಕೂಡಲೆ ಅಲ್ಲೋಲಕಲ್ಲೋಲವಾಗಿ ದೇಶಕ್ಷೋಭವಾಗಿರುವುದನ್ನು ನೋಡಿದ್ದೇವೆ--ಅಥವಾ ಓದಿದ್ದೇವೆ. ದುಷ್ಟಮೃಗ ಭರಿತವಾದ ಕಾಡಿನಲ್ಲಿ ನೆಲೆಸಿ ತಮ್ಮ ತಪೋಮಹಿಮೆಯಿಂದ ಅಲ್ಲಿ ಶಾಂತಿಯನ್ನು ನೆಲೆಗೊಳಿಸಿ ಅರಣ್ಯವನ್ನು ಉದ್ಯಾನವನವಾಗಿ ಮಾಡುವ ತಪಸ್ವಿಯಂತೆ, ಅವ್ಯವಸ್ಥೆಗೆ ಸಿಕ್ಕಿದ ದೇಶವನ್ನು ರಾಜ್ಯತಂತ್ರ ಶಕ್ತಿಯಿಂದ ಪುನಃ ಕಟ್ಟಿ ದೇಶಭಕ್ತಿಯನ್ನೂ ಸತ್ವವನ್ನೂ ಧರ್ಮವನ್ನೂ ನೆಲೆಗೊಳಿಸಿ ಚಿರಸ್ಥಾಯಿಯಾದ ಕೀರ್ತಿಯನ್ನು ಗಳಿಸಿಕೊಂಡ ಮಹಾಪುರುಷರನ್ನೂ ನೋಡಿದ್ದೇವೆ. ಆದ್ದರಿಂದ ಪ್ರಧಾನಪುರುಷರ ಚರಿತ್ರೆಯೇ ದೇಶದ ಚರಿತ್ರೆಯೆಂದು ಏಕೆ ಹೇಳಬಾರದು? ಈಗ ಯಾರಾದರೂ ತಿಲಕರ, ಗೋಖಲೆಯವರ ಅಥವಾ ಮ. ಗಾಂಧಿಯವರ ಜೀವನಚರಿತ್ರೆಯನ್ನು ಬರೆಯುವುದಕ್ಕೆ ಹೋದರೆ ಈ ಕಾಲದ ಹಿಂದೂ ದೇಶದ ಚರಿ

ತ್ರೆಯ ಮುಖ್ಯಾಂಶಗಳನ್ನೆಲ್ಲಾ ತರದೇ ಬರೆಯುವುದು ಸಾಧ್ಯವೇ? ಎಂಥವನೂ ಹತ್ತರಲ್ಲಿ ಹನ್ನೊಂದಾಗಿ ಹೋಗುವ ಈ ಪ್ರಜಾಪ್ರಾಧಾನ್ಯದ ಕಾಲದಲ್ಲಿಯೇ ಹೀಗಾದರೆ, ರಾಜನು ನಿಜವಾದ ರಾಜನಾಗಿದ್ದು ರಾಜ್ಯಸೂತ್ರಗಳನ್ನೆಲ್ಲಾ ತನ್ನ ಕೈಯಲ್ಲಿಟ್ಟುಕೊಂಡಿದ್ದ ಕಾಲದಲ್ಲಿ ರಾಜನ ಚರಿತ್ರೆಯೇ ದೇಶದ ಚರಿತ್ರೆಯೆಂದು ಹೇಳಿದರೆ ತಪ್ಪಾಗಲಾರದು. ಹೀಗಿರಲು ಆ ಕಾಲದಲ್ಲಿ, (ಕುರುಬನನ್ನು ಮಹಾಕವಿಯಾದ ಕಾಳಿದಾಸನಾಗಿ ಮಾಡಿದಂತೆ) ಅನಾಮಧೇಯರನ್ನು ಮಹಾ ಸತ್ತ್ವಶಾಲಿಗಳಾದ ರಾಜರನ್ನಾಗಿ ಮಾಡಿದ ವಿದ್ಯಾರಣ್ಯಸ್ವಾಮಿಗಳು, ರಾಮದಾಸಸ್ವಾಮಿಗಳು ಇಂಥ ಮಹಾ ಪುರುಷರ ವಿಚಾರದಲ್ಲಿ ಹೇಳುವುದೇನು?

ಜೀವನಚರಿತ್ರೆಯು ದೇಶಚರಿತ್ರೆಯೇ ಆಗದಿದ್ದರೂ ಅದೂ ಒಂದು ವಿಧವಾದ ಚರಿತ್ರೆಯೇ ಆದ್ದರಿಂದ, ಜೀವನಚರಿತ್ರಲೇಖಕರೂ ದೇಶಚರಿತ್ರಲೇಖಕರ ಮಾರ್ಗದಲ್ಲಿಯೇ ಹೋಗಬೇಕು. ಆದರೆ ನಾವು ಪುರಾಣಿಕರು, ಚರಿತ್ರಲೇಖಕರಲ್ಲ; ಚರಿತ್ರಲೇಖನ ವಾಸನೆಯು ನಮಗೆ ಹಿಂದಿನಿಂದ ಬಂದಿಲ್ಲ. ಆದ್ದರಿಂದ ಈಗ ನಮ್ಮಲ್ಲಿ ದೊಡ್ಡದೊಡ್ಡ ಪದವೀಧರರು ಬರೆಯುತ್ತಿರುವ ಚರಿತ್ರೆಗಳೂ ಸರಿಯಾದ ಬಣ್ಣಕ್ಕೆ ಬರುವುದು ಅಪರೂಪ. ಜೀವನ ಚರಿತ್ರೆಗಳ ಪಾಡೂ ಅಷ್ಟೇ ಆಗಿದೆ. ಹಿಂದೆ ಆದದ್ದನ್ನು ತಿಳಿದುಕೊಂಡು ಆ ತಿಳಿವಳಿಕೆಯ ಬೆಳಕಿನಲ್ಲಿ ಈಗ ನಾವು ಮಾಡಬೇಕಾದ ಕಾರ್ಯವನ್ನು ಹೆಚ್ಚು ಪರಿಷ್ಕಾರವಾಗಿ ಮಾಡುತ್ತ ಉತ್ತಮತರವಾಗಿ ಬಾಳುವುದೇ ಚರಿತ್ರವ್ಯಾಸಂಗದ ಉದ್ದೇಶ್ಯ. ಆದ್ದರಿಂದ ಚರಿತ್ರೆಯ ನಿಜವಾದ ಉಪಯೋಗವನ್ನು ಪಡೆಯಬೇಕಾದರೆ ಅದರಲ್ಲಿ ಯಾಥಾರ್ಥ್ಯಕ್ಕೆ ಪ್ರಾಶಸ್ತ್ಯ ಕೊಡಬೇಕು. ಚರಿತ್ರೆಗೆ ಯಾಥಾರ್ಥ್ಯವೇ ಜೀವ. ಆದರೆ ಯಥಾರ್ಥವಾದದ್ದನ್ನು ಗ್ರಹಿಸುವುದು ಕಷ್ಟ. ಪುರಾಣಗಳನ್ನು ಬರೆದವರೂ ಸುಳ್ಳನ್ನು ಬರೆಯುತ್ತೇವೆಂದು ಬರೆದಿಲ್ಲ; ಅದೆಲ್ಲವೂ ನಿಜವೆಂದೇ ಅವರ ಭಾವ. ವೇದದಲ್ಲಿಯಾದರೂ 'ಅರ್ಥವಾದ' ವನ್ನು ಒಪ್ಪಿಕೊಂಡಾರು, ಪುರಾಣಗಳಲ್ಲಿ ಅದು ಸಲ್ಲದು. ನಿಜವಾದ ಸಂಗತಿಯೇನೆಂದರೆ, ವಿವರ್ಣವಾದ ಯಾಥಾರ್ಥ್ಯದ ನಿಜಸ್ವರೂಪವನ್ನು ನಮ್ಮ ಸವರ್ಣದೃಷ್ಟಿಯಿಂದ ಅರಿಯುವುದು ಅಸಾಧ್ಯ. ಪ್ರತಿಯೊಬ್ಬರೂ ಕಣ್ಣಿನೊಳಗೆ ಒಂದೊಂದು ಬಣ್ಣದ ಗಾಜನ್ನು ಇಟ್ಟುಕೊಂಡೇ ಇರುತ್ತೇವೆ. ಒಬ್ಬನಿಗೆ ಹಸುರಾಗಿ ಕಂಡದ್ದು ಮತ್ತೊಬ್ಬನಿಗೆ ಹಳದಿಯಾಗಿ ಕಂಡೀತು; ಅಷ್ಟೇಯೆ. ಅದರ ನಿಜವಾದ ಬಿಳಿಯ ಬಣ್ಣವನ್ನು ನೋಡಬೇಕಾದರೆ ಆ ಗಾಜಿನ ಚೂರನ್ನು ಕಣ್ಣಿನಿಂದ ತೆಗೆದಿಡಬೇಕು. ಇದು ಒಂದು ವಿಧವಾದ ಬ್ರಹ್ಮವಿದ್ಯೆ; ಎಲ್ಲರಿಗೂ ಸಾಧ್ಯವಾದದ್ದಲ್ಲ. ಕೃಷ್ಣನು "ಸ್ತ್ರೀಯರಿಗೆ ಕಾಮನಂತೆಯೂ, ಅರ್ಥಿಗಳಿಗೆ ಕಲ್ಪವೃಕ್ಷದಂತೆಯೂ ಶತ್ರುಗಳಿಗೆ ಯಮನಂತೆಯೂ ಕಂಡನು"

ಎಂದು ಒಬ್ಬ ಆಲಂಕಾರಿಕನು ಉಲ್ಲೇಖಿಸಿದ್ದಾನೆ. ಚರಿತ್ರೆಯನ್ನು ಬರೆಯುವುದಕ್ಕೆ ಹೋದರೆ ಆಗುವುದೂ ಹೀಗೆಯೇ. ಚರಿತ್ರೆಯ ಮಾತಿರಲಿ, ಮೈಸೂರು ನವರಾತ್ರಿಯ ನೋಟದಂಥ ಒಂದು ಸಣ್ಣ ಸಂಗತಿಯನ್ನು ತೆಗೆದುಕೊಳ್ಳೋಣ. ಅದರ ಅನುಭವವು ಸರ್ಕಾರದ ಒಬ್ಬ ದೊಡ್ಡ ಅಧಿಕಾರಿ, ಪೊಲೀಸಿನವನು, ಪರಸ್ಥಳದಿಂದ ಬಂದ ನೋಟಕ, ಸ್ಥಳಿಕನಾದ ಒಬ್ಬ ಬಡ ಸಂಸಾರಿ ಇವರೆಲ್ಲರಿಗೂ ಒಂದೇ ವಿಧವಾಗಿರುವುದೇ? ಹೀಗೆಯೇ ನಾನಾ ಮುಖವಾದ ಒಂದು ದೇಶದ ಚರಿತ್ರೆಯೇ ಆಗಲಿ ಒಬ್ಬ ಮಹಾಪುರುಷನ ಜೀವನವೇ ಆಗಲಿ ಲೇಖಕನ ಯೋಗ್ಯತಾಪಾತ್ರೆಯಲ್ಲಿ ಹಿಡಿಸುವಷ್ಟು, ಮತ್ತು ಅದರ ಗುಣವನ್ನು ಅನುಸರಿಸಿ, ಸಿಕ್ಕುತ್ತದೆಯೇ ಹೊರತು ಅಖಂಡವಾಗಿ ಸಿಕ್ಕುವುದು ಅಸಾಧ್ಯ. ಅದರಲ್ಲಿಯೂ ಜೀವನಚರಿತ್ರೆಗೆ ನಾಯಕನು ಧಾರ್ಮಿಕ ಪುರುಷನಾದರೆ, ಅಂಥ ಚರಿತ್ರೆಯನ್ನು ಬರೆಯುವಷ್ಟು ಕಷ್ಟವಾದ ಕೆಲಸ ಮತ್ತೊಂದಿರುವುದಿಲ್ಲ. ಧರ್ಮವು ಆಂತರಿಕವಾದದ್ದು, ಬಾಹ್ಯವಾದದ್ದಲ್ಲ; ಆದರೆ "ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ" ಸೃಷ್ಟಿಕರ್ತನು ಹೊರಗನ್ನು ನೋಡುವುದಕ್ಕೆ ಶಕ್ತಿಕೊಟ್ಟಂತೆ ಒಳಗನ್ನು ನೋಡಲು ಕೊಡಲಿಲ್ಲ. ಅಲ್ಲದೆ, ನಮಗೆ ಇಲ್ಲದ್ದನ್ನೂ ನಾವು ಮಾಡಲಾರದ್ದನ್ನೂ ದೇವತೆಗಳಲ್ಲಿಯೂ ಅವರ ಆವಾಸಸ್ಥಾನಗಳಲ್ಲಿಯೂ ಆರೋಪಿಸುವಂತೆ, ನಮಗಿಂತ ದೊಡ್ಡವರಲ್ಲಿಯೂ ಆರೋಪಿಸುವುದುಂಟು; ಅವುಗಳು ಇದ್ದರೆ ಅವುಗಳನ್ನು ಗುಣಾಕಾರ ಮಾಡುವುದುಂಟು. ಆದ್ದರಿಂದಲೇ ಧಾರ್ಮಿಕ ಪುರುಷರ ಚರಿತ್ರೆಯನ್ನು ಬರೆಯುವುದಕ್ಕೆ ಹೋದರೆ ಅವುಗಳಲ್ಲಿ ಅದ್ಭುತಕಾರ್ಯಗಳು ಬರದೆ ಇರುವುದಿಲ್ಲ; ಬುದ್ಧ ಕ್ರಿಸ್ತ ಮುಂತಾದವರನ್ನು ಮೊದಲು ಮಾಡಿಕೊಂಡು ಈಗಿನ ಮಠಾಧಿಪತಿಗಳವರೆಗೆ ಅದ್ಭುತಕಾರ್ಯಗಳನ್ನು ಮಾಡದಿರುವವರಾರು? ಅದ್ಭುತಕಾರ್ಯಗಳೂ ಲೀಲೆಗಳೂ ಪವಾಡಗಳೂ ಅವರ ಜೀವನದೊಳಗಿನ ಹೂರಣವಾಗಿ ಹೋಗಿವೆ—ಅವರ ಚರಿತ್ರೆಯಂತೂ ಈ ಭಾವವನ್ನು ಕೊಡುತ್ತದೆ. ಮಹಾಪುರುಷರ ಜೀವನದಲ್ಲ ಅದ್ಭುತಗಳು ನಡೆಯಬಹುದು. ಆದರೆ ಅವುಗಳನ್ನೇ ಮುಂದುಮಾಡುವುದರಿಂದ ಮನುಷ್ಯಸಾಮಾನ್ಯನ ವ್ಯವಹಾರಕ್ಕೆ ಏನು ಪ್ರಯೋಜನ? 'ಅವರಂತೂ ದೊಡ್ಡವರು, ಹಾಗೆ ಮಾಡಿದರು ಎಂದರೆ, ನಾವೂ ಮಾಡುವುದು ಸಾಧ್ಯವೇ?'—ಎಂದು ಮನಸ್ಸನ್ನು ಜೋಲುಬಿಡುವುದಾಗುತ್ತದೆಯೇ ಹೊರತು ಆ ತೇಜಸ್ಸಿನಿಂದ ನಮ್ಮ ಹಣತೆಯನ್ನು ಹತ್ತಿಸಿಕೊಂಡು ನಮ್ಮ ಗುಡಿಸಿಲನ್ನು ಬೆಳಕು ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅಲ್ಲದೆ, ಅದ್ಭುತಕಾರ್ಯಗಳು ನಾಟಕಶಾಲೆಯ ಹೊರಗಡೆಯಲ್ಲಿ ನಡೆಯುತ್ತಿರುವ ವಾದ್ಯಗಳ ಹಾಗೆ. ಅವುಗಳ

ಮುಂದೇ ಪದ್ಮಾಸನ ಹಾಕಿಕೊಂಡು ಪರಿಷ್ಕಾರವಾಗಿ ಕುಳಿತುಬಿಡುವವನಿಗೆ ನಾಟಕದ ನೋಟವೇ ತಪ್ಪಿಹೋಗುತ್ತದೆ.

"ರಾಮದಾಸಸ್ವಾಮಿಗಳ ಚರಿತ್ರೆ" ಯೂ ಸ್ವಲ್ಪ ಈ ಜಾತಿಯ ಗ್ರಂಥವಾಗಿದೆ; ಆದರೂ ಇದರ ಹಿಂದೆ ಪ್ರಕಟವಾದ 'ಶೇಷಾಚಲಸಾಧುಗಳ ಚರಿತ್ರೆ' ಗಿಂತ ಉತ್ತಮ. ಈ ಸಾಧುಗಳ ಸತ್ಸಂಗವು ದೊರೆತವರಿಂದ ಅವರ ಜೀವನವಿಚಾರಗಳನ್ನು ಕೇಳಿಬಲ್ಲೆವು. ಆದರೆ ಯಾವ ಘಟನೆಗಳಿಂದ ಅವರಲ್ಲಿ ನಮಗೆ ಪೂಜ್ಯತೆಯುಂಟಾಗಿದೆಯೋ ಅವು ಆ ಚರಿತ್ರೆಯಲ್ಲಿ ಅದೃಶ್ಯವಾಗಿ ಅಥವಾ ಮೂಲೆಗೆ ಬಿದ್ದು ಮೊದಲಿಂದ ತುದಿಯವರೆಗೆ ಬರಿಯ ಅದ್ಭುತಗಳೇ ತುಂಬಿ ಹೋಗಿವೆ. ಈ ಗ್ರಂಥಗಳು ಜನರಂಜಕವಾಗಿರುವುದೇನೋ ನಿಜ; ಆದರೆ ವಸ್ತುತಃ ಈ ಕ್ರಮದಿಂದ ಯಾಥಾರ್ಥ್ಯಕ್ಕೆ ಎಷ್ಟುಮಟ್ಟಿಗೆ ಗೌರವಕೊಟ್ಟಂತಾಯಿತು? ವ್ಯಕ್ತಿಜ್ಞಾನವು ಏಕಮುಖವಾಗಿ ಆದಂತಾಯಿತೇ ಸರ್ವತೋಮುಖವಾಗಿಯೂ ಆಯಿತೇ? ರಾಮದಾಸರು ರಾಮಲಕ್ಷ್ಮಣರೊಡನೆ ಮಾತನಾಡಿದರೋ ಬಿಟ್ಟರೋ, ಅವರ ಜೊತೆಯಲ್ಲಿ ಊಟಮಾಡಿದರೋ ಬಿಟ್ಟರೋ, ಅವರು ಆಂಜನೇಯನ ಅವತಾರ ಹೌದೋ ಅಲ್ಲವೋ ಇದರ ವಿಸ್ತರದಿಂದ ಏನು ಫಲ? ಜನಗಳಲ್ಲಿ ಭಕ್ತಿಯುಂಟಾಗಬಹುದೆಂದರೆ ಇದೇನು ಹರಿಕಥೆಯೇ? ಇಂಥ ಮರಳಿನಮೇಲೆ ಕಟ್ಟಿದ ಭಕ್ತಿಮಂದಿರಕ್ಕೆ, ಅದರಲ್ಲಿಯೂ ಈಗಿನಕಾಲದಲ್ಲಿ, ಎಂದಿದ್ದರೂ ಅಪಾಯವೇ! ಅವರ ಜೀವನದಲ್ಲಿ ದೃಢವಾದ ತಳಪಾಯಕ್ಕೆ ಅನುಕೂಲವಾದ ಬೇರೆ ಸಾಮಗ್ರಿಗಳು ಸಿಕ್ಕದಿದ್ದರಂತೂ ಸರಿ; ಅವು ಯಥೇಚ್ಛವಾಗಿ ಸಿಕ್ಕುವಾಗಲೂ ಕಿಂಕೃತಿಯೇಕೆ? ಶ್ರೀಕೃಷ್ಣನು ಅರ್ಜುನನನ್ನೂ, ವಿದ್ಯಾರಣ್ಯರು ಹರಿಹರನನ್ನೂ ಉದ್ದೀಪನಗೊಳಿಸಿ ಅವರು ಕರ್ಮದಲ್ಲಿ ತೊಡಗುವಂತೆ ಮಾಡಿ ಅವರಿಗೆ ಸಾರಥ್ಯ ಮಾಡಿದಂತೆ ರಾಮದಾಸರೂ ಶಿವಾಜಿಯನ್ನು ಕರ್ಮಪರನನ್ನಾಗಿಸಿ ಅವನಿಗೆ ಸಾರಥ್ಯಮಾಡಿದರು. ನಿಜವಾದ—ಎಂದರೆ ಸ್ವಾರ್ಥತ್ಯಾಗಪೂರ್ವಕವಾದ—ಕರ್ಮವೂ ನಿಜವಾದ ಭಕ್ತಿಯೂ ಎರಡೂ ಫಲದಲ್ಲಿ ಒಂದೇ ಆಗಿ ಪರಿಣಮಿಸುವುವು. ಆದರೂ ಈಗಿನ ಕಾಲಕ್ಕೆ ಭಕ್ತಿಬೋಧೆಯು ಹರಿಕಥೆಗಳಿಗಿರಲಿ; ಮಹಾಪುರುಷರ ಜೀವನಚರಿತ್ರೆಗಳಿಂದ ಕರ್ಮೋದ್ದೀಪನವಾಗಬೇಕು. ರಾಮದಾಸರ ಮತ್ತು ವಿದ್ಯಾರಣ್ಯರ ಚರಿತ್ರೆಯಿಂದಲೂ ಇದು ಆಗದಿದ್ದರೆ ಏನು ಗತಿ?

ಮ|| ರಾಮಚಂದ್ರ ತ್ರ್ಯಂಬಕ ಕರ್ಪೂರರವರು ಬರೆದಿರುವ ಗ್ರಂಥವು ತಕ್ಕಮಟ್ಟಿಗೆ ದೊಡ್ಡದಾಗಿದೆ; ಬಹು ವಿಷಯಗಳಿಂದ ತುಂಬಿದೆ. ಆದರೆ ಅವರು ಯಾವ

ಯಾವ ಆಧಾರಗಳ ಮೇಲೆ ಈ ಗ್ರಂಥವನ್ನು ಬರೆದಿದ್ದಾರೆಂಬುದನ್ನು ತಿಳಿಸಿಲ್ಲ. ಚರಿತ್ರ ಲೇಖನದಲ್ಲಿ ಆಧಾರಗ್ರಂಥಗಳು ಯೋಗ್ಯವಾಗಿರತಕ್ಕದ್ದು ಬಹು ಮುಖ್ಯವಾದ ಸಂಗತಿ. ಅವುಗಳ ಗುಣದೋಷಗಳ ಮೇಲೆ ಚರಿತ್ರೆಯ ಗುಣದೋಷಗಳೂ ಹೋಗುತ್ತವೆ.

ಶೈಲಿಯು ಸುಲಭವಾಗಿದೆ; ಭಾಷೆಯಲ್ಲಿ ಧಾರವಾಡದವರಿಗಾಗಲಿ ಮೈಸೂರು ಮಂಗಳೂರು ಕಡೆಯವರಿಗಾಗಲಿ ವಿಶೇಷ ವೈಲಕ್ಷಣ್ಯಗಳಿರುವಂತೆ ಕಾಣುವುದಿಲ್ಲ. 'ಸದ್ಬೋಧಚಂದ್ರಿಕೆ' 'ಸದ್ಗುರು'ಗಳ ಶೈಲಿಯೇ ಹೀಗೆಂದು ಹೇಳಬಹುದು.

ಎ. ಆರ್. ಕೃ.

ಶ್ರೀ ರಾಮಕೃಷ್ಣವಚನಾಮೃತ. (ಪ್ರಥಮ ಭಾಗ.) ಬೆಂಗಳೂರು ಬಸವನಗುಡಿಯಲ್ಲಿರುವ ಶ್ರೀ ರಾಮಕೃಷ್ಣಾಶ್ರಮದಿಂದ ಪ್ರಕಟಿಸಲ್ಪಟ್ಟದ್ದು. ಡೆಮ್ಮಿ ಪುಟಗಳು ೨೭೨. ಬೆಲೆ ರೂ. ೧—೮—೦.

ಈಗಿನ ಕಾಲದಲ್ಲಿ ಸ್ವಾಮಿ ವಿವೇಕಾನಂದರ ಹೆಸರನ್ನು ಕೇಳದಿರುವ ಭಾರತೀಯನು ಯಾರೂ ಇರಲಾರನು. ಪ್ರಪಂಚದಲ್ಲೆಲ್ಲಾ ಸಂಚಾರಮಾಡಿ ತಮ್ಮ ಉದಾಹರಣೆಯಿಂದಲೂ ಜ್ಞಾನದಿಂದಲೂ ವಾಗ್ಧೋರಣೆಯಿಂದಲೂ ಭರತಖಂಡಕ್ಕೇ ಗೌರವವನ್ನು ತಂದುಕೊಟ್ಟವರಲ್ಲಿ ಅವರು ಮುಖ್ಯರು. ಆದರೆ ಇಂಥ ವಿವೇಕಾನಂದರನ್ನು ವಿವೇಕಾನಂದರನ್ನಾಗಿ ಮಾಡಿದವರು ಅವರ ಗುರುಗಳಾದ ಶ್ರೀ ರಾಮಕೃಷ್ಣಪರಮಹಂಸರು. ಶ್ರೀ ವಿವೇಕಾನಂದರು ಕೇವಲ ವ್ಯಾಖ್ಯಾನ; ಆ ವ್ಯಾಖ್ಯಾನಕ್ಕೆ ಮೂಲಸೂತ್ರ ಶ್ರೀ ರಾಮಕೃಷ್ಣರು. ಸರ್ವಧರ್ಮಗಳೂ ಸತ್ಯವೆಂದೂ ಸರ್ವಮತಗಳ ಉದ್ದೇಶವೂ ಒಂದೇ ಎಂದೂ ಅವರು ಸ್ವಾನುಭವದಿಂದ ಲೋಕಕ್ಕೆ ಸಾರಿ "ಸರ್ವಧರ್ಮಸಮನ್ವಯ" ವನ್ನು ಸ್ಥಾಪಿಸಿದರು. ಧರ್ಮದ ಹೆಸರಿನಲ್ಲಿ ನಡೆಯುವ ಅನಾಹುತಗಳನ್ನು ಯೋಚಿಸಿದರೆ ಈ ಕಾರ್ಯವು ಎಷ್ಟು ಲೋಕೋಪಕಾರಕವೆಂದು ಹೇಳಬೇಕಾಗಿಲ್ಲ. ಇವರ ಚರಿತ್ರೆಯನ್ನು ಬಂಗಾಳಿಯಲ್ಲಿ ಬರೆದಿರುವವರೊಳಗೆ ಮಹೇಂದ್ರನಾಥಗುಪ್ತರು ಒಬ್ಬರು. ಇವರು ಮೂಲಗ್ರಂಥವನ್ನು "ಶ್ರೀ ರಾಮಕೃಷ್ಣಚರಿತಾಮೃತ" ಎಂಬ ಹೆಸರಿನಲ್ಲಿ ಐದು ಭಾಗಗಳಾಗಿ ಬರೆದು ಪ್ರಕಟಿಸಿದ್ದಾರೆ. ಈಗ ಅವಲೋಕನಕ್ಕೆ ವಿಷಯವಾಗಿರುವ ಗ್ರಂಥವು ಅವುಗಳಲ್ಲಿ ಮೊದಲನೆಯ ಭಾಗದ ಕನ್ನಡ ಭಾಷಾಂತರ. ಮ|| ಗಳಾದ ಎಸ್. ಜಿ. ಗೋವಿಂದರಾಜ ಅಯ್ಯಂಗಾರ್ಯರೂ, ವಿದ್ವಾನ್ ಎನ್. ಎಸ್. ತಿರುನಾರಣಯ್ಯಂಗಾರ್ಯರೂ ಈ ಭಾಷಾಂತರವನ್ನು ಮಾಡಿದವರೆಂದು 'ಅವತಾರಿಕೆ' ಯಿಂದ ತಿಳಿದುಬರುತ್ತದೆ. ಭಾಷಾಂತರದ ಭಾಷೆಯೂ ಶೈಲಿಯೂ ಚೆನ್ನಾಗಿವೆ.

ಎ. ಆರ್, ಕೃ.

ಸ್ಕೌಟುಗಳ ಕನ್ನಡ ಕೈಪಿಡಿ (ಸಚಿತ್ರ). ಮ|| ಎಂ. ಆರ್. ಶ್ರೀನಿವಾಸಮೂರ್ತಿ ಬಿ.ಎ., ಅವರಿಂದ ರಚಿತವಾಗಿ ಮೈಸೂರು ಬಾಯ್‌ಸ್ಕೌಟ್ ಮಂಡಲಿಯಿಂದ ಪ್ರಕಟಿಸಲ್ಪಟ್ಟದ್ದು. ಕ್ರೌ‌ನ್ ಪುಟಗಳು ೨೨೭, ಬೆಲೆ ೮ ಆಣೆ.

ಸ್ಕೌಟುಪದ್ಧತಿಯ ವಿಚಾರವಾಗಿ ನಮ್ಮ ಜನರಲ್ಲಿ ಅನೇಕರಿಗೆ ಒಂದುವಿಧವಾದ ದುರ್ಭಾವವಿದೆ. ಇದರಿಂದ ಉಪಯೋಗವಿಲ್ಲವೆಂದು ಅವರೂ ಇದನ್ನು ಉಪಯೋಗಿಸಿಕೊಂಡಿಲ್ಲವೆಂದು ಸ್ಕೌಟು ಪಕ್ಷಪಾತಿಗಳೂ ಹೇಳುತ್ತಿರುವರು. ಈ ಕಾಲದಲ್ಲಿ ಸ್ಕೌಟಿನ ಸ್ವರೂಪವನ್ನು ವಿವರಿಸಿ ಈ ಪುಸ್ತಕವನ್ನು ಪ್ರಕಟಿಸಿದ್ದು ಒಳ್ಳೆಯ ಕೆಲಸವಾಯಿತು.

ಈ ಗ್ರಂಥವು ಮುಖ್ಯವಾಗಿ ಬೇಡನ್ ಪೊವೆಲ್‌ಸಾಹೇಬರ ಗ್ರಂಥದ ಆಧಾರದಮೇಲೆ ಬರೆದದ್ದು. ಮ|| ಶ್ರೀನಿವಾಸಮೂರ್ತಿಗಳಿಗೆ ಕನ್ನಡವನ್ನು ಬರೆದುಬರೆದು ಕೈ ಪಳಗಿರುವುದರಿಂದ ನಮಗೆ ಅಪರಿಚಿತವಾದ ಅನೇಕ ಸಂಗತಿಗಳು ಇದರಲ್ಲಿ ಅಚ್ಚ ಕನ್ನಡರೂಪವನ್ನು ತಾಳಿ ನಿಂತಿವೆ. ಆದರೂ ಇದರಲ್ಲಿ ಇಂಗ್ಲಿಷ್ ಪದಗಳಿಗೂ ಹೆಸರುಗಳಿಗೂ ಏನೂ ಕಡಿಮೆಯಿಲ್ಲ. ನಮ್ಮದೇಶದ ಹುಡುಗರಿಗೂ ಜನರಿಗೂ ಮನಸ್ಸಿಗೆ ಅಂಟುವಂಥ ಅನೇಕ ದೃಷ್ಟಾಂತಗಳೂ ಕಥೆಗಳೂ ಮಧ್ಯೆಮಧ್ಯೆ ಸೇರಿಸಲ್ಪಟ್ಟಿರುವುದರಿಂದ ಇದು ಸ್ಕೌಟು ಹುಡುಗರಿಗೆ ಎಷ್ಟು ಉತ್ತೇಜಕವೂ ಉಪಯುಕ್ತವೂ ಆಗುವುದೋ ಇತರರಿಗೆ ಅಷ್ಟು ರಸವತ್ತೂ ಆಗಬಹುದು. ಇದನ್ನು ಓದುವುದರಿಂದ ಕನ್ನಡಿಗರಿಗೆ ಸ್ಕೌಟಿನಲ್ಲಿರುವ ದುರ್ಭಾವವೂ ಅನಾದರವೂ ಬಹುಮಟ್ಟಿಗೆ ಕಮ್ಮಿಯಾಗಬಹುದೆಂದು ಭಾವಿಸುತ್ತೇವೆ. ಹಿಂದೂದೇಶದ ಮಿಕ್ಕ ಯಾವ ದೇಶಭಾಷೆಯಲ್ಲಿಯೂ ಸ್ಕೌಟುವಿಷಯವನ್ನು ಇಷ್ಟು ವಿಸ್ತಾರವಾಗಿ ಪ್ರತಿಪಾದಿಸುವ ಗ್ರಂಥವಿಲ್ಲವೆಂದು ಹೇಳುತ್ತಾರೆ.

ನವಯುಗ—ಮಹಾವಿದ್ವಾನ್ ಕೆ. ಆರ್. ಚಕ್ರವರ್ತಿ ಸರಳಕವಿಸೂರಿ ವಿದ್ಯಾವಿಭೂಷಣ ಇವರಿಂದ ಬರೆಯಲ್ಪಟ್ಟದ್ದು. ಕ್ರೌನ್ ಪುಟಗಳು ೫೯.

ಇದು ಈಗ ಮೈಸೂರುಸಂಸ್ಥಾನದ ದಿವಾನ್‌ಪದವಿಯನ್ನು ಅಲಂಕರಿಸಿರುವ ಸರ್ ಎ. ಆರ್. ಬಾನರ್ಜಿಯವರ ತಂದೆಗಳಾದ ಶ್ರೀಯುತ ಶಶಿಪಾದ ಬಾನರ್ಜಿಯವರ (೧೮೪೦-೧೯೨೪) ಚರಿತ್ರೆಯಾಗಿದೆ. ಇಂಗ್ಲೀಷ್ ಮತ್ತು ಬಂಗಾಳಿ ಭಾಷೆಯಲ್ಲಿರುವ ಕೆಲವು ಗ್ರಂಥಗಳ ಆಧಾರದಮೇಲೆ ಈ ಗ್ರಂಥವು ರಚಿತವಾಗಿದೆಯೆಂದೂ ‘‘ ನಮ್ಮ ಈಗಿನಕಾಲವು ನವಯುಗವಾಗಿ ಪರಿಣಮಿಸಲೆಂದು ಶಶಿಪಾದ ಬಾನರ್ಜಿಯವರು ಸಾಹಸಪಟ್ಟು ತಮ್ಮ ಇಷ್ಟಾರ್ಥವನ್ನು ಸಾಧಿಸುತ್ತಿದ್ದುದರಿಂದ ಈ ಗ್ರಂ

ಥಕ್ಕೆ ನವಯುಗ'' ವೆಂದು ಹೆಸರಿಟ್ಟಂತೆಯೂ ಪೀಠಿಕೆಯಿಂದ ತಿಳಿಯಬರುತ್ತದೆ. ದೇಶಸೇವೆ ಪರೋಪಕಾರ ಸಮಾಜಸಂಸ್ಕರಣ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದು ಶ್ರೀ ಶಶಿಪಾದ ಬಾನರ್ಜಿಯವರು "ಸೇವಾವ್ರತ" "ಬ್ರಹ್ಮರ್ಷಿ" ಎಂಬ ಬಿರುದುಗಳನ್ನು ಪಡೆದರು. ಅವರು ದಿವಂಗತರಾದ ಇಷ್ಟು ಸ್ವಲ್ಪಕಾಲದಲ್ಲಿಯೇ ನಾನಾಭಾಷೆಗಳಲ್ಲಿ ಅವರ ಚರಿತ್ರೆಗಳು ಬರೆಯಲ್ಪಡುತ್ತಿರುವುದೇ ಅವರ ಮಹತ್ವಕ್ಕೆ ನಿದರ್ಶಕವಾಗಿದೆ.

ಪುಸ್ತಕದ ತುಂಬ ಒಳ್ಳೆಯ ಹಾಫ್‌ಟೋನ್ ಚಿತ್ರಗಳಿವೆ. ಕಾಗದ ಮುದ್ರಣ ಎಲ್ಲವೂ ಮುದ್ದಾಗಿವೆ.

ಸ್ವರ್ಗಾರೋಹಣಪರ್ವ—(ತಿಮ್ಮಣಕವಿವಿರಚಿತ ಕನ್ನಡ ಮಹಾಭಾರತದ ಒಂದು ಭಾಗ.) ಕನ್ನಡ ಷಟ್ಪದೀಗ್ರಂಥಮಾಲೆ, ಪುಷ್ಪ ೨. ಪರಿಶೋಧಕರು ಮತ್ತು ಪ್ರಕಾಶಕರು. ಮ|| ಶೇಷಾಚಾರ್ಯ ಹೊಂಬಾಳಿ, ಗದಗ. ಡೆಮ್ಮಿ ಪುಟಗಳು ೨೦, ಬೆಲೆ ೨ ಆಣೆ.

ವ ಸ್ತು ಕೋ ೯ ಶ

ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದು, ಪ್ರಬುದ್ಧ ಕರ್ಣಾಟಕದ ಪೋಷಕರೂ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಗಣಿತಶಾಸ್ತ್ರೋಪನ್ಯಾಸಕರೂ ಆಗಿರುವ ಮ|| ಕೆ. ವಿ. ಶ್ರೀಕಂಠೇಶ್ವರನ್, ಬಿ. ಎಸ್‌ಸಿ. ಎಲ್‌ಎಲ್. ಬಿ. ಯವರು ಈ ಸಾರಿ ಎಫ್. ಸಿ. ಎಸ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೊದಲನೆಯವರಾಗಿ ನಿಂತರೆಂದು ತಿಳಿಸಲು ಸಂತೋಷಪಡುತ್ತೇವೆ. ಹೀಗೆ ವರ್ಷೇವರ್ಷೇ ದೊಡ್ಡದೊಡ್ಡ ಪರೀಕ್ಷೆಗಳಲ್ಲಿ ನಮ್ಮವರು ಜಯಶೀಲರಾಗಿ ಅಗ್ರಸ್ಥಾನವನ್ನು ಪಡೆಯುತ್ತಿರುವರೆಂಬುದು ಅವರಿಗೂ ಅವರ ಇಷ್ಟಮಿತ್ರರಿಗೂ ಆನಂದಜನಕವೆಂಬ ಮಾತು ಹಾಗಿರಲಿ; ಇದು ನಮ್ಮ ವಿಶ್ವವಿದ್ಯಾಲಯಕ್ಕೂ ಸಂಸ್ಥಾನಕ್ಕೂ ಗೌರವಾವಹವೆಂದು ಧಾರಾಳವಾಗಿ ಹೇಳಬಹುದು. ಸಂಘವು ಈ ಮೂಲಕ ಮ|| ಶ್ರೀಕಂಠೇಶ್ವರನ್‌ರವರನ್ನು ಅಭಿನಂದಿಸಿ ಅವರು ಉತ್ತರೋತ್ತರಾಭಿವೃದ್ಧಿಯನ್ನೂ ಆಯುರಾರೋಗ್ಯೈಶ್ವರ್ಯಗಳನ್ನೂ ಪಡೆಯಲೆಂದು ಭಗವಂತನನ್ನು ಪ್ರಾರ್ಥಿಸುವುದು. (ಪೋಷಕರು ಪುಷ್ಟರಾದಷ್ಟೂ ಪೋಷ್ಯವರ್ಗಕ್ಕೂ ಪುಷ್ಟಿಯಾಗಿಯೇ ಆಗುವುದು !)

ಅಭಿನಂದನ.

ವಿತರಣೆಯಾಗಿ ನಡೆದ ಸಮಾರಾಧನೆಯ ಊಟಕ್ಕೆ ಹೋಗಿಬಂದವರನ್ನು 'ಅಲ್ಲಿ ಅಡಿಗೆಯೇನು ?' ಎಂದು ಕೇಳಿದರೆ ಅವರು ಸಾಮಾನ್ಯವಾಗಿ ನಿತ್ಯಕಟ್ಟಲೆಯಲ್ಲಿ ಕಂಡುಬರಬಹುದಾದ ಪರಿಕರಗಳನ್ನು ಬಿಟ್ಟು ದೊಡ್ಡದೊಡ್ಡ ಭಕ್ಷ್ಯಗಳನ್ನು ಮಾತ್ರ ಹೇಳಿಬಿಡುವರು. ಹಾಗೇ ಈ ವರ್ಷ ಸಂಘದಲ್ಲಿ ನಡೆದ ಕಾರ್ಯಗಳನ್ನು ತಿಳಿಸುವುದಕ್ಕೆ ಹೋದರೂ, 'ಮುದ್ದಣ' 'ಜ. ವಾಸುದೇವಯ್ಯನವರು' ಎಂದು ಎರಡು ಹೆಸರು ಹೇಳಿ ಮುಗಿಸಿಬಿಡೋಣವೆನ್ನಿಸುವುದು. ಏಕೆಂದರೆ, ಸಂಘದಲ್ಲಿ ಎಂದಿನಂತೆ ನಡೆಯುವ ಉಪನ್ಯಾಸಗಳೇನು ಚರ್ಚೆಗಳೇನು ಕಾವ್ಯಪಠನಗಳೇನು ಸ್ಪರ್ಧೆಗಳೇನು ನಡೆದದ್ದೂ ನಡೆದದ್ದೇ! ಅವಕ್ಕೇನು ಕೊರತೆ ಇಲ್ಲ. ಆದರೆ ಇವೆಲ್ಲಕ್ಕಿಂತ, ಕಣ್ಣು ಕಿವಿ ಬಾಯಿಗಳಲ್ಲಿ ಹತ್ತಿಕೊಂಡಿರುವುವು ಎರಡೇ. ಮೊದಲನೆಯದು—ವರ್ಷಾದಿಯಲ್ಲಿ, ಅಷ್ಟೇಕೆ

ಕರ್ಣಾಟಕ ಸಂಘದ ಕಾರ್ಯಗಳು.

ಈ ವರ್ಷದ ಉದ್ದಕ್ಕೂ, ನಮ್ಮ ಪಾಠಕರಿಗೆ ತಲೆ ಚಿಟ್ಟುಹಿಡಿದು ಹೋಗುವವರೆಗೆ, ಮುದ್ದಣನ ವಿಚಾರವನ್ನು ಸಂಗ್ರಹಿಸಿ ಪ್ರಕಟಿಸಿದ್ದು; ಎರಡನೆಯದು ವರ್ಷಾಂತ್ಯದಲ್ಲಿ ಮ|| ಚ. ವಾಸುದೇವಯ್ಯನವರಿಗೆ ವಿಜ್ಞಾಪನಪತ್ರಿಕೆಯನ್ನು ಸಮರ್ಪಿಸಿದ್ದು. ಈ ಆಚಾರ್ಯಪೂಜಾಪ್ರಕರಣವು ಒಂದು ಅಪೂರ್ವ ಸಂತೋಷ ಸಮಯವನ್ನು ಒದಗಿಸಿತು. ಅಂದು ಬ್ರಿಟಿಷ್ ಸರ್ಕಾರದ ಶಾಸನಸಂಶೋಧಕರಾದ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು ಅಗ್ರಾಸನಾಧಿಪತ್ಯವನ್ನು ವಹಿಸಿದರು. ಅವರವರಿಗೆ ಗುರುಶಿಷ್ಯಭಾವ. ಅದನ್ನು ನೋಡಿದರೆ, ನಾರದರನ್ನು ಕೃಷ್ಣನು ಪೂಜೆಮಾಡಿದನೆಂದು ಓದುತ್ತೇವಲ್ಲಾ ಅದು ಜ್ಞಾಪಕಕ್ಕೆ ಬರುತ್ತಿತ್ತು. ಮ|| ಶಾಸ್ತ್ರಿಗಳು ಪ್ರಕೃತೋಚಿತವಾಗಿ ಹೇಳಬೇಕಾದ್ದನ್ನು ಸ್ವಲ್ಪದಲ್ಲಿ ಹೇಳಿದರೂ, ಕೈತುಂಬ ಮಾತನಾಡಿಬಿಟ್ಟರು. ಕೆಲವರ ಭಾಷಣಗಳೂ ಸಂಗೀತವೂ ಆರಂಭವಾದರೆ ಆಗ ಮಹಾಜನಗಳನೇಕರು ಅದೇ ಸಮಯವೆಂದು ಎದ್ದುಹೋಗಿ ಅದು ಮುಗಿಯುವ ತನಕ ತಮ್ಮ ಕೆಲಸವೇನಾದರೂ ಇದ್ದರೆ ಮಾಡಿಕೊಂಡೋ (ಒಂದು ನಿದ್ದೆಹೋಗಿಯೋ ?) ಬರುವುದುಂಟು. ಆದರೆ ರಾವ್‌ಬಹದ್ದೂರರವರು ಈ ಆಕ್ಷೇಪಣೆಗೆ ಗುರಿಯಾಗಲಿಲ್ಲ. ಅನಂತರ ನಡೆದ ವಿದ್ವಾನ್ ರಾ|| ಅನಂತಕೃಷ್ಣಶರ್ಮರವರ ಸಂಗೀತವೋ! ಮ|| ಶರ್ಮರವರು ತೆಲುಗು ಸಂಸ್ಕೃತಗಳಲ್ಲಿ ವಿದ್ವಾಂಸರು, ಕವಿಗಳು, ವಿಮರ್ಶಕರು. ಇದರ ಜೊತೆಗೆ ಸಂಗೀತದಲ್ಲಿ ಒಳ್ಳೆಯ ಪಾಂಡಿತ್ಯ, ಸುಖವಾದ ಶಾರೀರ, ಒಳ್ಳೆಯ ರಸಿಕತೆ, ಸೌಜನ್ಯಸೌಶೀಲ್ಯಗಳು. ಇಷ್ಟು ಗುಣಗಳೂ ಸೇರಿದರೆ ಬರುವ ಆನಂದಕ್ಕೆ ನೆಲೆಯುಂಟೇ ? ಈ ಸಭೆಯಲ್ಲಿಯೇ ಮ|| ಬೆನಗಲ್ ರಾಮರಾಯರ 'ಮುದ್ದಣ ಸ್ವರ್ಣಪದಕ'ವನ್ನು ಉತ್ತಮವಾದ ಸಣ್ಣಕಥೆಗಾಗಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾದ ಮ|| ಕೆರೋಡಿ ಕೃಷ್ಣಮೂರ್ತಿಗಳವರಿಗೆ ಸಂಘವು ಕೊಡಿಸಿತು. ಈ ಕಥೆಯ ಶ್ರೇಷ್ಠತೆಯನ್ನು ಮ|| ಬೆನಗಲ್ ರಾಮರಾವ್, ಎಂ.ಎ.,ಎಲ್‌ಎಲ್.ಬಿ. ಯವರೂ ಮ|| ಪಂಡಿತ ಮಹಾದೇವ ಪ್ರಭಾಕರ ಪೂಜಾರರವರೂ ಮ|| ಎಸ್. ಜಿ. ಶಾಸ್ತ್ರಿ, ಎಂ.ಎಸ್‌ಸಿ. ಯವರೂ ಮುಂಚೆಯೇ ವಿಮರ್ಶಿಸಿ ಗೊತ್ತುಮಾಡಿದ್ದರು. ಹೀಗೆ ಒಳ್ಳೊಳ್ಳೆಯ ವಿದ್ವಾಂಸರ ವಾಕ್ಸಹಾಯವೂ ಬುದ್ಧಿಬಲವೂ ಧನಕನಕ ಸಂಪತ್ತೂ ನಾನಾ ರೂಪದಲ್ಲಿ ಬರುತ್ತಿರುವುದನ್ನು ನೋಡಿದರೆ, ಇವರ ಸಾಲವನ್ನು ತೀರಿಸುವುದು ಹೇಗೆ ಎಂದು ನಿರಾಶೆ ಹುಟ್ಟುವುದು. ಆದ್ದರಿಂದ, ನಮ್ಮ ಅಶಕ್ತತೆಯನ್ನು ಮುಚ್ಚಿಕೊಂಡು "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾ ಚ ನ" ಎಂದು ಅವರನ್ನು ಕುರಿತು ವೇದಾಂತವನ್ನು ಉದ್ಘೋಷಿಸಿ ಹೇಳಿಬಿಡೋಣ!

ಮ|| ವಾಸುದೇವಯ್ಯನವರನ್ನು ಕನ್ನಡಿಗರಿಗೆ ಹೊಸದಾಗಿ ಪರಿಚಯಮಾಡಿ ಕೊಡಬೇಕಾದದ್ದಿಲ್ಲ. ಅವರು ಕನ್ನಡದೇಶದ ಬಾಲಬಾಲೆಯರಿಗೆ **ಆಟ ಊಟ ಓಟ** ಗಳನ್ನು ಹೇಳಿಕೊಟ್ಟವರು; ಯುವಕ ಯುವತಿಯರಿಗೆ ಕ್ಷತ್ರಿಯ ವೀರರ ಮತ್ತು ರಮಣಿಯರ ಉಚ್ಚಾದರ್ಶವನ್ನು ಉದ್ದೀಪಕವಾದ ಭಾಷೆಯಲ್ಲಿ ರೂಪುಗೊಳಿಸಿಟ್ಟು **ಆರ್ಯಕೀರ್ತಿ** ಯನ್ನು ಬೆಳಗಿದವರು. ಗುಣದಲ್ಲಿ ಶುದ್ಧವಾದ ಅಪರಂಜಿಯಂಥವರು. ಅವರಿಗೆ ಸಂಘವು ಈ ವಿಜ್ಞಾಪನಪತ್ರಿಕೆಯನ್ನು ಸಮರ್ಪಿಸಿತು:—

ಮ|| ಚ. ವಾಸುದೇವಯ್ಯನವರು.

ಕರ್ಣಾಟಕ ಸಂಘವು ಮ|| ರಾ|| ಚ. ವಾಸುದೇವಯ್ಯನವರಿಗೆ ಸಮರ್ಪಿಸಿದ ವಿಜ್ಞಾಪನಪತ್ರಿಕೆ.

ಶ್ರೀಃ

ಶ್ರೀಮತ್ಸಕಲಸದ್ಗುಣಸಂಪನ್ನರಾದ

ಮ|| ರಾ|| ಚೆನ್ನಪಟ್ಟಣದ ವಾಸುದೇವಯ್ಯನವರ

ಸನ್ನಿಧಿಯಲ್ಲಿ

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕಸಂಘದ ಸದಸ್ಯರು

ಮಾಡುವ ವಿನಯಪೂರ್ವಕವಾದ ಬಿನ್ನಹಗಳು.

ಆರ್ಯರೆ,

ನಮಗೆ ತಮ್ಮ ವಿಷಯದಲ್ಲಿರುವ ಗೌರವಭಾವವನ್ನು ಸಭೆಯಲ್ಲಿ ವ್ಯಕ್ತಪಡಿಸಿ ಆನಂದಪಡಬೇಕೆಂಬ ಬಹುಕಾಲದ ಕುತೂಹಲವು ಈದಿನ ನೆರವೇರುವಂತಾದುದಕ್ಕಾಗಿ ನಾವು ತಮಗೆ ಬಹಳ ಕೃತಜ್ಞರಾಗಿರುವೆವು.

ತಾವು ಈಗ ಮೂವತ್ತು ವರ್ಷಗಳಿಂದಲೂ ಕನ್ನಡದ ಏಳಿಗೆಗಾಗಿ ಸದ್ದಿಲ್ಲದೆ ಕೆಲಸ ಮಾಡುತ್ತಿರುವುದು ತಮ್ಮನ್ನರಿತ ಕನ್ನಡಿಗರೆಲ್ಲರಿಗೂ ಉತ್ಸಾಹಕರವಾದ ವಿಷಯವಾಗಿದೆ. ತಮ್ಮ ಕೃತಿಗಳ ಪ್ರಭಾವವನ್ನು ತಮ್ಮ ಸತ್ವಸ್ವಭಾವದ ಕಾಂತಿಯು ಮತ್ತಷ್ಟು ಬೆಳಗುತ್ತಿರುವುದು. ವಯೋವೃದ್ಧರೂ ಜ್ಞಾನವೃದ್ಧರೂ ಸಚ್ಚರಿತ್ರರೂ ಆದ ತಮ್ಮಂತಹ ಹಿರಿಯರನ್ನು ಪಡೆದಿರುವುದೇ ನಮ್ಮದೊಂದು ದೊಡ್ಡ ಭಾಗ್ಯವೆಂದು ನಾವು ಎಣಿಸಿಕೊಂಡಿರುವೆವು.

ಮಹನೀಯರೆ, ತಾವು ಮಾಡಿರುವ ಭಾಷಾಸೇವೆಯು ಅಮೋಘವಾದುದು. ಎಳೆಯಮಕ್ಕಳ ನೈಜಸ್ವಭಾವವನ್ನು ಸಂಪೂರ್ಣವಾಗರಿತು ಅವರ ಮನಸ್ಸಿಗೆ ಸುಲಭವಾಗಿ ಹಿಡಿಯುವಂತೆ ಬೋಧಿಸುವ ತಮ್ಮ ಅಸಾಧಾರಣವಾದ ಕೌಶಲವನ್ನೂ ತಮಗೆ ಅವರಲ್ಲಿರುವ ಅಪಾರವಾದ ಪ್ರೇಮವನ್ನೂ ತಾವು ರಚಿಸಿರುವ 'ಕನ್ನಡಬಾಲಬೋಧೆ'

ಯು ತೋರಿಸುತ್ತಿರುವುದು. ಹಾಗೆಯೇ, ದೊಡ್ಡವರಿಗಾಗಿ ತಾವು ರಚಿಸಿರುವ 'ಆರ್ಯಕೀರ್ತಿ' ಎಂಬ ರಾಜಪುತ್ರವೀರಕಥಾವಳಿಯೂ 'ಮಹಾರಾಷ್ಟ್ರಛತ್ರಪತಿಯ ಚರಿತ್ರೆ' ಯೂ, ಪಾಠಕರಲ್ಲಿ ಸದ್ಗುಣಗಳನ್ನು ಬಿತ್ತಿ, ದೇಶಾಭಿಮಾನವು ಉಕ್ಕೇರುವಂತೆ ಮಾಡುವ ತಮ್ಮ ಅತಿಶಯವಾದ ಪಾಂಡಿತ್ಯವನ್ನೂ ಜನಾನುರಾಗವನ್ನೂ ಪ್ರಕಟಗೊಳಿಸುತ್ತಿರುವುವು. ಈ ಕೃತಿಗಳು ಕನ್ನಡ ವಾಙ್ಮಯಾಂಗಣದಲ್ಲಿ ಆದರ್ಶಪ್ರಾಯಗಳಾಗಿ ನಿಂತು ಬಹುಕಾಲ ಮನ್ನಣೆಯನ್ನು ಪಡೆಯುತ್ತಿರುವುವೆಂಬುದಕ್ಕೆ ಸಂದೇಹವಿಲ್ಲ.

ತಮ್ಮ ಶೀಲಸ್ವಭಾವವಾದರೋ ತಮ್ಮ ಮುಖವರ್ಚಸ್ಸಿನಲ್ಲಿಯೇ ಬಿಂಬಿಸುತ್ತಿರುವುದು. ನಯ, ವಿನಯ, ಸಹನ, ಕಾರುಣ್ಯ, ಸತ್ಯಸಂಧತೆ, ಅದಾಂಭಿಕತೆ, ನಿರ್ಮಲಚಿತ್ತತೆ, ಶಿಷ್ಟಾಚಾರವರ್ತನೆ, ಸತ್ಕಾರ್ಯೋತ್ಸಾಹ—ಈ ಸದ್ಗುಣಗಳೆಲ್ಲವೂ ತಮ್ಮಲ್ಲಿ ನೆಲಸಿರುವುವೆಂಬುದನ್ನು ತಮ್ಮನ್ನರಿತವರೆಲ್ಲರೂ ತಿಳಿದಿರುವರು.

ಹೀಗೆ ನಾವು ಹೇಳುವುದರಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲದಿದ್ದರೂ ಲೋಕಾಡಂಬರಕ್ಕೆ ವಿಮುಖರಾದ ತಮಗೆ ಇದೆಲ್ಲವೂ ರುಚಿಸದೆಂದು ನಾವು ಬಲ್ಲೆವು. ಆದರೂ ತಮ್ಮ ವಿಷಯದಲ್ಲಿ ನಮಗಿರುವ ಭಾವನೆಗಳನ್ನು ಮಿತಭಾಷೆಯಿಂದಾದರೂ ಸೂಚಿಸಿದಲ್ಲದೆ ನಮಗೆ ತೃಪ್ತಿಯುಂಟಾಗಲಾರದು. ಆದುದರಿಂದ ತಾವು ತಮಗೆ ಸಹಜವಾದ ತಾಳ್ಮೆಯಿಂದ ಇದನ್ನು ನಮಗಾಗಿ ಸಹಿಸಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇವೆ.

ಪೂಜ್ಯರೆ, ತಮ್ಮಂಥವರ ಜೀವನವು ನಮ್ಮ ದೇಶಕ್ಕೆ ಪವಿತ್ರಕರವಾಗಿಯೂ ಮಂಗಳಪ್ರದವಾಗಿಯೂ ಉತ್ಸಾಹಜನಕವಾಗಿಯೂ ಇರುವುದು. ತಮಗೆ ಜಗದೀಶ್ವರನು ಆಯುರಾರೋಗ್ಯ ಭಾಗ್ಯಗಳನ್ನೂ ಸುಖಸಂಪತ್ತಿಯನ್ನೂ ಅನುಗ್ರಹಿಸಿ ತಮ್ಮ ಹಿತೋಪದೇಶವೂ ಆಶೀರ್ವಾದಬಲವೂ ನಮಗೆ ಚಿರಕಾಲ ದೊರೆಯುವಂತೆ ಕರುಣಿಸಲಿ ಎಂಬುದೇ

ಸೆಂಟ್ರಲ್ ಕಾಲೇಜು,	ತಮ್ಮ ಪ್ರೀತಿಗೆ ಪಾತ್ರರಾದ
ಬೆಂಗಳೂರು.	**ಕರ್ಣಾಟಕಸಂಘದ ಸದಸ್ಯರ**
೨೦ನೆಯ ಫೆಬ್ರವರಿ ೧೯೨೬.	ಪ್ರಾರ್ಥನೆ.

ಅದಕ್ಕೆ ಪ್ರತ್ಯುತ್ತರವಾಗಿ ಅವರು ಹೀಗೆ ಅಪ್ಪಣೆಕೊಡಿಸಿದರು :—

ನಮ್ಮ ಕಾಲದ ವಿದ್ಯಾರ್ಥಿದೆಶೆಗೂ ಈ ಕಾಲದ ವಿದ್ಯಾರ್ಥಿದೆಶೆಗೂ ವಿಶೇಷ ತಾರತಮ್ಯವು ಕಾಣಬರುವುದು. ಆಗ ಕಾಲೇಜಿನ ಆವರಣದಲ್ಲಿ ಸಂಗೀತಕ್ಕಾಗಲಿ ಸಾಹಿತ್ಯಕ್ಕಾಗಲಿ ಈ ವೈಭವವು ಇರಲಿಲ್ಲ. ಸಂಗೀತವೂ ಸಾಹಿತ್ಯವೂ, ವಿನೋದವೊಂದಕ್ಕೆ ಅಲ್ಲದೆ ವಿದ್ಯಾರ್ಥಿಗಳಲ್ಲಿ ದೇಶಾಭಿಮಾ

ನವೂ ಐಕಮತ್ಯವೂ ಪರಸ್ಪರ ಸೌಹಾರ್ದವೂ ಹುಟ್ಟುವುದಕ್ಕೂ ಉತ್ತಮಸಾಧನಗಳಾಗಿರುವುವು. ಸಂಗೀತ ಸಾಹಿತ್ಯಗಳಲ್ಲಿ ಅಭಿರುಚಿಮಾತ್ರವಲ್ಲದೆ, ಈಗಣ ವಿದ್ಯಾರ್ಥಿಗಳ ಕಾರ್ಯದಲ್ಲಿ ಉತ್ಸಾಹವೂ ಸಭೆಯಲ್ಲಿ ದಾಷ್ಟಿಕವೂ ಇರುವಂತೆ ಕಾಣುತ್ತಿರುವುದು.

ಪ್ರಕೃತದಲ್ಲಿ ನನ್ನ ವಿಷಯವೇನೆಂದರೆ—ಇಂಥ ವಿದ್ವತ್ಸಭೆಯ ಮುಂದೆ ನಿಂತು ಮಾತನಾಡು ವಷ್ಟು ಸಾಹಸವನ್ನು ನಾನು ಎಂದೂ ಮಾಡಿದವನಲ್ಲ. ಆದರೂ ಪ್ರಾಜ್ಞರೂ ಕರ್ಣಾಟಕಭಾಷಾ ಸೇವಾಧುರೀಣರೂ ಆದ ಈ ಸಂಘದ ಸದಸ್ಯರು ಈ ದಿವಸ ನನಗೆ ತೋರಿಸಿದ ಗೌರವವನ್ನು ಭರಿಸ ಲಾರದೆ ಒಂದೆರಡು ಮಾತನಾಡಲು ಯತ್ನಿಸುವೆನು.

ಕೆಲವುದಿನಗಳ ಹಿಂದೆ ನನ್ನ ಮಿತ್ರರಾದ ಮ|| ರಾ|| ವೆಂಕಣ್ಣಯ್ಯನವರೂ ಗುಂಡಪ್ಪ ನವರೂ ದಯೆಮಾಡಿಸಿ ಈಗ ನನಗೆ ಮಾಡಿದ ಸತ್ಕಾರವನ್ನು ಕುರಿತು ಪ್ರಸ್ತಾಪಮಾಡಿದರು. ಅದಕ್ಕೆ ನಾನು ಅರ್ಹನಲ್ಲವೆಂದು ಹೇಳಿಕೊಂಡು ಆ ಯೋಚನೆಯನ್ನು ಬಿಡಬೇಕೆಂದು ಅವರನ್ನು ನಾನು ಪ್ರಾರ್ಥಿಸಿದೆನು. ನನ್ನ ಪ್ರಾರ್ಥನೆಯನ್ನು ಅವರು ಕಿವಿಗೆ ಹಾಕಿಕೊಳ್ಳಲಿಲ್ಲ. ಅಷ್ಟೇ ಅಲ್ಲ, ಕರ್ಣಾ ಟಕಸಂಘವೇ ತಮ್ಮ ಪರವಾಗಿ ನಿಂತಿರುವುದೆಂದು ಕೂಡ ಸೂಚಿಸಿದರು. ನಾನು ಇಷ್ಟು ದಂಡುಳ್ಳ ವರ ವಿರೋಧಕ್ಕೆ ಹೆದರಿದೆನು. ಶತ್ರುಬಲವನ್ನಾದರೂ ಪ್ರತಿಭಟಿಸಬಹುದು ; ಮಿತ್ರಬಲವನ್ನು ಪ್ರತಿ ಭಟಿಸುವುದು ಸಾಧ್ಯವಲ್ಲ. ನಾನು ಸೋತು ಅವರ ವಶನಾದೆನು. ಆದರೂ ಅವರು ನನಗೆ ಮಾಡಲಿ ಚ್ಛಯಿಸಿದ ಮರ್‍ಯಾದೆ ನನಗೆ ಸಲ್ಲದೆಂದು ನಾನು ಅವರ ಸಂಗಡ ಅಂತರಂಗವಾಗಿ ಹೇಳಿದ ಮಾತನ್ನೇ ಈ ವಿದ್ವತ್ಸಭೆಯಲ್ಲಿ ನಾನು ಬಹಿರಂಗವಾಗಿ ಹೇಳಬೇಕಾಗಿದೆ.

ಕರ್ಣಾಟಕಸಂಘದ ಮಹನೀಯರೆ ! ತಾವುಗಳು ನನ್ನ ಲೋಪಗಳನ್ನು ಲಕ್ಷ್ಯಕ್ಕೆ ತಾರದೆ ಕೇವಲ ಸ್ನೇಹಪರವಶರಾಗಿ ನನಗೆ ಕೊಟ್ಟಿರುವ ಈ ಅಭಿನಂದನಪತ್ರಿಕೆಯನ್ನು ವಿನಯಪೂರ್ವಕವಾಗಿ ಶಿರಸಾ ವಹಿಸಿರುವೆನು. ತಾವು ನನ್ನಲ್ಲಿಟ್ಟಿರುವ ಪ್ರೀತಿವಿಶ್ವಾಸಕ್ಕೆ ಅತ್ಯಂತ ಕೃತಜ್ಞನಾಗಿದ್ದೇನೆ ; ಆದರೆ ತಾವು ಪ್ರೇಮಾಧಿಕ್ಯದಿಂದ ನನ್ನನ್ನು ಕುರಿತು ಮಾಡಿರುವ ಪ್ರಶಂಸೆಗೆ ಮಾತ್ರ ತಕ್ಕ ಪಾತ್ರನಲ್ಲವೆಂದು ತಮ್ಮಗಳಿಗೆ ತಿಳಿಸದಿರಲಾರೆನು.

ತಮ್ಮ ಪತ್ರಿಕೆಯಲ್ಲಿ ನಾನು ಅಮೋಘವಾದ ಭಾಷಾಸೇವೆಯನ್ನು ಮಾಡಿರುವೆನೆಂದು ತಾವು ಗಳು ಸೂಚಿಸುತ್ತೀರಿ. ನಾನು ಮಾಡಿರುವ ಅತ್ಯಲ್ಪಸೇವೆಯನ್ನೇ ಈ ರೀತಿಯಲ್ಲಿ ತಾವು ಪುರಸ್ಕರಿಸು ವುದು ನನ್ನ ಭಾಗ್ಯವೇ ಸರಿ. ಆದರೆ ಇದು ತಮ್ಮ ಸೌಜನ್ಯವನ್ನು ವ್ಯಕ್ತಪಡಿಸುವುದೇ ಹೊರತು ಮತ್ತೇನು ಅಲ್ಲ. ತಾವು ಸೂಚಿಸುವಂತೆ ಆರ್ಯಕೀರ್ತಿಯನ್ನು ಓದುವವರ ಹೃದಯದಲ್ಲಿ ಭರತಖಂಡ ದೊಳಗೆ ಜನ್ಮವೆತ್ತಿದ ಮಹಾಪುರುಷರಲ್ಲಿ ಶ್ರದ್ಧಾಭಕ್ತಿ, ಸ್ವದೇಶವಾತ್ಸಲ್ಯ, ಸ್ವಧರ್ಮಾಭಿಮಾನ, ಧೈರ್ಯೋತ್ಸಾಹಾದಿ ಸದ್ಗುಣಗಳು ಅಂಕುರಿಸಿದಲ್ಲಿ ನಾನು ಕೃತಾರ್ಥನೆಂದು ಭಾವಿಸುವೆನು.

ತಾವುಗಳು ದೇಶಭಾಷಾಸೇವೆಯನ್ನು ಕೈಕೊಂಡಿದ್ದೀರಿ. ಕಾಲಪರಿಸ್ಥಿತಿಯನ್ನು ನೋಡಲಾಗಿ ಹಿಂದೂಸ್ಥಾನದಲ್ಲಿ ದೇಶಭಾಷೆಗಳೆಲ್ಲವೂ ಅಭಿವೃದ್ಧಿಗೆ ಬರುವುದಕ್ಕೆ ಇದು ಸಮಯವೆಂದು ತೋರು ತ್ತಿದೆ. ದೇಶಭಾಷೆಯ ಪ್ರಕಾರವಾಗಿ ರಾಷ್ಟ್ರವಿಭಾಗಗಳೂ ವಿಶ್ವವಿದ್ಯಾಲಯಗಳೂ ಏರ್ಪಡುತ್ತಿವೆ. ದೇಶಭಾಷೆಯ ಮೂಲಕವಾಗಿ ಉಚ್ಚಪಾಠಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುವ ಪ್ರಯತ್ನಗಳು ನಡೆಯುತ್ತಿವೆ. ವೃತ್ತಾಂತಪತ್ರಿಕೆಗಳಲ್ಲಿ ರಾಜಕೀಯ ಸಾಮಾಜಿಕವಿಷಯಗಳ ವಿಚಾರವು ದೇಶಭಾಷೆ ಗಳಲ್ಲಿ ನಡೆಯುತ್ತಿವೆ. ಕಾಲಸ್ಥಿತಿಯನ್ನನುಸರಿಸಿ ನೂತನಭಾವಗಳು ಹುಟ್ಟುತ್ತಿವೆ. ನೂತನಭಾವಗಳು ಹುಟ್ಟಿದಹಾಗೆಲ್ಲ ಭಾಷೆಯು ಬೆಳೆದು ಪುಷ್ಟಿಯನ್ನು ಹೊಂದಲೇಬೇಕು. ಆಂಗ್ಲೇಯ ಭಾಷೆಯು

ರಾಜಕೀಯ ಭಾಷೆಯಾಗಿಯೂ ಅರ್ಥಕರಿಭಾಷೆಯಾಗಿಯೂ ಇರುವುದರಿಂದ ಅದಕ್ಕೆ ಪ್ರಾಶಸ್ತ್ಯವಿರದೆ ತೀರದು. ಆದರೂ ಆ ಭಾಷೆಯ ಪ್ರಾಶಸ್ತ್ಯಕ್ಕೆ ನ್ಯೂನತೆಯಿಲ್ಲದಂತೆಯೇ ಆಯಾ ರಾಷ್ಟ್ರಗಳಲ್ಲಿ ದೇಶಭಾಷೆಗಳು ವೃದ್ಧಿಗೆ ಬರುವುದಕ್ಕೆ ಯಥೇಚ್ಛವಾಗಿ ಅವಕಾಶವಿರುವುದು. ಇಂತಹ ಸುಯೋಗದಲ್ಲಿ ಕರ್ಣಾಟಕಭಾಷೆಯು ಹಿಂದೆ ಬೀಳಲಾರದೆಂದು ನಾವು ನಂಬಬಹುದು.

ಕರ್ಣಾಟಕಸಂಘದ ಸದಸ್ಯ ಮಹಾಶಯರೇ! ಪ್ರಾಜ್ಞರಾದ ತಮ್ಮ ಅಧ್ಯಕ್ಷರ ನೇತೃತ್ವದಿಂದಲೂ, ಅವರಿಂದ ಪ್ರೋತ್ಸಾಹಿತರಾದ ತಮ್ಮಗಳ ಅಧ್ಯವಸಾಯದಿಂದಲೂ ಸಂಘದ ಉದ್ದೇಶ್ಯವು ನೆರವೇರುವುದರಲ್ಲಿ ಸಂದೇಹವಿಲ್ಲ. ತಾವು ಕರ್ಣಾಟಕಭಾಷಾಭಿವೃದ್ಧಿಗಾಗಿಯೂ ತನ್ಮೂಲಕವಾಗಿ ದೇಶಾಭಿವೃದ್ಧಿಗಾಗಿಯೂ ಪಡುತ್ತಿರುವ ಪರಿಶ್ರಮಕ್ಕೆ ತಕ್ಕ ಆಯುರಾರೋಗ್ಯಾದಿ ಭಾಗ್ಯವನ್ನು ಕೊಟ್ಟು ತಮ್ಮ ಪ್ರಯತ್ನಗಳನ್ನು ಸಫಲಗೊಳಿಸಲಿ ಎಂದು ಕರುಣಾಪೂರ್ಣನಾದ ಭಗವಂತನನ್ನು ಸರ್ವದಾ ಪ್ರಾರ್ಥಿಸುತ್ತಿರುವೆನು.

ತಾವು ನನ್ನ ಆಯುರಾರೋಗ್ಯಾರ್ಥವಾಗಿ ಜಗದೀಶ್ವರನನ್ನು ಪ್ರಾರ್ಥಿಸುತ್ತೀರಿ. ಈಶಾನು ಗ್ರಹವಿದ್ದಲ್ಲಿ ತಮ್ಮಗಳ ಪುರೋವೃದ್ಧಿಯನ್ನು ನೋಡಿ ಸಂತೋಷಪಡಬೇಕೆಂಬ ಆಸೆಯಿಂದ ಇನ್ನು ಕೆಲವುಕಾಲ ಇರಬೇಕೆಂದು ಹಾರೈಸುತ್ತೇನೆ.

ಇಂದು ತಮ್ಮ ಸತ್ಕಾರದಿಂದ ನನ್ನ ಮನಸ್ಸಿನಲ್ಲಿ ಹುಟ್ಟಿರುವ ಭಾವಗಳನ್ನು ವ್ಯಕ್ತಪಡಿಸುವುದಕ್ಕೆ ನನಗೆ ಶಕ್ಯವಿಲ್ಲ. ಆದರೂ ಈ ಸತ್ಕಾರವನ್ನು ಮಾತ್ರ ನಾನೆಂದಿಗೂ ಮರೆಯೆನು.

ಗೌರವ ಚೆನ್ನೋ? ಪ್ರೀತಿ ಚೆನ್ನೋ?

"ರಿಕ್ತಹಸ್ತೇನ ನೋಪೇಯಾತ್ ರಾಜಾನಂ ದೈವತಂ ಗುರುಂ"—ದೊರೆಯನ್ನೂ ದೇವರನ್ನೂ ಗುರುಗಳನ್ನೂ ನೋಡುವುದಕ್ಕೆ ಬರಿಯ ಕೈಯಲ್ಲಿ ಹೋಗಬಾರದು—ಎಂದು ಹೇಳುತ್ತಾರಷ್ಟೆ. ಈ ವಾಕ್ಯವು ಕೇವಲ ಭಕ್ತಿಜಾಡ್ಯಪೀಡಿತರಾದ, ವಾತ್ಸಲ್ಯ ಪ್ರೇಮ ಪ್ರಣಯ ಮುಂತಾದ ಮೃದುಮಧುರ ಭಾವಗಳನ್ನರಿಯದಿರಬಹುದಾದ, ಯಾರಿಂದಲೋ ಉಕ್ತವಾಗಿರಬೇಕೆಂದು ತೋರುತ್ತದೆ. ಇಲ್ಲದಿದ್ದರೆ ಮೇಲಿನ ಪಟ್ಟಿಯಲ್ಲಿ ಮಕ್ಕಳನ್ನು ಬಿಡುತ್ತಿದ್ದರೇ? ಈಗ ರಾಜರಲ್ಲಿ ಹೋಗುವ ಸಂಭವ ಕಡಿಮೆ, ದೇವರಲ್ಲಿ ನಂಬಿಕೆ ಇಲ್ಲ, ಗುರುಗಳಲ್ಲಿ ಗೌರವವಿಲ್ಲ—ಇದ್ದರೂ ಅವರು ಕುಚೇಲನನ್ನು ಕೃಷ್ಣನು ಕೇಳಿದಂತೆ "ಏನು ತಿಂಡಿ ತಂದಿದ್ದೀಯಯ್ಯಾ?" ಎಂದು ಕೇಳಿ ತಿರಿದು ತಂದ ಒಣಕಲ ಅಕ್ಕಿಯಕಾಳನ್ನಾದರೂ ಮೊಂಡಾಟಮಾಡಿ ತೆಗೆದುಕೊಂಡು ತಿಂದು ಪ್ರತಿಯಾಗಿ ಐಶ್ವರ್ಯವನ್ನು ಸೂಸುವುದಿಲ್ಲ. ಈಗ ನಾವು ನೋಡುತ್ತಿರುವುದೆಲ್ಲಾ ಮಕ್ಕಳಿರುವ ಮನೆಗೆ ಬರಿಯ ಕೈಯಲ್ಲಿ ಹೋಗದಿರುವುದೊಂದೇ. ಇದೊಂದು ಅಶಾಸ್ತ್ರವಿಹಿತವಾದ, ಆದರೆ ಶಿಷ್ಟಸಮ್ಮತವಾದ, ಸಂಪ್ರದಾಯ. ಆದ್ದರಿಂದಲೇ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಗಳು ಪ್ರಬುದ್ಧ ಕರ್ಣಾಟಕನ ಮನೆಗೆ ಬರುತ್ತ ಐವತ್ತು ರೂಪಾಯಿನ ಒಂದು ಬಹುಮಾನವನ್ನು ಕೈಯಲ್ಲಿ ಹಿಡಿದುಕೊಂಡೇ

ಬಂದರು. ಅದನ್ನು ಕೊಡುವಾಗ ಅದರ ಜೊತೆಯಲ್ಲಿಯೇ ವರ್ಷವರ್ಷವೂ ಐವತ್ತು ರೂಪಾಯಿನ ಇಂಥ ಒಂದೊಂದು ಬಹುಮಾನವನ್ನು ಕೊಡುತ್ತ ಹೋಗುವೆವೆಂದು ಮಾತನ್ನೂ ಕೊಟ್ಟರು. ಅದಕ್ಕೆ ಬದಲಾಗಿ ಕರ್ಣಾಟಕ ಸಂಘವೂ ಪ್ರಬುದ್ಧ ಕರ್ಣಾಟಕವೂ ಮಾಡಿದ್ದೇನು ? ಪೆಪ್ಪರ್‌ಮೆಂಟನ್ನೋ ಬಿಸ್ಕತ್ತನ್ನೋ ಮಕ್ಕಳಿಗೆ ಕೊಟ್ಟರೆ ಅವು ಏನು ಮಾಡುವುವೋ ಅದನ್ನೇ ಮಾಡಿತು—ಬಾಯಿಗೆ ಹಾಕಿಕೊಂಡು ಕುಣಿದಾಡಿಬಿಟ್ಟಿತು.

ವಿದ್ಯಾರ್ಥಿವೇತನವನ್ನು ಪಡೆದ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು ಎಂದಿನಂತೆ ಕರ್ಣಾಟಕಸಂಘಕ್ಕೆ ಸಹಾಯದ್ರವ್ಯವನ್ನು ಕೊಟ್ಟಿರುವರು. ಇವರುಗಳೆಲ್ಲರಿಗೂ ಸಂಘವು ಕೃತಜ್ಞವಾಗಿದೆ :—

ಮ|| ಗಳಾದ		ಮ|| ಗಳಾದ	
ಪಿ. ವೆಂಕಟರಾಯರೆಡ್ಡಿ	3-0-0	ಆರ್. ವಿ. ನರಸಿಂಹಾಚಾರ್	2-0-0
ಎ. ಚಿನ್ನನಾಯಕ್	3-0-0	ಎಸ್. ರಾಮಕೃಷ್ಣನ್	2-0-0
ಎಣ್. ಗೋಪಾಲಯ್ಯ	2-0-0	ಟಿ. ರಂಗಮಲ್ಲಯ್ಯ	2-0-0
ಡಿ. ಚಂದ್ರಶೇಖರಯ್ಯ	2-0-0	ಕೆ. ವೀರಣ್ಣ	2-0-0
ವಿ. ಕೃಷ್ಣಯ್ಯಶೆಟ್ಟಿ	2-0-0	ಎಂ. ಜಿ. ಸುಬ್ಬರಾವ್	2-0-0
ವಿ. ಆರ್. ಕೃಷ್ಣರಾವ್	2-0-0	ಶಿವಲಿಂಗಪ್ಪ	2-0-0
ಎ. ನಾಗರಾಜರಾವ್	2-0-0	ಡಿ. ಎಚ್. ದೊಡ್ಡಯ್ಯ	2-0-0
ಕೆ. ಹನುಮಂತರಾವ್	2-0-0	ಕೆ. ಶ್ರೀನಿವಾಸಾಚಾರ್	1-0-0
ಎಣ್. ರಾಮಚಂದ್ರನಾಯಿಡು	2-0-0	ಬಿ. ಎಂ. ಕೃಷ್ಣಾಜಿರಾವ್	1-0-0
ಎಚ್. ಕೆ. ರಂಗಶೆಟ್ಟಿ	2-0-0	ಟಿ. ಕಲ್ಲಪ್ಪ	1-0-0
ವಿ. ಎಂ. ಶ್ರೀನಿವಾಸಲು	2-0-0	ಎಚ್. ಸಿ. ವೀರಶೆಟ್ಟಿ	1-0-0
ಜಿ. ವೆಂಕಟಸ್ವಾಮಿ	2-0-0	ಎಸ್. ವೀರಭದ್ರಪ್ಪ	1-0-0
ವಿ. ವಿಶ್ವನಾಥಣ್	2-0-0	ಆರ್. ಎಂ. ಕೃಷ್ಣಪ್ಪ	1-0-0
ಕಡಬ ವೆಂಕಟಾಚಲಯ್ಯಂ		ಸಿ. ರಂಗಾಚಾರ್	1-0-0
ಗಾರ್	2-0-0	ಎಂ. ಬಿ. ನರಸಿಂಹಯ್ಯಂಗಾರ್	1-0-0
ಕಡಬ ಆರ್. ಶ್ರೀನಿವಾಸಯ್ಯಂ		ವಿ. ಆರ್. ತಿರುವೆಂಕಟಾಚಾರ್	1-0-0
ಗಾರ್	2-0-0	ಮಹಮದ್‌ಆಲಿ	0-8-0
ಬೇಲೂರ್ ಆರ್. ಸುಂದರರಾಜ		ನರಸಿಂಹಸ್ವಾಮಿನಾಯಕ್	0-8-0
ಯ್ಯಂಗಾರ್	2-0-0	ಎಸ್. ರಂಗರಾವ್	0-8-0

ಕೆ. ಗೋಪಾಲಯ್ಯಂಗಾರ್	2-0-0	ಬಿ. ಕೃಷ್ಣರಾವ್	0-8-0
ಆರ್. ಗಂಗಾಜಿರಾವ್	1-0-0	ಕೆ. ಎಸ್. ರಾಘವಾಚಾರ್	0-8-0
ಎಂ. ಬಸಪ್ಪ	1-0-0	ಕೆ. ರಾಮಸ್ವಾಮಿಅಯ್ಯಂಗಾರ್	0-8-0
ಎಚ್. ಮಲ್ಲಾರಿರಾವ್	1-0-0	ಎನ್. ಪಾಂಡುರಂಗರಾವ್	0-8-0
ಟಿ. ಎಲ್. ಕಸ್ತೂರಿ ರಂಗಾಚಾರ್	1-0-0	ಶ್ರೀಮತಿ ಪಿ. ಎನ್. ತಂಗಮ್ಮ	1-8-0
		,, ಡಿ. ವೆಂಕಟಸುಬ್ಬಮ್ಮ	1-8-0
ಎಚ್. ಕೆ. ವೆಂಕಟರಮಣಶೆಟ್ಟಿ	1-0-0	,, ಬಿ. ಎ. ಮುನಿವೆಂಕಟಮ್ಮ	1-8-0
ಇ. ಎ. ಭಾಸ್ಕರ್	1-0-0	,, ಜಿ. ಆರ್. ಪಿಚ್ಚುಮುತ್ತು	2-0-0
ಬಿ. ಕೃಷ್ಣಾಚಾರ್	1-0-0		———
ಎ. ಆರ್. ತಿರುವೆಂಗಡಯ್ಯ	1-0-0		76-14-0

ಪ್ರಬುದ್ಧ ಕರ್ಣಾಟಕದ ಪೋಷಕರು ಮತ್ತು ಆಶ್ರಯದಾತರು

ಪ್ರದಾತೃಗಳು.

ಸೆಂಟ್ರಲ್ ಕಾಲೇಜಿನ ನಾಟಕಸಂಘ	50-0-0
ಮ|| ಗಳಾದ ಎನ್. ಎಸ್ ಸುಬ್ಬರಾವ್, ಎಂ. ಎ.	20-0-0
ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್ ಎಂ. ಶ್ಯಾಮರಾವ್, ಎಂ. ಎ.	2-0-0

ಆಶ್ರಯದಾತೃಗಳು

ಅಮೆಚೂರು ನಾಟಕಮಂಡಲಿ	30-0-0
ಡಾ|| ಎಂ. ಎ. ಸಂಪತ್ಕುಮಾರನ್ ಎಂ.ಎ. ಪಿ.ಎಚ್‌ಡಿ.	15-0-0
ಮ|| ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾವ್	12-0-0
,, ಮೋಕ್ಷಗುಂಡಂ ಕೃಷ್ಣಮೂರ್ತಿ ಬಿ.ಎ. ಬಿ.ಎಲ್.	10-0-0
,, ಸಂಘದ ಆಪ್ತರೊಬ್ಬರು	10-0-0

ಪೋಷಕರು.

ಬೆಂಗಳೂರು.

ಮ|| ಗಳಾದ

ರಾಜಕಾರ್ಯಪ್ರಸಕ್ತ ರಾವ್‌ಬಹದ್ದೂರ್.

ಎಂ. ಶ್ಯಾಮರಾವ್, ಎಂ.ಎ.

ಎನ್. ವೆಂಕಟೇಶಯ್ಯಂಗಾರ್, ಬಿ.ಎ.

ಬಿ. ಪುಟ್ಟಯ್ಯ, ಬಿ.ಎ.

ಟಿ. ಅಪ್ಪೂರಾವ್, ಬಿ.ಎ., ಬಿ.ಎಲ್.

ಪುಟ್ಟರಾಜೆ ಅರಸ್ ಎಂ.ಎ. ಬಿ.ಎಲ್.

ಎಂ. ವೆಂಕಟೇಶಯ್ಯಂಗಾರ್, ಎಂ.ಎ.

ಸಿ. ಕೆ. ವೆಂಕಟರಾಮಯ್ಯ, ಎಂ.ಎ., ಎಲ್‌ಎಲ್.ಬಿ.

ಬಿ. ಶ್ರೀನಿವಾಸಯ್ಯಂಗಾರ್.

ಸಿ. ಎಸ್. ರಾಮರಾವ್.

ಡಾ|| ಎಸ್. ಸುಬ್ಬರಾವ್, ಬಿ.ಎ., ಎಂ.ಬಿ.ಸಿ.ಎಂ. ಇತ್ಯಾದಿ.

ಸಿ. ಸುಬ್ಬರಾವ್, ಎಂ.ಎ. (ಆನರ್ಸ್)

ಎ. ಎನ್. ನರಸಿಂಹಯ್ಯ, ಬಿ.ಎ., ಎಲ್.ಟಿ.
ಬಿ. ವೆಂಕಟನಾರಣಪ್ಪ, ಎಂ.ಎ.
ವಿ. ಶ್ರೀನಿವಾಸಾಚಾರ್, ಬಿ.ಎ.
ಬಿ. ವೇಂಕೋಬರಾವ್, ಬಿ.ಎ.
ಎಂ. ವೆಂಕಟಾದ್ರಿಶಾಸ್ತ್ರಿ.
ನಿಟ್ಟೂರು ಶ್ರೀನಿವಾಸರಾವ್, ಬಿ.ಎಸ್‌ಸಿ.
ಎನ್. ಸೀತಾರಾಮಯ್ಯ, ಬಿ.ಎ., ಬಿ.ಎಲ್.
ಎಸ್. ಡಿ. ದಾಸಪ್ಪ.
ಎಂ. ವೆಂಕಟಸುಬ್ಬಯ್ಯ.
ಎಸ್. ಗರಲಪುರಿ ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ.
ಎನ್. ಎನ್. ಅಯ್ಯಂಗಾರ್, ಬಿ.ಎ.
ಪಿ. ಎಚ್. ಕೃಷ್ಣರಾವ್, ಎಂ.ಎ.
ವಿ. ವೇದವ್ಯಾಸಾಚಾರ್, ಬಿ.ಎ.
ಜಿ. ಸುಂದರರಾವ್, ಬಿ.ಎ.
ಎಮ್. ಎನ್. ಬಾಳರಾಜೆ ಅರ್ಸ್.
ಡಿ. ಕೊಂಗಾಡಿಯಪ್ಪ.
ಡಿ. ರಾಮಯ್ಯ.
ಕ್ಯಾಪ್ಟನ್ ಎ. ಬಸವರಾಜೆ ಅರ್ಸ್.
ಟಿ. ಮಾದಯ್ಯ, ಬಿ.ಎ.

ಸೆಂಟ್ರಲ್ ಕಾಲೇಜು.

ಮ|| ಗಳಾದ

ಎಫ್. ಆರ್. ಸೆಲ್, ಎಂ.ಎ.
ಪಿ. ಎಸ್. ಅಣ್ಣಾಜಿರಾವ್, ಎಂ.ಎ., ಬಿ.ಎಲ್.
ಬಿ. ನಾಗೇಶರಾವ್, ಎಂ.ಎ.
ಕೆ. ಅನಂತರಾಮಯ್ಯ, ಎಂ.ಎ.
ಎನ್. ಎಸ್. ಸೂರ್ಯನಾರಾಯಣರಾವ್, ಬಿ.ಎ.
ಬಿ. ಎನ್. ಶ್ಯಾಮರಾವ್, ಬಿ.ಎ.
ಟಿ. ಎಸ್. ವೆಂಕಣ್ಣಯ್ಯ, ಎಂ.ಎ.
ಬಿ. ವೆಂಕಟೇಶಾಚಾರ್, ಎಂ.ಎ.
ಎ. ವೆಂಕಟರಾವ್ ಟೆಲಂಗ್, ಎಂ.ಎ.
ಸಿ. ಕೆ. ಸುಂದರಾಚಾರ್, ಎಂ.ಎ. (ಆನರ್ಸ್)
ಪಿ. ಶ್ರೀನಿವಾಸರಾವ್, ಬಿ.ಎಸ್‌ಸಿ.
ಎಸ್. ವಿ. ರಾಮರಾವ್, ಬಿ.ಎಸ್‌ಸಿ.
ಎಂ. ಜಿ. ಶ್ರೀನಿವಾಸರಾವ್, ಎಂ.ಎ.
ಸಿ. ಶ್ರೀಕಂಠಯ್ಯ, ಬಿ.ಎ.
ಎಂ. ಶೇಷಯ್ಯಂಗಾರ್, ಎಂ.ಎ.
ಎನ್. ವೆಂಕಟನರಸಿಂಹಾಚಾರ್, ಬಿ.ಎ.
ಎಚ್. ರಾಮಸ್ವಾಮಿ ಅಯ್ಯಂಗಾರ್, ಬಿ.ಎಸ್‌ಸಿ.
ವಿ. ಗೋಪಾಲಸ್ವಾಮಿ ಅಯ್ಯಂಗಾರ್, ಎಂ.ಎ.
ಎಂ. ನಾರಣಯ್ಯಂಗಾರ್, ಎಂ.ಎ.
ಸಿ.ಎನ್. ಶ್ರೀನಿವಾಸಯ್ಯಂಗಾರ್, ಎಂ.ಎಸ್‌ಸಿ.
ಪಿ. ಸಂಪತ್ತಯ್ಯಂಗಾರ್, ಎಂ.ಎ.
ಎಲ್. ರಾಮರಾವ್, ಎಂ.ಎ.
ಎ. ಸಿ. ದೇವೇಗೌಡ.

ಮೆಡಿಕಲ್ ಕಾಲೇಜು.

ಮ|| ಗಳಾದ

ಎಲ್. ಎಸ್. ದೊರೆಸಾಮಿ, ಬಿ.ಎಸ್‌ಸಿ.
ಸಿ. ದೊರೆಸಾಮಿ, ಬಿ.ಎ.
ಜಿ. ಎಸ್. ರಘುನಾಥರಾವ್, ಬಿ.ಎಸ್‌ಸಿ.
ವಿ. ನರಸಿಂಹಮೂರ್ತಿ, ಬಿ.ಎಸ್‌ಸಿ.
ಬಿ. ಐ. ಗೋಪಾಲರಾವ್, ಬಿ.ಎಸ್‌ಸಿ.
ಆರ್. ವೆಂಕಟರಾವ್. ಬಿ.ಎಸ್‌ಸಿ.
ಹೆಬ್ಲಿಕರ್, ಬಿ.ಎ.
ಸಿ. ರಾಮಸ್ವಾಮಿಶೆಟ್ಟಿ.
ಮಲ್ಲಪ್ಪ.

ಇಂಜನಿಯರಿಂಗ್ ಕಾಲೇಜು.

ಮ|| ಗಳಾದ

ಬಿ. ಎಸ್. ಮಾಧವರಾವ್, ಎಂ.ಎಸ್‌ಸಿ.
ಎಚ್. ಸಿ. ಕಪನೀಪತಿಭಟ್ಟ, ಬಿ.ಎ.
ಎಲ್. ಸಿ. ಕೇಶವರಾವ್, ಬಿ.ಎ.
ಡಿ. ಸುಬ್ಬರಾವ್.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್

ಮ|| ಕೆ. ಅಮೃತರಾವ್, ಎಂ.ಎ.

ಚಿತ್ರದುರ್ಗ.

ಮ|| ಗಳಾದ

ಎನ್. ಎಸ್. ಲಿಂಗಾಶಾಸ್ತ್ರಿ, ಬಿ.ಎಸ್‌ಸಿ.
ಬಿ. ವೆಂಕಟಶಾಮಣ್ಣ, ಬಿ.ಎ., ಬಿ.ಎಲ್.
ಎ. ತಾಂಡೋಣಿರಾವ್, ಎಲ್.ಸಿ.ಇ.

ಹಾಸನ.

ಮ|| ಗಳಾದ
ಎ. ಎಸ್. ನಂಜುಂಡಪ್ಪ,
ಬಿ. ವೆಂಕಟಾಚಾರ್, ಬಿ.ಎ.
ಕೆಳಗಿನಮನೆ ಸೂರ್ಯನಾರಣಪ್ಪನವರು
ಎಚ್. ಪುಟ್ಟಸಾಮಯ್ಯ.
ಎ. ನಾರಣಯ್ಯಂಗಾರ್.
ಎಚ್. ಎಸ್. ಸುಬ್ಬರಾಯಸೆಟ್ಟಿ.
ಎನ್. ಎಸ್. ನಾರಾಯಣರಾವ್.

ಕಡೂರು.

ಕೆ. ಸತ್ಯನಾರಾಯಣಶೆಟ್ಟಿ.
ಡಿ. ರಾಘವೇಂದ್ರರಾವ್, ಬಿ.ಎ., ಎಲ್‌ಎಲ್.ಬಿ.
ಟಿ. ಎನ್. ಕೃಷ್ಣಸ್ವಾಮಿ ಅಯ್ಯಂಗಾರ್.
ಎನ್. ಮಾಧವರಾವ್, ಬಿ.ಎ.

ಕೋಲಾರ.

ಮ|| ಗಳಾದ
ಸಿ. ರಾಮಚಂದ್ರರಾವ್, ಬಿ.ಎ., ಬಿ.ಎಲ್.
ಎಸ್. ಸೀತಾರಾಮಯ್ಯ, ಬಿ.ಎ.
ವಿ. ನಾರಾಯಣರಾವ್. ಬಿ.ಎ.
ಕೆ. ಸಂಪಂಗಿರಾಮಯ್ಯ, ಬಿ.ಎ., ಬಿ.ಎಲ್.

ಮೈಸೂರು.

ಬಿ. ಎಂ. ಶ್ರೀಕಂಠಯ್ಯ, ಎಂ.ಎ. ಬಿ.ಎಲ್.
ಬಿ.ಕೆ. ರಾಮಕೃಷ್ಣಯ್ಯ,ಎಂ.ಎ.,ಎಲ್‌ಎಲ್.ಬಿ.
ಎಸ್. ವಿ. ರಂಗಣ್ಣ, ಎಂ.ಎ.
ಕೆ. ವಿ. ಶ್ರೀಕಂಠೇಶ್ವರನ್, ಬಿ.ಎಸ್‌ಸಿ.
ಎಲ್‌ಎಲ್.ಬಿ., ಎಫ್.ಸಿ.ಎಸ್.
ಬಿ. ಮಾಧವರಾವ್.
ಬಿ. ವೆಂಕೋಬರಾವ್, ಬಿ.ಎ.
ಆರ್. ರಾಮರಾವ್, ಬಿ.ಎ.
ಕೆ. ಎಸ್. ಧೀರೇಂದ್ರದಾಸ್, ಬಿ.ಎ.
ಎ. ವೆಂಕಟರಾವ್.
ಕೆ. ಆರ್. ರಾಮಸ್ವಾಮಿ, ಎಂ.ಎ.
ವಿ. ಸೀತಾರಾಮಯ್ಯ, ಎಂ.ಎ.
ಎ. ಆರ್. ಕೃಷ್ಣಶಾಸ್ತ್ರಿ, ಎಂ.ಎ.
ದೇವೋಜೀರಾವ್ (ಎಡತೊರೆ)

ಶಿವಮೊಗ್ಗ.

ಬಿ. ಎಸ್. ರಾಘವಯ್ಯ, ಬಿ.ಎ., ಬಿ.ಎಲ್.
ಎಸ್. ಸೀತಾರಾಮಯ್ಯ.
ಬಿ. ಆರ್. ಗುರುರಾಜಾರಾವ್.
ಎನ್. ಶೇಷಶಾಸ್ತ್ರಿ, ಬಿ.ಎ., ಬಿ.ಎಲ್.
ಎಂ. ಮಂಜಪ್ಪ.
ಎಂ. ವೆಂಕಟನಾರಣಪ್ಪ, ಬಿ.ಎ.
ಎ. ಕೆ. ನಾರಣಯ್ಯರ್.
ಮಾಲೂರ್ ಸುಬ್ಬರಾವ್, ಬಿ.ಎ.,ಎಲ್‌ಎಲ್.ಬಿ.
ಕೆ. ಆರ್. ವೆಂಕಟರಾವ್, ಬಿ.ಎ.
ಕೆ. ರಾಮಕೃಷ್ಣಭಟ್ಟರು.
ಎ. ಅನಂತಯ್ಯ.
ಕಲ್ಲಹಳ್ಳದ ಶ್ರೀನಿವಾಸಭಟ್ಟರು.
ಎನ್. ಗಂಗಾಧರಯ್ಯ.
ಶ್ರೀಕಂಠಪ್ಪಗೌಡ.

ತುಮಕೂರು.

ಮ|| ಗಳಾದ
ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.
ಆರ್. ಎಲ್. ನರಸಿಂಹಯ್ಯ, ಬಿ.ಎಸ್‌ಸಿ.
ಜಿ. ಎಸ್. ತಮ್ಮಯ್ಯ, ಬಿ.ಎ.
ಎನ್. ವೆಂಕಟರಮಣಪ್ಪ, ಬಿ.ಎ.

ಇತರ ಪ್ರಾಂತದವರು.

ರ. ಭಿ. ಪೊದ್ದಾರ, ಬಿ.ಎ.
ಬಿ. ಶಂಕರಗೌಡ, ಪಾಟೀಲ.
ವಿ. ಬಿ. ಆಲೂರ್, ಬಿ.ಎ., ಎಲ್‌ಎಲ್.ಬಿ.
ಕೆ. ರಾಮಸ್ವಾಮಯ್ಯ.
ರಾಮರಾವ್, ಜಿ. ತೆರಗೊಂಡಿ, ಎಂ.ಎ.
ವ್ಹಿ. ಡಿ. ನವಲಗುಂದ್, ಬಿ.ಎ.
ಆರ್.ಎ. ಜಹಗೀರ್‌ದಾರ್, ಎಂ.ಎ.,ಎಲ್‌ಎಲ್.ಬಿ.
ಎನ್. ಆರ್. ಸುಬ್ಬಣ್ಣಯ್ಯ.
ನರಹರಿರಾವ್, ಎಂ.ಎ. (ಆನರ್ಸ್)
ಎಂ. ಎಸ್. ಸುಬ್ಬರಾವ್.
ಎನ್. ವಿ. ಶ್ರೀನಿವಾಸಮೂರ್ತಿ, ಬಿ.ಎ., ಬಿ.ಇ.
ಎನ್. ಲಕ್ಷ್ಮೀನಾರಾಯಣರಾವ್, ಎಂ.ಎ.
ಡಿ. ಎಸ್. ಆರ್. ರಾವ್, ಬಿ.ಇ.
ಆರ್. ಕೆ. ಅಸುಂಡಿ, ಬಿ.ಎ., ಎಮ್.ಎಸ್‌ಸಿ.
ಎಸ್. ಶ್ರೀನಿವಾಸರಾವ್, ಬಿ.ಎ.
ಎಂ. ರಂಗಸ್ವಾಮಿ, ಬಿ.ಎ.
ಟಿ. ಶಿವಶಂಕರಯ್ಯ, ಬಿ.ಎಸ್‌ಸಿ. (ಮ್ಯಾಂಚೆಸ್ಟರ್)

ಪ್ರಬುದ್ಧ ಕರ್ಣಾಟಕ

(ವರ್ಷಕ್ಕೆ ನಾಲ್ಕು ಸಂಚಿಕೆಗಳು ಮಾತ್ರ).

ವಾರ್ಷಿಕಚಂದಾ :— ಆಶ್ರಯದಾತರಿಗೆ ರೂ. ೧೦—೦—೦.

(ಅಂಚೆವೆಚ್ಚ ಸೇರಿ) ಪೋಷಕರಿಗೆ ರೂ. ೩—೪—೦.

ವಾಚನಾಲಯಗಳು ಮತ್ತು

ಪುಸ್ತಕಭಂಡಾರಗಳಿಗೆ ರೂ. ೨—೪—೦.

ಚಂದಾದಾರರಿಗೆ ರೂ. ೧—೧೨—೦.

ಕಾರ್ಯದರ್ಶಿ,

ಕರ್ಣಾಟಕ ಸಂಘ,

ಸೆಂಟ್ರಲ್ ಕಾಲೇಜು, ಬೆಂಗಳೂರು.

ಜಯಕರ್ನಾಟಕ

ಎಂಬ

ಸಚಿತ್ರ ಮಾಸಪತ್ರಿಕೆಯು.

ಸಂಪಾದಕರು—ಆಲೂರ ವೆಂಕಟರಾಯರು.

ಇದರಲ್ಲಿ ಮೈಸೂರು ಮಂಗಳೂರು ಕಾರವಾರ ಕೊಡಗು ಬಳ್ಳಾರಿ ಬೊಂಬಾಯಿ ಕರ್ನಾಟಕ ನಿಜಾಮ ಕರ್ನಾಟಕ ಮುಂತಾದ ಅಖಿಲಕರ್ನಾಟಕದ ಎಲ್ಲಾ ಭಾಗಗಳ ಹೆಸರಾದ ಬರಹಗಾರರು ಬರೆಯುತ್ತಾರೆ. ಪರರಾಷ್ಟ್ರಗಳಲ್ಲಿದ್ದ ಕನ್ನಡಿಗರೂ ಲೇಖನಗಳನ್ನು ಕಳಿಸುತಿರುತ್ತಾರೆ.

ಮನೋರಂಜಕವಾದ ಕಥೆಗಳು, ಕವಿತೆಗಳು, ಮೇಲ್ಬಗೆಯ ನಗೆಯ ಬರಹಗಳು, ಪ್ರಬಂಧಗಳು, ಸಾಹಿತ್ಯ ಚರ್ಚೆಗಳು, ಧಾರ್ಮಿಕ—ರಾಜಕೀಯ—ವೈಜ್ಞಾನಿಕ—ವಾಙ್ಮಯಾತ್ಮಕ—ಶೈಕ್ಷಣಿಕ—ಸಾಮಾಜಿಕ—ಐತಿಹಾಸಿಕ—ಆರ್ಥಿಕ ಮೊದಲಾದ ಎಲ್ಲ ವಿಷಯಗಳ ಮೇಲೆ ಪ್ರೌಢಲೇಖನಗಳು ಬರೆಯಲ್ಪಡುತ್ತವೆ. ಪ್ರಪಂಚಪರಿಚಯ—ಜೇನುಹುಟ್ಟು—ಸಾಹಿತ್ಯಲೋಕ ವಾದಭೂಮಿ—ಬಿಡಿನುಡಿಗಳು—ಈ ಭಾಗಗಳು ಸದ್ಯದ ಜಗತ್ತಿನ ಜ್ಞಾನವನ್ನು ಜನತೆಗೆ ಮಾಡಿಕೊಡುತ್ತವೆ.

ಪ್ರತಿ ಸಂಚಿಕೆಯಲ್ಲಿಯೂ ಸುಂದರ ಚಿತ್ರಗಳು ಬರುತ್ತವೆ. ಮಾಡರ್ನ ರಿವ್ಯೂದ ಆಕಾರದ ೮೦ ಪುಟಗಳು.

ಚಂದಾವಿವರವು.

೧೨ ತಿಂಗಳಿಗೆ ೫—೮—೦ ೬ ತಿಂಗಳಿಗೆ ೩—೦—೦ ೩ ತಿಂಗಳಿಗೆ ೧—೧೨—೦

ವ್ಹಿ. ಪಿ. ವೆಚ್ಚ ಬೇರೆ. ೧೧ ಆಣೆ ಟಿಕೇಟು ಕಳಿಸಿದಲ್ಲಿ ಬಿಡಿಸಂಚಿಕೆ ದೊರೆವುದು.

ಕಾರ್ಯದರ್ಶಿ ಜಯಕರ್ನಾಟಕ, ಸಾಧನಕೇರಿ,

ಧಾರವಾಡ.

ಮೈಸೂರ್ ಕ್ರಾನಿಕಲ್

ಪ್ರತಿ ಭಾನುವಾರವೂ ಪ್ರಕಟವಾಗುವ ಇಂಗ್ಲಿಷ್ ಮತ್ತು ಕನ್ನಡ ವಾರಪತ್ರಿಕೆ

ಸರ್ಕಾರದ ಜಾಹಿರಾತುಗಳಿಗೆ ರಿಜಿಸ್ಟರಾಗಿರುತ್ತೆ.

ಈ ಪತ್ರಿಕೆಯಲ್ಲಿ ರಾಜಕೀಯ ಸಾಮಾಜಿಕ ಇತ್ಯಾದಿ ವಿಷಯಗಳು ನಿರ್ಭೀತಿಯಿಂದ ಚರ್ಚಿಸಲ್ಪಡುವುವು.

ಸಂಪಾದಕ—ಶ್ರೀಯುತ ಕೆ. ರಂಗಯ್ಯಂಗಾರ್ ಬಿ.ಎ., ಎಲ್‌ಎಲ್.ಬಿ.

ಚಂದಾ ನಿರ್ಣಯ (ಅಂಚೆವೆಚ್ಚ ಸೇರಿ)

	ಇಂಗ್ಲಿಷ್ ಭಾಗ	ಕನ್ನಡ ಭಾಗ
ವರ್ಷಕ್ಕೆ	ರೂ. ೭-೦-೦	ರೂ. ೩-೮-೦
೬ ತಿಂಗಳಿಗೆ	ರೂ. ೪-೮-೦	ರೂ. ೨-೦-೦
ಬಿಡಿಸಂಚಿಕೆ	೦-೨-೦	೦-೧-೦

ಕರ್ಣಾಟಕದ ಎಲ್ಲಾ ಕಡೆಗಳಲ್ಲಿಯೂ ಪ್ರಚಾರವಿರುವ ಈ ಪತ್ರಿಕೆಗಳಲ್ಲಿ ಪ್ರಕಟನೆಗಳನ್ನು ಕೊಡುವುದರಿಂದ ಬಹಳ ಪ್ರಯೋಜನವಾಗುವುದು.

ಚಂದಾದಾರರಾಗಲಿಚ್ಛಿಸುವವರು ಯಾವ ಭಾಗವು ಅವಶ್ಯಕವಿದೆಯೋ ಅದನ್ನು ವಿಶದವಾಗಿ ತಿಳಿಸಬೇಕು.

ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಆರ್. ಸೀತಾರಾಂ,
ಮ್ಯಾನೇಜರ್,
ಮೈಸೂರ್ ಕ್ರಾನಿಕಲ್
ತುಮಕೂರು. (ಮೈಸೂರು ಸ್ಟೇಟ್)

O. S. ASSOCIATION MAGAZINE.

MERCARA, COORG.

Edited by Mr. B. S. Kushalappa, B.A.

The only illustrated Quarterly of Coorg, dealing with all topics of life and art published both in English and Canarese.

Subscription yearly Rs. 1-4-0, post free.

For advertisement rates &c.,

Apply to:—

Manager,
O. S. Association Magazine,
Mercara, (Coorg).

ಧಾರವಾಡ ಕರ್ನಾಟಕ ಮಹಾವಿದ್ಯಾಲಯದಿಂದ ಹೊರಡುವ

ತಿಳಿಗನ್ನಡ **ಸ್ವಧರ್ಮ** ಮಾಸಪತ್ರಿಕೆ.

ಸಂಪಾದಕ—ಹೊಸಕೆರೆ ಚಿದಂಬರಯ್ಯ.

ಪ್ರಾಪಂಚಿಕಸಂಪತ್ತೂ ಪಾರಮಾರ್ಥಿಕಸಂಪತ್ತೂ ಕೂಡಿ ಬೆಳೆಯುವಂತೆ ಸ್ವಸಂಸ್ಕೃತಿಪ್ರೇಮ, ಸ್ವಭಾಷಾಭಿಮಾನ, ಸ್ವಧರ್ಮಾನುರಾಗ, ಸ್ವಾರ್ಥತ್ಯಾಗ ಮುಂತಾದ ಗುಣಗಳನ್ನು ಉಜ್ವಲಗೊಳಿಸುವಂಥ ಕೀರ್ತನ, ಪುರಾಣ, ಪ್ರವಚನ, ನಿಬಂಧ, ಜೀವನಚರಿತ್ರೆ, ಇತಿಹಾಸ, ನಾಟಕ, ಕಥೆ ಮತ್ತು ಕಾದಂಬರಿ ಮುಂತಾದ ರೂಪದಲ್ಲಿ ಜನಮಂಡಲಿಯ ಉನ್ನತಿಗೆ ಅಗತ್ಯವಾದ ಸರ್ವವ್ಯವಹಾರಗಳನ್ನೂ ಸ್ವಧರ್ಮದೃಷ್ಟಿಯಿಂದ ವಿಚಾರಮಾಡಿ ವಿವರಿಸುವುದು.

ಚಂದಾ ವರ್ಷಕ್ಕೆ ೩ ರೂ. ೫ ರೂ. ಮೇಲೆ ಕೊಟ್ಟವರು ಪೋಷಕರೆಂಬ ಗೌರವಕ್ಕೆ ಪಾತ್ರರಾಗುವರು.

ಕರ್ನಾಟಕದಲ್ಲೆಲ್ಲ ಗುಡುಗಾಡುತ್ತ ಹಳ್ಳಿಗಳ ಗುಡಿಸಲುಗಳನ್ನು ಕೂಡ ಹೊಕ್ಕು ಹೊರಡುವ ಇದು ಪ್ರಕಟನೆಗಳನ್ನು ಕೊಡತಕ್ಕವರಿಗೆ ಅತ್ಯುತ್ತಮ ಸಾಧನವಾಗಿರುವದು. ದರವು ಬಹಳ ಅಗ್ಗ !

ವ್ಯವಸ್ಥಾಪಕ,
ಸ್ವಧರ್ಮಕಾರ್ಯಾಲಯ,
ಧಾರವಾಡ.

ಸಾಧ್ವೀ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರಪತ್ರಿಕೆ ಮತ್ತು ದಿನಚರಿಪತ್ರಿಕೆ.

ಈ ಪತ್ರಿಕೆಗಳು ಬಹುದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವುವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ವಾಣಿಜ್ಯ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವುವು. 'ಸಾಧ್ವೀ' ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. 3-0-0., ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ 3-13-0. 'ಸಂಪದಭ್ಯುದಯ' ಸ್ಥಳದವರಿಗೆ ವರ್ಷಕ್ಕೆ ರೂ. 15-0-0., ತಿಂಗಳಿಗೆ 1-4-0., ಪರಸ್ಥಳದವರಿಗೆ ರೂ. 20-0-0., ತಿಂಗಳಿಗೆ 1-10-0.

ಜಾಹಿರಾತಿನ ದರವನ್ನು ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದುಕೊಳ್ಳಬಹುದು.

ಎಂ. ವೆಂಕಟಕೃಷ್ಣಯ್ಯ, ಮ್ಯಾನೇಜರ್,
ಸಾಧ್ವೀ ಮತ್ತು ಸಂಪದಭ್ಯುದಯ, ಮೈಸೂರು.

ಮೇಲ್ತರದ, ಮೇಲಾದ, ಮಾಸಿಕೆ.

ಪ್ರಬೋಧ.

ವೀರಶೈವ ತರುಣಸಂಘದ ಪರವಾಗಿ ಪ್ರಕಟವಾಗುವ ಅತ್ಯುತ್ತಮವಾದ
ತಿಳಿಗನ್ನಡ ಮಾಸಪತ್ರಿಕೆ.

೪೮ ಪುಟಗಳುಳ್ಳ ಈ ಪತ್ರಿಕೆಯು ಸಚಿತ್ರವಾಗಿಯೂ, ಅಂದವಾದ ಮುಖಪತ್ರದಿಂದಲೂ, ಹೊಳಪುಳ್ಳ ಕಾಗದಗಳಿಂದಲೂ ಮನೋಹರವಾಗಿದೆ. ಇದರಲ್ಲಿ ಧಾರ್ಮಿಕ, ಸಾಮಾಜಿಕ, ನೈತಿಕ, ಐತಿಹಾಸಿಕ, ವಾಙ್ಮಯಾತ್ಮಕ, ಶೈಕ್ಷಣಿಕ, ಶಾಸ್ತ್ರೀಯ ಇವೇ ಮೊದಲಾದ ವಿಷಯಗಳ ಮೇಲೆ ಹೃದಯಂಗಮವಾದ ಭಾಷೆಯಲ್ಲಿ, ಒಳ್ಳೇ ಉಪಯುಕ್ತವಾದ ಸುಪ್ರಸಿದ್ಧ ವಿದ್ವಾಂಸರ ಲೇಖಗಳೂ, ಮನೋರಂಜಕವಾದ ಕಥೆಕಾದಂಬರಿಗಳೂ ಪ್ರಕಟವಾಗುತ್ತಿವೆ. ಇದು ಅಚ್ಚುಕಟ್ಟಾಗಿಯೂ, ನಿಯಮಿತತನದಿಂದಲೂ, ಪ್ರತಿತಿಂಗಳು ಹೊರಡುತ್ತಲಿದೆ. ಲೋಕಪ್ರಿಯವಾದ ಈ ಪತ್ರಿಕೆಯು ಕನ್ನಡಿಗರಿದ್ದೆಡೆಯಲ್ಲೆಲ್ಲ ಸುಳಿದಾಡುತ್ತಿದೆ. ಇದನ್ನು ಓದಿದ ಯಾವ ಕನ್ನಡಿಗರೂ ಆನಂದಪಡದೇ ಇರಲಾರರು.

ವಾರ್ಷಿಕಚಂದಾ ರೂ. ೩-೦-೦.	ಐದುಜನ ವರ್ಗಣೀದಾರರನ್ನು ಮಾಡಿಕೊಟ್ಟವರಿಗೆ ಪತ್ರಿಕೆಯು ಉಚಿತ ಕೊಡಲ್ಪಡುವದು.	ಬಿಡಿ ಸಂಚಿಕೆ ೬ ಆಣೆ.

ಎಸ್. ಎಸ್. ಬಸವನಾಳ, ಎಂ.ಎ., ಸಂಪಾದಕರು.
ಎಚ್. ಎಫ್. ಕಟ್ಟೀಮನಿ, ಬಿ.ಎ., ಪ್ರಕಾಶಕರು.
ಬೆಳಗಾವಿ.

THE MYSORE SCHOOL & SCOUT MAGAZINE.

Published monthly throughout the School Year (June to March inclusive) under the joint auspices of

The Department of Education in Mysore

AND

The Boy Scouts of Mysore.

Per copy from School Agent :	1 anna 6 pies.
To Students and Scouts per year by post :	Re. 1 only.
To Patrons per year by post :	Rs. 2 only.

(V. P. P. Charges Extra)

ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕಸಂಘದ ಪತ್ರಿಕೆ.

ವ್ಯವಸಾಯಕ್ಕೆ ಸಂಬಂಧಪಟ್ಟ ಶಾಸ್ತ್ರಗಳಲ್ಲಿ ಪಂಡಿತರನ್ನೊಳಗೊಂಡ ಸಂಪಾದಕಮಂಡಲಿಯಿಂದ ಪ್ರಚುರಪಡಿಸಲ್ಪಡುವ ತ್ರೈಮಾಸಿಕ ಪತ್ರಿಕೆ.

ಮುಖ್ಯಸಂಪಾದಕರು—ಡಾಕ್ಟರ್ ಬಿ. ನರಸಿಂಹಯ್ಯಂಗಾರ್,
ಬಿ.ಎ., ಪಿಹೆಚ್.ಡಿ. (ಜರ್ಮನಿ),
ಮೈಸೂರು ಸರ್ಕಾರದ ವ್ಯವಸಾಯ ರಸಾಯನಶಾಸ್ತ್ರನಿಪುಣರು.

ಇಷ್ಟರವರೆಗೆ ಪ್ರಚುರವಾಗಿರುವ ಕೆಲವು ವಿಷಯಗಳು :—

ಹುಣಿಸೆ ಮತ್ತು ಸೀಗೆ ತೋಪುಗಳನ್ನು ಎಬ್ಬಿಸುವ ವಿಧಾನ. ನಾಗಪುರದಲ್ಲಿ ನಡೆದ ಮೋಟಾರು ನೇಗಲಿನ ಪರೀಕ್ಷೆಗಳು. ಹರಳುಗಿಡಗಳಿಗೆ ಬೀಳುವ ಕೊಂಡಲಿಹುಳು. ಜರ್ಮನಿಯ ರೈತನು. ರಸಬಾಳೆಯ ವ್ಯವಸಾಯ. ಜಾವಾದಲ್ಲಿ ಕಾಫಿಯ ಕೈಗಾರಿಕೆ. ದನಗಳ ಗಂಟಲುರೋಗ. ಡೆನ್ಮಾರ್ಕ್ ದೇಶದಲ್ಲಿ ದನಗಳನ್ನು ಸಾಕುವ ಕಸಬು. ಜಾವಾದಲ್ಲಿ ಕಬ್ಬಿನ ವ್ಯವಸಾಯ. ದನಗಳ ಮೇವಿಗೆ ನೆಲಗಡಲೆಹಿಂಡಿ. ವ್ಯವಸಾಯವಿದ್ಯೆ. ಹಗೇವುಗಳಲ್ಲಿ ದನಗಳ ಮೇವನ್ನು ಕೂಡಿಸಿಡುವುದು. ಜಪಾನ್ ಸಾರ್ವಭೌಮರ ರೇಷ್ಮೆಯ ಹುಳುಗಳ ಕಾರ್ಖಾನೆ. ವ್ಯವಸಾಯ ಉದ್ಯೋಗ.

ಚಂದಾ ವರ್ಷಕ್ಕೆ ೩ ರೂಪಾಯಿಗಳು ; ಯಾವ ಸಂಚಿಕೆಯಿಂದ ಬೇಕಾದರೂ ಪ್ರಾರಂಭಿಸಬಹುದು.

ವಿಳಾಸ:—ಮೈಸೂರು ವ್ಯಾವಸಾಯಿಕ ಮತ್ತು ಪರೀಕ್ಷಕ
ಸಂಘದ ಕಾರ್ಯದರ್ಶಿ,
ಮೈಸೂರು ವ್ಯವಸಾಯದ ಇಲಾಖೆ, ಬೆಂಗಳೂರು.

ಸರಸ್ವತಿ.

ಉತ್ತಮವರ್ಗದ ಶ್ರೇಷ್ಠವಾದ ಕನ್ನಡ ಮಾಸಪತ್ರಿಕೆ.

ಈ ಪತ್ರಿಕೆಯಲ್ಲಿ ಸಾಮಾಜಿಕ ನೈತಿಕ ಇತಿಹಾಸಕ ವಿಷಯಗಳಿಗೆ ಸಂಬಂಧಪಟ್ಟ ಅತ್ಯುತ್ತಮವಾದ ಲೇಖನಗಳೂ ಸ್ವಾರಸ್ಯ ಮತ್ತು ಮನೋರಂಜಿತವಾದ ಕಾದಂಬರಿಗಳೂ ನಾಟಕಗಳೂ ಬಾಲಕಬಾಲಕಿಯರಿಗೂ ಮತ್ತು ಸ್ತ್ರೀಯರಿಗೂ ತಿಳಿಯುವಂತಹ ಉತ್ತಮಶೈಲಿಯಲ್ಲಿ ಪ್ರಕಟಿಸಲ್ಪಡುವುವು. ನೂತನ ಚಂದಾದಾರರಿಗೆ "ಶಾರದಾ ಗ್ರಂಥಮಾಲೆ" ಯಲ್ಲಿ ಈವರೆಗೆ ಪ್ರಕಟವಾಗಿರತಕ್ಕ ಪ್ರಿಯಂವದೆ, ನಿರ್ಮಲೆ, ನಿರ್ಭಾಗ್ಯವನಿತೆ, ಸ್ನೇಹಲತೆ, ಹಿಂದೂ ಭಾಗ್ಯೋದಯ ಇತ್ಯಾದಿ ಗ್ರಂಥಗಳಲ್ಲೊಂದು ಬಹುಮಾನವಾಗಿ ಕೊಡಲ್ಪಡುವುದಲ್ಲದೆ ರೂ. 3-0-0 ಬೆಲೆ ಬಾಳತಕ್ಕ ಶಾರದಾ ಗ್ರಂಥಮಾಲೆಯ ಪ್ರಕಟನೆಗಳೆಲ್ಲವನ್ನೂ ಏ. ಪಿ. ಹಾಸಲಿಲ್ಲದೆ ರೂ. 2-12-0 ಗೆ ಕೊಡುವೆವು. ಚಂದಾದಾರರಾಗಲಿಚ್ಛಿಸುವವರು ತಮ್ಮ ವಿಳಾಸವನ್ನು ತಿಳಿಸಿ ಚಂದಾಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಿಯಾಗಲಿ ವಿ. ಪಿ. ಮೂಲಕವಾಗಿಯಾಗಲಿ ತರಿಸಿಕೊಳ್ಳಬಹುದು.

ವಾರ್ಷಿಕ ಚಂದಾ ರೂ. 3-0-0 ಮಾತ್ರ.

ವಿಳಾಸ—ಸಂಪಾದಕಿ, "ಸರಸ್ವತಿ,"
Post Box 57,
ಚಾಮರಾಜಪೇಟೆ, ಬೆಂಗಳೂರು.

ಸಹಕಾರ ! ಸಹಕಾರ !!

ಜನರೊಳಗೆ ಸಹಕಾರವಿರಲೇಬೇಕು!

ಸಹಕಾರದ ಆಚಾರ-ವಿಚಾರ-ಪ್ರಚಾರಕ್ಕೆಲ್ಲ ಅತ್ಯುಪಯುಕ್ತವಾದುದು.

ಕನ್ನಡ ಸಹಕಾರಿ.

ಎಂಬ ಸರ್ವತೋಮುಖವಾದ ತಿಳಿಗನ್ನಡ ಸಚಿತ್ರ ಮಾಸಿಕವಹಿ. ವಿಷಯಗಳು ಸರಸವಾಗಿವೆ

ಭಾಷೆಯು ಸರಳವಾಗಿದೆ—ಮುದ್ರಣವು ಮುದ್ದಾಗಿದೆ.

ಚಂದಾ ದರ ಅಂಚೆವೆಚ್ಚ ಸೇರಿ ವರುಷಕ್ಕೆ ಎರಡೇ ರೂಪಾಯಿ.

ಜಾಹೀರಾತುಗಳು ಬಹು ಸುಲಭವಾದ ದರಗಳಲ್ಲಿ ಪ್ರಕಟವಾಗುತ್ತಲಿವೆ.

ಪುತ್ತೂರಿಗೆ ಮೇನೇಜಿಂಗ್ ಎಡಿಟರರಿಗೆ ಬರೆಯಿರಿ—ಪತ್ರಿಕೆ ತರಿಸಿರಿ.

ಕಳೆದ ಮೂವತ್ತೆರಡು ವರ್ಷಗಳಿಂದ ಧಾರವಾಡದಲ್ಲಿ ಪ್ರತಿ ಮಂಗಳವಾರ
ಪ್ರಕಟವಾಗುವ

ಕರ್ನಾಟಕವೃತ್ತ

ವರ್ತಮಾನಪತ್ರವು.

ಸಂಪಾದಕ—ಶ್ರೀ ಮುದವೇಡಕರ ಕೃಷ್ಣರಾಯರು.

ವಾರ್ಷಿಕ ಚಂದಾ ೩—೫—೦.   ವ್ಹಿ. ಪಿ. ಯಿಂದ ೩—೮—೦

ತುಂಡುತುಂಡಾದ ಕರ್ನಾಟಕದ ಏಕೀಕರಣವಾಗಿ ಪ್ರಾಚೀನ ಕರ್ನಾಟಕದ ಪುರಾಣ ಸಂಸ್ಕೃತಿಯು ಪುನಃ ತಲೆಯೆತ್ತಬೇಕೆಂದೂ, ಆದರ ಧರ್ಮ-ನೀತಿ-ವಿದ್ಯಾ-ಕಲಾ-ಕೌಶಲ್ಯಾದಿ ಗತವೈಭವವೆಲ್ಲ ಅದಕ್ಕೆ ತಿರುಗಿ ಬರಬೇಕೆಂದೂ, ಭರತಖಂಡವು ಸ್ವರಾಜ್ಯಸ್ಥಾಪನೆಗಾಗಿ ಮಾಡುತ್ತಿರುವ ಸಾಹಸದಲ್ಲಿ ತಕ್ಕ ಪಾಲುಗಾರಿಕೆಯನ್ನು ಹೊತ್ತು ಕೆಲಸಮಾಡುವಂತೆ ಕರ್ನಾಟಕದ ಎಲ್ಲಭಾಗದ ಜನಸಮೂಹದಲ್ಲಿ ಕರ್ನಾಟಕದ ವಿಶಿಷ್ಟತ್ವದೊಂದಿಗೆ ರಾಷ್ಟ್ರೀಯ ಭಾವನೆಯು ಒಡಮೂಡಬೇಕೆಂದೂ ಮೊದಲಿನಿಂದಲೂ ಧ್ಯೇಯವನ್ನಿಟ್ಟುಕೊಂಡು ಮೂವತ್ತೆರಡು ವರ್ಷಗಳಿಂದ ಹೆಣಗುತ್ತಿರುವದು. ಇಂಥ ಪತ್ರಕ್ಕೆ ಆಶ್ರಯ ಕೊಟ್ಟು ಕರ್ನಾಟಕದ ರಾಷ್ಟ್ರೀಯತೆಯನ್ನು ಪೋಷಿಸುವದು ಪ್ರತಿಯೊಬ್ಬ ಕರ್ನಾಟಕಸ್ಥನ ಕರ್ತವ್ಯವಷ್ಟೆ ? ಆದದರಿಂದ ತಡಮಾಡದೆ ಚಂದಾದಾರರಾಗಿರಿ.

ಪತ್ರವ್ಯವಹಾರದ ವಿಳಾಸ—

ಕರ್ನಾಟಕವೃತ್ತ ಪತ್ರದ ವ್ಯವಸ್ಥಾಪಕರಿಗೆ, ಧಾರವಾಡ.

ದೇಶೀಯ ವಿದ್ಯಾಶಾಲಾ ಪತ್ರಿಕೆ, ಬೆಂಗಳೂರು.

ಮೈಸೂರು ಸೀಮೆಯ ದೇಶೀಯ ಶಿಕ್ಷಣ ಸಮಾಜದ ಪರವಾಗಿ ಬೆಂಗಳೂರು ಹೊಸ ತರಗುಪೇಟೆಯಲ್ಲಿರುವ ದೇಶೀಯ ವಿದ್ಯಾಶಾಲೆಯ ಅಧ್ಯಾಪಕರಿಂದ ಪ್ರಕಟವಾಗುವುದು. ಉತ್ತಮ ತರದ ಲೇಖನಗಳಿರುವುವಲ್ಲದೆ ದೇಶೀಯ ಶಿಕ್ಷಣ ಮತ್ತು ಶಿಕ್ಷಣಸಮಾಜದ ವೃತ್ತಾಂತಗಳು ಪ್ರಕಟಿಸಲ್ಪಡುವುವು.

ವಿದ್ಯಾಭಿಮಾನಿಗಳೆಲ್ಲರೂ ಓದಬೇಕಾದ ಪತ್ರಿಕೆ. ವರ್ಷಕ್ಕೆ ನಾಲ್ಕು ಸಂಚಿಕೆಗಳು. ಮುದ್ರಣ ಮುಂತಾದವು ಅಂದವಾಗಿರುವುವು. ವಿದ್ಯಾರ್ಥಿಗಳೂ ಎಲ್ಲರೂ ಓದಲೆಂದು ಚಂದಾ ಮೊಬಲಗನ್ನು ಸ್ವಲ್ಪವಾಗಿಟ್ಟಿದೆ.

ವಾರ್ಷಿಕ ಚಂದಾ ೮ ಆಣೆಗಳು. ಅಂಚೆವೆಚ್ಚ ಬೇರೆ.

ಬಿಡಿ ಸಂಚಿಕೆ ೩ ಆಣೆಗಳು.

ಬೇಕಾದವರು ಈ ವಿಳಾಸಕ್ಕೆ ಬರೆಯಬಹುದು.

ದೇಶೀಯ ವಿದ್ಯಾಶಾಲಾ ಪತ್ರಿಕೆಯ
ಸಂಪಾದಕರಿಗೆ,
ದೇಶೀಯ ವಿದ್ಯಾಶಾಲಾ,
ಹೊಸ ತರಗುಪೇಟೆ, ಬೆಂಗಳೂರು.

THE EDITORS,
National High School
Magazine, New Tharagupet,
Bangalore City.

ಕರ್ಮವೀರ.

ಸಂಪಾದಕರು—ಶ್ರೀ ರಾಮರಾವ ಶ್ರೀನಿವಾಸರಾವ ಹುಕ್ಕೇರಿಕರ, ಎಂ. ಎ.

ಉಜ್ವಲವಿಚಾರಗಳನ್ನು ಪ್ರಕಟಿಸುವ ರಾಷ್ಟ್ರೀಯ ಪಕ್ಷದ ವಾರಪತ್ರಿಕೆ.

ಅಖಿಲಕರ್ನಾಟಕದ ಪ್ರೀತಿಗೆ ಪಾತ್ರವಾದ ಶ್ರೇಷ್ಠವರ್ಗದ ಪತ್ರಿಕೆಯು.

ಇದರಲ್ಲಿ ಕರ್ನಾಟಕದ ಏಕೀಕರಣ, ವಾಙ್ಮಯ, ಶಿಕ್ಷಣ, ಸಮಾಜನೀತಿ ಮುಂತಾದವುಗಳನ್ನು ಕುರಿತು ಹೊಸವಿಚಾರ ಲೇಖಗಳಿರುವವಲ್ಲದೆ ದೇಶದ ಪ್ರಸ್ತುತ ರಾಜಕೀಯ ಚಳವಳಿಯ ಸಾದ್ಯಂತವೃತ್ತಾಂತವನ್ನು ಕೊಟ್ಟು ನಿಸ್ಪೃಹತನದ ಲೇಖಗಳು ಬರೆಯಲ್ಪಡುವವು.

ನಮ್ಮ ಪತ್ರಿಕೆಯ ಧ್ಯೇಯವು ರಾಷ್ಟ್ರೀಯ ಉತ್ಕರ್ಷವೇ ಆಗಿರುವದರಿಂದ ಜಾತಿಮತ್ಸರದ ಗಂಧವೂ ಇರುವದಿಲ್ಲ. ಶ್ರೀ ಮಂಜಪ್ಪ ಪರಡೇಕರ ಮುಂತಾದ ಸದ್ಗೃಹಸ್ಥರ ಒಳ್ಳೇ ಲೇಖಗಳು ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವವು. ಆದ ಕಾರಣ ನಮ್ಮ ದೇಶದ ಹಿತ ಬಯಸುವ ಪ್ರತಿಯೊಬ್ಬನೂ, ಬ್ರಾಹ್ಮಣನಿರಲಿ, ಬ್ರಾಹ್ಮಣೇತರನಿರಲಿ, ಮಹಮ್ಮದೀಯನಿರಲಿ ಪ್ರತಿಯೊಬ್ಬ ಕರ್ನಾಟಕಸ್ಥನೂ ಓದಿ ಲಾಭಪಡೆಯಬೇಕೆಂದು ಬಿನ್ನಹವು. ವಾರ್ಷಿಕಚಂದಾ ೩—೮—೦ ಮಾತ್ರ.

ಕಾರ್ಯದರ್ಶಿ, ಕರ್ಮವೀರ, ಧಾರವಾಡ.

ಕರ್ಣಾಟಕ ಸಂಘಧಲ್ಲಿ ಬೆಲೆಗೆ ದೊರೆಯುವ ಗ್ರಂಥಗಳು.

ಡಿ. ವಿ. ಗುಂಡಪ್ಪನವರಿಂದ ರಚಿತವಾದ

ನಿವೇದನ ೧-೦-೦.
(art paper edition)

ಶ್ರೀವಿದ್ಯಾರಣ್ಯರು ಮತ್ತು ಅವರ ಕಾಲ ೦-೮-೦.

ಗೋಪಾಲಕೃಷ್ಣಗೋಖಲೆ ೧-೮-೦.

ಶ್ರೀವಿದ್ಯಾರಣ್ಯಸ್ತುತಿ ೦-೧-೬.

ಶ್ರೀನಿವಾಸ ವಿರಚಿತ

ಶಾಂತಾ ೦-೬-೦.

ಸಾವಿತ್ರಿ ೦-೬-೦.

ಬಿನ್ನಹ ೦-೫-೦.

ಸಣ್ಣಕಥೆಗಳು ಭಾಗ I ೧-೦-೦.

,, ,, II ೦-೧೨-೦.

ಎಂ. ಆರ್. ಶ್ರೀನಿವಾಸಮೂರ್ತಿಗಳಿಂದ ರಚಿತವಾದ

ಕಂಠೀರವವಿಜಯ ೦-೪-೦.

ಕರ್ಣಾಟಕ ಸಾಹಿತ್ಯಪರಿಷತ್ತಿನವರಿಂದ ಮುದ್ರಿಸಲ್ಪಟ್ಟಿರುವ

ಸೋಮೇಶ್ವರಶತಕ ಸಾಮಾನ್ಯಪ್ರತಿ ೦-೮-೦.

ಉತ್ತಮಪ್ರತಿ ೧-೦-೦.

" ಗುಂಡೂ " ಅವರಿಂದ ರಚಿತವಾದ

ಟೊಳ್ಳು ಗಟ್ಟಿ ೦-೧೨-೦.

ಕರ್ಣಾಟಕ ಪ್ರತಿಮಾನಾಟಕಂ ೦-೧೦-೦.

ಗೌ॥ ಕಾರ್ಯದರ್ಶಿ,
ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜು,
ಬೆಂಗಳೂರು.

ಬೆಂಗಳೂರು-19

ಬಿ. ಎಂ. ಶ್ರೀ ಪ್ರತಿಷ್ಠಾನ
ಬೆಂಗಳೂರು-19
590